ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಣೆ - ೧೪

ಸಾಹಿತ್ಯಮಾಲೆ - ೧೩

ಪ್ರಧಾನ ಸಂಪಾದಕರು

ಡಾ. ಪ್ರಧಾನ್ ಗುರುದತ್ತ

ಯುಗಾಂತ

ಯುಗಾಂತ

ಮರಾಠೀ ಮೂಲ

ಇರಾವತಿ ಕರ್ವೆ

ಕನ್ನಡ ಅನುವಾದ

ಸರಸ್ವತಿ ಗಜಾನನ ರಿಸಬೂಡ

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

YUGANTHA by Iravathi Karve : Kannada Translation by **Saraswati Gajanan Risabuda** ; Editor-in-Chief : **Dr. Pradhan Gurudatta ;** Published by **Registrar, Karnataka Anuvadha Sahitya Academy** Kannada Bhavana, J.C. Road, Bangalore - 560 002, 2007 ; Pp. xvii + 223, Price : Rs. 80/-

ಈ ಆವೃತ್ತಿಯ ಹಕ್ಕುಗಳು : ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮುದ್ರಣ : ೨೦೦೭
ಪುಟಗಳು : xvii + ೨೨೩
ಬೆಲೆ : ರೂ. ೮೦/-
ಪ್ರತಿಗಳು : ೩,೨೦೦

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು
ದೂ : ೨೨೧೦೭೭೭೦

ಸಹಕಾರ :
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀಪಾದ್**

ISBN : 978-81-905455-8-7

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು - ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ
KARNATAKA
ಹೆಚ್.ಡಿ. ಕುಮಾರಸ್ವಾಮಿ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು - ೫೬೦ ೦೦೧

ದಿನಾಂಕ : ೧೫.೦೩.೨೦೦೭

ಮುನ್ನುಡಿ

ಕರ್ನಾಟಕ ರಾಜ್ಯ ಪುನರ್ ಘಟನೆಯ ಐವತ್ತು ವರ್ಷಗಳ ನೆನಪಿಗಾಗಿ ಕರ್ನಾಟಕ ಸರ್ಕಾರ 'ಸುವರ್ಣ ಕರ್ನಾಟಕ'ದ ಸಂಭ್ರಮಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿತು. ಈ ಹೊತ್ತಿಗೆ ಸರಿಯಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯ ಮೂಲಕ ಕರ್ನಾಟಕ ಸರ್ಕಾರ ಇನ್ನೊಂದು ಹೊಸ ಹೆಜ್ಜೆಯನ್ನೂ ಇಟ್ಟಿತ್ತು. ಭಾರತೀಯ ಭಾಷೆಗಳ ನಡುವಣ ಪಾರಸ್ಪರಿಕ ಅರಿವನ್ನು ಹೆಚ್ಚಿಸುವುದರ ಜೊತೆಗೆ, ನಮ್ಮ ನಾಡು-ನುಡಿಗಳ ಹಿರಿಮೆಯನ್ನು ಇತರ ಭಾಷಾ-ಬಾಂಧವರಿಗೆ ಹಾಗೂ ಜಾಗತಿಕ ನೆಲೆಯಲ್ಲಿ ಪರಿಚಯಿಸಿ ಕೊಡುವುದು ಮತ್ತು ಜಗತ್ತಿನ ಇತರ ಭಾಷೆಗಳ ಶ್ರೇಷ್ಠ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುವುದು ಇದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಅನುವಾದ ಸಾಹಿತ್ಯ ಈ ಹೊತ್ತು ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲದಿರುವುದರಿಂದ, ಜ್ಞಾನ-ವಿಜ್ಞಾನ-ತಂತ್ರಜ್ಞಾನಗಳ ಕ್ಷೇತ್ರಗಳನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದೂ ಇದರಲ್ಲಿ ಸೇರಿದೆ. ಇದರಿಂದ ಐತಿಹಾಸಿಕ ಹಿರಿಮೆಯ ಜೊತೆಗೆ, ಕನ್ನಡದ ಸಾಮರ್ಥ್ಯ, ವೈಶಿಷ್ಟ್ಯ, ಹಿರಿಮೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಕಂಗೊಳಿಸುವಂತಾಗುತ್ತದೆ.

'ಸುವರ್ಣ ಕರ್ನಾಟಕ' ಸಂಭ್ರಮದ ಸಂದರ್ಭದಲ್ಲಿ, ಈ ಹಿಂದೆ ನಾಡು ನುಡಿಗೆ ಸೇವೆಯನ್ನು ಸಲ್ಲಿಸಿರುವ ಹಿರಿಯ ಚೇತನಗಳು ಸ್ವಪ್ರೇರಣೆಯಿಂದ ಕನ್ನಡಕ್ಕೆ ತಂದುಕೊಟ್ಟಿರುವ ಶ್ರೇಷ್ಠ ಕೃತಿಗಳಲ್ಲಿ ಆಯ್ದ ಗ್ರಂಥಗಳನ್ನು 'ಸುವರ್ಣ ಅನುವಾದ ಮಾಲೆಯ' ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹಾಗೂ ವಿಶ್ವದಲ್ಲಿನ ಶ್ರೇಷ್ಠ ಕೃತಿಗಳನ್ನೂ ಪರಿಚಯಿಸಿ ಕೊಡಲಾಗುತ್ತಿದೆ. ಇವು ಕನ್ನಡಿಗರಿಗೆ ಪ್ರಿಯವಾಗುತ್ತವೆಂದು ನಂಬಿದ್ದೇನೆ. ಈ ಕೃತಿಗಳನ್ನು ಸಹೃದಯತೆಯಿಂದ ಸ್ವಾಗತಿಸುವ ಮೂಲಕ, ಅನುವಾದ ಸಾಹಿತ್ಯ ಅಕಾಡೆಮಿಯ ಇಂಥ ಕೆಲಸಗಳಿಗೆ ಕನ್ನಡ ನಾಡಿನ ಜನತೆ ಪ್ರೋತ್ಸಾಹ ನೀಡುತ್ತದೆ ಎಂದು ಭಾವಿಸಿದ್ದೇನೆ.

(ಹೆಚ್.ಡಿ. ಕುಮಾರಸ್ವಾಮಿ)

ಹೆಚ್.ಎಸ್. ಮಹದೇವ ಪ್ರಸಾದ್
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. ೩೩೦, ೩ನೇ ಮಹಡಿ,
ವಿಧಾನಸೌಧ,
ಬೆಂಗಳೂರು – ೫೬೦ ೦೦೧

ದಿನಾಂಕ : ೦೮–೦೨–೨೦೦೭

ಶುಭಾಕಾಂಕ್ಷೆ

ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿರುವ ಅನುವಾದ ಸಾಹಿತ್ಯ ಅಕಾಡೆಮಿ, ರಾಷ್ಟ್ರದಲ್ಲಿಯೇ ಇಂಥ ಆದ್ಯ ಸಂಸ್ಥೆಯಾಗಿದ್ದು ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡು, ಕನ್ನಡ ಸಾಹಿತ್ಯ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಕ್ಕೆ ಅರ್ಥಪೂರ್ಣವಾದ ಕೊಡುಗೆಗಳನ್ನು ನೀಡುವ ಹಂಬಲವನ್ನು ಹೊಂದಿದೆ. ಇದರ ಸ್ಥಾಪನೆಯ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಸುವರ್ಣ ಸಂಭ್ರಮದ ಉತ್ಸವವೂ ಕೂಡಿಬಂದಿರುವ ಕಾರಣದಿಂದಾಗಿ, ಅನುವಾದ ಸಾಹಿತ್ಯ ಅಕಾಡೆಮಿ ಗಾಂಧೀಜಿ, ನೆಹರೂ ಇಂಥ ಶ್ರೇಷ್ಠ ವ್ಯಕ್ತಿಗಳನ್ನು ಕುರಿತ ಮಹತ್ವದ ಕೃತಿಗಳನ್ನೇ ಅಲ್ಲದೆ, ವಿವಿಧ ಭಾಷೆಗಳಲ್ಲಿನ ಅತ್ಯುತ್ತಮ ಸಾಹಿತ್ಯ ಗ್ರಂಥಗಳನ್ನು ಮತ್ತು ಇತರ ಕೃತಿಗಳನ್ನು ಕನ್ನಡಿಗರಿಗೆ ಒದಗಿಸುವ ಕಾರ್ಯವನ್ನು ಹಮ್ಮಿಕೊಂಡಿರುವುದು ನನಗೆ ತುಂಬಾ ಸಂತೋಷವನ್ನು ಉಂಟುಮಾಡಿದೆ. ಇದರಲ್ಲಿ ದೇಶ–ವಿದೇಶಗಳ ಕಥೆ–ಕಾದಂಬರಿಗಳೂ, ನಾಟಕಗಳೂ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ ಕೃತಿಗಳೂ ಸೇರಿದ್ದು, ಕನ್ನಡಿಗರಿಗೆ ವೈವಿಧ್ಯಮಯ ಅನುಭವವನ್ನು ತಂದುಕೊಡುವಲ್ಲಿ ನೆರವಾಗುತ್ತವೆ ಎಂದು ನಂಬಿದ್ದೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದೆ. ಇದೇ ರೀತಿ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಿಸಿ ಕೊಡುವ ಕಾರ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ನಡೆದು ಕನ್ನಡಿಗರ ಸಾಧನೆ ಜಗತ್ತಿಗೆ ಚೆನ್ನಾಗಿ ತಿಳಿದು ಬರುವಂಥ ಸಾರ್ಥಕ ಪ್ರಯತ್ನಗಳು ನಡೆಯಲಿ ಎಂದು ಹಾರೈಸುತ್ತೇನೆ.

ಈಗ ಹೊರಬರುತ್ತಿರುವ ಕೃತಿಗಳಿಗೆ ಕನ್ನಡ ವಾಚಕಲೋಕದ ಸಹೃದಯಪೂರ್ಣ ಸ್ವಾಗತ ದೊರೆಯುತ್ತದೆಂದು ನಂಬಿದ್ದೇನೆ. ಇಂಥ ಸ್ವಾಗತ ಮತ್ತು ಪ್ರೋತ್ಸಾಹಗಳು ಅಕಾಡೆಮಿಯ ಮುಂದಿನ ಕಾರ್ಯಚಟುವಟಿಕೆಗಳಿಗೆ ಪ್ರೇರಣೆಯನ್ನೊದಗಿಸಲಿ ಎಂದು ಹಾರೈಸುತ್ತೇನೆ.

(ಹೆಚ್.ಎಸ್. ಮಹದೇವ ಪ್ರಸಾದ್)

ಐ.ಎಂ. ವಿಠ್ಠಲಮೂರ್ತಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ
ಹಾಗೂ ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರ

ಕಛೇರಿ : ೨೨೨೫೫೪೮೨
೨೨೦೩೪೦೦೭


ಕರ್ನಾಟಕ ಸರ್ಕಾರದ ಸಚಿವಾಲಯ
ಕೊ.ನಂ.೫, ನೆಲಮಹಡಿ, ವಿಕಾಸಸೌಧ,
ಬೆಂಗಳೂರು–೫೬೦ ೦೦೧

ಹೊಸ ಹೆಜ್ಜೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿಸಲಾಗುತ್ತಿರುವ 'ಶ್ರೀ ಕುವೆಂಪು ಭಾಷಾಭಾರತೀ' ಎಂಬ ರಾಷ್ಟ್ರೀಯ ಸಂಸ್ಥೆಯ ಒಂದು ಸ್ವತಂತ್ರ ವಿಭಾಗವಾಗಿ ಕರ್ನಾಟಕ ಸರ್ಕಾರ 'ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ'ಯನ್ನು ಈಗಾಗಲೇ (೨೦೦೬ರಲ್ಲಿ) ಅಸ್ತಿತ್ವಕ್ಕೆ ತಂದಿದೆ. ಇಂಥ ಉಪಕ್ರಮವನ್ನು ಮೆರೆಯುವಲ್ಲಿ ಕರ್ನಾಟಕವೇ ಮೊದಲನೆಯ ರಾಜ್ಯವಾಗಿದೆ ಎಂಬುದು ಹೆಮ್ಮೆಯ ಸಂಗತಿಯೇ ಆಗಿದೆ. ಈ ಅನುವಾದ ಅಕಾಡೆಮಿ, ಪ್ರಾರಂಭಗೊಂಡ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಪುನರ್–ರಚನೆಯ ಸುವರ್ಣ ಮಹೋತ್ಸವದ ಸಂದರ್ಭ ಕೂಡಿ ಬಂದದ್ದು ಒಂದು ವಿಶಿಷ್ಟ ಯೋಗಾಯೋಗವೇ ಆಗಿದೆ. ಈ ಸುವರ್ಣ ಮಹೋತ್ಸವದ ಸಂದರ್ಭದ ಆಚರಣೆಯ ಅಂಗವಾಗಿ ಅನುವಾದ ಅಕಾಡೆಮಿ ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡಿದೆ. ಈ ಮೊದಲೇ ವಿಭಿನ್ನ ಭಾಷೆಗಳಲ್ಲಿನ ಹಲವು ಶ್ರೇಷ್ಠ ಲೇಖಕರ ಹಲವಾರು ಶ್ರೇಷ್ಠ ಕೃತಿಗಳು ನಮ್ಮ ಸಾಹಿತಿಗಳ ಗಮನವನ್ನು ಸೆಳೆದಿದ್ದು, ಅವುಗಳ ಯಥಾವತ್ತಾದ, ಸಂಗ್ರಹರೂಪವಾದ, ಅಳವಡಿಕೆಯಂತಿರುವ ಅನುವಾದಗಳನ್ನು ಅವರು ನಮಗೆ ಕೊಡಮಾಡಿದ್ದಾರೆ. 'ಒಬ್ಬನೇ ಉಂಡ ಊಟ ಹಬ್ಬವಲ್ಲ; ಒಬ್ಬನೇ ಸವಿದ ರುಚಿ ರುಚಿಯಲ್ಲ' ಎಂಬ ಗಾದೆ ಮಾತನ್ನು ಸಾರ್ಥಕಗೊಳಿಸುವಂತೆ, ಅವರು ಈ ಕೆಲಸವನ್ನು ಮಾಡಿದ್ದಾರೆ. ಇಂಥ ಪ್ರಸಿದ್ಧ, ಜನಪ್ರಿಯ, ಅಲಭ್ಯ ಕೃತಿಗಳನ್ನು 'ಸುವರ್ಣ ಕರ್ನಾಟಕ' ಯೋಜನೆಯ ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹೊಸ ಶ್ರೇಷ್ಠ ಗ್ರಂಥಗಳನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಹೀಗೆ, ದೇಶ–ವಿದೇಶಗಳ ಉತ್ಕೃಷ್ಟ ಕೃತಿಗಳಿಂದ ಕನ್ನಡ ಭಾಷೆ–ಸಾಹಿತ್ಯಗಳನ್ನು ಸಮೃದ್ಧಗೊಳಿಸುವ ದಿಕ್ಕಿನಲ್ಲಿ ಅನುವಾದ ಅಕಾಡೆಮಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಬೇಕಾಗಿದೆ.

ಅನುವಾದ ಇಂದು ತನ್ನ ಆಯಾಮವನ್ನು ಬಹುವಾಗಿ ವಿಸ್ತರಿಸಿಕೊಂಡು ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಂಡಿದೆ. ಹೀಗಾಗಿ. ಈ ದಿಕ್ಕಿನಲ್ಲಿಯೂ ಕನ್ನಡವನ್ನು ಸಮೃದ್ಧಗೊಳಿಸುವತ್ತ ನಮ್ಮ ಗಮನ ಹರಿಯಬೇಕಾಗಿದೆ. ಅಕಾಡೆಮಿ ಈ ದಿಕ್ಕಿನಲ್ಲಿಯೂ

ಕಾರ್ಯೋನ್ಮುಖವಾಗಿರುವುದು ಸಂತೋಷದ ವಿಚಾರವೇ ಆಗಿದೆ. ಈ ಬಗೆಯ ಬಹುಮುಖೀ ಕಾರ್ಯಚಟುವಟಿಕೆಗಳಿಂದ ಭಾರತೀಯ ಭಾಷೆಗಳಲ್ಲಿ ಈಗಾಗಲೇ ತನ್ನದೇ ಆದ ಹಿರಿಮೆಯನ್ನು ಮೆರೆದಿರುವ, ಮೆರೆಯುತ್ತಿರುವ ಕನ್ನಡ ಭಾಷೆ–ಸಾಹಿತ್ಯ ಮತ್ತಷ್ಟು ಕಂಗೊಳಿಸುವಂತಾಗುತ್ತದೆ. ಅನೇಕ ಮಹತ್ವದ ಗ್ರಂಥಗಳು ದೊರೆಯುವಂತಾಗುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷವನ್ನು ಉಂಟುಮಾಡುತ್ತಿದೆ. ಇಂಥ ಕಾರ್ಯಗಳಿಗೆ ಸರ್ಕಾರದ ಬೆಂಬಲದ ಜೊತೆಗೆ, ಜನತೆಯ ಹೃತ್ಪೂರ್ವಕ ಪ್ರೋತ್ಸಾಹವೂ ಅಗತ್ಯವಾಗುತ್ತದೆ. ವಿವೇಚನಾಶೀಲರೂ, ಸಹೃದಯರೂ ಆದ ಕನ್ನಡಿಗರು ಇಂಥ ಪ್ರೋತ್ಸಾಹ ನೀಡುವಲ್ಲಿ ಮುಂದಾಗುತ್ತಾರೆ ಎಂದು ನಂಬಿದ್ದೇನೆ. ಅಕಾಡೆಮಿಯ ಕಾರ್ಯಚಟುವಟಿಕೆಗಳು ಇತೋಪ್ಯತಿಶಯವಾಗಿ ಮುಂದುವರಿಯಲಿ ; ಕರ್ನಾಟಕದ ಜನತೆಗೆ ಹೊಸ ಅನುಭವಗಳ ಲೋಕವನ್ನು ತೆರೆದು ತೋರುವ ಕಾರ್ಯಗಳು ಅವಿಚ್ಛಿನ್ನವಾಗಿ ನಡೆಯಲಿ ಎಂದು ಈ ಸಂದರ್ಭದಲ್ಲಿ ಹಾರೈಸಬಯಸುತ್ತೇನೆ.



(ಐ.ಎಂ. ವಿಠ್ಠಲಮೂರ್ತಿ)

ಪ್ರಸ್ತಾವನೆ

ಭಾರತದಲ್ಲಿ ಯಾವುದೇ ರಾಜ್ಯವೊಂದರಲ್ಲಿ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಮೊಟ್ಟಮೊದಲ ಬಾರಿಗೆ ಸ್ಥಾಪಿಸಿದ ಹಿರಿಮೆ ಕರ್ನಾಟಕ ಸರ್ಕಾರದ್ದಾಗಿದೆ. ಜನವರಿ ೬, ೨೦೦೬ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರು ವಿಧ್ಯುಕ್ತವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಹಾಗೂ ಭಾಷಾಂತರವನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಶಿಕ್ಷಣ ವಿಷಯವಾಗಿ ಅಳವಡಿಸಿದ ಭಾಷಾಂತರ ಕ್ಷೇತ್ರದ ಭೀಷ್ಮಾಚಾರ್ಯರೂ ಆದ ಪ್ರೊ॥ದೇ. ಜವರೇಗೌಡ ಅವರೂ, ಹಿರಿಯ ವಿದ್ವಾಂಸರಾದ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅವರೂ ಅಕಾಡೆಮಿಯ ಕಾರ್ಯಚಟುವಟಿಕೆಗಳ ದಿಕ್ಕು–ದೆಸೆಗಳನ್ನು ನಿರ್ದೇಶಿಸಿದರು.

ನಮ್ಮ ನಾಡಿನಲ್ಲಿರುವ ವಿಚಿತ್ರ ಪರಿಸ್ಥಿತಿ ಎಂದರೆ ವಿದೇಶೀಯ ಭಾಷಾಸಾಹಿತ್ಯಗಳ ಅಷ್ಟಿಷ್ಟು ಪರಿಚಯವಾದರೂ ಇರುವ ನಮಗೆ ನಮ್ಮ ನಾಡಿನ ನೆರೆಹೊರೆಯ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯದ, ಶ್ರೇಷ್ಠ ಸಾಹಿತಿಗಳ ಪರಿಚಯ ಬಹುಮಂದಿಗೆ ಇಲ್ಲವೇ ಇಲ್ಲದಂತಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಇತರ ಕೆಲವು ರಾಷ್ಟ್ರೀಯ ಸಂಸ್ಥೆಗಳು ತಮ್ಮ ಕಾರ್ಯಚಟುವಟಿಕೆಗಳಲ್ಲಿ ಅನುವಾದಗಳನ್ನು ಹೊರತರುವ ಕೆಲವು ಯೋಜನೆಗಳನ್ನು ಕೈಗೊಳ್ಳುತ್ತಿರುವುದುಂಟು. ಆದರೆ, ಈ ಕಾರ್ಯಗಳು ಅಪೇಕ್ಷಣೀಯ ಪ್ರಮಾಣದಲ್ಲಿ ಹಾಗೂ ಪರಸ್ಪರ ಪೂರಕವಾಗುವ ರೀತಿಯಲ್ಲಿ ಆಗುತ್ತಿಲ್ಲ. ಮೇಲಾಗಿ ಈ ಕಾರ್ಯಕ್ರಮಗಳು ಬಹುಮಟ್ಟಿಗೆ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಾಗಿವೆ. ಹೀಗಾಗಿ, ಪರಸ್ಪರ ಕೊಳು–ಕೊಡೆಯ ಕಾರ್ಯಕ್ರಮಗಳು ಹೆಚ್ಚು–ಹೆಚ್ಚಾಗಿ ಹಾಗೂ ವೈವಿಧ್ಯಮಯವಾಗಿ ಆಗಬೇಕಾದ ಅಗತ್ಯವೂ ಇದೆ.

ಭಾರತೀಯ ಭಾಷಾಸಾಹಿತ್ಯಗಳು ಸಮೃದ್ಧವಾಗಿ ಬೆಳೆಯಬೇಕಾದರೆ, ಎರಡು ಮುಖಗಳಲ್ಲಿ ಕಾರ್ಯಗಳು ಆಗಬೇಕಾಗಿದೆ : (೧) ರಾಷ್ಟ್ರೀಯ ಮಟ್ಟದಲ್ಲಿ; (೨) ಅಂತಾರಾಷ್ಟ್ರೀಯ ಮಟ್ಟದಲ್ಲಿ. ರಾಷ್ಟ್ರೀಯ ಸ್ತರದಲ್ಲಿ ನಮ್ಮ ಭಾಷಾ ಸಾಹಿತ್ಯವನ್ನು ಬಿಂಬಿಸುವ ಕೆಲಸ ಎಷ್ಟು ಮುಖ್ಯವೋ, ಇತರ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಅಷ್ಟೇ ಮುಖ್ಯ. ರಾಷ್ಟ್ರೀಯ ಅಂತಾರಾಷ್ಟ್ರೀಯ ಮಹತ್ವದ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಹಾಗೂ ಕನ್ನಡ ಸಾಹಿತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸುವುದೂ ಅಷ್ಟೇ ಮುಖ್ಯ. ಈ ದೃಷ್ಟಿಯಿಂದ ನೊಬೆಲ್ ಪ್ರಶಸ್ತಿ, ಬೂಕರ್ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿರುವ ಲೇಖಕರ ಮಹತ್ವದ

ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುವ ಯೋಜನೆಗಳನ್ನು ಅನುವಾದ ಸಾಹಿತ್ಯ ಅಕಾಡೆಮಿ ತಮ್ಮ ಮುಂದಿರಿಸಿಕೊಂಡಿದೆ. ಅಷ್ಟೇ ಅಲ್ಲದೆ, ವಿಜ್ಞಾನ–ತಂತ್ರಜ್ಞಾನ, ವೈದ್ಯಕೀಯ, ಮಾನವಿಕ ಮೊದಲಾದ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡದಲ್ಲಿ ತರುವ ಯೋಜನೆಗಳೂ ಅಕಾಡೆಮಿಯ ಮುಂದಿವೆ. ಇತರ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, ಅಂತೆಯೇ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಭಾಗ, ಕೇಂದ್ರೀಯ ಹಿಂದೀ ನಿರ್ದೇಶನಾಲಯ, ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಪದಾವಲಿ ಆಯೋಗ ಇತ್ಯಾದಿ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಈ ದಿಕ್ಕಿನಲ್ಲಿ ಸಹಕಾರವನ್ನು ಪಡೆದುಕೊಳ್ಳುವ ಆಲೋಚನೆಯನ್ನೂ ಅಕಾಡೆಮಿ ಇರಿಸಿಕೊಂಡಿದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಕಾರ್ಯಶಿಬಿರಗಳನ್ನು ಆಯೋಜಿಸಿ, ಅನುವಾದದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ, ಸಮರ್ಥ ಭಾಷಾಂತರಕಾರರನ್ನು ಗುರುತಿಸುವ ಪ್ರಯತ್ನಗಳನ್ನು ಅಕಾಡೆಮಿ ಮಾಡುತ್ತಿದೆ. ಈಗಾಗಲೇ ಕನ್ನಡ–ತೆಲುಗು, ಕನ್ನಡ–ಹಿಂದೀ, ಯಂತ್ರಾನುವಾದ, ವಿಜ್ಞಾನ ಸಾಹಿತ್ಯ ಅನುವಾದ ಇವುಗಳಿಗೆ ಸಂಬಂಧಿಸಿದಂತೆ ರಾಜ್ಯದ ಬೇರೆ–ಬೇರೆ ಕೇಂದ್ರಗಳಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಕಾರ್ಯಶಿಬಿರಗಳನ್ನೂ, ವಿಚಾರಗೋಷ್ಠಿಗಳನ್ನೂ ನಡೆಸಲಾಗಿದೆ. ಉರ್ದೂ ಮತ್ತು ತಮಿಳು ಭಾಷೆಗಳ ಕಾರ್ಯಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಭಾಷಾಂತರ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಂಡು ಆ ದಿಕ್ಕಿನಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಆಲೋಚನೆಯೂ ಇದೆ. ಇತ್ತೀಚೆಗೆ ಸ್ಯಾಮ್ ಪಿಟ್ರೋಡಾ ಅವರು 'ರಾಷ್ಟ್ರೀಯ ಅನುವಾದ ಮಿಷನ್' (National Translation Mission) ಅನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯೋಜನೆಯೊಂದನ್ನು ಸಲ್ಲಿಸಿದ್ದು, ಕೇಂದ್ರ ಸರ್ಕಾರ ಆ ಯೋಜನೆಯನ್ನು ಒಪ್ಪಿಕೊಂಡಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದಲ್ಲಿ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳು ಜನಸಾಮಾನ್ಯರವರೆಗೂ ಯಶಸ್ವಿಯಾಗಿ ಮುಟ್ಟುವುದು ಸಾಧ್ಯವಾಗುತ್ತದೆ ಹಾಗೂ ರಾಷ್ಟ್ರದ ಪ್ರಗತಿಯೂ ಅಭೂತಪೂರ್ವ ರೀತಿಯಲ್ಲಿ ಆಗುತ್ತದೆ ಎಂದು ಆಶಿಸಲಾಗಿದೆ. ಈ ಯೋಜನೆ ಉದ್ಯೋಗಸೃಷ್ಟಿಯ ಮಹತ್ತರ ಯೋಜನೆಯೂ ಆಗಲಿದೆ. ಇಂಥ ಸಂದರ್ಭದಲ್ಲಿ ಅಗತ್ಯವಾಗುವ ಲಕ್ಷಾಂತರ ಮಂದಿ ಅನುವಾದಕರ ಪಡೆಯನ್ನು ಸಿದ್ಧಪಡಿಸುವುದು ಇಂಥ ಸಂಸ್ಥೆಗಳ ಮತ್ತು ವಿಶ್ವವಿದ್ಯಾನಿಲಯಗಳ ಹೊಣೆಯೇ ಆಗಿರುತ್ತದೆ. ರಾಜ್ಯದ ಹಾಗೂ ಹೊರಗಿನ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಭಾಷಾಂತರ ವಿಭಾಗಗಳು ಸ್ಥಾಪಿತವಾಗಿದ್ದು, ಅವು ಕಾರ್ಯಶೀಲವಾಗುತ್ತಿರುವುದು ಶುಭಸೂಚಕವಾಗಿದೆ.

ಇದುವರೆಗೆ ವಿದ್ವಾಂಸರ ವೈಯಕ್ತಿಕ ಪಾಂಡಿತ್ಯ, ವ್ಯುತ್ಪತ್ತಿ ಮತ್ತು ಒಲವನ್ನು ಆಧರಿಸಿ ಅನುವಾದ ಕಾರ್ಯಗಳು ನಡೆಯುತ್ತಾ ಬಂದಿವೆ. ಆದರೆ ಇಂಥ ಕಾರ್ಯಗಳು ವ್ಯವಸ್ಥಿತವಾಗಿ ಹಾಗೂ ಉತ್ತಮ ಗುಣಮಟ್ಟದೊಂದಿಗೆ ನಡೆಯಬೇಕಾದ್ದು ಅಪೇಕ್ಷಣೀಯವಾಗಿರುವ ಹಿನ್ನೆಲೆಯಲ್ಲಿ, ಭಾಷಾಂತರ ಸಂಬಂಧವಾದ ಶಿಕ್ಷಣ–ಕ್ರಮಗಳನ್ನು ರೂಪಿಸುವುದು ಹಾಗೂ ದ್ವಿಭಾಷಾ ಮತ್ತು ಬಹುಭಾಷಾ ನಿಘಂಟುಗಳನ್ನು, ನುಡಿಗಟ್ಟುಗಳ ಮತ್ತು ಗಾದೆಗಳ ಕೋಶಗಳು, ಸಮಾನಾರ್ಥಕ ಮತ್ತು ಭಿನ್ನಾರ್ಥಕ ಕೋಶಗಳು ಹಾಗೂ ವಾಕ್ಯರಚನಾ ಕೈಪಿಡಿಗಳನ್ನು ಹೊರತರುವುದು – ಇವೇ ಮೊದಲಾದ ಕಾರ್ಯಗಳು ಆದ್ಯತೆಯ ಮೇರೆಗೆ ನಡೆಯಬೇಕಾಗಿದೆ. ಅನುವಾದ ಅಕಾಡೆಮಿ ಸ್ಥಾಪಿತವಾದ ಅತ್ಯಲ್ಪ ಅವಧಿಯಲ್ಲಿಯೇ ಇತರ ಸಂಘ–ಸಂಸ್ಥೆಗಳ ಗಮನವನ್ನು ಸೆಳೆದಿದ್ದು, ಅಂತರರಾಷ್ಟ್ರೀಯ ಕನಕದಾಸ ಮಿಷನ್‌ನಂತಹ ಸಂಸ್ಥೆ ಅನುವಾದ ಅಕಾಡೆಮಿಯೊಂದಿಗೆ ಸಹಕರಿಸಲು ಮುಂದೆ ಬಂದಿರುವುದು ಗಮನಾರ್ಹವಾದ ವಿಚಾರವೇ ಆಗಿದೆ. ಅಂತೆಯೇ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕನ್ನಡದಲ್ಲಿ ಹೊರತರುವ ಬಗ್ಗೆಯೂ ಆಲೋಚನೆ ಮಾಡಲಾಗುತ್ತಿದೆ. ಹೀಗೆ ಅನುವಾದ ಅಕಾಡೆಮಿ ಅನೇಕ ದಿಕ್ಕುಗಳಲ್ಲಿ ಮುಂದುವರಿದು ಸಾಧನೆ ಮಾಡಬೇಕಾಗಿದೆ.

ಕರ್ನಾಟಕ ಸರ್ಕಾರ ಅನುವಾದ ಅಕಾಡೆಮಿಯ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿ ಅಗತ್ಯವಾದ ನೆರವನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ವಿಶೇಷ ಸಂತೋಷದ ವಿಚಾರವೇ ಆಗಿದೆ. ಅದರಲ್ಲಿಯೂ ಈ ಬಾರಿ ಸುವರ್ಣ ಕರ್ನಾಟಕ ಕಾರ್ಯಕ್ರಮಗಳ ಅಂಗವಾಗಿ ವಿಶೇಷ ಧನಸಹಾಯ ನೀಡಿರುವುದರಿಂದ ಪ್ರಸಿದ್ಧ/ಅಲಭ್ಯ ಅನುವಾದಗಳ ಮರುಪ್ರಕಟಣೆ ಕಾರ್ಯವನ್ನು ಕೈಗೊಳ್ಳುವುದು, ಮತ್ತಿತರ ಮಹತ್ವದ ಪ್ರಕಟಣೆಗಳನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಈ ದಿಕ್ಕಿನಲ್ಲಿ ನಾಡಿನ ವಿದ್ವಾಂಸರು ವಿಶೇಷವಾದ ಸಹಾಯ–ಸಹಕಾರಗಳನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ಗೌರವದ, ಸಂತೋಷದ ಹಾಗೂ ಹೆಮ್ಮೆಯ ವಿಚಾರವೇ ಆಗಿದೆ. ಈ ಸಂದರ್ಭದಲ್ಲಿ ವಿಲ್ ಡ್ಯೂರಾಂಟ್ ಅವರ ಜಗತ್–ಪ್ರಸಿದ್ಧವಾಗಿರುವ ಹಾಗೂ ಭಾರತದ ಬೇರಾವ ಭಾಷೆಯಲ್ಲೂ ಇನ್ನೂ ಬೆಳಕು ಕಾಣದಿರುವ 'ದಿ ಸ್ಟೋರಿ ಆಫ್ ಸಿವಿಲಿಜೇಷನ್' ಸಂಪುಟಗಳ ಕನ್ನಡ ಅನುವಾದವನ್ನು ಹೊರತರುವಲ್ಲಿ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅವರೂ, ಬಹಳ ಹಿಂದೆಯೇ ಇಂಗ್ಲಿಷ್‌ನಲ್ಲಿ ೧೦ ಸಂಪುಟಗಳಲ್ಲಿ ಪ್ರಕಟಣೆಗೊಂಡಿರುವ ಸಂಸ್ಕೃತ ಸಾಹಿತ್ಯದ ವಿಶಿಷ್ಟ ಕೃತಿಯಾದ ಸೋಮದೇವನ 'ಕಥಾಸರಿತ್ಸಾಗರ'ದ ಕನ್ನಡ ಅನುವಾದವನ್ನು ನೇರವಾಗಿ ಸಂಸ್ಕೃತದಿಂದ ಅನುವಾದಿಸಿ ಹೊರತರುವಲ್ಲಿ ಡಾ॥ಪಿ.ಎಸ್.ರಾಮಾನುಜಮ್ ಅವರೂ ನೆರವು ನೀಡುತ್ತಿರುವುದು ವಿಶೇಷವಾಗಿ ಸ್ಮರಣೀಯವಾಗಿದೆ. ಕನ್ನಡ ಸಹೃದಯ ಲೋಕ ಅಕಾಡೆಮಿಯ ಈ ಕಾರ್ಯಚಟುವಟಿಕೆಗಳ ವಿಷಯದಲ್ಲಿ ತನ್ನ ಸಹೃದಯತೆಯನ್ನು ಮೆರೆಯುತ್ತದೆ ಎಂದು ಆಶಿಸಿದ್ದೇನೆ.

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಗೆ ಕಾರಣರಾದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರಿಗೂ, ಅಕಾಡೆಮಿಯ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿ, ಎಲ್ಲ ನೆರವನ್ನು ನೀಡುತ್ತಿರುವ ಇಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಅವರಿಗೂ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಮಹದೇವ ಪ್ರಸಾದ್ ಅವರಿಗೂ ಅಕಾಡೆಮಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ. ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಬಗೆಯ ಸಹಾಯ–ಸಹಕಾರ–ಮಾರ್ಗದರ್ಶನ ನೀಡುತ್ತಾ ಬಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ

ಪ್ರಮುಖ ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಉಷಾ ಗಣೇಶ್ ಅವರಿಗೂ, ಚೈತನ್ಯಶೀಲರೂ, ದೂರಗಾಮಿ ದೃಷ್ಟಿಯನ್ನುಳ್ಳವರೂ ಆದ ಇಂದಿನ ಕಾರ್ಯದರ್ಶಿಗಳಾದ ಶ್ರೀ ಐ.ಎಂ.ವಿಠ್ಠಲಮೂರ್ತಿ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಆಯುಕ್ತರಾಗಿದ್ದ ಶ್ರೀ ಕೆ.ಆರ್.ನಿರಂಜನ್ ಮತ್ತು ಶ್ರೀ ಎಸ್.ಎಫ್. ಯೋಗಪ್ಪನವರ್ ಅವರಿಗೂ, ನಿರ್ದೇಶಕರಾಗಿರುವ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ ಅಕಾಡೆಮಿ ವಿಶೇಷ ವಂದನೆಗಳನ್ನು ಸೂಚಿಸಬಯಸುತ್ತದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಸಹಾಯ, ಸಹಕಾರ ಮತ್ತು ಮಾರ್ಗದರ್ಶನ ಮಾಡುತ್ತಿರುವ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಇರಾವತಿ ಕರ್ವೆ ಅವರ 'ಯುಗಾಂತ' ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷ ಸಂಚಲನೆಯನ್ನುಂಟುಮಾಡಿದ ಕೃತಿ. ೧೯೭೩ ರಲ್ಲಿಯೇ ಶ್ರೀಮತಿ ಸರಸ್ವತಿ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಇದರ ಕನ್ನಡ ಅನುವಾದವನ್ನು ಸಿದ್ಧಪಡಿಸಿಕೊಟ್ಟಿದ್ದರು. ಈಚೆಗೆ ಇದರ ಇನ್ನೊಂದು ಕನ್ನಡ ಆವೃತ್ತಿಯೂ ಹೊರಬಂದಿದೆ. 'ಮಹಾಭಾರತ'ವನ್ನು ಕುರಿತ ಹೊಸ ಧ್ಯೇಯ–ದೃಷ್ಟಿ ಕೋನಗಳ ಪ್ರತಿಬಿಂಬವೇ ಆಗಿದ್ದ ಈ ಕೃತಿ, ಈ ಕಾರಣದಿಂದಾಗಿಯೇ ವಿಶೇಷ ಜಿಜ್ಞಾಸೆಯ ಕೇಂದ್ರವೇ ಆಗಿತ್ತು. ಕನ್ನಡದ ಪ್ರತಿಷ್ಠಿತ ಬರೆಹಗಾರರಾಗಿರುವ ಶ್ರೀ ಎಸ್.ಎಲ್. ಭೈರಪ್ಪನವರ 'ಪರ್ವ' ಕಾದಂಬರಿಯ ಮೇಲೆ ಇದು ಪ್ರಭಾವ ಬೀರಿದೆಯೆಂಬ ವಿವಾದಾಸ್ಪದವಾದ ಹೇಳಿಕೆಗಳೂ ಕಾಣಿಸಿಕೊಂಡಿದ್ದು, ಅವು ನಿರಾಧಾರವಾದುವೆಂಬುದು ಈಚೆಗೆ ದೃಢಪಟ್ಟಿದೆ. ಸ್ವಾರಸ್ಯದ ಸಂಗತಿಯೆಂದರೆ 'ಪರ್ವ' ಮರಾಠೀ ಭಾಷೆಗೆ ಅನುವಾದಗೊಂಡಿದ್ದು, ಮರಾಠೀ ವಿಮರ್ಶಕರಾರೂ ಇಂಥ ಹೇಳಿಕೆಗಳನ್ನು ಮಾಡಿಲ್ಲ ಎಂಬುದು. ಇದು ಹೇಗಾದರೂ ಇರಲಿ, ಮಹತ್ವದ ಈ ಕೃತಿಯ ಪುನರ್– ಮುದ್ರಣವನ್ನೇ ಸುವರ್ಣ ಕರ್ನಾಟಕ ಮಾಲೆಯ ಅಂಗವಾಗಿ ಹೊರತರಲು ಅವಕಾಶ ಮಾಡಿಕೊಟ್ಟಿರುವ ಶ್ರೀಮತಿ ಸರಸ್ವತಿ ರಿಸ್‌ಬೂಡ್ ಅವರಿಗೆ ಅಕಾಡೆಮಿ ಕೃತಜ್ಞವಾಗಿದೆ.

ಅನುವಾದ ಅಕಾಡೆಮಿಯ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಅಕಾಡೆಮಿಯ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ತಮ್ಮ ಅನೇಕ ಕಾರ್ಯಗಳ ನಡುವೆಯೂ ಬಿಡುವು ಮಾಡಿಕೊಂಡು ತಾಳ್ಮೆಯಿಂದ ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಶ್ರೀ ಲಕ್ಷ್ಮೀನರಸಿಂಹನ್ ಅವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ. ಮಯೂರ್ ಪ್ರಿಂಟ್ ಆ್ಯಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅನುವಾದಕಿಯ ಪ್ರಸ್ತಾವನೆ

(ಪ್ರಥಮ ಆವೃತ್ತಿ)

ಮಹಾಭಾರತವು ಭಾರತೀಯ ಸಂಸ್ಕೃತಿಯ ಜೀವಾಳದ ಸೊತ್ತು. ಸಾವಿರಾರು ವರ್ಷಗಳಿಂದ ಧರ್ಮ, ಅರ್ಥ, ಕಾಮ, ಮೋಕ್ಷ ಮುಂತಾದ ಪುರುಷಾರ್ಥ ಸಾಧನೆಗಾಗಿ ಭಾರತೀಯರು ಮಹಾಭಾರತದಿಂದಲೇ ಪ್ರೇರಣೆಯನ್ನು ಪಡೆಯುತ್ತಿರುವರು. ಕಲ್ಪಾಂತದವರೆಗೂ ತಲೆತಲಾಂತರದಿಂದ ಭಾರತೀಯ ಜನತೆಯೂ ಇನ್ನು ಮುಂದೆ ಜಾಗತಿಕ ಜನತೆಯೂ ಇದೇ ರೀತಿಯಾಗಿ ಮಹಾಭಾರತದ ಕೊನೆಯಿಲ್ಲದ ಗಣಿಯಿಂದ ಹೊಸ ಹೊಸ ರತ್ನಗಳನ್ನು ಆಯ್ದುಕೊಳ್ಳುತ್ತಾ ಹೋಗಬಹುದು.

ಹೊಸ ದೃಷ್ಟಿ

ಹತ್ತೊಂಬತ್ತನೆಯ ಶತಮಾನದಿಂದ ಪಂಡಿತರು ಭಾರತ ವಿದ್ಯೆ (Indology) ಎಂಬ ಹೊಸ ಸ್ವಾಧ್ಯಾಯಕ್ಕೆ ರೂಪ ಕೊಟ್ಟಿದ್ದಾರೆ. ಸಾಮಾನ್ಯವಾಗಿ ಭಾರತೀಯರು ಮೋಕ್ಷ ಸಾಧನೆ, ಕಾಲಕ್ಷೇಪ ಮುಂತಾದ ಉದ್ದೇಶಗಳಿಂದ ಪುರಾಣಗಳು, ಮಹಾಭಾರತ, ರಾಮಾಯಣ, ಇತ್ಯಾದಿ ಗ್ರಂಥಗಳನ್ನು ಅಭ್ಯಸಿಸುವುದುಂಟು. ಆದರೆ ಪಾಶ್ಚಾತ್ಯರ ದೃಷ್ಟಿಯು ಹೆಚ್ಚು ಶಾಸ್ತ್ರೀಯವಾಗಿರುವುದರಿಂದ ಅವರು ಸಾಹಿತ್ಯ ಶಾಸ್ತ್ರ, ಇತಿಹಾಸ, ಭಾಷಾಶಾಸ್ತ್ರ, ಮಾನವವಂಶಶಾಸ್ತ್ರ, ಸಮಾಜಶಾಸ್ತ್ರ ಇವುಗಳ ಅಭ್ಯಾಸಮಾಡಲೆಂದು ಭಾರತೀಯ ಆಗಮಗಳ ಆಧಾರವನ್ನು ಕೋರುತ್ತಾರೆ. ಮಹಾಭಾರತದ ಕಥೆಯು ಭಾರತೀಯರಿಗೆ ಪರಿಚಿತವಾಗಿದ್ದರೂ ಈ ಹೊಸ ದೃಷ್ಟಿಯು ಇನ್ನೂ ಬೇರು ಬಿಟ್ಟಿಲ್ಲ. ಪುರಾಣಗಳ ಅನ್ವಯವನ್ನು ಹಚ್ಚುವುದಕ್ಕಾಗಿ, ಪರಿಜೆಟ್‌ರ್, ವೆಬರ್ ಪಂಡಿತರು ಪರಿಶ್ರಮ ಪಟ್ಟಿರುವರು. ಅವರು ಅನುಸರಿಸಿದ ಶಾಸ್ತ್ರೀಯ ಪದ್ಧತಿಯ ಮೇರೆಗೆ ಪುಣೆಯ ಪ್ರಸಿದ್ಧ ಇತಿಹಾಸಕಾರ ವಿ.ಕೆ. ರಾಜವಾಡೆ, ಇವರು ಮಹಾಭಾರತದ ಅಭ್ಯಾಸ ಮಾಡಿ ಅನೇಕ ಭೌಗೋಲಿಕ ವಂಶ ಶಾಸ್ತ್ರೀಯ (Ethnological) ಸಿದ್ಧಾಂತಗಳನ್ನು ಮಂಡಿಸಿರುವರು.

ಶ್ರೀಮತಿ ಇರಾವತಿ ಕರ್ವೆ

ಮಹಾರಾಷ್ಟ್ರದಲ್ಲಿಯ ಪುಣೆ ಪಟ್ಟಣವು ಜ್ಞಾನ ವಿಜ್ಞಾನ ಪ್ರೇಮಿಗಳ ತವರೆಂದು ಪ್ರಸಿದ್ಧವಾಗಿದೆ. ಅಲ್ಲಿಯ ಪ್ರಸಿದ್ಧ ಪಂಡಿತರಲ್ಲಿ ದಿವಂಗತ ಇರಾವತಿ ಕರ್ವೆಯವರಿಗೆ ವಿಶಿಷ್ಟ ಸ್ಥಾನವಿದೆ. ಅವರ ಸಂಶೋಧನೆಯ ವಿಷಯಗಳೆಂದರೆ ಮಾನವ ವಂಶ ಶಾಸ್ತ್ರ (Anthropology), ಸಮಾಜಶಾಸ್ತ್ರ ಮುಂತಾದವು. ಅವರು ಮಹಾಭಾರತದ ಅಧ್ಯಯನವನ್ನು ಮಾಡಿ ವೀರ ಪುರುಷರ ಪ್ರಸಿದ್ಧ ಸ್ಥಳಗಳ ಆಖ್ಯಾನಗಳ ಸಂಬಂಧದಿಂದ ಮಾಡಿರುವ ಲೇಖನಗಳ ಸಂಗ್ರಹಕ್ಕೆ 'ಯುಗಾಂತ' ವೆಂದು

ಹೆಸರು ಕೊಟ್ಟು ಪ್ರಸಿದ್ಧಪಡಿಸಿದ್ದಾರೆ. ಅವರು ತೆಗೆದ ನಿಷ್ಕರ್ಶಗಳು ವಿವಾದ್ಯವಾಗಿದ್ದರೂ. ಅವರ ವಿಚಾರಧಾರೆಗೆ ವಿದ್ವಾಂಸರು ಮನಸೋತಿದ್ದಾರೆ.

ಈ ತರಹದ ಹೊಸ ದೃಷ್ಟಿ ಕರ್ನಾಟಕದಲ್ಲಿ ಇನ್ನೂ ರೂಢವಾಗಿಲ್ಲ. ಮಹಾ ಭಾರತವು ಇನ್ನೂ ಮೋಕ್ಷ ಮನರಂಜನೆಯ, ವಿಷಯವಾಗಿಯೇ ಉಳಿದುಕೊಂಡಿದೆ. ಕೆಲಮಟ್ಟಿಗೆ ಅಪ್ರಿಯವೆನಿಸುವ ಸೌ॥ ಕರ್ವೆ ಇವರ ಕೆಲವೊಂದು ಸಿದ್ಧಾಂತಗಳ ಕಲ್ಪನೆಯಾದರೂ, ಸುಶಿಕ್ಷಿತರಿಗೆ ಇರುವುದು ಆವಶ್ಯಕವೆನ್ನಿಸುವುದರಿಂದ ಅವರ ಶ್ರೇಷ್ಠ ಸಾಹಿತ್ಯ ಕೃತಿಯಾದ "ಯುಗಾಂತ"ವನ್ನು ಕನ್ನಡಿಸಿದ್ದೇನೆ. ಮಹಾಭಾರತ ಪುರಾಣ ಇವುಗಳ ವಿಷಯವಾಗಿ ಪೂರ್ವಾಗ್ರಹರಹಿತವಾದ ಶಾಸ್ತ್ರೀಯ ದೃಷ್ಟಿಯು ಲೋಕಪ್ರಿಯವಾದಲ್ಲಿ ನಾನು ಮಾಡಿದ ಅಲ್ಪಯತ್ನವು ಸಫಲವಾಯಿತೆಂದು ತಿಳಿಯುತ್ತೇನೆ.

ಸರಸ್ವತಿ

ಪರಿವಿಡಿ

ಯುಗಾಂತ

ಪ್ರಸ್ತಾವನೆ

ಇದರಲ್ಲಿಯ ಎರಡನೆಯ ಲೇಖನ "ಗಾಂಧಾರಿ" ಎಂಬುದನ್ನು ಜುಲೈ ೧೯೬೭ರಲ್ಲಿ ಬರೆದೆ. ಆಗ ಮಹಾಭಾರತದಲ್ಲಿಯ ವ್ಯಕ್ತಿಗಳ ಬಗ್ಗೆ ನಾನು ಇನ್ನು ಬರೆದೇನು ಎಂಬ ಕಲ್ಪನೆ ಇರಲಿಲ್ಲ. ಒಂದರ ನಂತರ ಇನ್ನೊಂದು ಲೇಖನವನ್ನು ಕಳೆದ ಐದು ವರ್ಷಗಳಲ್ಲಿ ಬರೆದದ್ದಾಯಿತು. ಪ್ರತಿಯೊಂದು ಲೇಖನ ಬರೆಯುವ ಕಾಲಕ್ಕೆ ಇನ್ನು ಮುಂದೆ ನಾನು ಬರೆದೇನು ಎಂದು ತಿಳಿದಿರಲಿಲ್ಲ. ಈ ರೀತಿಯ ಲೇಖನವು ಸದ್ಯದ ಪುಸ್ತಕಕ್ಕೆ ಪೂರ್ತಿಯಾಯಿತು ಎಂದೂ ಇಲ್ಲ. ಪ್ರತಿಯೊಂದು ಬಾರಿ ಒಂದು ಲೇಖನ ಪೂರ್ತಿಯಾಗುತ್ತಲೇ "ಈ ಲೇಖನವೇ ಕೊನೆಯದು. ಇನ್ನು ಅದೇ ಅದೇ ಪುನರುಕ್ತಿಯಾಗುವುದು, ಹೆಚ್ಚಿಗೆಯೇನು ಬರೆಯುವುದು ಬೇಡ" ಎಂದು ಅನ್ನಿಸುತ್ತಿತ್ತು. ಈ ಕ್ಷಣವು ಕೂಡ ಅದೇ ಭಾವನೆ ಇದೆ. ಅದು ನಿಜವಾಗುವುದೋ ಇಲ್ಲವೆ ಮತ್ತೆ ನಾನು ಮಹಾಭಾರತದ ಮೇಲೆ ಬರೆಯಬಹುದೋ ಎಂಬುದನ್ನು ಸದ್ಯಕ್ಕೆ ಹೇಳಲು ಬರುವುದಿಲ್ಲ. ನನ್ನ ಅನೇಕ ಮಿತ್ರರು ಇದನ್ನು ಏಕೆ ಬರೆದಿದ್ದು? ಎಂದು ಪ್ರಶ್ನಿಸಿದ್ದಾರೆ. ಈ ಪ್ರಶ್ನೆಗೆ ನನ್ನ ಬಳಿ ಉತ್ತರವಿಲ್ಲ. ಮಾತನಾಡುವುದರಲ್ಲಿ ಮತ್ತು ಬರೆಯುವುದರಲ್ಲಿ ನನ್ನ ಮತದಂತೆ ಒಂದೇ ಉದ್ದೇಶವಿರುತ್ತದೆ. ಅದೇನೆಂದರೆ ಯಾವುದನ್ನು ನಾನು ತೀವ್ರತೆಯಿಂದ ಅನುಭವಿಸುವೆನೋ ಅದನ್ನು ಅನ್ಯರಿಗೆ ತಿಳಿಯಪಡಿಸುವುದು. ಈ ಸ್ವಾಭಾವಿಕ ಪ್ರವೃತ್ತಿಯನ್ನು ಹತ್ತಿಕ್ಕಲಾಗುವುದಿಲ್ಲ. ಇದಕ್ಕಿಂತ ಹೆಚ್ಚಾದ ಯಾವ ವಿಚಾರವು ಈ ಲೇಖನಗಳನ್ನು ಬರೆಯುತ್ತಿದ್ದಾಗ್ಗೆ ನನ್ನಲ್ಲಿ ಇದ್ದುದು ಸ್ಮರಣೆಯಲ್ಲಿಲ್ಲ. ಶಿಕ್ಷಿಕೆಯ ವೃತ್ತಿಯೇ ನನ್ನದಾದ್ದರಿಂದ ನಾನು ಹೇಳುವುದು ಸಾಧ್ಯವಾದಷ್ಟು ಹೆಚ್ಚಾಗಿ ಇತರರಿಗೆ ಅರ್ಥವಾಗಬೇಕೆಂಬ ಆಸೆ. ಆದ್ದರಿಂದ ಬರೆದ ವಿವರಣೆಯು ಸ್ಪಷ್ಟವಾಗಿಯೂ ಸರಳಾರ್ಥವಾಗುವಂತೆಯೂ ಇರಬೇಕೆಂಬುದರ ಕಡೆಗೆ ನನ್ನ ದೃಷ್ಟಿ ಇದೆ. ನನ್ನ ಲೇಖನವು ಎಂತಹದಿದೆ ಎಂಬುದನ್ನು ಓದಿ ಅರಿತ ಯಾರೊಬ್ಬರಿಗೆ ಅದರಲ್ಲಿ ಆಕ್ಷೇಪಾರ್ಹವೆನಿಸಿದರೆ ಇಲ್ಲವೇ ಸರಿ ಇಲ್ಲವೆನಿಸಿದರೆ ಮತ್ತು ಅವರು ಆ ರೀತಿ ಹೇಳಿದಲ್ಲಿ ನನಗೆ ದುಃಖವೆನಿಸಲಾರದು. ಆದರೆ ನಾನು ಬರೆದದ್ದು ಯೋಚನೆ ರಹಿತವಾದದ್ದು, ಆದ್ದರಿಂದ ಅದರಲ್ಲಿ ವಿಪರೀತ ಅರ್ಥಬೋಧವಾಗುವಂತಹದು ಎಂದರೆ ಮಾತ್ರ ನನಗೆ ವ್ಯಥೆಯಾಗುವುದು. ಉದಾಹರಣೆಗಾಗಿ ನನ್ನ ಒಬ್ಬ ಸ್ನೇಹಿತರು "ದ್ರೌಪದಿ" ಲೇಖನದ ಕೊನೆಯಲ್ಲಿಯ "ಭೀಮನೇ, ಮುಂದಿನ ಜನ್ಮದಲ್ಲಿ ಹಿರಿಯ ಬಂಧುವಾಗು!" ಎಂಬ ವಾಕ್ಯದ ಅರ್ಥವನ್ನು "ಮುಂದಿನ

ಜನ್ಮದಲ್ಲಿ ನನ್ನ (ದ್ರೌಪದಿಯ) ಹಿರಿಯ ಬಂಧುವಾಗು!" ಎಂದು ಮಾಡಿದರು. ಆಗ್ಗೆ ನನಗೆ ಬಹಳ ವ್ಯಥೆಯಾಯಿತು. ನನ್ನ ಮನಸ್ಸಿನಲ್ಲಿಯ ದ್ರೌಪದಿಯು ಐವರು ಪತಿಯರಲ್ಲಿ ಪ್ರಾಮಾಣಿಕಳಿದ್ದಳು. ಅದಲ್ಲದೆ ಒಬ್ಬ ಪತಿಯ ಮಡದಿಯಾಗಿ ಆತನಿಂದ ಪುತ್ರ ಪ್ರಾಪ್ತಿಯಾದ ಅನಂತರ ಆ ಪತಿಗೆ ಮುಂದಿನ ಜನ್ಮದಲ್ಲಿ "ಬಂಧುವಾಗು" ಎಂದು ನುಡಿಯುವುದು ನನಗೆ ಅಸ್ವಾಭಾವಿಕವು, ಡಾಂಭಿಕತೆಯದು, ಅಸಾಧ್ಯವು ಎನ್ನಿಸುತ್ತದೆ. ಆದ್ದರಿಂದ ಈ ಸದ್ಯದ ಆವೃತ್ತಿಯಲ್ಲಿ ನನ್ನ ಹೇಳಿಕೆಯನ್ನು ನಿಚ್ಚಳವಾಗಿ ತಿಳಿಸಲು "ಮುಂದಿನ ಜನ್ಮದಲ್ಲಿ ಐವರಲ್ಲಿಯ ಹಿರಿಯ ಬಂಧುವಾಗು" ಎಂಬ ಶಬ್ದಗಳಲ್ಲಿ ಬರೆದಿದ್ದೇನೆ. ನನ್ನ ಹೇಳಿಕೆಯಲ್ಲಿ ವಿಪರ್ಯಾಸವಾಗುವಂತಹದು ಇನ್ನೂ ಯಾವುದೂ ಉಳಿದಿರಲಿಕ್ಕಿಲ್ಲವೆಂದು ಭಾವಿಸುತ್ತೇನೆ.

ಭಾಂಡಾರ್‌ಕರ್ ಇನ್‌ಸ್ಟಿಟ್ಯೂಟಿನವರು ತಯಾರಿಸಿದ ಮಹಾಭಾರತದ ಸಂಶೋಧಿತ ಆವೃತ್ತಿಯನ್ನೇ ನಾನು ಸಂದರ್ಭಕ್ಕಾಗಿ ಬಳಸಿದ್ದೇನೆ. ಆದ್ದರಿಂದ ಈ ಮೊದಲಿನ ಮಹಾಭಾರತದಲ್ಲಿ ಯಾವುದಿದೆ ಎಂದು ಎನಿಸುವುದು, ಅಂತಹ ಅನೇಕ ಸಂಗತಿಗಳು ಇದರಲ್ಲಿ ಕಾಣುವುದಿಲ್ಲ. ನನ್ನ ಲೇಖನಗಳಲ್ಲಿ ಅಲ್ಲಲ್ಲಿ ಇದರ ಬಗ್ಗೆ ಬರೆಯಲಾಗಿದೆ. ಅದೇ ಅಲ್ಲದೆ ಈ ಸಂಶೋಧಿತ ಆವೃತ್ತಿಯಲ್ಲೂ ಉಳಿದುಕೊಂಡಿರುವ, ಆದರೆ ಪ್ರಕ್ಷಿಪ್ತ ಎನಿಸುವ ಅನೇಕ ಸಂದರ್ಭಗಳಿವೆ. ಭಾಂಡಾರ್‌ಕರ್ ಆವೃತ್ತಿಯನ್ನು ಎಲ್ಲಾ ಮೂಲ (ಕೈಬರಹದ) ಹಳೆಯ ಹಸ್ತಲಿಖಿತಗಳನ್ನು ಪರಿಶೀಲಿಸಿ ಅದರಲ್ಲಿಯೂ ತೀರಾ ಪ್ರಾಚೀನವೆನಿಸುವ ಹಸ್ತಲಿಖಿತಗಳನ್ನು ಆಧರಿಸಿ ತಯಾರಿಸಿದ್ದರಿಂದಲೇ ಈ ಪ್ರಕ್ಷಿಪ್ತ ಭಾಗಗಳು ಉಳಿದುಕೊಂಡಿವೆ. ಪ್ರಾಚೀನ ಹಸ್ತಲಿಖಿತಗಳಲ್ಲಿ ಸ್ವಲ್ಪಾಂಶಗಳಲ್ಲಿ ಇಂಥ ಭಾಗವು ಕಂಡುಬರುತ್ತಿದ್ದರೆ ಅದನ್ನು ಈ ಸಂಶೋಧಿತ ಆವೃತ್ತಿಯಿಂದ ತೆಗೆದುಹಾಕಲಾಗಿದೆ. ಸಂಪಾದಕರಿಗೆ ದೊರೆತ ಎಲ್ಲಕ್ಕೂ ಪ್ರಾಚೀನ ಆವೃತ್ತಿಗಳಲ್ಲಿ ಇದ್ದುದು ಮಾತ್ರ ಈ ಸಂಶೋಧಿತ ಆವೃತ್ತಿಯಲ್ಲಿ ಕಂಡುಬರುತ್ತದೆ. ಈ ಆವೃತ್ತಿಯ ಕಾಲಮಾನವು ಕ್ರಿ.ಶ. ಪೂರ್ವ ೮ ಅಥವಾ ೯ನೆಯ ಶತಮಾನಕ್ಕಿಂತ ಹಿಂದಿನದಲ್ಲ. ಈ ಆವೃತ್ತಿಯು ಮುಂದೆ ನಡೆಯಬಹುದಾದ ಸಂಶೋಧನೆಯ ಸಂದರ್ಭ ಗ್ರಂಥವಾಗಲೂ ಯೋಗ್ಯವಾಗಿದೆ. ಇಂದಿನವರೆಗೆ ನಡೆದ ಸಂಶೋಧನೆಯು ಬಾಹ್ಯರೂಪವನ್ನು ಆಧರಿಸಿತ್ತು. ಈಗ ಲಬ್ಧವಿದ್ದ ಪ್ರತಿಯಲ್ಲಿ ಅನಂತರ 'ಅಡಕವಾದವು ಎಂದು ಸರಳವಾಗಿ ಕಂಡುಬರುವ ಮೂಲ ಕಥೆಗೆ ಸುತರಾಮ್ ಸಂಬಂಧವಿಲ್ಲದ' ಭಾಗವಿಲ್ಲದ, ಭಾಗವು ಅನೇಕ ಇವೆ. ಅಂತಹ ಭಾಗಗಳನ್ನು ಪರಿಶೀಲಿಸಿ ತೆಗೆದುಹಾಕುವುದು ಅವಶ್ಯಕ. ಈ ರೀತಿಯಾದಲ್ಲಿ ಇನ್ನೂ ಹಲವು ವರ್ಷಗಳ ಅನಂತರ ಈಗ ಭಾಂಡಾರ್‌ಕರ್ ಪ್ರತಿಯಲ್ಲಿದ್ದ ಇಂತಹ ಸಂದರ್ಭಗಳು ಇಲ್ಲದಂತಾಗಿ ಒಂದು ವೇಳೆ ಇನ್ನೊಂದು ಸಂಶೋಧಿತ ಆವೃತ್ತಿಯು ಲಭಿಸುವ ಸಂಭವವಿದೆ. ಇಲ್ಲಿಗೆ ಈ ಕಾರ್ಯವು ಮುಗಿಯಿತೆಂದಲ್ಲ. ಇದಕ್ಕೂ ಆಳ ಹೋಗಿ ಮಹಾಭಾರತದ ಮೂಲ ರೂಪವಾದ "ಜಯ" ಎಂಬ ಕಾವ್ಯ ರೂಪಕವು ಪ್ರಸ್ತಾಪಿತವಾಗಬಹುದು. ಸಂಶೋಧನೆಯು

ಸಾಗಿದಂತೆ ನೂತನ ಸಂಶೋಧನ ಮಾರ್ಗಗಳು ಉಪಲಬ್ಧವಾಗುತ್ತವೆ. ಹಿಂದಿನ ಸಂಶೋಧಕರೆಸಗಿದ ದೋಷಗಳು ಕಂಡು ಬರುತ್ತವೆ. ಆದ್ದರಿಂದ ಯಾವುದೇ ಒಂದು ಸಂಶೋಧನೆ ಎಂದರೆ ಅಂತಿಮ ದೋಷ ರಹಿತ ಸಂಶೋಧನೆ ಎಂದು ಅನ್ನಲಾಗುವುದಿಲ್ಲ.

ಸಂಸ್ಕೃತ ಭಾಷೆಯು ನನ್ನ ವ್ಯಾಸಂಗದ ವಿಷಯವಲ್ಲ. ಮಹಾಭಾರತವು ನನ್ನನ್ನು ಆಕರ್ಷಿಸುತ್ತದೆ. ಆ ಕಾರಣ ನಾನು ಅದನ್ನು ಓದುತ್ತೇನೆ. ನನಗೆ ಪ್ರಕ್ಷಿಪ್ತವೆನಿಸುವ ಭಾಗಗಳ ಬಗ್ಗೆ ಆಗಾಗ್ಗೆ ನಾನು ಉಲ್ಲೇಖ ಮಾಡಿದ್ದೇನೆ. ಮಹಾಭಾರತವನ್ನು ಓದುತ್ತಿದ್ದಂತೆ ನನಗೆ ಹಾಗೆ ಅನಿಸಿದೆ, ವಿನಾ ಯಾವುದೇ ರೀತಿಯ ಸಂಶೋಧನೆಯ ಆಧಾರವು ಈ ವಿಚಾರ–ಸರಣಿಗೆ ಇಲ್ಲ. ನನಗೆ ಪ್ರಕ್ಷಿಪ್ತವೆನಿಸಿದ ಭಾಗವು ಸಂಶೋಧನೆಯ ನಂತರ ಹಾಗಿಲ್ಲವೆಂದು ಸಿದ್ಧವಾದಲ್ಲಿ ಅಷ್ಟರಮಟ್ಟಿಗೆ ನನ್ನ ವಿಮರ್ಶೆಯು ತಪ್ಪಾಯಿತೆಂದು ಅನ್ನಬೇಕಾಗುವುದು. ಆದರೆ ಲೇಖಕಿಯ ವಿಮರ್ಶೆಯಲ್ಲಿ ದೋಷವಿದೆ ಎಂದು ಎನ್ನಲಾಗುವುದಿಲ್ಲ. ಒಂದು ವೇಳೆ ಮನಸ್ಸಿಗೆ ಹಿಡಿಸುವುದಿಲ್ಲವೆಂದು ಧಾರಾಳವಾಗಿ ಎನ್ನಬಹುದು. ಮಹಾಭಾರತವು ಒಂದು ಗಣಿಯಾಗಿದೆ. ಅದರಿಂದ ಸಂಪತ್ತನ್ನು ಹೊರ ತೆಗೆಯುವ ಹಲವು ವಿಧಾನಗಳನ್ನು ಯೋಚಿಸಬಹುದು. ಅವರವರು ತಮ್ಮ ಬುದ್ಧಿಯ ಅನುಸಾರ ಈ ಸಂಸ್ಕೃತ ಭಾಂಡಾರದಲ್ಲಿಯ ಸಂಪತ್ತನ್ನು ಬಳಸುತ್ತಿರುತ್ತಾರೆ. ಜೋತಿಷ್ಯಶಾಸ್ತ್ರ, ಭಾಷಾ ಶಾಸ್ತ್ರ, ಪ್ರಾಗೈತಿಹಾಸಿಕ ಶಾಸ್ತ್ರ ಇವುಗಳನ್ನು ಅರಿತವರು ಮಹಾಭಾರತದಲ್ಲಿಯ ವ್ಯಕ್ತಿಗಳ ಹಾಗೂ ಪ್ರಸಂಗಗಳ ವಿಚಾರವಾಗಿ ಬೇರೆ ಬೇರೆ ರೀತಿಯಲ್ಲಿ ಬರೆಯಬಹುದು. ನಾನು ಬರೆದದ್ದು ನನ್ನ ಬುದ್ಧ್ಯನುಸಾರ ಮತ್ತು ಸ್ವೇಚ್ಛೆಯಿಂದ. ಕೆಲವು ಸಂಗತಿಗಳ ಬಗ್ಗೆ ನಾನು ಕೇವಲ ಉಲ್ಲೇಖವಮಾಡಿದ್ದೇನೆ (ಉದಾಹರಣೆಗಾಗಿ :– ಆಜ್ಯವೆಂದರೇನು? ಘೃತವೆಂದರೇನು?). ಅವುಗಳ ಬಗ್ಗೆ ಸಂಶೋಧನೆಯನ್ನು ನಾನು ಮಾಡಿಲ್ಲ. ಇದನ್ನು ಬರೆಯುವ ಕಾರಣವೇನೆಂದರೆ ಯಾರಾದರೂ ತರುಣವಾಚಕರು ಇವುಗಳತ್ತ ಗಮನ ಕೊಟ್ಟು ಒಂದು ವೇಳೆ ಸಂಶೋಧನೆ ಮಾಡಬಹುದು ಮತ್ತು ನನ್ನ ಚಿತ್ರಣದಲ್ಲಿನ ನ್ಯೂನತೆಗಳನ್ನು ತೆಗೆದು ಹಾಕಬಹುದು.

'ಗಾಂಧಾರಿ' ಎಂಬ ಲೇಖನವು ಪ್ರಕಟವಾದ ನಂತರ ನನ್ನ ಒಬ್ಬ ಹಿಂದೀ ತರುಣ ಮಿತ್ರರು "ಈ ಗಾಂಧಾರಿಯು ಯಾರು?" ಎಂದು ಕೇಳಿದ್ದಾರೆ. ನನಗೆ ಬಹಳ ವ್ಯಥೆಯಾಯಿತು. ಈ ಯುಗದಲ್ಲಿ ನಿರರ್ಥಕವಾಗಿ ಭೂತಕಾಲದಲ್ಲಿಯ ವಿಷಯಗಳತ್ತ ಗಮನಿಸುವ ಮುರುಕುಲ ಗುಪ್ಪೆಯಂತೆ ಇದ್ದೇನೆ ಎಂದೆನಿಸಿತು. ಇನ್ನೂ ಮುಂದೆ ಯಾವುದನ್ನು ಬರೆಯಬಾರದೆಂದು ಉದ್ವೇಗದಿಂದ ಎಂದು ಕೊಂಡೆನು. ಇಲ್ಲವೇ ಇಂಗ್ಲಿಷ್ ಭಾಷೆಯಲ್ಲಿ ಬರೆದ ಆವೃತ್ತಿಯಲ್ಲಿ ಬರೆದಂತೆ ಮಹಾಭಾರತದ ಇಡಿ ಕಥೆಯನ್ನೇ ಪ್ರಸ್ತಾವನೆಯಲ್ಲಿ ಬರೆದಿಡಬೇಕೆಂದೆನಿಸಿತು. ಬಹಳ ವಿಚಾರದ ನಂತರ ಇವೆರಡನ್ನೂ ಬಿಟ್ಟುಕೊಟ್ಟೆನು. ನಾನು ಸ್ವಭಾವದಿಂದ ಬಲು ಹಠಮಾರಿ. ತಮ್ಮ ಹೇಳಿಕೆಯನ್ನು ನನ್ನ ಮೇಲೆ ಪ್ರಸ್ತಾಪಿಸಲು ತರುಣ ವರ್ಗದವರು ಸತತ ಪ್ರಯತ್ನ ಮಾಡುತ್ತಿರುತ್ತಾರೆ. ಇಂತಹ ಮೂವರು ಪಿಹೆಚ್.ಡಿ. ತರುಣ ಆಧುನಿಕ ವಿದ್ಯಾರ್ಥಿಗಳನ್ನು ನಾನು ಸಂತತವಾಗಿ ಎದುರಿಸುತ್ತಿರುತ್ತೇನೆ. ನನ್ನ ಹೇಳಿಕೆಯನ್ನು

ಅವರ ಮೇಲೆ ಬಿಂಬಿಸಲು ಇದೊಂದು ಪ್ರಯತ್ನವಿದೆ. ನನ್ನ ವಿಮರ್ಶೆಯು ತಪ್ಪಾಗಿದೆ ಎಂದುಕೊಂಡಾದರೂ ಆಧುನಿಕರು ಮಹಾಭಾರತವನ್ನು ಓದಿದರೂ ನನ್ನ ಉದ್ದೇಶವು ಸಫಲವಾಯಿತೆಂದು ನಾನು ಬಗೆಯುತ್ತೇನೆ.

೨


ಮಹಾಭಾರತದ ಪರಿಶೋಧಿತ ಆವೃತ್ತಿಯೆಂದರೆ ಯಾವುದು? ಯಾವ ರೀತಿಯಿಂದ ಸಂಶೋಧನೆ ಆಯಿತು? ಐವತ್ತು ವರ್ಷಗಳ ಸತತ ಪರಿಶ್ರಮದಿಂದ ನಿರ್ಮಿತವಾದ ಈ ಆವೃತ್ತಿಯನ್ನೇ ಆಧರಿಸಿ ನನ್ನ ಲೇಖನಗಳಿವೆ ಎಂದು ನಾನು ಹೇಳುತ್ತೇನೆ. ಅದರಲ್ಲಿಯೂ ಕೆಲವು ಭಾಗವು ನಂತರ ತೋರಿಸಿದ್ದು, ಕೆಲವು ಭಾಗವು ಪ್ರಕ್ಷಿಪ್ತವಾದುದು ಎಂದು ನಾನು ಏಕೆ ಅನ್ನುತ್ತೇನೆ? ಎಂಬ ಪ್ರಶ್ನೆಯು ಬರುತ್ತದೆ. ಈ ರಸಹೀನ ವೃತ್ತಾಂತವನ್ನು ಪ್ರಸ್ತಾವನೆಯಲ್ಲಿ ಬರೆಯಕೂಡದು ಎಂದು ಬಗೆದಿದ್ದೆ. ಆದರೆ ಅನೇಕ ಮಿತ್ರರು ಹಲವು ಬಾರಿ ಈ ಪ್ರಶ್ನೆಯನ್ನೇ ಕೇಳಿದ್ದರಿಂದ ಬರೆಯಬೇಕಾಯಿತು. ಮೊದಲೇ ಯಾರು ಓದಿ ತಿಳಿದುಕೊಂಡಿರುವರೊ ಅಥವಾ ಶ್ರೀ ಸುಕಟನ್‌ಕರ್ ಅವರ ಮೂರು ಲೇಖನಗಳನ್ನು ಓದಿದ್ದಾರೋ ಅಂತಹವರು ಆ ಲೇಖನಗಳನ್ನಾಧಾರಿತ ಈ ಮಾಹಿತಿಯನ್ನು ಓದುವ ಅವಶ್ಯಕತೆ ಇಲ್ಲ. ಅದರಂತೆಯೇ ಐತಿಹಾಸಿಕ ಸತ್ಯಾಸತ್ಯತೆಯ ಚರ್ಚೆಯಲ್ಲಿ ಯಾರು ಬೀಳುವುದಿಲ್ಲವೋ ಅಂತಹವರಿಗೆ ಆ ಮೂಲ ಲೇಖನಗಳನ್ನು ಓದದೇ ಕೂಡ ಪ್ರಸ್ತುತ ಈ ಲೇಖನವು ಅರ್ಥವಾಗುವುದರಲ್ಲಿ ಸಂದೇಹವಿಲ್ಲ. ಆದರೆ ಅನೇಕರಿಗೆ ಜಿಜ್ಞಾಸೆಯಿದೆ. ನನ್ನ ಭೂಮಿಕೆಯನ್ನು ಅರಿಯಲು ಇದರಿಂದ ಅನುಕೂಲವಾಗುವುದು ಎಂದು ಅವರು ಗ್ರಹಿಸಿದ್ದಾರೆ. ಆ ಕಾರಣ ತುಸುಮಟ್ಟಿಗೆ ಇಚ್ಛೆ ಇಲ್ಲದಿದ್ದರೂ ಈ ವಿವರಣೆಯನ್ನು ಕೊಡುತ್ತಲಿದ್ದೇನೆ.

ಯಾವ ಗ್ರಂಥವು ಶಾಸ್ತ್ರೀಯವಾಗಿ ಸಂಪಾದಿತವೆನಿಸಿಕೊಳ್ಳುತ್ತಿದೆಯೋ ಅದು ಪ್ರಾಚೀನವಿರುತ್ತದೆ. ಹಲವು ದಶಕಗಳಿರಬಹುದು, ಅದರ ಗ್ರಂಥಕಾರನು (ಒಬ್ಬನೇ ಇಲ್ಲವೆ ಅನೇಕರು) ಜೀವಿಸಿರುವುದಿಲ್ಲ. ಅದರ ಅನೇಕ ಆವೃತ್ತಿಗಳು ಪ್ರಚಾರದಲ್ಲಿರುತ್ತವೆ. ಬಹಳ ಸಂದರ್ಭಗಳಲ್ಲಿ ಈ ಗ್ರಂಥವು ಬೇರೆ ಬೇರೆ ಭಾಷೆಗಳಲ್ಲಿಯೂ ಇರುತ್ತದೆ. ಇಂತಹ ಸಂದರ್ಭದಲ್ಲಿ ಉಪಲಬ್ಧವಿದ್ದ ಎಲ್ಲಾ ಆವೃತ್ತಿಗಳನ್ನು ಪರಿಶೀಲಿಸಿ ಅವುಗಳಲ್ಲಿಯ ಮೂಲ, ಸಾಧ್ಯವಿದ್ದಲ್ಲಿ ಗ್ರಂಥಕಾರನ ಕಾಲದಲ್ಲಿಯ ಆವೃತ್ತಿಯನ್ನು ಕಂಡುಹಿಡಿಯುವ ಪ್ರಯತ್ನಕ್ಕೆ ಒಂದು ವಿಧದಲ್ಲಿ ಸಂಶೋಧಿತ (Critical) ಆವೃತ್ತಿ ಎಂದು ಅನ್ನುತ್ತಾರೆ. ಇನ್ನೊಂದು ಬಗೆಯ ಸಂಶೋಧಿತ ಆವೃತ್ತಿಗಳು ಇರುವವು. ಅವುಗಳನ್ನು ಮುಂದೆ ಕೊಡಲಾಗಿದೆ. ಬೈಬಲ್ಲಿನ ಈ ರೀತಿಯ ಆವೃತ್ತಿಗಳು ಸತತವಾಗಿ ಬರುತ್ತಲಿರುತ್ತವೆ. ಹೊಸತಾಗಿ ಏನೊಂದು ಕಂಡು ಬಂದರೂ ಹಳೆಯ ಆವೃತ್ತಿಗಳ ಮೇಲೆ ಅದರ ಬೆಳಕು ಬೀಳುತ್ತದೆ. ಈ ರೀತಿ ಒಂದು ಆವೃತ್ತಿಯನ್ನು ಕಂಡುಕೊಂಡ ನಂತರ ಅದು ಸಂಶೋಧನೆಯ ಕೊನೆ ಆಯಿತು ಎಂದು ಅನ್ನಲಾಗುವುದಿಲ್ಲ. ಒಂದು ವಿಶಿಷ್ಟ ಕಾಲಕ್ಕೆ ಉಪಲಬ್ಧವಿದ್ದ ಆಧಾರಗಳನ್ನು ಲಕ್ಷಿಸಿ ಇದ್ದ ಆವೃತ್ತಿ ಎಂದು

ಹೇಳಬಹುದು. ಮಹಾಭಾರತದ ಒಂದು ಈ ಮಾದರಿಯ ಹಸ್ತಲಿಖಿತವು ಭಾರತದಲ್ಲಿಯೇ ಅಲ್ಲದೆ, ಭಾರತದ ಆಚೆಯ ಚೀನಾ, ಟಿಬೆಟ್, ಬ್ರಹ್ಮದೇಶ, ಈ ದೇಶಗಳಲ್ಲಿ ದೊರೆತರೆ ಮತ್ತು ಅದನ್ನು ದೊರಕಿಸುವ ಪ್ರಯತ್ನವನ್ನು ಈ ಸಂಪಾದಕರು ಪ್ರಾರಂಭಮಾಡಿದಲ್ಲಿ ಮತ್ತು ಈಗ ದೊರೆತ ಹಸ್ತಲಿಖಿತಗಳಿಗಿಂತ ಪ್ರಾಚೀನವಾದ ಹಸ್ತಲಿಖಿತವು ದೊರೆತರೆ ಅದನ್ನು ಅನುಸರಿಸಿ ಸದ್ಯದ ಆವೃತ್ತಿಯಲ್ಲಿ ಸುಧಾರಣೆಗಳನ್ನು ಮಾಡಬಹುದು.

ಈ ಆವೃತ್ತಿಯನ್ನು ಸಂಪಾದಿಸುವಾಗ ಒಂದು ಸಾವಿರಕ್ಕೂ ಮೇಲ್ಪಟ್ಟು ಹಸ್ತ ಲಿಖಿತಗಳನ್ನು ಪರಿಶೀಲಿಸಲಾಯಿತು. ಹಲವು ಸಂಗ್ರಹಗಳು ಸಂಪೂರ್ಣ ಮಹಾಭಾರತದಾಗಿದ್ದವು. ಹಲವು, ಕೆಲವು ಪರ್ವಗಳ ಕಟ್ಟುಗಳು ಮಾತ್ರ ಇದ್ದವು. ಎಲ್ಲಕ್ಕೂ ಒಂದೆ ಬಗೆಯ ಮಹತ್ವವಿರಲಿಲ್ಲ. ಅವುಗಳಲ್ಲಿ ಮಹತ್ವಪೂರ್ಣವೆನಿಸಿದವು ಹೆಚ್ಚು ಕೂಲಂಕಷವಾಗಿ ಪರಿಶೀಲಿಸಲಾಯಿತು. ಹೊಸದಾಗಿನ ಆವೃತ್ತಿಯಲ್ಲಿಯ ಒಂದೊಂದು ಶಬ್ದವನ್ನು ಉಳಿದ ಆವೃತ್ತಿಗಳಲ್ಲಿಯ ಶಬ್ದದೊಡನೆ ಹೊಂದಿಸಿ ಪರೀಕ್ಷಿಸಲಾಗಿದೆ. ಇದನ್ನು ಗಮನಿಸಿದಲ್ಲಿ ಈ ಕಾರ್ಯವು ಎಷ್ಟು ತೊಡಕಿನದು ಮತ್ತು ಕಠಿಣವಾದುದು ಎಂದು ತಿಳಿಯುವುದು.

ಮಹಾಭಾರತದ ಆವೃತ್ತಿಗಳನ್ನು ಕಲೆ ಹಾಕಿದ ಅನಂತರ ಶ್ರೀ ಸುಕಟನ್‌ಕರ್‌ರವರು ಮೊದಲು ಈ ಆವೃತ್ತಿಗಳ ವರ್ಗೀಕರಣ ಮಾಡಿ ಅವುಗಳಲ್ಲಿಯ ಪರಸ್ಪರ ಭೇದವನ್ನು ಪ್ರಸ್ತಾಪಿಸಿದರು. ಅವುಗಳಲ್ಲಿ ಮುಖ್ಯವಾಗಿ 'ಉತ್ತರದವು' ಮತ್ತು 'ದಕ್ಷಿಣದವು' ಹೀಗೆ ಪ್ರಾಥಮಿಕ ಭಾಗವಾಗುತ್ತವೆ. ಉತ್ತರದಿಶೆಯ ಆವೃತ್ತಿಗಳಲ್ಲಿ ಒಂದನ್ನೊಂದು ಹೊಂದಿಕೊಳ್ಳುವ ಬಹಳ ಸಂದರ್ಭಗಳಿವೆ. ಅದೇ ರೀತಿಯಲ್ಲಿ ದಕ್ಷಿಣದ ಆವೃತ್ತಿಗಳಲ್ಲಿ ಪರಸ್ಪರ ಸಾಮ್ಯವಿದೆ. ಉತ್ತರದ ಕಡೆಯ ಆವೃತ್ತಿಗಳಲ್ಲಿ ಪುನಃ ಎರಡು ವರ್ಗಗಳಾಗುತ್ತವೆ. ಒಂದು ವರ್ಗದಲ್ಲಿ ಶಾರದಾ ಲಿಪಿಯಲ್ಲಿಯ ಬೂರ್ಜಪತ್ರದಲ್ಲಿ ಬರೆದ ಕಾಶ್ಮೀರದಲ್ಲಿಯ ಆವೃತ್ತಿಯು ಮತ್ತು ಇದೇ ಆವೃತ್ತಿಯನ್ನು ಆಧರಿಸಿ ಇಲ್ಲವೆ ಅಂತಹ ಆವೃತ್ತಿಗಳನ್ನು ಆಧರಿಸಿ ಬರೆದ ಹಲವು ಆವೃತ್ತಿಗಳು. ಈ ವರ್ಗಕ್ಕೆ 'ಏ' ಎಂಬ ಹೆಸರಿಡಲಾಗಿದೆ. ಎರಡನೆಯ ವರ್ಗದಲ್ಲಿ ಎರಡು ವಿಭಾಗಗಳಾಗಿವೆ. ಒಂದರಲ್ಲಿ ಮೈಥಿಲಿ, ಬಂಗಾಳಿ ಮತ್ತು ನೇಪಾಳಿ ಲಿಪಿಯಲ್ಲಿ ಬರೆದ ಪ್ರತಿಗಳು. ಇನ್ನೊಂದರಲ್ಲಿ ದೇವನಾಗರಿ ಲಿಪಿಯಲ್ಲಿ ಬರೆದ ಪ್ರತಿಗಳು. ದಕ್ಷಿಣದ ಕಡೆಯಲ್ಲಿಯ ಮಹಾಭಾರತಗಳಲ್ಲಿ ಎರಡು ವರ್ಗಗಳಿವೆ. ಒಂದರಲ್ಲಿ ತೆಲುಗು ಮತ್ತು ಗ್ರಂಥ ಲಿಪಿಯಲ್ಲಿ ಬರೆದ ಪ್ರತಿಗಳು, ಇನ್ನೊಂದರಲ್ಲಿ ಮಲೆಯಾಳಿ ಭಾಷೆಯಲ್ಲಿ ಬರೆದ ಪ್ರತಿಗಳು. ಈ ಎಲ್ಲಾ ಪ್ರತಿಗಳಲ್ಲಿಯ ಪರಸ್ಪರ ಹಾಗೂ ಮೂಲ ಭಾರತದೊಡನೆ ಇರುವ ಸಂಬಂಧವನ್ನು ಶ್ರೀ ಸುಕಟನ್ ಕರ್ ಅವರು ಕೆಳಗಿನ ಆಕೃತಿಯಿಂದ ತೋರಿಸಿದ್ದಾರೆ.



ಈಗ ದೊರಕಿರುವ ಎಲ್ಲಾ ಆವೃತ್ತಿಗಳು ಕೆಳಗಿನ ವರ್ಗದವು (ಸಾಲಿನವು) ಎಲ್ಲಕ್ಕೂ ಮೇಲಿನ ಸಾಲಿನಲ್ಲಿಯ ಆವೃತ್ತಿಗಳು ಎಲ್ಲಿ ಅಡಗಿದವು? ಅಥವಾ ಅವುಗಳದೇನಾಯಿತು ಎಂಬುದನ್ನು ಊಹಿಸಿ ಈ ಕೆಳಗಿನಂತೆ ಕಲ್ಪಿತ ವರ್ಗಗಳನ್ನಾಗಿ ಮಾಡಿದೆ. ವ್ಯಾಸನು ಮಹಾಭಾರತವನ್ನು ತನ್ನ ಐದು ಶಿಷ್ಯರಿಗೆ ಹೇಳಿದನು. ಅದೇ ಪಾಂಡವರ 'ಜಯಗಾಥ'. 'ಜಯ' ಎಂಬ ಹೆಸರಿನ ಕಾವ್ಯವಿದೆ ಎಂದು ತರ್ಕಿಸಲಾಗಿದೆ. ಐದು ಶಿಷ್ಯರಿಗೆ ಕಥೆಯನ್ನು ಹೇಳಿದ್ದಾಯಿತು. ಪ್ರತಿಯೊಬ್ಬನು ತನ್ನ ಮನಸ್ಸಿನ ಒಲವಿನಂತೆ ಅದನ್ನು ರಚಿಸಿದನು. ಜೈಮಿನಿಯು ದುರ್ಯೋಧನನ ವತಿಯಿಂದ ಬರೆದಿರಬೇಕೆಂಬ ಊಹೆ ಇದೆ (ಅಶ್ವಮೇಧಿಕ ಪರ್ವದಲ್ಲಿ ಪ್ರೊ॥ ಕರಮರಕರ್‌ರ ಪ್ರಸ್ತಾವನೆಯನ್ನು ಓದಿರಿ). ಇನ್ನೂ ಮೂವರು ಬರೆದಿದ್ದಲ್ಲಿ ಯಾವುದು ಲಬ್ಧವಿಲ್ಲ. ತಮ್ಮ ಮುಂದೆ ಇದ್ದ ಕಥೆಯು ವೈಶಂಪಾಯನನು, ಅರ್ಜುನನ ಮರಿಮಗನಾದ ಜನಮೇಜಯನಿಗೆ ಹೇಳಿದ ಮತ್ತು ಈಗ ವಿಸ್ತೃತಪಡಿಸಿದ ಆವೃತ್ತಿಯಾಗಿದೆ. ಈ ಕತೆಯೇ ಉಗ್ರಶ್ರವ, ಲೋಮಹರ್ಷಣೆಯು, ನೈಮಿಶಾರಣ್ಯದಲ್ಲಿ ಕುಲಪತಿ ಶೌನಕನಿಗೆ ಹೇಳಿದ ಕಥೆಯಾಗಿದೆ. ವ್ಯಾಸಭಾರತ, ವೈಶಂಪಾಯನ ಭಾರತ, ಲೋಮಹರ್ಷಣೆಯು ವೈಶಂಪಾಯನದು ಎಂದು ಹೇಳಿದ ಮೂಲ ಮಹಾಭಾರತವು ಎಂಬ ಮೆಟ್ಟಲುಗಳನ್ನು ಕಲ್ಪಿಸಲಾಗಿವೆ. ಈ ಮೂಲ ಮಹಾಭಾರತದ ಒಂದು ಮೆಟ್ಟಲು ಉತ್ತರದ ಸಧ್ಯದ ಪ್ರತಿಗಳಿಗೆ ಆಧಾರವಾಗಿಯೂ ಇನ್ನೊಂದು ಮೆಟ್ಟಲು ದಕ್ಷಿಣದ ಕಡೆಯ ಪ್ರತಿಗಳಿಗೆ ಆಧಾರವಾಗಿಯೂ

ಇದೆ. ಉತ್ತರದ ಆವೃತ್ತಿಗಳ ಆಧಾರದಿಂದ ವಾಯವ್ಯದ ಆವೃತ್ತಿಯು ಬಂದಿರಬೇಕು. (ಇದಕ್ಕೆ ಶ್ರೀ ಸುಕಟನ್‌ಕರ್ ರವರು ν–ನ್ಯೂ, ಈ ಗ್ರೀಕ್ ಅಕ್ಷರವನ್ನು ಬಳಸಿದ್ದಾರೆ). ಅದರಿಂದ ಶಾರದ ಮತ್ತು ದೇವನಾಗರಿ ಆವೃತ್ತಿಗಳು ಬಂದಿವೆ. ಅವು ಶಾರದ ಆವೃತ್ತಿಯ ಆಧಾರಿತ ಪ್ರತಿಗಳು. ಗಂಗಾತೀರ ಪ್ರದೇಶಕ್ಕೆ λ–ಗಾಮಾ ಈ ಗ್ರೀಕ್ ಅಕ್ಷರವು) Version ಇತ್ತು. ಅದರಲ್ಲಿಂದ ಪೂರ್ವದ ಕಡೆಯ ಭಾಷೆಯ (ε –ಎಪ್ಸಿಲಾನ್ – ಈ ಗ್ರೀಕ್ ಅಕ್ಷರ) ಮೂಲವಾಗಿಟ್ಟುಕೊಂಡು ನೇಪಾಳಿ, ಮೈಥಿಲಿ ಮತ್ತು ಬಂಗಾಳಿ ಮಹಾಭಾರತವು ಬರೆಯಲಾಗಿದೆ. ಈ ಎಲ್ಲಾ ಮಹಾಭಾರತದ ಪ್ರತಿಗಳು ಶಾರದ ಮತ್ತು K ಈ ವರ್ಗದವುಗಳಿಗಿಂತ ವಿಸ್ತಾರದಲ್ಲಿ ಹೆಚ್ಚಾಗಿವೆ. ಗಂಗಾಪ್ರದೇಶದ ಪ್ರತಿಯಿಂದಲೇ ನಿರ್ಮಿತವಾದ ಆದರೆ ಅದರಲ್ಲಿಯೂ ಹೆಚ್ಚಾಗಿ ಬೆರೆಸಿ ನಿರ್ಮಿತವಾದ ಪ್ರತಿಗಳು ದೇವನಾಗರಿ ಲಿಪಿಯಲ್ಲಿವೆ. ಅವುಗಳಲ್ಲಿಯ ಶ್ಲೋಕಗಳ ಸಂಖ್ಯೆಯು ತೀರಾ ಹೆಚ್ಚಾಗಿದೆ. ಇದರಲ್ಲಿ ಉತ್ತರ ದಕ್ಷಿಣ, ಪೂರ್ವ ಮತ್ತು ಇತರ ಎಲ್ಲಾ ಪ್ರತಿಗಳಿಂದ ಅಳವಡಿಸಿದ ಭಾಗವು ಇದೆ. ದಕ್ಷಿಣದ ಕಡೆಯ ಮೂಲ ಗ್ರಂಥದಿಂದ ಅದರಲ್ಲಿಯೂ ಅನೇಕ ಸಂಗತಿಗಳನ್ನು ತೂರಿಸಿ ಬರೆದ (ಸಿಗ್ಮಾ) ಹೆಸರಿನ ಆವೃತ್ತಿಗಳು ನಿರ್ಮಿತವಾದವು. ಅವುಗಳಿಂದ ಗ್ರಂಥ ಮತ್ತು ತೆಲುಗು ಭಾಷೆಗಳಲ್ಲಿಯ ಪ್ರತಿಗಳು ಉದಯಿಸಿದವು. ದಕ್ಷಿಣ ಕಡೆಯ ಮಲಯಾಳಿ ಭಾಷೆಯ ಆವೃತ್ತಿಯು ಮೂಲ ಗ್ರಂಥವನ್ನು ಆಧರಿಸಿದೆ. ಆದರೆ ಅದರಲ್ಲಿ ಆಮೇಲೆ ಯಾವುದೂ ಅಡಕವಾಗಿಲ್ಲ.

ಬಹುತಾಂಶವಾಗಿ ಈ ಆವೃತ್ತಿಗಳ ಮೇಲೆ ಎಲ್ಲಿಯೂ ಕಾಲ ನಿದರ್ಶಕ ತಿಂಗಳು ಅಥವಾ ವರ್ಷ ಬರೆಯಲ್ಪಟ್ಟಿಲ್ಲ. ದೊರೆತ ಹಸ್ತಲಿಖಿತ ಆವೃತ್ತಿಯಲ್ಲಿ ನೇಪಾಳೀ ಪ್ರತಿಯು ತೀರಾ ಪ್ರಾಚೀನವಾದುದು ಮತ್ತು ಕ್ರಿ.ಶ. ೧೨೦೦ ಸುಮಾರದ್ದು. ಎಲ್ಲಕ್ಕೂ ನೂತನ ಆವೃತ್ತಿಯೆಂದರೆ ಕ್ರಿ.ಶ. ೧೮೪೨ರದು. ಈ ಲೇಖನದ ಸರ್ವ ಸಾಧಾರಣ ಆಧಾರಕ್ಕಾಗಿಯೆಂದು ಬೊಂಬಾಯಿಯಲ್ಲಿ ಮುದ್ರಿತವಾದ ಮತ್ತು ಇಲ್ಲಿಯ ಹಸ್ತಲಿಖಿತಗಳನ್ನು ಆಧರಿಸಿ ಬರೆಯಲ್ಪಟ್ಟ ದೇವನಾಗರಿ ಭಾಷಾ ಪರಂಪರೆಯ ಪ್ರತಿಯು ತುಂಬ ಜೊಳ್ಳು ಇದ್ದುದು ಕಂಡುಬಂದಿತು. ಆದರೆ ಈ ಪ್ರತಿಯು ಮುದ್ರಿತವಿದ್ದುದರಿಂದ ವಿದೇಶದಲ್ಲಿ ಮತ್ತು ಭಾರತದಲ್ಲಿ ಜ್ಞಾತವಿತ್ತು. ಆದ್ದರಿಂದ ಈ ಆವೃತ್ತಿಯಿಂದ ವಜಾ ಮಾಡಿದ್ದೇನು? ಮಿಕ್ಕಿದ್ದೇನು? ಎಂಬುದನ್ನು ಇಲ್ಲಿಯ ಮತ್ತು ಪರದೇಶದ ವಿದ್ವಾಂಸರಿಗೆ ಪರಿಶೀಲಿಸಲು ಸಾಧ್ಯವಾಯಿತು. ಎಲ್ಲೆಡೆಯಲ್ಲಿಯೂ ಜ್ಞಾತವಿದ್ದ ಈ ಮುದ್ರಿತ ಆವೃತ್ತಿಗೆ "The Vulgate" ಎಂಬ ಉಲ್ಲೇಖವಿದೆ. The Vulgate ಎಂದರೆ ಪ್ರಚಾರದಲ್ಲಿದ್ದ ಎಲ್ಲರಿಗೂ ಜ್ಞಾತವಿದ್ದ ಪ್ರತಿಯು. ಈ ಶಬ್ದವನ್ನು ಮೂಲ ಇಟೇಲಿಯನ್ ಮತ್ತು ಲ್ಯಾಟಿನ್ ಭಾಷೆಯಲ್ಲಿದ್ದ ಬೈಬಲ್ಲಿನ ಪ್ರತಿಗಳಿಗೆ ಬಳಸಲಾಗಿತ್ತು – Oxford Dictionary

ಈ ಎಲ್ಲಾ ಹಸ್ತ ಲಿಖಿತಗಳನ್ನು ಪರಾಮರ್ಶಿಸಿದ ನಂತರ ಶಾರದ ಹಸ್ತ ಲಿಖಿತ ಪ್ರತಿಯೇ ಕಡಿಮೆ ಶ್ಲೋಕ ಸಂಖ್ಯೆಯದಾಗಿದೆ ಮತ್ತು 'K' ವರ್ಗದ ಬಹುಸಂಖ್ಯಾ ಆವೃತ್ತಿಗಳು ಇದಕ್ಕೆ ಹೊಂದಿಕೊಳ್ಳುತ್ತದೆಯೆಂದು ಕಂಡುಬರುತ್ತದೆ. ಪ್ರಾಚೀನ ನೇಪಾಳೀ ಆವೃತ್ತಿಯು

ಅಷ್ಟೇ ಅಲ್ಲದೇ, ದಕ್ಷಿಣದ ಮಲೆಯಾಳಿ ಆವೃತ್ತಿಯು ಶಾರದ ಆವೃತ್ತಿಯನ್ನು ಹೋಲುತ್ತದೆ. ಹೀಗಿದ್ದುದರಿಂದ ಶಾರದ ಆವೃತ್ತಿಯು ಪೂರ್ವ ಕಾಲದಲ್ಲಿ ದಕ್ಷಿಣದ ಕಡೆಗೆ ಹೋಗಿರಬಹುದು ಮತ್ತು ಈ ಪ್ರತ್ಯಯದಿಂದ ಮಲೆಯಾಳಿ ಆವೃತ್ತಿಯು ಉದಯಿಸಿರಬೇಕು. ಅದು ಉತ್ತರದ ಕಡೆಯ ಇತರ ಕಟ್ಟುಗಳಿಗಿಂತ ಬೇರೆ ಇರಬೇಕು. ಅದರಲ್ಲಿ ಇನ್ನಷ್ಟು ಸಂಗತಿಗಳು ಬೆರೆತು ಮೈಥಿಲಿ ಮೊದಲಾದ ಪ್ರತಿಗಳು ಹೊರಬಂದಿರಬೇಕು. ಹೀಗೆ ಅಧಿಕಾಧಿಕ ಹೊಸ ಸಂಗತಿಗಳು ಬೆರೆಯುತ್ತಾ ದೇವನಾಗರಿ ಆವೃತ್ತಿಗಳು ಹೊರಬಂದು ಮೂಲ ಭಾರತಕ್ಕೆ "ಶತ ಸಾಹಸ್ರ ಸಂಹಿತ" ಎಂಬ ನಾಮಾಭಿದಾನವಾಯಿತು. ಪ್ರತಿ ವರ್ಗದ ಆವೃತ್ತಿಗಳಲ್ಲಿ ಒಂದಿಲ್ಲೊಂದು ವೈಶಿಷ್ಟ್ಯವಿದೆ. ಉತ್ತರದ ಆವೃತ್ತಿಗಳಲ್ಲಿ ಇರದ, ಆದರೆ ಗ್ರಂಥ ಹಾಗೂ ತೆಲುಗು ಆವೃತ್ತಿಗಳಲ್ಲಿ ಕಂಡು ಬರುವ ವೈಶಿಷ್ಟ್ಯವೆಂದರೆ ಅವುಗಳಲ್ಲಿ ನೀತಿ ಪಾಠವನ್ನು ಹೇಳುವ ಒಂದು ಬಗೆ. ಉತ್ತರದ ಆವೃತ್ತಿಯಲ್ಲಿ ದುಷ್ಯಂತ–ಶಕುಂತಲೆ, ಯಯಾತಿ–ಶರ್ಮಿಷ್ಟೆ ಇವರ ವಿವಾಹಗಳಾಗಿಲ್ಲವೆಂಬುದು ಸ್ಪಷ್ಟವಾಗಿದೆ. ಆದರೆ ದಕ್ಷಿಣದ ಆವೃತ್ತಿಗಳಲ್ಲಿ ಈ ವಿವಾಹ ಸಮಾರಂಭಗಳ ಮತ್ತು ಬ್ರಾಹ್ಮಣರಿಗೆ ದೊರೆತ ದಕ್ಷಿಣೆಯ ಉಲ್ಲೇಖವು ಇದೆ. ಇಷ್ಟೇ ಅಲ್ಲದೆ ಸತ್ಯವತಿ ಮತ್ತು ಪರಾಶರನ ವಿವಾಹ ಸಮಾರಂಭದ ವಿಜೃಂಭಣೆಯ ಉಲ್ಲೇಖನವಿದೆ. ದೇವನಾಗರಿ ಲಿಪಿಯಲ್ಲಿದ್ದ ಶಾರದ ಇಲ್ಲವೇ K ವರ್ಗದ ಮತ್ತು ನೇಪಾಳೀ ಆವೃತ್ತಿಗಳಿರದ ಪ್ರಕರಣಗಳೆಂದರೆ "ಕಣಿಕನೀತಿ". ದುರ್ವಾಸನು ಸಹಸ್ರಾರು ಶಿಷ್ಯರೊಡನೆ ಕಾಡಿನಲ್ಲಿರುವ ಪಾಂಡವರಲ್ಲಿ ಹೋಗಿ ಭೋಜನವನ್ನು ಬೇಡುವುದು, ದ್ರೌಪದಿಯ ಕರೆ, ಹಾಗೆಯೇ ಕೃಷ್ಣನು ದ್ರೌಪದಿಗೆ ವಸ್ತ್ರಗಳನ್ನು ಪೂರೈಸಿದ್ದು, ಇದೇ ಬಗೆಯ ಇನ್ನೂ ಅನೇಕ ಚಿಕ್ಕಪುಟ್ಟ ಪ್ರಕರಣಗಳು ಇವೆ. ಎಲ್ಲಕ್ಕೂ ದೊಡ್ಡದಾದ ಮಹಾಭಾರತದ ಪ್ರತಿಯಲ್ಲಿ ಶತಸಹಸ್ರ ಶ್ಲೋಕಗಳು ಇರದೇ ೯೫೫೮೯ ಶ್ಲೋಕಗಳಿವೆ. ಆದರೆ ಸಂಶೋಧಿತ ಆವೃತ್ತಿಯಲ್ಲಿ ೮೯,೧೩೬ ಉಳಿದಿವೆ.

ಪ್ರತ್ಯಕ್ಷ ದೊರೆತ ಮಹಾಭಾರತದ ಕಟ್ಟುಗಳನ್ನಲ್ಲದೆ ಇತರ ಆಧಾರಗಳನ್ನು ಸಹ ಈ ಸಂಶೋಧಿತ ಆವೃತ್ತಿಗಾಗಿ ಬಳಸಲಾಗಿವೆ. ಅವುಗಳಲ್ಲದೆ ಮಹಾಭಾರತವನ್ನು ಸಂಕ್ಷೇಪಿಸಿ ಬರೆದ 'ಭಾರತಮಂಜರಿ' ಎಂಬ ಗ್ರಂಥವು ಒಂದಾಗಿದೆ. ಈ ಗ್ರಂಥವನ್ನು ಕ್ರಿ.ಶ. ೧೧೦೦–೧೨೦೦ರಲ್ಲಿ ಕ್ಷೇಮೇಂದ್ರನು ಬರೆದಿದ್ದಾನೆ. ಒಂದೊಂದು ಶ್ಲೋಕದ ಪರಿಶೀಲನೆ ಮಾಡುತ್ತಿರುವಾಗ ಸಂಕ್ಷೇಪಿಸಿದ ಗ್ರಂಥಗಳ ಉಪಯುಕ್ತತೆಯು ಮರ್ಯಾದಿತವಾಗಿರುತ್ತದೆ. ಇದರಲ್ಲಿ ಕೂಡ ಕಣಿಕನೀತಿಯ ಪ್ರಕರಣವಿಲ್ಲ. ಹಲವು ಶ್ಲೋಕಗಳು ಇರದಿದ್ದರೆ, ಇದರ ಮೇಲಿಂದ ಊಹೆಯು ಸಾಧ್ಯವಾಗುತ್ತಿರಲಿಲ್ಲ. ಆದರೆ ಯಾವ ಪ್ರಕರಣಗಳ ಮೇಲೆ ಟೀಕೆಯನ್ನು ಬರೆಯಲಾಗಿದೆಯೋ ಅಂತಹ ಇಡೀ ಪ್ರಕರಣವೇ ಇದರಲ್ಲಿಲ್ಲ. ಅಂದರೆ ಶಾರದ ಮೊದಲಾದ ಪ್ರತಿಗಳ ಪ್ರಾಚೀನತೆಯು ವ್ಯಕ್ತವಾಗುತ್ತದೆ (ದುರ್ದೈವದಿಂದ ಇದರ ಲೇಖನ ಕಾಲವು ತಿಳಿದಿಲ್ಲ)

ಆಂಧ್ರದಲ್ಲಿ ವಾದಿರಾಜನೆಂಬ ಕವಿಯು ಇದೇ ಕಾಲದಲ್ಲಿ ಒಂದು ಮೂಲ ಶ್ಲೋಕವನ್ನು ಸಹ ಬಿಡದೆ ಮಹಾಭಾರತವನ್ನು ತೆಲುಗು ಭಾಷೆಯಲ್ಲಿ ಬರೆದಿದ್ದಾನೆ. ಈ ಭಾಷಾಂತರಿತ

ಮಹಾಭಾರತದ ಪ್ರತಿಯನ್ನು ಕೂಡ ಪರಿಶೀಲಿಸಿ ವಾದಿರಾಜನು ಯಾವ ಮೂಲ ಆವೃತ್ತಿಯನ್ನು ಮುಂದಿಟ್ಟುಕೊಂಡು ಭಾಷಾಂತರವನ್ನು ಮಾಡಿರಬೇಕು ಎಂಬುದನ್ನು ಕಂಡು ಹಿಡಿಯುವ ಪ್ರಯತ್ನ ನಡೆಯಿತು.

ಸುಮಾರು ೧೬ನೆಯ ಶತಮಾನದಲ್ಲಿ ಮಹಾಭಾರತದ ಗ್ರಂಥವು 'ಜಾವಾ' ದೇಶವನ್ನು ತಲುಪಿತು. ಅಲ್ಲಿಯ ಪ್ರಾದೇಶಿಕ ಭಾಷೆಯಲ್ಲಿ ಇದನ್ನು ಅನುವಾದಿಸಲಾಯಿತು. ಅಲ್ಲಲ್ಲಿ ಮೂಲ ಸಂಸ್ಕೃತ ಶ್ಲೋಕಗಳ ಅರ್ಥದ ಅಪಭ್ರಂಶವಾದ ದಾಖಲೆಗಳು ಅದರಲ್ಲಿವೆ. ಈ ದಾಖಲೆಗಳು ಕೂಡ ತುಲನಾತ್ಮಕ ಪರಿಶೀಲನೆಗೆ ಉಪಯುಕ್ತವೆನಿಸಿವೆ. ಅನೇಕ ಸಂದರ್ಭಗಳಲ್ಲಿ ಪ್ರಾಚೀನ ಸಂಸ್ಕೃತ ಶಬ್ದಾರ್ಥವು ತಿಳಿಯದೇ ಅದಕ್ಕೆ ಪ್ರತಿಯಾಗಿ ಹೊಸ ಶಬ್ದಗಳನ್ನು ದೇವನಾಗರಿ ಲಿಪಿಯಲ್ಲಿಯ ಆವೃತ್ತಿಗಳಲ್ಲಿ ಬಳಸಲಾಗಿವೆ. ಜಾವಾ ದೇಶದ ಆವೃತ್ತಿಗಳಲ್ಲಿ ಪ್ರಾಚೀನ ಶಬ್ದಗಳೇ ದೊರೆತಿವೆ.

ಈ ಮೂರು ಗ್ರಂಥಗಳಲ್ಲದೆ ಮಹಾಭಾರತದ ಮೇಲೆ ಬರೆಯಲಾದ ಟೀಕಾಕಾರರ ಟೀಕೆಗಳ ಉಪಯೋಗವು ಸಾಕಷ್ಟು ಆಗಿದೆ. ಆ ಟೀಕಾಕಾರರೆಂದರೆ ದೇವಬೋಧ, ವಿಮಲಬೋಧ, ಸರ್ವಜ್ಞನಾರಾಯಣ, ಅರ್ಜುನಮಿತ್ರ, ನೀಲಕಂಠ.

ದೇವಬೋಧನ ಟೀಕೆಯು 'ಜ್ಞಾನದೀಪಿಕಾ' ಎಂಬ ಹೆಸರಿನಲ್ಲಿದೆ. ಕ್ರಿ.ಶ. ೧೦೦೦–೧೧೦೦ ಸುಮಾರಿಗೆ ದೇವಬೋಧ ಇದ್ದಿರಬಹುದು. ಇವನು ಎಲ್ಲರಲ್ಲಿಯೂ ಪ್ರಥಮ ಟೀಕಾಕಾರ; ಪ್ರಖರ ಪಂಡಿತ. ಆದ್ದರಿಂದ ಆತನ ಈ ಟೀಕಾ ಸಂಗ್ರಹವು ಬಹಳ ಉಪಯುಕ್ತವಿದೆ. 'ವಿಮಲಬೋಧನ' ಟೀಕೆಯು 'ದುರ್ಘಟಾರ್ಥ' ಪ್ರಕಾಶಿನಿ ಇಲ್ಲವೇ 'ವಿಷಮಶ್ಲೋಕಿ' ಎಂಬ ಹೆಸರಿನಿಂದ ಜ್ಞಾತವಿದೆ. ಇದರ ನಿಶ್ಚಿತ ಕಾಲವು ಗೊತ್ತಾಗಿಲ್ಲ. ಸರ್ವಜ್ಞನಾರಾಯಣನ ಟೀಕೆಯು 'ಭಾರತಾರ್ಥ ಪ್ರಕಾಶ' ಎಂಬ ಹೆಸರಿನಲ್ಲಿದೆ. ಅದು ಕ್ರಿ.ಶ. ೧೧೦೦ ಸಮಕಾಲದ್ದು, ಅರ್ಜುನ ಮಿತ್ರನ ಟೀಕೆಯ ಹೆಸರು "ಭಾರತಾರ್ಥಪ್ರದೀಪಿಕಾ". ಇದರ ಕಾಲವು ಸುಮಾರು ಕ್ರಿ.ಶ. ೧೪೦೦. ನೀಲಕಂಠನ ಟೀಕೆಯು "ಭಾರತ ಭಾವದೀಪ", ಕಾಲ ಕ್ರಿ.ಶ. ೧೭೦೦. ಈತನಿಂದ ವಿಪುಲ ಮಾಹಿತಿಯು ದೊರೆಯುತ್ತದೆ. ನೀಲಕಂಠನು ಗೋದಾವರಿಯ ತೀರದಲ್ಲಿಯ ಕೊಪರಗಾವದ ನಿವಾಸಿ. ಜಾತಿಯಿಂದ ಬ್ರಾಹ್ಮಣ. ತಂದೆ ಹೆಸರು ಗೋವಿಂದ ಸೂರಿ. ತಾಯಿಯ ಹೆಸರು ಫುಲ್ಲಾಂಬಿಕೆ. ದೇವಬೋಧನ ಟೀಕೆಯಲ್ಲಿ ಸುಮಾರು ಪ್ರಕರಣಗಳ ಸಮಾವೇಶವಿಲ್ಲ. ಅವು ಶಾರದ ಆವೃತ್ತಿಯಲ್ಲು ಇಲ್ಲ. ಆದ್ದರಿಂದ ದೇವಬೋಧನ ಟೀಕೆಯು ಮತ್ತು ಶಾರದ ಆವೃತ್ತಿಯು ಒಂದಕ್ಕೊಂದು ಪೂರಕವಾಗಿವೆ. ಇತ್ತೀಚಿನ ಪ್ರತಿಗಳಲ್ಲಿ ಕಂಡುಬರುವ ನೂತನ ಶಬ್ದಗಳು ಅದರಲ್ಲಿರದೆ ಶಾರದ ಆವೃತ್ತಿಯಲ್ಲಿಯ ಪ್ರಾಚೀನ ಶಬ್ದಗಳಿವೆ. ಮತ್ತು ಅವುಗಳ ಅರ್ಥವನ್ನು ಯಥಾರ್ಥವಾಗಿ ಮಾಡಲಾಗಿದೆ. ಇದಲ್ಲದೆ ಇನ್ನೂ ಅನೇಕ ಟೀಕಾಕಾರರು ಆಗಿ ಹೋಗಿದ್ದಾರೆ.

ಮಹಾಭಾರತದ ಕಟ್ಟುಗಳು ಟೀಕಾಕಾರರು ಮೊದಲಾದ ಮೇಲೆ ಕಾಣಿಸಿದ ಸಾಧನೆಗಳಲ್ಲದೆ ದೊರಕಿದ ಮಹಾಭಾರತದಲ್ಲಿಯ ಶ್ಲೋಕಗಳನ್ನು ಇಲ್ಲವೆ, ಕಥೆಗಳನ್ನು ಸಹ

ಬಳಸಲಾಗಿದೆ. ಉದಾ : ಭೀಷ್ಮಪರ್ವವನ್ನು ಸಂಗ್ರಹಿಸುವಾಗ ಪ್ರೊ॥ ಬೆಲವಲ್‌ಕರ್‌ರವರು ಸದ್ಯ ನಮಗೆ ಜ್ಞಾತವಿದ್ದ ಗೀತೆಯನ್ನೆ ಶಂಕರಾಚಾರ್ಯರು ಭಾಷ್ಯಕ್ಕಾಗಿ ಬಳಸಿದ್ದಾರೆ ಎಂದು ತೋರಿಸಿಕೊಟ್ಟಿದ್ದಾರೆ.

ಈ ರೀತಿ ಸಂಪಾದಿತವಾದ ಆವೃತ್ತಿಯು ಅತಿ ಪ್ರಾಚೀನವಾದ ದೊರೆತ ಜ್ಞಾತ ಹಸ್ತಲಿಖಿತಗಳನ್ನು ಪರಿಶೀಲಿಸಿ ತಯಾರಿಸಲ್ಪಟ್ಟಿದೆ ಎಂದು ಹೇಳಬಹುದು. ಈ ಬಗೆಯ ಹಸ್ತಲಿಖಿತವು ಇಸವಿ ಸನ್ ೧೦೦೦ದ್ದೂ ಇರಬಹುದು. ಮಹಾಭಾರತದ ಕಥೆಯು ಕ್ರಿ. ಪೂರ್ವ ೧೦೦೦ ವರ್ಷಗಳ ಕಾಲದ್ದು ಎಂದು ತಿಳಿದರೆ, ಘಟನೆಗಳು ಜರುಗಿಹೋದ ೨೦೦೦ ವರ್ಷಗಳ ಕಾಲದ ನಂತರ ಈ ಹಸ್ತಲಿಖಿತವಾಗಿದೆ. ಈಗ ನಮ್ಮ ಮುಂದೆ ಇದ್ದ ಆವೃತ್ತಿಯಲ್ಲಿ ಪ್ರಕಟವಾದ ಪ್ರಕ್ಷಿಪ್ತಭಾಗಗಳು ಕಂಡು ಬರುತ್ತಿದ್ದರೂ ಆ ಪ್ರಕ್ಷಿಪ್ತ ಭಾಗವು ಎಲ್ಲಾ ಪ್ರಾಚೀನ ಆವೃತ್ತಿಗಳಲ್ಲಿ, ಅದರಲ್ಲಿಯೂ ಪ್ರಾಮುಖ್ಯವಾಗಿ ಶಾರದ ಮತ್ತು ಮಲಯಾಳಿ ಈ ಎರಡು ವಿರುದ್ಧ ದಿಕ್ಕಿನ ಆವೃತ್ತಿಗಳಲ್ಲಿ ಕಂಡುಬರುವದರಿಂದ ಆ ಭಾಗವನ್ನು ಹಾಗೆಯೇ ಇಡಲಾಗಿದೆ. ಸಂಪಾದಕರೇ ಈ ರೀತಿ ಅಲ್ಲಲ್ಲಿ ಉಲ್ಲೇಖ ಮಾಡಿದ್ದಾರೆ. ಆದರೆ ಅವರ ಕಣ್ಣ ಮುಂದೆ ಇದ್ದ ಆಗಿನ ಮುಖ್ಯ ಕಾರ್ಯವೆಂದರೆ ಎಲ್ಲಕ್ಕೂ ಪ್ರಾಚೀನ ಮಹಾಭಾರತದ ಕಟ್ಟು ಯಾವುದು ಎಂಬುದನ್ನು ಕಂಡುಹಿಡಿಯುವುದು. ಆದ್ದರಿಂದ ಅವುಗಳಲ್ಲಿಯ ಅಂತರ್ಗತ ವಿರೋಧಗಳನ್ನು ಹುಡುಕುವುದರತ್ತ ಅವರ ಗಮನವು ಇರಲಿಕ್ಕಿಲ್ಲ. ತೀರಾ ಪ್ರಾಚೀನ ಸೌತವಾಙ್ಮಯವು ಬ್ರಾಹ್ಮಣರ ಕೈ ಸೇರಿದ್ದರಿಂದ ಅವರು ಭೃಗುಕಥೆಯಂತಹ ಸಮಗ್ರ ಅಧ್ಯಾಯಗಳನ್ನೇ ಮಹಾಭಾರತದಲ್ಲಿ ತೂರಿಸಿದ್ದಾರೆ. ಕೃಷ್ಣನು ಆದಿದೇವತೆ ಎಂದು ತಿಳಿಯಲ್ಪಡುವ ಭಾಗವತ ಧರ್ಮವು ಪ್ರಚಾರದಲ್ಲಿ ಬಂದ ನಂತರ ಕೃಷ್ಣನ ಅತಿಮಾನವತೆಯ, ಅವನ ದೇವತ್ವದ ಕಥೆಗಳು ಕೃಷ್ಣನನ್ನು ಸಿಕ್ಕಾಪಟ್ಟೆ ಹೊಗಳುವ ಭಾಗವು ಅದರಲ್ಲಿ ಬೆರೆತಿದೆ. ಸದ್ಯ ಕಂಡುಬರುವ ಮಹಾಭಾರತದ ಕಟ್ಟಿನಲ್ಲಿಯೇ ಎರಡು ವಿಧದ ಪ್ರಾರಂಭಗಳು ತೋರುತ್ತವೆ. ಇಂತಹ ಭೇದಗಳನ್ನು ಶ್ರೀ ಸುಕಟನ್‌ಕರ್‌ರವರು ಹಾಗೆಯೇ ಇನ್ನಿತರ ಸಂಪಾದಕರು ಅಲ್ಲಲ್ಲಿ ತೋರಿಸಿಕೊಟ್ಟಿದ್ದಾರೆ. ಅವನ್ನೆಲ್ಲಾ ಲಕ್ಷ್ಯದಲ್ಲಿಟ್ಟುಕೊಂಡೇ ನಾನು ಬಹುತಾಂಶವಾಗಿ ಕೆಲವು ಭಾಗವು ಪ್ರಕ್ಷಿಪ್ತವಾದುದ್ದು, ಕೆಲವು ವಿಶಿಷ್ಟ ಭಾಗವು ಅನಂತರ ತೂರಿಸಿದ್ದು ಎಂದು ಹೇಳಿದ್ದೇನೆ. ಒಂದೆರಡು ಸ್ಥಳಗಳಲ್ಲಿ ಮಾತ್ರ ನನಗೆ ಎನಿಸಿದ್ದನ್ನು ನಾನು ಹೇಳಿದ್ದೇನೆ.

ಈ ಸಂಶೋಧಿತ ಆವೃತ್ತಿ ಎಂದರೆ ಸಟೀಕಾವೃತ್ತಿಯಲ್ಲ. ಅದು ಯಾವ ತರಹದ್ದು, ಅದರ ಮರ್ಯಾದೆ ಏನು? ಇವೆಲ್ಲ ಸಂಗತಿಗಳು ಈಗ ತಿಳಿದಿರಲಿಕ್ಕೆ ಸಾಕು. ಈ ಸಂಶೋಧಿತ ಆವೃತ್ತಿಯು ಪ್ರಾಪ್ತವಾಗಿದೆ. ಅದನ್ನು ಇನ್ನೂ ಆಳವಾಗಿ ಅಭ್ಯಸಿಸಿ. ಅಂತರ್ಗತವಾಗಿ ಪರಿಶೀಲಿಸಿ ಕಣ್ಣಿಗೆ ನಿಶ್ಚಿತವಾಗಿ ಕಂಡುಬರುವ ಪ್ರಕ್ಷಿಪ್ತ ಭಾಗಗಳನ್ನು ತೆಗೆದುಹಾಕಿದರೆ ಇನ್ನೊಂದು ಸಂಶೋಧಿತ ಆವೃತ್ತಿಯು ಲಬ್ಧವಾಗುವುದು. ಪುನಃ ಸಂಶೋಧನೆ ನಡೆಯಿಸಬಹುದು. ಕ್ರಮಕ್ರಮವಾಗಿ ಒಂದೊಂದು ಭಾಗವನ್ನು ಆಯ್ದುಕೊಂಡು ಉದ್ದೇಶಿತ ರೀತಿಯಲ್ಲಿ ಪ್ರಪಂಚದಲ್ಲಿಯ ಮಹಾಭಾರತದ ಎಲ್ಲಾ ಅನ್ವೇಷಕರ ಸಹಕಾರದಿಂದ ಈ ಸಂಶೋಧನೆಯು

ನಡೆಯಬೇಕು. ಇಂತಹ ಕಾರ್ಯವು ಕೇವಲ ಸೌಂದರ್ಯ ಬೋಧನೆಗಾಗಿ ಇರಲಾರದು. ಆದರೆ ಈ ಕಾರ್ಯದ ಫಲವಾಗಿ ಸೌಂದರ್ಯ ಶೋಧನೆಯು, ಆನಂದ ಬೋಧವು ದೊರೆಯುವುದು. ಈ ಕಾರ್ಯವೆಂದರೆ ವಾಙ್ಮಯದ ಶೋಧನೆ ಮಾತ್ರವಲ್ಲ. ನಮ್ಮ ಸಂಸ್ಕೃತಿಯ ಮೂಲವನ್ನು ಕಂಡುಹಿಡಿಯುವ ಪ್ರಯತ್ನ. ಪೂರ್ವದಲ್ಲಿ ಯಾವ ರೀತಿ ಇತ್ತು. ಅದರಲ್ಲಿ ಅನಂತರ ಅಡಕವಾದುದೇನು? ಯಾವ ರೀತಿ ಅಡಕವಾಯಿತು? ಇದೆಲ್ಲವು ಮಹತ್ವವುಳ್ಳದ್ದು. ಈ ಶೋಧವನ್ನು ಮುಂದುವರಿಸಿದರೆ ಇದರೊಡನೆಯೇ ಸಂಸ್ಕೃತ ಚರಿತ್ರೆಯ ಅರಿವಾಗುತ್ತದೆ. ಅರಿವು ಉಂಟಾಗಲಿಕ್ಕೆ ಸಹಾಯಕಾರಿ ಅಗುತ್ತದೆ. ಮಹಾಭಾರತದಿಂದ ನಮ್ಮ ಪ್ರಾಚೀನ ಕುಟುಂಬ ಸಂಸ್ಥೆ ರಾಜಕೀಯ ನೆಲೆಗಟ್ಟು, ಮತ್ತು ಧಾರ್ಮಿಕ ವ್ಯವಹಾರಗಳು ಯಾವ ವಿಧದಲ್ಲಿದ್ದವು ಎಂಬುದು ತೋರುವುದು, ನಮ್ಮ ಸಾಂಸ್ಕೃತಿಕ ಚರಿತ್ರೆಯಲ್ಲಿಯ ಒಂದು ಘಟ್ಟವು ಜ್ಞಾತವಾಗುವುದು. ಇದರೊಡನೆಯೇ ಹಲವು ಪ್ರಶ್ನೆಗಳು ತಲೆದೋರಬಹುದು. 'ಶಾರದ' ಮಹಾಭಾರತ ಕಟ್ಟು ಮತ್ತು ದಕ್ಷಿಣದಲ್ಲಿಯ ಮಲಯಾಳಿ ಭಾಷೆಯ ಮಹಾಭಾರತದ ಕಟ್ಟು ಇವೆರಡರಲ್ಲಿ ತುಂಬಾ ಸಾಮ್ಯವಿದೆ ಎಂದು ಶ್ರೀ ಸುಕಟನ್ ಕರ್ ಇವರು ಬರೆದಿದ್ದಾರೆ. ಅದಕ್ಕೆ ಕೆಳಗಿನ ಎರಡು ಕಾರಣಗಳು ಸಂಭವಿಸುತ್ತದೆ.

೧. ಪೂರ್ವ ಕಾಲದಲ್ಲಿ ಮಹಾಭಾರತದ ಕಥೆಯು ಯಾವಾಗ್ಗೆ ಭಾರತದ ದಕ್ಷಿಣ ಭಾಗವನ್ನು ಸೇರಿತೋ ಆಗ್ಗೆ ಉತ್ತರ ಭಾರತದಲ್ಲಿ ಪ್ರಚಾರದಲ್ಲಿದ್ದ ಆವೃತ್ತಿಯಲ್ಲಿ ಮತ್ತು ದಕ್ಷಿಣ ಭಾರತಕ್ಕೆ ತಲುಪಿದ ಆವೃತ್ತಿಯಲ್ಲಿ ವ್ಯತ್ಯಾಸವಿರಲಿಕ್ಕಿಲ್ಲ. ಮಲಯಾಳಿ ಭಾಷೆಯ ಕೇರಳ ಪ್ರಾಂತವು ಒಂದು ಕೊನೆಯಲ್ಲಿದೆ. ಅದರಲ್ಲಿಯ ಆವೃತ್ತಿಯಲ್ಲಿ ಬೆರಕೆಯಾಗಲಿಲ್ಲ. ಆದರೆ ಆಂಧ್ರಪ್ರದೇಶದ ಆವೃತ್ತಿಯಲ್ಲಿ ಇತರ ಆವೃತ್ತಿಗಳಲ್ಲಿ ಆದಂತೆಯೇ ಅನೇಕ ಸಂಗತಿಗಳು ಅನಂತರ ಅಡಕವಾಗುತ್ತಾ ಹೋದವು.

೨. ಈ ಕಾರಣ ಮಾತ್ರವಲ್ಲದೇ ಇನ್ನೊಂದು ಸಂಗತಿಯು ಸಂಭವನೀಯವಿದೆ. ಪಶ್ಚಿಮ ದಂಡೆಯಿಂದ ದಕ್ಷಿಣದತ್ತ ಸಾಗಿದ ಆರ್ಯಭಾಷಿಕ ಬ್ರಾಹ್ಮಣರು ಪಂಚನದಿಯ ಪ್ರದೇಶದಲ್ಲಿಯ (ಪಂಜಾಬ್ ಮತ್ತು ಕಾಶ್ಮೀರದಲ್ಲಿಯವರು ಇರಬಹುದು) ಅವರು ತಮ್ಮೊಡನೆ ಕಾಶ್ಮೀರದಲ್ಲಿಯ ಮಹಾಭಾರತದ ಕಟ್ಟನ್ನು ತಂದಿರಬಹುದು. ಈ ರೀತಿ ಭಾರತೀಯ ಜನಾಂಗಗಳ ಅಲೆದಾಟದ ಬಗೆಗೂ ಈ ಸಂಶೋಧನೆಯಿಂದ ಹೊಸ ಮಾಹಿತಿಯು ದೊರಕುವ ಸಂಭವವಿದೆ. ಇಷ್ಟೊಂದು ವಿದ್ವಾಂಸರು ಐವತ್ತು ವರ್ಷಗಳಿಂದ ಅವಿರತ ಶ್ರಮಪಟ್ಟಿದ್ದರಿಂದ ಸಂಶೋಧನೆಯ ಒಂದು ಅತಿ ಮೂಲ್ಯದ ಸಾಧನವು ನಮಗೆ ದೊರಕಿದೆ.

1
ಕೊನೆಯ ಪ್ರಯತ್ನ

ಸಾಮಾನ್ಯವಾಗಿ ಮಹಾಭಾರತೀಯ ಯುದ್ಧದ ಪರ್ವಗಳು ಭೀಷ್ಮ ಪರ್ವದಿಂದ ಪ್ರಾರಂಭವಾದವು ಎಂದು ತಿಳಿಯುತ್ತಾರೆ. ಆದರೆ ಈ ಪರ್ವವನ್ನು ಓದಿದಂತೆ ಅದು ಯುದ್ಧದ ಪ್ರಾರಂಭದ ಪರ್ವವಾಗಿರದೆ ಯುದ್ಧವನ್ನು ತಡೆಯುವ ಕೊನೆಯ ಪ್ರಯತ್ನವಿತ್ತೆಂದು ಭಾಸವಾಗುತ್ತದೆ.

ಈ ಪ್ರಯತ್ನಮಾಡುವ ವ್ಯಕ್ತಿಯೆಂದರೆ ಭೀಷ್ಮ. ಭೀಷ್ಮನ ಇಡೀ ಜೀವನ ನಿಷ್ಫಲವಾಗಿ ತ್ಯಾಗ ಮಾಡುವುದರಲ್ಲಿಯೇ ಸಂದಿಹೋಯಿತು. ಆತನ ಜೀವನದಲ್ಲಿಯ ಅಂತಿಮಘಟ್ಟವಾಗಿದ್ದ ಈ ಕೊನೆಯ ತ್ಯಾಗವು ಜೀವನದಲ್ಲಿಯ ಇತರ ತ್ಯಾಗಗಳಂತೆ ವಿಫಲವಾಯಿತು. ತನ್ನ ಹಕ್ಕಿನ ರಾಜ್ಯವನ್ನು ತ್ಯಜಿಸಿದ ಭೀಷ್ಮನು ತೀರ ವೃದ್ಧಾಪ್ಯದಲ್ಲಿ ಕೌರವರ ಸೇನಾಧಿಪತಿ ಪದವನ್ನು ವಹಿಸಿದುದು ಮನಸ್ಸಿಗೆ ಹಿಡಿಸುವುದಿಲ್ಲ. ಹೀಗಿದ್ದರೂ ಭೀಷ್ಮನ ಇಡೀ ಜೀವನವನ್ನು ಪರಿಶೀಲಿಸಿದ ನಂತರ ಆತನು ಮಾಡಿದ ಈ ಕೊನೆಯ ಪ್ರಯತ್ನ ಸುಸಂಬದ್ಧವೂ ಅನಿವಾರ್ಯವೂ ಆಗಿತ್ತೆಂದು ಅನಿಸುತ್ತದೆ.

ಮಾನವೀ ಜೀವನ ಮತ್ತು ಮಾನವೀ ಪ್ರಯತ್ನಗಳು "ನಿಷ್ಫಲ" ಎಂಬ ಪಾಠವನ್ನು ಎತ್ತಿ ತೋರಿಸುವುದಕ್ಕಾಗಿಯೇ ಮಹಾಭಾರತ ಹುಟ್ಟಿರುವುದೋ? ಎಂಬ ಸಂದೇಹ ತಲೆದೋರುತ್ತದೆ. ಮಾನವನ ಪ್ರಯತ್ನಗಳು, ಆಕಾಂಕ್ಷೆಗಳು, ವೈರತ್ವ, ಮಿತ್ರತ್ವ, ಇವೆಲ್ಲವು ಬೇಸಿಗೆಯ ಬಿರುಗಾಳಿಯಲ್ಲಿ ಹಾರಿಹೋಗುವ ತರಗೆಲೆಯಂತೆ ಕ್ಷುದ್ರವಾಗಿ ಭಾಸವಾದರೂ ಅಂಥ ಪ್ರಯತ್ನಪಟ್ಟ ವ್ಯಕ್ತಿಗಳು, ಆಕಾಂಕ್ಷೆ ಹೊಂದಿದ ವ್ಯಕ್ತಿಗಳು ನಮ್ಮ ಹೃದಯದಾಳದಲ್ಲಿ ಸಂತತ, ಸಂವೇದನೆಯನ್ನುಂಟುಮಾಡುತ್ತಾರೆ.

ಪ್ರತಿಯೊಂದು ವ್ಯಕ್ತಿ ಒಂದು ವಿಶೇಷ ಗುರಿಯತ್ತ ಅಸಹಾಯನಾಗಿ ಸಾಗಿರುತ್ತಾನೆ. ಮಹಾಭಾರತವನ್ನು ಓದುತ್ತಿದ್ದಂತೆ ಇಂಥ ವ್ಯಕ್ತಿಯ ವ್ಯಥೆಯು ನಮ್ಮ ಸ್ವಂತದ ವ್ಯಥೆಯಂತೆ ಭಾಸವಾಗುತ್ತದೆ. ಈ ವ್ಯಕ್ತಿಯ ಮೂಲಕ ಇಡಿ ಮಾನವತೆಯ ದುಃಖವೇ ನಮ್ಮ ಮನಸ್ಸನ್ನು ಕೊರೆಯುತ್ತದೆ.

ಭೀಷ್ಮನ ಜೀವನ ಇದೇ ತರಹದ್ದಾಗಿತ್ತು. ವಿರೋಧಗಳಿಂದ ತುಂಬಿತ್ತು ಅಥವಾ ಹೊರನೋಟಕ್ಕೆ ಹಾಗೆ ಕಂಡುಬರುತ್ತಿತ್ತು. ಭೀಷ್ಮನ ಕೃತಿಯಲ್ಲಿ ಮತ್ತು ವಿಚಾರಗಳಲ್ಲಿ ಮಾತ್ರ

ಸುಸಂಗತಿ ಇತ್ತು. ಒಂದು ಶಾಪಿತ ಜೀವವೆಂದು ಭೀಷ್ಮನು ಜನ್ಮ ತಾಳಿದ್ದನು. ಗಂಗೆಯು, ಆತನ ಹಾಗೆ ಜನ್ಮತಾಳಿದ ಇನ್ನಿತರರ ಬಿಡುಗಡೆ ಮಾಡಿದ್ದಳು. ಭೀಷ್ಮನು ಮಾತ್ರ ಈ ಜಗತ್ತಿನಲ್ಲಿ ಸಿಕ್ಕಿಬಿದ್ದನು.

ಗಂಗೆಗೆ ಕೆಲವೊಂದು ಕಾರಣದಿಂದ ಮರ್ತ್ಯಲೋಕಕ್ಕೆ ಬರುವ ಪ್ರಸಂಗ ಬಂತು. ಅದೇ ಸಮಯಕ್ಕೆ ಅಷ್ಟವಸುಗಳಿಗೆ ವಸಿಷ್ಠರ ಶಾಪದ ಮೂಲಕ ಮರ್ತ್ಯಲೋಕದಲ್ಲಿ ಜನ್ಮತಾಳಬೇಕಾಯಿತು. ಅಷ್ಟವಸುಗಳು ಗಂಗೆಯನ್ನು ಈ ರೀತಿ ಪ್ರಾರ್ಥಿಸಿದರು : "ಗಂಗೆಯೇ! ನಾವು ನಿನ್ನ ಹೊಟ್ಟೆಯಲ್ಲಿ ಜನ್ಮ ತಾಳುವೆವು ; ಜನಿಸಿದ ಕ್ಷಣವೇ ನೀನು ನಮ್ಮನ್ನು ಕೊಂದು, ನಮ್ಮ ಬಿಡುಗಡೆ ಮಾಡು". ಗಂಗೆಯು ಅವರಿಗೆ ಹಾಗೆಯೇ ವಚನವಿತ್ತಳು, ಅನಂತರ ಆ ಅಷ್ಟವಸುಗಳು ಪೃಥ್ವಿಯತ್ತ ಸಾಗಿದರು. ಗಂಗೆಯು ಸ್ವರ್ಗಜೀವಿಯಾದ್ದರಿಂದ ಚಿರಯೌವನೆಯಾಗಿದ್ದಳು. ಆಕೆಯ ವಯಸ್ಸಿನ ವಿಚಾರಮಾಡುವ ಅಗತ್ಯವಿರಲಿಲ್ಲ. ಆಕೆ ಸ್ವರ್ಗಜೀವಿಯಾದ್ದರಿಂದ ಆಕೆಗೆ ಭೂ ಲೋಕದ ನಿಯಮಗಳ ಬಂಧನವಿರಲಿಲ್ಲ. ಅವಳು ಭೂಲೋಕಕ್ಕೆ ಬಂದು ನೇರವಾಗಿ ಪ್ರತೀಪ ರಾಜನ ತೊಡೆಯ ಮೇಲೆ ಹೋಗಿ ಕುಳಿತಳು. "ನನ್ನೊಡನೆ ವಿವಾಹ ಮಾಡಿಕೊ!" ಎಂದು ರಾಜನಿಗೆ ಹೇಳತೊಡಗಿದಳು. ರಾಜನು ನುಡಿದನು : ಸ್ತ್ರೀಯೇ ! ಪತ್ನಿಯಾಗುವವಳು, ಎಡತೊಡೆಯ ಮೇಲೆ ಕುಳಿತುಕೊಳ್ಳಬೇಕು. ನೀನು ಬಲ ತೊಡೆಯ ಮೇಲೆ ಕುಳಿತಿರುವೆ. ಅದು ಮಗನ ಅಥವಾ ಸೊಸೆಯ ಸ್ಥಾನ. ಆದ್ದರಿಂದ ಈಗ ನನಗೆ ಪುತ್ರನಾಗಬೇಕು. ಆತನಿಗೆ ನಿನ್ನೊಡನೆ ವಿವಾಹವಾಗೆಂದು ಹೇಳುವೆನು." ಗಂಗೆ ಅದಕ್ಕೆ ಒಪ್ಪಿದಳು.

ಮುಂದೆ ಪ್ರತೀಪರಾಜನಿಗೆ ಶಂತನು ಹುಟ್ಟಿದನು. ಸಕಾಲದಲ್ಲಿ ಪ್ರತೀಪ ರಾಜನು ಶಂತನುವಿಗೆ ರಾಜ್ಯವನ್ನಿತ್ತು ಕಾಡಿಗೆ ಹೊರಟುಹೋದನು. ಶಂತನು ರಾಜನು ಬೇಟೆಯಾಡುವುದರಲ್ಲಿ ಸದಾಕಾಲ ಮಗ್ನನಾಗಿರುತ್ತಿದ್ದನು. ಕುರುಕುಲದಲ್ಲಿ ಹಾಗೆಯೇ ಇತರ ರಾಜಮನೆತನಗಳಲ್ಲಿ ಸಹ ಬೇಟೆಯಾಡುವುದು ಕ್ಷತ್ರಿಯ ಧರ್ಮವೆಂಬ ಭಾವನೆಯಿತ್ತು.

ಒಮ್ಮೆ ಶಂತನು ಗಂಗಾತೀರದಲ್ಲಿ ರೂಪಸಂಪನ್ನೆಯಾದ ನಾರಿಯನ್ನು ಕಂಡು ಆಕೆಗೆ ಮರುಳಾದನು. ಆ ನಾರಿಯೆಂದರೆ ಗಂಗೆ, ಆಕೆ ಶಂತನುವನ್ನು ವಿವಾಹವಾಗಲು ಸಮ್ಮತಿಸಿದಳು. ಆದರೆ ಊರ್ವಶಿ ಮೊದಲಾದ ಸುರನಾರಿಯರಂತೆ ಕೆಲವು ವಿಚಿತ್ರ ಕರಾರುಗಳನ್ನು ಮಂಡಿಸಿದಳು. ಗಂಗೆ ಶಂತನುವಿಗೆ ಹೇಳುತ್ತಾಳೆ, "ದೊರೆಯೇ ! ನಾನು ಮನಸ್ಸಿಗೆ ಬಂದಂತೆ ಮಾಡುವೆನು. ನಿನಗೆ ಅಯೋಗ್ಯವೆನಿಸುವಂತಹದನ್ನು ಸಹ ನಾನು ಮಾಡಬಹುದು. ಆದರೆ ನೀನು ಅದಕ್ಕೆ ಆತಂಕ ಮಾಡಕೂಡದು ಅಥವಾ ನಿಂದಿಸಕೂಡದು. ಯಾವ ದಿವಸ ನೀನು ಹಾಗೆ ಮಾಡುವಿಯೋ ಅಂದೇ ನಾನು ನಿನ್ನನ್ನು ಬಿಟ್ಟು ತೊಲಗುವೆನು." ಕಾಮಾಸಕ್ತನಾದ ಶಂತನುವು ಈ ಕರಾರುಗಳಿಗೆ ಒಪ್ಪಿಕೊಂಡನು. ಗಂಗೆ ರಾಜನ ಬಳಿ ಉಳಿದು ಆತನಿಗೆ ಎಲ್ಲ ಸುಖಗಳನ್ನು ನೀಡಿದಳೆಂದು ಮಹಾಭಾರತ ಹೇಳುತ್ತದೆ. ಮಗು ಜನಿಸಿದ ಕ್ಷಣವೇ ಅವಳು ಅದನ್ನು ಗಂಗೆಯಲ್ಲಿ ಮುಳುಗಿಸುವಳು. ಶಂತನು ರಾಜನು

ತೀರ ಅಧೀನನಾದ್ದರಿಂದ ಅವನು ಆಕೆಗೆ ಏನನ್ನೂ ಹೇಳಲಿಲ್ಲ. ಆದರೆ ಗಂಗೆ ಎಂಟನೆಯ ಮಗನನ್ನು ಮುಳುಗಿಸಲು ಸಿದ್ಧಳಾದಾಗ ಅವನಿಗೆ ಸುಮ್ಮನಿರಲಾಗಲಿಲ್ಲ. ಗಂಗೆಯನ್ನು "ಈ ಮಗುವನ್ನಾದರು ಕೊಲ್ಲಬೇಡ ! ಎಷ್ಟು ಘೋರಕೃತ್ಯ ಮಾಡುವವಳಾಗಿದ್ದೀಯೇ ನೀನು?" ಎಂದು ಅಂದನು. ಗಂಗೆಗೆ ಅಷ್ಟೇ ನೆಪ ಬೇಕಾಗಿತ್ತು. "ಈ ಪುತ್ರನನ್ನು ಜೀವಂತ ಬಿಡುತ್ತೇನೆ. ಆದರೆ ನಮ್ಮ ಕರಾರಿನಂತೆ ನಾನು ನಿನ್ನನ್ನು ಬಿಟ್ಟು ತೊಲಗುವೆನು" ಎಂದು ಹೇಳಿ ಗಂಗೆ ಮಗುವನ್ನು ಎತ್ತಿಕೊಂಡು ಮಾಯವಾದಳು. ಮಗವೂ ಇಲ್ಲ ಹೆಂಡತಿಯೂ ಇಲ್ಲವಾಗಲು, ಶಂತನುವು ಮೊದಲಿನಂತೆಯೇ ಕಾಡಿನಲ್ಲಿ ಬೇಟೆಯಾಡುತ್ತ ಅಲೆದಾಡಹತ್ತಿದನು.

ಒಂದು ದಿನ ಗಂಗೆಯು ಸರ್ವಶಾಸ್ತ್ರಸಂಪನ್ನನಾದ ಪುತ್ರನನ್ನು ಶಂತನುವಿಗೆ ಒಪ್ಪಿಸಿದಳು. ಆ ಪುತ್ರನನ್ನು ರಾಜಧಾನಿಗೆ ಕರೆದುಕೊಂಡು ಬಂದು ಶಂತನುವು ಆತನಿಗೆ ಯುವರಾಜ್ಯಾಭಿಷೇಕ ಮಾಡಿಸಿದನು. ಪುತ್ರನಾದ ದೇವವ್ರತನು ತನ್ನ ಸದ್ಗುಣಗಳಿಂದ ಎಲ್ಲರಿಗೂ ಬೇಕಾದವನಾದನು. ಈ ರೀತಿ ಸಾವಿನಿಂದ ಬಿಡುಗಡೆ ಹೊಂದದೆ ಈ ಜೀವ ಇಲ್ಲಿಯೇ ಸಿಕ್ಕಿಬಿದ್ದಿತು.

ನಾಲ್ಕು ವರುಷಗಳು ಉರುಳಿದವು. ಶಂತನುವಿನ ಬೇಟೆಯ ಹವ್ಯಾಸ ಶಾಶ್ವತವಾಗಿತ್ತು. ಈ ಪ್ರಾಯದಲ್ಲಿ ಆತನು ಇನ್ನೋರ್ವ ಸುಂದರ ನಾರಿಗೆ ಬಲಿಯಾದನು. ಅದರೆ ಈ ಸಲ ಆ ನಾರಿಯ ಬದಲು ಆಕೆಯ ತಂದೆ ವಿವಾಹಕ್ಕಾಗಿ ಕೆಲ ಕರಾರುಗಳನ್ನು ಹಾಕಿದನು. ಈ ಕರಾರುಗಳು ಸಾಮಾನ್ಯವಿದ್ದುದಲ್ಲದೆ ಲೋಕ ರೂಢಿಗೆ ತಕ್ಕುವಾಗಿದ್ದವು. ಈ ಘಟನೆಯಿಂದ ದೇವವ್ರತನ ಜೀವನದಲ್ಲಿ ದೊಡ್ಡ ಸ್ಥಿತ್ಯಂತರ ನಡೆಯಿತು. ಆ ನಾರಿಯ ತಂದೆಯಾದ ದಾಶರಾಜನು, "ನಿನ್ನಿಂದ ನನ್ನ ಮಗಳಿಗೆ ಹುಟ್ಟುವ ಮಗನಿಗೆ ರಾಜ್ಯ ದೊರಕವುದಾದರೆ ಮಾತ್ರ ನಾನು ಈಕೆಯನ್ನು ಧಾರೆಯೆರೆದು ಕೊಡುತ್ತೇನೆ" ಎಂದು ಹಾಕಿದ ಕರಾರುಗಳನ್ನು ಒಪ್ಪುವುದು ಶಂತನುವಿಗೆ ಸಾಧ್ಯವಾಗಲಿಲ್ಲ. ಆತನು ಖಿನ್ನನಾಗಿ ರಾಜಧಾನಿಗೆ ಮರಳಿದನು. ಆತನ ಮನೋವ್ಯಥೆಯನ್ನು ಅರಿತುಕೊಳ್ಳಲು ದೇವವತ್ರನು ಯತ್ನಿಸಿದನು. ಶಂತನು ಈ ರೀತಿ ಉತ್ತರಿಸಿದನು: "ಎಲೈ ದೇವವ್ರತನೇ ! ನಿನ್ನಂತಹ ಸುಪುತ್ರನಿರುವಾಗ ನನಗೇನು ಚಿಂತೆ? ಆದರೆ ನೀನು ಒಬ್ಬನೇ ಮಗನು, ಒಂದು ಪಕ್ಷ ನಿನಗೇನಾದರೂ ಸಂಭವಿಸಿದರೆ ಈ ರಾಜ್ಯವನ್ನು ಪಾಲಿಸುವವರು ಯಾರು? ಎಂಬುದೇ ನನ್ನ ಯೋಚನೆ."

ಶಂತನುರಾಜನ ಈ ಸೂಚಕ ಮಾತುಗಳನ್ನು ಅರಿತು ದೇವವ್ರತನು ಇತರೆ ರಾಜಪುತ್ರರನ್ನು ಸಂಧಿಸಿ ಎಲ್ಲ ಸಂಗತಿಯನ್ನು ಅರಿತುಕೊಂಡನು. ಶಂತನುವಿಗೆ ತಿಳಿಸದೆ ಅಮಾತ್ಯರನ್ನು ಮತ್ತು ಹಿರಿಯರನ್ನೊಡಗೊಂಡು ಅವನು ದಾಶರಾಜನ ಬಳಿಗೆ ಹೋಗಿ ಶಂತನುವಿಗಾಗಿ ಸತ್ಯವತಿಯನ್ನು ಬೇಡಿದನು. ದಾಶರಾಜನು ತನ್ನ ಕರಾರುಗಳನ್ನು ಹೇಳಿದನು. ಆಗ ದೇವವ್ರತನು ಎಲ್ಲರ ಮುಂದೆ ಹೀಗೆಂದು ಪ್ರತಿಜ್ಞೆಯನ್ನು ಮಾಡಿದನು. "ನಾನು ಪಟ್ಟವನ್ನೇರುವುದಿಲ್ಲ" ಆದರೆ ಇಷ್ಟರಿಂದ ದಾಶರಾಜನ ಸಮಾಧಾನ ಹೇಗಾಗಬೇಕು? "ಅದೇನೊ ಸರಿಯೇ ! ಆದರೆ ಮುಂದೆ ನಿನ್ನ ಮಕ್ಕಳು ನನ್ನ ಮಗಳ ಮಕ್ಕಳೊಡನೆ

ರಾಜ್ಯಕ್ಕೋಸ್ಕರ ವ್ಯಾಜ್ಯ ಮಾಡಿದರೆ ಅದಕ್ಕೆ ಏನು ಹೇಳುವಿ?" ಎಂದು ದಾಶರಾಜನು ಕೇಳಿದಾಗ, ದೇವವ್ರತನು ಮೊದಲಿನ ಪ್ರತಿಜ್ಞೆಗಿಂತಲೂ ದುರ್ಘಟವಾದ ಇನ್ನೊಂದು ಪ್ರತಿಜ್ಞೆಯನ್ನು ಮಾಡಿದನು. "ನಾನು ಯಾವಜ್ಜೀವ ಬ್ರಹ್ಮಚಾರಿಯಾಗಿಯೇ ಇರುವೆನು". ಈ ದುರ್ಘಟ ಪ್ರತಿಜ್ಞೆಯಿಂದ ಆತನಿಗೆ "ಭೀಷ್ಮ" ಎಂಬ ಹೆಸರು ಬಂದಿತು. ಆಗ ದಾಶರಾಜನು ಸಮಾಧಾನದಿಂದ ತನ್ನ ಮಗಳಾದ ಸತ್ಯವತಿ ಗಂಧಕಾಲಿಯನ್ನು ಭೀಷ್ಮನಿಗೆ ಒಪ್ಪಿಸಿದನು. "ತಾಯಿಯೇ ! ನಡೆ" ಎಂದು ನುಡಿದು ಭೀಷ್ಮನು ಅವಳನ್ನು ರಥದಲ್ಲಿ ಕೂಡಿಸಿದನು. ಎಲ್ಲ ಪರಿವಾರದೊಂದಿಗೆ ರಾಜಧಾನಿಗೆ ಹಿಂದಿರುಗಿ, ಶಂತನುವಿನ ಜೊತೆ ಅವಳ ವಿವಾಹ ನೆರವೇರಿಸಿದನು.

ಭೀಷ್ಮನ ಅಸಾಮಾನ್ಯ ತ್ಯಾಗದಿಂದ ಸಂತುಷ್ಟನಾದ ಶಂತನು ಭೀಷ್ಮನಿಗೆ "ಇಚ್ಛಾಮರಣಿಯಾಗು" ಎಂಬ ವರವನ್ನಿತ್ತನು. ಹಿಂದೆ ವೃದ್ಧನಾದ ಪಿತನಿಗಾಗಿ ಪುರುರಾಜನು ವಾರ್ಧಕ್ಯವನ್ನು ಸ್ವೀಕರಿಸಿದ್ದನು. ಆದರೆ ಆ ವಾರ್ಧಕ್ಯವು ಚಿರಕಾಲವಿರಲಿಲ್ಲ. ಅದರಿಂದ ಮುಂದೆ ಪುರುರಾಜನಿಗೆ ಬಹಳ ಲಾಭವಾಯಿತು. ಪುರುರಾಜನು ಯದು, ತುರ್ವಸು, ಅನು ಮೊದಲಾದ ಎಲ್ಲ ಮಕ್ಕಳಲ್ಲಿ ಚಿಕ್ಕವನಾಗಿದ್ದರೂ ಯಯಾತಿಯು ಪುರುವಿಗೆ ರಾಜ್ಯವನ್ನಿತ್ತನು. ಆದರೆ ಭೀಷ್ಮನಿಗೆ ಈ ಅಮೋಘ ತ್ಯಾಗಕ್ಕೆ ಪ್ರತಿಯಾಗಿ ದೊರೆತದ್ದೇನೆಂದರೆ "ಇಚ್ಛಾಮರಣ"ವಷ್ಟೆ ! ಭೀಷ್ಮನ ತ್ಯಾಗ, ಪ್ರತಿಫಲಕ್ಕಾಗಿ ಇರಲೇ ಇಲ್ಲ. ಅವನೊಬ್ಬ ಶಾಪಿತ ಜೀವಿಯಾಗಿದ್ದನು. ಆತನಿಗೆ ಈ ಸಂಗತಿ ಗೊತ್ತಿರಲಿಲ್ಲವಾದರೂ ಗಂಗೆ ಅದನ್ನು ಶಂತನುವಿಗೆ ತಿಳಿಸಿದ್ದಳು. ಭೀಷ್ಮನಿಗೆ ಕಳೆದ ಜನ್ಮದ ಸ್ಮರಣವಿರದಿದ್ದರೂ ಆತನಲ್ಲಿ ಪೂರ್ವಜನ್ಮವನ್ನಾಧರಿಸಿ ಕೆಲವು ಪ್ರವೃತ್ತಿಗಳಿರಬೇಕೆಂದು ಗ್ರಹಿಸಿದಲ್ಲಿ, ಈ ಘಟನೆಯಿಂದ ಒಂದು ಪ್ರತ್ಯೇಕ ಸಂಬಂಧವನ್ನು ಪ್ರಸ್ತಾಪಿಸಬಹುದು. ಜನ್ಮ ತಾಳುತ್ತಲೆ ಮುಕ್ತವಾಗುವ ಆಸೆಯಿಂದ ಬಂದು ಪ್ರಪಂಚದ ತಿರುಗಣಿಯಲ್ಲಿ ಸಿಲುಕಿದ ಭೀಷ್ಮನು ಇಲ್ಲಿಂದ ಪಾರಾಗುವ ಯೋಗವನ್ನು ಇಚ್ಛಾಮರಣದಿಂದ ಪಡೆದಂತಾಯಿತಲ್ಲವೆ !

ರಾಜ್ಯವು ಇಲ್ಲ ! ವಿವಾಹವೂ ಇಲ್ಲ !! ಆದರೆ ಇಚ್ಛಾಮರಣ ಬೇರೆ!!! ಈ ಮೂರು ಸಂಗತಿಗಳಿಂದ ಭೀಷ್ಮನು ಜಗತ್ತಿನಿಂದ ಹೊರಟುಹೋಗಲು ಮುಕ್ತನಾದನು. ಪಂಜರದಲ್ಲಿ ಬಂಧಿತವಾದ ಪಕ್ಷಿಗೆ ಮುಕ್ತದ್ವಾರ ಕಂಡಿತು. ಆದರೆ ಭೀಷ್ಮನ ಜೊತೆಯಲ್ಲಿಯೇ ಬಂದಿದ್ದ ಆತನ ಹಣೆಬರಹ ಆತನನ್ನು ಪುನಃ ತಗ್ಗಿನಲ್ಲಿಯೇ ಕೆಡವಿತು.

ಶಂತನುವಿಗೆ ಸತ್ಯವತಿಯಿಂದ ಎರಡು ಮಕ್ಕಳಾದುವು. ಆ ಮಕ್ಕಳು ದೊಡ್ಡವರಾಗುವ ಮೊದಲೇ ಶಂತನು ತೀರಿಕೊಂಡನು. ಈ ಚಿಕ್ಕವರಾದ ಮಕ್ಕಳನ್ನು ಮತ್ತು ಅವರ ತಾಯಿಯನ್ನು ಬಿಟ್ಟುಹೋಗುವುದು ಭೀಷ್ಮನಿಗೆ ಸಾಧ್ಯವಾಗಲಿಲ್ಲ. ಆತನು ಪುನಃ ಪ್ರಪಂಚದ ತೊಳಲಾಟದಲಿ ಬಿದ್ದನು. ಅವನು ರಾಜನಾಗಿಲ್ಲದಿದ್ದರೂ, ಏನಿಲ್ಲೆಂದರೂ ನಲವತ್ತು ವರುಷಗಳವರೆಗೆ ರಾಜ್ಯವನ್ನು ರಕ್ಷಿಸಿದನು. ಅಧಿಕಾರ ನಡೆಸಿದನು. ಸ್ವತಃ ವಿವಾಹ ಮಾಡಿಕೊಳ್ಳದೆ ವಿವಾಹಗಳ ಸಮಸ್ಯೆಗಳನ್ನು ಎದುರಿಸಿದನು. ಸತ್ಯವತಿಯನ್ನು ರಥದಲ್ಲಿ

ಕರೆದುಕೊಂಡು ಬಂದು ತಂದೆಯೊಡನೆ ಆಕೆಯ ವಿವಾಹ ಮಾಡಿಸಿದ ಸಂಗತಿ ಆತನ ಮುಂದಿನ ಜೀವನದ ತಳಹದಿಯಾಯಿತು. ವಿಚಿತ್ರವೀರ್ಯ, ಧೃತರಾಷ್ಟ್ರ, ಪಾಂಡು, ವಿದುರ ಮೊದಲಾದವರ ವಿವಾಹಗಳು ಭೀಷ್ಮನ ಹಿರಿಯತನದಲ್ಲಿಯೇ ನೆರವೇರಿದವು. ಸ್ವಂತದ ಸಂತಾನವಿಲ್ಲದ ಈ ಬ್ರಹ್ಮಚಾರಿಯ ಜೀವನವೆಲ್ಲಾ ಬೇರೆಯವರ ಮಕ್ಕಳನ್ನು ಕಾಪಾಡುವುದರಲ್ಲಿಯೇ ಕಳೆಯಿತು. ಈ ತೊಡಕಿನಲ್ಲಿ ಸಿಕ್ಕಿ ಅವನು ಕೊನೆವರೆಗೂ ಆ ತೊಡಕಿನಿಂದ ಪಾರಾಗಲಿಲ್ಲ.

ಸತ್ಯವತಿಯ ಹಿರಿಯ ಮಗನಿಗೆ ಪಟ್ಟ ಕಟ್ಟಲಾಯಿತು. ಆದರೆ ಅವನು ಒಂದು ವ್ಯಾಜ್ಯದಲ್ಲಿ ಸತ್ತುಹೋದನು. ಎರಡನೆಯ ಮಗನಾದ ವಿಚಿತ್ರವೀರ್ಯನು ಎಳೆ ವಯಸ್ಸಿನಲ್ಲಿ ಪಟ್ಟಕ್ಕೇರಿದನು. ಆತನ ವಿವಾಹವು ಬೇಗನೇ ಆದರೆ ಒಳಿತೆಂದು ಭಾವಿಸಿ ಭೀಷ್ಮನು ಕಾಶಿರಾಜನ ಮೂವರು ಕನ್ಯೆಯರನ್ನು ಸ್ವಯಂವರ ಮಂಟಪದಿಂದ ಓಡಿಸಿಕೊಂಡು ಬಂದನು. ಅವರಲ್ಲಿ ಹಿರಿಯಳಾದ ಅಂಬೆಯು "ನಾನು ಮನಸ್ಸಿನಲ್ಲಿ ಶಾಲ್ವರಾಜನನ್ನು ವರಿಸಿದ್ದೇನೆ" ಎಂದು ಹೇಳಿದಳು. ಭೀಷ್ಮನು ಆಕೆಯನ್ನು ಶಾಲ್ವರಾಜನ ಬಳಿಗೆ ಕಳುಹಿಸಿ ಇನ್ನುಳಿದ ಅಂಬಿಕಾ, ಅಂಬಾಲಿಕಾ ಇವರ ವಿವಾಹವನ್ನು ವಿಚಿತ್ರವೀರ್ಯನೊಡನೆ ಮಾಡಿದನು.

ಭೀಷ್ಮನು ಕಾಶಿಯಿಂದ ಹಸ್ತಿನಾಪುರಕ್ಕೆ ಈ ಕನ್ಯೆಯರನ್ನು ತಂದನು. ಈ ಪ್ರಯಾಣ, ಕೆಲವು ದಿನ ನಡೆದಿರಬೇಕು. ಹಸ್ತಿನಾಪುರಕ್ಕೆ ಬಂದ ನಂತರ ಅಂಬೆಯು "ನಾನು ಮನಸ್ಸಿನಲ್ಲಿ ಬೇರೆಯವರ ಸೊತ್ತಾಗಿದ್ದೇನೆ" ಎಂದು ಹೇಳುವವರೆಗೂ ಇನ್ನೂ ಕೆಲವು ಕಾಲ ಕಳೆದಿರಬೇಕು. ಅನಂತರ ಶಾಲ್ವ ರಾಜನ ಬಳಿ ಹೋಗುವವರೆಗೂ ಇನ್ನೂ ಕೆಲವು ಕಾಲ ಗತಿಸಿರಬೇಕು. ಹೀಗಾಗಿ ಸ್ವಯಂವರ ಮಂಟಪದಿಂದ ಶಾಲ್ವ ರಾಜನ ಬಳಿ ತಲುಪಲು ಕೆಲವು ವಾರಗಳೇ ಹಿಡಿದಿರಬೇಕು. "ಇಷ್ಟೊಂದು ದಿನ ಹೆರವರಲ್ಲಿ ಉಳಿದ ನಿನ್ನನ್ನು ನಾನು ಸ್ವೀಕರಿಸಲಾರೆ" ಎಂಬ ಶಾಲ್ವರಾಜನ ಮಾತನ್ನು ಕೇಳಿ ಅಂಬೆಯು ಭೀಷ್ಮನ ಬಳಿ ಬಂದು, "ನೀನು ನನ್ನನ್ನು ಸ್ವಯಂವರ ಮಂಟಪದಿಂದ ಓಡಿಸಿ ತಂದಿರುವ ಕಾರಣ ನನ್ನನ್ನು ಮದುವೆಯಾಗು" ಎಂದು ಕೇಳಿಕೊಂಡಳು. ಭೀಷ್ಮನು ಬ್ರಹ್ಮಚರ್ಯದ ಪ್ರತಿಜ್ಞೆಯ ಮೂಲಕ ಅದಕ್ಕೆ ಒಪ್ಪಲಿಲ್ಲ. ಈ ರೀತಿ ಎಲ್ಲರ ಕಡೆಯಿಂದ ಅವಮಾನಿತಳಾದ, ಧಿಕ್ಕರಿಸಲ್ಪಟ್ಟ ಅಂಬೆ ಎಲ್ಲಿಯೂ ಆಶ್ರಯ ಸಿಗದೆ ತನ್ನನ್ನು ತಾನೇ ಸುಟ್ಟುಕೊಂಡಳು.

ಈ ಘಟನೆ ನಡೆಯುವವರೆಗೆ ಭೀಷ್ಮನ ಜೀವನ ನಿರಾಯಸವಾಗಿ ನಡೆದಿತ್ತು. ಅನ್ಯರಿಗೆ ಪೀಡೆಯನ್ನುಂಟು ಮಾಡಿರಲಿಲ್ಲ. ಆತನಿಂದ ಯಾವ ಕೇಡೂ ಆಗಿರಲಿಲ್ಲ. ಯಾರ ಮನವೂ ನೊಂದಿರಲಿಲ್ಲ. ಆದರೆ ಅಂಬೆಯ ಈ ಘಟನೆಯಿಂದ ಇಷ್ಟೆಲ್ಲವು ನಡೆಯಿತು. ಮುಂದೆಯೂ ಇಂಥ ಅನೇಕ ಪ್ರಸಂಗಗಳು ಬಂದವು.

ವಿವಾಹವಾದ ತುಸುದಿನಗಳಲ್ಲಿಯೇ ವಿಚಿತ್ರವೀರ್ಯನು ಮರಣ ಹೊಂದಿದನು. ಆತನಿಗೆ ಮಕ್ಕಳು ಹುಟ್ಟಿರಲಿಲ್ಲ. ತನ್ನ ಮಕ್ಕಳು ರಾಜ್ಯವನ್ನೇರಬೇಕು ಎಂಬ ಸತ್ಯವತಿಯ ಆಕಾಂಕ್ಷೆಯು ಮಣ್ಣುಪಾಲಾಯಿತು. ಅಷ್ಟೇ ಅಲ್ಲದೆ ವಂಶ ನಿರ್ಮೂಲವಾಗುವ ಪ್ರಸಂಗ

ಒದಗಿತು. ಆಗ ಸತ್ಯವತಿಯು ಭೀಷ್ಮನನ್ನು ದೈನ್ಯದಿಂದ ಪ್ರಾರ್ಥಿಸಿದಳು : "ಭೀಷ್ಮನೇ ! ನೀನು ಬ್ರಹ್ಮಚರ್ಯದ ಪ್ರತಿಜ್ಞೆಯನ್ನು ಬಿಡು ! ರಾಜ್ಯವನ್ನು ಅಂಗೀಕರಿಸು!! ಕುರುಕುಲವನ್ನು ಉದ್ಧರಿಸು !!!" ಭೀಷ್ಮನು ಇವೆಲ್ಲವನ್ನು ನಿರಾಕರಿಸಿದನು. ಸತ್ಯವತಿಗೆ ಕೌಮಾರ್ಯದಲ್ಲಿಯೇ ಜನಿಸಿದ ವ್ಯಾಸನು ವಿಚಿತ್ರ ವೀರ್ಯನಿಗೆ ಸಹೋದರನೇ ಸರಿ ! ಆದರೆ ವ್ಯಾಸನು. ವಿಚಿತ್ರವೀರ್ಯ ರಾಣಿಯರ ಭಾವಮೈದುನನು. ಭೀಷ್ಮನ ಅನುಮತಿಯಂತೆ ವ್ಯಾಸನಿಂದ ಸಂತಾನವನ್ನು ಹೊಂದಬೇಕು ಎಂದು ನಿರ್ಧರಿಸಿ ಸತ್ಯವತಿಯು ತನ್ನ ಸೊಸೆಯನ್ನು ಕರೆದು, "ಈ ರಾತ್ರಿ ನಿನ್ನ ಭಾವಮೈದುನನು ಬರಲಿದ್ದಾನೆ" ಎಂದು ಸಂದಿಗ್ಧವಾಗಿ ಹೇಳಿದಳು. ಸತ್ಯವತಿಯ ಆ ಮಾತನ್ನು ಕೇಳಿ ಬರುವವನು ಭೀಷ್ಮನೋ ಅಥವಾ ಬೇರೊಬ್ಬ ಕುರುಕುಲ ವೀರನೋ ಎಂಬ ಯೋಚನೆಯಲ್ಲಿ ಹಿರಿಯ ರಾಣಿ ಇದ್ದಳು. ಆದರೆ ಒಬ್ಬ ಕಪ್ಪುವರ್ಣದ ಆರಕ್ತನೇತ್ರ ಉಳ್ಳ ಜಟಾಧಾರಿಯನ್ನು ಕಂಡು ಆಕೆ ಮೂರ್ಛೆಹೋದಳು. ಈ ಸಂಬಂಧದಿಂದ ಜನಿಸಿದ ಧೃತರಾಷ್ಟ್ರನು ಜನ್ಮಾಂಧನಾಗಿದ್ದನು. ಅನಂತರ ವ್ಯಾಸನು ದ್ವಿತೀಯ ರಾಣಿಯ ಬಳಿ ಹೋದನು. ಆತನ ರೂಪವನ್ನು ಕಂಡು ರಾಣಿಯು ಭಯದಿಂದ ಕಾಂತಿಹೀನಳಾದಳು. ಆಗ ಅವಳಿಗೆ ಜನಿಸಿದ ಶ್ವೇತವರ್ಣದ ಮಗುವೆಂದರೆ ಪಾಂಡು.

ರಾಜಕುಲದಲ್ಲಿ ಬೆಳೆದ ಆ ಇಬ್ಬರು ಕ್ಷತ್ರಿಯ ರಾಣಿಯರಿಗೆ ಈ ಕೃತಿಯಿಂದ ಎಷ್ಟೊಂದು ತಿರಸ್ಕಾರ ಹುಟ್ಟಿರಬೇಕು ? ಮೂರನೆಯ ಬಾರಿ ಆ ಭಯಂಕರನಾದ ಜಟಾಧಾರಿ ಬ್ರಾಹ್ಮಣನೇ ಅಗಮಿಸುವನು ಎಂದು ತಿಳಿದ ಕ್ಷಣವೇ ಆ ರಾಣಿಯರು ತಮ್ಮ ಬದಲಾಗಿ ತಮ್ಮ ದಾಸಿಯನ್ನು ಅವನ ಸ್ವಾಗತಕ್ಕೆ ಇರಿಸಿದರು. ಆ ದಾಸಿಯಿಂದ ಹುಟ್ಟಿದ ಮಗು ಎಂದರೆ ವಿದುರ.

ಭೀಷ್ಮನು ಅಂಧನಾದ ಧೃತರಾಷ್ಟ್ರನಿಗೆ ದೂರ ದೇಶದ ರಾಜಕನ್ಯೆಯನ್ನು ವಧುವಾಗಿ ತಂದನು. ತನ್ನ ಪತಿಯು ಅಂಧನಾಗಿರುವನು ಎಂದು ತಿಳಿದ ಕೂಡಲೆ ಅವಳು ತನ್ನ ಕಣ್ಣುಗಳನ್ನು ವಸ್ತ್ರದಿಂದ ಕಟ್ಟಿಕೊಂಡಳು. ಕುಂತಿ ದೃಢಕಾಯಳು, ಒರಟಾಗಿಯೂ ಇದ್ದಳು. ಮಾದ್ರಿಯು ರೂಪವತಿಯಾಗಿದ್ದಳು. ಆದರೆ ಈ ಇಬ್ಬರನ್ನು ಮದುವೆ ಆದ ಪಾಂಡುವಿಗೆ ಸ್ತ್ರೀಸಂಗ ಅಸಾಧ್ಯವಿತ್ತು. ಪತಿಯ ಸಾವಿಗೆ ಕಾರಣಳಾದ ಮಾದ್ರಿಯು ಪ್ರಾಯದಲ್ಲಿಯೇ ಸತ್ತುಹೋದಳು. ಅಂಬಾ, ಅಂಬಿಕಾ, ಅಂಬಾಲಿಕಾ, ಗಾಂಧಾರಿ, ಕುಂತಿ, ಮಾದ್ರಿ ಮೊದಲಾದ ಈ ಹೆಂಗಸರ ಕರುಳುಗಳು ಎಷ್ಟೊಂದು ನೊಂದಿರಬೇಕು? ಅವರ ಅವಮಾನಕ್ಕೆ ಭೀಷ್ಮನೇ ಕಾರಣನಲ್ಲವೇ? ಭೀಷ್ಮನು ಕುರುವಂಶದ ಅಧಿಕಾರಿ ಪುರುಷನಿದ್ದನು. ವಂಶಾಭಿವೃದ್ಧಿಗಾಗಿ ಈ ಕುಲ ಸ್ತ್ರೀಯರ ಮಾನಹಾನಿಯನ್ನು ಮಾಡಿದಂತಾಯಿತು.

ಕುಂತಿ, ಗಾಂಧಾರಿ ಮತ್ತು ಮಾದ್ರಿಯರ ಬಗ್ಗೆ ಜನರು ಏನು ಆಡಿಕೊಳ್ಳುತ್ತಿದ್ದರೋ ಎಂಬುದು ಮಹಾಭಾರತದಲ್ಲಿ ತಿಳಿಯುವುದಿಲ್ಲ. ಆದರೆ ಕಾಶಿರಾಜನ ಕನ್ಯೆಯರ ಮೇಲೆ ಜರುಗಿದ ಪ್ರಸಂಗವನ್ನುಲ್ಲೇಖಿಸಿ ಶಿಶುಪಾಲನು ಭೀಷ್ಮನನ್ನು ಹೀಯಾಳಿಸಿ ಮಾತನಾಡಿದ್ದು ಕಂಡುಬರುತ್ತದೆ.

ಧರ್ಮರಾಜನು ರಾಜಸೂಯ ಯಜ್ಞ ಮಾಡಿದಾಗ ಅಗ್ರಪೂಜೆಯ ಮಾನ ಯಾರದು? ಎಂಬ ಪ್ರಶ್ನೆ ಉದ್ಭವಿಸಿತು. ಯಜ್ಞಕ್ಕೆ ಎಲ್ಲ ಪ್ರಮುಖ ರಾಜರುಗಳಿಗೆ ಔತಣವಿತ್ತು. ಅತಿಥಿಗಳಿಗೆ ಅರ್ಘ್ಯವನ್ನಿತ್ತು ಸತ್ಕರಿಸುವುದಿತ್ತು. ಪ್ರಾರಂಭದಲ್ಲಿ ಭೀಷ್ಮನ ಸಲಹೆಯ ಪ್ರಕಾರ ಶ್ರೀಕೃಷ್ಣನಿಗೆ ಅರ್ಘ್ಯವನ್ನು ಕೊಡಬೇಕೆಂದು ಪಾಂಡವರು ನಿಶ್ಚಯಿಸಿದರು. ಆ ಪ್ರಕಾರ ಅರ್ಘ್ಯವನ್ನು ಕೃಷ್ಣನಿಗೆ ಕೊಡಲು ಶಿಶುಪಾಲನು ಅಡ್ಡಿಮಾಡಿದನು. "ನಿಮ್ಮ ಕುಲದಲ್ಲಿ ಇನ್ಯಾರೂ ಇರದಿದ್ದರೆ ಹಿರಿಯನಾದ ಭೀಷ್ಮನಿಗೆ ಅರ್ಘ್ಯವನ್ನು ಕೊಡುವುದು ಉಚಿತ" ಎಂದು ಹೇಳಿದನು. ಶ್ರೀಕೃಷ್ಣನಿಗೆ ಈ ವಿಷಯದಲ್ಲಿ ಮಾತಾಡಲು ಅವಕಾಶವಿರಲಿಲ್ಲ. ಅವನು ಮಾತಾಡಲೂ ಇಲ್ಲ. ಭೀಷ್ಮನು ಎದ್ದು ನಿಂತು "ಕೃಷ್ಣನೇ ಯೋಗ್ಯ" ಎಂದು ಹೇಳತೊಡಗುತ್ತಲೇ ಶಿಶುಪಾಲನು ರೊಚ್ಚಿಗೆದ್ದು ಈ ರೀತಿ ನುಡಿದನು : "ಭೀಷ್ಮನೇ ! ನಿನ್ನ ಸಮಗ್ರ ಚರಿತ್ರೆ ಕ್ಷತ್ರಿಯರಿಗೆ ಕಳಂಕವನ್ನು ತರುವಂತಹುದು. ಅಂಬೆ ಶಾಲ್ವನನ್ನು ವರಿಸಿದ್ದಾಳೆ ಎಂದು ಜಗತ್ತಿಗೆಲ್ಲ ಗೊತ್ತಿತ್ತು. ಆದರೆ ನೀನು ಅವಳನ್ನು ಅಪಹರಿಸಿದೆ. ವಿಚಿತ್ರವೀರ್ಯನು ಧರ್ಮವಂತ ರಾಜರ್ಷಿ. ಆತನು ಅವಳೊಡನೆ ವಿವಾಹವಾಗಲಿಲ್ಲ. ಅವಳು ನಿನ್ನ ಆಶ್ರಯಕ್ಕೆ ಬಂದಾಗ ನೀನು ಅವಳನ್ನು ತಳ್ಳಿಹಾಕಿದೆ. ನಿನ್ನ ತಮ್ಮನಾದ ವಿಚಿತ್ರವೀರ್ಯನು ಸತ್ತುಹೋದ ನಂತರ ಆತನ ರಾಣಿಯರು ನಿನ್ನವರೇ ಇದ್ದರು. ಆಗ ಗುಪ್ತತೆಯಿಂದ ಒಬ್ಬ ಬ್ರಾಹ್ಮಣನ ಮೂಲಕ ಅವರಲ್ಲಿ ಸಂತತಿಯನ್ನು ಪಡೆದದ್ದಾಯಿತು. ಭೀಷ್ಮನೇ! ಬ್ರಹ್ಮಚಾರಿಯಲ್ಲ ನೀನು ! ನೀನು ಷಂಢ ! ಆ ಮಾತು ಹೇಗೇ ಇರಲಿ. ಈ ಹೊತ್ತು ನಿನಗೆ ಅರ್ಘ್ಯವನ್ನಿತ್ತು ಸನ್ಮಾನಿಸುವುದು. ಆದರೆ ನೀನು ಕೃಷ್ಣನನ್ನು ಹೊಗಳುತ್ತಿರುವಿ !"

ಧರ್ಮ, ದುರ್ಯೋಧನರ ಕಾಲದಲ್ಲಿ ವಂಶದ ಪುರುಷರಿಗಾಗಿ ವಧುಗಳನ್ನು ತರುವುದನ್ನು ಭೀಷ್ಮನು ನಿಲ್ಲಿಸಿಬಿಟ್ಟನು. ಅದ್ದರಿಂದ ಮುಂದೆ ಯಾವ ನಾರಿಗೂ ಪೀಡೆ ಆಗಿರಲಿಕ್ಕಿಲ್ಲ. ಆದರೆ ಭೀಷ್ಮನು ಯಾವ ರಾಜಸಭೆಯಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದಿದ್ದನೋ, ಅಂಥ ರಾಜಸಭೆಯಲ್ಲಿ ದ್ರೌಪದಿಗಾದ ಮಾನಹಾನಿಯನ್ನು ತಡೆಯಲು ಆತನು ಪ್ರಯತ್ನಿಸಲಿಲ್ಲ. ದ್ರೌಪದಿಯನ್ನು ಸಭೆಯಲ್ಲಿ ಎಳೆದು ತಂದಾಗ ತೀರ ಅಸಹ್ಯವಾದ್ದರಿಂದ ವಿದುರನು ಮಧ್ಯಸ್ಥಿಕೆ ಮಾಡಿದನು. ವಿದುರನು ಧೃತರಾಷ್ಟ್ರನ ತಮ್ಮ. ಅದಲ್ಲದೇ ದಾಸಿಪುತ್ರ. ಅವನಿಗಿಂತ ಭೀಷ್ಮನು ಈ ನಾಚಿಕೆಗೇಡು ಕೃತ್ಯವನ್ನು ಅಧಿಕಾರವಾಣಿಯಿಂದ ತಡೆಯಬಹುದಿತ್ತು, ಆದರೆ ಅವನು 'ಧರ್ಮ ಯಾವುದು?' 'ಅಧರ್ಮ ಯಾವುದು?' ಎಂಬ ಒಣ ಚರ್ಚೆಯಲ್ಲಿಯೇ ತೊಡಗಿದ್ದನು.

ಯಾವುದೇ ಕುಟುಂಬದಲ್ಲಿಯೇ ಆಗಲಿ, ರಾಜ್ಯದಲ್ಲಿಯೇ ಆಗಲಿ ತೀರ ನಿರ್ಬಲರಾದವರನ್ನು, ಅನ್ಯಾಯವನ್ನು ಎದುರಿಸಲು ಅಸಮರ್ಥರಾದವರನ್ನು ಸೌಜನ್ಯದಿಂದ ಕಾಣುವುದು ಘನವಂತಿಕೆಯ ಲಕ್ಷಣ. ದೇವರು ಅನಾಥರ ರಕ್ಷಕನು. ಅದಕ್ಕಾಗಿ ಆತನ ಘನವಂತಿಕೆ.

ಸ್ವಂತದ ಮಕ್ಕಳನ್ನು ಎಲ್ಲರು ಪ್ರೀತಿಯಿಂದಲೆ ನೋಡಿಕೊಳ್ಳುತ್ತಾರೆ. ಆದರೆ ಮನೆಯ ಆಳುಹೋಳುಗಳ ಹಿತವನ್ನು ಲಕ್ಷಿಸುವವನು ನಿಜವಾಗಿ ದೊಡ್ಡವನು. ಅಂತಹ ಮನೆಯಲ್ಲಿ ದೇವರು ವಾಸಿಸುತ್ತಾನೆ. ಪ್ರಾಯಶಃ ಮನುವು ಇದೇ ರೀತಿ ಹೇಳಿದ್ದಾನೆ. ಮನುಸ್ಮೃತಿಯು ಮಹಾಭಾರತದ ನಂತರ ಬಂದಿದೆ. ಆದರೆ ಆಚಾರ ವಿಚಾರಗಳ ನಿಯಮಗಳು ಎರಡು ಕಾಲದಲ್ಲಿ ಒಂದೇ ರೀತಿ ಇದ್ದವು ಎಂದು ತೋರುತ್ತದೆ. ಪಿತೃಪ್ರಧಾನ ಕುಟುಂಬದಲ್ಲಿ ಪುರುಷನ ವರ್ಚಸ್ವವಿರುತ್ತಿತ್ತು. ಹೆಂಗಸರಿಗೆ, ಅದರಲ್ಲಿಯೂ ಸೊಸೆಯಂದಿರಿಗೆ ಯಾವ ಹಕ್ಕೂ ಇರಲಿಲ್ಲ. ಇದೇ ಕಾರಣದಿಂದ ಮನು ಸಾರಿ ಹೇಳಿದ್ದಾನೆ: “ಯಾವ ಕುಲದಲ್ಲಿ ವಧುಗಳಿಗೆ (ಹೆಂಗಸರಿಗೆ) ಕಂಬನಿಯನ್ನು ಸುರಿಸಬೇಕಾಗುತ್ತದೆಯೋ, ಯಾವ ಕುಲದಲ್ಲಿ ಅವರ ಹೃದಯಗಳು ದುಃಖದಿಂದ ಕುದಿಯುತ್ತಿವೆಯೋ ಆ ಕುಲವು ನಾಶವಾಗುತ್ತದೆ. ಆದರೆ ಯಾವ ಮನೆಗಳಲ್ಲಿ ನಾರಿಯರಿಗೆ ಗೌರವದಿಂದ ನೋಡಿಕೊಳ್ಳುತ್ತಾರೋ, ಅಂಥ ಮನೆಗಳಲ್ಲಿ ದೇವತೆಗಳು ವಾಸಿಸುತ್ತಾರೆ.”

ಕುರುವಂಶದಲ್ಲಿ ಹೆಂಗಸರ ಮಾನಹಾನಿ ಅತಿಶಯವಾಯಿತು. ಅವರ ದೇಹ ಮನಗಳು ನುಚ್ಚುನೂರಾದುವು. ಅಂಥ ಕುಲವು ನಾಶಕ್ಕೆ ಅಣಿಯಾಗಿತ್ತು. ದುರದೃಷ್ಟದಿಂದ ಭೀಷ್ಮನಿಗೆ ಈ ಪಾಪ ಮಾಡಬೇಕಾಯಿತು.

ಈಗ ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ. ಭೀಷ್ಮನು ತನಗಾಗಿ ಯಾವುದನ್ನೂ ಮಾಡಲಿಲ್ಲ. ರಾಜ್ಯದ ಮತ್ತು ಸ್ತ್ರೀಸಂಗದ ತ್ಯಾಗ ಮಾಡುತ್ತಲೇ ಆತನಿಗೆ ಸ್ವಂತದ ಕರ್ತವ್ಯಗಳೇ ಉಳಿದಿರಲಿಲ್ಲ. ಆತನು ಮಾಡಿದ್ದೆಲ್ಲವೂ ಅನ್ಯರಿಗಾಗಿ. ಆದ್ದರಿಂದ ಮೇಲಿನ ಕೃತಿಗಳಿಗೆ ಆತನು ಹೊಣೆಯಾಗಬಹುದೇ? ಇದೇ ಪ್ರಶ್ನೆಯನ್ನು ಇನ್ನೊಂದು ರೀತಿಯಲ್ಲಿ ಕೇಳಬಹುದು. ಮಾನವನು ತನ್ನ ಜೀವನವೆಲ್ಲವನ್ನು ಸಂಪೂರ್ಣ ಶುಚಿತ್ವದಲ್ಲಿಯೇ ಕಳೆಯಬಹುದೋ? ಬಾಳುವುದು ಎಂದರೆ ಮನಸ್ಸಿನಲ್ಲಿ ಇದ್ದರೂ, ಇರದೇ ಇದ್ದರೂ ಕೃತಿಗಳಿಂದ ಪಾಪ ಕಟ್ಟಿಟ್ಟದ್ದೇ! ಎಂಬುದು ಮಾನವೀ ಜೀವನದ ಸಂಕೇತವೋ !

ಅಂಬೆಯು ಶಾಲ್ವರಾಜನ ಸೊತ್ತು ಎಂದು ಅರಿತಿದ್ದರೂ ಭೀಷ್ಮನು ಆಕೆಯನ್ನು ರಥದಲ್ಲಿಂದ ಅಪಹರಿಸಿದ್ದೇಕೆ ? ವಿಚಿತ್ರವೀರ್ಯನ ರಾಣಿಯರು ವಿಧವೆಯರಾದರು. ಆ ರಾಣಿಯರಿಗಾಗಿ, ಒಂದು ಪಕ್ಷ ತನ್ನ ಪ್ರತಿಜ್ಞೆಯನ್ನು ಪಾಲಿಸುವುದಾದರೂ, ಕುರುಕುಲದಲ್ಲಿ ಇನ್ನಿತರ ಯುವಕರು ಇರಲಿಲ್ಲವೇ? ಮಹಾಭಾರತದಲ್ಲಿ ಸ್ಪಷ್ಟವಾಗಿ ಹೇಳಿದಂತೆ ಆ ರಾಣಿಯರ ಕಣ್ಣು ಮುಂದೆ ಭೀಷ್ಮನು ಅಥವಾ ಇನ್ನಿತರ ಕುರುವೀರರಿದ್ದರೆಂದು ತೋರುತ್ತದೆ. ಹೀಗಿರುವಾಗ ಎಲ್ಲರನ್ನು ಬಿಟ್ಟು ಈ ಕಾಡು ಬ್ರಾಹ್ಮಣನು ದೊರೆತಿದ್ದು ಆಶ್ಚರ್ಯ.

ಇದಕ್ಕೆ ಉತ್ತರವಾಗಿ ಈ ರೀತಿ ಹೇಳಬಹುದು. ರಾಜಸಭೆಯಲ್ಲಿಯ ಒಬ್ಬ ಕುರುಕುಲವೀರನನ್ನು ಆರಿಸಿದ್ದರೆ ಹುಟ್ಟಿದ ಮಗನ ತಂದೆ ಎಂದು ಆತನ ಸ್ಥಾನ ಭದ್ರವಾಗುತ್ತಿತ್ತು. ಅದಕ್ಕೆ ರಾಜಮನೆತನಕ್ಕೆ ಯಾವ ತರಹದ ಸಂಬಂಧವೇ ಇಲ್ಲದ ಪುರುಷನೇ ಯೋಗ್ಯನೆಂದು ಸತ್ಯವತಿಯ ಹಾಗೆ ಭೀಷ್ಮನು ಭಾವಿಸಿರಬೇಕು. ಭೀಷ್ಮನ ಜಾತಕದಲ್ಲಿ

ರಾಜಯೋಗವಿರದಿದ್ದರೂ ಅಧಿಕಾರಯೋಗ ಯಥೇಷ್ಟವಾಗಿತ್ತು? ಆದ್ದರಿಂದ ಭೀಷ್ಮನ ಈ ಯೋಜಕತೆಯಿಂದ ಆತನ ಅಧಿಕಾರಕ್ಕೆ ಚ್ಯುತಿ ಬರಲಿಲ್ಲ. ಆತನ ಬ್ರಹ್ಮಚರ್ಯವು ನಷ್ಟವಾಗಲಿಲ್ಲ. ಇದು ಒಂದು ವಿಧದ ರಾಜಕಾರಣ. ಆದರೆ ಭೀಷ್ಮನ ಈ ವರ್ತನೆ ಮಾನವೀ ಮೌಲ್ಯದ ದೃಷ್ಟಿಯಲ್ಲಿ ಆಕ್ಷೇಪಾರ್ಹವೆನಿಸುತ್ತದೆ. ಶಿಶುಪಾಲನು ಭೀಷ್ಮನನ್ನು ಬೈಯುವಾಗ "ಪ್ರಾಜ್ಞಮಾನಿನ್" ಎಂದು ಬೈಯುತ್ತಾನೆ. "ಪ್ರಾಜ್ಞಮಾನಿನ್" ಅಂದರೆ ಸ್ವತಃ ದೊಡ್ಡವನೆಂದು ತಿಳಿದುಕೊಂಡವನು.

ಭೀಷ್ಮನು ನಿಃಸ್ವಾರ್ಥಿಯು, ಪ್ರಜ್ಞಾವಂತನು, ಸತ್ಯಪ್ರತಿಜ್ಞನು. ಪರರ ಯೋಗಕ್ಷೇಮವನ್ನು ಬಯಸುವವನು ಎಂದು ಪ್ರಖ್ಯಾತನಿದ್ದನು. ಆತನು ಈ ಭೂಮಿಕೆಯನ್ನು ಬಲು ಓಜಸ್ಸಿನಿಂದ ಕಾಯುತ್ತಿದ್ದನು. ಮನುಷ್ಯನು ತನಗಾಗಿ ಮಾಡುವ ಕೃತಿಗಳಿಗೆ ಮೇರೆ ಇರುತ್ತದೆ. ಆ ಕೃತಿಗಳ ಎಣಿಕೆಯೂ ನಿರ್ದಾಕ್ಷಿಣ್ಯವಾಗಿ ನಡೆಯುತ್ತದೆ. ಆದರೆ ಒಮ್ಮೆ ತ್ಯಾಗದ ಇಲ್ಲವೆ ಅನ್ಯರಿಗೆ ಉಪಕಾರ ಮಾಡುವ ಪಾತ್ರ ವಹಿಸಿದರೆ ಅಂಥ ಕೃತಿಗಳಿಗೆ ಸಾಮಾನ್ಯ ಮೇರೆಗಳು ಅನ್ವಯಿಸುವುದಿಲ್ಲ. ಇಂಥ ತ್ಯಾಗದ ಅಥವಾ ಉಪಕಾರದ ಕೃತಿಗಳನ್ನು ಮಾಡುವವನು ಲೋಕಾಪವಾದಕ್ಕೆ ಅಂಜುವುದಿಲ್ಲ. ಆತನು ಸರ್ವ ಸಾಮಾನ್ಯ ನಿಯಮಗಳನ್ನು ಬದಿಗಿಟ್ಟು ವರ್ತಿಸಬಹುದು. ಈ ಉದ್ದೇಶಕ್ಕಾಗಿ ಆತನು ಮೇರೆ ಮೀರಿ ವರ್ತಿಸಿದರೂ ಸೋಜಿಗವಲ್ಲ.

ಕ್ರಾಂತಿಯನ್ನು ಹೂಡುವುದು, ದಲಿತರಿಗೋಸ್ಕರ ಬಂಡಾಯವನ್ನೆಬ್ಬಿಸುವುದು ಅದರಿಂದ ಜನರ ಹತ್ಯಾಕಾಂಡವಾಗುವುದು ಇವೆಲ್ಲ ಎಷ್ಟೋ ಸಲ ನಡೆದಿವೆ. ಫ್ರಾನ್ಸ್ ಮತ್ತು ರಶಿಯಾ ದೇಶದ ಅರಸರು ನಡೆಸಿದ ಹತ್ಯಾಕಾಂಡಕ್ಕೆ ಮಿಗಿಲಾದ ಹತ್ಯಾಕಾಂಡಗಳು ಆ ದೇಶದ ಕ್ರಾಂತಿಯ ಹೆಸರಿನಲ್ಲಿ ನಡೆದಿದ್ದು ಕಂಡುಬರುತ್ತದೆ. ಈ ಹತ್ಯೆಯನ್ನು ಮಾಡಿಸಿದ ಪುಢಾರಿಗಳು ಮಹಾತ್ಮರೆನಿಸಿದರು. ಮಾನವನು ತನಗಾಗಿ ಯಾವ ಕಾರ್ಯವನ್ನು ಮಾಡಲು ಹಿಂಜರಿಯುವನೋ ಅದನ್ನು ದೇಶಕ್ಕಾಗಿ, ಸಮಾಜಕ್ಕಾಗಿ, ಇತರರಿಗಾಗಿ ಮಾಡಬಲ್ಲನು. ಧ್ಯೇಯವಾದಿಗಳು, ಸ್ವಾತಂತ್ರ್ಯವಾದಿ ದೇಶಭಕ್ತರು ಎಷ್ಟೊಂದು ಅನ್ಯಾಯವನ್ನು ಮಾಡಬಲ್ಲರೊ ಅಷ್ಟು ಸಾಮಾನ್ಯರು ಮಾಡಲಿಕ್ಕಿಲ್ಲ. ಅಂದ ಮೇಲೆ ಭೀಷ್ಮನು ಧ್ಯೇಯವಾದಿ, ಪ್ರಾಜ್ಞಮಾನಿ, ಕುಲಚಿಂತಕನಿರುವುದರಿಂದ ಆತನು ಕೆಲವು ಸಂದರ್ಭಗಳಲ್ಲಿ ಸದಸದ್ವಿವೇಕವನ್ನು ಬದಿಗಿಟ್ಟಿದ್ದರೂ ಆಶ್ಚರ್ಯವೇನಿಲ್ಲ. ಭೀಷ್ಮನಿಗೆ ಇದೇ ಅವಸ್ಥೆಯು ಒದಗಿರಬೇಕೆ? ತನ್ನ ಗುಣವಂತಿಕೆಯ ಪ್ರತಿಜ್ಞಾಪೂರ್ತಿಯ ಜಂಬ ಆತನಿಗೆ ಉಂಟಾಗಿರಲಿಲ್ಲವಷ್ಟೆ? ಜಂಬ ಉಂಟಾಗುವಷ್ಟು ಆತ್ಮವಿಸ್ಮರಣೆ ಆಗಿರಲಿಲ್ಲ. ಹತ್ತಾರು ಜನರ ಮುಂದೆ ಯಾವ ಕಠಿಣ ಭೂಮಿಕೆಯನ್ನು ಭೀಷ್ಮನು ಅಂಗೀಕರಿಸಿದನೋ, ವಿಶೇಷ ಅಗತ್ಯವಿಲ್ಲದೆ ಯಾವ ಹೊಣೆಯನ್ನು ವಹಿಸಿದನೋ ಅದರಲ್ಲಿಯೇ ಆತನು ಪ್ರವಾಹಪತಿತನಂತೆ ಸಾಗಬೇಕಾಯಿತು.

ನಮ್ಮ ಧರ್ಮದಲ್ಲಿ ಮೋಕ್ಷವನ್ನು ಪಡೆಯಲು ಮಾಡುವ ಪ್ರಯತ್ನಗಳು ಕೂಡ ಮೇಲಿನ ವಿಚಾರಸರಣಿಯನ್ನು ಎತ್ತಿ ತೋರಿಸುತ್ತವೆ. ಯಮ, ನಿಯಮ, ಪ್ರಾಣಾಯಾಮ, ತಪಸ್ಸು ಇವೆಲ್ಲ ಸಾಧನೆಗಳಿಂದ ಸಾಧಕನು ಪ್ರಗತಿಯನ್ನು ಸಾಧಿಸುತ್ತ ತಪಸ್ಸಿನ ಫಲವಾಗಿ

ಋದ್ಧಿ, ಸಿದ್ಧಿಗಳನ್ನು ಪಡೆಯುತ್ತಾನೆ. ಸಾಧಕನ ಈ ಸ್ಥಿತಿಯು ಮೋಕ್ಷದ ದಾರಿಯಲ್ಲಿ ಇರುತ್ತದೆ. ಆದರೆ ಕೆಲವು ಸಲ ಅದು ಮೋಕ್ಷ ಮಾರ್ಗದಲ್ಲಿ ಆತಂಕವಾಗಿ ನಿಲ್ಲುತ್ತದೆ. ಸಾಧಕನು ಈ ಅದ್ಭುತ ಸಾಧಕತೆಯಿಂದ ತನ್ನಷ್ಟಕ್ಕೆ ತಾನೇ ಧನ್ಯನೆಂದು ತಿಳಿದು ಮೋಕ್ಷಪ್ರಾಪ್ತಿಯನ್ನು ಮರೆತುಬಿಡುತ್ತಾನೆ. ಒಂದು ವಿಶಿಷ್ಟ ಸಮಯದಲ್ಲಿ ಆತನಿಗೆ ಈ ಅದ್ಭುತ ಸಾಧನೆಯಿಂದ ಗೌರವದ ಸ್ಥಾನವು ಲಭಿಸುತ್ತದೆ. ಆತನು ಜನರ ಮೆಚ್ಚಿಗೆಯನ್ನು ಪಡೆಯುತ್ತಾನೆ. ಅಂತಹ ಸಂದರ್ಭದಲ್ಲಿ ಆತನಿಗೆ ಆತ್ಮ ವಿಸ್ಮರಣೆಯೂ ಆಗಬಹುದು. ಆತನಿಂದ ದುಷ್ಕೃತಿಗಳು ನಡೆಯುವ ಸಂಭವವಿದೆ. ಆತನು ಅವಿಚಾರದಿಂದ ಧುಮುಕಿ ಕೃತಿಗಳನ್ನು ಮಾಡಬಹುದು. ಇದೇ ಗತಿ ಭೀಷ್ಮನದಾಯಿತೆಂದು ಹೇಳಬಹುದೊ ?

ಭೀಷ್ಮನು ಸತ್ಯವತಿಯು ಮೇಲೆ ಸೇಡು ತೀರಿಸಿಕೊಂಡನು ಎಂದು ಹೇಳಲಿಕ್ಕಾಗುವುದಿಲ್ಲ. ಮಹಾಭಾರತದಲ್ಲಿ ಈ ಬಗ್ಗೆ ಉಲ್ಲೇಖವಿಲ್ಲ, ಆದರೆ ವಿಚಿತ್ರವೀರ್ಯನ ಮರಣ, ಧೃತರಾಷ್ಟ್ರನು ಅಂಧನಾಗಿ ಹುಟ್ಟುವುದು, ಪಾಂಡು ರೋಗಿಯಾಗಿ ಜನಿಸುವುದು – ಇವೆಲ್ಲವೂ ಭೀಷ್ಮನಿಗೆ ಪೂರ್ವಜ್ಞಾತವಿರಲಿಲ್ಲ. ಘಟನೆಗಳು ಜರುಗುತ್ತ ಹೋದವು ಮತ್ತು ಭೀಷ್ಮನು ಪ್ರಪಂಚದ ತೊಡಕಿನಲ್ಲಿ ಸಿಕ್ಕಿಕೊಳ್ಳುತ್ತಾ ಹೋದನು.

ಧರ್ಮರಾಜನು ಮಾಡಿದ ರಾಜಸೂಯ ಯಾಗದ ನಂತರ ಅಗ್ರಪೂಜೆಯ ಮಾನ ಭೀಷ್ಮನದು ಎಂಬ ಶಿಶುಪಾಲನ ಹೇಳಿಕೆಯು ಯೋಗ್ಯವಿತ್ತು. ಆದರೆ ಆ ಸಮಯದಲ್ಲಿ ಭೀಷ್ಮನು ಹಿಂಜರಿದು ಆ ಮಾನವನ್ನು ಕೃಷ್ಣನಿಗೆ ಕೊಡಿಸಿದನು. ಅಂತಹ ಭೀಷ್ಮನು ವೃದ್ಧಾಪ್ಯದಲ್ಲಿ ಕೌರವರ ಸೇನಾಧಿಪತಿ ಪದವನ್ನು ಏತಕ್ಕಾಗಿ ಸ್ವೀಕರಿಸಿದನು ? ಯುದ್ಧದಿಂದ ಸರ್ವನಾಶವಾಗುವುದೆಂದು ಮೊದಲೇ ತಿಳಿದಿದ್ದ ವ್ಯಾಸನು ಸತ್ಯವತಿಗೆ, ಸೊಸೆಯಂದಿರ ಸಹಿತ ಚತುರ್ಥಾಶ್ರಮವನ್ನು ಅಂಗೀಕರಿಸಿ ಕಾಡಿಗೆ ಹೋಗು ಎಂದು ಹೇಳಿದ್ದನು. ಆ ರೀತಿ ಅವರೆಲ್ಲರು ಕಾಡಿಗೆ ಹೊರಟುಹೋದರು. ಭೀಷ್ಮನು ತನ್ನ ಮಲತಾಯಿಯಾದ ಸತ್ಯವತಿಗಿಂತ ಹಿರಿಯನು, ಅವನೂ ಈ ಮಾರ್ಗವನ್ನು ಅನುಸರಿಸಬಹುದಾಗಿತ್ತು. ಬಲರಾಮನು ತೀರ್ಥ ಯಾತ್ರೆಗೆ ತೆರಳಲಿಲ್ಲವೆ ? ಆದರೆ ಭೀಷ್ಮನು ಏಕೆ ಹಿಂದುಳಿದನು? ವೀರಶ್ರೇಷ್ಠನೆಂದು ಭೀಷ್ಮನ ಖ್ಯಾತಿಯಿತ್ತು. ಆದರೆ ಮಹಾಭಾರತದ ಭೀಷ್ಮಪರ್ವದ ಪೂರ್ವದಲ್ಲಿ ಭೀಷ್ಮನು ಯಾವ ಯುದ್ಧಗಳನ್ನು ಕೈಗೊಂಡಿದ್ದೂ ಕಾಣುವುದಿಲ್ಲ. ಅಂಬೆಯ ಸಂಬಂಧವಾಗಿ ಪರಶುರಾಮನ ಜೊತೆ ನಡೆದ ಕಾಳಗವು ಬಹುಶಃ ನಡೆದಿರಲಿಕ್ಕಿಲ್ಲ. ರಾಮನ ಮೊದಲು ಅವತರಿಸಿದ ಪರಶುರಾಮನಿಗೆ ಪ್ರತಿಯೊಂದು ಯುಗದಲ್ಲಿ ಕಾಣಿಸಲಾಗಿದೆ. ಇಬ್ಬರು ವೀರರ ಸೋಲಿಗೆ ನಿಮಿತ್ತ ಮಾತ್ರವಾಗಿ ಪರಶುರಾಮನ ಕಾರ್ಯದ ಉಲ್ಲೇಖ ಮೂಲ ಕಥಾವಸ್ತುವಿಗೆ ಅನಾವಶ್ಯಕವಾಗಿದೆ. ಈ ಕಲ್ಪಿತ ಯುದ್ಧವನ್ನುಳಿದು, ಭೀಷ್ಮನು ಹೋರಾಡಿದ ಬಗ್ಗೆ ಆಧಾರವಿಲ್ಲ. ಪಾಂಡು ಪ್ರಾಯಕ್ಕೆ ಬಂದ ನಂತರ ರಾಜನಾಗಿ ದಿಗ್ವಿಜಯವನ್ನು ಮಾಡಿದನು. ಆಗ ಭೀಷ್ಮನು ಪಾಂಡುವಿನ ಸಂಗಡ ಹೋಗಿರಲಿಲ್ಲ. ಧರ್ಮರಾಜನ ತಮ್ಮಂದಿರು ಕೈಗೊಂಡ ದಿಗ್ವಿಜಯದಲ್ಲಿ ಕೂಡ ಅವನು ಭಾಗವಹಿಸಿರಲಿಲ್ಲ.

ಭೀಷ್ಮನು ವಿರಾಟರಾಜನ ಗೋವುಗಳನ್ನು ಅಪಹರಿಸುವ ಒಣಸಂಚಿನಲ್ಲಿ ಸೇರಿಕೊಂಡಿದ್ದನು. ಆಗ ಅರ್ಜುನನೊಬ್ಬನೇ ಭೀಷ್ಮ ದ್ರೋಣ ಮೊದಲಾದವರನ್ನು ಸದೆಬಡೆದಿದ್ದನು. ಇಂತಹ ಭೀಷ್ಮನು ವೃದ್ಧಾಪ್ಯದಲ್ಲಿ ಸೇನಾಪತಿ ಪದದ ಹವ್ಯಾಸವನ್ನು ಏಕೆ ತಾಳಿದನು ?

ಭೀಷ್ಮನ ವಯಸ್ಸು ಭಾರತೀಯ ಯುದ್ಧದ ವೇಳೆಗೆ ತೀರ ಕಡಿಮೆ ಎಂದರೂ ತೊಂಬತ್ತರಿಂದ ನೂರಾ ಒಂದರವರೆಗೆ ಇತ್ತು. ವಯುಸ್ಸಿನ ಪಟ್ಟಿಯುನ್ನು ಈ ರೀತಿಯಾಗಿ ವಿವರಿಸಬಹುದು. ಭೀಷ್ಮನ ತಂದೆ ಶಂತನುವು ಮತ್ಸ್ಯಗಂಧೆಯನ್ನು ವಿವಾಹವಾದಾಗ ಭೀಷ್ಮನು ಯುವರಾಜನು. ಧನುರ್ವಿದ್ಯೆಯನ್ನು ಕಲಿತವನು. ಆಗ ಆತನ ವಯಸ್ಸು ಹದಿನಾರು ವರುಷ. ಆತನ ಮೊದಲಿನ ಮಲತಮ್ಮ ಚಿತ್ರಾಂಗದನು ಒಂದು ವ್ಯಕ್ತಿಗತ ವ್ಯಾಜ್ಯದಲ್ಲಿ ಕೊಲ್ಲಲ್ಪಟ್ಟನು. ಆತನ ತಮ್ಮನಾದ ವಿಚಿತ್ರವೀರ್ಯನು ವಿವಾಹ ಸಮಯದಲ್ಲಿ ಸುಮಾರು ಹದಿನಾರು ವರುಷದವನಿದ್ದರೆ ಮತ್ತು ಆತನು ಸತ್ಯವತಿಯ ವಿವಾಹದ ಎರಡು ವರ್ಷಗಳ ನಂತರ ಹುಟ್ಟಿದವನೆಂದು ಊಹಿಸಿದರೆ ವಿಚಿತ್ರವೀರ್ಯನ ಮದುವೆಯ ವೇಳೆಗೆ ಭೀಷ್ಮನ ವಯಸ್ಸು ಮೂವತ್ತುನಾಲ್ಕು ಇರಬೇಕು. ಮದುವೆಯಾದ ಸ್ವಲ್ಪ ಕಾಲದಲ್ಲಿ ವಿಚಿತ್ರವೀರ್ಯನು ತೀರಿಕೊಂಡನು.

ಕುರುವಂಶ ಅಳಿದುಹೋಗಬಾರದೆಂದು ಭೀಷ್ಮನು ವಿವಾಹಬದ್ಧನಾಗಬೇಕೆಂದು ಸತ್ಯವತಿಯು ಬೇಡಿಕೊಂಡಳು. ಆದರೆ ಭೀಷ್ಮನು ಅದಕ್ಕೆ ಕಿವಿಗೊಡಲಿಲ್ಲವಾದ್ದರಿಂದ ವ್ಯಾಸನ ಮತ್ತು ವಿಚಿತ್ರವೀರ್ಯನ ರಾಣಿಯರ ಸಂಬಂಧದಿಂದ ಧೃತರಾಷ್ಟ್ರ ಮೊದಲಾದ ಮೂರು ಮಕ್ಕಳು ಜನ್ಮತಾಳಿದರು. ಭೀಷ್ಮನ ವಯಸ್ಸು ಧೃತರಾಷ್ಟ್ರ ಜನ್ಮದ ಕಾಲಕ್ಕೆ ಮೂವತ್ತೈದು (೩೫) ಪಾಂಡುವಿನ ಜನ್ಮದ ಕಾಲಕ್ಕೆ ಮೂವತ್ತಾರಿರಬೇಕು (೩೬). ಪಾಂಡುವಿನ ರಾಜ್ಯಾಭಿಷೇಕ ಮತ್ತು ವಿವಾಹ ಆತನ ಹದಿನಾರನೇ ವಯಸ್ಸಿಗೆ ಅದವು ಎಂದು ಭಾವಿಸಿದರೆ ಆಗ ಭೀಷ್ಮನ ವಯಸ್ಸು ಐವತ್ತೆರಡು (೫೨). ಪಾಂಡುವು ಹಿಮಾಲಯಕ್ಕೆ ಹೋದ ವರುಷವೇ ಧರ್ಮನು ಹುಟ್ಟಿದನು. ಮುಂದಿನ ವರುಷದಲ್ಲಿ ಭೀಮನು, ಅದರ ಮುಂದಿನ ವರುಷದಲ್ಲಿ ಅರ್ಜುನನು ಎಂದು ಗ್ರಹಿಸಿದರೆ ಅರ್ಜುನನ ಜನ್ಮಕಾಲಕ್ಕೆ ಭೀಷ್ಮನ ವಯಸ್ಸು ಐವತ್ತೈದು (೫೫) ಇರಬೇಕು. ಅರ್ಜುನನ ವಯಸ್ಸು ವಿವಾಹಕಾಲದಲ್ಲಿ ಆತನ ತಂದೆ ತಾತರಂತೆ ಹದಿನಾರರಷ್ಟೇ ಇರಲಿಕ್ಕಿಲ್ಲವೆಂದು ಅವನು ಮಾಡಿದ ದ್ರುಪದ ಪರಾಭವ ಮುಂತಾದ ಸಂಗತಿಗಳಿಂದ ತಿಳಿದುಬರುತ್ತದೆ. ಹೀಗಿದ್ದರೂ ಆತನ ವಯಸ್ಸು ವಿವಾಹ ಕಾಲದಲ್ಲಿ ಹದಿನಾರೇ ಇತ್ತೆಂದು ತಿಳಿದರೂ ಆಗ ಭೀಷ್ಮನ ವಯಸ್ಸು ಎಪ್ಪತ್ತೊಂದು (೭೧) ಆಗುತ್ತದೆ. ದ್ರೌಪದಿ ಸ್ವಯಂವರದ ನಂತರ ಪಾಂಡವರು ಇಂದ್ರಪ್ರಸ್ಥಕ್ಕೆ ಹೋದರು. ಅಲ್ಲಿಂದ ಅರ್ಜುನನು ಮೊದಲನೆಯ ವನವಾಸಕ್ಕೆ ಹೋದನು. ವನವಾಸದ ಕೊನೆಯಲ್ಲಿ ಆತನು ದ್ವಾರಕೆಗೆ ಹೋಗಿ ಸುಭದ್ರೆಯನ್ನು ಮದುವೆಯಾಗಿ ಇಂದ್ರಪ್ರಸ್ಥಕ್ಕೆ ಬಂದನು. ಆನಂತರ ಅಭಿಮನ್ಯು ಹುಟ್ಟಿದನು. ಅರ್ಜುನನ ಮೊದಲಿನ ವನವಾಸ ಹನ್ನೆರಡು ವರುಷದ್ದಿತ್ತೆಂದು ಮಹಾಭಾರತದಲ್ಲಿ ಹೇಳಿದೆ. ಆ ವನವಾಸ ಹನ್ನೆರಡೇ ತಿಂಗಳಿದ್ದಿತ್ತೆಂದು ತಿಳಿದಲ್ಲಿ ಅಭಿಮನ್ಯುವು ಅರ್ಜುನನಿಗೆ ಹದಿನೆಂಟನೆಯ

ಪ್ರಾಯದಲ್ಲಿ ಹುಟ್ಟಿದನೆಂದು ಆಗುತ್ತದೆ. ಇಂದ್ರಪ್ರಸ್ಥದಲ್ಲಿ ರಾಜಸೂಯ ಯಜ್ಞಕಾಲಕ್ಕೆ ನಡೆದ ಪಾಂಡವರ ವೈಭವದ ಪ್ರದರ್ಶನವನ್ನು ಕಂಡು, ದುರ್ಯೋಧನನು ಮತ್ಸರದಿಂದ ಇನ್ನೊಂದು ಯಾಗವನ್ನು ಮಾಡಿದನು. ಅಷ್ಟರಿಂದ ತೃಪ್ತಿಹೊಂದದೆ ಧುರ್ಯೋಧನನು ಪಾಂಡವರನ್ನು ದ್ಯೂತಕ್ಕಾಗಿ ಕರೆತಂದನು. ದ್ಯೂತದಲ್ಲಿ ಸರ್ವಸ್ವವನ್ನು ಸೋತು ಪಾಂಡವರು ವನವಾಸಕ್ಕೆ ಹೋದರು. ಆಗ ಅಭಿಮನ್ಯು ಮೂರು ವರುಷದವನಿರಬೇಕು. ವನವಾಸ ಮತ್ತು ಅಜ್ಞಾತವಾಸ ಮುಗಿದ ನಂತರ ಉತ್ತರೆಯನ್ನು ವಿವಾಹವಾದಾಗ ಅಭಿಮನ್ಯುವಿನ ವಯಸ್ಸು ಹದಿನಾರು (೧೬). ಅರ್ಜುನನ ವಯಸ್ಸು ಮೂವತ್ನಾಲ್ಕು (೩೪) ಮತ್ತು ಭೀಷ್ಮನ ವಯಸ್ಸು ಎಂಬತ್ತೊಂಬತ್ತು (೮೯) ಎಂದು ನಿಶ್ಚಿತವಾಗುತ್ತದೆ. ಅಭಿಮನ್ಯುವಿನ ವಿವಾಹಕಾಲದಿಂದ ಯುದ್ಧ ಪ್ರಾರಂಭವಾಗುವ ಕಾಲ ಒಂದು ವರುಷದ್ದಿರಬೇಕೆಂದು ಭಾವಿಸಿದರೆ ಯುದ್ಧಕಾಲದಲ್ಲಿ ಭೀಷ್ಮನ ವಯಸ್ಸು ತೊಂಬತ್ತು. ಅರ್ಜುನನ ಪ್ರಥಮ ವನವಾಸ ಹನ್ನೆರಡು ವರುಷದ್ದಿತ್ತೆಂದು ತಿಳಿದರೆ ಭೀಷ್ಮನ ವಯಸ್ಸು ಯುದ್ಧ ಕಾಲದಲ್ಲಿ ನೂರಾ ಒಂದರಷ್ಟು (೧೦೧) ಆಗುತ್ತದೆ. ಈ ಕಾಲ ಗಣನೆಯನ್ನು ಕನಿಷ್ಠ ಮೊತ್ತಗಳನ್ನು ಹಿಡಿದು ಎಣಿಸಲಾಗಿದೆ. ಭೀಷ್ಮನ ವಯಸ್ಸು ಇದಕ್ಕಿಂತ ಕಡಿಮೆಯಾಗಲಾರದು. ಸಮಗ್ರ ಕುರುಕುಲದಲ್ಲಿ ಆತನು ಹಿರಿಯವನು. ಭೀಷ್ಮನಿಗೆ "ಕುರುವೃದ್ಧ", "ಪಿತಾಮಹ" ಎಂಬ ವಿಶೇಷಣಗಳನ್ನು ಆಗಾಗ್ಗೆ ಬಳಸಲಾಗಿದೆ. ಈ ಇಳಿ ವಯಸ್ಸಿನಲ್ಲಿ ಸೇನಾಪತಿ ಪದವನ್ನು ತಾಳಿದ್ದು, ಭೀಷ್ಮನ ಯುದ್ಧಪೂರ್ವ ಚರಿತ್ರೆಗೆ ಸಂಪೂರ್ಣವಾಗಿ ವಿಸಂಗತವೆನಿಸುತ್ತದೆ.

ದುರ್ಯೋಧನನು ಭೀಷ್ಮನ ಬಳಿ ಬಂದು "ತಾವು ಹಿರಿಯರು, ಖ್ಯಾತವೀರರು. ತಾವು ಸೇನಾಧಿಪತಿಗಳಾಗಬೇಕು" ಎಂದನು. ಭೀಷ್ಮನು ತನ್ನದೆಲ್ಲವನ್ನೂ ತ್ಯಜಿಸಿದ್ದನು. ಆದರೆ ಕುರುಕುಲದ ರಕ್ಷಣೆಯ ದೊಡ್ಡ ಹೊಣೆಯನ್ನು ಅಂಗೀಕರಿಸಿದ್ದನು. ಈ ರಕ್ಷಣೆಗಾಗಿ ಆತನಿಗೆ ಯಾರಕೂಡ ಹೋರಾಡಬೇಕಾಗಲಿಲ್ಲ. ಆದರೆ ಎರಡು ತಲೆ ಮಾರುಗಳ ಪ್ರಪಂಚವನ್ನು ಆತನು ನಿರ್ವಹಿಸಿದನು. ಕಿರಿಯರ ರಕ್ಷಣೆಯನ್ನು ಮಾಡಿದನು. ಅಂಧ, ಮುಂತಾದ ವಿಕಲರ ವಿವಾಹಗಳನ್ನು ನೆರವೇರಿಸಿದನು. ಹಸ್ತಿನಾಪುರದ ರಾಜಮನೆತನದಲ್ಲಿ ಮೂರು ತಲೆಮಾರುಗಳಲ್ಲಿ ಪ್ರಥಮತಃ ಕೌರವ ಪಾಂಡವರಂತಹ ಅನೇಕ ರಾಜಪುತ್ರರು ಜನ್ಮ ತಾಳಿದುದರಿಂದ ಅವರನ್ನು ಪೋಷಿಸಿ, ಶಸ್ತ್ರವಿದ್ಯೆಯ ಏರ್ಪಾಟನ್ನು ಮಾಡಿದನು. ಈ ರೀತಿ ಭೀಷ್ಮನು ಎರಡು ತಲೆಮಾರುಗಳ ಕಾಲ ನಿರಂತರವಾಗಿ ತನ್ನ ಕರ್ತೃತ್ವವನ್ನು ಬೆಳಗಿದನು.

ಶಕುನಿಯ ಆಗಮನವು ಭೀಷ್ಮನ ಅಧಿಕಾರಕ್ಕೆ ಮೊದಲನೆಯ ಎಡರಾಯಿತು. ಶಕುನಿಯು ತನ್ನ ಅಂಧಭಾವನ ಹಾಗೂ ಕಣ್ಣು ಕಟ್ಟಿಕೊಂಡು ಜೀವಿಸುವ ತನ್ನ ಸಹೋದರಿಯ ಹಿತೈಷಿಯಾಗಿದ್ದನು. ಶಕುನಿಯು ಇರದಿದ್ದರೆ ಭೀಷ್ಮನು ತನ್ನ ಅಧಿಕಾರದಲ್ಲಿ ರಾಜ್ಯವನ್ನು ಪಾಲುಮಾಡಿ ಕೊಡುತ್ತಿದ್ದನು. ಆದರೆ ಕೌರವ ಪಾಂಡವರು ವಯಸ್ಸಿಗೆ ಬಂದಂತೆ ಜಗಳದ ಅತಿರೇಕವಾಯಿತು. ಯುದ್ಧವಾಗದೆ ಜಗಳ ನಿಲ್ಲದೆಂದು ತೋರಿತು. ನಿಜವಾಗಿ ಅವರು

ಭೀಷ್ಮನ ಮಕ್ಕಳು, ಮೊಮ್ಮಕ್ಕಳೇ ಆಗಿದ್ದರೆ ಆತನು ಕೂಡ ಸತ್ಯವತಿಯ ಹಾಗೆಯೇ ಕಾಡಿಗೆ ಹೋಗುತ್ತಿದ್ದನು. ತನಗಾಗಿ ಹೂಡಿದ ಪ್ರಪಂಚದಿಂದ ವಯಸ್ಸಾದಂತೆ ವಿರಕ್ತನಾಗುವ ರೂಢಿ ಇದೆ. ಆದರೆ ಪರರ ಹೊಣೆ ಹೊತ್ತಮೇಲೆ ಮನಸ್ಸು ಅದರಲ್ಲಿ ಹೆಚ್ಚಾಗಿ ತೊಡಗುತ್ತದೆ. ಸಾಮಾನ್ಯವಾಗಿ ಮಕ್ಕಳು ಮುಪ್ಪಾದವರನ್ನು ಬದಿಗೆ ತಳ್ಳುತ್ತಾರೆ. ಅದಕ್ಕಾಗಿ ತಾವಾಗಿಯೇ ನಿವೃತ್ತರಾಗುವ ಬಯಕೆಯಾಗುವುದು ಸಹಜ. ಆದರೆ ದೇಶಕ್ಕಾಗಿ, ಸಂಸ್ಥೆಗಾಗಿ, ಜನಸೇವೆಗಾಗಿ ಸಂಪೂರ್ಣವಾಗಿ ವಹಿಸಿಕೊಂಡ ಜನರು ವಾನಪ್ರಸ್ಥಾಶ್ರಮವನ್ನು ಅಂಗೀಕರಿಸಿದ್ದು ಹೆಚ್ಚಾಗಿ ಕಂಡುಬರುವುದಿಲ್ಲ. ಮುಪ್ಪಿನಲ್ಲಿ ಸ್ವಂತದ ಸಂಸಾರವನ್ನು ತ್ಯಜಿಸದಿದ್ದರೆ ಜನರು "ಮುದುಕನ ಆಸೆ ತೀರದು!" ಎಂದು ಆಡಿಕೊಳ್ಳುತ್ತಾರೆ. ಆದರೆ ತನ್ನ ಪ್ರಪಂಚದಿಂದ ವಿರಕ್ತನಾಗಿ ಪರರ ಪ್ರಪಂಚದ ಹೊಣೆಯನ್ನು ವಹಿಸಿದಲ್ಲಿ ಈ ಬಂಧನವು ಅನ್ವಯಿಸುವುದಿಲ್ಲ. ಅಮರಣವಾಗಿ ಕುರುಕುಲದ ರಕ್ಷಣೆ ಮಾಡುವುದೇ ಭೀಷ್ಮನ ಭೂಮಿಕೆ ಇತ್ತು. ತಾನು ಸೇನಾಪತಿಪದವನ್ನು ವಹಿಸಿ ಕರ್ಣನ ಮನವನ್ನು ನೋಯಿಸಿ ಅವನನ್ನು ಬದಿಗೆ ತಳ್ಳುವುದರಲ್ಲಿಯೂ ಕೂಡ ಇದೇ ಉದ್ದೇಶವಿರಬೇಕು.

ತನ್ನ ಆಜ್ಞೆಯನ್ನು ಪಾಲಿಸದ ರಾಜಪುತ್ರರಿಗೆ ರಾಜನು ದಂಡಿಸಬಹುದಿತ್ತು. ಆದರೆ ಭೀಷ್ಮನಿಗೆ ಅದು ಸಾಧ್ಯವಾಗಲಿಲ್ಲ. ಸತ್ಯವತಿಯ, ಅವಳ ಮಕ್ಕಳು ಮೃತರಾದಾಗ, ಭೀಷ್ಮನಿಗೆ ಪ್ರತಿಜ್ಞೆಯನ್ನು ಬಿಟ್ಟು, ವಿವಾಹವಾಗಿ ಪಟ್ಟವನ್ನೇರುವುದಕ್ಕೆ ಒತ್ತಾಯಪಡಿಸಿದಳು. ಭೀಷ್ಮನಿಗೆ ಕುರುಕುಲದ ಬಗ್ಗೆ ಇಷ್ಟೊಂದು ಆತ್ಮೀಯತೆ ಇದ್ದಿದ್ದರೆ ಆತನು ಸತ್ಯವತಿಯ ಆ ಮಾತನ್ನು ಏಕೆ ಅಂಗೀಕರಿಸಲಿಲ್ಲ? ಶಿಶುಪಾಲನು ಇದನ್ನೇ ಪ್ರಶ್ನಿಸಿದನು. ಹಿಂದಿನ ಕರ್ತವ್ಯದ ಬಗ್ಗೆ ಇತ್ತ ಹೇಳಿಕೆಯು, ಇಲ್ಲಿ ಅನ್ವಯಿಸುತ್ತದೆ. ಭೀಷ್ಮನು ಒಂದು ಘೋರ ಪ್ರತಿಜ್ಞೆಯನ್ನು ಮಾಡಿ ತಂದೆಯಿಂದ ಹಾಗೂ ಇತರ ಅನೇಕರಿಂದ ತುಂಬ ಮೆಚ್ಚಿಗೆಯನ್ನು ಪಡೆದಿದ್ದನು. ತನ್ನದೇ ಆದ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಪ್ರಸ್ಥಾಪಿಸಿದ್ದನು. ಜನರಲ್ಲಿ ತನ್ನ ಬಗ್ಗೆ ಕೆಲವು ಅಪೇಕ್ಷೆಗಳನ್ನು ಉಂಟುಮಾಡಿದ್ದನು. ಇವೆಲ್ಲವುಗಳನ್ನು ಪೂರೈಸುವುದು ಕಡೆಯವರೆಗೂ ಆತನಿಗೆ ಅವಶ್ಯಕವಿತ್ತು. ಭೀಷ್ಮನ ಈ ಸ್ಥಿತಿಯು ಬ್ರಹ್ಮಚರ್ಯದ ಪಣವನ್ನು ಮಾಡಿ ಕ್ಯಾಥೋಲಿಕರ ಮಠದಲ್ಲಿ ಸೇರ್ಪಡೆ ಆಗುವವರ ಪರಿಸ್ಥಿತಿಯಂತೆ ಇತ್ತು. ಮನಸ್ಸಿನಲ್ಲಿ ತೊಟ್ಟ ಪಣವನ್ನು ಮುರಿಯಬಹುದು. ಆದರೆ ಹತ್ತಾರು ಜನರ ಮುಂದೆ ನಿರ್ಮಿಸಿದ ದೃಶ್ಯಕ್ಕೆ ಹೊಂದಿಕೊಳ್ಳಲೇಬೇಕಾಗುತ್ತದೆ. ತನ್ನದೇ ಆದ ಒಂದು ವಿಶಿಷ್ಟ ಭೂಮಿಕೆಯನ್ನು ಅಂಗೀಕರಿಸಿದ ಮೇಲೆ ಅದನ್ನು ಬಿಡುವುದು ಸಾಧ್ಯವಾಗುವುದಿಲ್ಲ. ಅಂತರ್ಬಾಹ್ಯವಾಗಿ ಆ ಹಿನ್ನೆಲೆ ವಹಿಸುವುದು ಕಡ್ಡಾಯವಾಗುತ್ತದೆ. ಯಾವ ಕಾರ್ಯಕ್ಕಾಗಿ ಆ ಭೂಮಿಕೆಯನ್ನು ಸ್ವೀಕರಿಸಲಾಗುವುದೋ, ಅದರಿಂದ ಆ ಕಾರ್ಯದ ಪೋಷಣೆಯಾಗುವ ಬದಲು ಸರ್ವನಾಶವಾಗುತ್ತದೆ, ಎಂದು ತಿಳಿದರೂ ಆ ಭೂಮಿಕೆಯನ್ನು ಬಿಡಲು ಆತನು ಅಸಮರ್ಥನಾಗುತ್ತಾನೆ. ಗಾಂಧಾರಿಯು ಕಣ್ಣುಕಟ್ಟಿಕೊಂಡು ಬಾಳುವುದು, ಭೀಷ್ಮನ ಬ್ರಹ್ಮಚರ್ಯ ಪ್ರತಿಜ್ಞೆ, ರಾಮನು ವನವಾಸಕ್ಕೆ ಹೋಗುವುದು, ಇವೆಲ್ಲ ಇದಕ್ಕೆ

ಉದಾಹರಣೆಗಳೆಂದು ತೋರಿಸಬಹುದು. ಆಗಿನ ಕಾಲದಲ್ಲಿ ಪ್ರತಿಜ್ಞಾಪಾಲನೆ ಎಂದರೆ ಒಂದು ಪ್ರಭಾವಿ ಗುಣವೆನಿಸುತ್ತಿತ್ತು. ಒಂದೊಂದು ಸಲ ಆ ಪ್ರತಿಜ್ಞೆಯ ಉದ್ದೇಶವೇ ಹಿಂದುಳಿಯುತ್ತಿತ್ತು. ಪತಿ ನಿಧನದ ನಂತರ ಸತಿ ಹೋಗುವ ಬಹು ಸಂಖ್ಯ ಸ್ತ್ರೀಯರಿಗೆ ಇದೇ ತರಹದ ಕಡ್ಡಾಯ ಇರಬೇಕು.

ಆಚಾರದ ಹಿನ್ನೆಲೆ ಏನಿರಬೇಕು? ಅದರಿಂದ ಏನು ಸಾಧ್ಯವಾಗುವುದು? ಆ ಆಚರಣೆಯಿಂದ ಯಾವ ತತ್ವಗಳ ಪೋಷಣೆಯಾಗುವುದು? ಇಂತಹ ವಿಮರ್ಶೆಯನ್ನು ನಂತರ ಉದಯಿಸುವ ಟೀಕಾಕಾರರು ಸುಲಭವಾಗಿ ಮಾಡಬಹುದು. ಆದರೆ ಆಯಾ ಪ್ರಸಂಗಗಳಲ್ಲಿ ಇಂತಹ ಭೂಮಿಕೆಗೆ ತುತ್ತಾದ ವ್ಯಕ್ತಿಗೆ ಅದು ಸಾಧ್ಯವಿರುವುದಿಲ್ಲ. ಭೂಮಿಕೆಗಳನ್ನು ದೃಢವಾಗಿ ನೆರವೇರಿಸುವಾಗ ಒಂದು ತರಹದ ಪ್ರವಾಹ ಪತಿತ್ವವು ಗೋಚರವಾಗುತ್ತದೆ. ಭೀಷ್ಮನ ಸ್ಥಿತಿಯು ಇದೇ ರೀತಿ ಅಗಿರಲಿಕ್ಕಿಲ್ಲವೇ? ಇಂತಹ ಪ್ರಸಂಗದ ಮೂಲಕವೇ ನರಶ್ರೇಷ್ಠನು ಕೂಡ ಅಸಹಾಯನಾಗಿ ಕಾಣುತ್ತಾನೆ.

ದುರ್ಯೋಧನನಿಗೆ ಯುದ್ಧಕ್ಕೆ ಪ್ರೋತ್ಸಾಹಿಸುವವರು ಮತ್ತು ಅವನ ಪಕ್ಷವನ್ನು ಬಲವಾಗಿ ಎತ್ತಿಹಿಡಿಯುವವರು ಶಕುನಿ, ದುಶ್ಶಾಸನ ಮತ್ತು ಕರ್ಣ. ಶಕುನಿ ಮತ್ತು ದುಶ್ಶಾಸನರನ್ನು ಬದಿಗೆ ಸರಿಸುವುದು ಭೀಷ್ಮನಿಗೆ ಸಾಧ್ಯವಾಗಲಿಲ್ಲ. ಆದರೆ ಕರ್ಣನನ್ನು ಉಪಾಯದಿಂದ ಬದಿಗೊತ್ತಿ ಭೀಷ್ಮನು ಹತ್ತು ದಿನಗಳವರೆಗೆ ಅಣಕು ಯುದ್ಧ ಮಾಡಿದನು. ಕುಲಕ್ಕೆ ಹಿರಿಯನಾದರೂ ಪಾಂಡವರು ಭೀಷ್ಮನಿಗೆ ಸೇನಾಪತಿ–ಪದವನ್ನು ಕೊಡಲಿಲ್ಲ. ಆದರೆ ಆ ಪದವನ್ನು ದುರ್ಯೋಧನನು ಭೀಷ್ಮನಿಗೆ ಸಭ್ಯಾಚಾರವಾಗಿ ಕೊಟ್ಟನು.

ಭೀಷ್ಮನು ಆ ಸೇನಾಪತಿ ಪದವನ್ನು ಸ್ವೀಕರಿಸಲಿಕ್ಕಿಲ್ಲವೆಂದು ದುರ್ಯೋಧನನು ಭಾವಿಸಿರಬೇಕು. ಆದರೆ ಭೀಷ್ಮನು ಅದಕ್ಕೆ ಕೂಡಲೆ ಸಮ್ಮತಿಸಿ ಅದನ್ನು ಸ್ವೀಕರಿಸಿದನು. ಈ ರೀತಿ ಭೀಷ್ಮನು ಸಾಯುವವರೆಗೂ ದುರ್ಯೋಧನನ ಕೈ ಕಟ್ಟಿದಂತಾಯಿತು. ಭೀಷ್ಮನ ಗೂಢಯುದ್ಧವು ದುಸ್ತರವಿರಲಿಲ್ಲ. ಆದರೆ ಭೀಷ್ಮನು ಕುಲವೃದ್ಧನಾದ್ದರಿಂದ ಅವಧ್ಯನಿದ್ದನು. ಆತನ ವಯಸ್ಸು ಆತನ ಆಪ್ತತ್ವ ಗಮನಿಸಿದಲ್ಲಿ ಅವನೊಡನೆ ಯುದ್ಧಮಾಡುವುದು ಅಸಾಧ್ಯವಿತ್ತು. ದುರ್ಯೋಧನನಿಗೆ ಒಂದು ವಿಧದ ಇಕ್ಕಟ್ಟಿನಲ್ಲಿ ಮತ್ತು ಪಾಂಡವರಿಗೆ ಇನ್ನೊಂದು ವಿಧದ ಇಕ್ಕಟ್ಟಿನಲ್ಲಿ ತಂದು, ಸಾಧ್ಯವಾದಮಟ್ಟಿಗೆ ಯುದ್ಧವನ್ನೇ ನಿಲ್ಲಿಸುವ ಪ್ರಯತ್ನ ಭೀಷ್ಮನದಿತ್ತು. ಇದು ಭೀಷ್ಮನ ಚಾಣಕ್ಯ ನೀತಿಯೇ ಸರಿ. ಪಾಂಡವರು ತನ್ನನ್ನು ಕೊಲ್ಲಲಾರರು ಎಂಬ ಆತನ ಊಹೆ ಯೋಗ್ಯವಿತ್ತು. ಪಾಂಡವರಿಗೆ, ಯುದ್ಧದಲ್ಲಿ ದುರ್ಯೋಧನನನ್ನು, ಆತನ ಮಕ್ಕಳನ್ನು, ತಮ್ಮಂದಿರನ್ನು ಸದೆಬಡೆಯುವುದರಲ್ಲಿ ಎಳ್ಳಷ್ಟೂ ಅನ್ಯಾಯವೆನಿಸಿರಲಿಲ್ಲವೆಂದು ತೋರುತ್ತದೆ.

ಅರ್ಜುನನಿಗಾದರೂ ಭೀಷ್ಮದ್ರೋಣರನ್ನು ಹೇಗೆ ಕೊಲ್ಲುವುದು ಎಂಬ ಪ್ರಶ್ನೆಯಿತ್ತು.

ಕಥಂ ಭೀಷ್ಮಮಹಂ ಸಂಖ್ಯೆ ದ್ರೋಣಂ ಚ ಮಧುಸೂದನ ।
ಈಷುಭಿಃ ಪ್ರತಿಯೋತ್ಸ್ಯಾಮಿ ।

.ಕೃಷ್ಣನು ಗೀತೆಯ ಮೂಲಕವಾಗಿ ಅರ್ಜುನನನ್ನು ಉಪದೇಶಿಸಿದ್ದು, ಈ ಬಾಬತ್ತಿನಲ್ಲಿ ವ್ಯರ್ಥವಾಯಿತು. ಭೀಷ್ಮನು ಪಾಂಡವರಿಗೆ ಮಾತ್ರ ಅವಧ್ಯನಿದ್ದನೇ ಹೊರತು ಪಾಂಡವರ ಆಪ್ತರಿಗೆ ಇರಲಿಲ್ಲ. ಭೀಷ್ಮನ ವಧಕ್ಕಾಗಿ ಶಿಖಂಡಿಯು ಜನ್ಮ ತಾಳಿದ್ದನು. ತನ್ನ ತಂದೆಯಾದ ದ್ರುಪದನಿಗೆ ಸೋಲಿಸಿ ಆತನ ಆರ್ಧ ರಾಜ್ಯವನ್ನು ಕಿತ್ತುಕೊಂಡ ದ್ರೋಣನ ವಧಕ್ಕಾಗಿ ಧೃಷ್ಟದ್ಯುಮ್ನನು ಜನ್ಮ ತಾಳಿದ್ದನು. ಅವರಿಬ್ಬರೂ ತಮ್ಮ ಕಾರ್ಯಗಳನ್ನು ಪೂರೈಸಿದರು.

ಅರ್ಜುನನೇ ಭೀಷ್ಮನನ್ನು ವಧಿಸಬೇಕು ಎಂದು ಕೃಷ್ಣನು ಬಹುಪರಿಯಾಗಿ ಪ್ರಯತ್ನಿಸಿದ. ಮಹಾಭಾರತದಲ್ಲಿ ಹೇಳಿದಂತೆ ಕೃಷ್ಣನೇ ಸ್ವತಃ ಯುದ್ಧದ ಮೂರನೆಯ ಮತ್ತು ಒಂಭತ್ತನೆಯ ದಿನ ಭೀಷ್ಮನ ಮೇಲೆ ಸಾಗಿಹೋಗಿದ್ದನು. ಕೃಷ್ಣನು ಯುದ್ಧದ ಮೂರನೆಯ ದಿವಸ ಸಾಗಿಹೋಗಿದ್ದ ಪ್ರಸಂಗವು ನಂತರ ಮಹಾಭಾರತದಲ್ಲಿ ಸೇರಿಸಿದಂತಿದೆ. ಒಂಬತ್ತನೆಯ ದಿನ ಕೃಷ್ಣನು ಕೈಯಲ್ಲಿ ಚಾವಟಿಯನ್ನು ಎತ್ತಿಕೊಂಡು ಆತನ ಮೇಲೆ ಧಾವಿಸಿದ್ದನು. ಆಗ ಅರ್ಜುನನು ಕೃಷ್ಣನ ಕಾಲಿಗೆರಗಿ ಅವನನ್ನು ಹಿಂದೆ ಕರೆಯಿಸಿದನು. ಅರ್ಜುನನು, "ನಾನು ಭೀಷ್ಮನನ್ನು ಕೊಲ್ಲಲಾರೆ. ಆದರೆ ಅವನನ್ನು ರಥದಿಂದ ಕೆಳಗೆ ಕೆಡವುತ್ತೇನೆ" ಎಂಬ ವಚನವನ್ನು ಧರ್ಮರಾಜನಿಗೆ ಮತ್ತು ಕೃಷ್ಣನಿಗೆ ಕೊಟ್ಟನು. ಮಾರನೆಯ ದಿವಸ ವಚನದಂತೆ ವರ್ತಿಸಿದನು.

ಭೀಷ್ಮನು ಮಹಾವೀರನೆಂದು ಹೆಸರಾಗಿದ್ದನು. ಆದ್ದರಿಂದ ತನ್ನ ಪತನವು ಮಹಾವೀರನಿಂದಲೇ ಆಯಿತೆಂಬ ಖ್ಯಾತಿಯು ಆತನಿಗೆ ಬೇಕಿತ್ತು. ಆ ಮಹಾವೀರನೆಂದರೆ ಅರ್ಜುನ. ಇದೇ ಸಂಗತಿಯು ಅರ್ಜುನನಿಗೆ ಬೇಕಿರಲಿಲ್ಲ. ಶಿಖಂಡಿಯನ್ನು ಮುಂದಿಟ್ಟು ಭೀಷ್ಮನ ಮೇಲೆ ಅರ್ಜುನನು ಬಾಣಗಳನ್ನು ಬಿಡಬೇಕಾಯಿತು. "ನನಗೆ ತಾಗುವ ಬಾಣಗಳು ಶಿಖಂಡಿಯವಲ್ಲ. ಅವು ಅರ್ಜುನನ ಬಾಣಗಳು" ಎಂದು ಹೇಳುವ ಅವಕಾಶ ಭೀಷ್ಮನಿಗೆ ಕೊಟ್ಟಂತಾಯಿತು.

ಯುದ್ಧ ಹದಿನೆಂಟು ದಿವಸದವರೆಗೆ ನಡೆಯಿತು. ಅದರಲ್ಲಿ ಮೊದಲಿನ ಹತ್ತು ದಿನಗಳ ಕಾಲ ನಿಜವಾದ ಕಾಳಗವು ನಡೆಯಲಿಲ್ಲ. ಈ ಹತ್ತು ದಿನಗಳ ಕಾಲ ಭೀಷ್ಮನು ಯುದ್ಧವನ್ನು ತಡೆಯುವ ಪ್ರಯತ್ನದಲ್ಲಿಯೇ ಇದ್ದನೆಂದು ಮುಂದಿನ ಯುದ್ಧ ವೃತ್ತಾಂತದಿಂದ ತಿಳಿಯುತ್ತದೆ.

ಯುದ್ಧದ ಮೊದಲನೆಯ ದಿವಸ–ಕೌರವರ ಅಗಣಿತ ಸೈನ್ಯವನ್ನು ಕಂಡು ಧರ್ಮನು ಮೊದಲು ಹತಾಶನಾಗುತ್ತಾನೆ. ಆರ್ಜುನನು ಅವನನ್ನು ಹುರಿದುಂಬಿಸುತ್ತಾನೆ. ಆದರೆ ಅವನೇ ಬಲಗುಂದುತ್ತಾನೆ. ಕೃಷ್ಣನು ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸುತ್ತಾನೆ. ಧರ್ಮನು ಕೌರವರ ಸೈನ್ಯದತ್ತ ಹೋಗಿ ಭೀಷ್ಮ ದ್ರೋಣರಿಗೆ ವಂದಿಸಿ ಬರುತ್ತಾನೆ. ಯುಯುತ್ಸು, ಪಾಂಡವರ ಪಕ್ಷಕ್ಕೆ ಸೇರುತ್ತಾನೆ. ದೊಡ್ಡ ಸಂಗ್ರಾಮ ನಡೆಯುತ್ತದೆ. ಉತ್ತರನು ಕೊಲ್ಲಲ್ಪಡುತ್ತಾನೆ. ಮೊದಲನೆಯ ದಿವಸ ವಿಜಯದ ಭಾಗ ಕೌರವರ ಪಕ್ಷಕ್ಕೆ.

ಎರಡನೆಯ ದಿವಸ–ಅರ್ಜುನ, ಭೀಷ್ಮ, ದ್ರೋಣ–ಧೃಷ್ಟದ್ಯುಮ್ನ ಇವರಲ್ಲಿ ಯುದ್ಧವಾಗುತ್ತದೆ. ಭೀಷ್ಮನು ಕಲಿಂಗರಾಜನನ್ನು ಮತ್ತು ಆತನ ಮಗನನ್ನು ಕೊಲ್ಲುತ್ತಾನೆ. ಪಾಂಡವರಿಗೆ ಒಳ್ಳೆಯ ದಿನ.

ಮೂರನೆಯ ದಿವಸ–ಭೀಮನು ದುರ್ಯೋಧನನನ್ನು ಮೂರ್ಛೆಗೊಳಿಸುತ್ತಾನೆ. ಸಾರಥಿಯು ದುರ್ಯೋಧನನನ್ನು ರಥದಲ್ಲಿಂದ ಓಡಿಸಿಕೊಂಡು ಹೋಗುತ್ತಾನೆ. ಕೌರವರ ಸೈನ್ಯ ಹಿಂದಿರುಗುತ್ತದೆ. ದುರ್ಯೋಧನನು ಮೂರ್ಛೆಯಿಂದ ಎಚ್ಚೆತ್ತು ಸೈನ್ಯವನ್ನು ಸರಿಪಡಿಸುತ್ತಾನೆ. ಭೀಷ್ಮನನ್ನು ದೂಷಿಸುತ್ತಾನೆ. ಅದಕ್ಕೆ ಭೀಷ್ಮನು ಉತ್ತರಿಸುತ್ತಾನೆ. "ಪಾಂಡವರು ಅಜಿಂಕ್ಯರು. ನನ್ನಿಂದ ಆಗುವಷ್ಟು ಪ್ರಯತ್ನಗಳನ್ನು ನಾನು ಮಾಡುವೆ." ಭೀಷ್ಮನು ಆಡಿದಂತೆ ಮಾಡುತ್ತಾನೆ. ಕೃಷ್ಣನು ಅರ್ಜುನನನ್ನು ದೂಷಿಸಿ ರಥದಿಂದ ನೆಗೆದು ಚಕ್ರವನ್ನು ಧರಿಸಿ ಭೀಷ್ಮನ ಮೇಲೆ ಪ್ರಹಾರ ಮಾಡಲು ಹವಣಿಸುತ್ತಾನೆ. ಅರ್ಜುನನು ಆತನನ್ನು ಹಿಂದೆ ಕರೆದು ತರುತ್ತಾನೆ. ಈ ದಿನ ಪಾಂಡವರಿಗೆ ಜಯ.

ನಾಲ್ಕನೆಯ ದಿವಸ – ಎರಡು ಪಕ್ಷದ ವೀರರು ಭೀಕರವಾಗಿ ಹೋರಾಡುತ್ತಾರೆ. ಒಟ್ಟಿನಲ್ಲಿ ಪಾಂಡವರಿಗೆ ಒಳ್ಳೆಯ ದಿನ. ಅದೇ ರಾತ್ರಿ ದುರ್ಯೋಧನನು ಭೀಷ್ಮನ ಬಳಿ ಹೋಗಿ ಆತನನ್ನು ದೂಷಿಸುತ್ತಾನೆ. ಭೀಷ್ಮನು ಪಾಂಡವರ, ವಿಶೇಷವಾಗಿ ಕೃಷ್ಣಾರ್ಜುನರು ದೇವರಿಂದ ಪಡೆದ ಅಜಿಂಕ್ಯತ್ವವನ್ನು ಬಣ್ಣಿಸಿ, ದುರ್ಯೋಧನನಿಗೆ ಯುದ್ಧವನ್ನು ನಿಲ್ಲಿಸಲು ಹೇಳುತ್ತಾನೆ.

ಐದನೆಯ ದಿವಸ–ಪ್ರತಿ ದಿನದಂತೆ, ಯುದ್ಧ ನಡೆಯುತ್ತದೆ. ವಿಶೇಷ ಜಯ ಯಾರ ಕಡೆಗೂ ಇಲ್ಲ.

ಆರನೆಯ ದಿವಸ–ಐದನೆಯ ದಿವಸದಂತೆಯೇ ಕಳೆಯುತ್ತದೆ.

ಏಳನೆಯ ದಿವಸ–ಪ್ರಾರಂಭದಲ್ಲಿ ದುರ್ಯೋಧನನು ಭೀಷ್ಮನನ್ನು ತೆಗಳುತ್ತಾನೆ. "ಪಾಂಡವರು ಅಜಿಂಕ್ಯರು, ಆದರೆ ನಾನು ಸಾಧ್ಯವಿದ್ದಷ್ಟು ಪ್ರಯತ್ನವನ್ನು ಮಾಡುತ್ತೇನೆ" ಎಂದು ಕಟ್ಟಿಟ್ಟ ಉತ್ತರವನ್ನು ಭೀಷ್ಮನು ಕೊಡುತ್ತಾನೆ. ಭೀಕರವಾದ ಯುದ್ಧ ನಡೆಯುತ್ತದೆ. ಧರ್ಮನು ಶಿಖಂಡಿಯನ್ನು ಕುರಿತು "ಈವರೆಗೆ ನೀನು ಭೀಷ್ಮನನ್ನು ಏತಕ್ಕೆ ಕೊಲ್ಲಲಿಲ್ಲ?" ಎಂದು ದೋಷಾರೋಪಣೆ ಮಾಡುತ್ತಾನೆ. ಈ ದಿನವು ಆರನೆಯ ದಿನದ ಹಾಗೆಯೇ ಕಳೆಯುತ್ತದೆ.

ಎಂಟನೆಯ ದಿವಸ–ತುಮುಲ ಯುದ್ಧ ನಡೆಯುತ್ತದೆ. ಕೌರವರ ಪಕ್ಷದಲ್ಲಿ ಶಕುನಿಯ ಮಕ್ಕಳು, ಪಾಂಡವರ ಪಕ್ಷದಲ್ಲಿ ಐರಾವತನು ಹತರಾಗುತ್ತಾರೆ. ಭೀಮನು ಹದಿನೈದು, ಹದಿನಾರು ಧೃತರಾಷ್ಟ್ರನ ಪುತ್ರರನ್ನು ವಧಿಸುತ್ತಾನೆ. ತುಮುಲಯುದ್ಧ ನಡೆಯುತ್ತಿದ್ದಂತೆಯೇ ಸೂರ್ಯಾಸ್ತವಾಗುತ್ತದೆ. ರಾತ್ರಿಯಲ್ಲಿ ದುರ್ಯೋಧನ, ದುಶ್ಶಾಸನ, ಶಕುನಿ, ಕರ್ಣ ಮೊದಲಾದವರ ಒಳಸಂಚು ನಡೆಯುತ್ತದೆ. ಕರ್ಣನು ಭೀಷ್ಮನನ್ನು ಯುದ್ಧದಿಂದ ಹೊರಗಟ್ಟಲು ಸೂಚಿಸುತ್ತಾನೆ. ದುರ್ಯೋಧನನು ಬಂಧುಸಮೇತ ಭೀಷ್ಮನ ಬಳಿ ಹೋಗಿ ಕೊನೆಯದಾಗಿ ಹೇಳುತ್ತಾನೆ. ಭೀಷ್ಮನು ಯಥಾಪ್ರಕಾರ ಪಾಂಡವರ ಅಜಿಂಕ್ಯತ್ವವನ್ನು ಬಣ್ಣಿಸುತ್ತಾನೆ. ಆದರೆ ಹೋರಾಡುವ ವಚನವನ್ನು ಕೊಡುತ್ತಾನೆ.

ಒಂಭತ್ತನೆಯ ದಿವಸ–ಭೀಷ್ಮನ ಅತಿ ಪರಾಕ್ರಮದ ಮುಂದೆ ಅರ್ಜುನನ ಬಲ ನಡೆಯುವುದಿಲ್ಲವೆಂದು ಕಂಡು ಕೃಷ್ಣನು ಕೋಪದಿಂದ ಚಾವಟಿಯನ್ನೆತ್ತಿ ಭೀಷ್ಮನ ಮೇಲೆ

ಧಾವಿಸುತ್ತಾನೆ. ಅರ್ಜುನನು ಆತನನ್ನು ಹಿಂತಿರುಗಿಸುತ್ತಾನೆ. ಯುದ್ಧ ಮುಗಿಯುತ್ತದೆ. ಒಟ್ಟಿನಲ್ಲಿ ಕೌರವರಿಗೆ ಒಳ್ಳೆಯ ದಿನ. ರಾತ್ರಿಯಲ್ಲಿ ಪಾಂಡವರು ಒಳಸಂಚು ಹೂಡಿ, ಭೀಷ್ಮನ ಬಳಿ ಹೋಗಿ ಆತನನ್ನು "ನಿನ್ನ ಮರಣ ಏತರಲ್ಲಿದೆ?" ಎಂದು ಕೇಳುತ್ತಾರೆ. ಭೀಷ್ಮನು "ಶಿಖಂಡಿಯನ್ನು ಮುಂದೆ ಇಡಿರಿ" ಎಂದು ಹೇಳುತ್ತಾನೆ. ಕೃಷ್ಣನು ಅರ್ಜುನನಿಗೆ "ನೀನು ಭೀಷ್ಮನನ್ನು ಕೊಲ್ಲಬೇಡ. ರಥದಿಂದ ಆತನನ್ನು ಕೆಳಗೆ ಉರುಳಿಸು" ಎಂದು ಹೇಳಿ ಆತನ ಮನಸ್ಸನ್ನು ಒಲಿಸುತ್ತಾನೆ. ಅರ್ಜುನನು ಒಪ್ಪಿಕೊಳ್ಳುತ್ತಾನೆ.

ಹತ್ತನೆಯ ದಿವಸ–ಶಿಖಂಡಿಯು ಭೀಷ್ಮನ ಮೇಲೆ ಬಾಣಗಳ ಸುರಿಮಳೆಯನ್ನು ಬಿಡುತ್ತಾನೆ. ಶಿಖಂಡಿಯ ಹಿಂಬದಿಯಿಂದ ಬಾಣಗಳನ್ನು ಬಿಟ್ಟು ಅರ್ಜುನನು ಭೀಷ್ಮನ ಕವಚವನ್ನು ಸೀಳುತ್ತಾನೆ. ಕಡೆಗೆ ತಲೆಗೆ ಬಾಣ ತಾಗಿ ಭೀಷ್ಮನು ರಥದ ಅಡಿಯಲ್ಲಿ, ಬಾಣಗಳ ರಾಶಿಯ ಮೇಲೆ, ಭೂಮಿಗೆ ತಾಗದಂತೆ ಬೀಳುತ್ತಾನೆ. ಭೀಷ್ಮನ ರಥದಲ್ಲಿ ಇಲ್ಲವೆ ರಥದ ಬಳಿಯಲ್ಲಿ ದುಶ್ಶಾಸನನು ಇರುತ್ತಾನೆ. ಕೊನೆಯವರೆಗೂ ಭೀಷ್ಮನು ಆತನೊಡನೆ ಮಾತನಾಡುತ್ತಿರುತ್ತಾನೆ. ಯುದ್ಧ ಕೆಲವು ಮಟ್ಟಿಗೆ ವಿರಾಮಗೊಳ್ಳುತ್ತದೆ. ಭೀಷ್ಮನು ದುರ್ಯೋಧನನನ್ನು ಕುರಿತು "ನನ್ನ ಮರಣದಿಂದಾದರೂ ಈ ಹಗೆತನ ಕೊನೆಗಾಣಿಸು ! ಒಪ್ಪಂದವನ್ನು ಮಾಡಿಕೊ !" ಎಂದು ಹೇಳುತ್ತಾನೆ. ಕೊನೆಗೆ ಎಲ್ಲರೂ ಅಲ್ಲಿಂದ ಹೋದ ನಂತರ ಕರ್ಣನು ಭೀಷ್ಮನ ಬಳಿ ಬರುತ್ತಾನೆ. ಭೀಷ್ಮನು ಕರ್ಣನಿಗೆ ಪಾಂಡವಪಕ್ಷವನ್ನು ಸೇರಲು ಹೇಳುತ್ತಾನೆ. ಕರ್ಣನು ಅದನ್ನು ನಿರಾಕರಿಸುತ್ತಾನೆ.

ಒಟ್ಟಿನಲ್ಲಿ ಯುದ್ಧ ನಡೆದಿದ್ದು ಹದಿನೆಂಟು ದಿವಸ. ಅದರಲ್ಲಿಯ ಮೊದಲಿನ ಹತ್ತು ದಿವಸಗಳವರೆಗೆ ನಿರರ್ಥಕ ಯುದ್ಧ ನಡೆಯುತ್ತದೆ. ಯುದ್ಧದ ಪ್ರತಿಯೊಂದು ದಿನವೂ ಭೀಷ್ಮನು ದುರ್ಯೋಧನನಿಗೆ ಯುದ್ಧವನ್ನು ನಿಲ್ಲಿಸಲು ಹೇಳುತ್ತಿದ್ದನು. ಕೊನೆಯಲ್ಲಿ ಆತ್ಮಾರ್ಪಣೆಯನ್ನು ಮಾಡಿ ಭೀಷ್ಮನು ಯುದ್ಧವನ್ನು ನಿಲ್ಲಿಸಲು ಕೊನೆಯ ಪ್ರಯತ್ನ ಮಾಡಿದನು. ಈ ಪ್ರಯತ್ನವು ಕೂಡ ವ್ಯರ್ಥವಾಯಿತು.

ಈ ಹತ್ತು ದಿನದ ವೃತ್ತಾಂತದಲ್ಲಿ ಕೆಲವು ಅಸಂಬದ್ಧ ಸಂಗತಿಗಳಿವೆ. ಭೀಷ್ಮನು ಶಿಖಂಡಿಯ ಕೂಡ ಯುದ್ಧ ಮಾಡುವುದಿಲ್ಲ ಎಂದು ಎಲ್ಲರಿಗೂ ಗೊತ್ತಿತ್ತು. ಹಿಂದಿನ ದಿನವೇ ಧರ್ಮರಾಜನು ಶಿಖಂಡಿಯನ್ನು ಕುರಿತು "ನೀನು ಭೀಷ್ಮನನ್ನು ಏತಕ್ಕೆ ವಧಿಸುವುದಿಲ್ಲ?" ಎಂದು ಕೇಳಿದನು. ಇಂಥ ಪರಿಸ್ಥಿತಿಯಲ್ಲಿ ಎಲ್ಲರೂ ಸೇರಿಕೊಂಡು ಭೀಷ್ಮನ ಬಳಿ ಹೋಗಿ ಅವನಿಗೆ 'ನಿನ್ನ ಸಾವು ಯಾವುದರಲ್ಲಿದೆ?' ಎಂದು ಕೇಳುವುದು ಶುದ್ಧ ಹುಡುಗಾಟಿಕೆ ಎನಿಸುತ್ತದೆ. ಭೀಷ್ಮನು ಅಜಿಂಕ್ಯನೆಂಬ ತಿಳುವಳಿಕೆಯನ್ನು ಕಾಯುವುದಕ್ಕಾಗಿ ಈ ಪ್ರಯತ್ನವಿರಬೇಕು. ವೃದ್ಧನಾದ ಭೀಷ್ಮನಿಗೆ ಸಾವು ಬೇಡಾಗಿತ್ತು. ಸಾಯುವುದೇ ಆದರೆ ಅರ್ಜುನನಂತಹ ವೀರನಿಂದಲೇ ಸಾಯಬೇಕೆಂಬ ಆತನ ಇಚ್ಛೆ ಇತ್ತು. ಭೀಷ್ಮನಿಗೆ ಬದಿಗಿಡುವುದು ಕೌರವರಿಗೆ ಸಾಧ್ಯವಿರಲಿಲ್ಲ. ಪಾಂಡವರಿಗೆ, ತೋರಿಕೆಗೆ ಕೂಡ ಅರ್ಜುನನನ್ನು

ಭೀಷ್ಮನಿಗೆ ಎದುರಾಳಾಗಿ ನಿಲ್ಲಿಸುವುದು ಬೇಡವೆನಿಸುತ್ತಿತ್ತು. ಈ ರೀತಿ ಎರಡು ಪಕ್ಷದವರಿಗೂ ಭೀಷ್ಮನು ಸಂಕಟಪ್ರಾಯನಾಗಿದ್ದನು.

ಮೂರನೆಯ ದಿನ ಕೃಷ್ಣನು ರಥದಿಂದ ನೆಗೆದು ಸುದರ್ಶನವನ್ನು ಎತ್ತಿಕೊಂಡು ಧಾವಿಸಿದ ವೃತ್ತಾಂತವು ಪ್ರಕ್ಷಿಪ್ತವೆನಿಸುತ್ತದೆ. ಒಂಭತ್ತನೆಯ ದಿನ ಆತನು ಚಾವಟಿಯನ್ನು ಹಿಡಿದು ಧಾವಿಸಿದ ಭಾಗ ಯೋಗ್ಯವೆನಿಸುತ್ತದೆ. ಈ ಪ್ರಸಂಗವು ಮಹಾಭಾರತದ ರೀತಿಯನ್ನು ಹೊಂದಿಕೊಂಡಿದೆ. ಆಗಿನ ಪರಿಸ್ಥಿತಿಗೆ ಸುಸಂಬದ್ಧವಾಗಿದೆ. ಮೂರನೆಯ ದಿನದ ವೃತ್ತಾಂತವು ಕಾವ್ಯಮಯವೂ ಅತಿಶಯೋಕ್ತಿಯುಳ್ಳದ್ದಾಗಿಯೂ ಕೃಷ್ಣನ ದೇವತ್ವವನ್ನು ಬಿಂಬಿಸುವಂತಹದ್ದೂ ಇದೆ. ಕೃಷ್ಣನು ಇಷ್ಟೊಂದು ಆವೇಶ ಹೊಂದಿದ್ದರೂ ಅದರ ಪರಿಣಾಮವು ಅರ್ಜುನನ ಮೇಲೆ ಆಗಿದ್ದು ಆರು ದಿವಸಗಳ ನಂತರ.

ಈ ಸಂಗತಿಯು ಒಂಭತ್ತನೆಯ ದಿವಸದ ಘಟನೆಯ ನಂತರ ಉಳಿಯುವುದಿಲ್ಲ. ಸಾವಿನಿಂದ ಬಿಡುಗಡೆ ಇಲ್ಲವೆಂದು ಭೀಷ್ಮನು ತಿಳಿದುಕೊಳ್ಳುತ್ತಾನೆ. ವಧೆ ಮಾಡಲು ಸಿದ್ಧನಾಗಬೇಕೆಂಬುದು ಅರ್ಜುನನಿಗೆ ಹೊಳೆಯುತ್ತದೆ. ಹತ್ತನೆಯ ದಿನ ಭೀಷ್ಮನ ಪತನವಾಗುತ್ತದೆ. ಈ ರೀತಿ ಇಡೀ ಭೀಷ್ಮಪರ್ವವೇ ವಿಲಕ್ಷಣವಾಗಿದೆ.

ಭೀಷ್ಮನು ಸೇನಾಪತಿಯಾದ ನಂತರ ದುರ್ಯೋಧನನು, "ಎಲ್ಲರೂ ಸೇರಿ ಭೀಷ್ಮನ ರಕ್ಷಣೆ ಮಾಡಿರಿ", ಎಂದು ಆಜ್ಞಾಪಿಸಿದನು. ಯುದ್ಧದ ವರ್ಣನೆಗಳನ್ನು ಗಮನಿಸಿದಲ್ಲಿ, ಕೆಲವು ಸಂಗತಿಗಳು ತಿಳಿಯುತ್ತವೆ. ಒಬ್ಬ ಯೋಧನ ಜೊತೆ ಇನ್ನೊಬ್ಬ ಯೋಧನ ಯುದ್ಧವಾಗುತ್ತಿತ್ತು. ಅದೇ ರೀತಿ ಒಂದು ಸಮೂಹದ ಜೊತೆ, ಇನ್ನೊಂದು ಸಮೂಹದ ಯುದ್ಧ ನಡೆಯುತ್ತಿತ್ತು. ಪ್ರಮುಖವಾಗಿ ಯುದ್ಧ ಮಾಡುವ ಯೋಧರು ರಥಗಳಲ್ಲಿ ಇರುತ್ತಿದ್ದರು. ಅವರ ಬೆಂಗಾವಲಿಗೆ ಅನೇಕರು ಇರುತ್ತಿದ್ದರು. ಶಿಖಂಡಿಯು ಯುದ್ಧ ಮಾಡುವಾಗ ಆತನ ಬೆಂಗಾವಲಿಗೆ ಈ ರೀತಿ ಏರ್ಪಾಟಿತ್ತು–

ಅರ್ಜುನನ ರಥದ ಎಡಬದಿ ಚಕ್ರದ ಹತ್ತಿರ ಯುಧಾಮನ್ಯುವು ಇದ್ದನು. ಬಲ ಚಕ್ರದ ಹತ್ತಿರ ಉತ್ತಮೌಜನು ಇದ್ದನು. ಅರ್ಜುನನು ಸ್ವತಃ ಶಿಖಂಡಿಯ ರಕ್ಷಣೆಯನ್ನು ಮಾಡುತ್ತಿದ್ದನು. ಅದೇ ರೀತಿ ಇತ್ತ ಕಡೆಗೆ ದುರ್ಯೋಧನನು ಹೇಳಿದ್ದನು "ಎಲ್ಲರೂ ಸೇರಿ ಭೀಷ್ಮನ ರಕ್ಷಣೆ ಮಾಡಿರಿ. ಆತನ ರಕ್ಷಣೆಯನ್ನು ಮಾಡುವಂತಹ ರಥಗಳನ್ನು ಸುಸಜ್ಜಿತವಾಗಿಡಿರಿ. ಭೀಷ್ಮನು ಶಿಖಂಡಿಯ ಮೇಲೆ ಶಸ್ತ್ರಾಘಾತವನ್ನು ಮಾಡುವುದಿಲ್ಲ. ಅದಕ್ಕೆ ಶಿಖಂಡಿಯ ವಧೆ ಮಾಡುವುದು ನಿಮ್ಮ ಪ್ರಮುಖ ಕರ್ತವ್ಯ". ದುರ್ಯೋಧನನ ಮಕ್ಕಳು ಭೀಷ್ಮನ ಬೆಂಗಾವಲಿಗೆ ಇದ್ದರೆಂದು ಒಂದು ಶ್ಲೋಕದಲ್ಲಿ ಇದೆ. ಅದಲ್ಲದೆ ಬೇರೆ ಬೇರೆ ದೇಶದ ರಾಜರು ಮತ್ತು ಅವರ ಸೈನಿಕರು ಭೀಷ್ಮನ ಪರಿಸರದಲ್ಲಿದ್ದುಕೊಂಡು ಆತನ ರಕ್ಷಣೆಯನ್ನು ಮಾಡುತ್ತಿದ್ದರೆಂಬ ಉಲ್ಲೇಖವು ಹಲವು ಕಡೆ ಇದೆ. ಇಂಥ ಸಂದರ್ಭದಲ್ಲಿ, ಭೀಷ್ಮನು ರಥದಲ್ಲಿ ಸ್ತಬ್ಧವಾಗಿದ್ದು, ಶಿಖಂಡಿಯ ಹಿಂಬದಿಯಿಂದ ಅರ್ಜುನನು ಶರಸಂಧಾನವನ್ನು ಮಾಡುವುದು, ಆ ಶರಗಳಿಂದ ಭೀಷ್ಮನು ಗಾಯಗೊಂಡು ಪ್ರತೀಕಾರ ಮಾಡದೆ ಪತನವಾಗುವುದು, ಇಂಥ ವರ್ಣನೆ ಮೇಲಿನ

ವರ್ಣನೆಗೆ ವಿಸಂಗತವಾಗಿದೆ. ಕೊನೆಯ ದಿವಸ ಭೀಷ್ಮನ ರಕ್ಷಣೆಗೆ ಯಾರೂ ಇದ್ದಂತೆ ತೋರುವುದಿಲ್ಲ. ಭೀಷ್ಮನ ಕೊನೆಯವರೆಗೂ ದುಶ್ಶಾಸನನು ಏನು ಮಾಡುತ್ತಿದ್ದನು? ಭೀಷ್ಮನು ಎಲ್ಲರಿಗೂ ಬೇಡವಾದನೋ ? ಎಲ್ಲ ದೃಷ್ಟಿಯಿಂದ ನೋಡಿದರೆ ಭೀಷ್ಮನು ದುರ್ದೈವಿ. ಆತನು ಹತನಾಗದೆ ಗಾಯಗೊಂಡು ಬಿದ್ದನು.

ಮೊದಲನೆಯದಾಗಿ ಭೀಷ್ಮನು ಇಚ್ಛಾಮರಣಿಯಾಗಿದ್ದನು. ಎರಡನೆಯದಾಗಿ ಆತನಿಗೆ ಉತ್ತರಾಯಣ ಪ್ರಾರಂಭವಾಗದೆ ಸಾಯುವುದು ಬೇಕಿರಲಿಲ್ಲ. ಮೂರನೆಯದಾಗಿ ಕೃಷ್ಣನು ಅರ್ಜುನನಿಗೆ "ಭೀಷ್ಮನ ವಧೆ ಮಾಡದೆ ಆತನನ್ನು ರಥದಿಂದ ಕೆಳಗೆ ಉರುಳಿಸು" ಎಂದು ಹೇಳಿದ್ದನು. ಆದ್ದರಿಂದ ಭೀಷ್ಮನ ಮೇಲೆ ಆದ ಬಾಣವೃಷ್ಟಿಯು ಆತ್ಯಂತಿಕವಿರದೇ, ಆತನನ್ನು ಉರುಳಿಸುವುದಕ್ಕಾಗಿ ಮಾತ್ರವಿತ್ತೆಂದು ಹೇಳಬಹುದು.

ಭೀಷ್ಮನು ಯಾವ ಕುರುಕುಲದ ರಕ್ಷಣೆಗಾಗಿ ಆಜನ್ಮವಾಗಿ ಯತ್ನಿಸಿದನೋ, ಆ ಕುಲದ ಅರ್ಧಕ್ಕೆ ಮೇಲ್ಪಟ್ಟು ನಾಶವನ್ನು, ಆತನು ತೆಪ್ಪಗಿದ್ದು ಕಾಣಬೇಕಾಯಿತು. ಭೀಷ್ಮನು ಅಜಿಂಕ್ಯವೀರನಿರಲಿಲ್ಲ. ಆದರೆ ಅವನು ಪೂಜ್ಯನಿದ್ದುದರಿಂದ ಅವಧ್ಯನಾಗಿದ್ದನು. ಇತರ ವೀರರಂತೆ ತತ್‌ಕ್ಷಣ ಸಾವು ಆತನ ದೈವದಲ್ಲಿ ಇರಲಿಲ್ಲ. ಶರಶಯ್ಯೆ ಮೇಲೆ ಬಿದ್ದು ತೆರೆದ ಕಣ್ಣುಗಳಿಂದ ಆತನು ಕುಲಸಂಹಾರವನ್ನು ನೋಡಬೇಕಾಯಿತು. ತೆರೆದ ಕಿವಿಗಳಿಂದ ಕುಲಸ್ತ್ರೀಯರ ವಿಲಾಪ ಕೇಳಬೇಕಾಯಿತು. ಇಷ್ಟು ಮಾನಹಾನಿಯಿಂದ ತೃಪ್ತರಾಗದೆ ಮಹಾಭಾರತದಲ್ಲಿ ಪ್ರಕ್ಷೇಪ ಮಾಡಿದವರು ಆತನ ಮುಖದಿಂದ ಶಾಂತಿಪರ್ವದ ರಗಳೆಯನ್ನು ನುಡಿಸಿದ್ದಾರೆ.

ಹೀಗಾಗಿ ಭೀಷ್ಮನು ತನ್ನ ಪ್ರತಿಜ್ಞೆಯಿಂದ ಸಾಧಿಸಿದ್ದೇನು? ಎಂಬುದು ಇಂದಿಗೂ ದೊಡ್ಡ ಸಮಸ್ಯೆಯೆ !

2
ಗಾಂಧಾರಿ

ಗುಡ್ಡಗಾಡು ಪ್ರದೇಶವು ಮುಗಿದು ಉತ್ತರಭಾರತದ, ಕೊನೆಯಿಲ್ಲದ, ಬೇಜಾರು ಉಂಟು ಮಾಡುವ ವಿಶಾಲವಾದ ಬಯಲು ಭೂಮಿಯು ಪ್ರಾರಂಭವಾಗಿತ್ತು. ದಾರಿಯಲ್ಲಿಯ ಆತಂಕಗಳೆಂದರೆ ನದಿಗಳು ಇಲ್ಲವೇ ಆಗಾಗ್ಗೆ ಗೋಚರವಾಗುವ ಅರಣ್ಯಗಳು. ಕೆಲವೊಮ್ಮೆ ರಥದಲ್ಲಿ ಕುಳಿತು, ಇಲ್ಲವೇ ಕಾಲಿನಿಂದ ನಡೆದು, ಹಲವು ಬಾರಿ ಮೇಣೆಯಲ್ಲಿ ಕುಳಿತು, ರಾಜಕನ್ಯೆಯ ಪ್ರವಾಸ ಸಾಗಿತ್ತು. ಅವಳ ಸಂಗಡ ಅವಳಿಗಿಂತ ಸ್ವಲ್ಪ ಹಿರಿಯಳಾದ ದಾಸಿಯು ಇದ್ದಳು. ತೌರುಮನೆ ಬಿಡುವಾಗ ಅವಳೇ ರಾಜಕನ್ಯೆಗೆ ಸಮಾಧಾನವನ್ನು ಹೇಳಿದ್ದಳು. ತರತರಹದ ಕಥೆಗಳನ್ನು ಹೇಳಿ, ದಾರಿಯಲ್ಲಿಯ ರಮಣೀಯ ಸ್ಥಳಗಳನ್ನು ತೋರಿಸಿ ಅವಳು ಗಾಂಧಾರಿಯ ಚಿತ್ತವನ್ನು ಪ್ರಸನ್ನವಿರಿಸುವ ಪ್ರಯತ್ನವನ್ನು ಮಾಡುತ್ತಿದ್ದಳು. ತೌರುಮನೆಯವರು ಇರಲಿಲ್ಲವಾದರೂ ರಾಜಪುತ್ರನಾದ ಶಕುನಿಯು ಸಂಗಡ ಇದ್ದನು. ಅವನು ಕೂಡ ಆಗಾಗ್ಗೆ ಸೋದರಿಯ ಕ್ಷೇಮವನ್ನು ವಿಚಾರಿಸುತ್ತಿದ್ದನು. ಗಾಂಧಾರ ದೇಶದ ಸ್ಮೃತಿಯು ಅಗಲುತ್ತ ಹೋಗಿ, ರಾಜಕನ್ಯೆಯ ಮನಸ್ಸು ಎಂದೂ ಕಾಣದೇ ಇದ್ದ ಹಸ್ತಿನಾಪುರವನ್ನು ಕಲ್ಪಿಸುತ್ತಿತ್ತು. ಹಸ್ತಿನಾಪುರದವರು ರಾಜಕನ್ಯೆಯ ಮದುವೆಯ ಪ್ರಸ್ತಾಪಕ್ಕಾಗಿ ಆಗಮಿಸಿದ್ದಾಗ್ಗೆ ಅವರು ತಂದ ಉಡುಗೊರೆಗಳಿಂದ ಎಲ್ಲರೂ ಬೆರಗಾಗಿದ್ದರು. ಅವರ ರಥಗಳು, ಅವರ ಉಡುಪುಗಳು ಇವೆಲ್ಲವು ಅಮೂಲ್ಯವಾಗಿದ್ದವು. ಅವರ ನಡೆನುಡಿಯು ಕೂಡ ಸುಸಂಸ್ಕೃತವಾಗಿತ್ತು. ಈಗ ಇದ್ದ ಪರಿವಾರದಲ್ಲಿ ಕೂಡ ಗಾಂಧಾರದವರಿಗಿಂತ, ಹಸ್ತಿನಾಪುರದ ಪರಿವಾರವೇ ಹೆಚ್ಚಾಗಿತ್ತು. ಪ್ರಯಾಣವು ಬಹಳೇ ಪ್ರದೀರ್ಘವಾಗಿತ್ತು, ಬಲು ವೇಗದಿಂದ ಸಾಗುತ್ತಿತ್ತು. ಇದರಿಂದ ಕೊನೆಕೊನೆಗೆ ಆಯಾಸದಿಂದ ರಾಜ್ಯಕನ್ಯೆಯ ಮನವು ದೇಹವು ಬಳಲಿತ್ತು. ಈ ಪ್ರಯಾಣವು ಎಂದು ಕೊನೆಗಾಣುವುದೋ ಎಂದು ಅವಳಿಗೆ ಅನಿಸಿತ್ತು.

ಪ್ರವಾಸವು ಒಮ್ಮೆ ಕೊನೆಗೊಂಡಿತು. ಗಾಂಧಾರದ ರಾಜಕನ್ಯೆಯನ್ನು ಎದುರುಗೊಳ್ಳಲು ಹಸ್ತಿನಾಪುರದಿಂದ ಭೀಷ್ಮನು ಆಗಮಿಸಿದ್ದನು. ರಾಜಧಾನಿಯಲ್ಲಿ ಸಾಗುವಾಗ ಪೌರರು ಇಬ್ಬದಿಯಲ್ಲಿ ನಿಂತು ಸತ್ಕರಿಸುತ್ತಿದ್ದರು. ಆದರೆ ಈ ಸಮಾರಂಭವನ್ನು ಗಮನಿಸುವಷ್ಟು ತ್ರಾಣವು ರಾಜಕನ್ಯೆಗೆ ಉಳಿದಿರಲಿಲ್ಲ. ಅವಳಿಗಾಗಿ ಗೊತ್ತುಪಡಿಸಿದ ನಿವಾಸವನ್ನು ಅವಳು ತಲುಪಿದಳು.

ಎರಡು ದಿನಗಳವರೆಗೆ ಅವಳು ವಿಶ್ರಮಿಸುತ್ತಿದ್ದಳು. ಅವಳ ಸಖಿಯು, ಅರಮನೆಯಲ್ಲಿ ಸುತ್ತಾಡಿ ಬಂದು ಕೌರವರ ವೈಭವದ ಹೊಸ ಹೊಸ ವರ್ಣನೆಯನ್ನು ರಾಜಕನ್ಯೆಗೆ ತಿಳಿಸುತ್ತಿದ್ದಳು. ಗಾಂಧಾರದ ರಾಜಪುತ್ರನಾದ ಶಕುನಿಯು ಹಸ್ತಿನಾಪುರದಲ್ಲಿಯೇ ನೆಲೆಸುವನಿದ್ದಾನೆಂದು ತಿಳಿದು ಗಾಂಧಾರಿಗೆ ಆಶ್ಚರ್ಯವೆನಿಸಿತು. ಆದರೆ ಹಿರಿಯ ಮಗನು ಪಟ್ಟಕ್ಕೆ ಬಾಧ್ಯಸ್ಥನಿರುವದರಿಂದ ಆತನ ತಮ್ಮಂದಿರು ಬೇರೆ ರಾಜ್ಯದಲ್ಲಿ ಉಳಿದು ಧನಕೀರ್ತಿಗಳನ್ನು ಸಂಪಾದಿಸಿದ ಅನೇಕ ಉದಾಹರಣೆಗಳು ಅವಳಿಗೆ ಗೊತ್ತಿದ್ದವು. ಇಷ್ಟು ದೂರ ಬಂದಿದ್ದರೂ ಸಹೋದರನಾದರೂ ಜೊತೆಯಲ್ಲಿ ಇದ್ದುದನ್ನು ತಿಳಿದು ಅವಳಿಗೆ ಸಮಾಧಾನವಾಯಿತು. ಶಕುನಿಗೋಸ್ಕರ ಏರ್ಪಡಿಸಿದ ಹೊಸ ಅರಮನೆಯ ವರ್ಣನೆಯನ್ನು, ದಾಸಿಯಿಂದ ತಿಳಿದುಕೊಂಡಾಗಂತೂ ಅವಳಿಗೆ ಅತ್ತೆಮನೆಯ ವೈಭವದ ಬಗ್ಗೆ ಹೆಮ್ಮೆಯೆನಿಸಿತು. ಈ ದಿನ ಸಂಜೆಯಲ್ಲಿ ರಾಜಕನ್ಯೆಯು ಮಂದಿರದ ಒಂದು ಸಜ್ಜೆಯಲ್ಲಿ ನಿಂತುಕೊಂಡು ಕೆಳಗೆ ಕಾಣಿಸುವ ಕಿಕ್ಕಿರಿದ ರಾಜಧಾನಿಯನ್ನು ನೋಡುತ್ತಿದ್ದಳು. ಅದರಾಚೆಯ ಯಮುನಾತೀರದ ವಿಶಾಲವಾದ ಅರಣ್ಯಗಳನ್ನು ಅವಲೋಕಿಸುತ್ತಿದ್ದಳು. ಗಾಂಧಾರದಲ್ಲಿ ಇಷ್ಟೊಂದು ಬಯಲು ಪ್ರದೇಶವನ್ನು ಅವಳು ಎಂದೂ ನೋಡಿರಲಿಲ್ಲ. ಅವಳ ತವರಿನ ಅರಮನೆಗಿಂತ, ಇಲ್ಲಿಯ ಅರಮನೆಯು ಬಹಳೇ ವಿಶಾಲವಾಗಿತ್ತು. ತವರಿನ ನೆನಪು ಕ್ಷೀಣವಾಗಿ ಅತ್ತೆಮನೆಯ ರಾಜ್ಞೀಪದದ ವೈಭವದಲ್ಲಿ ಅವಳ ಮನಸ್ಸು ಮುಳುಗಿತ್ತು. ಅಷ್ಟರಲ್ಲಿಯೆ ಅವಳ ಸಖಿಯು ಅಲ್ಲಿ ತಲುಪಿದಳು. ವೈಭವದ ಯಾವ ಸಂಗತಿಗಳನ್ನು ಇವಳು ಹೇಳಲಿರುವಳೋ ಎನ್ನುವ ಅಪೇಕ್ಷೆಯಿಂದ ಗಾಂಧಾರಿಯು ಅವಳನ್ನು ನೋಡಹತ್ತಿದಳು. ಆದರೆ ಇಂದಿನ ಲಕ್ಷಣವು ಬೇರೆಯದೇ ಇತ್ತು. ಇಂದು ಅವಳ ದಾಸಿಯು ಮುಗುಳ್ನಗೆ ನಗುತ್ತ ಜಾಗ್ರತೆಯಾಗಿ ಬರುತ್ತಿರಲಿಲ್ಲ. ದಾಸಿಯ ಮುಖವು ಬಾಡಿತ್ತು. ಹೆಜ್ಜೆಗಳಲ್ಲಿ ಹಿಂದೇಟಿತ್ತು. ಸಖಿಯು ಅಸ್ವಸ್ಥಳಾಗಿದ್ದಾಳೆಂದು ತಿಳಿದು ರಾಜಕನ್ಯೆಯು, ಎರಡು ಹೆಜ್ಜೆ ಮುಂದೆ ಬಂದಳು. ಅಷ್ಟರಲ್ಲಿಯೇ ಆಕೆಯ ಸಖಿಯು ತವಕದಿಂದ ಮುಂದೆ ಬಂದು ಗಾಂಧಾರಿಯ ಕೈಗಳನ್ನು ಬಿಗಿಯಾಗಿ ಹಿಡಿದು ಕಳವಳದಿಂದೆಂದಳು: "ಅಭಾಗಿ ಮಗಳೇ ! ಮೋಸವಾಯಿತು. ನಿನ್ನನ್ನು ವಿವಾಹವಾಗುವ ರಾಜಕುಮಾರನು ಹುಟ್ಟುಗುರುಡನು". ಕ್ಷಣಕಾಲ ರಾಜಕನ್ಯೆಗೆ ದಾಸಿಯ ನುಡಿಗಳು ಅರ್ಥವೇ ಆಗಲಿಲ್ಲ. ಮರುಕ್ಷಣವೇ ಅವಳು ಮೂರ್ಛೆ ಹೊಂದಿ ನೆಲದ ಮೇಲೆ ಬಿದ್ದಳು.

೨. ಕಣ್ಣು ಕಾಣುವ ಹೆಂಡತಿಯು ಕುರುಡನ ಕೈಗೋಲಾಗಬಹುದೆಂಬ ಧೃತರಾಷ್ಟ್ರನ ಭ್ರಮೆ ನಷ್ಟವಾಯಿತು. ಪತಿಯು ಕುರುಡನೆಂದು ತಿಳಿದು ಕೂಡಲೇ ಗಾಂಧಾರಿಯು ತನ್ನ ಕಣ್ಣುಗಳನ್ನು ಬಟ್ಟೆಯಿಂದ ಗಟ್ಟಿಯಾಗಿ ಕಟ್ಟಿಕೊಂಡಳು. ಕಣ್ಣು ಕಟ್ಟಿಕೊಂಡರೂ ಅದರ ಪ್ರಪಂಚ ಸಾಗುವುದು ನಿಲ್ಲಲಿಲ್ಲ. ಗಾಂಧಾರಿಗೆ ಅನೇಕ ಮಕ್ಕಳು ಹುಟ್ಟಿದವು. ಕೌರವ ಪಾಂಡವರ ಯುದ್ಧದಲ್ಲಿ ಅವರೆಲ್ಲರು ಸತ್ತುಹೋದರು. ಎಲ್ಲರಲ್ಲಿ ಹಿರಿಯನಾಗಿ ಕೊನೆಯವರಿಗೂ ಉಳಿದ ದುರ್ಯೋಧನನು ಮಡಿದ ವಾರ್ತೆಯನ್ನು ದೂತನು ತಂದನು.

೩. ಗಾಂಧಾರಿಯು ತನ್ನ ಪ್ರಾಸಾದದಲ್ಲಿ ಕುಳಿತಿದ್ದಳು. ಅವಳ ಸಖಿ ಹಿಂದೆ ನಿಂತು ಅವಳ ಕೂದಲನ್ನು ಸವರುತ್ತಿದ್ದಳು. ತನ್ನ ಕಂಬನಿಯನ್ನು ತಡೆಯುತ್ತ ಗಾಂಧಾರಿಯನ್ನು ಸಂತೈಸುತ್ತಿದ್ದಳು : "ರಾಜಕನ್ಯೆ ! ಧೈರ್ಯತಾಳು". ಗಾಂಧಾರಿಯು ಇಲ್ಲಿಯವರೆಗೆ ಅಜ್ಜಿಯಾಗಿದ್ದರೂ ಸಖಿಯ ಲೆಕ್ಕದಲ್ಲಿ ರಾಜಕನ್ಯೆಯಾಗಿಯೇ ಉಳಿದಿದ್ದಳು. "ಧೈರ್ಯತಾಳು" ಎಂದು ಹೇಳುವಾಗ ಸಖಿಯು ಮನಸ್ಸಿನಲ್ಲಿ ಅಂದುಕೊಂಡಳು : "ಎಂತಹ ಹುಚ್ಚಿ ನಾನು, ಧೈರ್ಯತಾಳೆಂದು ಹೇಳುತಿದ್ದೇನಲ್ಲ!" ಯಾವ ಆಧಾರದ ಮೇಲೆ ಅವಳು ಧೈರ್ಯತಾಳುವುದು ! ಎಲ್ಲ ಮಕ್ಕಳು ಸತ್ತು ಹೋದರೂ ದುರ್ಯೋಧನನೊಬ್ಬನಿಂದ ಅವಳು ಪುತ್ರವತಿ ಇದ್ದಳು. ಎಲ್ಲ ದುಃಖವನ್ನು ಸಹಿಸಿ ಮೇಲೆ ಮೋರೆಮಾಡಿ ಅವಳು ನಡೆಯಬಹುದಾಗಿತ್ತು. "ಆದರೆ ಈಗೇನು ಗತಿ?" ಸಖಿಯು ಪುನಃ ಹೇಳಿದಳು "ಗಾಂಧಾರಿಯೇ ! ಶಾಂತಳಾಗಮ್ಮ."

ಅದಕ್ಕೆ ಗಾಂಧಾರಿಯು ನಿಟ್ಟುಸಿರು ಬಿಟ್ಟು ಹೇಳುತ್ತಾಳೆ : "ಸಖಿಯೇ! ಈಗ ನನ್ನ ಹೃದಯವು ಕಸಿವಿಸಿಗೊಳ್ಳುವ ಕಾರಣವೇ ಉಳಿಯಲಿಲ್ಲವಲ್ಲ ! ನನಗೆ ಇಷ್ಟೊಂದು ಮಕ್ಕಳು ಹುಟ್ಟಿದ್ದರಿಂದ ನಾನು ಸಂತೋಷದಿಂದಿದ್ದೇನೆಂದು ನೀನು ತಿಳಿದಿದ್ದೆ. ಆದರೆ ಅದು ಹಾಗಿರಲಿಲ್ಲ. ಮಕ್ಕಳಿಗೆ ತುಸು ಕ್ಲೇಶವಾದರೂ ನನ್ನ ಎದೆ ಡವಡವಿಸುತ್ತಿತ್ತು. ಮಕ್ಕಳು ಅಳುವುದನ್ನು ಕೇಳಿ ನನ್ನ ಜೀವ ಕಸಿವಿಸಿಗೊಳ್ಳುತ್ತಿತ್ತು. ಮುಂದೆ ಮಕ್ಕಳು ದೊಡ್ಡವರಾದರು. ರಥಗಳ ಪಂದ್ಯಾಟದಲ್ಲಿ ಅವರು ಸೋತರು ಎಂದು ತಿಳಿದ ಕೂಡಲೆ ನಾನು ಉದಾಸಳಾಗುತ್ತಿದ್ದೆ. ಘೋಷಯಾತ್ರೆಯಲ್ಲಿ ಅವರು ಅವಮಾನಪಟ್ಟು ಬಂದಾಗ ಅವರಿಗಾದ ದುಃಖಕ್ಕಿಂತ ನಾನು ಹೆಚ್ಚು ದುಃಖವನ್ನು ಸಹಿಸಿದ್ದೇನೆ. ಮೇರೆಯಾಚೆ ದೂರ ಪಾಂಡವರನ್ನು ಅಟ್ಟಿಹಾಕಿದಾಗ ಅವರು ನನ್ನನ್ನು ನಮಸ್ಕರಿಸಲು ಬಂದರು. ನಾನು ತೋರಿಕೆಗಾಗಿ ಅವರನ್ನು ಆಶೀರ್ವದಿಸಿದೆ. ಸಖಿಯೇ ! ಯುದ್ಧ ಪ್ರಾರಂಭವಾಗುವ ಮುಂಚೆ ಸಭೆಗೆ ಹೋಗಿ "ವ್ಯಾಜ್ಯ ಮಾಡಬೇಡಿ" ಎಂದು ಹೇಳಿದ್ದು ನಿನ್ನ ಪ್ರೇರಣೆಯಿಂದಲೆ ಅಲ್ಲವೆ? ಯಾವಾಗಲು ಹಸ್ತಿನಾಪುರದ ರಾಜ್ಯವು ನನ್ನ ಮಕ್ಕಳ ಅಂಕಿತದಲ್ಲೇ ಉಳಿಯಬೇಕೆಂದು ಆಶಿಸಿದ್ದೆ. ಆದರೆ ಯುದ್ಧ ಶುರುವಾಯಿತು.

"ಅನಂತರ ಪ್ರತಿ ದಿನ ಬೆಳಗಾಗುತ್ತಲೆ ನಾನು ಇಂದು ಯಾವ ಅಶುಭವಾರ್ತೆಯನ್ನು ಕೇಳುವೆನೆಂಬ ವಿಚಾರ, ಭೂತಾಕಾರವಾಗಿ ನನ್ನ ಮನಸ್ಸನ್ನು ವ್ಯಾಪಿಸುತ್ತಿತ್ತು. ದಿನಗಳೆದಂತೆ ಈಗ ಎಷ್ಟು ಮಕ್ಕಳುಳಿದರು ಎಂದು ನಾನು ಕೇಳಹತ್ತಿದೆ. ಸಖಿ ! ಏನು ಹೇಳಲಿ ! ಒಂದೊಂದು ಮಗು ಎಂದರೆ ನನ್ನ ಒಂದೊಂದು ವ್ಯಥೆಯಾಗಿತ್ತು. ನನ್ನ ಅಸ್ತಿತ್ವವನ್ನೇ ನಾನು ಕಳೆದುಕೊಂಡಿದ್ದೆ. ಅವರ ದುಃಖದ ಕ್ಷಣಗಳೆಂದರೆ ನನ್ನ ದುಃಖದ ಕ್ಷಣಗಳು. ಅವರ ಸುಖದ ಕ್ಷಣಗಳೆಂದರೆ ನನ್ನ ಸುಖದ ಕ್ಷಣಗಳು. ಇದೇ ಆಯಿತು. ನನ್ನ ಜೀವನದ ಪಾಡು." ಮಾತಾಡುತ್ತಿದ್ದಂತೆ ಗಾಂಧಾರಿಯ ಧ್ವನಿ ಗಡುಸಾಯಿತು. ಸಖಿಯು ಭಯಪಟ್ಟು ಪುನಃ ವ್ಯಾಕುಲತೆಯಿಂದ "ಶಾಂತಳಾಗಮ್ಮ" ಎಂದು ನುಡಿಯುತ್ತಿದ್ದಂತೆ ತಟ್ಟನೆ ಗಾಂಧಾರಿ

ನುಡಿದಳು: "ಹೌದು ಸಖಿ, ನಾನು ಅದನ್ನೇ ಹೇಳುತ್ತಿದ್ದೇನಲ್ಲ, ಈ ಹೊತ್ತು ನಾನು ಎಲ್ಲ ದೃಷ್ಟಿಯಿಂದ ಶಾಂತಳಾಗಿದ್ದೇನೆ. ಇನ್ನು ಮುಂದೆ ನನ್ನ ಮನಸ್ಸು ಯಾರ ಗೆಲುವಿನಿಂದಲೂ ಹೆಮ್ಮೆಪಡೆಯಲಾರದು, ಅಥವಾ ಯಾರ ಸೋಲಿನಿಂದಲೂ ಬಾಡಲಾರದು. ಯಾರದು ಮುಂದೆ ಹೇಗಾಗುವುದೋ ಎಂಬ ಯೋಚನೆಯಿಂದ ಜೀವಕ್ಕೆ ತೊಳಲಾಟವಿಲ್ಲ. ಯಾವ ಅಪೇಕ್ಷೆಯು ಬೇಡ, ಯಾವ ಭಯವು ಬೇಡ, ಎಂತಹ ಚಿರಶಾಂತಿ ಒದಗಿದೆ ನನಗೆ!" ಈ ಇಬ್ಬರ ಸಂವಾದ ನಡೆಯುತ್ತಿದ್ದಂತೆ, ಧೃತರಾಷ್ಟ್ರನು ತನ್ನ ದುಃಖವನ್ನು ಹತ್ತಿಕ್ಕಿ ಗಾಂಧಾರಿಯನ್ನು ಸಂತೈಸಲು ಒಬ್ಬ ಸೇವಿಕೆಯ ಕೈ ಹಿಡಿದು ಪ್ರಾಸಾದದ ಬಾಗಿಲಿಗೆ ಬಂದಿದ್ದನು. ಬಾಗಿಲದ ಬಳಿಯಿಂದಲೇ ಆತನು 'ಗಾಂಧಾರಿ' ಎಂದು ಕರೆಯಿತ್ತನು. ಗಾಂಧಾರಿಯ ಮಾತು ಮುಗಿಯುತ್ತಲೇ ಆ ಕರೆಯು ಆಕೆಗೆ ಕೇಳಿಸಿತು. ಆಗ ಅವಳಿಗೆನಿಸಿತು. "ನಾನು ಇಷ್ಟು ಹೊತ್ತು ಮಾತಾಡಿದ್ದು ಎಷ್ಟೊಂದು ವಿಫಲವಾಗಿದೆ. ನನ್ನ ಅಂಧ ಪತಿಯು ಜೀವಿತನಿರುವಾಗ ನನ್ನ ಮನಸ್ಸು ಸುಖದುಃಖಗಳನ್ನು ಮೀರಲು ಸಾಧ್ಯವೆ ? ಅಯ್ಯೋ ದೇವರೆ, ಇವರು ಇದಾರಲ್ಲ !" ಈ ರೀತಿ ನುಡಿಯುತ್ತಿದ್ದಾಗಲೆ ಗಾಂಧಾರಿಯು ಎರಡನೆಯ ಬಾರಿ ಮೂರ್ಛೆ ಹೋಗಿ ಭೂಮಿಗೆ ಬಿದ್ದಳು.

ರಾಣಿಯು ಮೂರ್ಛಿತಳಾದುದನ್ನು ಕಂಡು ಸರ್ವ ಪರಿಚಾರಕರು ಲಗುಬಗೆಯಿಂದ ಅತ್ತ ಧಾವಿಸಿದರು. ಪ್ರತಿಹಾರಿಯು ಕೂಡ ರಾಜನ ಕೈ ತೊರೆದು ಗಾಂಧಾರಿಯತ್ತ ಓಡಿದಳು. ಪ್ರಾಸಾದದೊಳಗೆ ಒಂದೆರಡು ಹೆಜ್ಜೆ ಬಂದಿದ್ದ ಧೃತರಾಷ್ಟ್ರನು ಏಕಾಂಗಿಯಾಗಿ ನಿಂತಿದ್ದನು. ಸುತ್ತುಮುತ್ತಲಿನ ಗಲಭೆಯು ಆತನಿಗೆ ಕೇಳಿಸುತ್ತಿತ್ತು. ತನ್ನ ಕುರುಡು ಕಣ್ಣುಗಳನ್ನು ಸುತ್ತಲು ತಿರುಗಿಸುತ್ತ "ಏನಾಯಿತು?" "ಏನಾಯಿತು?" ಎಂದು ಆರ್ತತೆಯಿಂದ ಆತನು ಕೇಳುತ್ತಿದ್ದನು.

ಹಿಮಾಲಯದ ಅಡಿಯಲ್ಲಿಯ ಕುಟೀರವನ್ನು ಬಿಟ್ಟು ಪರ್ವತದ ಮೇಲೆ ಹೊರಡಲು ಎಲ್ಲರು ಸಿದ್ಧರಾಗಿದ್ದರು. ಅವರು ಕೆಳಗಿನ ಕುಟೀರದಲ್ಲಿ ಇರುವಾಗ ಅವರ ಸೇವೆಗಾಗಿ ಪರಿಚಾರಕರಿದ್ದರು. ಅಕ್ಕಪಕ್ಕದಲ್ಲಿ ಮುನಿಗಳ ಪರ್ಣಕುಟಿಗಳು ಇದ್ದವು. ಧರ್ಮಾದಿ ಪಾಂಡವರು ಒಂದೆರಡು ಸಲ ಬಂದು ಭೇಟಿಯಾಗಿ ಅವರ ಜೊತೆ ಉಳಿದು ಹೋಗಿದ್ದರು. ಒಟ್ಟಿನಲ್ಲಿ ಹೇಗೊ ಧೃತರಾಷ್ಟ್ರನು, ಗಾಂಧಾರಿಯು, ವಿದುರನು ಮತ್ತು ಕುಂತಿಯು ದಿನಗಳೆಯುತ್ತಿದ್ದರು. ವಿದುರ ಧೃತರಾಷ್ಟ್ರರು ಇತರ ತಪಸ್ವಿಗಳೊಡನೆ ಯಾವುದಾದರೊಂದು ವಿಷಯದ ಚರ್ಚೆಯಲ್ಲಿ ತೊಡಗುತ್ತಿದ್ದರು. ಗಾಂಧಾರಿ ಕುಂತಿಯರು ಆ ಚರ್ಚೆಯನ್ನು ಕೇಳುತ್ತಿದ್ದರು. ಈ ತೋರಿಕೆಯ ಶಾಂತವಾದ ಜೀವನದಲ್ಲಿ ಹಸ್ತಿನಾಪುರದ ಆಪ್ತರು ಬಂದೊಡನೆ ಮನದಲ್ಲಿ ಉಕ್ಕೇರುತ್ತಿತ್ತು. ಅರಸರ ಪರಿವಾರದಿಂದ ಅಸಮ್ಮತವು ದುಮುದುಮಿಸುತ್ತಿತ್ತು. ಪಾಂಡವರು ಕಾಲಿಗೆ ಎರಗಿದಾಗ ಪ್ರತಿ ಒಬ್ಬನ ಮನದಲ್ಲಿ ಭಿನ್ನ ಭಿನ್ನ ಭಾವನೆಗಳ ಉದ್ರೇಕವಾಗುತ್ತಿತ್ತು. ಪಾಂಡವರು ಅನುಮತಿಯನ್ನು ಪಡೆದು ಹೊರಟುಹೋದ ನಂತರ, ಹೊರನೋಟಕ್ಕೆ ಎಲ್ಲವು ಶಾಂತವಾದರೂ ಒಳಗುದಿಯು ಶಾಂತವಾಗಲು ಕೆಲವು ಕಾಲ ಹಿಡಿಯುತ್ತಿತ್ತು. ಇಂದು

ಹಸ್ತಿನಾಪುರದಿಂದ ಪಾಂಡವರು, ಅವರ ಹೆಂಡಂದಿರು ಬಂದಿದ್ದರು. ಧೃತರಾಷ್ಟ್ರನು ಮನಸ್ಸಿನಲ್ಲಿ ಕೆಲವೊಂದು ನಿಶ್ಚಯಿಸಿ ಧರ್ಮರಾಜನನ್ನು ಕುರಿತು ಈ ರೀತಿ ಹೇಳಿದನು. "ಎಲೈ ಧರ್ಮರಾಜನೆ! ಹಿಮಾಲಯದ ಅಡಿಯಲ್ಲಿಯ ಕುಟೀರದಲ್ಲಿ ವಾಸವಾಗಿರುವುದು, ಈಗ ನಾವು ಆಚರಿಸುತ್ತಿದ್ದದ್ದು, ನಿಜವಾದ ಸನ್ಯಾಸಾಶ್ರಮವಲ್ಲ. ಇನ್ನು ಮುಂದೆ ನಾವು ನಾಲ್ಕು ಜನ ಏಕಾಂತವಿರುವ ಕುಟೀರದಲ್ಲಿ ವಾಸವಾಗಿರುತ್ತೇವೆ; ಅರಮನೆಯನ್ನು ಬಿಟ್ಟು ವಾಸ ಮಾಡುವ ರೂಢಿಯಾಗಿ ಸಾಕಷ್ಟು ಕಾಲ ಕಳೆದಿದೆ. ಅದಕ್ಕೆ ಅರಣ್ಯದಲ್ಲಿ ಹೋಗಿ ವಾಸವಾಗಲು ನಮಗೆ ಅಪ್ಪಣೆಯನ್ನು ಕೊಡು. ಧರ್ಮರಾಜ ಮೊದಲಾದವರು ಇದಕ್ಕೆ ಕೂಡಲೇ ಒಪ್ಪಲಿಲ್ಲ. ವಿದುರನು ಧೃತರಾಷ್ಟ್ರನ ಮಾತನ್ನು ಎತ್ತಿಹಿಡಿದು ಈ ರೀತಿ ಅಂದನು –

"ಧರ್ಮ ! ಧೃತರಾಷ್ಟ್ರನು ಹೇಳುತ್ತಿರುವುದು ಯೋಗ್ಯ. ನೀನು ನಮ್ಮನ್ನು ಬೀಳ್ಕೊಡುವುದು ಲೇಸು. ಸಕಲ ಧರ್ಮವನ್ನರಿತವನಾದ ನೀನು ನಮ್ಮನ್ನು ಮೋಹದಲ್ಲಿ ತೊಡಕಿಸಬೇಡ, ನೀನೂ ತೊಡಕಬೇಡ." ಕುಂತಿಯ ಕಣ್ಣುಗಳಲ್ಲಿ ನೀರೂರಿತ್ತು. ಆದರೆ ಅವಳು ಕೂಡ ಧೃತರಾಷ್ಟ್ರ ವಿದುರರ ನಿಶ್ಚಯಕ್ಕೆ ಸಮ್ಮತಿಸಿದಳು. ಗಾಂಧಾರಿಗೆ ಪ್ರತ್ಯೇಕವಾಗಿ ಯಾರೂ ವಿಚಾರಿಸಲೇ ಇಲ್ಲ. ಧೃತರಾಷ್ಟ್ರನ ಇಚ್ಛೆಯೇ ಅವಳ ಇಚ್ಛೆಯೆಂದು ಎಲ್ಲರು ಭಾವಿಸಿದ್ದರು.

ದಿನವೆಲ್ಲವು, ಎಲ್ಲರು ನಡೆಯುತ್ತಿದ್ದರು. ಪಾಂಡವರು, ಅವರ ಹೆಂಡಂದಿರಲ್ಲದೆ ಇತರ ಮುನಿಗಳು ಕೂಡ ಬೀಳ್ಕೊಡಲು ಬಂದಿದ್ದರು. ಸಂಜೆ ಆದಂತೆ ವಿದುರನು ನದಿಯ ಸಮೀಪದಲ್ಲಿದ್ದ ಒಂದು ಶಾಂತವಾದ, ಪ್ರಶಸ್ತವಾದ, ನೆರಳಿದ್ದ, ಸ್ಥಳವನ್ನು ಕಂಡುಹಿಡಿದನು. ಜೊತೆಗಿದ್ದ ಸೇವಕರು ಅಲ್ಲೊಂದು ಗುಡಿಸಲನ್ನು ತಯಾರಿಸಿದರು. ಕೆಲವು ದಿವಸಕ್ಕೆ ಸಾಕಾಗುವಷ್ಟು ಸಾಮಗ್ರಿಯನ್ನು ಒದಗಿಸಿದ್ದರು. ಆ ರಾತ್ರಿ ಅಲ್ಲಿಯೇ ಉಳಿದು ಮರುದಿನ ಎಲ್ಲ ಪರಿವಾರವು ಜಡವಾದ ಮನಸ್ಸಿನಿಂದ ಹಿಂತಿರುಗಿತು. ದಾಸದಾಸಿಯರ ಪೈಕಿ ಒಬ್ಬರನ್ನು ಕೂಡ ಧೃತರಾಷ್ಟ್ರನು ಇರಗೊಡಲಿಲ್ಲ. ವಿದುರನು ಧೃತರಾಷ್ಟ್ರನ ಸೇವಾಶುಶ್ರೂಷೆಯನ್ನು ಮಾಡುವುದನ್ನು ಒಪ್ಪಿಕೊಂಡನು. ಕುಂತಿಯು ಗಾಂಧಾರಿಯ ಸೇವೆ ಮಾಡುವುದಕ್ಕೆ ಆನಂದದಿಂದ ಒಪ್ಪಿಕೊಂಡಳು. ಗಾಂಧಾರಿಯು ತನಗೆ ಯಾವ ದಾಸಿಯೂ ಬೇಡವೆಂದು ನಿಖರವಾಗಿ ಹೇಳಿ ಎಲ್ಲರನ್ನು ಕಳುಹಿಸಿಕೊಟ್ಟಳು. ಹೋಗುವಾಗ ಧರ್ಮನು ವಿದುರನಿಗೆ ಹೇಳಿದನು– "ಇಲ್ಲಿಂದ ಕೆಳಗೆ ಕಾಲು ಯೋಜನ ದೂರದಲ್ಲಿ ನಾಲ್ಕಾರು ನಂಬಿಕೆಯ ದಾಸರು ಗುಡಿಸಲು ಕಟ್ಟಿಕೊಂಡಿರುವರು. ಮೇಲಿಂದ ಮೇಲೆ ಅವರು ನಿಮಗೆ ಬೇಕು ಬೇಡಾದುದನ್ನು ಕೇಳುವರು. ಆಗ ಅವರನ್ನು ನಿರಾಕರಿಸಬೇಡಿರಿ. ಇನ್ನಿತರ ಹೊತ್ತಿನಲ್ಲಿ ಅವರು ನಿಮ್ಮ ಬಳಿ ಬರಬಾರದೆಂದು ಹೇಳಿದ್ದೇನೆ" ಪರಿವಾರದ ಜೊತೆ ನಾಲ್ಕಾರು ಹೆಜ್ಜೆ ಹೋಗಿ ವಿದುರನು ಮರಳಿ ಬಂದನು. ಈಗ ಈ ನಾಲ್ವರೇ ಆ ಏಕಾಂತ ಸ್ಥಳದಲ್ಲಿ ಉಳಿದರು.

ಒಂದು ದಿನ ಮುಂಜಾನೆ ವಿದುರನು ಧೃತರಾಷ್ಟ್ರನ ಕೈ ಹಿಡಿದು, ಕುಂತಿಯು ಗಾಂಧಾರಿಯ ಕೈ ಹಿಡಿದು ಬಿಸಿಲು ತಾಗದಂತಹ ತಂಪಾದ ಸ್ಥಳದಲ್ಲಿ ಕುಳ್ಳರಿಸಿದರು. ತಾವು ಇಬ್ಬರು ಅವರ ಹಿಂದುಗಡೆ ಅವಿತು ಕುಳಿತರು.

ಗಾಂಧಾರಿಯು ಮೌನವಾಗಿ ಕುಳಿತಿದ್ದಳು. ಅವಳ ಮುಖದಿಂದ ದೀರ್ಘವಾದ ನಿಟ್ಟುಸಿರು ಹೊರಟಿತು. ಅದನ್ನು ಕೇಳಿ ಧೃತರಾಷ್ಟ್ರನು ಅವಳೆಡೆ ಮುಖ ತಿರುಗಿಸಿ ಉಪಹಾಸಮಿಶ್ರಿತವಾಗಿ ಕೇಳಿದನು: "ಗಾಂಧಾರಿ, ಈಗ ನಿಟ್ಟುಸಿರುಗಳನ್ನು ಬಿಟ್ಟು ಏನು ಪ್ರಯೋಜನ? ಎರಡು ಕುರುಡರ ಪ್ರಪಂಚ ಹೇಗೆ ಸಾಗಬೇಕೊ ಹಾಗೆ ನಮ್ಮ ಪ್ರಪಂಚ ಸಾಗಿತು." ಧೃತರಾಷ್ಟ್ರನ ಮಾತು ಮತ್ತು ಅದರ ಠೀವಿಯನ್ನು ಕೇಳಿ ಗಾಂಧಾರಿ ಚಕಿತಳಾದಳು. ಸಾಮಾನ್ಯವಾಗಿ ಅವಳು ಉತ್ತರಿಸುತ್ತಿರಲಿಲ್ಲ, ಆದರೆ ಧೃತರಾಷ್ಟ್ರನ ಮಾತಿನಲ್ಲಿ ಅಡಗಿದ್ದ ಕಹಿ ಉಪಹಾಸ ಅವಳಿಗೆ ಸೋಂಕಿತು. "ಮಹಾರಾಜರೆ, ನಾನು ನಿಟ್ಟುಸಿರು ಬಿಟ್ಟದ್ದು ನನ್ನ ಸ್ವಂತದ ದುಃಖದಿಂದಲ್ಲ. ಇಲ್ಲಿ ನಾನು ಅನುಭವಿಸುತ್ತಿದ್ದ ವಾತಾವರಣ, ಮೈಗೆ ತಾಗುವ ಬೆಟ್ಟದ ಶೀತಲ ವಾಯು ಸುತ್ತು ಮುತ್ತಲು ದೇವದಾರದ ಮಂದವಾದ ಸುಗಂಧ, ಕಾಲಡಿಯಲ್ಲಿ ದೇವದಾರ ಪರ್ಣಗಳ ದಟ್ಟವಾದ ಹಾಸುಗಂಬಳಿಯು, ಪ್ರತಿಯೊಂದು ವಾಯುಲಹರಿಯೊಡನೆ ಇಡಿ ಕಾನನವೇ ನಿಟ್ಟುಸಿರುಗರೆಯುವಂತೆ ಉಂಟಾಗುವ ದೇವದಾರ ಪರ್ಣಗಳ ಶಬ್ದ, ಅಹೋರಾತ್ರಿ ಕೇಳಬರುವ ನದಿಯ ಭೋರ್ಗರೆಯುವಿಕೆ ಇವೆಲ್ಲವನ್ನು ಕಂಡು ನನಗೆ ಗಾಂಧಾರ ದೇಶದ ಜ್ಞಾಪಕವಾಯಿತು. ನನಗೆ ತಿಳಿಯದೇ ನಿಟ್ಟುಸಿರು ಹೊರಟಿತು. ಬೇರೆ ಏನೂ ಇಲ್ಲ". ಗಾಂಧಾರಿಯು ಸ್ವಲ್ಪ ಬೇಸರದಿಂದಲೇ ಹೇಳಿದಳು. ಗಾಂಧಾರಿಯ ಈ ಹೇಳಿಕೆಯನ್ನು ಕೇಳಿ ಆಕೆಯನ್ನು ಛೇಡಿಸುವ ವಿಚಾರ ಹೋಗಿ ಧೃತದಾಷ್ಟ್ರನು ಕಳವಳಗೊಂಡು ಗಾಂಧಾರಿಗೆ ಕೇಳಿದನು: "ಗಾಂಧಾರಿ ! ನನ್ನಂತಹ ಅಂಧನನ್ನು ಜೊತೆ ಕಟ್ಟಿಕೊಂಡು ನಿನ್ನ ದುರ್ದಶೆ ಆಯಿತಲ್ಲವೆ? ತವರಿನ ನೆನಪಿನಿಂದ ನಿನಗೆ ತಾಪವಾಗುತ್ತಿಲ್ಲವೆ?" ಅದಕ್ಕೆ ಗಾಂಧಾರಿ ಉತ್ತರಿಸಿದಳು, "ಅಲ್ಲ ! ಎಳ್ಳಷ್ಟು ಅಲ್ಲ ! ತಮ್ಮೊಡನೆ ವಿವಾಹವಾದೊಡನೆಯೇ ನಾನು ತವರಿನ ನೆನಪನ್ನು ಮರೆಯಿಸಿದ್ದೇನೆ. ಅರಮನೆಯ ಒಂದೇ ಪ್ರಾಂಗಣದಲ್ಲಿದ್ದರೂ ನಾನು ನನ್ನ ಸಹೋದರನ ಜೊತೆ ಮಾತನಾಡುತ್ತಿರಲಿಲ್ಲವೆಂಬುದು ನಿಮಗೆ ಗೊತ್ತು. ನನಗೆ ಈಗಾದ ನೆನಪು ಗಾಂಧಾರ ದೇಶದ್ದು ವಿನಾ ಜನರದಲ್ಲ." ಕೆಲವು ಕಾಲ ಸ್ತಬ್ಧತೆಯಲ್ಲಿ ಕಳೆಯಿತು. ಇವರಿಬ್ಬರಲ್ಲಿ ನಡೆದ ಮಾತುಗಳನ್ನು ಕೇಳಿ ವಿದುರ ಮತ್ತು ಕುಂತಿಯ ಮುಖದ ಮೇಲೆ ಆಶ್ಚರ್ಯ ಮೂಡಿತು. ಪತಿಪತ್ನಿಯರ ಈ ಮಾತುಕತೆ ಯಾವ ಮಟ್ಟಕ್ಕೆ ತಲುಪುವವೋ ಎಂಬ ಯೋಚನೆ ಕುಂತಿಗೆ ಉಂಟಾದಂತೆ ಕಾಣುತ್ತಿತ್ತು. ಪುನಃ ಧೃತರಾಷ್ಟ್ರನು ಮಾತನ್ನು ಮುಂದುವರಿಸಿದನು. ಆದರೆ ಈಗ ಮೊದಲಿನ ಮಾತಿನಲ್ಲಿಯ ಉಪಹಾಸ ಅಡಗಿತ್ತು. ಅವಳನ್ನು ಸಂತೈಸುವ ನೆಪದಿಂದ, "ಗಾಂಧಾರಿ, ನನ್ನ ಅಂಧತ್ವದ ಬಗ್ಗೆ ಏನನ್ನು ತಿಳಿಸದೆ, ನಿನ್ನನ್ನು ವಂಚಿಸಿ ಇಲ್ಲಿಗೆ ಕರೆತಂದು, ನನ್ನ ಕೈಹಿಡಿಸಿದ್ದು ನಿನ್ನ ತವರುಮನೆಯವರು ಮತ್ತು ನಾವು ನಿನ್ನ ಅಪರಾಧಿಗಳಾಗಿದ್ದೇವೆ. ಆದರೆ ಗಾಂಧಾರಿಯೇ ! ನೀನು ಕೂಡ ಕೋಟಿಗಟ್ಟಲೇ ಅದರ ಸೇಡನ್ನು ತೀರಿಸಿದೆ. ಆಗಿಹೋಗಿದ್ದನ್ನು ಕ್ಷಮಿಸಲು ಈಗಲಾದರೂ ಸಾಧ್ಯವಿಲ್ಲವೆ?"

ಪತಿಪತ್ನಿಯರಲ್ಲಿ ನಡೆದ ಈ ತರಹದ ಸಂಭಾಷಣೆಯನ್ನು ಕೇಳುವುದು ಉಚಿತವಲ್ಲವೆಂದು ಗ್ರಹಿಸಿ ವಿದುರನು ಮತ್ತು ಕುಂತಿಯು ಮಾತಾಡದೆ ಬೇರೆಡೆಗೆ ಹೊರಟರು.

ಕಣ್ಣಿದ್ದವನಿಗೆ ಅಗೋಚರವಿದ್ದದ್ದು ಅಂಧವಾದ ಧೃತರಾಷ್ಟ್ರನ ಕಿವಿಗೆ ಕೇಳಬರುತ್ತಿತ್ತು. ವಿದುರ ಮತ್ತು ಕುಂತಿಯತ್ತ ತಿರುಗಿ ಧೃತರಾಷ್ಟ್ರನು ಎಂದನು, "ತಾಳಿರಿ ! ನೀವಿಬ್ಬರು ಎಲ್ಲಿಗೂ ಹೊರಡಬೇಡಿರಿ, ಇಲ್ಲಿಯೇ ಕೂತುಕೊಳ್ಳಿರಿ. ನಮ್ಮ ಪತಿಪತ್ನಿಯರ ಸಂಬಂಧದಲ್ಲಿ ಈಗಿನವರೆಗೆ ಏಕಾಂತದಲ್ಲಿ ಯಾವ ಘಟನೆಯು ನಡೆದಿಲ್ಲ. ಇನ್ನು ಮುಂದೆ ನಡೆಯುವುದೂ ಬೇಡ. ಹಿರಿಯನೆಂದು ನಾನು ನಿಮಗೆ ಹೇಳುತ್ತೇನೆ. ಕೂತುಕೊಳ್ಳಿರಿ. ಎಲ್ಲಿಯು ಹೋಗಬೇಡಿರಿ." ತನ್ನ ಆಜ್ಞೆಯಂತೆ ಅವರು ಕೂತುಕೊಂಡರೋ, ಇಲ್ಲವೋ, ಎಂದು ತಿಳಿದುಕೊಳ್ಳಲು ಆತನು ತುಸು ತಡೆದನು. ನಂತರ ಗಾಂಧಾರಿಯತ್ತ ತಿರುಗಿ ಗದ್ಗದಿತ ಕಂಠದಿಂದ ನುಡಿದನು: 'ಗಾಂಧಾರಿ, ನಿಜವಾಗಿ ನೀನು ಬಹಳ ದೊಡ್ಡ ಶಿಕ್ಷೆಯನ್ನು ವಿಧಿಸಿದೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮದುವೆಗಾಗಿ ನೀನು ನಿಂತುಕೊಂಡಾಗ ನನಗೆ ಅಷ್ಟು ಅನಿಸಿರಲಿಲ್ಲ, ನನ್ನ ಪ್ರೇಮದಿಂದ ನಿನ್ನ ಕ್ರೋಧವನ್ನು ಗೆಲ್ಲುವೆ ಎಂದು ಭಾವಿಸಿದ್ದೆ ; ಆದರೆ ಅದು ಆಗಲಿಲ್ಲ. ಆ ದಿನ ರಾತ್ರಿ ಕಣ್ಣು ಕಟ್ಟಿಕೊಂಡು ಇನ್ನೊಬ್ಬರ ಕೈಹಿಡಿದು ತಡವರಿಸುತ್ತಾ ನೀನು ಶಯ್ಯಾಗಾರಕ್ಕೆ ಬಂದೆ. ಎಂಥ ಭಯಂಕರವಾದ ರಾತ್ರಿ ಅದು ! ನಾನು ಹುಟ್ಟುಗುರುಡನು, ನನಗೆ ಕುರುಡಾಗಿ ವರ್ತಿಸುವ ರೂಢಿ. ಆದರೆ ನೀನು ಬೇಕಂತ ಕುರುಡಳಾಗಿದ್ದೆ. ಕುರುಡರಂತೆ ವರ್ತಿಸುವುದು ನಿನಗೆ ರೂಢಿ ಇರಲಿಲ್ಲ. ಆಗ ನಾನು ನಿನ್ನನ್ನು ಸಾಯಿಸಿದ್ದರೆ ಒಳ್ಳೆಯದಾಗುತ್ತಿತ್ತಲ್ಲವೆ?"

"ಹಾಗಾಗಿದ್ದರೆ ಬಹಳೇ ಒಳ್ಳೆಯದಾಗುತ್ತಿತ್ತು. ಜೀವನದ ಮುಂದಿನ ಬವಣೆಯಾದರೂ ತಪ್ಪುತ್ತಿತ್ತು" ಗಾಂಧಾರಿ ಕಟುವಾಗಿ ಅಂದಳು. "ಹೀಗೆನ್ನಬೇಡ ಗಾಂಧಾರಿ" ಆವೇಗದಿಂದ ಧೃತರಾಷ್ಟ್ರನು ಮಾತನಾಡುತ್ತಿದ್ದ. ಕುರುಕುಲದವರಾದ ನಾವು ಎಷ್ಟೇ ತಿಳಿಗೇಡಿಗಳಾಗಿದ್ದರೂ ಕ್ಷತ್ರಿಯತ್ವವನ್ನು ಮರೆತಿರಲಿಲ್ಲ. ಸ್ತ್ರೀಯರನ್ನು ವರಿಸುವದೆಂದರೆ ನಮ್ಮ ಪೌರುಷವಲ್ಲ. ನಾನು ನನ್ನ ರಾಜಧಾನಿಯಲ್ಲಿ ರಾಜನಾಗಿದ್ದೆನು. ನಿನ್ನ ಕಣ್ಣುಕಟ್ಟುಗಳನ್ನು ಹರಿದು ಬಿಸಾಡಬಹುದಿತ್ತು. ಆದರೆ ಅದನ್ನು ಅಧಿಕಾರಬಲದಿಂದ ಮಾಡುವ ಬದಲು ನಿಧಾನವಾಗಿ ಮಾಡಬಹುದೆಂದು ನಾನು ಗ್ರಹಿಸಿದ್ದೆ. ಆದರೆ ನಿನ್ನ ಮೊದಲನೆಯ ದಿನದ ಕೊರಗು ಹಾಗೆಯೇ ಉಳಿಯಿತು. ನಿನಗೆ ಮಗು ಹುಟ್ಟುವಾಗ ನನಗಾಗಿ ಬೇಡವಾದರೂ ನಿನ್ನ ಮಗುವಿನ ಮುಖವನ್ನು ನೋಡುವದಕ್ಕಾದರೂ 'ಕಣ್ಣುತೆರೆ' ಎಂದು ನಿನಗೆ ಹೇಳಬೇಕೆಂದು ಮಾಡಿದ್ದೆ. ಆದರೆ ನನ್ನ ಮನಸ್ಸು ಕೂಡ ಈವರೆಗೆ ಕಠಿಣವಾಗಿತ್ತು. ನಿನಗೆ ಮಗುವಿನ ಮುಖಾವಲೋಕವು ಸಾಧ್ಯವಿಲ್ಲವೆಂಬುದರಲ್ಲಿ ನನಗೆ ಒಂದು ಬಗೆಯ ಸೇಡಿನ ಸಮಾಧಾನ ಉಂಟಾಗಿತ್ತು. ಕಣ್ಣು ಕಟ್ಟಿಕೊಂಡು ಸತಿಯ ಆಡಂಬರದಲ್ಲಿ ನೀನು ವರ್ತಿಸುತ್ತಿದ್ದೆ. ಒಮ್ಮೆ ಕೈಕೊಂಡ ನಿರ್ಧಾರಕ್ಕೆ ನೀನು ಬದ್ಧಳಾಗಿದ್ದೆ. ನೀನಾಗಿಯೇ ಕಣ್ಣು ತೆರೆಯುವುದು ಸಾಧ್ಯವಿರಲಿಲ್ಲ. ಕೇವಲ ನನ್ನ ಅನುಮತಿಯಿಂದ ನೀನು ಅದನ್ನು ಮಾಡಬಹುದಿತ್ತು. ಆದರೆ ನಾನು ಒಪ್ಪಲಿಲ್ಲ.

"ಮಕ್ಕಳ ಮೇಲಿನ ಅಂಧ ಮಮತೆಯಿಂದ ಮಾತ್ರ ನಾವಿಬ್ಬರು ಹತ್ತಿರವಾಗಿದ್ದೆವು. ವಿನಾ ನನ್ನ ಬಗ್ಗೆ ನಿನಗೆ ಪ್ರೀತಿ ಇರಲಿಲ್ಲ. ಕುರುಕುಲದ ಪುರುಷರಾದ ನಾವು ಸ್ತ್ರೀಯರ ಮೇಲೆ ಬಹಳ ಅನ್ಯಾಯ ಬಗೆದಿದ್ದೇವೆ. ಅದರ ಪ್ರಾಯಶ್ಚಿತ್ತವು ನಮಗೆ ಸರಿಯಾಗಿ ಒದಗಿದೆ. ಅಂಬೆಯ

ಕ್ಷೋಭದಲ್ಲಿ ಭೀಷ್ಮನು ಭಸ್ಮನಾದನು. ನಿನ್ನ ಕ್ಷೋಭದಲ್ಲಿ ನಾನು ಉರಿಯುತ್ತಿದ್ದೇನೆ. ನನ್ನ ಮಕ್ಕಳೆಲ್ಲರು ನಾಶವಾದರು. ಕುಂತಿಯ ಮದುವೆಯು ಸಹ ಒಬ್ಬ ಅಂಗವಿಕಲನ ಜೊತೆ ಆಯಿತು. ಅವಳು ಗಂಡನ ಮನಸ್ಸಿಗೆ ಹಿಡಿಸಿದ ಪತ್ನಿಯ ಭೂಮಿಕೆಯನ್ನು ಸರಿಯಾಗಿ ನಿರ್ವಹಿಸಿದಳು. ಅಷ್ಟೇ ಅಲ್ಲದೆ ಪತಿಯ ನಿಧನದ ನಂತರ ಜಾಗರೂಕತೆಯಿಂದ ಮಕ್ಕಳ ಹಿತವನ್ನು ಲಕ್ಷಿಸಿದಳು. ಪ್ರತಿ ಒಬ್ಬ ವ್ಯಕ್ತಿಯು ಯಾವುದಾದರೊಂದು ಅನ್ಯಾಯದ ಪರಂಪರೆಯಲ್ಲಿ ಸಿಲುಕಿರುತ್ತಾನೆ. ನಿನಗೆ ನನ್ನಿಂದ ಅನ್ಯಾಯವಾಯಿತು. ಕುಂತಿಗೆ ಪಾಂಡುವಿನಿಂದ. ಆದರೆ ನನ್ನ ಮತ್ತು ಪಾಂಡುವಿನ ವಿಫಲತೆಗೆ ಕಾರಣರಾದವರು ಯಾರು? ನಮ್ಮ ತಾಯಂದಿರ ಮನಃಕುದಿಯೇ ಅದಕ್ಕೆ ಕಾರಣವೆನ್ನಬಹುದೆ? ಬಡಪಾಯಿ ಆದ ವಿದುರನು, ದೇಹ ಬುದ್ಧಿಗಳಿಂದ ಪೂರ್ಣನಾಗಿದ್ದನು. ನಮ್ಮ ತಂದೆಯೇ ಆತನ ತಂದೆಯಾಗಿದ್ದರು. ಆದರೆ ಕೇವಲ ದಾಸೀಪುತ್ರನೆಂದು ಆತನಿಗೆ ಪಟ್ಟ ಕಟ್ಟಲಿಲ್ಲ. ಆದರೆ ಅದರ ಸೇಡನ್ನು ಆತನು ಯಾರ ಮೇಲೆಯೂ ತೀರಿಸಲಿಲ್ಲ. ನಮ್ಮ ವಂಶದಲ್ಲಿ ಸದಾಕಾಲ ಜಾಗರೂಕರಿದ್ದವರೆಂದರೆ ವಿದುರ ಮತ್ತು ಕುಂತಿ. ಗಾಂಧಾರಿ! ನಿನಗೊಬ್ಬಳಿಗೆ ಮೋಸವಾಯಿತೆಂದು ನೀನು ತಿಳಿದಿರುವೆ. ಆದರೆ ಯೋಚಿಸು. ನಮ್ಮ ಮೂರು ತಲೆಮಾರುಗಳಲ್ಲಿ ಪ್ರತಿಯೊಬ್ಬನು ಈ ರೀತಿ ವಂಚಿತನಾಗಿದ್ದಾನೆ. ನಾನು ಹೇಳುತ್ತಿರುವುದು ಕ್ಷಮೆ ಬೇಕೆಂದಲ್ಲ. ಜೀವನವೆಲ್ಲ ನೀನು ಕಣ್ಣು ಕಟ್ಟಿಕೊಂಡು ನಡೆಸಿದ ಹಟದ ಕೊನೆ ಆಗಲಿ ಎಂದು ನಾನು ಹೇಳುತ್ತಿದ್ದೇನೆ. ನನ್ನ ಬಗ್ಗೆ ಇದ್ದ ಜಿಗುಪ್ಸೆಯನ್ನು ಬಿಡು. ಜೀವನದ ಬಗ್ಗೆ ಇದ್ದ ಜಿಗುಪ್ಸೆಯನ್ನು ಬಿಡು. ನನ್ನಿಂದ ನಿನಗೆ ಅನ್ಯಾಯವಾಯಿತೆಂದು ನೀನು ಮಕ್ಕಳ ಮೇಲೆ, ಪ್ರಪಂಚದ ಮೇಲೆ ಸೇಡು ತೀರಿಸುವುದು ನ್ಯಾಯವೆ? ಒಂದು ಅನ್ಯಾಯದ ಪರಿಹಾರವು ಇನ್ನೊಂದು ಅನ್ಯಾಯದಿಂದ ಆಗುವುದಿಲ್ಲ. ನಿನ್ನ ಕಣ್ಣಿನ ಕಟ್ಟನ್ನು ಬಿಚ್ಚಿಹಾಕು. ಸುತ್ತುಮುತ್ತಲಿನ ನಿಸರ್ಗವನ್ನು, ಜನರನ್ನು ನೋಡು. ಜೀವನದಲ್ಲಿ ಈವರೆಗೆ ಜರುಗಿದ ಎಲ್ಲ ಘಟನೆಗಳನ್ನು ನಿರಪೇಕ್ಷವಾಗಿ ನೋಡಲು ಅರಿತುಕೊ ! ನಮ್ಮ ಜೀವನದ ಅಂತ್ಯವು ಸಮೀಪಿಸಿದೆ. ಕಣ್ಣು ಕಟ್ಟಿಕೊಂಡು ಕೊನೆ ಆಗುವುದು ಬೇಡ." ಧೃತರಾಷ್ಟ್ರನಿಂದ ಮುಂದೆ ಮಾತನಾಡಲು ಆಗಲಿಲ್ಲ. ಧೃತರಾಷ್ಟ್ರನು ನಿರ್ಮಿಸಿದ ಅಲೆಗಳಲ್ಲಿ ಎಲ್ಲರೂ ಮುಳುಗಿದ್ದರು. ಸುಮಾರು ಸಮಯದ ನಂತರ ಗಾಂಧಾರಿಯು ಮೆಲ್ಲನೆ ನುಡಿದಳು: "ಮಹಾರಾಜರೇ ! ನಾನು ಕಣ್ಣುಗಳನ್ನು ಬಿಚ್ಚಿದ್ದೇನೆ. ಆದರೆ ನನಗೆ ಇನ್ನೂ ಸ್ಪಷ್ಟವಾಗಿ ಕಾಣುವುದಿಲ್ಲ," ಜೀವನದಲ್ಲಿ ಮೊದಲನೆಯ ಸಲ ಧೃತರಾಷ್ಟ್ರನು ಆವೇಗದಿಂದ ಅವಳ ಕೈಗಳನ್ನು ಹಿಡಿದು ಚಿಕ್ಕ ಮಗುವಿನಂತೆ ಅತ್ತನು. ಕುರುಕುಟುಂಬದ ಸುಖ ದುಃಖಗಳನ್ನು ಅನುಭವಿಸುವವರು ಗಾಂಧಾರಿ – ಧೃತರಾಷ್ಟ್ರರು ಆಗಿದ್ದರು. ಆದರೆ ಅದಕ್ಕೆ ಸಾಕ್ಷಿ ಆದ ಕುಂತಿ ವಿದುರರ ಕಣ್ಣಿನಲ್ಲಿ ಕೂಡ ಕಂಬನಿ ತುಂಬಿದ್ದವು. ಪ್ರಾರಂಭದ ಶೋಕಾವೇಗ ಕಡಿಮೆಯಾದ ನಂತರ ಧೃತರಾಷ್ಟ್ರನು ಮೃದುವಾಗಿ ಎಂದನು, "ಗಾಂಧಾರಿಯೇ ! ಒಂದೆರಡು ದಿನಗಳಲ್ಲಿ ನೀನು ಕುಂತಿಯ ಸಹಾಯದಿಂದ ದೃಷ್ಟಿಯನ್ನು ಉಪಯೋಗಿಸಲು ಶಕ್ತಳಾಗುವಿ! ಎಂದು ನಿನಗೆ ಸರಿಯಾಗಿ ಕಾಣುವುದೊ ಅಂದು ಕೈ

ಹಿಡಿದು ನನ್ನನ್ನು ಇಲ್ಲಿಗೆ ತಂದು ಕುಳ್ಳರಿಸು !" ಯಾರಿಂದಲೂ ಮುಂದೆ ಮಾತನಾಡುವುದಾಗಲಿಲ್ಲ. ಪರ್ಣಕುಟಿಗೆ ಮರಳಿದ ನಂತರವೂ ಪ್ರತಿಯೊಬ್ಬರೂ ವಿಚಾರಮಗ್ನರಾಗಿದ್ದರು.

ಎರಡು ದಿನಗಳು ಕಳೆದಿದ್ದವು. ಗಾಂಧಾರಿಗೆ ಕಣ್ಣಿನಿಂದ ನೋಡಿ ಕೆಲಸ ಮಾಡುವ ಅಭ್ಯಾಸವಾಗಿತ್ತು. ಇಂದು ಪರಿಪಾಠದ ಕುಳಿತುಕೊಳ್ಳುವ ಸ್ಥಳಕ್ಕೆ ರಾಜನ ಕೈಹಿಡಿದು ಅವಳು ಬಂದಿದ್ದಳು. ಪುನಃ ಎಲ್ಲರು ಕಲೆತು ಕುಳಿತಿದ್ದರು. ಈ ಮಧ್ಯೆ ಕಳೆದ ದಿನಗಳನ್ನು ಉಪೇಕ್ಷಿಸಿ ಹಿಂದಿನ ಸಂಭಾಷಣೆಯನ್ನು ಮುಂದುವರಿಸಿದರು. ಧೃತರಾಷ್ಟ್ರನು ಕೆಳಗೆ ಕುಳಿತಿರುವಾಗಲು ಗಾಂಧಾರಿಯ ಕೈಯನ್ನು ತನ್ನ ಕೈಯಲ್ಲಿಯೇ ಹಿಡಿದಿದ್ದನು. ಅವನು ಮುಂದೆ ಹೇಳತೊಡಗಿದನು. "ಗಾಂಧಾರಿ ! ನೀನು ನನಗಿಂತ ಕಿರಿಯಳು. ನಾನು ಅಗಲಿದ ನಂತರವೂ ಕೂಡ ನೀನು ಸ್ವತಂತ್ರವಾಗಿ ಇರಬಹುದು", ದೃಷ್ಟಿಯನ್ನು ಪಡೆದ ಗಾಂಧಾರಿಯು ಈ ನುಡಿಯನ್ನು ಕೇಳಿ ಧೃತರಾಷ್ಟ್ರನ ಮುಖದ ಮೇಲೆ ಬೆರಳಿಟ್ಟಳು. "ಇಲ್ಲ ದೊರೆಯೆ ! ನಾನು ಹಿಡಿದಿದ್ದ ಕೈ ತ್ಯಜಿಸುವುದಕ್ಕಾಗಿ ಅಲ್ಲ. ನಾನು ತೆರೆದ ಕಣ್ಣುಗಳು ನಮ್ಮಿಬ್ಬರಿಗೊಸ್ಕರ ಇವೆ." ಧೃತರಾಷ್ಟ್ರನಿಗೆ ಉತ್ತರಿಸುವದಾಗಲಿಲ್ಲ. ಸುಮಾರು ಸಮಯದ ನಂತರ ಧೃತರಾಷ್ಟ್ರನು ಶಾಂತಚಿತ್ತನಾಗಿ ಹೇಳಿದನು, "ದೃಷ್ಟಿಯುಳ್ಳಂಥ ನಿಮಗೆ ಕಾಣದೆ ಇದ್ದು ವಾಸನೆಯಿಂದ ನನಗೆ ತಿಳಿಯುತ್ತದೆ. ಕಿವಿಯಿಂದ ಕೇಳಬರುತ್ತದೆ. ಕಾಡಿನಲ್ಲಿ ಎಲ್ಲಿಯಾದರೂ ಬೇಗೆಯು ಹಬ್ಬಿರುವುದೋ ಅವಲೋಕಿಸು ! ಇಂದು ಮುಂಜಾವಿನಿಂದ ಹೊಗೆಯ ವಾಸನೆಯು ಬರುತ್ತಿದೆ. ಭಯಭೀತ ಪಕ್ಷಿಗಳ ಕಲರವವು ಕೇಳಬರುತ್ತಿವೆ. ನಾವು ಇರುವ ನದಿಯ ಭಾಗದ ಹಿಂಬದಿಗೆ ಎಲ್ಲಿಯೋ ಕಾಡುಗಿಚ್ಚು ಉಂಟಾಗಿದೆ ಎಂದು ನನಗೆ ಅನಿಸುತ್ತದೆ. ಆದರೆ ಅದರ ಶಾಖ ತಾಗುವಷ್ಟು ಅದು ಹತ್ತಿರ ಇರಲಿಕ್ಕಿಲ್ಲ. ಗಮನಿಸಿ ನನಗೆ ಹೇಳು !" ಎಂದನು. ವಿದುರನು, ಗಾಂಧಾರಿಯು, ಕುಂತಿಯು ಎದ್ದು ನೋಡುತ್ತಿದ್ದರು. ಹೊಗೆಯು ದೂರದಲ್ಲಿ ಕಾಣುತ್ತಿತ್ತು. ಜ್ವಾಲೆಯ ಕೆಂಪು, ಹಳದಿ ವರ್ಣದ ಅಲ್ಲಾಡುವ ನಾಲಿಗೆಯು ಕಂಡುಬರುತ್ತಿತ್ತು. ಮೂವರೂ ಕೆಳಗೆ ಕುಳಿತರು. ಗಾಂಧಾರಿಯು ಕೆಳಧ್ವನಿಯಲ್ಲಿಯಾದರೂ ಸ್ಪಷ್ಟವಾಗಿ ಎಂದಳು: "ದೊರೆಯೇ, ತಾವು ಹೇಳಿದ್ದು ನಿಜ. ಬೇಗೆಯು ಕಾಲು ಯೋಜನದಷ್ಟು ಕೂಡ ದೂರದಲ್ಲಿಲ್ಲ." ಆಗ ಧೃತರಾಷ್ಟ್ರನು, "ಗಾಂಧಾರಿಯೇ ! ಕೊನೆಯವರೆಗೂ ನನ್ನ ಕೈಹಿಡಿದು ಜೊತೆಮಾಡುವುದು ನೀನು ಗ್ರಹಿಸಿದಷ್ಟು ಸುಲಭವಲ್ಲ. ಮರಣದ ದಾರಿಯನ್ನು ಕಾಯುತ್ತ ಆಶ್ರಮದಲ್ಲಿ ವಾಸಿಸುವುದು, ಪ್ರತಿ ನಾಲ್ಕಾರು ತಿಂಗಳಿಗೊಮ್ಮೆ ಮಕ್ಕಳು ಬಂದರೆಂದರೆ ಹಳೆಯ ದುಃಖಗಳನ್ನು ಪುನಃ ಜ್ಞಾಪಿಸುವುದು, ಆನಂತರ ಮನಸ್ಸನ್ನು ಹೇಗಾದರೂ ಉಪಶಮಿಸುವದು. ಈ ಎಲ್ಲ ಸಂಗತಿಗಳಿಗೆ ನಾನು ಬೇಸತ್ತಿದ್ದೇನೆ. ನಾನು ಇಲ್ಲಿಯೇ ನಿಲ್ಲುವವನಿದ್ದೇನೆ, ನೀವು ನದಿಯನ್ನು ದಾಟಿ ಬೇಗೆಯ ಆಚೆ ಹೋಗಬಹುದು" ಎಂದನು. ಗಾಂಧಾರಿಯು ಧೃತರಾಷ್ಟ್ರನಿಗೆ "ನಿಮ್ಮ ಕೈಯನ್ನು ಬಿಡಲಾರೆನು. ಬೇಗೆಯನ್ನು ಇಲ್ಲಿ ನಿಂತು ಕಾಯುವುದಕ್ಕಿಂತ ನಾವೇ ಅತ್ತ ಕಡೆ ಹೊರಡೋಣವೇ?" ಎಂದಳು. "ಸರಿಯಾಗಿ ಹೇಳಿದೆ"

ಎಂದು ಧೃತರಾಷ್ಟ್ರನು ಎದ್ದು ನಿಂತನು. ಅವನು ಮತ್ತು ಗಾಂಧಾರಿಯು ಹೋಗ ಹತ್ತಿದರು. ಅವರ ಹಿಂದಿನಿಂದ ಕುಂತಿಯು ಮತ್ತು ವಿದುರನು ಬರುವುದನ್ನು ಕೇಳಿ ಧೃತರಾಷ್ಟ್ರನು ಬೆಚ್ಚಿ ನಿಂತರು. ಆತನು ಹಿಂದಿರುಗಿ ನೋಡಿದನು. "ನೀವು ಕೂಡ ಬರುತ್ತೀರಾ?" ಎಂದು ನುಡಿದು ಮತ್ತೆ ಮುಂದೆ ಸಾಗಿದನು.

ಒಂದು ವಿಚಿತ್ರ ಘಟನೆಯು ಜರಗುತ್ತಿತ್ತು. ಓರ್ವ ಪತಿವ್ರತೆಯು ಪತಿಯ ಕೈಹಿಡಿದು ಸಹಗಮನ ಮಾಡಲು ನಡೆದಿದ್ದಳು. ಒಬ್ಬ ಮೈದುನನು ಹಿರಿಯ ಸಹೋದರನ ವಿಧವೆಯನ್ನು ಚಿತೆಯಿಂದ ಎಬ್ಬಿಸುವ ಬದಲು, ಆಕೆಯೊಡನೆ ಚಿತೆಯತ್ತಾ ಸಾಗಿದ್ದನು.

[ಈ ಪ್ರಕರಣದಲ್ಲಿಯ ಕಥಾಭಾಗದಲ್ಲಿ ಈ ಕೆಳಗಿನ ಭಾಗವು ಮಹಾಭಾರತದ ಸಂಶೋಧಿತ ಆವೃತ್ತಿಯಲ್ಲಿ ಕಾಣಿಸಲಾಗಿದೆ.

(೧) ಪತಿಯು ಅಂಧನಾದ್ದರಿಂದ ಗಾಂಧಾರಿಯು ಕಣ್ಣುಗಳನ್ನು ಕಟ್ಟಿಕೊಂಡಳು.

(೨) ಗಾಂಧಾರಿಗೆ ಅನೇಕ ಮಕ್ಕಳು ಆದರು. ಅವರೆಲ್ಲರೂ ಯುದ್ಧದಲ್ಲಿ ಮಡಿದರು.

(೩) ಗಾಂಧಾರಿ, ಧೃತರಾಷ್ಟ್ರ ಮತ್ತು ಕುಂತಿ ಈ ಮೂವರು ಕಾಡು ಕಿಚ್ಚಿನಲ್ಲಿ ಮೃತರಾದರು.

ನಾನು ಬರೆದಂತೆ ವಿದುರನು ಇವರೊಡನೆ ಮಡಿಯದೇ ಅದರ ಪೂರ್ವದಲ್ಲಿಯೇ ಮಡಿದನೆಂದು ಮಹಾಭಾರತದಲ್ಲಿದೆ.]

3
ಕುಂತಿ

ಮನುಷ್ಯನ ಜೀವನದಲ್ಲಿ ಆತನ ಸ್ವಂತ ಕೃತಿಯಾಗಿ ನಡೆದ ಘಟನೆಗಳು ತೀರ ಕಡಿಮೆ. ಅನೇಕ ಸಲ ನೋಡಿದಾಗ ಜೀವನವು ಗಾಳಿಯಿಂದ ಅತ್ತಿತ್ತ ಹೊಯ್ದಾಡುವ ತರಗೆಲೆಯಂತೆ ಭಾಸವಾಗುತ್ತದೆ. ಕೆಲವು ಸಲ ಜೀವನವು ಸಂಪೂರ್ಣವಾಗಿ ಪರರ ಅಂಕಿತದಲ್ಲಿ ಇರುವುದು ಕಂಡುಬರುತ್ತದೆ. ಮಹಾಭಾರತದಲ್ಲಿಯ ಹೆಂಗಸರ ಜೀವನವು ಇದೇ ತರಹ ಪರಾಧೀನವಾಗಿತ್ತು. ಅವರ ಸುಖದುಃಖಗಳು, ಅವರು ಅವಲಂಬಿಸಿದ್ದ ಪುರುಷರ ಕೈಯಲ್ಲಿ ಇದ್ದವು. ಪುರುಷರು ಕಾರ್ಯ–ಕಾರಣ ನಿಪುಣರು. ಕಾರ್ಯಗಳನ್ನು ಮಾಡುವವರು ಪುರುಷರು. ಅದರ ಪರಿಣಾಮಗಳನ್ನು ಅನುಭವಿಸುವವರು ಹೆಂಗಸರು. ಗಾಂಧಾರಿ, ದ್ರೌಪದಿ, ಸುಭದ್ರೆ, ಇವರೆಲ್ಲರದೂ ಇದೇ ಪಾಡು. ಈ ಸ್ತ್ರೀಯರು ಜೀವನದ ಕೆಲವು ಸಮಯವಾದರೂ, ವೈಭವ ಸ್ವಾಸ್ಥ್ಯಗಳನ್ನು ಅನುಭವಿಸಿದರು. ಅಂಧನ ಜೊತೆ ವಿವಾಹವಾದರೂ ಗಾಂಧಾರಿಯು ಹಸ್ತಿನಾಪುರದ ಅರಮನೆಯ ವೈಭವದಲ್ಲಿದ್ದಳು. ಪತಿಗೆ ಪಟ್ಟವಿರಲಿಲ್ಲವಾದರೂ ಅವಳು ರಾಣಿಯಂತೆ ಇದ್ದಳು. ದುರ್ಯೋಧನನು ರಾಜ್ಯವನ್ನು ಆಳುತ್ತಿರುವಾಗ ರಾಜಮಾತೆಯೆಂದು ಅವಳು ಮೆರೆದಳು. ದ್ರೌಪದಿಯು ದುಃಖದಷ್ಟೇ ಸುಖವನ್ನು ಅನುಭವಿಸಿದಳು. ಸುಭದ್ರೆಯು ಎಂದಿಗೂ ಪಟ್ಟದ ರಾಣಿಯಾಗಲಿಲ್ಲ. ಆದರೆ ಅವಳ ಅಯುಷ್ಯವೆಲ್ಲ ಸುಖದಲ್ಲಿಯೇ ಕಳೆಯಿತು. ಅವಳ ಮಗನು ಮೃತನಾದರೂ ಮೊಮ್ಮಗನು ಪಟ್ಟವನ್ನೇರಿದನು. ಕೊನೆಯಲ್ಲಿ ತನ್ನ ಮತ್ತು ಸಹೋದರನಾದ ಕೃಷ್ಣನ ವಂಶಜರು ಪಟ್ಟವನ್ನೇರುವುದನ್ನು ಕಂಡಳು. ಆದರೆ ಕುಂತಿಯ ಸಂದರ್ಭದಲ್ಲಿ ಸುಖವು ಎಳ್ಳಷ್ಟಾದರೂ ಇತ್ತೋ ಇಲ್ಲವೋ? ಅವಳು ಪರ್ವತಪ್ರಾಯ ದುಃಖಗಳನ್ನು ಮಾತ್ರ, ಇಡೀ ಜೀವನವೆಲ್ಲ ಸಹಿಸುತ್ತಿದ್ದಳು. ಅವಳ ಆಪ್ತ ಸಂಬಂಧಿಕರಾದ ಎಲ್ಲ ಪುರುಷರು, ಅವಳಿಗೆ ಆದಷ್ಟು ದುಃಖವನ್ನೇ ಉಂಟುಮಾಡಿದರು.

ಮಹಾಭಾರತದ ಒಂದು ಕಡೆಯಲ್ಲಿ ಅವಳು ವಾಸುದೇವನಿಗೆ ಈ ರೀತಿ ಹೇಳುತ್ತಾಳೆ: "ನಾನು ನಿನ್ನನ್ನು ಕಂಕುಳಲ್ಲಿ ಎತ್ತಿಕೊಂಡು ಚಂಡಿನ ಆಟವನ್ನು ಆಡುತ್ತಿದ್ದೆನು. ಇಷ್ಟು ಚಿಕ್ಕಪ್ರಾಯದಲ್ಲಿ, ದಾರಿಹೋಕನಿಗೆ ದ್ರವ್ಯವನ್ನು ಎಸೆದುಬಿಟ್ಟಂತೆ ನನ್ನ ತಂದೆಯು ನನ್ನನ್ನು ಕುಂತಿಭೋಜನಿಗೆ ಅರ್ಪಿಸಿದನು." ಉದ್ಯೋಗ ಪರ್ವದಲ್ಲಿಯ ಈ ಸಂದರ್ಭವನ್ನು ನಂತರ ಸೇರಿಸಿದಂತಿದೆ. ಏಕೆಂದರೆ ಅವಳು ಕೃಷ್ಣನನ್ನು ಎತ್ತಿಕೊಂಡ ಬಗ್ಗೆ ಹೇಳಿದ್ದು ಆಧಾರಕ್ಕೆ

ಸುಸಂಬದ್ಧವಿಲ್ಲ. ಮಹಾಭಾರತವನ್ನು ಓದುತ್ತಿದ್ದಂತೆ, ಅವಳು ಓರ್ವ ದುಃಖಿತಳಾದ ವಿಚಾರವಂತೆಯಾದ ಸ್ತ್ರೀ ಇದ್ದಳೆಂದು ಕಂಡುಬರುತ್ತದೆ. ಅವಳು ಎಷ್ಟೋ ಅತ್ತು ಕರೆದರೂ ತನ್ನನ್ನು ಹೀನದೀನಳೆಂದು ತಿಳಿಯುತ್ತಿದ್ದಿಲ್ಲ. ಕ್ಷತ್ರಿಯ ನಾರಿಯು ಪಡೆಯಬೇಕಾದ್ದದನ್ನು ಅವಳು ಪಡೆದಿದ್ದಳೆಂದು ನಂಬಿದ್ದಳು. ಸುಖಭೋಗಗಳ ಜೀವನವು ಕ್ಷತ್ರಿಯ ನಾರಿಯರ ಅಪೇಕ್ಷೆಯಾಗಿರಲಿಲ್ಲವೆಂದು ಅವಳ ಹೇಳಿಕೆಯಿಂದ ತಿಳಿದುಬರುತ್ತದೆ. ಕುಂತಿಯು ಬಲು ಧೈರ್ಯ ಮತ್ತು ಓಜಸ್ಸಿನಿಂದ ಕೃತಾರ್ಥಳಾಗಿ, ಜೀವನವನ್ನು ಕಳೆದಳು. ಲೇಖಕಿಯಾದ ನಾನು ನನ್ನ ಸುಖದುಃಖಗಳ ಕಲ್ಪನೆಗೆ ಅವಳ ಸುಖ ದುಃಖಗಳನ್ನೇಕೆ ಹೋಲಿಸಿ ನೋಡಬೇಕು?

ಕುಂತಿಯ ಪಿತನಾದ ಶೂರಸೇನನು ಅರಸನಾಗಿದ್ದನು. ಕುಂತಿಭೋಜನು ಅದೇ ಕುಲದ ಇನ್ನೊಬ್ಬ ರಾಜನಿದ್ದನು. ಮಹಾಭಾರತದಲ್ಲಿ ಕುಂತಿಯ ಬಗ್ಗೆ ಮೊದಲನೆಯ ಶ್ಲೋಕವು ಕೆಳಗಿನಂತಿದೆ.

ಇದ್ದ ಶ್ಲೋಕಾನ್ವಯವು ಈ ರೀತಿ ಇದೆ.

ಪೈತೃಷ್ವಸೆಯಾಯ ಸ ತಾಮನಪತ್ಯಾಯ ವೀರ್ಯವಾನ್ ।
ಅಗ್ರ್ಯಮಗ್ರೆ ಪ್ರತಿಜ್ಞಾಯ ಸ್ವಸ್ಯಾಪತ್ಯಸ್ಯ ವೀರ್ಯವಾನ್
ಅಗ್ರ ಜಾತೇತಿ ತಾಂ ಕನ್ಯಾಂ ಅಗ್ರಾನುಗ್ರಹ ಕಾಂಕ್ಷಿಣೆ ।
ಪ್ರದದೌ ಕುಂತಿಭೋಜಾಯ ಸಖಾ ಸಖ್ಯೆ ಮಹಾತ್ಮನೆ ॥

(೧.೧೦೪.೨–೩)

[ಸಃ ವೀರ್ಯವಾನ್ ಸಖಾ ಸ್ವಸ್ಯ, ಅಪತ್ಯಸ್ಯ ಅಗ್ರೆ ಅಗ್ರ್ಯಂ ಪ್ರತಿಜ್ಞಾಯ, ಅಗ್ರಜಾತಾ ಇತಿ ತಾಂ ಕನ್ಯಾಂ ಅಗ್ರ್ಯಾನುಗ್ರಹಕಾಂಕ್ಷಿಣಿ ಪೈತೃಷ್ವ ಸೆಯಾಯ ಅನಪತ್ಯಾಯ ಮಹಾತ್ಮನೆ ಸಖ್ಯೆ ಕುಂತಿಭೋಜಾಯ ಪ್ರದದೌ.]

ಇಲ್ಲಿ ಮೊದಲನೇ ಸಾಲಿನಲ್ಲಿಯ 'ತಾಮ್' ಮತ್ತು ಎರಡನೆಯ ಸಾಲಿನಲ್ಲಿಯ 'ವೀರ್ಯವಾನ್' ಈ ಪದಗಳು ಪಾದಪೂರ್ಣಾರ್ಥವಾಗಿವೆ ಎಂದು ತಿಳಿಯಬೇಕು.

ಅರ್ಥ– ಆ ವೀರಸುಹೃದನು (ಶೂರಸೇನ) ತನಗೆ ಸಂತತಿಯಾಗುವ ಮೊದಲೇ, ತನಗಾಗುವ ಪ್ರಥಮಸಂತಾನವನ್ನು ಕೊಡುವ ಪ್ರಮಾಣವಚನ ಕೊಟ್ಟು, ಮೊದಲು ಹುಟ್ಟಿದವಳೆಂದು ಆ ಕನ್ಯೆಯನ್ನು ಬ್ರಾಹ್ಮಣರ ಅನುಗ್ರಹವನ್ನು ಇಚ್ಛಿಸುವ, ಅಪತ್ಯ ಹೀನವಾದ, ತನ್ನ ಸೋದರತ್ತೆಯ ಮಗನಾದ, ಪರಮಮಿತ್ರನಾದ ಕುಂತಿಭೋಜನಿಗೆ ಅರ್ಪಿಸಿದನು.

ಜನ್ಮತಾಳುವ ಮೊದಲೇ ಕುಂತಿಯ ಭವಿಷ್ಯವು ನಿಶ್ಚಿತವಾಗಿತ್ತು. ಅವಳು ಹುಟ್ಟುವ ಮುಂಚೆ ಗಂಡುಮಗು ಹುಟ್ಟಿದ್ದರೆ ಆ ಭವಿಷ್ಯ ತಪ್ಪಬಹುದಿತ್ತು. "ನನ್ನ ಮಗುವನ್ನು ನಿನಗೆ ಕೊಡುವೆನು" ಎಂದು ಶೂರಸೇನನು ಮಾತು ಕೊಟ್ಟಿದ್ದನು. ಚೊಚ್ಚಲು ಗಂಡುಮಗು ಹುಟ್ಟಿದ್ದರೆ ಶೂರಸೇನನು ಖಂಡಿತವಾಗಿ ಕೊಡುತ್ತಿರಲಿಲ್ಲ. ಆ ಮಗು ಪಟ್ಟಕ್ಕೆ ಉತ್ತರಾಧಿಕಾರಿಯಾಗುತ್ತಿತ್ತು. ಕನ್ಯೆಯು ಹುಟ್ಟಿದ್ದರಿಂದ ಕೊಡುವುದಕ್ಕೆ ಪ್ರತ್ಯವಾಯ ಉಳಿಯಲಿಲ್ಲ. ಕುಂತಿಭೋಜನು ಬ್ರಾಹ್ಮಣರ ಅನುಗ್ರಹವನ್ನು ಪಡೆಯಲು ಪ್ರಯತ್ನಿಸುತ್ತಿದ್ದನು.

ಕುಂತಿಭೋಜನು ಶೂರಸೇನನು ಕುಂತಿಯನ್ನು ಕೊಟ್ಟನು. ಕನ್ಯೆಯರ ವಿವಿಧ ಉಪಯೋಗಗಳಲ್ಲಿ ಇದು ಒಂದು. ಮದುವೆಯಾದ ನಂತರ ಅವಳು ಹೆರವರ ಮನೆಗೆ ಹೋಗತಕ್ಕವಳೇ ! ಆದರೆ ಅದಕ್ಕೆ ಮುಂಚಿತವಾಗಿ ಅವಳನ್ನು ಕುಂತಿಭೋಜನಿಗೆ ಬ್ರಾಹ್ಮಣರ ಸೇವೆಗೆಂದು ಇರಿಸಲು ಕೊಡುವುದರಲ್ಲಿ ಶೂರಸೇನನಿಗೆ ತಪ್ಪೇನೂ ಅನಿಸಲಿಲ್ಲ. ಇದೇ ರೀತಿ ಪುರಾಣದಲ್ಲಿ ದಶರಥನು ತನ್ನ ಕನ್ಯೆಯನ್ನು ಮಿತ್ರನಾದ ಲೋಮಪಾದನಿಗೆ ಅರ್ಪಿಸಿದ ವರ್ಣನೆ ಇದೆ. ಈ ಪ್ರಸಂಗವನ್ನು ಉಲ್ಲೇಖಿಸಿ ಕುಂತಿಯು ಉದ್ಯೋಗಪರ್ವದಲ್ಲಿ "ಸಂಪತ್ತನ್ನು ಹಾದಿಹೋಕನಿಗೆ ಕೊಟ್ಟಂತೆ, ನನ್ನ ತಂದೆಯು ನನ್ನನ್ನೇ ಅರ್ಪಿಸಿದನು" ಎಂದು ಹೇಳುತ್ತಾಳೆ.

ಕುಂತಿಯ ಹೆಸರು "ಪೃಥಾ". ಬಹುಶಃ ಅವಳು ಸ್ಥೂಲಕಾಯಳಿರಬೇಕು. ಅದಕ್ಕಾಗಿಯೇ ಆ ಹೆಸರು ಇರಬೇಕು. ಅವಳು ಕುಂತಳದೇಶದ ಭೋಜರಾಜನ ಮಗಳಾದ್ದರಿಂದ ಅವಳ ಹೆಸರು "ಕುಂತಿ" ಇರಬೇಕು. ಭೋಜರಾಜನು ಕುಂತಿಯನ್ನು ಸ್ವೀಕರಿಸಿದ್ದು, ಒಬ್ಬ ಕೋಪಿಷ್ಠ ಋಷಿಯ ಸೇವೆಗಾಗಿ. ಆ ಋಷಿಯೆಂದರೆ ದುರ್ವಾಸ. ದುರ್ವಾಸನು ತೀರ ಹೀನವಾದ, ತುಂಡು ಬಟ್ಟೆಯನ್ನು ಧರಿಸುತ್ತಿದ್ದನೆಂದು ಪುರಾಣಗಳಲ್ಲಿ ವರ್ಣನೆ ಇದೆ. ಆತನು ಮಹಾ ಕೋಪಿಷ್ಠನಾಗಿದ್ದನು ಎಂಬ ವರ್ಣನೆ ಇದೆ. ಸುಗಂಧವುಳ್ಳ ಈ ಕನ್ಯೆಯು ಒಂದು ವರುಷ ಅವನ ಸೇವೆಯನ್ನು ಮಾಡಿದಳು. ಒಮ್ಮೆಯೂ ಆತನಿಗೆ ಕೋಪ ಬರದಂತೆ ನೋಡಿಕೊಂಡಳು. ಮರಳುವಾಗ್ಗೆ ಆತನು ಪ್ರಸನ್ನನಾಗಿ, ಅವಳಿಗೆ ಪುತ್ರಪ್ರಾಪ್ತಿ ಮಂತ್ರವನ್ನು ಹೇಳಿಕೊಟ್ಟನು. ಮಹಾಭಾರತದಲ್ಲಿ ಈ ಮಂತ್ರಗಳಿಗೆ ಮತ್ತು ಅವುಗಳ ಅನುಷ್ಠಾನಕ್ಕೆ ಅಭಿಚಾರ 'ಅಭಿಚಾರಾಭಿಸಂಯುಕ್ತಂ' ಎಂಬ ವಿಶೇಷಣವಿದೆ. ವೇದಗಳಲ್ಲಿ ಅಭಿಚಾರ ಮಂತ್ರಗಳು ಯಾರೊಬ್ಬರ ನಾಶಕ್ಕಾಗಿ, ಇಲ್ಲವೇ ಸೋಲಿಗಾಗಿ, ಅಥವಾ ಯಾರೊಬ್ಬರ ವಶೀಕರಣಕ್ಕಾಗಿ ಯೋಜಿಸಿದ್ದಾಗಿವೆ. ಯಾವ ವ್ಯಕ್ತಿಯ ಮೇಲೆ ಇವುಗಳನ್ನು ಪ್ರಯೋಗಿಸುವುದಿದೆಯೋ, ಆ ವ್ಯಕ್ತಿಯಿಂದ ಕೆಲವು ಕ್ರಿಯೆಗಳನ್ನು ಮಾಡಿಸುವ ಸಾಮರ್ಥ್ಯವು ಅಭಿಚಾರ ಮಂತ್ರದಲ್ಲಿದೆ, ಎಂಬ ಭಾವನೆ ಇತ್ತು. ಈ ಮಂತ್ರಗಳಿಂದ, ಆಹ್ವಾನಿಸಿದರೆ ಇಷ್ಟದೇವರು ಕುಂತಿಗೆ ವಶವಾಗುತ್ತಿದ್ದರು.

ಬಾಲಬುದ್ಧಿಯಿಂದ ಕುಂತಿಯು ಸೂರ್ಯನನ್ನು ಆಹ್ವಾನಿಸಿದಳು. ಆತನ ಸಂಗದಿಂದ ಆಕೆಗೆ ಕೂಡಲೆ ಸುಂದರವಾದ ಒಂದು ಗಂಡುಮಗು ಹುಟ್ಟಿತು. ಕೌಮಾರ್ಯದಲ್ಲಿ ಮಗು ಹುಟ್ಟಿತು ಎಂಬ ನಾಚಿಕೆಯಿಂದ, ಕುಂತಿಯು ಅದನ್ನು ಹುಟ್ಟಿದ ಕ್ಷಣವೇ ತ್ಯಜಿಸಿದಳು. ಇದೇ ಮಗನು ಮುಂದೆ ಕರ್ಣನೆಂದು ಪ್ರಖ್ಯಾತನಾದನು.

ಮಹಾಭಾರತದಲ್ಲಿ ಅದ್ಭುತವಾದ ಕಥೆಗಳು ಬಹಳವಾಗಿವೆ. ಮಾನವ ದೃಷ್ಟಿಯಿಂದ ಕೆಲವೊಂದರ ಅರ್ಥಬೋಧವನ್ನು ಮಾಡಿಕೊಳ್ಳಬಹುದಾಗಿದೆ. ಆದರೆ ಹಲವೊಂದರ ಅರ್ಥಬೋಧೆಯು ಈ ರೀತಿಯಲ್ಲಿ ಆಗುವಂತಿಲ್ಲ. ಸೂರ್ಯನಿಂದ ಕುಂತಿಗೆ ಮಗುವು ಜನಿಸಿತು. ಜನ್ಮತಃ ಅದಕ್ಕೆ ಕವಚಕುಂಡಲಗಳು ದೊರಕಿದ್ದವು. ಈ ಕಥೆಯು ಮಹಾಭಾರತದ ಅದ್ಭುತ ಕಥೆಗಳಲ್ಲಿ ಒಂದಾಗಿದೆ. ಈ ಕಥೆಯು ಅರ್ಥಬೋಧ ಮಾಡಿಕೊಳ್ಳಬಹುದೆ?

ಕುಂತಿಯು ಋಷಿಯ ಸೇವೆಯನ್ನು ಮಾಡಿದಳು. ಸೇವೆ ಎಂದರೆ ಏನು? ಈ ಸೇವೆಯ ದೃಶ್ಯ ಫಲವೇ ಕರ್ಣನೋ? ಹಾಗಿದ್ದರೆ ಸೂರ್ಯನ ಜೊತೆ ಸಂಬಂಧವನ್ನು ಹೇಳಿದ್ದೇಕೆ? ಜನ್ಮತಃ ದೇಹದ ಮೇಲೆ ಹೊಂದಿಸಿದ್ದ ಕವಚಕುಂಡಲಗಳೆಂದರೇನು ? ಕುಂತಿಯು ಶಿಶುವನ್ನು ತ್ಯಜಿಸಿದಳು. ಆಗ ಅದರೊಡನೆ ದ್ರವ್ಯವನ್ನು ಇಟ್ಟಳು. ಅದರಂತೆಯೇ ಕವಚಕುಂಡಲಗಳನ್ನು ಇಟ್ಟಿರಬಹುದೋ ? ಕವಚಕುಂಡಲಗಳು ಶ್ರೇಷ್ಠಕುಲದ ವಿಶೇಷವಾಗಿ, ಕ್ಷತ್ರಿಯತ್ವದ ದ್ಯೋತಕವಿದ್ದವೊ ? ತ್ಯಜಿಸಿದ ಶಿಶುವು ಕ್ಷತ್ರಿಯರದು, ಎಂದು ತೋರಿಸುವುದಕ್ಕೆ, ಕುಂತಿಯು ಕವಚಕುಂಡಲಗಳನ್ನು ಶಿಶುವಿನ ಹತ್ತಿರ ಇಟ್ಟಿರಬಹುದೋ ? ಇಂಥ ಅನೇಕ ಪ್ರಶ್ನೆಗಳು ಮನಸ್ಸಿನಲ್ಲಿ ಮೂಡುತ್ತವೆ. ಶಿಶುವು, ಸೂತವಾದ "ಅಧಿರಥ"ನಿಗೆ ದೊರಕಿತು. ದ್ರವ್ಯದೊಡನೆ ದೊರಕಿದ್ದರಿಂದ 'ವಸುಷೇಣ' ಎಂಬ ಹೆಸರನ್ನು ಅಧಿರಥನು ಇಟ್ಟನು. ಹೆಸರು 'ಸೇನ' ಪದಾಂತವಿದ್ದುದ್ದರಿಂದ ಕ್ಷತ್ರಿಯರ ಹೋಲಿಕೆಯದು. ಕವಚಕುಂಡಲಗಳನ್ನು ನೋಡಿ ಅಧಿರಥನು ನಾಮಕರಣವನ್ನು ಮಾಡಿರಬಹುದು. ಕರ್ಣಜನ್ಮವು ಮತ್ತು ಕವಚಕುಂಡಲಗಳು ಇವೆರಡರ ನೈಸರ್ಗಿಕ ಉಪಪತ್ತಿಯು ಸಾಧ್ಯವಿಲ್ಲ. ಒಂದು ವೇಳೆ ದುರ್ವಾಸ ಮತ್ತು ಸೂರ್ಯನ ಸಂಬಂಧವು ಕಂಡುಬಂದಿದ್ದರೆ ಇಂಥ ಉಪಪತ್ತಿಯು ಸಾಧ್ಯವಿತ್ತು. ಆದರೆ ಮಹಾಭಾರತದಲ್ಲಿ ಈ ರೀತಿ ತೋರುವುದಿಲ್ಲ. ಕೌಮಾರ್ಯದಲ್ಲಿ ಜನಿಸಿದ ಈ ಶಿಶುವೆಂದರೆ, ಕುಂತಿಯ ಆಜನ್ಮ ಒಡಲಿನ ವ್ಯಥೆಯಾಗಿತ್ತು. ಒಮ್ಮೆ ತ್ಯಾಗ ಮಾಡಿದ ನಂತರ ಪುನಃ ಅಂಗೀಕರಿಸುವುದು ಕುಂತಿಗೆ ಸಾಧ್ಯವಾಗಲಿಲ್ಲ. ದೊಡ್ಡವನಾದ ನಂತರ ಆತನಿಗೆ ಸಮಗ್ರ ಜನ್ಮರಹಸ್ಯವನ್ನು ತಿಳಿಸಿಯೂ ಕೂಡ, ತಾಯಿಯ ಈ ಕೃತ್ಯವನ್ನು ಆತನು ಮರೆಯಲಿಲ್ಲ. ತಾಯಿಯನ್ನು ಕ್ಷಮಿಸುವುದು ಆತನಿಗೆ ಆಗಲಿಲ್ಲ. ಈ ಪುತ್ರನ ಜನ್ಮದಿಂದ ಮರಣದವರೆಗೆ ಕುಂತಿಯು ಆತನನ್ನು ಹಡೆದ, ತ್ಯಜಿಸಿದ, ಅನ್ಯಾಯದ ಪಾಪಕ್ಷಾಲನೆಯನ್ನು ಪ್ರತಿಕ್ಷಣವೂ ಮಾಡುತ್ತಿದ್ದಳು. ಒಬ್ಬ ತಂದೆಯು ದತ್ತು ಕೊಟ್ಟಿದ್ದರ ಪರಿಣಾಮವಾಗಿ ಈ ದುಃಖ ಒದಗಿತ್ತು. ಎರಡನೆಯ ದತ್ತು ತಂದೆಯು ಧಾರೆಯೆರೆದು ಕೊಟ್ಟಿದ್ದು ಒಬ್ಬ ಅಂಗವಿಕಲನೊಡನೆ. ಅದರ ಪರಿಣಾಮವಾಗಿ ಜನಿಸಿದ ದುಃಖಗಳು ಈ ಮೊದಲಿನ ದುಃಖಗಳ ಸಂಗಡ ಅವಳನ್ನು ಹಿಂಬಾಲಿಸಿದವು.

ಪಾಂಡುವಿಗೆ ರಾಜ್ಯಾಭಿಷೇಕವಾಯಿತು. ಕುಂತಿಯು ಹಸ್ತಿನಾಪುರದ ಮಹಾರಾಣಿಯಾದಳು. ಆದರೆ ಇಡೀ ಮಹಾಭಾರತದಲ್ಲಿ ಈ ರಾಜ್ಞೀಪದದ ಉಲ್ಲೇಖವು ಕೇವಲ ಅವಳ ಮುಖದಿಂದ ಬಂದಿದೆ. ಪಾಂಡುವು ರಾಜನಾದನು. ದಿಗ್ವಿಜಯ ಮಾಡಿದನು. ಶೇಖರಿಸಿದ ಕರಭಾರವನ್ನು, ರತ್ನ ನಾಣ್ಯಗಳನ್ನು ಧೃತರಾಷ್ಟ್ರನಿಗೆ ಅರ್ಪಿಸಿದನು. ತಾನು ಹಿಮಾಲಯಕ್ಕೆ ತೆರಳಿದನು. ಅವನೊಡನೆ ಕುಂತಿ, ಮಾದ್ರಿಯರು ಹೋದರು. ಹಿಮಾಲಯದಲ್ಲೂ ಅವರು ವೈಭವದಿಂದ ಇದ್ದಿರಬಹುದು. ಆದರೆ ಹಸ್ತಿನಾಪುರದ ರಾಜ್ಞೀಪದವೆಲ್ಲಿ? ಅರಣ್ಯವಾಸವೆಲ್ಲಿ?

ಕೌರವರಿಗೆ ಬೇಟೆಯ ಹವ್ಯಾಸವಿತ್ತು. ಅವರು ಕಾಡಿಗೆ ಹೋಗುತ್ತಿದ್ದರು. ಹೆಂಗಸರು ರಾಜಧಾನಿಯಲ್ಲಿಯೇ ಉಳಿಯುತ್ತಿದ್ದರು. ಆದ್ದರಿಂದಲೇ ಶಕುಂತಲೆಯು– ದುಷ್ಯಂತನಿಗೆ ಮತ್ತು ಸತ್ಯವತಿಯು–ಶಂತನುವಿಗೆ ಬಲೆ ಬೀಸಿದರು. ಪಾಂಡುವು ಹರೆಯ ಪ್ರಾಯದಲ್ಲಿ ಕಾಡನ್ನು ಸೇರಿದ್ದೇಕೆ ? ತಾನು ಜೀವಿಸಿರುವಾಗ ತನ್ನ ರಾಣಿಯರು ಇತರರಿಂದ ರಾಜಧಾನಿಯಲ್ಲಿ ಇದ್ದು ಪ್ರಜೋತ್ಪತ್ತಿಯನ್ನು ಪಡೆಯುವುದು ಪಾಂಡುವಿಗೆ ಇಷ್ಟವಿರಲಿಲ್ಲವೇ? ಕಾಡಿನಲ್ಲಿ ಜನಿಸಿದ ಎಲ್ಲ ಪುತ್ರರು 'ದೇವದತ್ತ' ರೆನಿಸಿದರು. ಪ್ರಾಯಶಃ ಇದು ರಾಜಧಾನಿಯಲ್ಲಿ ಇದ್ದುಕೊಂಡು ಸಾಧ್ಯವಾಗುತ್ತಿರಲಿಲ್ಲ. ಪಾಂಡುವು ಕಾಡಿಗೆ ಹೋದನಂತರ ಶಾಪವನ್ನು ಪಡೆದನೆಂದು, ಮಹಾಭಾರತದಲ್ಲಿ ಹೇಳಿದೆ. ಕೊಂಚಕಾಲ ಇದು ನಿಜವೆಂದು ಭಾವಿಸಿದರೂ ದಿಗ್ವಿಜಯವಾದ ಕೂಡಲೆ ಪಾಂಡುವು ಇಷ್ಟು ನಡುಪ್ರಾಯದಲ್ಲಿ ಇಬ್ಬರು ಮಡದಿಯರನ್ನು ಕರೆದುಕೊಂಡು ಕಾಡಿಗೆ ಹೋಗುವುದು ಸಮಸ್ಯೆಯಾಗಿಯೇ ಉಳಿಯುತ್ತದೆ. ಪುತ್ರೋತ್ಪತ್ತಿಯು ಕೂಡಲೆ ಆಗಿರಬೇಕು. ತನ್ನಿಂದ ಸಂತತಿಯನ್ನು ಪಡೆಯುವುದು ಅಶಕ್ಯವೆಂದು ತಿಳಿದನಂತರ, ಪಾಂಡುವು ಕುಂತಿಗೆ ನಿಯೋಗದಿಂದ ಪುತ್ರರನ್ನು ಪಡೆಯಲು (ಪ್ರಸವಿಸಲು) ಹೇಳಿದನು. ತನಗೆ ಕೌಮಾರ್ಯದಲ್ಲಿಯೇ ಮಗುವು ಜನಿಸಿದ್ದು ಕುಂತಿಯು ಪಾಂಡುವಿಗೆ ಹೇಳಬಹುದಿತ್ತು. ಆದರೆ ರೂಢಿಯಂತೆ (ಬೀಜಕ್ಷೇತ್ರ ನ್ಯಾಯದಿಂದ) ಆ ಪುತ್ರನು ತನ್ನವನೇ ಎಂದು ಹೇಳಬಹುದಿತ್ತು. ಆದರೆ ಕೌಮಾರ್ಯದಲ್ಲಿ ಹುಟ್ಟಿದ ಆಮಗುವಿನದು ಏನಾಯಿತು? ಅದು ಬದುಕಿರುವುದೋ? ಇಲ್ಲವೊ? ಅದು ಕೂಡ ಕುಂತಿಗೆ ಗೊತ್ತಿರಲಿಲ್ಲ. ಈ ಪರಿಸ್ಥಿತಿಯ ಮೂಲಕ, ಅವಳು ಕೌಮಾರ್ಯದಲ್ಲಿ ನಡೆದುದನ್ನು ಪಾಂಡುವಿಗೆ ತಿಳಿಸಲಿಲ್ಲ. ಇದರಲ್ಲಿ ಸೋಜಿಗವೇನಿಲ್ಲ.

ಧೃತರಾಷ್ಟ್ರನ ವಿವಾಹವಾಗಿತ್ತು. ಆತನಿಗೆ ಮಕ್ಕಳಾಗುವ ಮೊದಲು ತನಗೆ ಮಕ್ಕಳಾಗಬೇಕು ಎಂದು ಪಾಂಡುವು ಇಚ್ಛಿಸಿರಬೇಕು. ಗಾಂಧಾರಿಯು ಮೊದಲು ಗರ್ಭಿಣಿಯಾದರೂ ಕುಂತಿಯೇ ಮಕ್ಕಳನ್ನು ಮೊದಲು ಪಡೆದಳು ಎಂದು ಮಹಾ ಭಾರತದಲ್ಲಿ ಹೇಳಿದೆ.

ಕುಂತಿಗೆ ಒಂದೊಂದಾಗಿ ಮೂರು ಮಕ್ಕಳಾದವು. ಮಾದ್ರಿಯು ರಾಜನನ್ನು ಕುರಿತು, "ಜನರು ನನಗೆ ಬಂಜೆ ಎಂದು ಆಡಿಕೊಳ್ಳುವರು. ನನ್ನಲ್ಲಿ ಯಾವ ಬಗೆಯ ದೋಷವೂ ಇಲ್ಲ. ನೀವು ಹಿರಿಯಳಾದ ಕುಂತಿಯನ್ನು ಕೇಳಿ ನನಗೂ ಒಂದು ಮಂತ್ರವನ್ನು ಕೊಡಿಸುವಿರಾ?" ಎಂದು ಕೇಳಿದಳು. ಪಾಂಡುವಿನ ಇಚ್ಛೆಯ ಮೇರೆಗೆ ಕುಂತಿಯು ಒಂದು ಮಂತ್ರವನ್ನು ಮಾದ್ರಿಗೆ ಕೊಟ್ಟಳು. ಮಾದ್ರಿಯು ಅಶ್ವಿನೀ ಕುಮಾರರನ್ನು ಆಹ್ವಾನಿಸಿದಳು. ಅವಳಿಗೆ ಅವಳಿಮಕ್ಕಳಾದುವು. ಮಕ್ಕಳು ತುಸು ಬೆಳೆದ ಮೇಲೆ, ಮಾದ್ರಿಯು ಪುನಃ ಪುತ್ರಪ್ರಾಪ್ತಿಗಾಗಿ ಕುಂತಿಯನ್ನು ಕೇಳಿಕೊಳ್ಳಲು ರಾಜನಿಗೆ ಹೇಳಿದಳು. ರಾಜನು ಮಂತ್ರಕ್ಕಾಗಿ ಕೇಳಿದಾಗ ಕುಂತಿಯು ಕ್ರೋಧದಿಂದ ಹೇಳಿದಳು: "ನಾನು ಹುಚ್ಚಿ ! ಅವಳಿ ಮಕ್ಕಳಾಗುವರು ಎಂದು ನಾನು ತಿಳಿದಿರಲಿಲ್ಲ. ಇನ್ನೊಮ್ಮೆ ಮಂತ್ರವನ್ನು ಕೊಟ್ಟರೆ ಅವಳು ಏನು

ಮಾಡುವಳೋ? ಅವಳದೇ ಪ್ರಭುತ್ವ ಉಂಟಾಗುವುದು ! ಇನ್ನು ಯಾರಿಗೂ ಮಕ್ಕಳಾಗುವುದೇ ಬೇಡ! ನನಗೂ ಬೇಡ ! ಅವಳಿಗೂ ಬೇಡ."

ಮೊದಲನೆಯ ಸಲವೇ ಮಾದ್ರಿಯು ಅವಳಿಮಕ್ಕಳನ್ನು ಪಡೆಯದಿದ್ದಲ್ಲಿ ಬಹುಶಃ ಇನ್ನು ಕೆಲವು ಪಾಂಡವರು ಜನ್ಮತಾಳಬಹುದಿತ್ತು.

ದುರ್ದೈವಿಯಾದ ಮಾದ್ರಿ ಚಲುವೆ ಇದ್ದಳು. ಯೌವನೆ ಇದ್ದಳು. ಆದರೆ ಭೀಷ್ಮನು ಆಕೆಯನ್ನು ಪಾಂಡುವಿನ ಕಿರಿಯ ಪತ್ನಿಯಾಗಿ ಕೊಂಡುಕೊಂಡಿದ್ದನು. ರಾಜ್ಞೀಪದವಂತು ದೂರವೇ ಇತ್ತು. ಮಾದ್ರಿಯು ಕುಂತಿಯ ಮತ್ಸರಾಗ್ನಿಯಲ್ಲಿ ದಗ್ಧಳಾಗುತ್ತಿದ್ದಳು. ಒಂದು ದಿನ ತಡೆಯಲಾಗದೇ ಏಕಾಂತದಲ್ಲಿ ಸಂಧಿಸಿ ಅವಳು ಬೇಡ ! ಬೇಡವೆನ್ನುವಾಗಲೂ ಪಾಂಡುವು ಅವಳೊಡನೆ ಸಮಾಗಮವನ್ನು ಮಾಡಿದನು; ಕೂಡಲೇ ಮೃತನಾದನು. ಮಾದ್ರಿಯ ರೋದನವನ್ನು ಕೇಳಿ ಕುಂತಿಯು ಬಂದಳು. "ಒಬ್ಬಳೇ ಬಾ ! ಮಕ್ಕಳನ್ನು ತರಬೇಡ!" ಎಂದು ಮಾದ್ರಿಯ ಶಬ್ದಗಳನ್ನು ಕೇಳಿ ಮಕ್ಕಳಿಗೆ ದೂರ ಉಳಿಯಲು ಹೇಳಿ, "ಅನಾಹುತವಾಯಿತು" ಎಂದು ಚೀರುತ್ತ ಕುಂತಿಯು ಧಾವಿಸಿ ಬಂದಳು. ರಾಜನ ಜೊತೆಯಲ್ಲಿ ಮಾದ್ರಿಯನ್ನು ನೋಡಿ ಕುಂತಿಯ ಮತ್ಸರವು ಉಕ್ಕೇರಿತು. "ನಾನು ಅವನಿಗೆ ಇಷ್ಟು ದಿನ ಕಾವಲಿದ್ದೆನು. ಎಲ್ಲವನ್ನು ತಿಳಿದಿದ್ದರೂ ನೀನು ಹೇಗೆ ಇದಕ್ಕೆ ಅವಕಾಶ ಕೊಟ್ಟೆ? ರಾಜನನ್ನು ಕಾಪಾಡುವುದನ್ನು ಬಿಟ್ಟು ಏಕಾಂತದಲ್ಲಿ ಸಂಧಿಸಿ ಆತನಿಗೆ ಮೋಹಿಸಿದೆ. ನೀನೇ ಧನ್ಯೆ ! ಬಾಲಕಿಯೇ ! ನೀನೇ ಪುಣ್ಯವಂತಳು. ಸಂಭೋಗದ ಆನಂದವು ತುಳುಕುತ್ತಿರುವ ಮಹಾರಾಜನ ನಗುಮುಖವನ್ನು ಕಂಡೆ !" ಎಂದು ಗೋಳಾಡಿದಳು. ಮಾದ್ರಿಯು ಉತ್ತರಿಸುವುದೇನು ? ನಾನು ಬೇಡ! ಬೇಡವೆನ್ನುತ್ತಿದ್ದೆ " ಎಂದು ಮಾದ್ರಿಯೆಂದಳು. ಕುಂತಿಯು "ನಾನು ಹಿರಿಯ ಪತ್ನಿ. ನಾನು ಸ್ವೀಕರಿಸುವ ಮಾರ್ಗದಿಂದ ನನ್ನನ್ನು ಪರಾವೃತ್ತಗೊಳಿಸಬೇಡ, ನಾನು ಪತಿಯನ್ನು ಹಿಂಬಾಲಿಸುವೆನು. ಏಳು ! ಆತನನ್ನು ಬಿಡು! ಈ ಮಕ್ಕಳನ್ನು ಜೋಪಾನ ಮಾಡು!" ಎಂದು ನುಡಿದು, ಮನಸ್ಸಿನ ವಿಷ ಕಾರಿದಳು. ಈ ಒಂದು ಕ್ಷಣದಲ್ಲಿ ಬಾಲಬುದ್ಧಿಯ ಮಾದ್ರಿಯು ಪ್ರೌಢೆಯಾದಳು. ಈ ಕ್ಷಣದಲ್ಲಿ ಅವಳಿಗೆ ಮುಂದಿನ ಇಡೀ ಜೀವನವು ಕಾಣಿಸಿತೇ ? ಈವರೆಗಿನ ವಿಫಲಜೀವನವು ಇನ್ನೂ ಹೆಚ್ಚಾಗಿ ಹೀನದೀನವಾಗುವುದು, ಎಂಬ ಅರಿವು ಅವಳಿಗೆ ಉಂಟಾಯಿತೇ ? ಇದರಿಂದ ಮುಕ್ತಳಾಗುವ ಏಕಮೇವ ಮಾರ್ಗವನ್ನು ಅವಳು ಕೈಕೊಂಡಳು. ಮಾದ್ರಿಯು, "ನಾನೇ ಪತಿಯನ್ನು ಹಿಂಬಾಲಿಸುವೆನು. ನನಗಾಗಿ ಅವನು ಮೃತನಾದನು. ನಿನ್ನ ಮನೋರಥವು ಈಡೇರಲಿಲ್ಲ. ನೀನು ಹಿರಿಯಳಾದ್ದರಿಂದ ನನಗೆ ಅನುಮತಿ ಕೊಡು ! ನಿನ್ನ ಮಕ್ಕಳಲ್ಲಿ ಸಮತ್ವವನ್ನು ಇಡುವುದು ನನ್ನಿಂದಾಗಲಿಕ್ಕಿಲ್ಲ. ಅಂಥ ಪಾಪವು ನನ್ನಿಂದಾಗುವುದು ಬೇಡ. ಕುಂತಿಯೆ ! ನೀನು ನನ್ನ ಮಕ್ಕಳನ್ನು ಒಡಲಿನ ಮಕ್ಕಳಂತೆ ಜೋಪಾನ ಮಾಡು ! ನಾನು ಹೋಗುವೆ" ಎಂದು ನುಡಿದಳು. ಮಾದ್ರಿ ರಾಜನ ಚಿತೆಯಲ್ಲಿ ತನ್ನನ್ನು ದಹಿಸಿಕೊಂಡಳು.

ಕುಂತಿಯು ಮಕ್ಕಳನ್ನು ಮತ್ತು ಅರ್ಧ ಮರ್ಧ ಸುಟ್ಟ ಎರಡು ಪ್ರೇತಗಳನ್ನು ತೆಗೆದುಕೊಂಡು ಋಷಿಗಳೊಡನೆ ಹಸ್ತಿನಾಪುರಕ್ಕೆ ಹೋದಳು.

ಇದರಲ್ಲಿ ಯಾರ ಬಗ್ಗೆ ಕನಿಕರಪಡುವುದು ? ಯಾರನ್ನು ತಿರಸ್ಕರಿಸುವುದು? ಸವತಿಯರಾಗುವುದು, ಆ ಕಾಲದ ಬಹು ಸಂಖ್ಯಾ ಸ್ತ್ರೀಯರ ಹಣೇಬರಹವಾಗಿತ್ತು. ಅಂಥ ಸವತಿಯರಲ್ಲಿ 'ಹಿರಿಯವಳು' ಎಂದು ಅನ್ನಿಸಿಕೊಳ್ಳುವ ಕರುಣಾಜನಕ ಪ್ರಯತ್ನವಿತ್ತು. ಕೌಸಲ್ಯೆ–ಕೈಕೇಯಿ, ದ್ರೌಪದಿ–ಸುಭದ್ರೆ. ಅನಂತರ ಸಾವಿರ ವರುಷಗಳ ನಂತರ ಮಹಾಕವಿ ಕಾಳಿದಾಸನಿಂದ ಚಿತ್ರಿತವಾದ ಧಾರಣಿ. ಇರಾವತಿ, ಮಾಲವಿಕೆ, ಇವರ ಚಿತ್ರಣಗಳು. ಅನಂತರ ಎಷ್ಟೋ ಶತಕಗಳು ಕಳೆದ ಮೇಲೆ ಕೂಡ ಶಿವಾಜಿ ಮಹಾರಾಜರ ರಾಣಿಯರಲ್ಲಿಯ ಕುಟುಂಬದಲ್ಲಿಯೂ ತಿಕ್ಕಾಟ. ಸಮಾಜದಲ್ಲಿಯ ಸ್ತ್ರೀಯರ ಸ್ಥಾನವು ಪತಿ, ಪುತ್ರರನ್ನು ಅವಲಂಬಿಸಿರುತ್ತಿತ್ತು. ಆದ್ದರಿಂದ ಪತಿಯ ಹಿರಿಯ ಪತ್ನಿಯಾಗುವುದು ಇಲ್ಲವೇ ಮೆಚ್ಚಿನ ಪತ್ನಿಯಾಗುವುದು, ತನ್ನ ಪುತ್ರನಿಗೆ ಸಂಪತ್ತಿನ ಅಥವಾ ರಾಜ್ಯದ ಪಾಲನ್ನು ಕೊಡಿಸುವುದು, ಇದೇ ಸ್ತ್ರೀಯರ ಕಾರ್ಯ. ಒಬ್ಬಳು ಇನ್ನೊಬ್ಬಳಿಗೆ ಧೈರ್ಯ ಕೊಡುವ ಭಾವನೆ ಎಲ್ಲಿಯು ತೋರುವುದಿಲ್ಲ. "ನನ್ನ ಬಳಿ ಏತಕ್ಕೆ ಬರುವೆ ? ಆ ಸುಭದ್ರೆಯನ್ನು ತಂದಿರುವೆಯಲ್ಲವೇ? ಅವಳ ಬಳಿ ಹೋಗು !" ಎಂದು ಸಿಟ್ಟಿನಿಂದ ಅರ್ಜುನನಿಗೆ ಹೇಳಿದ ದ್ರೌಪದಿಯು, ಸುಭದ್ರೆಗೆ "ನಿನ್ನ ಗಂಡನು ವಿಜಯಶಾಲಿ ಆಗಲಿ" ಎಂದು ಹೇಳಿ ಸುಭದ್ರೆಯನ್ನು ಭೇಟಿಯಾಗುವ ದ್ರೌಪದಿಯನ್ನು ಸವತಿಯ ಬಗ್ಗೆ ಉದಾರ ಮನಸ್ಸುಳ್ಳವಳು ಇರಲಿಲ್ಲವಾದರೂ ಪತಿಯ ದೊಡ್ಡಸ್ತಿಕೆಯನ್ನು ಬಯಸುತ್ತಿದ್ದಳು. ಈ ಹೊಸ ಸಂಬಂಧದಿಂದ ಲಾಭವಾಗುವುದೆಂದು ತಿಳಿದು ಅವಳು ಸುಮ್ಮನಿದ್ದಳು.

ಕುಂತಿಯು ಬಲು ಗಟ್ಟಿಮನಸ್ಸಿನವಳಿದ್ದಳು. ಮಾದ್ರಿಯ ಬಗ್ಗೆ ಅವಳಿಗೆ ಪ್ರೀತಿ ಇರದಿರುವುದು. ತೀರ ಸಹಜ. ಆದರೂ ಸಂತತಿ ಹೊಂದಲು ಅವಳಿಗೆ ಸಹಾಯ ಮಾಡಿದಳಷ್ಟೆ ! ಇದರಿಂದ ಅವಳಲ್ಲಿ ನ್ಯಾಯಬುದ್ಧಿಯು ಇತ್ತೆಂದು ಕಂಡುಬರುತ್ತದೆ. ಮಾದ್ರಿಯನ್ನು ಕುರಿತು ಕುಂತಿ ಇಷ್ಟು ಕಟುವಾಗಿ ನುಡಿಯಲು ಕೆಲವು ಕಾರಣಗಳಿದ್ದವು. ಪಾಂಡುವು ಬದುಕಿದ್ದರೆ ಎಂದಿಗಾದರೂ ಹಸ್ತಿನಾಪುರಕ್ಕೆ ಹೋಗಿ ರಾಜ್ಯವನ್ನು ಪಡೆಯುಬಹುದಿತ್ತು. ಆನಂತರ ಅವಳ ಹಿರಿಯ ಮಗನು ಕ್ರಮಶಃ ರಾಜ್ಯಕ್ಕೆ ಹಕ್ಕುದಾರನಾಗುತ್ತಿದ್ದನು. ಕುಂತಿಯು ಸದಾಕಾಲವು ಪಾಂಡುವಿಗೆ ಕಾವಲಿರುತ್ತಿದ್ದಳು ಎಂದು ಕಾಣುತ್ತದೆ. "ನೀನು ಎಲ್ಲವನ್ನು ಅರಿತಿದ್ದು, ರಾಜನನ್ನು ಏಕಾಂತದಲ್ಲಿ ಏಕೆ ಸಂಧಿಸಿದೆ ? ಎಂಬ ಅವಳ ಆರೋಪಣೆಯಲ್ಲಿ ಮರ್ಮವಿತ್ತು. ನಡೆದ ಎಲ್ಲ ಘಟನೆಯಲ್ಲಿ ರಾಜನಿಗೆ "ಅಯ್ಯೋ ಪಾಪ !" ಎಂದು ಮಾದ್ರಿಯನ್ನು ದೂಷಿಸುವುದು ನ್ಯಾಯ ಬುದ್ಧಿಯನ್ನು ಅನುಸರಿಸಿರಲಿಲ್ಲ, ಕುಂತಿಯ ಹಿಡಿತವೇ ತಪ್ಪಿತ್ತು.

ಮರಣದ ಹೊರತು ಮಾದ್ರಿಗೆ ಬೇರೆ ದಾರಿಯೇ ಇರಲಿಲ್ಲ. ಅವಳ ವೈಯಕ್ತಿಕ ದೃಷ್ಟಿಯಿಂದ ಆಗಲೀ ಮುಂದಿನ ಕಥಾವಸ್ತುವಿನ ದೃಷ್ಟಿಯಿಂದಲೇ ಆಗಲೀ, ಇರಲಿಲ್ಲ.

ಹಸ್ತಿನಾಪುರದಲ್ಲಿ ಸತ್ಯವತಿ, ಅಂಬಾಲಿಕೆ ಮೊದಲಾದ ವಿಧವೆಯರಾದ ಅತ್ತೆಯಂದಿರು ಇದ್ದರು. ಅವರಲ್ಲಿ ಇವಳೊಬ್ಬಳು. ಪುರುಷರ ಸಹವಾಸವಂತೂ ಇಲ್ಲ. ಅವರ ದರ್ಶನವು ಆಗದಂತಿತ್ತು. ಆ ದೃಷ್ಟಿಯಿಂದ ಹಿಮಾಲಯದಲ್ಲಿ ಕಳೆದ ಜೀವನವು ಎಷ್ಟೋ ಮೇಲ್ತರಗತಿಯದಾಗಿತ್ತು. ಆತ್ಮಾರ್ಪಣೆಯ ಹೊರತು ಮಾದ್ರಿಗೆ ಬೇರೆ ಮಾರ್ಗವೇ ಇರಲಿಲ್ಲ.

ತಾನು ಕನಿಷ್ಠತೆಯನ್ನು ಸ್ವೀಕರಿಸಿ ಎಲ್ಲ ದೊಡ್ಡಸ್ತಿಕೆಯನ್ನು ಕುಂತಿಗೆ ಕೊಟ್ಟು, ಅಂಬೆಯಂತೆ ಮನದಲ್ಲಿ ಕುದಿಯದೇ, ಸುಕುಮಾರ ಮಾದ್ರಿಯು ಮೃತ್ಯುವಿಗೆ ಸ್ವಾಧೀನಳಾದಳು. ಈ ಘಟನೆಯ ನಂತರ ಕುಂತಿಯ ಕಷ್ಟತರ ಜೀವನವು ಪ್ರಾರಂಭವಾಯಿತು. "ಈ ಮಕ್ಕಳು ನಿಜವಾಗಿ ಪಾಂಡುವಿನವೇ? ಅವನವೆಲ್ಲಿಯವು? ಇಲ್ಲ ! ಇಲ್ಲ ! ಅವನವೇ ಇರಬೇಕು !" ಈ ರೀತಿ ಹಸ್ತಿನಾಪುರದ ಮಾರ್ಗದ ಇಬ್ಬದಿಗಳಲ್ಲಿ ನಿಂತು ನಡೆಯುಸುತ್ತಿದ್ದ ನಾಗರಿಕರ ಚರ್ಚೆಯನ್ನು ಕೇಳಿ, ಕುಂತಿಗೆ ಏನನಿಸಿರಬೇಕು ? ಬ್ರಾಹ್ಮಣರು ಮತ್ತು ಋಷಿಗಳು ಜೊತೆಯಲ್ಲಿ ಇದ್ದರು. ಪಾಂಡು, ಮಾದ್ರಿಯರ ಶವಗಳಿದ್ದವು. ಭೀಷ್ಮನು ಎಲ್ಲರನ್ನು ಎದುರುಗೊಂಡನು. ರಾಜವೈಭವದಿಂದ ಪಾಂಡು–ಮಾದ್ರಿಯರ ಅಂತ್ಯಸಂಸ್ಕಾರಗಳು ನಡೆದವು. ಹಸ್ತಿನಾಪುರದ ರಾಜಕುಲದಲ್ಲಿ ಮತ್ತು ಇಡೀ ನಗರದಲ್ಲಿ ಶೋಕವನ್ನು ಆಚರಿಸಲಾಯಿತು. ಇದರಿಂದ ಪಾಂಡುಪುತ್ರರ ರಾಜಪುತ್ರತ್ವಕ್ಕೆ ಮಾನ್ಯತೆಯು ದೊರಕಿ, ಧೃತರಾಷ್ಟ್ರನ ಮಕ್ಕಳ ಜೊತೆಗೆ ಅವರ ಶಿಕ್ಷಣ ಪ್ರಾರಂಭವಾಯಿತು. ಕುಂತಿಯು ಆಗ ನೆಮ್ಮದಿಯಿಂದ ಉಸಿರುಗರೆದಳು.

ಈ ರೀತಿ ನೆಮ್ಮದಿ ಅನ್ನುವಷ್ಟರಲ್ಲಿ ಹೊಸ ಆಪತ್ತುಗಳು ಎದುರು ನಿಂತವು. ಪಾಂಡವರು ರಾಜಪುತ್ರರೆನಿಸಿದರು. ರಾಜ್ಯದ ಏಕಮೇವ ಹಕ್ಕುದಾರರೆಂದು ಅವರು ಗಣಿಸಲ್ಪಡಲಿಲ್ಲ. ರಾಜ್ಯಾಭಿಷೇಕವಾಗದೆ ಧೃತರಾಷ್ಟ್ರನು ರಾಜನಾಗಿಬಿಟ್ಟನು. ಮಕ್ಕಳು ತಿಳಿವಳಿಕೆಗೆ ಬರುವವರೆಗೆ ಕುಂತಿಯು ಕೆಲವು ಕಾಲವನ್ನು ಸುಖದಲ್ಲಿಲ್ಲವಾದರೂ ಸುಗಮವಾಗಿ ಕಳೆದಿರಬೇಕು. ಆದರೆ ಆಗಲೂ ಮಕ್ಕಳ ರಕ್ಷಣೆಯ ಭಾರವು ಇದ್ದೇ ಇತ್ತು. ಮಕ್ಕಳ ಶಿಕ್ಷಣ ಪ್ರಾರಂಭವಾದೊಡನೆ ತಿಕ್ಕಾಟಕ್ಕೆ ಪ್ರಾರಂಭವಾಯಿತು. ಭೀಮನು ದಾಂಡಿಗನಾಗಿದ್ದನು. ಅವನು ಕುರುಪುತ್ರರ ಕುಚೇಷ್ಟೆಗಳನ್ನು ಮಾಡುತ್ತಿದ್ದನು. ಅವರು ಮರವನ್ನೇರಿದಾಗ ಈತನು ಆ ಮರವನ್ನು ಜೋರಾಗಿ ಅಲ್ಲಾಡಿಸಿ ಅವರನ್ನು ಕೆಳಗೆ ಕೆಡುಹುತ್ತಿದ್ದನು. ಬಡಿದಾಟಗಳು ನಡೆಯುತ್ತಲೇ ಇದ್ದವು. ಅದರಲ್ಲಿಯೇ ಪಾಂಡವರು ಶಸ್ತ್ರಾಸ್ತ್ರವಿದ್ಯೆಗಳಲ್ಲಿ ಕೌರವರಿಗಿಂತ ಮೇಲ್ಪಟ್ಟವರಾಗಿದ್ದರು. ಭೀಮನನ್ನು ಬಿಟ್ಟು ಇತರರ, ವಿಶೇಷವಾಗಿ, ಧರ್ಮ ರಾಜನ ಜಾಣ್ಮೆ, ನಡೆ, ನುಡಿ ಇವುಗಳ ಖ್ಯಾತಿ ಹೆಚ್ಚಾಯಿತು. ಅದರಲ್ಲಿಯೂ ಕುಂತಿಯ ಬೋಧನೆ ಇರಲೇಬೇಕು. ಧೃತರಾಷ್ಟ್ರನ ನೂರು, ಪಾಂಡುವಿನ ಐದು. ಈ ರೀತಿ ನೂರಾಐದು ರಾಜಪುತ್ರರಿದ್ದರು. ಧರ್ಮರಾಜನು ಹಿರಿಯನಲ್ಲದೇ ಜಾಣನು. ರೂಪವಂತನೂ ವಿದ್ಯಾಸಂಪನ್ನನೂ, ಸುವೃತ್ತನೂ ಆಗಿದ್ದನು. ಆಗ ಅವನೇ ರಾಜನಾಗುವನೆಂದು ತಿಳಿದು, ಅವನನ್ನು ರಾಜಧಾನಿಯಿಂದ ಆಚೆ ತಳ್ಳಿಹಾಕಿ, ಜನರ ಕಣ್ಮರೆಮಾಡುವ, ದುರ್ಯೋಧನ,

ಧೃತರಾಷ್ಟ್ರರ ಕುತಂತ್ರಗಳು ಪ್ರಾರಂಭವಾದವು. ಉಪಾಯದಿಂದ ಅವರನ್ನು ಮತ್ತು ಕುಂತಿಯನ್ನು ವಾರಾಣಾವತಕ್ಕೆ ಕಳುಹಿಸಿದರು. ಅವರನ್ನು ಲಾಕ್ಷಾಗೃಹದಲ್ಲಿ ಸಜೀವ ಸುಟ್ಟುಹಾಕುವ ದುರ್ಯೋಧನನ ಒಳಸಂಚು, ವಿದುರನ ಜಾಣತನದಿಂದ ವ್ಯರ್ಥವಾಯಿತು. ಈ ಸಂದರ್ಭದಲ್ಲಿಯೂ, ಕುಂತಿಯ ಅಸಾಮಾನ್ಯ ಧೈರ್ಯವು ಕಂಡುಬರುತ್ತದೆ. ನಿತ್ಯವೂ ಬ್ರಾಹ್ಮಣ ಭೋಜನ ಹಾಕಿಸುವ ನೆವದಲ್ಲಿ, ಪುರೋಚನನ ಸರ್ಪಗಾವಲನ್ನು ಸಡಿಲಗೊಳಿಸಿದಳು.

ಒಂದು ದಿನ ಪಾಂಡವರು ತಾವೇ ಲಾಕ್ಷಾಗೃಹಕ್ಕೆ ಬೆಂಕಿಯನ್ನು ಅಂಟಿಸಿದರು. ಅದರಲ್ಲಿ ತಮ್ಮ ಬದಲಾಗಿ ದುಷ್ಟ ಪುರೋಚನನನ್ನು, ಓರ್ವ ನಿಷಾದ ಸ್ತ್ರೀಯನ್ನು ಮತ್ತು ಅವಳ ಐದು ಮಕ್ಕಳನ್ನು ಆಹುತಿ ಮಾಡಿದರು. ಪಾಂಡವರ ಈ ಕೃತ್ಯವು ದುಷ್ಕೃತ್ಯವೆನಿಸುವುದಿಲ್ಲವೇ ? ಯಾರನ್ನಾದರೂ ಬಲಿಕೊಡದ ಹೊರತು ಈ ಉದ್ದೇಶವು ಈಡೇರುವಂತಿಲ್ಲ ಎಂಬ ಉಲ್ಲೇಖವು ಈ ಅಧ್ಯಾಯದಲ್ಲಿ ಸ್ಪಷ್ಟವಾಗಿ ಹೇಳಿದೆ. ಪಾಂಡವರು ಪ್ರಕಟ ಕಾಳಗದಲ್ಲಿ ಮಡಿಯಲು ಸಿದ್ಧರಿದ್ದರು. ಆದರೆ ಮೋಸದಿಂದ ಸಾಯುವುದು ಅವರಿಗೆ ಅವಮಾನವೆನಿಸುತ್ತಿತ್ತು. ಸ್ವಾರ್ಥದುದ್ದೇಶದಿಂದ ಪಾಂಡವರು ನಡೆಸಿದ ಇಂಥ ಕೃತ್ಯಗಳು ಮಹಾಭಾರತದಲ್ಲಿ ಇನ್ನೂ ಹಲವಾರು ಕಡೆ ಇವೆ. ಪಾಂಡವರು ಲಾಕ್ಷಾಗೃಹದಲ್ಲಿ ಆಹುತಿಕೊಟ್ಟ ಆ ಸ್ತ್ರೀಯು ನಿಷಾದ ಕುಲದವಳಿದ್ದಳು. ಅವಳು ಮದ್ಯಪ್ರಾಶನ ಮಾಡಿ, ಅಮಲೇರಿ ತನ್ನ ಮಕ್ಕಳೊಡನೆ, ಅಲ್ಲಿ ಆ ರಾತ್ರಿ ಮಲಗಿದ್ದಳು. ಈಗ ಪರಿಶೀಲಿಸಿದ ಮಹಾಭಾರತದಲ್ಲಿ ಒಂದು ಶ್ಲೋಕವಿದೆ. “ಸ್ವೇಚ್ಛೆಯಿಂದ ಮೃತ್ಯುವು ಕರೆಕೊಟ್ಟಂತೆ ಬಂದ ಯಾವಳೋ ನಿಷಾದ ಸ್ತ್ರೀಯು ಆ ದಿನ ಅಲ್ಲಿಗೆ ಬಂದಳು. ಮದ್ಯವನ್ನು ಕುಡಿದು ಅಮಲೇರಿ ಅಲ್ಲಿಯೇ ಮಲಗಿದಳು. “ಬೇರೆ ಬೇರೆ ಆವೃತಿಗಳಲ್ಲಿ ಇದ್ದ, ಪ್ರಕ್ಷಿಪ್ತವೆನಿಸಿ ತೆಗೆದು ಹಾಕಲ್ಪಟ್ಟ ಶ್ಲೋಕಗಳು ಕೆಳಗಿನಂತಿವೆ. ಒಂದರಲ್ಲಿ, “ ಆ ನಿಷಾದ ಹೆಂಗಸು ದುಷ್ಟಳಾಗಿದ್ದಳು. ಮತ್ತು ಪುರೋಚನನ ವಿಶ್ವಾಸಿತಳಿದ್ದಳು” ಎಂದಿದೆ. ಎರಡನೆಯದರಲ್ಲಿ, “ಅವಳು ದುಷ್ಟಳಿದ್ದಳು (ಪಾಪೀ). ಕುಂತಿಯನ್ನು ತೋರಿಸಿಕೆಯ ಮಿತ್ರಭಾವದಿಂದ ಕಾಣುತ್ತಿದ್ದಳು (ಸಖಿಮಾನಿನಿ) ಎಂದು ಇದೆ. ಹಸ್ತಲಿಖಿತಗಳ ಪರೀಕ್ಷಣೆಯಿಂದ, ತುಲನೆಯಿಂದ (ಅರ್ಥದಿಂದಲ್ಲ) ಪ್ರಕ್ಷಿಪ್ತವೆನಿಸಿದ ಈ ಶ್ಲೋಕಗಳು ಮೂಲ ಮಹಾಭಾರತವು, ನಂತರ ಅದರಲ್ಲಿ ತೋರಿಸಿದ ಶ್ಲೋಕಗಳು, ಅವುಗಳಲ್ಲಿಯ ವ್ಯತ್ಯಾಸವನ್ನು ಚೆನ್ನಾಗಿ ತೋರಿಸುತ್ತವೆ. ಆ ನಿಷಾದ ಸ್ತ್ರೀಯು ದುಷ್ಟಳಾಗಿದ್ದಳು, ವಧೆಗೆ ಅರ್ಹಳಾಗಿದ್ದಳು ಎಂಬ ಆಭಾಸವನ್ನು, ನಂತರದ ಶ್ಲೋಕಗಳು ಉಂಟುಮಾಡುವಂತಿವೆ. ಮೂಲ ಶ್ಲೋಕವು ಪರಿಸ್ಥಿಗೆ ಹೊಂದುವಂತಿದೆ. ಅನಪೇಕ್ಷಿತವಾಗಿ ಅವಳು ಬಂದಳು. ಮೃತ್ಯುವು ಕರೆಕೊಟ್ಟಂತೆ ಬಂದಳು. ಪಾಂಡವರಿಗೆ ದುರ್ಯೋಧನನ ಒಳಸಂಚನ್ನು ಮುರಿದುಹಾಕಲು ಸಾಧ್ಯವಾಯಿತು. ಈ ಕಥನವು ಸುಸಂಬದ್ಧವೆನಿಸುತ್ತದೆ. ಬಹುಶಃ ನಿಷಾದ ಸ್ತ್ರೀಯಳ ಮೂಲಕವೇ ಅದೇ ದಿನ ಓಡಿಹೋಗುವ ಹಂಚಿಕೆಯು ನಿಶ್ಚಿತವಾಗಿರಬೇಕು. ಮಾರನೆಯ ದಿನ ನಾಗರಿಕರಿಗೆ, ಸುಟ್ಟು ಇದ್ದಲಾದ, ಗುರುತು ಸಿಗಲಾರದಂತಹ, ಐದು ಯುವಕರ ಹಾಗೂ

ಓರ್ವ ಸ್ತ್ರೀಯ ದೇಹಗಳು ದೊರಕಿದವು. ಅವುಗಳೊಡನೆ, ಇನ್ನೊಬ್ಬನ, ಅಂದರೆ ಕೊಲೆಗಾರನಾದ ಪುರೋಚನನ ದೇಹವು ದೊರಕಿತು. ಈ ರೀತಿ ಪಾಂಡವರು ಮೃತರಾದರೆಂದು ನಿಶ್ಚಿತವಾಯಿತು. ಅವರೂ ಯಾರಿಂದಲೂ ಉಪಟಳವಿಲ್ಲದೆ ಒಂದು ವರ್ಷದವರೆಗೆ ತಲೆ ಮರೆಮಾಚಿ ಇರಬಹುದಾಯಿತು. ನಿಷಾದೆಯ ಮರಣವು, ಕಥಾಸೂತ್ರದ ಒಂದು ಅವಶ್ಯಕ ಸಂಗತಿಯಾಗಿತ್ತು.

"ಮನೆಯು ಜ್ವಾಲಾಗ್ರಾಹೀ" ಎಂದು ಅರಿತು ಕೂಡ ಅಲ್ಲಿ ಇರುವುದೇಕೆ? ಎಂಬ ಪ್ರಸ್ತಾಪವನ್ನು ಭೀಮನು ಮುಂದಿಟ್ಟನು. ಪಾಂಡವರು ಆ ರೀತಿ ವರ್ತಿಸಿದ್ದುದನ್ನು ಬಿಟ್ಟು, ಬೇರೆ ಯಾವ ರೀತಿಯಿಂದಲೂ ವರ್ತಿಸುವುದು, ಆ ಪರಿಸ್ಥಿತಿಯಲ್ಲಿ ಅವರಿಗೆ ಸಾಧ್ಯವಿರಲಿಲ್ಲವೆಂದು ಧರ್ಮನಿತ್ತ ಉತ್ತರದಿಂದ ಕಂಡುಬರುತ್ತದೆ. "ಏನೂ ಅರಿಯದವರಂತೆ ವರ್ತಿಸಬೇಕು. ನಮಗೆ ಸಂದೇಹ ಉಂಟಾಗಿದೆ ಎಂದು ಪುರೋಚನನು ಅರಿತರೆ, ಅವನು ಬಲವಂತದಿಂದ ನಮ್ಮನ್ನು ಸುಟ್ಟುಹಾಕಬಹುದು. ಅಗ್ನಿಯ ಭಯದಿಂದ ನಾವು ದೂರ ಹೋದಲ್ಲಿ ದುರ್ಯೋಧನನು ನಮ್ಮನ್ನು ಶಸ್ತ್ರದಿಂದ ಕೊಲ್ಲಿಸಬಹುದು. ಆತನಿಗೆ ಒಂದು ವಿಶೇಷ ಸ್ಥಾನವು ದೊರಕಿದೆ. ನಮಗೆ ಸ್ಥಾನವೇ ಇಲ್ಲ. ಅವನ ಕಡೆಯಿಂದ, ಆತನನ್ನು ಉತ್ತೇಜಿಸುವ ಪಕ್ಷವು ನಿರ್ಮಾಣವಾಗಿದೆ. ನಮ್ಮ ಪಕ್ಷಕ್ಕೆ ಯಾರೂ ಇಲ್ಲ. ಆತನು ಧನವಂತನು. ನಾವು ದ್ರವ್ಯಹೀನರು. ಅವನು ನಮ್ಮನ್ನು ಖಂಡಿತವಾಗಿ ಕೊಲ್ಲಬಹುದು. ಕಾರಣ ಶಾಂತವಾಗಿರಿ. ನಿತ್ಯವೂ, ಬೇಟೆಯ ನೆವದಿಂದ ಪಾರಾಗುವ ಮಾರ್ಗಗಳನ್ನು ಕಂಡು ಹಿಡಿಯೋಣ ! ನಕ್ಷತ್ರಗಳನ್ನು ಅಭ್ಯಸಿಸಿ ದಿಕ್ಕುಗಳನ್ನು ತಿಳಿದುಕೊಳ್ಳೋಣ! ಮತ್ತು ಈಗ ಬಿಡುಗಡೆಗಾಗಿ ಸುರಂಗಮಾರ್ಗವನ್ನು ನಿರ್ಮಿಸೋಣ" ಎಂದು ಧರ್ಮರಾಜನು ಹೇಳುತ್ತಿದ್ದನು. ಪಾಂಡವರ ಅಸಹಾಯ, ಪರಾಧೀನ ಸ್ಥಿತಿಯು ಮತ್ತು ಕೌರವರ ಹಾಗೆಯೇ ಧೃತರಾಷ್ಟ್ರನ ದುಷ್ಟತನವು ಈ ಪ್ರಸಂಗದಲ್ಲಿ ಎದ್ದು ಕಾಣುತ್ತದೆ.

ಕುಂತಿಯು ಪುತ್ರರೊಡನೆ ಇದ್ದಳು. ಎಚ್ಚರಿಕೆಯಿಂದ ಅವರ ಕಾರ್ಯಗಳಿಗೆ ಗುಪ್ತಾಲೋಚನೆಗೆ ಸಂಪೂರ್ಣವಾಗಿ ಬೆಂಬಲವನ್ನೀಯುತ್ತಿದ್ದಳು. ಯಾವ ರಾತ್ರಿಯಲ್ಲಿ ಗೃಹವನ್ನು ಸುಟ್ಟರೋ ಆ ರಾತ್ರಿ, ಕತ್ತಲೆಯಲ್ಲಿ ವೇಗದಿಂದ ಮಾರ್ಗಾ ಕ್ರಮಣಮಾಡುವಾಗ ಕುಂತಿಗೆ ತುಂಬ ಪ್ರಯಾಸವಾಯಿತು. ಪುರವನ್ನು ದಾಟಿ ಕಾಡನ್ನು ಸೇರಿದಾಗ ನಿಬಿಡವೃಕ್ಷಗಳಿಂದ ನಕ್ಷತ್ರಗಳನ್ನು ನೋಡುವುದು ಅಸಾಧ್ಯವಾಯಿತು. ಆಗ ಭೀಮನು ಅವಳನ್ನು ಹೆಗಲಿನ ಮೇಲೆ ಕುಳ್ಳಿರಿಸಿಕೊಂಡನು. ಕೊನೆಗೆ ಹತ್ತಿರದಲ್ಲಿ ಜಲಚರ ಪಕ್ಷಿಗಳ ಶಬ್ದವನ್ನು ಕೇಳಿ, ಎಲ್ಲರನ್ನು ಒಂದು ಮರದ ಕೆಳಗೆ ಕುಳ್ಳಿರಿಸಿ ಭೀಮನು ನೀರನ್ನು ತರಲು ಹೋದನು. ಮರಳಿ ಬರುವಷ್ಟರಲ್ಲಿ ಎಲ್ಲರೂ ಆಯಾಸದಿಂದ ನಿದ್ರಾಧೀನರಾಗಿದ್ದರು. ಭೀಮನು ಕುಂತಿಯನ್ನು ನೋಡಿ "ಎಂಥ ಆಶ್ಚರ್ಯ! ಮೃದುವಾದ ಹಾಸಿಗೆಯ ಮೇಲೆ ಮಲಗಿಯೂ ನಿದ್ರೆ ಬಾರದ ಇವಳು, ಇಂದು ಭೂಮಿಯ ಮೇಲೆ ಗಾಢನಿದ್ರೆಯಲ್ಲಿದ್ದಾಳೆ" ಎಂದು ಉದ್ಗರಿಸಿದನು. ಭೂಮಿಯ ಮೇಲೆ ಮಲಗುವುದು, ಕುಂತಿಯ ದುಃಖವಿರಲೇ

ಇಲ್ಲ. ಅವಳು ಸ್ವಸ್ಥಾನದ ಬಗ್ಗೆ, ಹಕ್ಕುಗಳ ಬಗ್ಗೆ ಅತಿಶಯಜಾಗರೂಕಳಾದ, ಕ್ಷತ್ರಿಯತ್ವದ ಅಭಿಮಾನಿಯಾದ ಸ್ತ್ರೀಯಾಗಿದ್ದಳು. ಜೀವನವು ಅವಳ ದೃಷ್ಟಿಯಿಂದ ಒಂದು ಸಂಗ್ರಾಮವಿತ್ತು. ಆ ಸಂಗ್ರಾಮದಲ್ಲಿ ಅವಳು ವಿಚಲಿತವಾಗುತ್ತಿರಲಿಲ್ಲ.

ಮುಂದಿನ ಪ್ರವಾಸದಲ್ಲಿಯೂ, ಇದೇ ರೀತಿ ಕಂಡುಬರುತ್ತದೆ. ಭೀಮನು ಹಿಡಿಂಬೆಯೊಡನೆ ಇರುವುದನ್ನು ಅವಳು ಮನಃಪೂರ್ವಕವಾಗಿ ಅನುಮತಿಸಿದಳು. ಈ ರೀತಿ ಕಾಡಿನ ಕ್ಲೇಶಕರವಾದ ಪ್ರಯಾಣದಲ್ಲಿ ಸಹಚರಿಯನ್ನು ಸಂಪಾದಿಸಿದರು. ಇದೇ ಹಿಡಿಂಬೆಯ ಪುತ್ರನು, ಮುಂದೆ ಕಾಳಗದಲ್ಲಿ ಗಂಡಾಂತರ ಸಮಯಕ್ಕೆ ನೆರವಿತ್ತನು.

ಬಕಾಸುರನನ್ನು ವಧಿಸಲು ಕುಂತಿಯೇ ಭೀಮನಿಗೆ ಬಲವಂತ ಮಾಡಿದಳು. ದ್ರೌಪದಿಯನ್ನು ಐವರ ಮಡದಿಯನ್ನಾಗಿ ಮಾಡುವ ನಿಶ್ಚಯವೂ ಅವಳದೇ! ಐವರ, ಒಡೆಯಲಾಗದ ಒಗ್ಗಟ್ಟನ್ನು ಅವಳೇ ಸಾಧಿಸಿದಳು. ವಿವಾಹವಾಗುವ ಮೊದಲು, ಅವರೆಲ್ಲರೂ ಲೌಕಿಕ ರೂಢಿಯಲ್ಲಿ ಒಂದೇ ತಾಯಿಯ ಮಕ್ಕಳಾಗಿದ್ದರು. ಆದರೆ ಮಾದ್ರಿಯರ ಮಕ್ಕಳನ್ನು ಕುಂತಿಯಿಂದ ಒಡೆಯುವ, ಹಂಚಿಕೆಯನ್ನು, ದುರ್ಯೋಧನನು ಯೋಚಿಸುವ ಪೂರ್ವದಲ್ಲಿಯೇ ದ್ರೌಪದಿಯ ಕಾರಣದಿಂದ ಕುಂತಿಯು ಆ ಐವರನ್ನು ಒಂದೆಡೆ ಸೇರಿಸಿ ಆ ಒಳಸಂಚಿನ ತಳಹದಿಯನ್ನೇ ಇಲ್ಲದಂತೆ ಮಾಡಿದಳು.

ದ್ರೌಪದಿಯ ವಿವಾಹದ ನಂತರ ಕುಂತಿಯು ಹೊಣೆಗಾರಿಕೆಯಿಂದ ಹಿಂದೆ ಸರಿದಳು. ಆದರೆ ಸ್ವಸ್ಥತೆಯಿಂದ ಕುಳಿತು ಅವರ ಯಶಸ್ಸನ್ನು ನೋಡುವಷ್ಟು ಮುಕ್ತಳಾಗಿರಲಿಲ್ಲ. ಅವಳ ಹಿರಿಯ ಮಗನಾದ ಧರ್ಮನು ಅವಳ ಮೇಲೆ ಪರಾಧೀನ ಜೀವನವನ್ನು ಹೊರಿಸಿದನು. ಈ ರೀತಿ ಪರಾಧೀನತೆಯಲ್ಲಿ ಬಾಳುವುದು ಕುಂತಿಗೆ ನಾಚಿಕೆಗೇಡೆನಿಸಿತು. ದ್ಯೂತದಲ್ಲಿ ಸರ್ವಸ್ವವನ್ನು ಕಳೆದುಕೊಂಡ ಪಾಂಡವರು ವನವಾಸಕ್ಕೆ ತೆರಳಿದಾಗ, ವಿದುರನು, "ಕುಂತಿಯು ಈಗ ನಿಮ್ಮ ಜೊತೆಗೆ ಬರಲಾರಳು. ಅವಳು ವೃದ್ಧಳು. ಅವಳು ನನ್ನ ಮನೆಯಲ್ಲಿ ಇರುವಳು" ಎಂದು ಹೇಳಿದನು. ಈ ದುಃಖದಲ್ಲಿ ಅವಳು ಪಾಂಡು, ಮಾದ್ರಿಯರನ್ನು ಜ್ಞಾಪಿಸಿದಳು. "ಪಾಂಡು ದೈವವಂತನು. ಅವನು ಪುತ್ರರನ್ನು ಕಂಡನು. ಆದರೆ ಪುತ್ರರ ಈ ಅವಸ್ಥೆಯನ್ನು ಕಾಣಲಿಲ್ಲ." ಮಾದ್ರಿಯನ್ನು ಜ್ಞಾಪಿಸಿದಾಗ ತನ್ನ ಜೀವನ ವೈಫಲ್ಯದ ತೀವ್ರವಾದ ಅನುಭವವು, ಅವಳ ನುಡಿಗಳಲ್ಲಿ ವ್ಯಕ್ತವಾಗಿದೆ. "ಮಾದ್ರಿಯೆ" ನೀನೇ ಧನ್ಯೆ ! ನೀನೇ ಜ್ಞಾನಿ! ನಿನಗೆ ಸದ್ಗತಿಯು ದೊರಕಿತು. ರತಿ–ಮತಿ–ಗತಿ ಈ ಎಲ್ಲವುಗಳಲ್ಲಿ ನೀನೇ ನನ್ನನ್ನು ಮೀರಿಸಿದೆ ! ನನ್ನ ಜೀವನದ ಆಸೆಗೆ ಧಿಕ್ಕಾರವಿರಲಿ ! ಆ ಆಸೆಯಿಂದಲೇ ನಾನು ಈ ದುಃಖಗಳನ್ನು ಅನುಭವಿಸಬೇಕಾಗಿದೆ" (೨,೭,೧೮,೨೦).

ಹದಿಮೂರು ವರುಷ ಕಾಲದಲ್ಲಿ ಅವಳಿಗಾದ ಕ್ಲೇಶಗಳನ್ನು, ಮನಸ್ಸಿನಲ್ಲಿ ಅವಳು ಹೊಂದಿದ್ದ ಆಸೆ ಆಕಾಂಕ್ಷೆಗಳನ್ನು, ಉದ್ಯೋಗಪರ್ವದಲ್ಲಿ ಬಣ್ಣಿಸಿದ್ದು ಕಂಡುಬರುತ್ತದೆ. ಆದರೆ ಕುಂತಿಯು ತವರಿಗೆ ಹೋಗದೇ ವಿದುರನ ಬಳಿ ಇದ್ದು, ತನ್ನ ಶತ್ರುಗಳ ವೈಭವವನ್ನು ಪ್ರತಿ ನಿತ್ಯ ಕಾಣುವ ದುಃಖವನ್ನು ಕುಂತಿ ಅನುಭವಿಸಬೇಕಾಯಿತು. ಮಾತುಕತೆಗೆಂದು ಕೃಷ್ಣನು

ಹೋದಾಗ ಅವಳ ಭೇಟಿಗಾಗಿ ಹೋದನು. ಆಗ ಅವಳು ಅವನನ್ನು ತಬ್ಬಿಕೊಂಡು ಬೋರಾಡಿ ಅತ್ತಳು. ಬಾಲ್ಯದಿಂದ ಅನುಭವಿಸಿದ ಆಪತ್ತನ್ನು ಮತ್ತೆ ನೆನೆಸಿದ್ದಾಯಿತು. ಹಸ್ತಿನಾಪುರದಿಂದ ಮರಳುವಾಗ ಪುತ್ರರಿಗೆ ಇತ್ತ ಆದೇಶದಲ್ಲಿ, ಅವಳ ಆಗಿನ ಮನೋವ್ಯಥೆಯು, ಭವಿಷ್ಯದ ಬಗ್ಗೆ ಇದ್ದ ಅವಳ ಆಸೆಯು ಮನಸ್ಸಿನ ಗಟ್ಟಿತನವು ಕಂಡುಬರುತ್ತದೆ. ಅವಳಿತ್ತ ಹೇಳಿಕೆಯಲ್ಲಿ ಒಂದು ವಾಕ್ಯವಿದೆ. ಇನ್ನಿತರ ಒಂದೆರಡು ಸಂದರ್ಭಗಳಲ್ಲಿ ಇದೇ ವಾಕ್ಯವನ್ನು ನಾಣ್ಣುಡಿಯಂತೆ ಅವಳಿಂದ ಬಳಸಲಾಗಿದೆ. ಕುಂತಿಯು, "ನಾನು ವಿವಾಹದಿಂದ ಒಂದು ಕೊಳದಿಂದ ಇನ್ನೊಂದು ಕೊಳಕ್ಕೆ ಧುಮುಕಿದೆನು" ಅನ್ನುತ್ತಾಳೆ. **(ಹೃದಾತ್ ಹೃದಮಿವ)** ಅವಳ ಅಭಿಪ್ರಾಯದಂತೆ ಒಂದು ಸುಸ್ಥಳದಿಂದ ಇನ್ನೊಂದು ಸುಸ್ಥಳಕ್ಕೆ ತಲುಪಿದೆ ಎಂದರ್ಥ, "ರಾಜನ ಪುತ್ರಿ ಇದ್ದವಳು. ರಾಜನ ಪತ್ನಿಯಾದೆ. ಇತರರು ನನ್ನ ಆಶ್ರಯಕ್ಕೆ ಬರಬೇಕು ಅಂಥ ನಾನು, ಹೆರವರ ಆಶ್ರಯವನ್ನು ಪಡೆದಿದ್ದೇನೆ." ಪಾಂಡುವಿನಂತಹ ದುರ್ಬಲನ ಕೊರಳಲ್ಲಿ ಆಕೆಯನ್ನು ಕಟ್ಟಿದ್ದು. ಈಗಿನ ದೃಷ್ಟಿಯಿಂದ ಅವಳ ಬಗ್ಗೆ ಕನಿಕರ ಹುಟ್ಟಿಸುತ್ತದೆ. ಆದರೆ ಅವಳು ಹಾಗೆ ತಿಳಿದುಕೊಂಡಿರಲಿಲ್ಲ. ಹೇಗಿದ್ದರೂ ಪಾಂಡುವು ರಾಜನಿದ್ದನು. ಇತರರಿಂದ ಮಕ್ಕಳನ್ನು ಪಡೆಯುವ ಸ್ವಾತಂತ್ರ್ಯವು ಅವಳಿಗೆ ಇತ್ತು. ಪಾಂಡುವು ಜೀವಿಸಿದ್ದರೆ, ಅವಳು ಹಿರಿಯ 'ರಾಜ್ಞಿ' ಎನಿಸುತ್ತಿದ್ದಳು. ಪ್ರಾರಂಭದಿಂದ ಕೊನೆಯವರೆಗೂ "ಹೃದಾತ್ ಹೃದು" ಸ್ಥಿತಿಯಲ್ಲಿಯೇ ಅವಳು ಇರುತ್ತಿದ್ದಳು. ಆದರೆ ಪತಿಯು ನಡುನೀರಿನಲ್ಲಿ ಅವಳ ಕೈಬಿಟ್ಟನು. ಅಂಥದರಲ್ಲಿಯೂ ಧೈರ್ಯದಿಂದ ಪಾರಾಗಿ ರಾಜಮಾತೆಯ ವೈಭವವು ದೊರಕಿತೆನ್ನುವಷ್ಟರಲ್ಲಿ, ಪುತ್ರನು ಅವಳನ್ನು ಗೋಳಿಗೆ ಅಣಿಮಾಡಿದನು. ಪತಿಯಿಂದ ವಿಷಯಸುಖವು ದೊರಕಲಿಲ್ಲ. ಒಂದೇ ಸಲವಾದರೂ, ಕೊನೆಯದಾಗಿಯಾದರೂ ಮಾದ್ರಿಗೆ ಆ ಸುಖ ಲಭಿಸಿತು ಎಂಬ ಹೊಟ್ಟೆ ಉರಿ ಅವಳಿಗಿತ್ತು. ಆದರೆ ಅವಳು ಅದು ದೊರಕುವುದಿಲ್ಲವೆಂದು ಗ್ರಹಿಸಿದ್ದಳು. ಈ ಪ್ರಣಯಕೂಟದಲ್ಲಿ ಪತಿಯು ನಿಧನವಾದ್ದರಿಂದ ಅವಳ ರಾಜ್ಞೀ ಪದವೂ, ಮಕ್ಕಳ ರಾಜ್ಯಪದವು ಕಳೆಯಿತು. ಇದೇ ಅವಳ ನಿಜವಾದ ಗೋಳಿತ್ತು. "ನಾನು ಅವನ ಬಗ್ಗೆ ಎಷ್ಟೊಂದು ಕಾವಲಿದ್ದೆ" ಎಂದು ಮಾದ್ರಿಯನ್ನು ಕುರಿತು ಹೇಳಿದ್ದು ಇದೇ ಅರ್ಥದಿಂದ !

ರಾಜ್ಯವನ್ನು ಕಳೆದುಕೊಂಡು ಪುತ್ರರು ದುಃಖಕ್ಕೆ ಈಡು ಮಾಡಿದ್ದರು. ಈಗ ಹೊಸ ಸಂಕಟವು ಉದ್ಭವಿಸಿತ್ತು. ಆ ಸಂಕಟವೆಂದರೆ, ಅವಳ ಹಿರಿಯ ಮಗನಾದ ಧರ್ಮನು ಮತ್ತು ಆತನ ಆಜ್ಞಾಧಾರಕ ಬಂಧುಗಳು ಒಪ್ಪಂದವನ್ನು ಮಾಡಿಕೊಳ್ಳಲು ಹವಣಿಸುತ್ತಿದ್ದರು. ಈ ರೀತಿಯ ಒಪ್ಪಂದವು ಕ್ಷತ್ರಿಯರಿಗೆ ಅವಮಾನಕರವೆಂದು ಕುಂತಿಯು ತಿಳಿದಿದ್ದಳು. ಈ ಕಾರಣದಿಂದ ಅವಳು, ಭೀಮಸೇನನಿಗೆ ಮತ್ತು ಅರ್ಜುನನಿಗೆ, "ಅಪಮಾನ ಮರೆಯಬೇಡಿರಿ" ಎಂದು ಕೃಷ್ಣನೊಡನೆ ಸಂದೇಶವನ್ನು ಕಳಿಸಿದ್ದಳು.

ಕುಂತಿಯು ಕೃಷ್ಣನಿಗೆ "ಹೋಗಿ ಬಾ !" ಎಂದು ಹೇಳಿದಳು. ಭೀಮಾರ್ಜುನರಿಗೆ "ಅಪಮಾನ ಮರೆಯಬೇಡಿರಿ !" ಎಂದು ಹೇಳಿದಳು. ಆದರೆ ಈ ಹೇಳಿಕೆಯು ಮುಖ್ಯವಾಗಿ ಧರ್ಮನಿಗೆ ಉದ್ದೇಶಿಸಿತ್ತು. ಈತನು ಹಿರಿಯ ಮಗನು. ರಾಜ್ಯಕ್ಕೆ ಹಕ್ಕುದಾರನು. ಆದರೆ ಅವನು

ಯುಯುತ್ಸುವೂ ಇರಲಿಲ್ಲ. ವಿಜಿಗೀಷಿಯೂ ಇರಲಿಲ್ಲ. ಕೃಷ್ಣನೇ ! ಯುಧಿಷ್ಠಿರನು ಧರ್ಮಾತ್ಮನು. ಅವನಿಗೆ ಹೇಳು, "ನಿನ್ನ ಧರ್ಮವು ನಷ್ಟವಾಗಹತ್ತಿದೆ, ಬೇಡಾದ್ದನ್ನು ಮಾಡಬೇಡ. "ಜಡಮತಿ", "ಅವಿದ್ವಾನ" ಶಬ್ದಗಳ ಚರ್ಚೆಯಲ್ಲಿ ಹೊತ್ತುಗಳೆಯುವ ಬ್ರಾಹ್ಮಣರಂತೆ ವರ್ತಿಸ ಬೇಡ ! ಎಲವೋ! ಕ್ಷತ್ರಿಯನನ್ನು ಬ್ರಹ್ಮದೇವನು ನಿರ್ಮಿಸಿದ್ದು ಎದೆಯಿಂದ. ಅದು ಭುಜಬಲವನ್ನು ತೋರುವುದಕ್ಕೆ ; ಪ್ರಜಾಪಾಲನೆ ಮಾಡುವುದಕ್ಕೆ ; ರಾಜನು ಧರ್ಮವನ್ನು ಮರೆತರೆ, ಅವನಂತೂ ನರಕಕ್ಕೆ ಹೋಗಿಯೇ ಹೋಗುವನು. ಅಲ್ಲದೇ ಎಲ್ಲ ಪ್ರಜೆಗಳನ್ನು ನರಕಕ್ಕೆ ಅಟ್ಟುವನು. ಪಿತನಿಂದ ದೊರಕಿದ ರಾಜ್ಯವು ಮುಳುಗಿದೆ. ಅದನ್ನು ಹೊರಗೆ ಎಳೆ! ತನ್ನದಾಗಿ ಮಾಡಿಕೊ ! ನಿನ್ನ ನಡತೆಯಿಂದ ಶತ್ರುಗಳಿಗೆ ಸಂತೊಷವಾಗುತ್ತದೆ. ನಿನ್ನನ್ನು ಹೆತ್ತು, ಪರಾನ್ನದಿಂದ ಜೀವಿಸುವುದಕ್ಕಿಂತ ನನಗೆ ಇನ್ನೊಂದು ಹೆಚ್ಚಿನ ದುಃಖವಿಲ್ಲ. ರಾಜನ ಧರ್ಮವನ್ನು ಅಚರಿಸು. ಪಿತೃಗಳನ್ನು, ಸಹೋದರರನ್ನು ಮತ್ತು ತನ್ನನ್ನು ನರಕಕ್ಕೆ ಕಳುಹಿಸಬೇಡ." ಇಷ್ಟಕ್ಕೆ ತಡೆಯದೇ ಅವಳು ಒಂದು ಹಳೆಯ ಚರಿತ್ರೆಯನ್ನು ಹೇಳಿದಳು. "ವಿದುರಾ" ಅಥವಾ "ವಿದುಲಾ" ಪುತ್ರ ಸಂವಾದ ಎಂದು ಅದು ಪ್ರಸಿದ್ಧವಿದೆ. 'ವಿದುಲಾ' ಅಥವಾ 'ವಿದುರಾ' ಎಂದರೆ 'ಜ್ಞಾನಿ'. ಅವಳ ವರ್ತನೆ ಎಂದರೆ ಕುಂತಿಯ ಸ್ವಂತದ (ಮತ್ತು ದ್ರೌಪದಿಯ) ವರ್ಣನೆಯೇ ಎನ್ನಬಹುದು. ಅವಳು ಹೇಗಿದ್ದಳು ; ಯಶಸ್ವಿನಿ, ಮನ್ಯುಮತಿ (ಸಿಟ್ಟುಬರುವ), (ಮಾನಿ), 'ಕುಲೆ ಜಾತಾ' (ಉತ್ತಮ ಕುಲದಲ್ಲಿ ಜನ್ಮ ತಾಳಿದ) 'ಕ್ಷತ್ರಧರ್ಮರತಾ' (ಕ್ಷತ್ರಿಯಧರ್ಮ ಪಾಲನೆ ಮಾಡುವವಳು) 'ದೀರ್ಘದರ್ಶಿನಿ' (ದೂರದೃಷ್ಟಿಯುಳ್ಳವಳು) 'ವಿಶ್ರುತಾ ರಾಜ ಸಂಪತ್ಸು' (ರಾಜಸಭೆಗಳಲ್ಲಿ ಪ್ರಖ್ಯಾತಳಾದವಳು) 'ಶ್ರುತಕಾರ್ಯ ಬಹುಶ್ರುತಾ' (ಬಹುಜ್ಞಾನಿ) ವಿದುಲೆಯು ಈ ರೀತಿ ಇದ್ದಳು. ಪುತ್ರನು ಹೇಗಿದ್ದನು ? ಸಿಂಧುರಾಜನಿಂದ ಜಯಿಸಲ್ಪಟ್ಟ, ನಿದ್ರಿತನಾಗಿರುವ, ದುರ್ಬಲ ಮನಸ್ಸಿನ, ನಿರಾನಂದ, ಧರ್ಮವನ್ನು ಅರಿಯದವನು, ಶತ್ರುಗಳಿಗೆ ಆನಂದವನ್ನುಂಟು ಮಾಡುವವನು ಇದ್ದನು. ಇಂಥ ಪುತ್ರನ-ನಿರ್ಭರ್ತ್ಸನೆಯನ್ನು ವಿದುಲೆಯು ಯಾವ ರೀತಿಯಲ್ಲಿ ಮಾಡಿದಳೋ ಅದನ್ನು ಕುಂತಿಯು ಧರ್ಮರಾಜನಿಗೆ ಸಂಪೂರ್ಣವಾಗಿ ಹೇಳಿಕಳಿಸಿದಳು. ಅದರಲ್ಲಿಯ ಕೆಲವು ಭಾಗಗಳನ್ನು ಮಾತ್ರ ಇಲ್ಲಿ ಬರೆದಿದ್ದೇನೆ (ಉದ್ಯೋಗಪರ್ವ ಅಧ್ಯಾಯ ೧೩೧-೧೩೫).

"ನೀನು ಹೆಣದಂತೆ ಏಕೆ ಮಲಗಿರುವೆ ? ಎಲೋ ಕ್ಷುದ್ರನೇ । ಪರಾಜಿತ ಸ್ಥಿತಿಯಲ್ಲಿ ನಿದ್ರಿಸಬೇಡ ! ಎದ್ದೇಳು ! ಇಲ್ಲದಿದ್ದರೆ ಸತ್ತು ಸ್ವರ್ಗವನ್ನು ಪಡೆ ! ಎಲೋ ಷಂಡನೇ ! ಐಹಿಕ ಕೀರ್ತಿಯನ್ನು ಮತ್ತು ಪಾರಲೌಕಿಕ ಪುಣ್ಯವನ್ನು ಕಳೆದುಕೊಂಡಿರುವೆ ; ಮಗನ ರೂಪದಲ್ಲಿ ಕಲಿಯೇ ನನ್ನ ಉದರದಿಂದ ಜನ್ಮತಾಳಿದಂತಿದೆ. ಯಾವುದೇ ರಾಜಮನೆತನದಲ್ಲಿ ಕತ್ತೆಯಂತೆ ಕಿರಿಚುವವನು (ಬಾಯಿಬಡಾಯಿ-ಮಾಡುವವನು) ಅಂದರೆ ಕೃತಿಯಲ್ಲಿ ನಿರ್ಬಲವಾದ (ವಾಚಿವೀರ) ಗಂಡಸು ಹುಟ್ಟಬಾರದು. ನಿನ್ನ ಹೆಸರನ್ನು ಸಂಜಯನೆಂದು ಇಟ್ಟಿರುವುದನ್ನು ಅನ್ವರ್ಥಿಸು ! ನಿನ್ನ ಪತ್ನಿಯು ಮತ್ತು ನಾನು ಆಶ್ರಯಣಿಯರಿದ್ದೇವೆ. (ಬೇರೆಯವರು ನಮ್ಮ ಆಶ್ರಯಕ್ಕೆ ಬರಬೇಕು), ನೀನು ನಮ್ಮನ್ನು ಆಶ್ರಿತರನ್ನಾಗಿ ಮಾಡುತ್ತೀಯಾ ?

ಪುತ್ರನು ಉತ್ತರಿಸಿದ್ದು ಈ ರೀತಿ :– "ಎಲ್ಲ ಲೋಹವನ್ನು ಶೇಖರಿಸಿ ನಿನ್ನ ಕ್ರೋಧಮಯವಾದ, ನಿರ್ದಯವಾದ, ವೈರಭಾವದ, ಹೃದಯವನ್ನು ನಿರ್ಮಿಸಿದಂತಿದೆ. ನಿನ್ನ ಒಬ್ಬನೇ ಒಬ್ಬ ಮಗನಿಗೆ ಈ ರೀತಿ ನುಡಿಯುವುದು, ಇದೇನು ಕ್ಷತ್ರಿಯ ಆಚರಣೆಯೇ ? ನಾನು ಮಡಿದರೆ, ನಿನ್ನ ಕಣ್ಮರೆಯಾದರೆ ನಿನಗೆ ಭೂಲೋಕದ ರಾಜ್ಯವಾಗಲೀ, ಅಲಂಕಾರವಾಗಲೀ, ಭೋಗವಾಗಲೀ, ನಿನ್ನ ಜೀವನವಾಗಲೀ ಬೇಕೆನಿಸಬಹುದೆ ?"

ತಾಯಿಯು ನುಡಿದಳು : – "ಮಗನೇ ! ನಿನಗೆ ಆಡಿಕೊಳ್ಳುವುದಕ್ಕೆ, ಕೊಂಕು ಮಾತಾಡುವುದಕ್ಕೆ ಇದೇ ಸಮಯ. ಯಾವ ವಾತ್ಸಲ್ಯದಲ್ಲಿ ಬಲವಿಲ್ಲವೋ, ಯಾವುದು ಸದುದ್ದೇಶರಹಿತವಾಗಿದೆಯೋ ಆ ವಾತ್ಸಲ್ಯವು ಕತ್ತೆಯ ವಾತ್ಸಲ್ಯವೇ ಸರಿ. ನೀನು ಕ್ಷತ್ರಿಯನಿರುವೆ. 'ಜಯ' ಇಲ್ಲವೇ 'ಮರಣ' ಹೊಂದು !" ಮಗನು ಕೊನೆಯ ಉಪಾಯವಾಗಿ ಇಂತೆಂದನು: "ನನ್ನ ಹತ್ತಿರ ದ್ರವ್ಯವಿಲ್ಲವಮ್ಮ ! ಯಾವ ಆಧಾರದ ಮೇಲೆ ನಾನು ಯುದ್ಧಮಾಡಲಿ? ಸೈನ್ಯವನ್ನು ಹೇಗೆ ಸಂಗ್ರಹಿಸಲಿ ?"

ತಾಯಿಯು ಅನ್ನುತ್ತಾಳೆ : "ಹೀಗೇನಾದರು ಮಾತನಾಡು ! ನನ್ನ ಬಳಿ ಗುಪ್ತಧನವಿದೆ. ನೀನು ಯುದ್ಧಕ್ಕೆ ಸಿದ್ಧನಿದ್ದರೆ ಕೊಡುವೆನು."

ಮುಂದೆ ಪುತ್ರನು ಕಾಳಗವನ್ನು ಮಾಡಿ, ಕಳೆದುಕೊಂಡ ರಾಜ್ಯವನ್ನು ಸಂಪಾದಿಸಿದನು.

ಕೃಷ್ಣನೇ ! ಈ ಆಖ್ಯಾನವನ್ನು ಧರ್ಮನಿಗೆ ತಿಳಿಸು. ಕ್ಷತ್ರಿಯ ನಾರಿಯು, ಯಾವ ಹಾರೈಕೆಯಿಂದ ಪುತ್ರನನ್ನು ಹಡೆಯುವಳೋ ಆ ಹಾರೈಕೆಯನ್ನು ಪೂರೈಸುವ ಕಾಲವು ಬಂದಿದೆ ಎಂದು ಅರ್ಜುನನಿಗೆ ತಿಳಿಸು. ಎಲ್ಲರೂ ಸೇರಿ ಯುದ್ಧಮಾಡಿ ಹಿರಿಯ ಅಣ್ಣನನ್ನು ರಾಜನನ್ನಾಗಿ ಮಾಡಿರಿ ! ದ್ರೌಪದಿಯೇ! ನೀನು ಶ್ರೇಷ್ಠ ಕುಲದವಳಿರುವೆ ಎಂದು ಸೊಸೆಗೆ ಹೇಳು. ಚಾಟಿಯಿಂದ ಕುದುರೆಗೆ ಹೊಡೆಯುವಂತೆ ಕುಂತಿಯು ಮಗನಿಗೆ ಎಚ್ಚರಿಸಿ ಯುದ್ಧಕ್ಕೆ ಸಜ್ಜುಗೊಳಿಸಿದಳು. ಭೀಮ, ಅರ್ಜುನ, ನಕುಲ, ಸಹದೇವ ಇವರಿಗೆ ಹಾಗೆಯೇ ದ್ರೌಪದಿಗೆ ಕಳಿಸಿದ ಆದೇಶದಲ್ಲಿ 'ಧರ್ಮರಾಜನಿಗೆ ಶರಣಾಗತನಾಗಲೂ ಕೊಡಬೇಡಿರಿ !' ಎನ್ನುವ ಸೂಚನೆಯೇ ಇದೆ. ಕುಂತಿಯ ಹೃದಯವು ಕೂಡ (ವಜ್ರಾಯಸಾ) ಉಕ್ಕಿನದಿತ್ತು ಎಂಬುದರಲ್ಲಿ ಸಂದೇಹವಿಲ್ಲ.

ಅವಳ ಈ ನುಡಿಗಿಂತ ಬಿರುಸಾಗಿ ಕರ್ಣನು ಅವಳನ್ನು ಜರೆದಿದ್ದಾನೆ. ಅವಳನ್ನು ಧಿಕ್ಕರಿಸಿದ್ದಾನೆ. ಕರ್ಣನ ಬಳಿ ಅವಳು ಹೋಗದಿದ್ದರೂ ನಡೆಯುತ್ತಿತ್ತು. ಆದರೆ ದುರ್ಯೋಧನನ ಏರ್ಪಾಟನ್ನು ನುಚ್ಚುನೂರು ಮಾಡಿ, ಬಹುಕಾಲ ಅನುಭವಿಸಿದ ದುಃಖ ಅನ್ಯಾಯಗಳ ಸೇಡನ್ನು ತೀರಿಸುವುದಕ್ಕಾಗಿ ಅವಳು ಈ ಹೇಯ ಕಾರ್ಯವನ್ನು ಅಂಗೀಕರಿಸಿದಳು. ಒಬ್ಬ ಸಾಮಾನ್ಯ ಹೆಂಗಸಿನಂತೆ ಅವಳು ಕರ್ಣನತ್ತ ಹೋದಳು, ಸ್ವತಃದ ಒಂದು ವಿಶಿಷ್ಟ ಉದ್ದೇಶವನ್ನು ಸಾಧಿಸುವುದಕ್ಕೆ ಅವಳು ಕರ್ಣನ ಬಳಿ ಹೋಗಿರಬಹುದೇ? ಮತ್ತು ಕರ್ಣನು ಯಾರೆಂಬುವುದನ್ನು ತಿಳಿಸಿದಳು. "ಐದು ಬಂಧುಗಳೊಡನೆ

ಆರನೆಯವನಾಗು ! ಯುದ್ಧ ಮಾಡಬೇಡ! ನಿನ್ನ ಸೂತಪುತ್ರತ್ವವು ತೊಲಗಿ ನೀನು ಕ್ಷತ್ರಿಯಪದವಿ ಏರುವಿ !" ಎಂಬ ಪ್ರಲೋಭನೆಯನ್ನು ಕರ್ಣನಿಗೆ ತೋರಿಸಿದಳು.

ಕರ್ಣನ ಉತ್ತರವು ಚಾಟಿಯ ಏಟಿಗಿಂತಲೂ ತೀವ್ರವಾಗಿದೆ. ಶುರುವಿನಲ್ಲಿಯೇ ಅವನು "ಕ್ಷತ್ರಿಯೇ !" ಎಂಬ ಔಪರೋಧಿಕ ಸಂಬೋಧನವನ್ನು ಬಳಸುತ್ತಾನೆ. ಕ್ಷತ್ರಿಯೇ! ನಿನ್ನ ಹೇಳಿಕೆಯ ಮೇಲೆ ನನ್ನ ನಂಬಿಕೆ ಇದೆ. ನನ್ನ ಯಶಃ ಕೀರ್ತಿಗಳನ್ನು ಸಂಪೂರ್ಣವಾಗಿ ನಾಶಗೊಳಿಸುವ ಪಾಪವು ನಿನ್ನಿಂದಾಗಿದೆ. ಕ್ಷತ್ರಿಯನಾಗಿ ಜನಿಸಿ, ಕ್ಷತ್ರಿಯ ಸಂಸ್ಕಾರಗಳು ಜನ್ಮದ ನಂತರ ನನಗೆ ನಡೆಯಲಿಲ್ಲ. ಇದಕ್ಕೂ ಹೆಚ್ಚಾಗಿ ಕೇಡನ್ನು ನನ್ನ ಯಾವ ಶತ್ರುವೂ ಮಾಡಲಾರನು. ಆಗ ನನ್ನ ಬಗ್ಗೆ ದಯೆ ತೋರಲಿಲ್ಲ. ಈಗ ನನಗೆ ಆಹ್ವಾನಿಸುತ್ತಿದ್ದೀಯೇ? ಆಗ ತಾಯಿಯಂತೆ ವರ್ತಿಸಲಿಲ್ಲ. ಈಗ ನೀನು ಬಂದಿರುವುದು ಸ್ವಾರ್ಥ ವ್ಯಾಮೋಹದಿಂದ. ಈ ಮೊದಲು ನನಗೆ ಯಾವ ಸಹೋದರನೂ ಇರಲಿಲ್ಲ. ಆಕಸ್ಮಿಕವಾಗಿ ಈಗ ಉದ್ಭವಿಸಿದರೆ ಜನರು ಏನೆಲ್ಲ ಆಡಿಕೊಳ್ಳಬಹುದು ? ಯಾವ ಧೃತರಾಷ್ಟ್ರ ಪುತ್ರರು ಇಹಲೋಕದ ಸರ್ವಸ್ವವನ್ನು ನನಗೆ ಇತ್ತರೋ ಅವರನ್ನು ಈಗ ನಾನು ತ್ಯಜಿಸುವುದು ಸಾಧ್ಯವೆ ? ಆದರೆ ನಾನು ಇಷ್ಟೊಂದು ಹೇಳಬಲ್ಲೆ ; ನಿನ್ನ ಐದಕ್ಕೆ ಐದು ಪುತ್ರರು ಉಳಿಯುವರು. ನಾನು ಮಡಿದರೆ ನಿನ್ನ ಐದು ನಿನಗೆ ಇದ್ದೇ ಇರುವವರು. ಇಲ್ಲವಾದರೆ ನಾನು ಅರ್ಜುನನನ್ನು ಕೊಂದರೆ ನನ್ನನ್ನು ಸೇರಿಸಿ ಐವರಾಗುವರು."

"ಕೌರವರೆಲ್ಲರೂ ನಷ್ಟರಾಗುವರು. ನೀನು ನುಡಿದಂತೆ ನಡೆಯಲಿ! ದೈವದ ಮುಂದೆ ಯಾರ ಪಾಡೇನು ?" ಎಂದು ದುಃಖಿತಳಾಗಿ ಕುಂತಿಯು ನುಡಿದಳು.

ಈ ನುಡಿಯಿಂದ ಕೌರವರ ಜೊತೆ ಕರ್ಣನು ನಾಶವಾಗಬಾರದೆಂಬ ಭಾವನೆ ಕುಂತಿಯದಿತ್ತೋ ? ಇಲ್ಲವೇ ಎಲ್ಲರೂ ಸ್ವಾರ್ಥಕ್ಕಾಗಿ ಇತ್ತೋ? ಈ ಬಗೆಯ ಸಂದೇಹ ಉಂಟಾಗುತ್ತದೆ. ಕುಂತಿಯ ಬಗ್ಗೆ ಅನಾದರಣೆ ಹುಟ್ಟಿಸುವ ಕೃತಿಗಳು ಅವಳಿಂದ ನಡೆಯುವಷ್ಟರಲ್ಲಿ, ಅದೇ ಕುಂತಿಯು ಇನ್ನೊಂದು ರೂಪದಲ್ಲಿ ನಮ್ಮ ಮುಂದೆ ಕಾಣಿಸಿಕೊಳ್ಳುತ್ತಾಳೆ. ಪತಿಯ ಮರಣದ ನಂತರದ ಮಾದ್ರಿಯನ್ನು ದೂಷಿಸಿ ಅವಳನ್ನು ನಿಂದಿಸುವ ಕುಂತಿಯ ಬಗ್ಗೆ ಕೋಪವುಂಟಾಗುತ್ತದೆ. ಆದರೆ ಅದೇ ಕುಂತಿಯು ಆಜನ್ಮ ಮಾದ್ರಿಯ ಮಕ್ಕಳನ್ನು ಸ್ವಂತ ಮಕ್ಕಳಂತೆ ರಕ್ಷಿಸಿದಳು. ಸಹದೇವನಿಗೆ, ಕುಂತಿಯ ಮೇಲೆ, ಮತ್ತು ಕುಂತಿಗೆ ಅವನ ಮೇಲೆ, ವಿಶೇಷ ಪ್ರೀತಿ ಇತ್ತು. ದ್ರೌಪದಿಯು ಮೂವರ ಪತ್ನಿಯಾಗಬಹುದಿತ್ತು. ಆದರೆ ಅವಳು ಐವರ ಪತ್ನಿಯಾಗಲಿ ಎಂಬ ಭಾವನೆಯು ಕುಂತಿಯದೆ ! ಐವರಲ್ಲಿ ಒಡಕು ಹುಟ್ಟಬಾರದೆಂಬುದಷ್ಟೇ ಅವಳ ಉದ್ದೇಶವಿರಬಹುದೇ ? ಕುಂತಿಯ ಆಗಾಗಿನ ಉದ್ಗಾರಗಳಿಂದ ಹಾಗೆ ತೋರುವುದಿಲ್ಲ. ಅವಳು ಆ ಮಕ್ಕಳನ್ನು ಉಡಿಯಲ್ಲಿ ತೆಗೆದುಕೊಂಡಳು ಮತ್ತು ಕೊನೆಯವರೆಗೂ ತನ್ನವರೆಂಬ ಭಾವನೆಯಿಂದ ಅತಿಶಯ ಪ್ರೇಮದಿಂದ ಸಲಹಿದಳು. ಅಪ್ಪಿತಪ್ಪಿಯೂ ಪರಭಾವವನ್ನು ತೋರಲಿಲ್ಲ.

ಕರ್ಣನ ಬಗ್ಗೆಯೂ ಅವಳ ಭಾವನೆಯು ಹೀಗೆಯೇ ಕಾಣುತ್ತದೆ. ಕೌಮಾರ್ಯದಲ್ಲಿ ಹುಟ್ಟಿದ ಮಗುವನ್ನು ಸಾಕುವುದು ಸಾಧ್ಯವಿರಲಿಲ್ಲ. ನಂತರ ತನ್ನವನೆಂದು ಹೇಳಲೂ ಆಗಲಿಲ್ಲ. ಅವಳ ಈ ಅನ್ಯಾಯವನ್ನು ಕರ್ಣನು ಮರೆಯಲಿಲ್ಲ. ಅವಳೂ ಸಹ ಮರೆಯಲಿಲ್ಲ.

ಯುದ್ಧವು ಕೊನೆಯಾಗಿತ್ತು. ಮಡಿದ ವೀರರ ಅಂತ್ಯಸಂಸ್ಕಾರಗಳು ನಡೆದಿದ್ದವು. ಇಂಥ ಸಮಯದಲ್ಲಿ ಕುಂತಿಯು ಧರ್ಮನಿಗೆ, "ಕರ್ಣನು ನನಗೆ ಕೌಮಾರ್ಯದಲ್ಲಿ ಹುಟ್ಟಿದ ಮಗನು. ನಿನ್ನ ಹಿರಿಯ ಅಣ್ಣನು. ಕ್ಷತ್ರಿಯರಿಗೆ ಸಲ್ಲತಕ್ಕ ಸಂಸ್ಕಾರಗಳನ್ನು ಆತನಿಗೆ ಮಾಡು" ಎಂದು ಹೇಳಿದಳು. ಕರ್ಣನು ಜೀವಿತನಿರುವಾಗ ನಡೆಯಲಿಲ್ಲದ ಕ್ಷತ್ರಿಯ ಸಂಸ್ಕಾರವನ್ನು, ಅವನು ಸತ್ತ ಮೇಲೆ ಮಾಡುವುದರ ಅರ್ಥವೇನು ? ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಇದಕ್ಕೆ ಸರಳವಾದ ಉತ್ತರವಿದೆ. ಕ್ಷತ್ರಿಯರಿಗೆ ಸಲ್ಲತಕ್ಕ ಸಂಸ್ಕಾರಗಳನ್ನು ನೀನು ನನಗೆ ಮಾಡಿಸಲಿಲ್ಲ. ನನ್ನ ಜನ್ಮಜಾತ ಸ್ಥಾನವನ್ನು ಇಲ್ಲದಂತೆ ಮಾಡಿದೆ ! ಎಂಬುದೇ ಕರ್ಣನ ಆರೋಪವಿತ್ತು. ಅವನ ಮತ್ತು ಕುಂತಿಯ ನಡುವೆ ನಡೆದ ಕೊನೆಯ ಸಂಭಾಷಣೆಯಲ್ಲಿ ಆತನು ಇದನ್ನೇ ಒತ್ತಿ ಹೇಳಿದ್ದಾನೆ. "ಯೋಗ್ಯ ಕ್ರಿಯಾದಿಗಳಿಂದ ಪುರುಷನು ಸದ್ಗತಿಯನ್ನು ಪಡೆಯುವನು" ಎಂದು ಅವಳ ನಂಬಿಕೆ ಇತ್ತು. ಬೇರೆ ಯಾವುದೂ ಆಗಲಿಲ್ಲ, ಇದನ್ನಾದರೂ ಮಾಡಬೇಕು, ಎಂದು ಕುಂತಿಗೆ ಅನಿಸಿರಬೇಕು. ಆ ಸಮಯದಲ್ಲಿ, ಕೌಮಾರ್ಯದಲ್ಲಿ ನಡೆದ ಕೃತ್ಯದ ಪ್ರಸ್ತಾಪವನ್ನು ಮಾಡುವ ಅವಶ್ಯಕತೆ ಏನೂ ಇರಲಿಲ್ಲ. ಆದರೆ ಯುದ್ಧದ ಮೊದಲು ಅಂಥ ಅವಶ್ಯಕತೆಯು ಕೃಷ್ಣನಿಗೆ ಹಾಗೆಯೇ ಕುಂತಿಗೆ ಅನಿಸಿತ್ತು. ಅವಳು ಅದನ್ನು ಮಾಡಲು ಸಿದ್ಧಳಿದ್ದಳು. ಆದರೆ ಈಗ ಆ ರೀತಿಯಾಗಿರಲಿಲ್ಲ. ಕುಂತಿಯ ಮನಸ್ಸು ಕೊರೆಯುತ್ತಿತ್ತು. ಅವಳ ನ್ಯಾಯಬುದ್ಧಿಯು ಅವಳಿಗೆ ಸ್ತಬ್ಧಳಾಗಿರಗೊಡಲಿಲ್ಲ. ಅವಳು ಎಲ್ಲವನ್ನೂ ಹೇಳಿಬಿಟ್ಟಳು. ಜನರು ಏನು ಆಡಿಕೊಳ್ಳುತ್ತಿರಬಹುದು ಎಂಬ ಯೋಚನೆ ಅವಳಿಗಿರಲಿಲ್ಲ. ಪುತ್ರನಾದ ಕರ್ಣನಿಂದ ನಿರ್ಭರ್ತ್ಸನೆಯನ್ನು ಅವಳು ಕೇಳಬೇಕಾಯಿತು. ಕರ್ಣನ ಈ ವೃತ್ತಾಂತವನ್ನು ಕೇಳಿ ಧರ್ಮನು ಬಲು ಶೋಕ ಮಾಡಿದನು. ಅಷ್ಟಲ್ಲದೇ ಭಾರತೀಯ ಯುದ್ಧದ ಸಮಗ್ರ ಆಕ್ಷೇಪಣೆಯನ್ನು ಕುಂತಿಯ ಮೇಲೆ ಹೊರಸಿ ತಾನು ಮುಕ್ತನಾದನು.

"ನಿನ್ನ ಗೌಪ್ಯದಿಂದ ಅನಾಹುತವಾಯಿತು. ಪಾಂಚಾಲರು ಅಳಿದರು. ಕೌರವರು ನಾಶವಾದರು. ದ್ರೌಪದಿಯ ಮಕ್ಕಳು ಇಲ್ಲವಾದರು. ಅಭಿಮನ್ಯುವು ಮಡಿದನು. ಎಲ್ಲವೂ ನಡೆದದ್ದು ಈ ಕಾರಣದಿಂದಲೇ ! ಕರ್ಣನು ನಮ್ಮವನು ಎಂದು ಮೊದಲೇ ತಿಳಿಸಿದ್ದರೆ ಯುದ್ಧವೇ ಸಂಭವಿಸುತ್ತಿರಲಿಲ್ಲ. ಆತನು ನಮ್ಮ ಪಕ್ಷದವನಾಗಿದ್ದರೆ ಯುದ್ಧವೇ ಆಗುತ್ತಿರಲಿಲ್ಲ." ಇಷ್ಟೇ ನುಡಿದು ಅವನು ಸುಮ್ಮನಿರದೆ. "ಇತಃಪರವಾಗಿ ಸ್ತ್ರೀಯರ ಮನಸ್ಸಿನಲ್ಲಿ ಯಾವುದೇ ಗೌಪ್ಯವು ಉಳಿಯಕೂಡದು !" ಎನ್ನುವ ಶಾಪವನ್ನು ಇಡೀ ಸ್ತ್ರೀಜಾತಿಗೆ ಕೊಟ್ಟು ಕಡೆಗಾದನು.

[ಶಾಪವನ್ನು ಕೊಟ್ಟಿದ್ದ ಈ ಭಾಗವು ಬಹುಶಃ ನಂತರ ಸೇರಿಸಿದಂತಿದೆ. ಏಕೆಂದರೆ ಸ್ತ್ರೀಪರ್ವದಲ್ಲಿ ಕರ್ಣನ ಉತ್ತರಕ್ರಿಯೆಯನ್ನು ಧರ್ಮನು ನಡೆಯಿಸಿದ ಬಗ್ಗೆ ಉಲ್ಲೇಖವಿದೆ.

ಮುಂದೆ ಶಾಂತಿಪರ್ವದಲ್ಲಿ ಮತ್ತೊಮ್ಮೆ ಕರ್ಣಜನ್ಮದ ಕಥೆಯ ಉಲ್ಲೇಖವು ಬಂದಾಗ ಅಲ್ಲಿ ಧರ್ಮನ ಮುಖದಿಂದ ಈ ಶಾಪವನ್ನು ಕೊಡಿಸಲಾಗಿದೆ.]

ಕುಂತಿಯು ಮತ್ತೊಮ್ಮೆ ತನ್ನ ದೃಢಸ್ವಭಾವವನ್ನು ತೋರಿಸಿದಳು. ಧರ್ಮ ರಾಜನ ಆಳುವಿಕೆಯಲ್ಲಿ ಹದನೈದು ವರುಷಗಳು ಕಳೆದ ಮೇಲೆ ಧೃತರಾಷ್ಟ್ರನು ಅರಣ್ಯವಾಸವನ್ನು ಸ್ವೀಕರಿಸುವುದನ್ನು ನಿರ್ಧರಿಸಿದನು. ಧರ್ಮ, ಕುಂತಿ, ಸೊಸೆಯಂದಿರು, ಅರ್ಜುನನು ಇವರೆಲ್ಲರು ಧೃತರಾಷ್ಟ್ರನಿಗೆ ತಕ್ಕ ಗೌರವದಿಂದ ನೋಡಿಕೊಳ್ಳುತ್ತಿದ್ದರು. ಆದರೆ ಭೀಮನು ಮತ್ತು ಆತನ ಪ್ರೋತ್ಸಾಹದಿಂದ ನಕುಲ, ಸಹದೇವರು ಆಗಾಗ ಧೃತರಾಷ್ಟ್ರ ಗಾಂಧಾರಿಯನ್ನು ಕುರಿತು ಅವರಿಗೆ ಕೇಳಬರುವಂತೆ, ಅವರನ್ನು ಕಡೆಗಾಣಿಸಿ ಮಾತನಾಡುತ್ತಿದ್ದರು. ಧೃತರಾಷ್ಟ್ರನು ಅದರ ಬಗ್ಗೆ ಗೊಣಗುವುದು ಸಾಧ್ಯವಿರಲಿಲ್ಲ. ಆದರೆ ತಾನು ಮತ್ತು ಗಾಂಧಾರಿಯು ಇಲ್ಲಿಂದ ಹೊರಡುವುದೇ ಲೇಸೆಂದು ಅವನು ತೀರ್ಮಾನಿಸಿದನು. ವಿದುರನು ಮತ್ತು ಸಂಜಯನು ಜೊತೆಯಲ್ಲಿ ಹೊರಡಲು ಸಿದ್ಧರಾದರು. ಕುಂತಿಯು ಸಂಗಡ ಹೋಗಲು ನಿಶ್ಚಯಿಸಿದಳು. "ನನ್ನಿಂದ ಹಿರಿಯರ ಸೇವೆಯು ಆಗಲಿಲ್ಲ. ಈಗಾದರು ನಡೆಯಲಿ ! ನಾನು ಅತ್ತೆ ಮಾವಂದಿರಂತೆ ಇರುವ ಧೃತರಾಷ್ಟ್ರ, ಗಾಂಧಾರಿಯವರಿಗೆ ಸೇವೆ ಸಲ್ಲಿಸುವೆನು." ಹೀಗೆಂದು ನುಡಿದು ಕುಂತಿಯು ಸಾಗಿದಳು. ಪಾಂಡವರ ಆಕ್ರೋಶವನ್ನು ಕೇಳಿ ಧೃತರಾಷ್ಟ್ರನು ಗಾಂಧಾರಿಗೆ ಹೇಳಿದನು: "ವಧುವಿಗೆ ಹೇಳು (ಕುಂತಿಗೆ–ಸೊಸೆಗೆ) ಬಹಳ ಕಷ್ಟದಲ್ಲಿ ಕಾಲ ಕಳೆದಿರುವೆ ! ಈಗಲಾದರೂ ಕೆಲವು ಕಾಲ ಮಕ್ಕಳ ವೈಭವದಲ್ಲಿರು." ಆದರೆ ಕುಂತಿಯು ಇದಕ್ಕೆ ಒಪ್ಪಲಿಲ್ಲ. ಕೊನೆಯಲ್ಲಿ ಧರ್ಮನು ಕಣ್ಣೀರು ತಂದು, "ಈ ಮೊದಲು ವಿದುಲೆಯ ಕಥೆಯನ್ನು ವಾಸುದೇವನಿಂದ ನಮಗೆ ತಿಳಿಸಿದೆ; ನಿನ್ನ ಮಾತನ್ನು ಮನಸಾರೆ ಗಮನಿಸಿ ನಾವು ರಾಜ್ಯವನ್ನು ಗೆದ್ದುಕೊಂಡೆವು. ಈಗ ನಿನ್ನ ಕ್ಷಾತ್ರತ್ವವು ಎಲ್ಲಿ ಅಡಗಿತು ? ಗಳಿಸಿದ ರಾಜ್ಯವನ್ನೂ, ಮಕ್ಕಳಾದ ನಮ್ಮನ್ನೂ, ಸೊಸೆಯಂದಿರನ್ನೂ ಬಿಟ್ಟು ಕಾಡಿಗೆ ಏಕೆ ನಡೆದಿರುವೆ ?" ಎಂದು ಕೇಳಿದನು. ಕುಂತಿಯು ಕಿವಿಗೊಡದೆ ಕಣ್ಣೀರು ಸುರಿಸುತ್ತ ಸಾಗುತ್ತಿದ್ದಳು. ಅದನ್ನು ನೋಡಿ ಭೀಮನು, "ಅಮ್ಮ ! ಪುತ್ರರು ದೊರಕಿಸಿದ ರಾಜ್ಯದ ಉಪಭೋಗವನ್ನು ಬಿಟ್ಟು ಎಲ್ಲಿಗೆ ಹೋಗುವೆ ? ಹೀಗಾಗಬೇಕಿದ್ದಲ್ಲಿ, ಪೃಥ್ವಿ ಕ್ಷಯವಾಗುವಂತಹ ಯುದ್ಧವನ್ನು ಏತಕ್ಕೆ ಮಾಡಿಸಿದೆ? ಮಾದ್ರಿಯ ಈರ್ವರನ್ನು ಮತ್ತು ನಮ್ಮನ್ನು ವನದಿಂದ ಹಸ್ತಿನಾಪುರಕ್ಕೆ ಏಕೆ ತಂದೆ ?" ಎಂದು ಕೇಳಿದನು.

ಮಕ್ಕಳು ಒಟಗುಟ್ಟುತ್ತಿದ್ದರು. ದ್ರೌಪದಿಯು ಕಣ್ಣೀರನ್ನು ಸುರಿಸುತ್ತಾ ಹಿಂಬಾಲಿಸುತ್ತಿದ್ದಳು. ಕುಂತಿಯು ಮಾತಾಡದೇ ಸಾಗುತ್ತಿದ್ದಳು. ಮಕ್ಕಳು ಏನು ಮಾಡಿದರೂ ಬೆನ್ನು ಬಿಡದೆ ಇರುವುದನ್ನು ಕಂಡು ಕುಂತಿಯು ಕಂಬನಿ ಒರೆಸುತ್ತ, "ಪಾಂಡವರೇ ! ನೀವು ನುಡಿದಿದ್ದು ನಿಜ. ನೀವು ಎದೆಗುಂದಿದ್ದಿರಿ ; ಆ ಕಾರಣದಿಂದ ನಾನು ಚಾವಟಿಯಿಂದ ನಿಮ್ಮನ್ನು ಎಚ್ಚರಿಸಿದೆ. ದ್ಯೂತದಲ್ಲಿ ರಾಜ್ಯವನ್ನು ಕಳೆದುಕೊಂಡಿದ್ದಿರಿ ; ಸುಖವಿಮ್ಮುಖರಾಗಿದ್ದಿರಿ; ಸ್ವಜ್ಞಾತಿಯವರು ನಿಮ್ಮನ್ನು ಲಕ್ಷಿಸುತ್ತಿದ್ದಿಲ್ಲ; ಅಂಥ ಸಮಯದಲ್ಲಿ ನಾನು ನಿಮ್ಮನ್ನು ಎತ್ತಿಹಿಡಿದೆ, ಪಾಂಡುವಿನ ಸಂತಾನವು ಅಳಿಯಬಾರದು ; ನಿಮ್ಮ ಯಶಸ್ಸು ನಷ್ಟವಾಗಬಾರದೆಂದು

ನಿಮ್ಮನ್ನು ಜರೆದನು. ಈ ನನ್ನ ಮುಂದಿನ ಸೊಸೆಯು ಮತ್ತೊಮ್ಮೆ ಅವಮಾನಿತಳಾಗಬಾರದೆಂದು ನಾನು ನಿಮ್ಮನ್ನು ಚುಚ್ಚಿ ಎಚ್ಚರಿಸಿದೆ. ಮಕ್ಕಳಿರಾ ! ಪಾಂಡುವಿನ ಪತ್ನಿಯಾಗಿ ನಾನು ಸಾಕಷ್ಟು ರಾಜ್ಯೋಪಭೋಗವನ್ನು ಪಡೆದಿದ್ದೇನೆ ; ನನಗಾಗಿ ಯಾವದೊಂದು ಬೇಕೆಂಬ ಅಭಿಲಾಷೆಯಿಂದ ನಾನು ವಾಸುದೇವನ ಕೂಡ ಹೇಳಿ ಕಳಿಸಿರಲಿಲ್ಲ; ಪುತ್ರರು ಸಂಪಾದಿಸಿದ, ರಾಜ್ಯಫಲ–ವೈಭವಗಳ ಹವ್ಯಾಸವೇ ನನಗಿಲ್ಲ. ಈಗ ತಪಸ್ಸನ್ನು ಮಾಡಿ ಪುಣ್ಯಪ್ರದವಾದ ಪತಿಲೋಕಕ್ಕೆ ಹೋಗಲು ಬಿಡಿ !"

ಕುಂತಿಯ ಈ ನುಡಿಗಳನ್ನು ಕೇಳಿ, ಲಜ್ಜಿತರಾದ ಪಾಂಡವರು ದ್ರೌಪದಿ ಸಮೇತರಾಗಿ ಹಿಂದಿರುಗಿದರು. ಕುಂತಿಯು ಗಾಂಧಾರಿಯ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡಿದ್ದಳು. ಧೃತರಾಷ್ಟ್ರನು ಗಾಂಧಾರಿಯ ಭುಜದ ಮೇಲೆ ಕೈ ಇಟ್ಟಿದ್ದನು. ಹೀಗೆ ಅವರು ಮೂವರೂ ಹಸ್ತಿನಾಪುರದ ಮಾರ್ಗದಿಂದ ಸಾಗುತ್ತಿದ್ದರು.

ಕಾಡನ್ನು ತಲುಪಿದ ನಂತರವೂ, ಕುಂತಿಯೇ ಅವರ ಸೇವೆಯನ್ನು ಮಾಡುತ್ತಿದ್ದಳು. ಅವರನ್ನು ಪ್ರತಿನಿತ್ಯವು ಗಂಗಾತೀರಕ್ಕೆ ಕರೆದೊಯ್ಯುತ್ತಿದ್ದಳು. ಮಕ್ಕಳು ಒಮ್ಮೆ ಬಂದು ಭೇಟಿಯಾಗಿ ಹೋದರು. ಎಲ್ಲರೂ ಕಣ್ಣೀರು ಸುರಿಸಿದರು. ವನಕ್ಕೆ ಹೋದ ನಂತರ ವಿದುರನು ಮೊದಲು ಹೋದನು. ಕಾಡಿನಲ್ಲಿ ಒಟ್ಟಾಗಿ ಮೂರು ವರುಷ ಕಳೆದ ನಂತರ, ಬೇಗೆಯು ಹಬ್ಬುತ್ತಿದ್ದಾಗ, ಮೊದಲೇ ನೊಂದ, ಬೆಂದ, ಈ ಮೂರು ಜೀವಿಗಳ ದೇಹಗಳು ಅಗ್ನಿಯಲ್ಲಿ ಸುಟ್ಟುಹೋದವು.

ಸಾಯುವಾಗಲೂ ಕುಂತಿಯು ಧೈರ್ಯದಿಂದಲೇ ಇದ್ದಳು. ಧೃತರಾಷ್ಟ್ರನು ಸಂಜಯನಿಗೆ ಪಾರಾಗಿಹೋಗಲು ಹೇಳಿದನು. ಬೇಗೆಯು ಸಮೀಪಿಸುತ್ತಿದ್ದಂತೆ ಎಲ್ಲರೂ ಭೂಮಿಯ ಮೇಲೆ ಕುಳಿತು ಉಸಿರನ್ನು ಸಂಯಮಿಸಿ ಪ್ರಾಣಾಯಾಮವನ್ನು ಮಾಡಿದರು. ಇಂಥ ಅವಸ್ಥೆಯಲ್ಲಿ, ಸಂಜಯನು ನೋಡುತ್ತಿದ್ದಂತೆಯೇ ಅವರು ಅಗ್ನಿವಶರಾದರು.

4
ಪಿತಾಪುತ್ರ

ಅನಾಥ ಪಾಂಡವರ ರಕ್ಷಣೆ ಮಾಡಿದವರು ಯಾರು? ಅನಾಥ ಪಾಂಡವರ ರಕ್ಷಣೆ ಎಚ್ಚರಿಕೆಯಿಂದ ಮಾಡಿದವಳು ಕುಂತಿ. ಆದರೆ ಪಾಂಡವರನ್ನು ಸಾಯಿಸುವ ಹಂಚಿಕೆಗಳಿಂದ ಬಿಡಿಸಿದವನು ವಿದುರ.

ಭೀಷ್ಮನು ಧೃತರಾಷ್ಟ್ರನ ಹಾಗು ಪಾಂಡುವಿನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಏರ್ಪಾಟನ್ನು ಮಾಡಿದನು. ಆದರೆ ಪಾಂಡವರ ರಕ್ಷಣೆಗಾಗಿ ವಿಶೇಷ ದಕ್ಷತೆಯನ್ನು ಆತ ವಹಿಸಿರಲಿಲ್ಲ. ಕೌರವ ಪಾಂಡವರಲ್ಲಿ ಇದ್ದ ಸ್ಪರ್ಧೆಯು ಅವನ ಗಮನಕ್ಕೆ ಬಂದಿರಲಿಲ್ಲವೇ ? ಅಥವಾ ಅವನು ಏನೊಂದು ಮಾಡಲೂ ಅಸಮರ್ಥನಿದ್ದನೋ? ಇಲ್ಲವೇ ಉದಾಸೀನನಿದ್ದನೋ? ನಿರ್ವಂಶವಾಗಲಿದ್ದ ಕುಲವು ಚಿಗುರಿತು. ಒಬ್ಬನೂ ಇರಲಿಲ್ಲ, ಅಲ್ಲಿ ಇಬ್ಬರಾದರು. ಆ ಇಬ್ಬರಿಂದ ನೂರಾಐದು ಆದರು. ನೂರೈದರಲ್ಲಿ ಕೆಲವರು ಹೋದರೂ ಚಿಂತೆ ಇಲ್ಲ. ಕುರುವಂಶವು ಹಸ್ತಿನಾಪುರದ ಅಧಿಪತಿಯಾಗಿ ಉಳಿದರೆ ಸಾಕು. ಇಷ್ಟೇ ಜಾಗರೂಕತೆ ಭೀಷ್ಮನು ವಹಿಸಿದ್ದನೋ? ಆದರೆ ಈ ರೀತಿ ಅನ್ನಲಾಗುವುದಿಲ್ಲ. ದ್ರೌಪದಿ ಸ್ವಯಂವರದವರೆಗೆ ಬಂದು ಬಂಧುಗಳ ಈ ಸ್ಪರ್ಧೆಯತ್ತ, ಮತ್ತು ಧೃತರಾಷ್ಟ್ರನ ದುರುದ್ದೇಶದತ್ತ, ಭೀಷ್ಮನ ತುಸು ಗಮನವು ಇರಲಿಲ್ಲವೆಂದು ಹೇಳಬಹುದು. ಅದರ ಸುಳಿವು ಆತನಿಗೆ ಇರಲಿಲ್ಲವೆಂದು ಕಾಣುತ್ತದೆ. ವಿದುರನು ಪಾಂಡವರ ಹಿತವನ್ನು ಪಿತನಂತೆ ಕಾಪಾಡಿದನು. ವಿದುರನು ಸ್ವತಃ ಪರಾಧೀನನಾಗಿದ್ದನು. ಧೃತರಾಷ್ಟ್ರನ ಧೂರ್ತತೆಯು ಮತ್ತು ದುರ್ಯೋಧನನ ಮತ್ಸರವು ಮೊದಮೊದಲು ಬಯಲಿಗೆ ಬಂದಿರಲಿಲ್ಲ. ಆಗ ವಿದುರನು ಅದನ್ನು ತಿಳಿದಿದ್ದನು. ಆದ್ದರಿಂದ ಪಾಂಡವರ ರಕ್ಷಣೆಯನ್ನು ಈತನು ಬಲು ಎಚ್ಚರಿಕೆಯಿಂದ, ಧೃತರಾಷ್ಟ್ರಾದಿ ಕೌರವರ ಗಮನಕ್ಕೆ ಬಾರದಂತೆ ಒಳ ಒಳಗೆ ಮಾಡಬೇಕಾಯಿತು. ದುರ್ಯೋಧನ ಶಕುನಿಯರು ಪಾಂಡವರನ್ನು ಕೊಲ್ಲಲು ಕಾಯುತ್ತಿದ್ದರು. ಅವರನ್ನು ನೀರಿನಲ್ಲಿ ಮುಳುಗಿಸುವುದು, ಸರ್ಪದಂಶವನ್ನು ಮಾಡಿಸುವುದು, ಅನ್ನದಲ್ಲಿ ವಿಷ ಬೆರಸುವುದು ಮುಂತಾದ ವಿವಿಧ ಪ್ರಕಾರಗಳನ್ನು ಅವರು ಭೀಮನ ವಿರುದ್ಧ ಮಾಡಿ ನೋಡಿದರು. ಯುಯುತ್ಸುವು ಪ್ರತಿ ಸಲವು ನಡೆದ ಒಳಸಂಚನ್ನು ಪಾಂಡವರಿಗೆ ತಿಳಿಸುತ್ತಿದ್ದನು. ಪಾಂಡವರು ಕೂಡ ಈ ಎಲ್ಲಾ ವೈರತ್ವವನ್ನು ಅರಿತುಕೊಂಡು ಯಾವುದನ್ನೂ ಹೊರತೋರಿಸದೇ ವಿದುರನ ಸಲಹೆಯನುಸಾರವಾಗಿ ವರ್ತಿಸಿದರೆಂದು

ಆದಿಪರ್ವದಲ್ಲಿ ಹೇಳಿದೆ. ವಿದುರನು ಕುಂತಿಯ ಹಿತವನ್ನೂ ಲಕ್ಷಿಸಿದನು. ಎಲ್ಲ ಪುತ್ರರು ತಮ್ಮ ತಮ್ಮ ವಿದ್ಯೆಯ ಪ್ರಾತ್ಯಕ್ಷಿಕವನ್ನು ತೋರುತ್ತಿರುವಾಗ ಕರ್ಣನು ಮಾತಾಡದೇ ಅಲ್ಲಿಗೆ ಬಂದನು. ಕರ್ಣನ ಮತ್ತು ಅರ್ಜುನನ ಯುದ್ಧವು ಪ್ರಾರಂಭವಾಗುವ ಚಿಹ್ನೆಯು ಕಾಣುತ್ತಲೇ ಕುಂತಿಯು ಮೂರ್ಛೆ ಹೋಗುವವಳಿದ್ದಳು. ಆದರೆ ವಿದುರನು ಅವಳನ್ನು ಸಂತೈಸಿ ಒಳ್ಳೆಯ ಉಪಾಯದಿಂದ ಅವರಿಬ್ಬರ ಯುದ್ಧಪ್ರಸಂಗವನ್ನು ತಡೆದನು.

ಪಾಂಡವರ ಬಗ್ಗೆ ಇದ್ದ ವಿದುರನ ಮಮತೆಯು ಪೂರ್ಣವಾಗಿ ಅಡಗಿಕೊಂಡಿರಲಿಲ್ಲ. ಧೃತರಾಷ್ಟ್ರ, ದುರ್ಯೋಧನರು, ಪಾಂಡವರನ್ನು ದೂರ ಓಡಿಸುವ ಹಂಚಿಕೆಯನ್ನು ಹೂಡಿದರು. ಆಗ ದುರ್ಯೋಧನನು ಪಿತನಾದ ಧೃತರಾಷ್ಟ್ರನನ್ನು ಕುರಿತು ಹೀಗೆಂದನು– "ಭೀಷ್ಮನು ನಮಗೆ ಮತ್ತು ಪಾಂಡವರಿಗೆ ಮಧ್ಯಸ್ಥನಂತೆ ಇರುವನು. ಅವನಿಗೆ ಯಾರೂ ಹೆಚ್ಚು ಹತ್ತಿರದವರು ಎನ್ನಿಸುವುದಿಲ್ಲ. ದ್ರೋಣ ಪುತ್ರನು ನಮ್ಮ ಪಕ್ಷಕ್ಕೆ ಸೇರಿದನು. ಮಗ ನಡೆದತ್ತ ದ್ರೋಣನು ಇರುವನು. ಆದರೆ ವಿದುರನು ಮಾತ್ರ ಅಂತರಂಗದ ಅವರ ಪಕ್ಷಕ್ಕೆ ಸೇರಿದವನು. ಅವನೊಬ್ಬನೇ ನಮ್ಮ ವಿರುದ್ಧವಾಗಿ ಏನನ್ನೂ ಮಾಡಲು ಸಾಧ್ಯವಿಲ್ಲ." (೨,೧೩೦,೧೬,೧೮) ಧೃತರಾಷ್ಟ್ರನು ಪಾಂಡವರನ್ನು ವಾರಣಾವತಕ್ಕೆ ಕಳುಹಿಸುವ ಸಂಚನ್ನು ಹೂಡಿದ. ಮರಣವು ಎದುರಿನಲ್ಲಿ ಕಾಣುತ್ತಿದ್ದರೂ, ಧರ್ಮನಿಗೆ ಅಲ್ಲಿ ಹೋಗಬೇಕಾಯಿತು. ಎಲ್ಲರನ್ನು ಭೇಟಿಯಾಗಿ ಹೊರಡುವಾಗ ವಿದುರ, ದ್ವಂದ್ವಾರ್ಥದಲ್ಲಿ ಮಾತನಾಡಿ ಅವರಿಗೆ ಭಾವೀ ಸಂಕಟಗಳ ಮುನ್ಸೂಚನೆಗಳನ್ನು ಕೊಟ್ಟು ಅವುಗಳಿಂದ ಪಾರಾಗುವ ಮಾರ್ಗವನ್ನು ತಿಳಿಸಿದನು. ಪಾಂಡವರು ವಾರಣಾವತಕ್ಕೆ ಹೋದ ನಂತರ ಒಬ್ಬ ವಿಶ್ವಾಸಿಕನಾದ ಸೇವಕನನ್ನು ಕಳುಹಿಸಿ ಅವನಿಂದ ಸುರಂಗ ಮಾರ್ಗವನ್ನು ತೋಡಿಸಿದನು. ಈ ರೀತಿ ವಿದುರ, ರಹಸ್ಯವಾಗಿ ಅವರ ರಕ್ಷಣೆಯನ್ನು ಮಾಡಿದ. ದ್ರೌಪದಿಯೊಡನೆ ಪಾಂಡವರ ವಿವಾಹವಾದನಂತರ ವಿದುರನು ಪ್ರಕಟವಾಗಿ ಪಾಂಡವರ ವತಿಯಿಂದ ಧೃತರಾಷ್ಟ್ರನ ಎದುರು ಮಾತನಾಡುತ್ತಿದ್ದನು. ಇದಕ್ಕೆ ಕಾರಣ ಸ್ಪಷ್ಟವಿತ್ತು. ವಿದುರನ ಪರಿಸ್ಥಿತಿಯು ಕೌರವರ ಮನೆಯಲ್ಲಿ ಇದ್ದ ಹಾಗೆಯೇ ಇದ್ದರೂ, ಅವನು ಯಾರಿಗೋಸ್ಕರವೂ ಏನನ್ನೂ ಮಾಡಲು ಅಸಮರ್ಥನಿದ್ದರೂ, ಈಗ ಪಾಂಡವರು ಸ್ವತಂತ್ರರಾಗುತ್ತಿದ್ದರು; ಪಾಂಚಾಲರ ಸಾಮರ್ಥ್ಯವು ಅವರ ಬೆಂಬಲಕ್ಕೆ ಇತ್ತು. ಯಾದವರ ಸಾಮರ್ಥ್ಯವಿತ್ತು. ಆಗ ಮೂಕನಂತೆ ಉಳಿದು ಕೌರವರ ಕಾರಸ್ಥಾನಗಳನ್ನು ಸದ್ದಿಲ್ಲದೇ ಹೊಡೆದುಹಾಕುವ ಅವಶ್ಯಕತೆ ಇರಲಿಲ್ಲ. ಆದಿಪರ್ವದಲ್ಲಿ ಪರಿಸ್ಥಿತಿಯ ಈ ಬದಲಾವಣೆಯನ್ನು ಬಹಳ ಕುಶಲತೆಯಿಂದ ಕಾಣಿಸಲಾಗಿದೆ. ಪಾಂಡವರು ದ್ರೌಪದಿಯನ್ನು ದೊರಕಿಸಿದರು. ದುರ್ಯೋಧನ ಮತ್ತು ಅವನ ಮಿತ್ರರು ಪರಾಭೂತರಾಗಿ ಕೈ ಕೈ ಹಿಸುಕಿಕೊಳ್ಳುತ್ತಾ ಮರಳಿ ಬಂದರು. ಇದನ್ನು ತಿಳಿದ ವಿದುರನು ಧೃತರಾಷ್ಟ್ರನ ಬಳಿ ಹೋಗಿ "ಕೌರವರಿಗೆ ಅಭಿನಂದನೆ ಇರಲಿ" ಎಂದನು. ಪಾಂಡವರಾದರೇನು ? ದುರ್ಯೋಧನಾದಿ ಕೌರವರಾದರೇನು ? ಎಲ್ಲರೂ ಕುರುವಂಶದವರು. ಅಂದರೆ ಕೌರವರೇ ! ಪಾಂಡವರು ಲಾಕ್ಷಾಗೃಹದಲ್ಲಿ ಸುಟ್ಟುಹೋದವರು. ಆದ್ದರಿಂದ ದ್ರೌಪದಿಯನ್ನು ಜಯಿಸಿ ತಂದಿರುವುದು

ತನ್ನ ಮಗನೇ ಆಗಿರಬೇಕೆಂದು ತಿಳಿದು ಧೃತರಾಷ್ಟ್ರನು ಬಹು ಹಿಗ್ಗಿ ಸಂತೋಷದಿಂದ "ಭಲೆ! ಭಲೇ ! ದ್ರೌಪದಿಯನ್ನು ಕರೆತನ್ನಿ. ದುರ್ಯೋಧನನೇ। ಅವಳಿಗಾಗಿ ಆಭೂಷಣಗಳನ್ನು ತರಿಸು !" ಎಂದನು. ಆಗ ವಿದುರನು ಅವನಿಗೆ ನಿಜಸ್ಥಿತಿಯನ್ನು ಹೇಳಿದನು. ಧೃತರಾಷ್ಟ್ರನು ಪಾಂಡವರಿಗೆ ಬಾಲ್ಯದಿಂದ ಪೀಡಿಸಿ ಅವರನ್ನು ಸುಟ್ಟುಹಾಕುವ ಸಂಚನ್ನು ಮಾಡಿದ್ದನು. ಆ ಎಲ್ಲದರ ಸೇಡನ್ನು ವಿದುರನು ಈ ಸಮಯದಲ್ಲಿ ತೀರಿಸಿಕೊಂಡನು. ಮುಂದೆ ಧೃತರಾಷ್ಟ್ರನು "ಅವರು ನನ್ನ ಮಕ್ಕಳೇ ! ಅವರು ನನಗೆ ಬೇಕಾದವರೇ !!' ಎಂದು ನುಡಿದ ಕೂಡಲೇ ವಿದುರನು ಧೃತರಾಷ್ಟ್ರನಿಗೆ "ನಿನ್ನ ನುಡಿಗಳು ಸಾರ್ಥಕವಾಗಲಿ ! ಅವರ ಬಗ್ಗೆ ಇದ್ದ ನಿನ್ನ ಭಾವನೆ ಹಾಗೇ ಸ್ಥಿರವಾಗಿ ಉಳಿಯಲಿ !" ಎಂದನು. ವಿದುರನು ಅಲ್ಲಿಂದ ಹೋದ ನಂತರ ದುರ್ಯೋಧನಾದಿಗಳು ಮರಳಿ ಬಂದು ಪಾಂಡವರ ನಾಶಮಾಡುವುದು ಯಾವ ರೀತಿ? ಎಂದು ಧೃತರಾಷ್ಟ್ರನ ಬಳಿ ಯೋಚಿಸತೊಡಗಿದರು. ಆಗ ಧೃತರಾಷ್ಟ್ರನು ಸಮಯಸೂಚಕತೆಯಿಂದ ಒಳಸಂಚನ್ನು ಮಾಡುವುದು ಉಚಿತವಲ್ಲವೆಂದು ಅರಿತು ಭೀಷ್ಮ, ದ್ರೋಣ, ವಿದುರರನ್ನು ಕರೆಯಿಸಿದನು. ಎಲ್ಲರೂ ದುರ್ಯೋಧನನಿಗೆ ಪಾಂಡವರೊಡನೆ ವಿಶ್ವಾಸದಿಂದ ಇರಲು ಬಿನ್ನವಿಸಿದರು. ಈ ಸಂದರ್ಭದಲ್ಲಿಯೂ ವಿದುರನ ಹೇಳಿಕೆಯು ಕಳವಳವನ್ನುಂಟುಮಾಡುತ್ತದೆ. ಅನಂತರ ವಿದುರನು ಸ್ವತಃ ಹೋಗಿ ಪಾಂಡವರನ್ನು, ಕುಂತಿಯನ್ನು, ದ್ರೌಪದಿಯನ್ನು ಕರೆತಂದನು, ಧೃತರಾಷ್ಟ್ರನು ಅವರಿಗೆ ಅರ್ಧ ರಾಜ್ಯವಾಗಿ ಖಾಂಡವಪ್ರಸ್ಥವನ್ನು ಕೊಟ್ಟನು. ಈ ಘಟನೆಯ ನಂತರ ಮಾತ್ರ ವಿದುರನು ಪ್ರತೀಸಲ ಪಾಂಡವಪಕ್ಷವನ್ನು ಪ್ರಕಟವಾಗಿ ವಹಿಸಿದನು.

ಮಹಾಭಾರತದಲ್ಲಿಯ ವ್ಯಕ್ತಿ ಎಂದು ವಿದುರನಿಗೆ ಒಂದು ವಿಶಿಷ್ಟ ಸ್ಥಾನವಿದೆ. ಒಂದು ವಿಶಿಷ್ಟ ಕಾರ್ಯವಿದೆ. ಅದಲ್ಲದೇ ಅವನು ಯಾವ ವಿಶಿಷ್ಟ ವರ್ಗದವನಾಗಿದ್ದನೋ ಆ ಸಮಗ್ರ ವರ್ಗದವರ ಒಂದು ವಿಶೇಷ ಕಾರ್ಯವು ಈ ಕಥೆಯಲ್ಲಿದೆ. ಆತನ ವರ್ಗದವರ ದುಃಖಗಳು ಅವನ ದುಃಖಗಳಾಗಿದ್ದವು. ಅದಲ್ಲದೇ ಆತನ ವೈಯಕ್ತಿಕ ದುಃಖಗಳು ಬೇರೆಯೇ ಇದ್ದವು. ವಿದುರನು 'ಕ್ಷತ್ತಾ' ಇದ್ದನು. 'ಕ್ಷತ್ತಾ', 'ಸುತಾ', 'ಪರಾಶವ' ಎಂದು ಈ ವರ್ಗಕ್ಕೆ ಹೆಸರುಗಳು ಇದ್ದವು. ಅವುಗಳ ವ್ಯಾಖ್ಯೆಯನ್ನು ಸೃಷ್ಟಿಸುವುದೂ ಕಠಿಣ. ಕರ್ಣನು ಈ ವರ್ಗದವನೇ. ಆತನು ಓರ್ವ ಕ್ಷತ್ರಿಯ ಕನ್ಯೆಯಲ್ಲಿ (ಕುಂತಿಯು) ಜನ್ಮವಾದ ಕ್ಷಣವೇ ತ್ಯಜಿಸಲ್ಪಟ್ಟಿದ್ದನು. ಒಬ್ಬ ಸೂತನು (ಅಧಿರಥನು) ಆತನನ್ನು ಪುತ್ರನೆಂದು ಮನ್ನಿಸಿದನು. ಅದರಿಂದ ಕರ್ಣನು ಸೂತನೆನಿಸಿಕೊಂಡನು, ಎಂದು ವಿರಾಟಪರ್ವದಲ್ಲಿ ಹೇಳಿದೆ. ಸಾಕಿದ ಕರ್ಣನ ಹೊರತು ಅಧಿರಥ ಮತ್ತು ರಾಧೆಯರಿಗೆ ಇನ್ನಿತರ ಮಕ್ಕಳೂ ಇದ್ದರು. ಅವರು ಸೂತದವರೇ ಆಗಿದ್ದರು. ಕರ್ಣನು ಸ್ವತಃ ಸೂತರೊಡನೆ ಶರೀರ ಸಂಬಂಧವನ್ನು ಮಾಡಿದ್ದನು. ಅವನ ಸೊಸೆಯಂದಿರು, ಅಳಿಯಂದಿರು ಸೂತರೇ ಆಗಿದ್ದರು. ಕಣ್ಣಾರೇ ನೋಡಿ ಸಮಗ್ರ ಯುದ್ಧದ ವೃತ್ತಾಂತವನ್ನು ತಿಳಿಸುವ ಸಂಜಯನು ಸೂತನೇ ಆಗಿದ್ದನು. ಧೃತರಾಷ್ಟ್ರನಿಗೆ ವೈಶ್ಯ ಸ್ತ್ರೀಯಿಂದ ಜನಿಸಿದ

ಯುಯುತ್ಸುವು, ಧೃತರಾಷ್ಟ್ರ ಪುತ್ರನೆಂದು ಜ್ಞಾನವಿದ್ದರೂ ಆತನು ಕೂಡ “ಕ್ಷತ್ತಾ” ಅಥವಾ ಸೂತನೇ ಇದ್ದನು. ಅಂಬಿಕಾ, ಅಂಬಾಲಿಕ ಇವರ ದಾಸಿಯೊಬ್ಬಳು ಮತ್ತು ವ್ಯಾಸ ಇವರಿಂದ ಜನಿಸಿದ ವಿದುರನು, ಸೂತನೇ ಆಗಿದ್ದನು. ವಿದುರನ ಪತ್ನಿಯಾದ (ಕನ್ಯಾಪಾರಶವಿ) ಇವಳು ಸೂತ ವರ್ಗದವಳೇ ಆಗಿದ್ದಳು. ಸುದೇಷ್ಣೆಯ ಸಹೋದರನೂ ವಿರಾಟನ ಸೇನಾಪತಿಯೂ ಆದ ಕೀಚಕನು, ಸೂತನೇ ಇದ್ದನು. ನೈಮಿಷಾರಣ್ಯದಲ್ಲಿ ಋಷಿಗಳಿಗೆ ಮಹಾಭಾರತವನ್ನು ಹೇಳುವ ಉಗ್ರಶ್ರವ ರೋ (ಲೋ) ಮಹರ್ಷನು ಸೂತನೇ. ಸೂತರು ಸಾರಥಿಗಳಾಗಿದ್ದರು. ಅಸ್ತ್ರಜೀವಿಗಳಾಗಿದ್ದರು. ಪುರಾಣ ಮತ್ತು ರಾಜವಂಶವನ್ನು ಬಲ್ಲವರಿದ್ದರು. ಸೂತರ ಮತ್ತು ಮಾಗಧರ ವಿಚಾರವನ್ನು ಒಂದೇ ಸಮಾಸದಲ್ಲಿ ಹೇಳಲಾಗಿದೆ. ಆದರೆ ಮಾಗಧರ ಸ್ಥಾನವು ಸೂತರ ಸ್ಥಾನಕ್ಕಿಂತ ಬಹಳ ಕೆಳಗಿನದಿತ್ತು. ಸೂತರು ಕ್ಷತ್ರಿಯರಿಗೆ ಬಹಳ ಹತ್ತಿರದವರು, ಆಪ್ತರು ಎಂದು ಅನ್ನಿಸುತ್ತಿದ್ದರು. ಕ್ಷತ್ರಿಯರಿಗೆ ಸೂತರು ಅನೇಕ ಸಂದರ್ಭಗಳಲ್ಲಿ ಮಲತಾಯಿ ಮಕ್ಕಳಾಗಿರುವುದೇ ಇದರ ಕಾರಣವಿರಬೇಕೆಂದು ತೋರುತ್ತದೆ. ಮಾಗಧರು ಬರೀ ಸ್ತುತಿಪಾಠಕರು. ಆದರೆ ಸೂತರು ಅನೇಕ ಸಲ ಕ್ಷತ್ರಿಯರಿಗೆ ಸರಿಕದವರು. ಕೆಲವು ಸಲ ಅವರಿಗೆ ಮಿಗಿಲಾದವರೂ (ಉದಾ. ಕೀಚಕ) ಆಗಿದ್ದರು. ಅವರು ತಮ್ಮ ಕ್ಷತ್ರಿಯರಾದ ಬಂಧುಗಳಿಗೆ ಮತ್ತು ಪಾಲಕರಿಗೆ ಉಪದೇಶಿಸಬಹುದಾಗಿತ್ತು (ಉದಾ. ಸಂಜಯ ಮತ್ತು ವಿದುರ). ಅವರ ಆಲೋಚನೆಗಳಲ್ಲಿ ಸರಿಸಮಾನರಾಗಿ ಸೇರುತ್ತಿದ್ದರು. ಅವರಲ್ಲಿಯ ಸುಂದರ ಬಾಲಿಕೆಯರು “ಸ್ತ್ರೀರತ್ನಂ ದುಷ್ಕುಲಾದಪಿ” ಈ ನ್ಯಾಯದಿಂದ ಕ್ಷತ್ರಿಯರನ್ನು ವಿವಾಹವಾಗಬಹುದಿತ್ತು (ಉದಾ. ಸುದೇಷ್ಣೆ). ಆದರೆ ಸೂತರನ್ನು ಕ್ಷತ್ರಿಯ ಕನ್ಯೆಯರು ವಿವಾಹವಾಗುತ್ತಿರಲಿಲ್ಲ. ದುರ್ಯೋಧನನು ಕರ್ಣನಿಗೆ ಮಿತ್ರನೆಂದು ಹೇಳಿಕೊಳ್ಳುತ್ತಿದ್ದನು. ಆದರೆ ಇಬ್ಬರಲ್ಲಿ ಸರಿಸಮಾನತೆಯು ಇರಲಿಲ್ಲ. ಅವರಲ್ಲಿ ಸೇವ್ಯ–ಸೇವಕರ ಭಾವವು ಕೊನೆಯವರೆಗೂ ಕಂಡುಬರುತ್ತದೆ. ಅದೇ ಗತಿಯು ಇತರ ಸೂತರದಿತ್ತು. ಹಾಗೆಯೇ ವಿದುರನದಿತ್ತು. ವಿದುರನು ಮತ್ತು ಅವನ ಸಹೋದರರು ಒಂದೇ ತಂದೆಯಿಂದ ಜನಿಸಿದವರು. ಆದರೆ ಮೊದಲಿನ ಇಬ್ಬರ ತಾಯಂದಿರು, ಕ್ಷತ್ರಿಯ ಕನ್ಯೆಯರು ಮತ್ತು ಮೃತರಾಜನ ಪತ್ನಿಯರು ಆಗಿದ್ದರು. ಇವನ ತಾಯಿಯು ದಾಸಿಯಿದ್ದು ಮೃತರಾಜನ ಪತ್ನಿಯಾಗಿರಲಿಲ್ಲ. ಹಾಗಿದ್ದರೆ ವಿದುರನು ರಾಜನಾಗುತ್ತಿದ್ದನೆಂದು ಮಹಾಭಾರತದಲ್ಲಿ ಸ್ಪಷ್ಟವಾಗಿ ಹೇಳಿದೆ. ಯಾದವರಲ್ಲಿ ಭೀಷಣ ಕೊಲೆಯಾದನಂತರ ಇಂದ್ರಪ್ರಸ್ಥವು ವಜ್ರನಿಗೆ ದೊರಕಿತು. ಪರೀಕ್ಷಿತನಿಗೆ ಹಸ್ತಿನಾಪುರವು ದೊರಕಿತು. ಆದರೆ ಧೃತರಾಷ್ಟ್ರನ ಪುತ್ರನಿದ್ದರೂ ಸೂತನಾದ್ದರಿಂದ ದುರ್ದೈವಿಯಾದ ಯುಯುತ್ಸುವಿಗೆ ಯಾವ ರಾಜ್ಯವೂ ದೊರಕಲಿಲ್ಲ. ಈ ವರ್ಗದ ಸ್ಥಿತಿಯು ಇದೇ ರೀತಿ ಆಗಿತ್ತು. ಕ್ಷತ್ರಿಯನಿಗೆ ಅತೀ ಸಮೀಪದವರೂ, ಕ್ಷತ್ರಿಯರ ರಕ್ತದವರೂ, ಕ್ಷತ್ರಿಯರಿಗೆ ನಿಸ್ಸಂಕೋಚವಾಗಿ ಉಪದೇಶ ನೀಡುವವರೂ ಆಗಿದ್ದರೂ, ಈ ಸೂತರು ಕ್ಷತ್ರಿಯ ಸರಿಸಮಾನತ್ವವನ್ನು ಹೊಂದುತ್ತಿರಲಿಲ್ಲ. ಅವರು ಮತ್ತು ಅವರ ಸಂತತಿಯು ಪಟ್ಟವನ್ನು ಏರುವಂತಿರಲಿಲ್ಲ. ಧೃತರಾಷ್ಟ್ರ, ಅಂಧನಾಗಿದ್ದುದರಿಂದ ಆತನಿಗೆ ರಾಜ್ಯವು ದೊರಕಲಿಲ್ಲ.

ಪಾಂಡುವು ರೋಗಿಯಾಗಿದ್ದರೂ ಅವನಿಗೆ ರಾಜ್ಯ ದೊರಕಿತ್ತು. ಆದರೆ ಸರ್ವದೃಷ್ಟಿಯಿಂದ ಯೋಗ್ಯನಿದ್ದರೂ ವಿದುರನು ಏನೂ ಸಿಗದೆ ಹಾಗೆಯೇ ಉಳಿದನು.

ಸೂತರ ಮನೆಗಳು ರಾಜಾಂಗಣದ ಹತ್ತಿರವೇ ಇರುತ್ತಿದ್ದವು ಎಂದು ಕಾಣುತ್ತದೆ. ವಿದುರನಾಗಲೀ ಸಂಜಯನಾಗಲೀ, ಅರಮನೆಯಿಂದ ಸ್ವಲ್ಪ ದೂರದಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಇರುತ್ತಿದ್ದರೆಂದು ತೋರುತ್ತದೆ. ವಿದುರನ ಬಗ್ಗೆ ಧೃತರಾಷ್ಟ್ರನಿಗೆ ಪ್ರೀತಿ ಇತ್ತು. ಅದರಲ್ಲಿಯೂ ಒಂದು ತರಹದ ವರ್ಚಸ್ವ ಕಂಡುಬರುತ್ತದೆ. ಧೃತರಾಷ್ಟ್ರನು ಅಗತ್ಯವೆನಿಸಿದ ಆಯಾ ಸಮಯದಲ್ಲಿ ವಿದುರನಿಗೆ ಕರೆ ಕಳುಹಿಸುತ್ತಿದ್ದನು. ಅದೇ ರೀತಿ ಪಾಂಡವರ ಬಳಿ ಏನಾದರೂ ಹೇಳಿ ಕಳುಹಿಸುವಾಗ ವಿದುರನನ್ನೇ ಕಳುಹಿಸುತ್ತಿದ್ದನು. ಒಮ್ಮೆ ಧೃತರಾಷ್ಟ್ರನು ಕೋಪದಿಂದ ವಿದುರನನ್ನು ಅರಮನೆಯ ಆಚೆಗೆ ಕಳುಹಿಸಿಬಿಟ್ಟಿದ್ದನು. ಆದರೆ ಪಶ್ಚಾತ್ತಾಪ ಹೊಂದಿ ಆತನನ್ನು ಪುನಃ ಕರೆಯಿಸಿ ಕ್ಷಮೆ ಕೇಳಿದನು. ತಮ್ಮನೆಂದು ತೊಡೆಯ ಮೇಲೆ ಕುಳ್ಳಿರಿಸಿಕೊಂಡನು. ಈ ರೀತಿಯ ಅತಿಶಯ ಹೃದಯಂಗಮವಾದ ವರ್ಣನೆಯು ಮಹಾಭಾರತದಲ್ಲಿದೆ. ವಿದುರನು ಧೃತರಾಷ್ಟ್ರನಿಗೆ ನಿಜಸಹೋದರನೇ ಆಗಿದ್ದರೂ, ಅನ್ನವಸ್ತ್ರದ ಹೊರತಾಗಿ, ಯಾವ ಬಾಧ್ಯತೆಯೂ ಇಲ್ಲದ ಸಹೋದರನಾಗಿದ್ದನು. ಭೀಷ್ಮನು ಕುಲದ ಹಿರಿಯನಾಗಿದ್ದರೂ ಪಾಂಡವ ಕೌರವರ ಬಗ್ಗೆ ಸಮತೆಯನ್ನು ತಾಳಿದನು. ಕಲಹವಾಗಬಾರದೆಂದು ಅವನೂ ಯತ್ನಿಸಿದನು. ಆದರೆ ವಿದುರನ ಮನಸ್ಸು ಪಾಂಡವರತ್ತ ಎಳೆಯುತ್ತಿತ್ತು. ಪಾಂಡವರು ಅತಿಶ್ರೇಷ್ಠ ಯೋಧರು. ಅವರಿಂದ ಕೌರವರ ನಾಶವಾಗುವುದೆಂದು ಭೀಷ್ಮನು ಆಗಾಗ್ಗೆ ಅನ್ನುತ್ತಿದ್ದನು. ಈ ಸಂಗತಿಯು ವಿದುರನಿಗೂ ಗೊತ್ತಿತ್ತು. ಆದರೆ ವಿದುರನ ಮಾತಿನಲ್ಲಿ ನ್ಯಾಯದ ಭಾಗವು ಹೆಚ್ಚಾಗಿ ಕಾಣುತ್ತದೆ. ನಿರಾಶ್ರಿತ ಪಾಂಡವರ ಬಗ್ಗೆ ಕನಿಕರ ಕಾಣುತ್ತದೆ. ಇದರ ಕಾರಣ ಏನಿರಬೇಕು? ತಾನು ಅಸಹಾಯನಿದ್ದುದರಿಂದ ಹಸ್ತಿನಾಪುರಕ್ಕೆ ಆಗಮಿಸಿದ ಈ ಅಸಹಾಯ ಮಕ್ಕಳ ಬಗ್ಗೆ ಆತನಿಗೆ ಕನಿಕರ ಉಂಟಾಗಿರಬಹುದೇ? ತನಗಂತೂ ರಾಜ್ಯದ ಹಕ್ಕಿಲ್ಲ. ಆದರೆ ಆ ಹಕ್ಕು ಯಾರಿಗೆ ಇದೆಯೋ, ಅವರದಾದರೂ ಕಳೆಯಬಾರದೆಂಬ ವಿಚಾರವು ಇದರ ಹಿಂದೆ ಇರಬೇಕೇ?

'ವಿದುರ' ಈ ಶಬ್ದದ ಅರ್ಥವು 'ಜ್ಞಾನಿ' ಎಂದು ಇದೆ. ಸಮಗ್ರ ಮಹಾ ಭಾರತದಲ್ಲಿ ಕಂಡುಬರುವ ವಿದುರನ ಬುದ್ಧಿವಂತಿಕೆಯು ಪಾರಮಾರ್ಥಿಕವಿದೆ. ಈ ಪ್ರಪಂಚದಲ್ಲಿ ಸಮತೆ ಮತ್ತು ನ್ಯಾಯದ ವರ್ತನೆ ಇರಬೇಕು. ಲೋಭ ಇರಕೂಡದು. ಆತ್ಮವು ಅಮರವಿದೆ ಎಂದು ಅರಿತುಕೊಳ್ಳಬೇಕು. ಈ ರೀತಿ ವಿದುರನ ಪ್ರತಿಪಾದನೆ ಇತ್ತು. ಯಾರ ಬಳಿ ಈ ಜ್ಞಾನವನ್ನು ಆತನು ಸುರಿದನೋ, ಆ ಧೃತರಾಷ್ಟ್ರನು ಅಂಧನಾಗಿದ್ದ. ಸ್ವತಃ ರಾಜ್ಯದ ಹಕ್ಕುದಾರನಿದ್ದರೂ ಅದು ದೊರಕದಿದ್ದ ಕಾರಣ ನೊಂದಿದ್ದ. ತನಗೆ ಲಭಿಸದ ರಾಜ್ಯವು ತನ್ನ ಮಕ್ಕಳಿಗಾದರೂ ಲಭಿಸಬೇಕೆಂಬ ಈರ್ಷ್ಯೆಯಿಂದ ಆತ, ಸದಸದ್ವಿವೇಕ ಬುದ್ಧಿಯನ್ನು ಕಳೆದುಕೊಂಡವನಾಗಿದ್ದ. ಮೊದಮೊದಲು ಅಂದರೆ ಪಾಂಡವರು ಚಿಕ್ಕವರಾಗಿದ್ದಾಗ ವಿದುರನ ಹೇಳಿಕೆಯನ್ನು ಆತ ಗಮನಿಸಲೇ ಇಲ್ಲ. ಆನಂತರ ಕೇಳಿಕೊಂಡರೂ "ನಾನೇನು ಮಾಡಲಿ? ಮಕ್ಕಳು ನನ್ನ

ಅಂಕಿತದಲ್ಲಿ ಉಳಿಯಲಿಲ್ಲ." ಹೀಗೆಂದು ಆ ಹೇಳಿಕೆಯನ್ನು ಕಡೆಗಾಣಿಸಿದ. ವಿದುರನ ಬಳಿ ಜ್ಞಾನವಿದ್ದರೂ ಅಧಿಕಾರವಿರಲಿಲ್ಲ. ದ್ರೌಪದಿ ಸ್ವಯಂವರದ ನಂತರ ವಿದುರ ಒಂದೇ ಬಾರಿ ಧೃತರಾಷ್ಟ್ರನಿಗೆ ಕೊಂಕುಮಾತನಾಡಿದ. ಯುದ್ಧವೆಲ್ಲಾ ಮುಗಿದ ನಂತರ ವಿದುರ ಧೃತರಾಷ್ಟ್ರನಿಗೆ ಹೀಗೆಂದನು :– "ಈಗ ಅತ್ತು ಏನು ಪ್ರಯೋಜನ? ಪಾಂಡವರು ದ್ಯೂತದಲ್ಲಿ ಸೋತಾಗ ನೀನು ಬಾಲಕನಂತೆ ವಿಜಯದಿಂದ ಕುಣಿದಾಡಿದೆ. 'ಇದು ವಿಜಯವಲ್ಲ, ಸರ್ವನಾಶ' ಎಂದು ನಾನು ಹೇಳುತ್ತಿದ್ದೆ. ಆದರೆ ಆಗ ನೀನು ಕಿವಿಗೊಡಲಿಲ್ಲ, ಈಗ ಕ್ಷತ್ರಿಯರಂತೆ ವರ್ತಿಸು. ಶೋಕಿಸಬೇಡ !" ವಿದುರನ ಈ ನುಡಿಗಳಲ್ಲಿ ಹಂಗಿಸುವ ಪ್ರಯತ್ನವು ಕಂಡುಬರುವುದಿಲ್ಲ, 'ನಾವು ಅನುಭವಿಸುವುದು ನಮ್ಮ ಕರ್ಮದ ಫಲವೇ ! ಆದ್ದರಿಂದ ಈಗ ಅದನ್ನು ಧೈರ್ಯದಿಂದ ಎದುರಿಸು !' ಎಂಬ ಆಶಯವೇ ವಿದುರನ ಹೇಳಿಕೆಯಲ್ಲಿತ್ತು.

ತನಗೆ ಏನೂ ದೊರಕಲಿಲ್ಲವೆಂದು ವಿದುರನು ದುಃಖಿಸಿದ್ದು ಕಾಣುವುದಿಲ್ಲ. ಈ ರೀತಿ ಪರಿಶೀಲಿಸಿ ನೋಡಿದಲ್ಲಿ ಮಹಾಭಾರತದಲ್ಲಿಯ ಇತರ ವ್ಯಕ್ತಿಗಳ ತುಲನೆಯಿಂದ ವಿದುರನ ಜೀವನವು ಸುಖದಲ್ಲಿಯೇ ಕಳೆಯಿತು. ಆತನ ವಿವಾಹವಾಗಿತ್ತು. ಅವನು ತನ್ನ ಮನೆಯಲ್ಲಿ ಮನನ, ಚಿಂತನ, ಪೂಜೆಗಳಲ್ಲಿ ತೊಡಗಿರುತ್ತಿದ್ದನು. ವಿದುರನಿಗೆ ಮಕ್ಕಳಾದವು. 'ಜ್ಞಾನಿ' ಎಂದು ಅವನ ಖ್ಯಾತಿಯಿತ್ತು. ಹೀಗಿದ್ದರೂ ಆತನ ಜೀವನವು, ಉದಾಸೀನವು, ವಿಷಣ್ಣವಾಗಿಯೂ ಇದ್ದುದು ಕಂಡುಬರುತ್ತದೆ. ಮಹಾಭಾರತದ ಪ್ರತಿಯೊಬ್ಬ ವ್ಯಕ್ತಿಯು ಪುರುಷನಿರಲಿ, ಸ್ತ್ರೀಯಿರಲಿ, ಉಚ್ಚನಿರಲಿ, ನೀಚನಿರಲಿ, ಯಾವುದಾದರೊಂದು ಸಂಘರ್ಷಣೆಯಲ್ಲಿ ತೊಡಗಿದ್ದು ಕಂಡುಬರುತ್ತದೆ. ಧೃತರಾಷ್ಟ್ರ–ಪಾಂಡು, ಗಾಂಧಾರಿ–ಕುಂತಿ, ದುರ್ಯೋಧನ–ಪಾಂಡವರು. ದ್ರೌಪದಿ–ಸುಭದ್ರೆ, ಉತ್ತರ–ಉತ್ತರೆ, ಅವರ ಮಕ್ಕಳು, ಶ್ರೀಕೃಷ್ಣ ಮತ್ತು ಇತರ ಯಾದವರು ಇವರೆಲ್ಲರೂ ಒಂದಿಲ್ಲೊಂದು ತೊಡಕಿನ ಜೀವನವನ್ನು ಜೀವಿಸುತ್ತಿದ್ದರು. ಅದರಲ್ಲಿ ಏರು–ಇಳಿವು ಇದ್ದವು. ಪ್ರೇಮ–ದ್ವೇಷವಿತ್ತು. ಮರಣೋತ್ತರವಾಗಿ ನೆಮ್ಮದಿಯ ಶಾಂತಿಯು ಲಭಿಸುತ್ತಿತ್ತು. ಇದು ಜೀವನದ ಕೊನೆಯ ಹಂತದಲ್ಲಿ ದೊರಕುವಂತಿತ್ತು. ಈ ಶಾಂತಿಯನ್ನು ಸಾಧಿಸಲು ಅವರಿಗೆ ಬಹು ಪ್ರಯಾಸಪಡಬೇಕಾಗಿತ್ತು. ಅದಕ್ಕಾಗಿ ಜೀವನದಲ್ಲಿ ಅನೇಕ ವಿಧದ ಸಂಗ್ರಾಮಗಳನ್ನು ಅವರು ಎದುರಿಸಬೇಕಾಯಿತು. ಇಷ್ಟೊಂದು ಕಷ್ಟಪಟ್ಟು ಪಡೆದ ಶಾಂತಿಯೆಂದು ಅನಿಸುವುದಿಲ್ಲ. ಇದರಲ್ಲಿಯೂ ಒಂದು ಬಗೆಯ ಒದ್ದಾಟ ಕಾಣಿಸುತ್ತದೆ. ಧೃತರಾಷ್ಟ್ರ, ಗಾಂಧಾರಿ, ಕುಂತಿ ಇವರುಗಳ ವನವಾಸ ಅಥವಾ ಪಾಂಡವ, ದ್ರೌಪದಿಯರ ಮಹಾಪ್ರಸ್ಥಾನವು, ಶಾಂತಿದಾಯಕ, ಶಾಂತಿಕಾರಕವೆನಿಸುವುದಿಲ್ಲ. ಯಾವ ಪಾಡು ಈ ಕ್ಷತ್ರಿಯರದೋ, ಅದೇ ಪಾಡು ಅವರ ನಿಕಟವರ್ತಿಯರಾದ ಸೂತರದು. ಕೇವಲ ಯುದ್ಧ ವಾರ್ತೆಯನ್ನು ತಿಳಿಸುವ ಸಂಜಯನು ಸಹ ಸುತ್ತಲೂ ನಡೆದ ತಿಕ್ಕಾಟದಿಂದ ಹೊರಗುಳಿಯಲು ಅಶಕ್ಯವಾದನು. ದ್ರೋಣ ಅಶ್ವತ್ಥಾಮನಂತಹವರು ಕೂಡ ಮಾನಸಿಕ ಹಾಗೂ ಶಾರೀರಕ, ದುಃಖದಾಯಕ ಉತ್ಕಟ ವ್ಯವಹಾರಗಳಿಂದ ಬಿಡುಗಡೆ ಹೊಂದಲಿಲ್ಲ. ಇವರೆಲ್ಲರ ವಿರುದ್ಧವಾಗಿ ವಿದುರನ ಜೀವನವು ಒಂದು ವಿಧದಲ್ಲಿ ಎದ್ದು ಕಾಣುತ್ತದೆ. ಮತ್ತು

ಒಂದು ವಿಧದಲ್ಲಿ ಸಂಪೂರ್ಣವಾಗಿ ಅಲಕ್ಷಿತವಾಗಿ ಉಳಿಯುತ್ತದೆ. ದಾಸೀಪುತ್ರನೆಂದು ಆತನು ರಾಜ್ಯದ ಹಕ್ಕನ್ನು ಕಳೆದುಕೊಂಡನು. ತೀರಾ ಚಿಕ್ಕ ಪ್ರಾಯದಲ್ಲಿಯೇ ಅವನು ತನ್ನ ವಿಫಲತೆಯನ್ನು ಸಹಿಸಿ, ಜೀವನದ ಒಂದು ವಿಶಿಷ್ಟವಾದ ಮಾರ್ಗವನ್ನು ಕಲ್ಪಿಸಿದನೆಂದು ಅನಿಸುತ್ತದೆ. ಮಹಾಭಾರತದಲ್ಲಿ ಸಾಮಾನ್ಯವಾಗಿ ಎಲ್ಲರ ಮನಸ್ಸಿನ ಆಂತರಿಕ ವಿಚಾರಗಳನ್ನು ಪ್ರಕಟಿಸಲಾಗಿದೆ. ಆದರೆ ವಿದುರನ ಬಗ್ಗೆ ಈ ರೀತಿ ಪ್ರಕಟವಾಗಿ ಏನೂ ಹೇಳಲಾಗಿಲ್ಲ. ನಿಜವಾಗಿ ವಿದುರನು ಜ್ಞಾನಿಯಾಗಿದ್ದನೋ ? ಅಥವಾ ಪ್ರತ್ಯಕ್ಷ ಯಮಧರ್ಮನ ಅವತಾರವೆಂದು ಸಂಸಾರದ ಬವಣೆಯಿಂದ ಅಲಿಪ್ತನಾಗಿದ್ದನೋ ? ಅವನು ಸಂಪೂರ್ಣವಾಗಿ ಉದಾಸೀನನಾಗಿದ್ದನೆಂದು ಅನಿಸುವುದಿಲ್ಲ. ಅವನು ಪಾಂಡವರ ಹಿತಚಿಂತಕನಾಗಿದ್ದನು. ಆತನಿಗೆ ಕ್ರೌರ್ಯ, ಅನ್ಯಾಯದ ಬಗ್ಗೆ ತಿರಸ್ಕಾರವಿತ್ತು. ಆದರೆ ಆತ ತನ್ನ ಸ್ಥಾನವನ್ನು ಬಿಡಲಿಲ್ಲ. ಯುದ್ಧದ ದಿನ ಉಭಯ ಸೈನ್ಯಗಳು ಎದುರು ನಿಂತಾಗ, ಯುಯುತ್ಸುವು ಪಾಂಡವರ ಪಕ್ಷಕ್ಕೆ ಸೇರಿದನು. ಪಾಂಡವರಿಗೆ ನ್ಯಾಯವನ್ನು ಕೊಡಿಸುವ ಬಗ್ಗೆ ವಿದುರನು ಧೃತರಾಷ್ಟ್ರನ ದುಂಬಾಲು ಬಿದ್ದರೂ ಕೂಡ ಧೃತರಾಷ್ಟ್ರನನ್ನು ತ್ಯಜಿಸಲಿಲ್ಲ. ನಿರ್ಭರ್ತ್ಸನೆಯನ್ನು ಕೂಡ ಮಾಡಿದನು. ಆದರೆ ಎಡರು ಬಂದಾಗ ಧೃತರಾಷ್ಟ್ರನನ್ನು ಸಂತೈಸಿದವನು ಅವನೇ !

ಧೃತರಾಷ್ಟ್ರ ಪಾಂಡುವಿನಂತೆ ವಿದುರನ ಪೋಷಣೆಯನ್ನು ಭೀಷ್ಮನೇ ಮಾಡಿದನು. ವಿದುರ ದೊಡ್ಡವನಾದಂತೆ ಜ್ಞಾನಸಂಪನ್ನನಾದನು. ಸಭೆಗಳಲ್ಲಿ ವಿಶೇಷವಾಗಿ. ದ್ರೌಪದಿ ವಸ್ತ್ರಾಪಹರಣ ಮತ್ತು ಶ್ರೀಕೃಷ್ಣ ರಾಯಭಾರ ಇಂತಹ ಪ್ರಸಂಗಗಳಲ್ಲಿಯ ಭೀಷ್ಮ ವಿದುರರ ಸಂಭಾಷಣೆಗಳನ್ನು ಕೊಡಲಾಗಿವೆ. ಆದರೆ ಅವರಿಬ್ಬರಲ್ಲಿ ಸಂಭಾಷಣೆ ಅಥವಾ ವಿಚಾರವಿನಿಮಯವಾದಂತೆ ಕಂಡುಬರುವುದಿಲ್ಲ. ಆದಿಪರ್ವದಲ್ಲಿಯ ೧೦೩ನೆಯ ಅಧ್ಯಾಯದಲ್ಲಿ ಕೊಟ್ಟ ಸಂಭಾಷಣೆಯ ಪ್ರಸಂಗವು ನಂತರ ತೂರಿಸಿದಂತಿದೆ. ಆ ಭಾಗವು ಈ ರೀತಿ : ಭೀಷ್ಮನು ವಿದುರನಿಗೆ ಹೇಳುತ್ತಾನೆ: 'ಸುಬಲನ ಕನ್ನೆ ಗಾಂಧಾರಿ, ಮದ್ರರಾಜನ ಕನ್ಯೆ ಮಾದ್ರಿ ಮತ್ತು ಯಾದವಿ (ಕುಂತಿ) ಈ ಕನ್ಯೆಯರನ್ನು ಸೊಸೆಯಂದಿರಾಗಿ ನಮ್ಮಲ್ಲಿ ತರಬೇಕೆಂದು ನನಗೆ ಅನಿಸುತ್ತದೆ. ವಿದುರನೇ! ಇದಕ್ಕೆ ನೀನು ಏನು ಹೇಳುವಿ ?' ವಿದುರನು ನುಡಿಯುತ್ತಾನೆ– "ತಾವೇ ನಮ್ಮ ಮಾತಾಪಿತರು. ಉಚಿತವೆನಿಸಿದ್ದನ್ನು ಮಾಡಬೇಕು." ಗಾಂಧಾರಿ, ಕುಂತಿ, ಮಾದ್ರಿ ಇವರ ಬಗ್ಗೆ ಈ ನಂತರದ ವೃತ್ತಾಂತವು ತೀರಾ ಬೇರೆ ಬೇರೆ ರೀತಿಯಲ್ಲಿದೆ. ಅಂದರೆ ಮೊದಲಿನ ಈ ಎಂಟು ಶ್ಲೋಕಗಳು ಪೂರ್ಣತಃ ನಿರರ್ಥಕವಾಗಿವೆ. ಈ ಸಂದರ್ಭದಲ್ಲಿ ವಿದುರನ ವಿವಾಹವು ಆಗುವುದಿತ್ತು. ಎಲ್ಲರೂ ಇಪ್ಪತ್ತು ವರ್ಷಗಳ ಒಳಗಿನವರೇ ಇರಬೇಕು. ವಿದುರನು ಎಲ್ಲರಲ್ಲಿ ಕಿರಿಯನು. ಹೀಗಿರುವಾಗ ಭೀಷ್ಮನು ವಿದುರನ ಸಲಹೆಯನ್ನು ಕೇಳುವುದು ಕೇವಲ ಅಶಕ್ಯ. ತನ್ನ ಅಣ್ಣನ ಮಕ್ಕಳ ಮದುವೆಯಾದ ನಂತರ ಭೀಷ್ಮನು ವಿದುರನ ಮದುವೆಯನ್ನು ದೇವಕನೆಂಬ ಅರಸನ ದಾಸಿಪುತ್ರಿಯೊಡನೆ ಮಾಡಿಸಿದನು. ಆತನಿಗೆ ಒಳ್ಳೇ ಮಕ್ಕಳು ಹುಟ್ಟಿದರು ಎಂದು ತಿಳಿಸುವ ಎರಡು, ಮೂರು ಶ್ಲೋಕಗಳಿವೆ. ಆನಂತರ ಮಾತ್ರ ವಿದುರನ ಹೆಂಡತಿ ಮಕ್ಕಳ ಉಲ್ಲೇಖವು ಮಹಾಭಾರತದಲ್ಲಿ

ಎಲ್ಲಿಯೂ ಕಾಣುವುದಿಲ್ಲ. ಮಹಾಭಾರತದಲ್ಲಿ ನಡೆದ ಮಾನಸಿಕ ಹಾಗು ಶಾರೀರಿಕ ತುಮುಲ ಸ್ಪರ್ಧೆಯಿಂದ ವಿದುರನು ಸ್ವತಃ ದೂರ ಉಳಿದನಲ್ಲದೇ ತನ್ನ ಕುಟುಂಬದವರಿಗೆ ಕೂಡ ಆ ಸ್ಪರ್ಧೆಯಿಂದ ದೂರವಿಟ್ಟನೆಂದು ಕಾಣುತ್ತದೆ. ಹೀಗಿದ್ದರೂ ವಿದುರನು ಬೇರೆ ಒಂದು ವಿಚಾರದಲ್ಲಿ ಸಿಲುಕಿಕೊಂಡಿದ್ದನು ಎನ್ನುವ ಸಂದೇಹ ಉಂಟಾಗುತ್ತದೆ.

ವಿದುರನು ಪಾಂಡವರ ಹಿತಚಿಂತಕನೆಂದರೂ ಎಲ್ಲಾ ಪಾಂಡವರೊಡನೆ ಆತನ ಸಂಬಂಧವು ಒಂದೇ ರೀತಿ ಇರಲಿಲ್ಲ. ಆತನ ಸಂಬಂಧವು ಧರ್ಮನೊಡನೆ ನಿಕಟವಾಗಿತ್ತು. ವಾರಣಾವತಕ್ಕೆ ಹೊರಡುವಾಗ ಆತನು ಧರ್ಮನಿಗೆ ಭಾವೀ ಸಂಕಟಗಳ ಸೂಚನೆಗಳನ್ನು ಕೊಟ್ಟಿದ್ದನು. “ವಿದುರನು ನಿನ್ನೊಡನೆ ಏನು ಮಾತನಾಡಿದನೆಂಬುದನ್ನು ನಮಗೆ ಹೇಳುವಿಯೋ?” ಎಂದು ಕುಂತಿಯು ಧರ್ಮನಿಗೆ ಕೇಳಿದಳು. ಆಗ ವಿದುರನು ತಿಳಿಸಿದ ಸೂಚನೆಗಳನ್ನು ಧರ್ಮನು ಎಲ್ಲರಿಗೆ ವಿವರಿಸಿದನು. ಪ್ರತಿ ಸಲ ಕೌರವರ ರಾಜಸಭೆಯಿಂದ ಮರಳಿದಾಗ ಧರ್ಮನೊಡನೆ ವಿದುರನ ಮಾತು ಕತೆಗಳು ನಡೆಯುತ್ತಿದ್ದವು. ಕೃಷ್ಣಾರ್ಜುನರ ಮತ್ತು ಕರ್ಣದುರ್ಯೋಧನರ ಮಿತ್ರತ್ವದಂತಹ ಜಗತ್ತಿಗೆ ಪ್ರಕಟವಾಗಿ ತೋರಿಬರುವ ಮಿತ್ರತ್ವದ ಸಂಬಂಧವು ಅವರಲ್ಲಿ ಇರಲಿಲ್ಲ. ಅದು ಸರಿಸಮಾನದ ಮಿತ್ರತ್ವದ ಸಂಬಂಧವೂ ಆಗಿರಲಿಲ್ಲ. ಧರ್ಮರಾಜನ ಹೇಳಿಕೆಯಂತೆ ವಿದುರನು ಪಿತನಂತೆ ಪಾಂಡವರ ರಕ್ಷಣೆಯನ್ನು ಮಾಡಿದನು. ಆದರೆ ಇತರ ಪಾಂಡವರಿಗಿಂತಲೂ ಧರ್ಮನೇ ಅವನಿಗೆ ಹತ್ತಿರದವನಾಗಿದ್ದನು. ಧರ್ಮ–ವಿದುರರಲ್ಲಿ ತೀವ್ರಸಾಮ್ಯವಿದೆ. ವಿದುರನು ನೀತಿಜ್ಞನೂ ಧರ್ಮಜ್ಞನೂ ಆಗಿ ವಿದುರನೆಂದು ಖ್ಯಾತಿ ಪಡೆದಿದ್ದನು. ಧರ್ಮನು ತನ್ನ ಜೊತೆಯವರಲ್ಲಿ ವಿದ್ವಾಂಸನು. ವಿಚಾರಶೀಲ ಮತ್ತು ಧರ್ಮಜ್ಞನೆಂದು ಹೆಸರು ಪಡೆದಿದ್ದನು. ಅವನ ಜಾಣತನದ ಪರೀಕ್ಷೆಯು ಅರಣ್ಯಪರ್ವದಲ್ಲಿ ಯಕ್ಷಪ್ರಶ್ನೆಯ ಕಾಲಕ್ಕೆ ಆಯಿತು. ಪುನಃ ಮಹಾಪ್ರಸ್ಥಾನ ಪರ್ವದಲ್ಲಿ ಆಯಿತು. ಧರ್ಮನು ರಾಜ್ಯಾಭಿಷಿಕ್ತನಾದ ಪಾಂಡುವಿನ ಹಿರಿಯ ಮಗನು. ವಂಶಪರಂಪರೆಯಾಗಿ ರಾಜ್ಯವು ಅವನಿಗೆ ದೊರಕತಕ್ಕದ್ದು. ಆದರೆ ಅದರಲ್ಲಿ ಕೆಲವು ತೊಡಕು ತೊಂದರೆಗಳು ಉದ್ಭವಿಸಿದವು. ಬಾಲ್ಯದಲ್ಲಿ ಆತನಿಗೆ ದೈನ್ಯದಿಂದ ಇರಬೇಕಾಯಿತು. ತಾನು ರಾಜ್ಯದ ಹಕ್ಕುದಾರನೆಂಬ ಸಂಗತಿಯನ್ನು ಕ್ಷಣಕಾಲವು ಮರೆಯುವಂತಿರಲಿಲ್ಲ. ಅಲ್ಲದೇ ಅವನ ತಾಯಿಯೂ ತಮ್ಮನೂ ಅವನಿಗೆ ಆ ಸಂಗತಿಯನ್ನು ಮರೆಯಗೊಡುತ್ತಿರಲಿಲ್ಲ. ಬ್ರಾಹ್ಮಣರನ್ನು ಸೇರಿಸುವುದು, ಅವರಿಂದ ಯಜ್ಞಗಳನ್ನು ಮಾಡಿಸುವುದು, ಅವರಿಗೆ ದಕ್ಷಿಣೆಯನ್ನು ಅರ್ಪಿಸುವುದು, ಜನರ ಆಶೀರ್ವಾದಗಳನ್ನು ಪಡೆಯುವುದು, ಧಾರ್ಮಿಕ ಚರ್ಚೆಗಳನ್ನು ನಡೆಸುವುದು, ಆಗಿಹೋದ ಅರಸರ ಚರಿತ್ರೆಗಳನ್ನು ಕೇಳುವುದು, ಸಂತೋಷದಿಂದ ಪಗಡೆ ಆಡುವುದು ಇದೇ ಆತನ ಮೂಲ ಸ್ವಭಾವವಾಗಿತ್ತು. ಆದರೆ ಆವನ ಪಾಲಿಗೆ ಬಂದ ಜೀವನವು ಬಹು ತಿಕ್ಕಾಟದ್ದು. ಆತನಿಗೆ ದೊರೆತಿದ್ದೆಲ್ಲವು ಇತರರ ಪೌರುಷದಿಂದ. ರೂಪ ಸಂಪನ್ನೆಯಾದ ಹೆಂಡತಿಯು, ದ್ರುಪದನಂತಹ ಬಲಾಢ್ಯನಾದ ಮಾವನು ದೊರಕಿದ್ದು ಅರ್ಜುನನಿಂದ, ಎರಡೂ ವನವಾಸಗಳಲ್ಲಿ ಸಂರಕ್ಷಣೆಯಾಗಿದ್ದು ಭೀಮನ ಬಲದಿಂದ. ಇಂದ್ರಪ್ರಸ್ಥದ ರಾಜ್ಯವು,

ಮಯಸಭೆಯಂತಹ ಅಪ್ರತಿಮವಾದ ಸಭೆಯು ದೊರೆತಿದ್ದು ಕೃಷ್ಣಾರ್ಜುನರಿಂದ. ಕೊನೆಯ ಯುದ್ಧದಲ್ಲಿ ಜಯಿಸಿದ್ದು, ತಮ್ಮಂದಿರ ಪರಾಕ್ರಮದಿಂದ ಮತ್ತು ಕೃಷ್ಣನ ಚಾತುರ್ಯದಿಂದ. ಇದು ನಡೆಯುತ್ತಿದ್ದಂತೆಯೇ ಧರ್ಮನು ಒಂದೆರಡು ಸಲ ತಮ್ಮಂದಿರ ಮೇಲೆ ಕೋಪಿಸಿಕೊಳ್ಳುವ ಪ್ರಸಂಗವು ಉದ್ಭವಿಸಿತು. ಯುದ್ಧದ ಕೊನೆಯಲ್ಲಿ ಕೈಗೆ ದೊರಕಿದ್ದನ್ನು ಮತ್ತು ಅದಕ್ಕಾಗಿ ಹೊಂದಿದ ನಷ್ಟ–ಕಷ್ಟಗಳನ್ನು ಅಜಮಾಯಿಸಿದರೆ, ಮುಖವು ವಿಜಯದಿಂದ ಬೆಳಗುವ ಬದಲು ವಿಷಾದದ ಮಸಿಯಿಂದ ಕಪ್ಪಿಟ್ಟಂತೆ ಕಾಣುತ್ತಿತ್ತು. ಪ್ರಾರಂಭದಿಂದ ಕೊನೆಯವರೆಗಿನ ಧರ್ಮನ ಇಡೀ ಜೀವನವು ವಿಷಾದದಿಂದ ತುಂಬಿತ್ತು. ಈ ಬಾಬತ್ತಿನಲ್ಲಿಯೂ ಆತನು ವಿದುರನನ್ನು ಹೋಲುತ್ತಾನೆ. ಅರ್ಹತೆ ಇದ್ದರೂ ರಾಜ್ಯವು ದೊರಕದಿದ್ದ ಕಾರಣ ವಿದುರನಿಗೆ ವಿಷಣ್ಣತೆ ಇತ್ತು. ಹಕ್ಕು ಬಾಧ್ಯತೆಯಿಂದ ದೊರಕಬೇಕಾದ ಸಂಗತಿಗಳು ದುಷ್ಪ್ರಾಪ್ಯವಾಗಿ ಬಲು ಕಷ್ಟನಷ್ಟಗಳ ಬೆಲೆಯಿತ್ತು, ದೊರಕಿಸಬೇಕಾಯಿತು, ಎಂಬುದರಲ್ಲಿ ಧರ್ಮನ ವಿಫಲತೆ ಇತ್ತು. ವಿದುರನ ವಿಫಲತೆಯನ್ನು ಮಹಾಭಾರತದಲ್ಲಿ ಪ್ರಕಟಿಸಿಲ್ಲ. ಆದರೆ ಧರ್ಮನ ವಿಫಲತೆಯನ್ನು ಆಗಾಗ್ಗೆ ಅವನ ಬಾಯಿಂದ ನುಡಿಸಲಾಗಿದೆ. ಧರ್ಮನು ಬಲು ವಿವೇಕಿಯು. ಆದರೆ ಕೊನೆಯ ಗಳಿಗೆಯಲ್ಲಿ, ದ್ರೌಪದಿ ಕುಸಿದು ಭೂಮಿಗೆ ಬಿದ್ದು ಮಡಿದಾಗ ಧರ್ಮನು, "ಅವಳು ಅರ್ಜುನನನ್ನು ಹೆಚ್ಚಾಗಿ ಪ್ರೀತಿಸಿದಳು." ಎಂಬ ದೀನೋದ್ಗಾರದಿಂದ ತನ್ನ ವಿಫಲ ಮನಃಕುದಿಯನ್ನು ಪ್ರಕಟಿಸಿದನು. ದ್ಯೂತಕ್ಕಾಗಿ ಕರೆಯಿಸಿದಾಗ ತನ್ನ ರಾಜ್ಯವನ್ನು, ಸಹೋದರರನ್ನು, ತನ್ನ ಹೆಂಡತಿಯನ್ನು ಸಹ ಉನ್ಮಾದದಲ್ಲಿ ಪಣಕ್ಕೆ ಹಚ್ಚಿ ಧರ್ಮನು ತನ್ನ ಮನೋವ್ಯಥೆಯನ್ನು ಪ್ರಕಟಿಸಿದ್ದಾನೆಂದು ಅನಿಸುತ್ತದೆ. ಸ್ವಕಷ್ಟದಿಂದ ದೊರಕಿಸದಿದ್ದನ್ನು ಈ ರೀತಿ ಕಳೆಯುವುದರಲ್ಲಿ ಧರ್ಮನು ಮಾಡಿದ ಪುರುಷಾರ್ಥವೇನು ? ಅಥವಾ ಇದೆಲ್ಲವೂ ತನಗೆ ತುಚ್ಛವಿದೆ ಎಂದು ತೋರಿಸಿದನೋ? ಧರ್ಮನು ಹಿರಿಯರೆಲ್ಲರನ್ನು ಸನ್ಮಾನಿಸುತ್ತಿದ್ದನು. ಆದರೆ ವಿದುರನ ಬಗ್ಗೆ ಆತನ ಹೃದಯದಾಳದಲ್ಲಿ ವಿಶೇಷ ಅಕ್ಕರೆ ಇತ್ತೆಂದು ತೋರುತ್ತದೆ.

ಇವೆಲ್ಲವುಗಳನ್ನು ಗಮನಿಸಿದಲ್ಲಿ ವಿದುರನ ಮತ್ತು ಧರ್ಮನ ಸಂಬಂಧವು ಪಿತಾಪುತ್ರರದಾಗಿರಬಹುದೇ ? ಎಂಬ ಸಂದೇಹವು ಉಂಟಾಗುತ್ತದೆ. ಈ ಸಂದೇಹಕ್ಕೆ ಪುಷ್ಟಿಯನ್ನೀಯುವ ಅನೇಕ ದಾಖಲೆಗಳು ಮಹಾಭಾರತದಲ್ಲಿವೆ. ಮಹಾಭಾರತದಲ್ಲಿ ಯಾವುದೇ ತರಹದ ಯಾರೊಬ್ಬರ ರಹಸ್ಯವನ್ನು ಬಚ್ಚಿಟ್ಟಿದ್ದು ಕಾಣುವುದಿಲ್ಲ. ಕುಂತಿಗೆ ಕೌಮಾರ್ಯದಲ್ಲಿ ಜನಿಸಿದ ಪುತ್ರನ ವಿಷಯವು ಅದರಲ್ಲಿದೆ. ಹಾಗಾದರೆ ವಿದುರನಿಂದ ಕುಂತಿಗೆ ಧರ್ಮನು ಜನಿಸಿದನೆಂಬುದನ್ನು ಏಕೆ ಮರೆಮಾಡಿರಬಹುದು? ಅಥವಾ ಈ ಘಟನೆಯು ಸಂಭವಿಸಲೇ ಇಲ್ಲವೋ ?! ಕುಂತಿ ಪುತ್ರರೆಲ್ಲರು ಬೇರೆ ಬೇರೆ ದೇವತೆಗಳಿಂದ ಸಂಭವಿಸಿದರೆಂದು ತೋರಿಸಲಾಗಿದೆ. ಪಾಂಡುವು ಜೀವಿಸಿದ್ದಾಗಲೇ ಈ ಮಕ್ಕಳು ಹುಟ್ಟಿದ ಕಾರಣ ಮತ್ತು ಆ ಮಕ್ಕಳೆಲ್ಲರು ತನ್ನವರೇ ಎಂದು ಪಾಂಡುವು ಮನ್ನಿಸಿದ ಕಾರಣ, ಬೀಜಕ್ಷೇತ್ರ ನ್ಯಾಯದಿಂದ ಈ ಮಕ್ಕಳು ಪಾಂಡುವಿನವೇ ಆದರು. ಅದರಲ್ಲಿಯ ಒಂದು ಮಗುವು ವಿದುರನಿಂದ ಜನಿಸಿದ್ದರೆ ಯಾವುದೇ ತರಹದ ಕೀಳುತನವು ಅದಕ್ಕೆ ತಾಗುತ್ತಿರಲಿಲ್ಲವೆಂದು

ಅನಿಸುತ್ತದೆ. ಆದರೆ ಒಂದು ಸಂದೇಹ ಉಂಟು. ಧೃತರಾಷ್ಟ್ರನ ಪುತ್ರನು ಓರ್ವ ಕ್ಷತ್ರಿಯ ರಾಜಕನ್ಯೆಯಿಂದ ಜನಿಸಿದ್ದನು. ಸ್ವತಃ ಧೃತರಾಷ್ಟ್ರನು ಒಂದು ರಾಜಮನೆತನದಲ್ಲಿಯ ಹಿರಿಯ ರಾಜಪುತ್ರನಾಗಿದ್ದನು. ಇದಕ್ಕೆ ಪ್ರತಿಯಾಗಿ ಕುಂತಿಯು ರಾಜಕನ್ಯೆಯಾಗಿದ್ದರೂ, ವಿದುರನು ಸೂತಪುತ್ರನಾಗಿದ್ದನು. ಸೂತನಿಂದ ಜನಿಸಿದನೆಂಬ ಕಾರಣದಿಂದ ಹಿರಿಯನಾಗಿದ್ದರೂ ಧರ್ಮನ ಬಾಧ್ಯತೆಯು ದುರ್ಯೋಧನನಿಗಿಂತ ಕಡೆಗಣಿಸಲ್ಪಡುವದಿತ್ತೋ? ಎಂಬ ವಿಚಾರವು ಉಳಿಯುತ್ತದೆ. ಈ ವಿಚಾರಕ್ಕೆ ಮಹಾಭಾರತದಲ್ಲಿ ಯಾವುದೊಂದು ಉತ್ತರವಿಲ್ಲ. ಆದಿಪರ್ವದಲ್ಲಿ ಕೊಟ್ಟಂತೆ ಯಾವುದಾದರೊಂದು ದೇವತೆಯನ್ನು ಆಹ್ವಾನಿಸಿ ಪುತ್ರನನ್ನು ಪಡೆಯುವ ಸಮಯ ಬಂದಾಗ ಯಮಧರ್ಮನ ಸ್ಮರಣೆಯಾಗುವುದು ಬಹು ಆಶ್ಚರ್ಯಕರವಾಗಿದೆ.

ಈ ಮೊದಲನೆಯ ಮಗನ ಹೆಸರು ಯುಧಿಷ್ಟಿರ. ಆತನಿಗೆ ಧರ್ಮನೆಂದು ಹೆಸರಾಗುವುದಕ್ಕೆ ಅನೇಕ ಕಾರಣಗಳಿವೆ. ಯಮಧರ್ಮನ ಪುತ್ರನಾಗಿದ್ದರಿಂದ ಅವನ ಹೆಸರು 'ಧರ್ಮ'. ತುಂಬ ಧಾರ್ಮಿಕ ವೃತ್ತಿಯವನಾದ್ದರಿಂದ ಅವನ ಹೆಸರು ಧರ್ಮ. ಇದಲ್ಲದೆ ವಿದುರನ ಪುತ್ರನಾದ್ದರಿಂದಲೂ ಧರ್ಮನೆಂಬ ಹೆಸರು ಬರಲು ಸಾಧ್ಯವಿದೆ. ವಿದುರನು ಶಾಪಿತನಾದ ಯಮಧರ್ಮನೇ ಇದ್ದನು (ಅಣಿಮಾಂಡವ್ಯ ಋಷಿಗಳ ಕಥೆಯನ್ನು ಪರಿಶೀಲಿಸಿ). ವಿದುರನು ಕುಂತಿಯ ಮೈದುನನಿದ್ದುದರಿಂದ ನಿಯೋಗಕ್ಕೆ ಸಂಪೂರ್ಣವಾಗಿ ಅರ್ಹನಿದ್ದನು. ಧರ್ಮಾನುಸಾರವಾಗಿ ಜನಿಸಿದ ಮಗು ಎಂದು ಸಹ ಯುಧಿಷ್ಟಿರನಿಗೆ 'ಧರ್ಮ' ಎಂಬ ಹೆಸರು ಬಂದಿರುವ ಸಂಭವವಿದೆ. ಈ ಕಾರಣದಿಂದ ಧರ್ಮನು ವಿದುರನ ಪುತ್ರನಿರಬೇಕೆಂಬ ಅನಿಸುತ್ತದೆ.

ಇನ್ನೊಂದೆಡೆಯಲ್ಲಿಯೂ ಇನ್ನೆರಡು ಪ್ರಸಂಗಗಳಿಂದ ಈ ತರ್ಕವು ಪ್ರಬಲವಾಗುತ್ತದೆ. ಧೃತರಾಷ್ಟ್ರ, ಗಾಂಧಾರಿ, ಕುಂತಿ, ವಿದುರ ಇವರೆಲ್ಲರು ಕೊನೆಗೆ ಅರಣ್ಯವಾಸವನ್ನು ಸ್ವೀಕರಿಸಿದರು. ಧರ್ಮನ ಹಾಗೇ ಇತರ ಪಾಂಡವರು ಅವರನ್ನು ಭೇಟಿಯಾಗಲು ವನಕ್ಕೆ ಹೋಗುತ್ತಿದ್ದರು. ಈ ರೀತಿ ಒಂದು ಸಲ ವಿದುರನು ಕಾಣದೇ ಇದ್ದುದರಿಂದ ಧರ್ಮನು ಅವನ ಬಗ್ಗೆ ವಿಚಾರಿಸಿದನು. ಅದಕ್ಕೆ ಧೃತರಾಷ್ಟ್ರ "ಆತನು ಘೋರ ತಪಸ್ಸನ್ನು ಆಚರಿಸುತ್ತಿದ್ದಾನೆ. ಅವನು ಏನನ್ನೂ ಭಕ್ಷಿಸುವುದಿಲ್ಲ. ಆಗಾಗ್ಗೆ ಅರಣ್ಯದಲ್ಲಿ ಅಲೆದಾಡುತ್ತಿದ್ದಾಗ ಜನರ ಕಣ್ಣಿಗೆ ಬೀಳುತ್ತಾನೆ" ಎಂದು ಹೇಳಿದನು. ಧೃತರಾಷ್ಟ್ರನು ಇದನ್ನು ಹೇಳುತ್ತಿದ್ದಂತೆಯೇ ಅಸ್ಥಿಪಂಜರ ಮಾತ್ರ ಉಳಿದವನಾದ, ಶರೀರವೆಲ್ಲಾ ಧೂಳಿಯಿಂದ ತುಂಬಿದವನಾದ, ವಿವಸ್ತ್ರನಾದ ವಿದುರನು ದೂರದಲ್ಲಿ ಹೋಗುತ್ತಿದ್ದಾನೆಂದು ಜನರು ಹೇಳಿದರು. ಅದನ್ನು ಕೇಳಿದ ಧರ್ಮನು, "ವಿದುರನೇ ! ನಿಲ್ಲು ! ನಿಲ್ಲು ! ನಾನು ನಿನಗೆ ಪ್ರಿಯನಾದ ಯುಧಿಷ್ಟಿರನು" ಎಂದು ಕೂಗುತ್ತಾ ಅವನನ್ನು ಹಿಂಬಾಲಿಸಿದನು. ಹೀಗೆ ಒಬ್ಬರನ್ನೊಬ್ಬರು ಹಿಂಬಾಲಿಸುತ್ತಿದ್ದಾಗ ಒಂದು ನಿಬಿಡ ಅರಣ್ಯದ ಏಕಾಂತ ಸ್ಥಳದಲ್ಲಿ ಬಂದು ವಿದುರನು ಒಂದು ಮರಕ್ಕೆ ಆತುನಿಂತನು. "ನಾನು ಯುಧಿಷ್ಟಿರನು" ಎಂದು ಮತ್ತೆ ನುಡಿದು ಧರ್ಮನು ತನ್ನ ಗುರುತನ್ನು ಕೊಟ್ಟನು. ಆಗ

ಕಣ್ಣಿನ ರೆಪ್ಪೆಗಳನ್ನು ಅಲ್ಲಾಡಿಸದೇ, ವಿದುರನು ತನ್ನ ದೃಷ್ಟಿಯನ್ನು ರಾಜನ ದೃಷ್ಟಿಯಲ್ಲಿ ಸೇರಿಸಿ ಯೋಗಬಲದಿಂದ ಅವನ ಶರೀರದಲ್ಲಿ ಪ್ರವೇಶಿಸಿದನು. ತನ್ನ ಪ್ರಾಣ ಇಂದ್ರಿಯ, ತೇಜಸ್ಸುಗಳನ್ನು ವಿದುರನು ರಾಜನಿಗೆ ಕೊಟ್ಟನು.

ಮರಣ ಸಮಯದ ಈ ವರ್ತನೆಯು ಪಿತಾಪುತ್ರನಿಗೆ ಹೋಲುವಂತಿದೆ. ಉಪನಿಷತ್ತಿನಲ್ಲಿ ಒಂದು ಕಡೆ ಮೃತಪಡುವ ಪುರುಷನು ಆಚರಿಸಬೇಕಾದ ಸಂಗತಿಗಳ ವರ್ಣನೆಯಿದೆ, ತಾನು ಭೂಮಿಯ ಮೇಲೆ ಮಲಗಬೇಕು. ಪುತ್ರನನ್ನು ಮೈಮೇಲೆ ಎತ್ತಿಕೊಳ್ಳಬೇಕು. "ನಾನು ನನ್ನ ಇಂದ್ರಿಯಗಳನ್ನು ನಿನಗೆ ಕೊಡುವೆನು" ಎಂದು ಪಿತನು ನುಡಿಯುಬೇಕು. ಪುತ್ರನು "ಸ್ವೀಕರಿಸುವೆನು" ಎಂದು ಹೇಳಬೇಕು. ಈ ರೀತಿ ಪಿತನು ಪುತ್ರನಿಗೆ ಶಕ್ತಿ, ಐಶ್ವರ್ಯ, ಬುದ್ಧಿಗಳನ್ನು ಅರ್ಪಿಸಬೇಕು. ಪುತ್ರನು ಅದನ್ನು ಸ್ವೀಕರಿಸಬೇಕು. ಈ ರೀತಿಯ ವಿಧಿಯನ್ನು ಹೇಳಲಾಗಿದೆ. ಮಹಾಭಾರತದಲ್ಲಿಯ ವಿದುರ ಮತ್ತು ಧರ್ಮನ ಕೊನೆಯ ಭೇಟಿಯಲ್ಲಿಯೂ ಇದೇ ಕೃತಿಯನ್ನು ಸ್ವಲ್ಪದರಲ್ಲಿ ಬಣ್ಣಿಸಲಾಗಿದೆ. ಮುಂದಿನ ಎರಡು ಅಧ್ಯಾಯಗಳ ನಂತರ ವ್ಯಾಸನು ಎಲ್ಲರಿಗೂ ಭೇಟಿಯಾಗಲು ಬಂದಾಗ ವಿದುರನ ಬಗ್ಗೆ ಈ ರೀತಿ ಹೇಳುತ್ತಾನೆ. ಪೂರ್ವದಲ್ಲಿ ವಿಚಿತ್ರವೀರ್ಯನ ದಾಸಿಯಲ್ಲಿ ಯೋಗಬಲದಿಂದ ಪ್ರತ್ಯಕ್ಷ ಧರ್ಮನು ಜನ್ಮ ತಾಳಿದ. ಆತನು ಕುರುರಾಜನಾದ ಯುಧಿಷ್ಠಿರನಿಗೆ ಯೋಗಬಲದಿಂದ ಜನ್ಮ ಕೊಟ್ಟನು. ಧರ್ಮನೆ ವಿದುರ ! ವಿದುರನೇ ಪಾಂಡವ ! ಎಲವೋ ಧೃತರಾಷ್ಟ್ರನೆ! ನಿನ್ನ ತಮ್ಮನಾದ ವಿದುರನು ಯಾವ ರೀತಿಯಲ್ಲಿ ನಿನ್ನ ಸೇವೆಯನ್ನು ಮಾಡುತ್ತಿದ್ದಾನೆ ; ಅಂದರೆ ಕುಂತಿಯು ತನ್ನ ಮೈದುನನಿಂದ ಧರ್ಮರಾಜನನ್ನು ಪಡೆದ ಸಂಗತಿಯನ್ನು ಯುದ್ಧ ಕೊನೆಯಾಗುವವರೆಗೂ ರಹಸ್ಯವಾಗಿ ಇಟ್ಟು, ಅದರ ಉಚ್ಚಾರಣೆಯನ್ನು ಇಂತಹ ಸಮಯದಲ್ಲಿ ಮಾಡಿದ ಕಾರಣದಿಂದ ಕೊನೆಯಲ್ಲಾದ ವಿದುರ ಮತ್ತು ಧರ್ಮನ ಐಕ್ಯವು ಪಿತಾಪುತ್ರರ ಐಕ್ಯವಿತ್ತೋ? ಅಥವಾ ಅವರಿಬ್ಬರೂ ಸಾಕ್ಷಾತ್ ಯಮಧರ್ಮನ ಪುತ್ರರಿದ್ದರೋ ? ಎಂಬ ಸಂದೇಹವು ಹಾಗೆ ಉಳಿಯುತ್ತದೆ. ವಿದುರನಿಂದ ಕುಂತಿಗೆ ಒಂದೇ ಪುತ್ರನಾದನು. ಇನ್ನಿತರರು ಏಕೆ ಇಲ್ಲ ? ಎಂದು ವಿಚಾರ ಮಾಡಿದರೆ ನಿಯೋಗದಿಂದ ಪರಪುರುಷ ಸಂಗ ಮಾಡುವುದಾದರೆ ವಿದುರ ಮತ್ತು ಕುಂತಿಯ ನಿಯೋಗವು ಪುನಃ ಸಾಧಿಸದೇ ಅವಳಿಗೆ ಅನ್ಯ ಪುರುಷರನ್ನು ಆಹ್ವಾನಿಸಬೇಕಾಯಿತೆಂದು ಅನಿಸುತ್ತದೆ. ಬೇರೆ ಸಂದರ್ಭಗಳಲ್ಲಿ ಅತಿಶಯ ಸ್ಪಷ್ಟವಾಗಿ ನುಡಿಯುವ ಮಹಾಭಾರತದಲ್ಲಿ ವಿದುರ ಮತ್ತು ಧರ್ಮರ ಆಪ್ತತ್ವದ ಬಗ್ಗೆಯಾಗಲೀ ಪರಸ್ಪರ ಆತ್ಮೀಯತೆಯ ಬಗ್ಗೆಯಾಗಲಿ ಸ್ಪಷ್ಟ ಉಲ್ಲೇಖವಿಲ್ಲ. ವಿದುರ ಮತ್ತು ಧರ್ಮನ ಸಂಬಂಧವು ಪಿತಾಪುತ್ರರದು ಇರಲು ಸಾಧ್ಯವೆಂದು ಗ್ರಹಿಸಿದಲ್ಲಿ ಸಮಗ್ರ ಮಹಾಭಾರತ ಕಥೆಯೇ ಬೇರೆ ರೂಪವನ್ನು ತಾಳುವುದು, ಅದಕ್ಕೆ ಭಿನ್ನ ಅರ್ಥವು ಪ್ರಾಪ್ತವಾಗುವುದು. ಧರ್ಮನು ವಿದುರನ ಔರಸ ಪುತ್ರನಾಗಿ, ಪಾಂಡುವಿನ ಕ್ಷೇತ್ರಜ್ಞ ಪುತ್ರನೆಂದು ತಿಳಿದರೆ ಭಾರತೀಯ ಯುದ್ಧವು ಇಬ್ಬರು ಅಣ್ಣಂದಿರ ಮಕ್ಕಳ ಯುದ್ಧವಾಗಿ ಉಳಿಯದೇ ಮೂವರು ಸಹೋದರರ ಪುತ್ರರಲ್ಲಿಯ

ಯುದ್ಧವೆನಿಸುತ್ತದೆ. ಆದರೆ ಈ ರೀತಿ ತ್ರಿಪಕ್ಷೀಯ ಯುದ್ಧವು ಸಂಭವಿಸುವುದಿಲ್ಲ. ಕಾರಣವೇನೆಂದರೆ, ಒಬ್ಬನು ಇಬ್ಬರ ಮಗನು ! ತನ್ನ ಕ್ಷೇತ್ರಜ್ಞ ಪುತ್ರರ ಪಿತರು ಯಾರೆಂದು ಪ್ರಕಟವಾಗಬಾರದೆಂದು ಪಾಂಡುವು ದೂರ ಹಿಮಾಲಯಕ್ಕೆ ಹೋಗಿದ್ದನು. ಅವನ ಪುತ್ರರ ತಂದೆಯರು ಯಾರಿಗೂ ತಿಳಿಯಲಿಲ್ಲ. ವ್ಯಾಸನಂತೆ ಪಿತೃತ್ವವು ಬಯಲಿಗೆ ಬರಲಿಲ್ಲ. ಪುತ್ರನಿಗಾಗಿ ವಿದುರನು ಯಾವ ಒಳಸಂಚಿನಲ್ಲಿ ಸೇರಲಿಲ್ಲ. ಕೊನೆಯವರೆಗೂ ಅವನು ಉದಾಸೀನನಾಗಿ ಅಲಿಪ್ತನಾಗಿಯೆ ಉಳಿದನು. ಪುತ್ರನು ಅರಸನಾದ ನಂತರ ಅರಸನ ತಂದೆಯೆಂದು ಧೃತರಾಷ್ಟ್ರನಂತೆ ಮೆರೆಯಲಿಲ್ಲ. ವಿದುರನ ಖಿನ್ನತೆಯು ಧರ್ಮನ ಪಾಲಿಗೂ ಬಂತು. ಧರ್ಮನಿಗೆ ನ್ಯಾಯವಾದುದು ದೊರಕಿತು. ಆದರೆ ಹೊಂದಿದ ಕಷ್ಟನಷ್ಟಗಳ ಕಾರಣ ಎಲ್ಲವೂ ದೊರಕಿದರೂ ಧರ್ಮನು ಕೊನೆಯವರೆಗೂ ಕೇವಲ ಉದಾಸೀನನಲ್ಲದೇ ಅಕೃತಾರ್ಥನಾಗಿ ಉಳಿದನು.

೫

ದ್ರೌಪದಿ

ಭಾರತದ ಎರಡು ಮಹಾಕಾವ್ಯಗಳ ನಾಯಿಕೆಯರೆಂದರೆ ದ್ರೌಪದಿ ಮತ್ತು ಸೀತೆ. ಅವರು ಆದಿಗ್ರಂಥಗಳ ನಾಯಿಕೆಯರೇ ! ಇಷ್ಟೇ ಅಲ್ಲದೆ ಅವರಲ್ಲಿ ಇನ್ನು ಅನೇಕ ಸಾಮ್ಯಗಳಿವೆ. ಒಂದು ರೀತಿಯಲ್ಲಿ ಅವರಿಬ್ಬರು ಭೂಮಿ ಕನ್ಯೆಯರು. ಒಬ್ಬಳು ಯಜ್ಞಕ್ಕಾಗಿ ಭೂಮಿಯನ್ನು ಉಳುತ್ತಿರುವಾಗ ದೊರಕಿದಳು. ಆದರೆ ಇನ್ನೊಬ್ಬಳು ಪ್ರತ್ಯಕ್ಷ ಯಜ್ಞ ಕುಂಡದಿಂದ ಹೊರಬಂದಳು. ಇಬ್ಬರ ವಿವಾಹಗಳು ಪಣತೊಟ್ಟು ಸ್ವಯಂವರದಿಂದಲೇ ಜರುಗಿದವು. ಒಬ್ಬಳ ವನವಾಸವು ಹದಿನಾಲ್ಕು ವರ್ಷದ್ದಾದರೆ, ಇನ್ನೊಬ್ಬಳದು ಹನ್ನೆರಡು ವರ್ಷದ್ದು. ಒಂದಿಲ್ಲೊಂದು ಕಾರಣದಿಂದ ಇಬ್ಬರ ಜೀವನವು ವಿಫಲವಾದುದು. ಈ ಸಾಮ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ವಿಚಾರ ಮಾಡಿದರೂ ಅವರಲ್ಲಿಯ ಭಿನ್ನತೆಯೇ ಅಧಿಕವಾಗಿ ಗೋಚರವಾಗುತ್ತದೆ. ಅವರು ಯಾವ ಗ್ರಂಥಗಳ ನಾಯಿಕೆಯರೋ ಆ ಗ್ರಂಥಗಳ ತೀರಾ ಭಿನ್ನ ಸ್ವರೂಪವೆ ಈ ಭಿನ್ನತೆಗೆ ಕಾರಣ. ಇತ್ತೀಚೆಗೆ ಆಂಗ್ಲ ವಾಙ್ಮಯವನ್ನು ಹೋಲಿಸಿದರೆ ಈ ಎರಡು ಗ್ರಂಥಗಳಿಗೆ 'ಮಹಾಕಾವ್ಯ' ಎನ್ನುವ ರೂಢಿಯಾಗಿದೆ. ನಮ್ಮ ಪರಂಪರೆಯಂತೆ ಮಹಾಭಾರತದಲ್ಲಿ ರಾಜಾಧಾನಿಗಳ, ಅರಣ್ಯಗಳ, ನದಿಗಳ ವರ್ಣನೆಯು ಬರುತ್ತದೆ. ಆದರೆ ಆ ವರ್ಣನೆಯೆ ಹೆಚ್ಚಾಗಿಲ್ಲ. ಮಹಾಭಾರತದಲ್ಲಿ ಕಥೆಯ ವರ್ಣನೆಗೆ ಕೊಟ್ಟಷ್ಟೇ ಪ್ರಾಧಾನ್ಯವನ್ನು ಸ್ಥಳ–ಕಾಲ–ವ್ಯಕ್ತಿಗಳ ವರ್ಣನೆಗೆ ಕೊಡಲಾಗಿದೆ. ಚರಿತ್ರೆಯನ್ನು ಹೇಳುವಾಗ ಶೂರ–ಹೇಡಿ, ದುಷ್ಟ–ಸಜ್ಜನ, ಆತುರದವ–ನಿಧಾನಸ್ಥ, ಕುರೂಪ–ಸುಂದರ ಇಂಥ ಅನೇಕ ಸ್ತ್ರೀ ಪುರುಷರ ಚಿತ್ರಣವು ಅದರಲ್ಲಿ ಬಂದಿದೆ. ಇದರಲ್ಲಿ ಯಾವುದೊಂದನ್ನು ಒಂದೇ ಶೈಲಿಯಲ್ಲಿ ಬಣ್ಣಿಸಿಲ್ಲ. ಸದ್ಗುಣಗಳೆಲ್ಲ ಒಂದೆಡೆ ; ದುರ್ಗುಣಗಳೆಲ್ಲ ಇನ್ನೊಂದೆಡೆ; ಈ ರೀತಿಯ ಚಿತ್ರಣವೇ ಮಹಾಭಾರತದಲ್ಲಿಲ್ಲ. ಜನರ ಮುಂದೆ ಆದರ್ಶವನ್ನಿಡುವ ಉದ್ದೇಶದಿಂದ ಮಹಾಭಾರತವನ್ನು ಬರೆದಿಲ್ಲ. ಆದರೆ ಅದಕ್ಕೆ ಪ್ರತಿಯಾಗಿ ರಾಮಾಯಣವೆಂದರೆ ಒಬ್ಬ ಆದರ್ಶ ಪುರುಷನ ಚರಿತ್ರ ಗಾಯನವೇ ಆಗಿದೆ. ಜಗತ್ತಿನಲ್ಲಿಯ ಎಲ್ಲಾ ಸದ್ಗುಣಗಳ ಮೂರ್ತಿಯೇ ಎಂಬಂತೆ ರಾಮಚಂದ್ರನ ವರ್ಣನೆ ಇದೆ. ಆತನ ಚರಿತ್ರೆಯು ಲೋಕಕ್ಕೆಲ್ಲಾ ತಿಳಿಯಬೇಕೆಂದು ವಾಲ್ಮೀಕಿ ಈ ಕಾವ್ಯವನ್ನು ರಚಿಸಿದ್ದಾನೆ. ರಾಮ ಯಾವ ರೀತಿಯಲ್ಲಿ ಪುರುಷರಿಗೆ ಆದರ್ಶನೋ, ಅದೇ ರೀತಿ ಸೀತೆ ಸ್ತ್ರೀಯರಿಗೆ ಆದರ್ಶಳು. ಇಡೀ ರಾಮಾಯಣವು ಆದರ್ಶಗಳಿಂದಲೇ ತುಂಬಿದೆ. ಆದರ್ಶ ಸಹೋದರರು, ಆದರ್ಶ ಸೇವಕರು, ಆದರ್ಶ

ಪ್ರಜಾಜನರು ; ಖಳಪುರುಷನು ಕೂಡ ಆದರ್ಶನೇ. ಮಹಾಭಾರತದಲ್ಲಿ ಅಸಾಮಾನ್ಯ ವ್ಯಕ್ತಿಗಳ ಚಿತ್ರಣವು ಇಲ್ಲವೆಂತಲ್ಲ. ಅವರುಗಳ ಚಿತ್ರಣಗಳಿದ್ದರೂ ಅವರ ಸಾಮಾನ್ಯತ್ವವನ್ನು ಎಂದಿಗೂ ಮರೆಯುವಂತಿಲ್ಲ. ರಾಮಾಯಣವು ಎರಡು ವ್ಯಕ್ತಿಗಳ ಕಥೆಯಾಗಿರದೇ ಕೇವಲ ಒಂದೇ ವ್ಯಕ್ತಿಯ ಕಥೆಯಾಗಿದೆ. ಇದರಲ್ಲಿ ಇನ್ನಿತರ ವ್ಯಕ್ತಿಗಳ ಸಮಾವೇಶವಾಗಿರುವುದು ಹಿಮ್ಮೇಳದಂತೆ, ಅಥವಾ ಪ್ರಮುಖ ವ್ಯಕ್ತಿಯನ್ನು ಎತ್ತಿತೋರಿಸುವುದಕ್ಕೆ. ರಾಮನ ನಂತರ ಎರಡನೆಯ ವ್ಯಕ್ತಿಯೆಂದರೆ ಸೀತೆ. ಸೀತೆಗೆ ತವರು ಮನೆಯೂ ಇತ್ತು. ಅತ್ತೆ ಮನೆಯೂ ಇತ್ತು. ಅವಳ ತವರು ಮನೆಯ ಸಂಬಂಧವು ನಾಮ–ಮಾತ್ರ, ಅತ್ತೆ ಮನೆಯ ವ್ಯಕ್ತಿಗಳೊಡನೆ ಅವಳ ಸಂಬಂಧವನ್ನು ಹೆಚ್ಚಾಗಿ ತೋರಿಸಲಾಗಿದೆ. ಹೀಗಿದ್ದರೂ ಈ ವ್ಯಕ್ತಿಗಳಿಗೆ ಸಾಕಷ್ಟು ಪ್ರಾಮುಖ್ಯ ಲಭಿಸಲಿಲ್ಲ. ಸೀತೆಯು ವನವಾಸಕ್ಕೆ ಹೋದಳು. ಗರ್ಭಿಣಿಯಾಗಿದ್ದಾಗ ರಾಮನು ಆಕೆಯನ್ನು ತ್ಯಜಿಸಿದನು. ಭೂಮಿಯು ಅವಳನ್ನು ನುಂಗಿತು. ಇವೆಲ್ಲ ಸಂಗತಿಗಳು ನಡೆಯುವಾಗ ಅವಳ ತವರಿನವರ ಸುಳಿವೇ ಕಾಣುವುದಿಲ್ಲ. ಅನಾಥಾಶ್ರಮದಿಂದ ಕರೆತಂದ ಹುಡುಗಿಯಂತೆ ಸೀತೆಯು ಭಾಸವಾಗುತ್ತಾಳೆ. ರಾಮಾಯಣದಲ್ಲಿ ಜನಕರಾಜನ ಹಿರಿಮೆಯ ವರ್ಣನೆ ಇದೆ. ಆದರೆ ಅದರಿಂದ ರಾಮನಿಗೆ ಅಥವಾ ಸೀತೆಗೆ ಯಾವ ಪ್ರಯೋಜನವೂ ಆದಂತೆ ಕಾಣುವುದಿಲ್ಲ. ಇದಕ್ಕೆ ತೀರಾ ವಿರುದ್ಧವಾಗಿ ದ್ರೌಪದಿಯ ಕಥೆ. ದ್ರುಪದರಾಜ ಒಬ್ಬ ಪುತ್ರನನ್ನು ಬಯಸಿ ಯಜ್ಞವನ್ನು ಮಾಡಿದ. ಆ ಯಜ್ಞದಿಂದ ಆತನಿಗೆ ಜ್ಞಾನ ಸಂಪನ್ನನಾದ ಒಬ್ಬ ಪುತ್ರ ಮತ್ತು ಒಬ್ಬಳು ಕನ್ಯೆ ದೊರಕಿದರು. ಪುತ್ರ ಧೃಷ್ಟದ್ಯುಮ್ನ, ಕನ್ಯೆ ದ್ರೌಪದಿ. ದ್ರೌಪದಿಯು ತವರಿನವರಿಗೆ ತೀರಾ ಅಕ್ಕರೆಯವಳಾಗಿದ್ದಳೆಂದು ಅವಳ ಹೆಸರಿನಿಂದಲೆ ಗೊತ್ತಾಗುತ್ತದೆ. ಸೀತೆಯ ಪ್ರಥಮ ಹೆಸರು ಸೀತೆ. ಜನಕ ಕುಲದವರು ಆಕೆಯನ್ನು ಸ್ವೀಕರಿಸಿದರೆಂದು 'ಜಾನಕಿ'. ವಿದೇಹದ ರಾಜಕನ್ಯೆ ಎಂದು 'ವೈದೇಹಿ' ದ್ರೌಪದಿಯು ವರ್ಣದಿಂದ ನಸುಗಪ್ಪು; ಆದರೆ ಅವಳು ಯಾವ ಯಜ್ಞ ಕುಂಡದಿಂದ ಹೊರಬಂದಳೋ ಅದರ ಜ್ವಾಲೆಯಂತೆ ತೇಜಸ್ವಿನಿಯಾಗಿದ್ದಳು. ಅವಳ ಹೆಸರು ಕೃಷ್ಣೆ. ದ್ರುಪದ ಕುಲದವಳೆಂದು 'ದ್ರೌಪದಿ' ಪಾಂಚಾಲರ ರಾಜಕನ್ಯೆ ಎಂದು 'ಪಾಂಚಾಲಿ'. ಯಜ್ಞಸೇನ ದ್ರುಪದನ ಕನ್ಯೆ ಎಂದು 'ಯಾಜ್ಞಸೇನಿ.' ಸೀತೆಯ ತಂದೆಯ ಹೆಸರೇ ಜ್ಞಾತವಿಲ್ಲ. ದ್ರೌಪದಿಯು ಮತ್ತು ಅವಳ ಸಹೋದರನು ಯಜ್ಞದಿಂದ ಹೊರಬಂದಾಗ ಪ್ರಾಯದವರಾಗಿದ್ದರು. ಆವರಿಗೆ ತನ್ನಲ್ಲಿ ಮಮತೆಯು ಬೆಳೆಯಲಿಕ್ಕಿಲ್ಲವೆಂಬ ಭಯದಿಂದ ದ್ರುಪದನ ರಾಣಿಯಾದ ಪೃಷತಿಯು* ಅಗ್ನಿದೇವತೆಯನ್ನು ಪ್ರಾರ್ಥಿಸಿದಳು: "ದೇವರೆ ! ಈ ಮಕ್ಕಳಿಗೆ ಅವರ ನಿಜಜನ್ಮದ ಮರುವಾಗಿ ನಾನೇ ಅವರ ತಾಯಿಯೆಂದು ಅವರು ಭಾವಿಸಲಿ." ಈ ಕಾರಣದಿಂದ ದ್ರೌಪದಿಗೆ 'ಪಾರ್ಷತಿ' ಎಂಬ ಹೆಸರು ಬಂದಿದೆ.

---

* ಯಜ್ಞಸೇನ ದ್ರುಪದನ ತಾತನ ಇಲ್ಲವೆ (ಮುತ್ತಾತನ) ಹೆಸರು 'ಪೃಶತ್' ಎಂದು ಇತ್ತು. ಈ ಕಾರಣ ಆ ಮನೆತನಕ್ಕೆ 'ಪಾರ್ಷತ' ಎಂದು ಹೆಸರು. ದ್ರುಪದನ ಪತ್ನಿಯು ಅವರ ಮನೆತನದವಳೇ ಇದ್ದಳು. ದಶರಥನ ರಾಣಿಯಾದ ಕೌಸಲ್ಯೆಯು ಅವನ ಮನೆತನದವಳೇ ಆಗಿದ್ದಳು.

ದ್ರುಪದನಿಗೆ ಒಬ್ಬ ಶೂರನಾದ ಮಗ ಬೇಕಿದ್ದ. ಹಾಗೆಯೇ ಕನ್ಯೆಯ ಸ್ವಯಂವರದಲ್ಲಿ. ಕುಶಲಧನುರ್ಧರನಾದ ಅಳಿಯ ಬೇಕಿದ್ದ. ದ್ರೌಪದಿಯ ತವರಿನವರಿಂದ ಪಾಂಡವರಿಗೆ ಪ್ರತಿಷ್ಠೆ ದೊರಕಿತು. ಅಲ್ಲದೆ ದುರ್ಯೋಧನನೊಡನೆ ಯುದ್ಧ ಮಾಡಲು ಸೇನೆ ದೊರೆಯಿತು. ಧೃಷ್ಟದ್ಯುಮ್ನನಂತಹ ಸೇನಾಪತಿಯು ದೊರೆತನು.

ಮಹಾಭಾರತದ ಕಥೆಯಲ್ಲಿ ಒಂದು ದೊಡ್ಡ ಮನೆತನದ ಮೂರು ತಲೆಮಾರಿನ ಆಪ್ತವ್ಯಕ್ತಿಗಳ ಸಮಾವೇಶವಿದೆ. ಬೇಕಾಗಿ ಅಂಧತ್ವವನ್ನು ಸ್ವೀಕರಿಸಿದ ಗಾಂಧಾರಿಯ ಸಹೋದರನಾದ ಶಕುನಿಯು, ಧೃತರಾಷ್ಟ್ರನಿಗೆ ದೊರೆಯದಿದ್ದುದನ್ನು ದುರ್ಯೋಧನನಿಗಾಗಿ ದೊರಕಿಸಲು ಹವಣಿಸುತ್ತಿದ್ದನು. ಬಾಲ್ಯದಲ್ಲಿ ಸದಾಕಾಲವು ಮಕ್ಕಳ ಮೇಲೆ ಕಾವಲಿರುವ ಕುಂತಿಯು, ಅವಳ ತವರಿನವರು, ಅರ್ಜುನನ ಸೊಸೆಯಾದ ಉತ್ತರೆಯು ಮತ್ತು ಅವಳ ತವರಿನವರು, ತಾತ ಮುತ್ತಾತರಾದ ಭೀಷ್ಮ–ಶಂತನುವು ಇವರೆಲ್ಲರೂ ಮಹಾಭಾರತದ ಕಥೆಯಲ್ಲಿ ಅಡಕವಾಗಿದ್ದಾರೆ. ಹಿರಿಯರು, ಕಿರಿಯರು, ನೆಗೆಣ್ಣಿಯರು, ಬಂಧು–ಭಗಿನಿಯರು. ಮಲತಾಯಿ ಮಕ್ಕಳು, ದೊಡ್ಡಪ್ಪ, ಚಿಕ್ಕಪ್ಪಂದಿರು. ಅವರ ಮಕ್ಕಳು, ಈ ರೀತಿ ಎಲ್ಲಾ ಆಪ್ತ ಸಂಬಂಧಿಕರು, ಅವರಲ್ಲಿಯ ತೊಡಕುಗಳು ಇವೆಲ್ಲವೂ ಮಹಾಭಾರತದಲ್ಲಿ ಬಂದಿವೆ. ಈ ರೀತಿ ಮಹಾಭಾರತವು ಪರಿಪೂರ್ಣವಾಗಿಯು ಬಹುರೂಪವಾಗಿಯು ಆಗಿದೆ. ಅದರಲ್ಲಿ ಕೌಟುಂಬಿಕ ತೊಡಕಿನ ಜೊತೆಗೆ ಆಗಿನ ರಾಜಕೀಯ ತೊಡಕನ್ನು ರೂಪಿಸಲಾಗಿದೆ. ಯಾದವರು, ಕೌರವರು, ದ್ರುಪದರು, ವಿರಾಟ, ಮಗಧದ ಜರಾಸಂಧ, ಶಲ್ಯ, ಶಾಲ್ವ, ಇವರೆಲ್ಲರೂ ಅಲ್ಲದೇ ಇತರ ಅನೇಕ ರಾಜಮನೆತನದವರು, ಅವರು ಹೊಂದಿದ ಪರಸ್ಪರ ಸಂಬಂಧಗಳಿಂದ ಕೌಟುಂಬಿಕವಾಗಲೀ ವೈಯಕ್ತಿಕವಾಗಲೀ ಸಂಘರ್ಷಣೆಗೆ ಕಾರಣವಾದ ಮಟ್ಟ, ಇವೆಲ್ಲವುಗಳ ಚಿತ್ರಣವು ಮಹಾಭಾರತದ ಯುದ್ಧವು ಕೌಟುಂಬಿಕ ಹಾಗೂ ರಾಜಕೀಯ ಸತ್ತಾಸ್ಪರ್ಧೆಯ ಪರಿಪಾಕವಿದೆ. ಇದಕ್ಕೆ ಪ್ರತಿಯಾಗಿ ರಾಮಾಯಣದಲ್ಲಿ, ಜನಕನದಾಗಲೀ ಕೈಕೆಯರದಾಗಲೀ ಕೇವಲ ಉಲ್ಲೇಖ ಮಾತ್ರ ಬಂದಿದೆ. ರಾಮನ ಜೊತೆ ಯದ್ಧಮಾಡಿದ ರಾವಣನ ವಿಶ್ವವು ಬೇರೆಯೆ ಇತ್ತೆಂದು ಹೇಳಬಹುದು. ತೀರಾ ಆಧುನಿಕ ಪ್ರಣಯ ಕಥೆಯಂತೆ ಎರಡು ವ್ಯಕ್ತಿಗಳ ಮತ್ತು ಅವರ ಅಂತರಂಗದ ಚಿತ್ರಣವು ರಾಮಾಯಣದಲ್ಲಿ ಕಂಡುಬರುತ್ತದೆ. ಯಾವ ಕಾರಣದಿಂದ ಆ ವ್ಯಕ್ತಿಗಳ ಚಿತ್ರವು ರೂಪುಗೊಂಡಿತೊ ಆ ಕೌಟುಂಬಿಕ ಅಥವಾ ಸಾಮಾಜಿಕ ಶಕ್ತಿಯ ದರ್ಶನವು ಅದರಲ್ಲಿ ಇಲ್ಲವೆಂದೆನ್ನಬಹುದು. ದ್ರೌಪದಿಯ ವಿವಾಹದವರೆಗೆ ಪಾಂಡವರು ದೀನರಾಗಿ ಅನಾಥರಂತೆ ಇದ್ದರು. ಒಂದು ಒಳಸಂಚಿನಿಂದ ಪ್ರಾಣಗಳನ್ನು ಉಳಿಸಿಕೊಂಡು ಹೇಗೋ ಪಾರಾಗಿದ್ದರು. ತಾವು ಬದುಕಿದ್ದೇವೆ ಎಂಬ ಸುಳಿವು ಶತ್ರುಗಳಿಗೆ ಸಿಗಬಾರದೆಂದು ತಲೆಮರೆಯಿಸಿಕೊಂಡು ಊರಿಂದೂರಿಗೆ ಅಲೆದಾಡುತ್ತಿದ್ದರು. ದ್ರೌಪದಿ ಸ್ವಯಂವರಕ್ಕೆ ಬಂದದ್ದು ಬ್ರಾಹ್ಮಣರ ವೇಷದಲ್ಲಿ. ತಾವು ಯಾರೆಂಬುದು ಅನ್ಯರಿಗೆ ತಿಳಿಯಬಾರದೆಂಬ ದಕ್ಷತೆಯನ್ನು ಅವರು ವಹಿಸಿದ್ದರು. ದ್ರುಪದನ ರಾಜ್ಯದಲ್ಲಿ ಅವರಿಗೆ ದ್ರೌಪದಿಯು ದೊರೆಕಿದ್ದಲ್ಲದೇ ವೈಭವಶಾಲಿಯಾದ ಮಿತ್ರರು, ಪರಾಕ್ರಮಿಯಾದ ಸಹಾಯಕರು

ಲಭಿಸಿದರು. ದ್ರೌಪದಿಯ ತವರಿನ ದ್ರುಪದರು, ತಾಯಿಯಾದ ಕುಂತಿಯ ತವರಿನ ಯಾದವರು, ಇವರ ಸಂಯುಕ್ತ ಬಲದಿಂದ ಪಾಂಡವರಿಗೆ ನೇರ ಪ್ರಕಟವಾಗಿ ಹಸ್ತಿನಾಪುರದ ರಾಜ್ಯದ ಪಾಲನ್ನು ಹಕ್ಕಿನಿಂದ ಕೇಳಲು ಅನುವಾಯಿತು. ದ್ರೌಪದಿಯೊಡನೆ ವಿವಾಹವಾದ ಕಾರಣ ರೂಪವತಿಯಾದ ಪತ್ನಿಯು ದೊರೆತಿದ್ದಲ್ಲದೇ ಪ್ರತಿಷ್ಠೆಯೂ ರಾಜ್ಯವೂ ದೊರಕಿತು.

ರಾಮಾಯಣದಲ್ಲಿಯೂ ಪಣವನ್ನು ಜಯಿಸುವ ರಾಜಪುತ್ರನಾದ ರಾಮನು ಬ್ರಾಹ್ಮಣರ ಸಭೆಯಲ್ಲಿ ಕುಳಿತಿದ್ದನೆಂದು ತೋರಿಸಲಾಗಿದೆ. ಆದರೆ ಅದು ಒಂದು ಆಕಸ್ಮಿಕವೆಂದು ಹೇಳಬಹುದು. ಆ ರಾಜಪುತ್ರನು ದಶರಥನ ಪುತ್ರನಾದ ರಾಮನಿದ್ದನೆಂದು ಎಲ್ಲಾ ಸಭಿಕರಿಗೆ ಗೊತ್ತಿತ್ತು. ಈ ವಿವಾಹದಿಂದ ಜಾನಕಿಯು ಪ್ರತಿಷ್ಠೆಯನ್ನು ಪಡೆದಳು. ರಾಮನಿಗೆ ಲಾವಣ್ಯವತಿಯಾದ, ಪ್ರಾಣಸಖಿಯು ದೊರಕಿದಳು. ರಾಮಾಯಣವು ಯಾವ ದೃಷ್ಟಿಯಿಂದ ರಚಿಸಲಾಗಿದೆಯೋ ಆ ದೃಷ್ಟಿಯಿಂದ ರಾಮನಿಗೆ ಇನ್ನು ಬೇರೆ ಯಾವುದರ ಅವಶ್ಯಕತೆಯು ಇರಲಿಲ್ಲ.

ದ್ರೌಪದಿಯು ಪಾಂಡವರವಳಾದಳು. ಅವಳ ತವರಿನಲ್ಲಿಯೇ ಉಳಿದು ಪಾಂಡವರು ರಾಜ್ಯದ ಪಾಲನ್ನು ಬೇಡಿದರು. ಈ ರೀತಿ ಪಾಂಡವರ ಬಲದ ಹೆಚ್ಚಳವಾದ್ದರಿಂದ ಧೃತರಾಷ್ಟ್ರನಿಗೆ ಈ ಬೇಡಿಕೆಯನ್ನು ನಿರಾಕರಿಸಲಾಗಲಿಲ್ಲ. ಇಂದ್ರಪ್ರಸ್ಥದಲ್ಲಿ ಧರ್ಮನ ಜೊತೆಯಲ್ಲಿ ದ್ರೌಪದಿಗೂ ರಾಜ್ಯಾಭಿಷೇಕವಾಯಿತು. ಈ ರಾಜ್ಯವು ದ್ರೌಪದಿಯಿಂದಲೆ ಲಭಿಸಿತು ಎಂದಲ್ಲಿ ಅತಿಶಯೋಕ್ತಿಯಾಗಲಾರದು. ದ್ರೌಪದಿಯು ಪಾಂಡವರ ಪ್ರತಿಷ್ಠೆಯಾಗಿದ್ದಳು. ಪಾಂಡವರು ಶೂರರಿದ್ದರು. ಆದರೆ ಒಬ್ಬನಿಗೆ ಜೂಜಿನ ಹವ್ಯಾಸ. ಒಬ್ಬ ಧಾಂಡಿಗ, ಒಬ್ಬ ಯೋಧನಿದ್ದರೂ ರಾಜ್ಯದ ಮೋಹವಿರದವನು. ಕಿರಿಯರಾದ ಅವಳಿ ಸಹೋದರರು, ಅಣ್ಣಂದಿರ ಕಾರ್ಯಗಳಿಗೆ ಸಹಾಯಕರು. ಪಾಂಡವರು ತಾವಾಗಿಯೇ ಯಾವ ರಾಜಕಾರಣವನ್ನೂ ನಡೆಸಲಿಲ್ಲ. ಅವರ ರಾಜಕಾರಣವನ್ನು ನಡೆಯಿಸಿದವನು ಕೃಷ್ಣನು. ಅವರ ರಕ್ಷಣೆಯನ್ನು ಮಾಡಿದ್ದು ಇಬ್ಬರು ಹೆಂಗಸರು. ಪಾಂಡು ಮೃತನಾದ. ಮಾದ್ರಿಯು ಸತಿ ಹೋದಳು. ಆಗ ಕುಂತಿ ಈ ಚಿಕ್ಕ ಚಿಕ್ಕ ಐದು ಮಕ್ಕಳನ್ನು ಕರೆದುಕೊಂಡು ಹಸ್ತಿನಾಪುರಕ್ಕೆ ಬಂದಳು. ಅಂದಿನಿಂದ ಅವರ ವಿವಾಹವಾಗುವವರೆಗೂ, ದಿನರಾತ್ರಿಯೂ ಕುಂತಿ ಪಾಂಡವರಿಗೆ ಕಾವಲಿದ್ದಳು. ಪಾಂಡವರನ್ನು ದೂರದಲ್ಲಿದ್ದ ಗಂಗಾ ತೀರದ ಊರಿಗೆ ಕಳುಹಿಸಿದಾಗ ಅವಳು ರಾಜಧಾನಿಯಲ್ಲೇ ಉಳಿಯಬಹುದಿತ್ತು. ಆದರೆ ಅವಳು ಅವರೊಡನೆ ಹೋದಳು. ಲಾಕ್ಷಾಗೃಹದಿಂದ ಪಾರಾದ ಮೇಲೆ ಅವರ ಸಂಗಡವೇ ಉಳಿದಳು. ಪಾಂಡವರಿಗೆ ಕುಂತಿಯ ಬಗ್ಗೆ ಇದ್ದ ಪ್ರೇಮವು ಈ ಘಟನೆಗೆ ಕಾರಣವೆಂದು ಹೇಳಬಹುದು. ಆದರೆ ಅವಳ ಜಾಗೃತ ಮಾತೃಪ್ರೇಮವೇ ಇದಕ್ಕೆ ಮುಖ್ಯವಾದ ಕಾರಣವಿರಬೇಕು.

ದ್ರೌಪದಿಯು ಪ್ರಥಮವಾಗಿ ಅತ್ತೆಯ ಬಳಿ ಬಂದಾಗಿನ ಪ್ರಸಂಗವು ಗಮನಿಸುವಂತಹದು. "ತಂದಿದ್ದನ್ನು ಐವರು ಹಂಚಿಕೊಳ್ಳಿರಿ" ಎಂದು ಅತ್ತೆಯಾದ ಕುಂತಿಯು ಹೇಳಿಬಿಟ್ಟಳು. ನೋಡಿದಾಗ ಅವಳೊಬ್ಬ ಸುಂದರ ಕನ್ಯೆ. ಇವಳನ್ನು ಯಾವ ರೀತಿ

ಹಂಚಿಕೊಳ್ಳುವುದು? ಧರ್ಮನು ಅರ್ಜುನನಿಗೆ ಈ ರೀತಿ ಹೇಳಿದನು. "ಅರ್ಜುನನೇ ! ನೀನು ಆಕೆಯನ್ನು ಜಯಿಸಿದವನು. ನೀನೇ ಇವಳನ್ನು ವಿವಾಹವಾಗು!" ಅದಕ್ಕೆ ಅರ್ಜುನನು "ನೀನು ಮತ್ತು ಭೀಮನು ಹಿರಿಯರಿರುವಾಗ ಚಿಕ್ಕವನಾದ ನಾನು ವಿವಾಹವಾಗುವ ಪಾಪವನ್ನು ಏಕೆ ಮಾಡಲಿ ? ನೀವೇ ಅವಳನ್ನು ವಿವಾಹವಾಗಬೇಕು" ಎಂದು ಉತ್ತರಿಸಿದನು. ಕುಂತಿಯ ಮನಸ್ಸಿನಲ್ಲಿ ದ್ರೌಪದಿಯು ಪಾಂಡವರೈವರ ಪತ್ನಿಯಾಗಬೇಕೆಂದಿತ್ತು. ಆದರೆ ಆ ತೊಡಕನ್ನು ಹೇಗೆ ಬಿಡಿಸುವುದು?

ಹಿರಿ ಅಣ್ಣನ ಮೊದಲು, ಕಿರಿಯವನು ವಿವಾಹವಾಗುವುದು ಶಿಷ್ಟಾಚಾರದ ವಿರುದ್ಧವಲ್ಲದೇ ಪಾಪವೆಂದು ಗಣಿಸುವ ಪುರಾತನ ರೂಢಿಯಿತ್ತು. ವೇದಗಳಲ್ಲಿ ಮತ್ತು ಬ್ರಾಹ್ಮಣ ಗ್ರಂಥಗಳಲ್ಲಿ ಇದಕ್ಕೆ ಸ್ಪಷ್ಟವಾದ ಅಧಿಕಾರವಿದೆ. ಅಣ್ಣನ ಪತ್ನಿಯ ಮೇಲೆ ತಮ್ಮಂದಿರ ಅಧಿಕಾರವಿರುತ್ತಿತ್ತು. ಆದರೆ ಇದರ ವಿರುದ್ಧವಾಗಿ ನಡೆಯುತ್ತಿರಲಿಲ್ಲ. ಕಿರಿಯವನು ಮೊದಲು ಮದುವೆ ಆದರೆ, ಅದಕ್ಕೆ ಹಿರಿಯವನು, ಮದುವೆಯಾದವನು, ಅಷ್ಟೇ ಅಲ್ಲದೇ ಅದಕ್ಕೆ ಸಮ್ಮತಿಸಿದ ತಾಯಿ ತಂದೆಯರು ಪಾಪಕ್ಕೆ ಗುರಿಯಾಗುತ್ತಿದ್ದರು. ಪೂರ್ವ ಕಾಲದಲ್ಲಿ ಹಿರಿಯ ಮಗನಿಗೆ ವಂಶಪರಂಪರೆಯಾಗಿ ಅಧಿಕಾರ ಸಂಪತ್ತುಗಳಿಗೆ ಬಾಧ್ಯತೆಯು ಸಿಗುತ್ತಿತ್ತು. ಮಾತಾಪಿತರರ ಶ್ರಾದ್ಧಗಳನ್ನು ಹಾಗೂ ಗೃಹಸ್ಥಾಶ್ರಮದ ಕರ್ತವ್ಯಗಳನ್ನು ಆಚರಿಸಲು ವಿವಾಹವಾಗುವುದು ಅವಶ್ಯಕವಿತ್ತು. ಕಿರಿಯನು ಮೊದಲು ವಿವಾಹವಾಗುವುದೆಂದರೆ ಹಿರಿಯನ ಸಾಮಾಜಿಕ ಕೌಟುಂಬಿಕ ಹಾಗೂ ಧಾರ್ಮಿಕ ಅಧಿಕಾರವನ್ನು ಕಸಿದುಕೊಂಡಂತೆ ಆಗುತ್ತಿತ್ತು. ಅದರಿಂದ ಹಿರಿಯನಿಗಿಂತ ಮೊದಲು ವಿವಾಹವಾಗುವುದು ಪಾಪವೆನಿಸುತ್ತಿತ್ತು. ದ್ರೌಪದಿಯ ವಿಷಯದಲ್ಲಿ ಅವನೊಬ್ಬ (ಅರ್ಜುನ) ಅವಳನ್ನು ವಿವಾಹವಾದಲ್ಲಿ ಅವನ ಅಣ್ಣಂದಿರಿಗೆ ಇಂತಹ ಪ್ರತಿಷ್ಠ ರಾಜಮನೆತನದ ವಧುಗಳು ದೊರಕುವುದಲ್ಲಿ ಕಠಿಣವಿತ್ತು. ಅರ್ಜುನನು ಜಯಿಸಿದ ಕನ್ಯೆಯೊಡನೆ ಧರ್ಮರಾಜನ ವಿವಾಹವು ಸಾಧ್ಯವಿತ್ತು. ಅವರ ತಾತನ ಕಾಲದಲ್ಲಿ ಭೀಷ್ಮನು ತನ್ನ ಸಹೋದರರಿಗಾಗಿ ಕನ್ಯೆಯರನ್ನು ಜಯಿಸಿ ತಂದಿದ್ದನು. ದ್ರೌಪದಿಯ ಬಗ್ಗೆ ಮಾತುಕತೆ ನಡೆದಾಗ ಎಲ್ಲಾ ಅಣ್ಣತಮ್ಮಂದಿರ ದೃಷ್ಟಿಯು ಅವಳಲ್ಲಿಯೇ ನೆಟ್ಟಿತ್ತು. ಅವಳ ಬಗ್ಗೆ ಎಲ್ಲರಿಗೂ ಅಭಿಲಾಷೆ ಉಂಟಾಗಿತ್ತೆಂದು ಮಹಾಭಾರತಕಾರರು ಒಂದು ಶ್ಲೋಕದಲ್ಲಿ ಹೇಳಿಯೇಬಿಟ್ಟಿದ್ದಾರೆ. ಈ ಸಂಗತಿಯು ಕುಂತಿಯ ಅವಲೋಕನೆಯಿಂದ ಪಾರಾಗಿರಲಿಕ್ಕಿಲ್ಲ. ಅವಳ ಜಾಣತನದಿಂದ ಮತ್ತು ವ್ಯಾಸರ ವಾಕ್‌ಚಾತುರ್ಯದಿಂದ ಎಲ್ಲಾ ಅಡಚಣೆಗಳು ದೂರಾಗಿ ದ್ರೌಪದಿಯು ಐವರ ಪತ್ನಿಯಾದಳು. ದ್ರೌಪದಿಯು ಕೇವಲ ಒಬ್ಬನ ಹೆಂಡತಿಯಾಗಿದ್ದಲ್ಲಿ ಉಂಟಾಗಬಹುದಾದ ಕಲಹದ ಮೂಲವೇ ಕಿತ್ತುಹೋಯಿತು. ಪಾಂಡವರ ಏಕತೆಯು ಅಭೇದ್ಯವಾಯಿತು. ಇದೇ ಮಾತನ್ನು ಕರ್ಣನು ದುರ್ಯೋಧನನಿಗೆ ಹೇಳಿದ್ದಾನೆ. ಲಾಕ್ಷಾಗೃಹದಿಂದ ಪಾರಾಗಿ ಪ್ರಕಟರಾಗಿದ್ದ ಪಾಂಡವರ ಬಗ್ಗೆ ಏನು ಮಾಡಬೇಕೆಂಬ ಚರ್ಚೆ ನಡೆದಾಗ ದುರ್ಯೋಧನನು, 'ಕುಂತಿಯ ಮಕ್ಕಳನ್ನು ಮಾದ್ರಿಯ ಮಕ್ಕಳಿಂದ ಬೇರ್ಪಡಿಸಬೇಕು. ಇಲ್ಲವೇ ದ್ರುಪದನಿಗೆ ಮತ್ತು ಅವನ ಮಕ್ಕಳಿಗೆ ದ್ರವ್ಯದ ಆಸೆ ಹುಟ್ಟಿಸಿ ಅವರು

ಪಾಂಡವರ ಕೈ ಬಿಡುವಂತೆ ಮಾಡಬೇಕು. ಅಥವಾ ಭೀಮನ ಬಲ ಕುಗ್ಗಿಸಬೇಕು' ಎಂದು ನುಡಿದನು. ಕರ್ಣನು ಈ ಎಲ್ಲವುಗಳ ಅಸಾಧ್ಯತೆಯನ್ನು ವಿವರಿಸಿ "ನಮ್ಮ ರಾಜಧಾನಿಯಲ್ಲಿ ಪಾಂಡವರು ಅನಾಥ ಬಾಲಕರಿದ್ದಾಗಲೇ ಸಾಧಿಸದಿದ್ದುದನ್ನು ಈಗ ಸಾಧಿಸುವುದು ತೀರಾ ಅಶಕ್ಯ. ಈಗ ಅವರ ಬೆಂಬಲಕ್ಕೆ ಇರುವ ಮಿತ್ರರು ಬೇರೆ ದೇಶದಲ್ಲಿದ್ದಾರೆ. ದ್ರುಪದ ಆರ್ಯವೃತ್ತಿಯ ರಾಜ, ಧನ ಲೋಭಿಯಲ್ಲ. ದ್ರುಪದನ ಪುತ್ರನ ಬಗ್ಗೆ ಹೇಳುವುದಾದರೆ ಅವನು ಪಾಂಡವರ ಭಕ್ತ. ದ್ರೌಪದಿ ಪಾಂಡವರೆಲ್ಲರ ಮಡದಿಯಾಗಿದ್ದಾಳೆ. ಇನ್ನು ಅವರಲ್ಲಿ ಒಡಕು ಹುಟ್ಟುವುದು ಎಂದಿಗೂ ಸಾದ್ಯವಿಲ್ಲ" ಹೀಗೆಂದು ನುಡಿದನು. ದ್ರೌಪದಿ ಜೀವಿಸಿರುವವರೆಗೂ ಅವರಲ್ಲಿ ಎಂದಿಗೂ ಒಡಕು ಹುಟ್ಟಲಿಲ್ಲ. ದ್ರೌಪದಿಯು ಮೃತಳಾದ ಮೇಲೆ ಅವರು ಬೇರೆಯಾದದ್ದು ದೇಹದಿಂದ ಮಾತ್ರ.

ಪಾಂಡವರನ್ನು ಆರೈಕೆಯಿಂದ ರಕ್ಷಿಸಿದವಳು ಕುಂತಿ. ಅವರನ್ನು ಸರ್ವನಾಶದಿಂದ ಉಳಿಸಿದವಳು ದ್ರೌಪದಿ. ದ್ರೌಪದಿಯ ಈ ಹಿರಿಮೆಯನ್ನು ಮಹಾಭಾರತದಲ್ಲಿ ಕರ್ಣನಿಂದಲೇ ನುಡಿಸಲಾಗಿದೆ. ಧರ್ಮನು ಜೂಜಿನಲ್ಲಿ ಸರ್ವಸ್ವವನ್ನು ಕಳೆದುಕೊಂಡ. ಸಭೆಯಲ್ಲಿ ಆಕೆಗೆ ಆಗಬಾರದಂತಹ ಅವಮಾನವಾಯಿತು. ನಡೆದಿದ್ದ ದುಷ್ಕೃತಿಗಳನ್ನು ತಡೆಯದಿದ್ದರೆ ಅದರ ಪರಿಣಾಮವು ಒಳ್ಳೆಯದಾಗಲಿಕ್ಕಿಲ್ಲವೆಂದು ಭಾವಿಸಿ ಧೃತರಾಷ್ಟ್ರನು ದ್ರೌಪದಿಗೆ ಮೂರು ವರಗಳನ್ನು ಬೇಡಲು ಹೇಳಿದನು. ಒಂದು ವರದಿಂದ ಅವಳು ಧರ್ಮನ ಬಿಡುಗಡೆ ಮಾಡಿಸಿದಳು. ಎರಡನೆಯ ವರದಿಂದ ಉಳಿದ ನಾಲ್ವರನ್ನು ಬಿಡಿಸಿದಳು. "ಪತಿಯಂದಿರು ಶಸ್ತ್ರಾಸ್ತ್ರಗಳೊಂದಿಗೆ ಮುಕ್ತರಾಗಿದ್ದಾರೆ, ನನಗೆ ಇಷ್ಟೇ ಸಾಕು" ಎಂದು ನುಡಿದು ದ್ರೌಪದಿಯು ಮೂರನೆಯ ವರವನ್ನು ಬೇಡಿಕೊಳ್ಳಲೇ ಇಲ್ಲ. ವರಗಳನ್ನು ಬೇಡುವ ಅವಳ ರೀತಿ ಅಭಿಷಿಕ್ತರಾಜನೆಂದು ಧರ್ಮನನ್ನು ಮೊದಲು ಬಿಡುಗಡೆ ಮಾಡಿಸುವ ಅವಳ ತತ್ಪರತೆ, ಮಿಕ್ಕವರಿಗೆ ಶಸ್ತ್ರಾಸ್ತ್ರ ಸಹಿತ ಬಿಡುಗಡೆ ಮಾಡಿಸುವುದು, ಯಾವ ಹೆಚ್ಚಿನ ಆಸೆಯನ್ನು ಇಡದಿರುವುದು ಇವುಗಳಿಂದ ದ್ರೌಪದಿಯು ಸ್ವತಃ ಅಲ್ಲದೇ ಪಾಂಡವರನ್ನು ಕೂಡ ಅಪ್ರತಿಷ್ಠೆಯಿಂದ ಉಳಿಸಿದಳು. ಈ ಪ್ರಸಂಗವನ್ನು ಉಲ್ಲೇಖಿಸಿ ಕರ್ಣನು ನುಡಿದದ್ದನ್ನು ಗಮನಿಸುವಂತಹದಿದೆ. "ನಾನು ಲೋಕದಲ್ಲಿ ರೂಪಸಂಪನ್ನೆಯರ ಬಗ್ಗೆ ಕೇಳಿದ್ದೇನೆ. ಆದರೆ ದ್ರೌಪದಿಯ ಈ ಕೃತಿಯು ವರ್ಣನಾತೀತವಾಗಿದೆ. ಕೌರವ ಪಾಂಡವರು ಕೋಪದಿಂದ ಸಿಡಿಮಿಡಿಯಾಗಿದ್ದರು. ಈ ಕ್ರೋಧಾಗ್ನಿಯಲ್ಲಿ ಏನೆಲ್ಲ ಸಂಭವಿಸಬಹುದಿತ್ತೊ ! ಆದರೆ ಈ ದ್ರೌಪದಿಯು ಶಾಂತಿಯನ್ನು ಸ್ಥಾಪಿಸಿದಳು. ಅವಮಾನದ ಕಡಲಿನಲ್ಲಿ ಮುಳುಗಿದ ಪಾಂಡವರನ್ನು ಆಳವಾದ ಸಮುದ್ರದಲ್ಲಿ ಹೊಯ್ದಾಡುವ ಒಂದು ದೋಣಿಯಂತೆ ದ್ರೌಪದಿಯು ಸುಖರೂಪವಾಗಿ ದಡಕ್ಕೆ ತಂದು ಮುಟ್ಟಿಸಿದಳು." ಓರ್ವ ಹೆಂಗಸಿನಿಂದ, ತಮ್ಮ ಪ್ರತಿಷ್ಠೆಯು ಉಳಿಯಿತು ಎಂಬ ಮಾತು ಭೀಮನಿಗೆ ಸಹಿಸಲಿಲ್ಲ. ಪಾಂಡವರನ್ನು ರೇಗಿಸುವ ಉದ್ದೇಶವಿದ್ದರೂ ಕರ್ಣನ ಈ ಹೇಳಿಕೆಯು ಸುಳ್ಳಿರಲಿಲ್ಲ. ಪಾಂಡವರನ್ನು, ಬಾಲ್ಯದಲ್ಲಿ ಕುಂತಿ

ರಕ್ಷಿಸಿದಳು. ಮುಂದೆ ದ್ರೌಪದಿ ರಕ್ಷಿಸಿದಳು. ದ್ರೌಪದಿ ಸ್ಥಿರವಾಗಿರುವವರೆಗೆ ಪಾಂಡವರು ಸ್ಥಿರವಾಗಿದ್ದರು. ಅವಳು ಕುಸಿದಾಗ ಧರ್ಮನ ಹೊರತು ಎಲ್ಲರೂ ಕುಸಿದರು.

ದ್ರೌಪದಿಯ ಮತ್ತು ಸೀತೆಯ ವನವಾಸಗಳಲ್ಲಿ, 'ವನವಾಸ'ವೆಂಬ ಶಾಬ್ದಿಕ ಸಾಮ್ಯವಿದೆಯೆ ಹೊರತು ಬೇರೆ ಯಾವ ಸಾಮ್ಯವೂ ಇಲ್ಲ. ದ್ರೌಪದಿಯ ವನವಾಸವು ಪತಿಯ ಜೂಜಿನ ಹವ್ಯಾಸದಿಂದ ಪರಿಣಮಿಸಿತು. ವೈರಿಗಳಿಗೆ ಒಳಸಂಚಿನಿಂದ ಜಯ, ಪತಿಯ ವ್ಯಸನಾಧೀನತೆ ಇವೆಲ್ಲವುಗಳ ಪರಿಣಾಮವೆಂದರೆ ಈ ವನವಾಸವಾಗಿತ್ತು. ದ್ಯೂತದಿಂದ ಶಕ್ಯವಾದಲ್ಲಿ ಪಂಚನದಿಗಳ ಪ್ರದೇಶವನ್ನು ಆತನು ಯಾವ ರೀತಿ ಪಡೆಯುವವನಿದ್ದನೋ ಅದೇ ತಿಳಿಯದು. ಸೀತೆಯ ವನವಾಸವೆಂದರೆ ರಾಮನ ಧ್ಯೇಯಜೀವನದ ಪರಮೋಚ್ಚ ಬಿಂದುವಾಗಿತ್ತು. ಅವನ ವನವಾಸದಿಂದ ತನ್ನ ಮಗನಿಗೆ ರಾಜ್ಯವನ್ನು ಕೊಡಿಸುವ ಕೈಕೇಯಿಯ ಹಂಚಿಕೆಯು ವಿಫಲವಾಯಿತು. ರಾಮನ ರಾಜ್ಯಾಭಿಷೇಕವು ಇನ್ನಷ್ಟು ಭದ್ರವಾಯಿತು. ಭರತನ ರಾಜ್ಯತ್ಯಾಗದಿಂದ ರಾಮನ ವನವಾಸದ ವ್ಯಾವಹಾರಿಕ ಅವಶ್ಯಕತೆಯು ಉಳಿದಿರಲಿಲ್ಲ. ಕೇವಲ ತಂದೆಗೆ ಕೊಟ್ಟ ವಚನಕ್ಕಾಗಿ ಆತನು ವನವಾಸವನ್ನು ಅನುಸರಿಸಿದನು. ಪಾಂಡವರ ವನವಾಸ ಮಾತ್ರ ತಪ್ಪುವಂತಿರಲಿಲ್ಲ. ಕೌರವರ (ಶತ್ರುಗಳ) ರಾಜಧಾನಿಯಲ್ಲಿ ಹಿರಿಯರೆದುರಿನಲ್ಲಿ ಮುಚ್ಚು ಮರೆಯಿಲ್ಲದೇ ಪಣವನ್ನು ತೊಟ್ಟಿದ್ದರು. ಅದರಂತೆ ವರ್ತಿಸದ ವಿನಾ ಬೇರೆ ದಾರಿಯೇ ಇರಲಿಲ್ಲ. ವನವಾಸದ ಪ್ರಾರಂಭದಲ್ಲಿ ದ್ರುಪದ ಪುತ್ರ ಮತ್ತು ಕೃಷ್ಣ, ಪಾಂಡವರನ್ನು ಭೇಟಿಯಾಗಲು ಬಂದಿದ್ದರು. ಆಗ ನಡೆದುಹೋದ ಸಂಗತಿಗಳ ಬಗ್ಗೆ ಖೇದ ಪ್ರದರ್ಶಿಸುವ ಹೊರತು ಬೇರೆ ಏನೂ ಮಾಡುವಂತಿರಲಿಲ್ಲ. ಆ ಕಾಲಕ್ಕೆ ಯುದ್ಧಸನ್ನಾಹರಾಗಿದ್ದರೆ ಯಶಕ್ಕೆ ಶಾಶ್ವತ ಕಳಂಕ ಉಂಟಾಗುತ್ತಿತ್ತು. ಬಹುಶಃ ಮಿತ್ರರು ಸಿಗುತ್ತಿರಲಿಲ್ಲ. ಪಾಂಡವರು ಸತ್ಯಪ್ರತಿಜ್ಞರಾಗಿರುವುದು ಕೇವಲ ಧ್ಯೇಯಕ್ಕಾಗಿರದೇ ಸಂಪೂರ್ಣವಾಗಿ ತೋರಿಕೆಗೆ ಎಂದೆನಿಸಬಹುದಿತ್ತು.

ಪಾಂಡವರ ರಾಜ್ಯಪ್ರಾಪ್ತಿಯಲ್ಲಿ ದ್ರೌಪದಿಯು ಯಾವ ರೀತಿಯಲ್ಲಿ ಕಾರಣಳಾಗಿದ್ದಳೋ, ಅವರ ರಾಜ್ಯ ಕಳೆಯುವುದರಲ್ಲಿಯೂ ಅವಳ ಪಾಲು ಇತ್ತು. ಅವರ ವನವಾಸವೆಂದರೆ ಅವಳ ವನವಾಸವೇ ಆಗಿತ್ತು. ಅವಳು ನೆರಳಿನಂತೆ ಪಾಂಡವರನ್ನು ಹಿಂಬಾಲಿಸಿದಳೆಂತಲ್ಲ, ಪತಿಯಂದಿರ ವೈಭವಕ್ಕೆ ಹಾಗೂ ಹಿರಿಮೆಗೆ ಅವಳು ಹಕ್ಕುದಾರಳಿದ್ದಂತೆ ಅವರ ಕಷ್ಟ ಸುಖಗಳಲ್ಲಿ, ಮಾನಹಾನಿಯಲ್ಲಿ ಪಾಲುಗಾರಳಿದ್ದಳು. ಪಾಂಡವರ ಇತರ ಪತ್ನಿಯರು ಮಕ್ಕಳನ್ನು ಕರೆದುಕೊಂಡು ತಮ್ಮ ತಮ್ಮ ತವರುಮನೆಗೆ ಹೊರಟುಹೋದರು. ದ್ರೌಪದಿಯು ತನ್ನ ಮಕ್ಕಳನ್ನು ಮಾತ್ರ ತವರುಮನೆಗೆ ಕಳುಹಿಸಿದಳು. ಅವರ ಶಿಕ್ಷಣವು ಸಾಗಬೇಕಿತ್ತು. ಅವರನ್ನು ಕಾಡಿನಲ್ಲಿ ಜೊತೆಯಲ್ಲಿಟ್ಟುಕೊಂಡು ನಡೆಯುವಂತಿರಲಿಲ್ಲ. ಅವಳು ಸಹಿಸುತ್ತಿದ್ದ ಯಾತನೆಗಳ ವರ್ಣನೆಯು ಆಗಾಗ್ಗೆ ಬಂದಿದೆ. ಬಂದದ್ದನ್ನೆಲ್ಲಾ ತೆಪ್ಪಗೆ ಅನುಭವಿಸುವ ಸ್ವಭಾವವು ಅವಳದ್ದಿರಲಿಲ್ಲ. ದ್ರೌಪದಿಯು ಲಟಲಟನೆ ಬೊಟ್ಟು ಮುರಿದಳು. ಬೈಗಳ, ಶಾಪಗಳ ಮಳೆ ಸುರಿಸಿದಳು. ಕ್ರೋಧದಿಂದ ಸಿಡಿಮಿಡಿಗೊಂಡಳು. ಧೃಷ್ಟದ್ಯುಮ್ನ

ಮತ್ತು ಕೃಷ್ಣ ಕಾಡಿನಲ್ಲಿ ಅವರ ಭೇಟಿಗೆ ಬಂದಾಗ, ದ್ರೌಪದಿಯು ಧಾರಾಕಾರವಾಗಿ ಸುರಿಯುತ್ತಿರುವ ಕಂಬನಿಗಳನ್ನು ಒರೆಸುತ್ತಾ ಸಿಟ್ಟಿನಿಂದ ಅಂದಳು, "ನನಗಾಗಿ ಪತಿ, ಸಹೋದರ, ತಂದೆ, ಮಗ ಯಾರೊಬ್ಬರೂ ಇಲ್ಲ. ಇದ್ದಿದ್ದಾದರೆ ನನ್ನ ಈ ಅಪಮಾನವನ್ನು ಅವರು ಎಂದಿಗೂ ಸಹಿಸುತ್ತಿರಲಿಲ್ಲ. ದ್ರೌಪದಿಯು ಇಷ್ಟಕ್ಕೆ ತಡೆಯಲಿಲ್ಲ. ಎಲ್ಲರೂ ಭೇಟಿಯಾಗಿ ಹೋದನಂತರ ಪುನಃ ಅದೇ ವಿಷಯ ಪ್ರಸ್ತಾಪಿಸಿ, ಕೌರವರ ಮುಯ್ಯನ್ನು ತೀರಿಸಲು ಧರ್ಮರಾಜನನ್ನು ಕೆರಳಿಸಲು ಪ್ರಯತ್ನಿಸಿದಳು. ಆದರೆ ಅದು ಸಾಧ್ಯವಾಗಲಿಲ್ಲ. ವನವಾಸದಲ್ಲಿದ್ದುದ್ದಕ್ಕಾಗಿ ಗೃಹಿಣಿ ಪದದ ಹೊಣೆಗಾರಿಕೆಯು ಅವಳಿಗೆ ತಪ್ಪಲಿಲ್ಲ. ಧರ್ಮರಾಜನ ಪುರೋಹಿತನು ಅವರ ಜೊತೆಯಲ್ಲಿಯೇ ಇದ್ದನು. ನೂರಾರು ಜನರು, ಅದರಲ್ಲೂ ವಿಶೇಷವಾಗಿ ಬ್ರಾಹ್ಮಣರು ಅವರ ಬಳಿ ಬಂದು ಅತಿಥಿ ಸತ್ಕಾರವನ್ನು ಪಡೆದು ಹೋಗುತ್ತಿದ್ದರು. ದ್ರೌಪದಿಯು ಬೆಳಗಿನಿಂದ ರಾತ್ರಿಯವರೆಗೆ ದುಡಿಯುತ್ತಿದ್ದಳು. ಶ್ರಮಪಡುತ್ತಿದ್ದಳು. ಅದರ ವರ್ಣನೆಯು ಸತ್ಯಭಾಮ ದ್ರೌಪದಿಯ ಸಂವಾದದಲ್ಲಿ ಬಂದಿದೆ.

ವನವಾಸದಲ್ಲಿಯೂ ಪ್ರತಿಷ್ಠಿತ ರಾಜನ ಮಗಳು, ಸೊಸೆ ಮತ್ತು ಹೆಂಡತಿ ಎಂಬ ತ್ರಿವಿಧ ಹೊಣೆಗಾರಿಕೆಯು ಅವಳಿಗೆ ತಪ್ಪಲಿಲ್ಲ. ಅಭ್ಯಾಗತರ ಸೇವೆ ಮಾಡುವುದು ಧ್ಯೇಯದ ಭಾಗವಾದರು ಆ ಸೇವೆಯ ಹಿಂದೆ ರಾಜಕಾರಣವು ವ್ಯವಹಾರವೂ ಅಡಗಿತ್ತು. ಧರ್ಮನು ಆಚರಿಸುತ್ತಿದ್ದ ಅನುಷ್ಠಾನಗಳು ಮತ್ತು ಬ್ರಾಹ್ಮಣರ ಸೇವೆಯು ಈಗಿನ ಕಾಲದಲ್ಲಿ ಅರ್ಥಹೀನವೆನಿಸಿದರೂ ಆ ಕಾಲದಲ್ಲಿ, ಈ ವಿಷಯದಲ್ಲಿ ಎಲ್ಲರ ದೃಢನಂಬಿಕೆ ಇತ್ತು. ಇದೆಲ್ಲವನ್ನು ದ್ರೌಪದಿಯು ನೋಡಿಕೊಳ್ಳಬೇಕಾಗಿತ್ತು. ಅದರಲ್ಲಿ ಕೊರತೆ ನ್ಯೂನತೆಗಳನ್ನು ತೋರಿಸುವಂತಿರಲಿಲ್ಲ.

ಈ ವನವಾಸದಲ್ಲಿ ಅರಮನೆಯಲ್ಲಿ ದೊರಕುವಷ್ಟು ಏಕಾಂತವು ಸಾಧ್ಯವಿರಲಿಲ್ಲ. ಅಷ್ಟೊಂದು ಐಶ್ವರ್ಯವು ಇರದಿದ್ದರು, ಬರಹೋಗುವವರ, ಆಶ್ರಿತರ ಓಡಾಟವು ಇದ್ದೇ ಇತ್ತು. ಇಷ್ಟೇ ಅಲ್ಲದೆ ಬರ ಹೋಗುವ ಋಷಿಗಳ, ಬೇಜಾರು ಹುಟ್ಟಿಸುವ ಕಥೆಗಳನ್ನು ಕೇಳಬೇಕಾಗುತ್ತಿತ್ತು. ಅವಳು ಸದಾ ಖಿನ್ನಳಾಗಿರುತ್ತಿದ್ದಳು ಎಂಬುದಕ್ಕೆ ಅಲ್ಲಲ್ಲಿ ಅನೇಕ ಉಲ್ಲೇಖಗಳಿವೆ. ಕೃಷ್ಣನು ಹಿಂದಿರುಗುವಾಗ ದ್ರೌಪದಿಗೆ ಹೇಳಿದ– "ತಂಗಿ, ಈ ಎಲ್ಲಾ ಅಪಮಾನದ ಸೇಡು ತೀರುವುದು". ಸತ್ಯಭಾಮೆಯು ಅವಳನ್ನು ಅಪ್ಪಿಕೊಂಡು, "ದ್ರೌಪದಿಯೇ! ಅಳಬೇಡ ನಿನ್ನನ್ನು ನೋಡಿ ಹಾಸ್ಯಮಾಡಿದ ಕೌರವ ಸ್ತ್ರೀಯರು ಅಳುತ್ತಿರುವುದನ್ನು ನೀನು ನೋಡುವೆ ! ನಿರಾತಂಕವಾದ, ಶತ್ರುರಹಿತವಾದ, ರಾಜ್ಯೋಪಭೋಗವನ್ನು ಪಡೆಯುವೆ ! ಸ್ವಲ್ಪ ಸಹನೆಮಾಡು" ಎಂದಳು. ವನವಾಸದಲ್ಲಿ ದ್ರೌಪದಿಗೆ ಗಳಿಗೆಯ ಪುರಸತ್ತು ಸಿಗದೇ ಇದ್ದುದು ಒಂದು ರೀತಿಯಲ್ಲಿ ಒಳ್ಳೆಯದೇ ಇತ್ತು. ಇಲ್ಲದಿದ್ದರೇ ದ್ರೌಪದಿಯು ದ್ಯೂತಮಾಡಿದ ದಿನಗಳನ್ನು ನೆನೆನೆನೆದು ಕೊರಗುತ್ತಿದ್ದಳು.

ಸೀತೆಯ ವನವಾಸದಲ್ಲಿ ಯಾವ ತರಹದ ವೈರತ್ವವೂ ಕೊರಗೂ ಇರಲಿಲ್ಲ. ಹನ್ನೆರಡು ವರ್ಷಕ್ಕಿಂತ ಹೆಚ್ಚಿನ ಕಾಲವು ಪ್ರಣಯಾತಿರೇಕದಲ್ಲಿಯೇ ಕಳೆಯಿತು. ಅಯೋಧ್ಯೆಯಲ್ಲಿ ಅವಳು

ಯುವರಾಜ್ಞಿಯಾಗುವವಳಿದ್ದಳು. ದಾಸದಾಸಿಯರ ವಿಪುಲತೆ ಇತ್ತು. ಮಾವ, ಮೂರುಜನ ಅತ್ತೆಯಂದಿರು, ಮೊದಲಾದ ಹಿರಿಯರಿದ್ದರು, ಅನಿರ್ಬಂಧ ಪ್ರಣಯಕ್ಕೆ ಅವಕಾಶವಿರಲಿಲ್ಲ. ಪಟ್ಟಣವಾಸಿಯವರಿಗೆ ಕಾಡಿನ ಬಗ್ಗೆ ಇರುವ ಮನೋಹರ ಕಲ್ಪನೆಯ ಸ್ವಪ್ನ ಸೃಷ್ಟಿಯ ಈ ವನವಾಸವಿತ್ತು. ಅಲ್ಲಿ ಜಿಂಕೆಗಳಿದ್ದವು, ಹಂಸಪಕ್ಷಿಗಳಿದ್ದವು. ಗೋದಾವರಿಯ ಪ್ರಶಾಂತ ಪ್ರವಾಹ ಹರಿಯುತ್ತಿತ್ತು. ದೂರದವರೆಗೆ ಹರಡಿದ ನದಿಯ ಪಾತ್ರವಿತ್ತು. ಅಲ್ಲೊಂದು ಇಲ್ಲೊಂದು ಋಷಿಗಳ ವಸತಿ ಸ್ಥಾನಗಳಿದ್ದವು. ಒಮ್ಮೊಮ್ಮೆ ರೋಮಾಂಚನಗಳನ್ನೆಬ್ಬಿಸುವ ಕ್ರೂರ ಶ್ವಾಪದಗಳೂ ರಾಕ್ಷಸರೂ ಕಾಣುತ್ತಿದ್ದರು. ಅವಮಾನದ ಕೊರಗು ಅಲ್ಲಿ ಇರಲಿಲ್ಲ. ಮಕ್ಕಳ ವಿರಹವಿರಲಿಲ್ಲ. ಅತಿಥಿಗಳ ಗೊಂದಲವಿರಲಿಲ್ಲ. ಇಂತಹ ಸುಂದರವಾದ ಹಿನ್ನೆಲೆಯಲ್ಲಿ ಓರ್ವ ಮುಗ್ಧ ಬಾಲಿಕೆಯು ಪ್ರಣಯಿನಿಯಾಗಿ ರೂಪಗೊಂಡಳು. ವಾಲ್ಮೀಕಿಯು ರಾಮಾಯಣದ ಈ ಕಾಂಡದಲ್ಲಿ ತನ್ನ ಕಾವ್ಯ ಪ್ರತಿಭೆಯನ್ನು ಸುರಿದಿದ್ದಾನೆ. ವನವಾಸದ ಈ ಕಾಲವು ಬಹಳ ರಮ್ಯವಾಗಿತ್ತು. ಆದ್ದರಿಂದಲೇ ಮುಂದೆ ಸೀತೆಗೆ ಆದ ಬಯಕೆಗಳು ಕೂಡ ವನವಿಹಾರದವೇ ಇದ್ದವು.

ವನವಾಸದ ನಂತರದ ಅಜ್ಞಾತವಾಸವು ದ್ರೌಪದಿಗೆ ತೀರಾ ಅಸಹ್ಯವೆನಿಸಿತು. ಅರಣ್ಯದಲ್ಲಿ ಅವಳು ಪಾಂಡವರ ಪತ್ನಿ. ಒಂದು ಸಮಯದ ರಾಣಿಯೆಂದು ಇದ್ದಳು. ದ್ಯೂತದ ಸಮಯದಲ್ಲಿ ಅವಳು ತನ್ನ ಬಿಡುಗಡೆಯನ್ನು ಯಾವ ದಾಸ್ಯತ್ವದಿಂದ ಮಾಡಿಕೊಂಡಿದ್ದಳೋ ಅದೇ ದಾಸ್ಯತ್ವವು ಈ ಅಜ್ಞಾತವಾಸದಲ್ಲಿ ಅವಳ ಪಾಲಿಗೆ ಬಂದಿತು. ಆಗಿನಂತಹ ಮಾನಹಾನಿಯ ಪ್ರಸಂಗ ಒದಗುವ ಸಂಭವವಿತ್ತು. ಸೀತೆಗೆ ದುಃಖದಲ್ಲಿ ದಿನಗಳೆಯಬೇಕಾಯಿತು. ಆದರೆ ರಾವಣನ ಬಲಾತ್ಕಾರದ ಭಯವು ಅವಳಿಗಿರಲಿಲ್ಲ. ಅವಳನ್ನು ಸುತ್ತುವರೆದು ಇದ್ದ ರಾಕ್ಷಸಿಣಿಯರು ಅಕರಾಳ ವಿಕರಾಳವಾಗಿದ್ದರು. ಅವರು ಸೀತೆಗೆ "ನಾವು ನಿನ್ನನ್ನು ತಿಂದು ಬಿಡುವೆವು" ಅನ್ನುತ್ತಿದ್ದರು. ರಾವಣ ಸಂಪನ್ನನಾದ, ವಿದ್ವಾಂಸನಾದ ರಾಜನಿದ್ದ. ಅವನ ಬಳಿ ನರಭಕ್ಷಕರಾದ ರಾಕ್ಷಸಿಯರು ಇದ್ದುದ್ದು ಸೋಜಿಗ. ರಾಮರಾವಣರ ಸಂಬಂಧವು ಅದ್ಭುತವಾಗಿತ್ತು. ಕೋತಿ ಕರಡಿಗಳೆಂದರೆ ರಾಮನ ಸೇನೆ. ಹಾಗೆಯೇ ರಾಕ್ಷಸರೆಂದರೆ ರಾವಣನ ಸೇನೆ. ರಾಮಾಯಣದ ಸಮಗ್ರ ಕಥೆಯೇ ರಮ್ಯ ಅದ್ಭುತ, ಲೋಕೋತ್ತರವಾಗಿದೆ. ರಾಮ ಆದರ್ಶಪುರುಷ. ಸೀತೆ ಆದರ್ಶ ಸ್ತ್ರೀ. ರಾಮ ಪಿತೃಭಕ್ತ, ಸತ್ಯಪರಾಯಣ, ಏಕಪತ್ನೀವ್ರತಸ್ಥನು. ಅವನು ಶೂರನಾಗಿದ್ದನೆಂದು ತೋರಿಸುವುದಕ್ಕೆ ಯುದ್ಧದ ಅವಶ್ಯಕತೆಯನಿಸಿರಬೇಕು. ಕಥೆಯ ನಾಯಿಕೆ ಸಂಕಟದಲ್ಲಿ ಸಿಲುಕಬೇಕು. ನಾಯಕನು ಅವಳ ಬಿಡುಗಡೆ ಮಾಡಬೇಕು. ಧೀರೋದಾತ್ತನಾದ ನಾಯಕ, ಸಾಧ್ವಿ ನಾಯಿಕೆ, ಪ್ರಣಯದ ವೈವಿಧ್ಯತೆ, ನೂತನ ಪ್ರಣಯ, ಪ್ರೌಢೆಯ ಪ್ರಣಯ, ಆನಂತರ ವಿರಹ, ಪ್ರೇಮ, ವಿರಹದ ವರ್ಣನೆ, ಎಲ್ಲವೂ ಸಂಸ್ಕೃತ ಕಾವ್ಯ ಪರಂಪರೆಗೆ ಅನುರೂಪವಾಗಿ ಇದ್ದವು. ಯುದ್ಧವೂ ಅನುರೂಪವೇ ! ಇಷ್ಟೊಂದು ಯುದ್ಧವಾದರೂ ಅದರ ಸಂಬಂಧವು ಅಯೋಧ್ಯಾನಗರದೊಡನೆ ಇರಲಿಲ್ಲ. ಅಯೋಧ್ಯಾ ನಗರವು ರಾಮನು ರಾಜನಾಗುವ

ಪ್ರತೀಕ್ಷೆಯಲ್ಲಿತ್ತು. ಆ ಸಮಯ ಬಂದಾಗ ರಾಮನಿಗೆ ರಾಜ್ಯ ದೊರಕಿತು. ಬಂಧು ಬಂಧುಗಳು ಭೇಟಿಯಾದರು. ಪುತ್ರರು ತಾಯಂದಿರನ್ನು ಭೇಟಿಯಾದರು. ಸೊಸೆಯು ಅತ್ತೆಯಂದಿರನ್ನು ಭೇಟಿಯಾದಳು. ಯುದ್ಧದ ಬಿಸಿಯು ಅಯೋಧ್ಯೆಗೆ ತಾಗಲಿಲ್ಲ. ಅದು ಕಥೆಯಲ್ಲಿಯೇ ಉಳಿಯಿತು.

ದ್ರೌಪದಿಗೆ ಒದಗಿದ ಆಪತ್ತುಗಳು, ಈ ಜಗತ್ತಿನ ಮನುಷ್ಯರು ತಂದು ಒಡ್ಡಿದ ಆಪತ್ತುಗಳು. ಹಾಗೇ ಪತಿಯಂದಿರು ತಮ್ಮ ನಿಷ್ಕ್ರಿಯತೆಯಿಂದ ಸ್ವಂತಕ್ಕೆ ಬರಮಾಡಿಕೊಂಡ ಆಪತ್ತುಗಳು; ಆದಿಪರ್ವದಲ್ಲಿ ಧೃತರಾಷ್ಟ್ರನ ಒಂದು ಹೇಳಿಕೆ ಇದೆ. ಅದರಲ್ಲಿ ಮತ್ತು ಆನಂತರದ ಬಹುಶಃ ಎಲ್ಲಾ ಪರ್ವಗಳಲ್ಲಿ ದ್ರೌಪದಿಯ ಮಾನಹಾನಿಯನ್ನು ವರ್ಣಿಸುವಾಗ **'ನಾಥವತೀ' 'ಅನಾಥವತ್'** ಎನ್ನುವ ಎರಡು ಶಬ್ದಗಳು ಬರುತ್ತವೆ. ಐವರವಳಿದ್ದರೂ ಅನಾಥಳಿದ್ದಂತೆ. ತವರಿನವರು ಧನಿಕರಿದ್ದರೂ ಇವಳು ಅನಾಥಳೇ! ಶೂರರಾದ ಬೆಂಬಲಿಗರಿದ್ದರೂ ಇವಳು ಅನಾಥೆ !! ಅವಳ ದೈನ್ಯದ ನಿಜವ್ಯಥೆಯು ಇದೇ ಆಗಿತ್ತು. ಅವಳ ಮಾನಹಾನಿಯನ್ನು ಪ್ರತಿ ಸಲ ಅವಳ ಪತಿಯರು, ಮಾವಂದಿರು ತೆಪ್ಪಗೆ ನೋಡುತ್ತಿದ್ದರು. ಪ್ರತೀಕಾರ ಮಾಡಲು ಅವರು ಅಸಮರ್ಥರಾಗಿದ್ದರು. ಒಂದು ಮಾನಹಾನಿಯ ಪ್ರಸಂಗದಿಂದ ಅವಳು ದೈವೀಚಮತ್ಕಾರದಿಂದ ಹೇಗೋ ಪಾರಾದಳು. ಎರಡನೆಯ ಪ್ರಸಂಗದಿಂದ ಭೀಮ ರಹಸ್ಯವಾಗಿ ಅವಳ ಬಿಡುಗಡೆ ಮಾಡಿದ. ವನಪರ್ವದಲ್ಲಿ ಜಯದ್ರಥನು ಅವಳನ್ನು ಅಪಹರಿಸಿದ ಪ್ರಸಂಗವು ಕಾವ್ಯತಂತ್ರಕ್ಕೆ ಹೊಂದಿಕೊಂಡಿತ್ತು. ಧರ್ಮ, ಭೀಮಾರ್ಜುನರು ಮನೆಯಲ್ಲಿ ಇರದ ಕಾಲಕ್ಕೆ ಅವಳು ಸೆರೆ ಹಿಡಿಯಲ್ಪಟ್ಟಳು. ಪತಿಯಂದಿರು ಅವನ ಬೆನ್ನಟ್ಟಿ ಅವಳನ್ನು ಬಿಡಿಸಿದರು.

ಸೀತೆಯ ಸಂದರ್ಭಗಳಲ್ಲಿ ಮಾತ್ರ ಕಾವ್ಯದ ಆದರ್ಶವನ್ನು ಎಲ್ಲೆಡೆಯೂ ಪಾಲಿಸಲಾಗಿದೆ. ಅರಣ್ಯದಲ್ಲಿ ಮೂವರು ಅಲೆದಾಡುತ್ತಿದ್ದಾಗ ಸೀತೆಯನ್ನು ಅಪಹರಿಸುವುದು ಸಾಧ್ಯವಿರಲಿಲ್ಲ, ಕೇವಲ ರಾಮನಲ್ಲದೇ ಒಬ್ಬ ಲಕ್ಷ್ಮಣನು ಸಹ ಸೀತೆಯನ್ನು ರಕ್ಷಿಸಲು ಸಮರ್ಥನಾಗಿದ್ದ. ಸೀತೆಯ ಹಟದಿಂದ ಅವರಿಬ್ಬರು ದೂರ ಹೋಗಿದ್ದಾಗ ಅವಳ ಅಪಹರಣದ ದೋಷವು ಸೀತೆಯದಿತ್ತೇ ವಿನಾ ರಾಮಲಕ್ಷ್ಮಣರದಲ್ಲ. ಸೀತೆಯ ದುಃಖಸ್ವರೂಪವೇ ಬೇರೆ. ಅವಳ ಮೇಲೆ ಆಪತ್ತುಗಳು ಒದಗುತ್ತವೆ. ಆದರೆ ಅವುಗಳ ನಿವಾರಣೆ ಆಗುತ್ತದೆ. ಪ್ರತಿಯೊಂದು ಆಪತ್ತಿನಿಂದ ಅವಳು, ರಾಮನು ಮತ್ತು ಅವರ ಜನರು ಸುಖರೂಪವಾಗಿ ಹೊರಗೆ ಬರುತ್ತಾರೆ. ಸಂಕಟಗಳಿಂದ ಹೆಚ್ಚು ಶ್ರೇಷ್ಠರಾಗಿ ದೈವೀಪುರುಷರಾಗಿ ಪರಿವರ್ತಿತರಾಗುತ್ತಾರೆ. ಆ ಸಂಕಟಗಳ ಯೋಜನೆಯೇ ಅದಕ್ಕಾಗಿ ಇದೆ.

ದ್ರೌಪದಿಯನ್ನು ಪೀಡಿಸುವ ಜನರು ಇದ್ದರು. ಅವಳಿಗೆ ಬೇಕಾದ ಹತ್ತಿರದವರೂ ಇದ್ದರು. ಈ ಎರಡು ಬಗೆಯ ಜನರಿಂದ ಪ್ರತಿಯೊಂದು ಪ್ರಸಂಗದಲ್ಲಿ ಅವಳ ದುಃಖದಲ್ಲಿ ಅಪಮಾನವು ಇಬ್ಬದಿಯಿಂದ ಸೇರುತ್ತಿತ್ತು. ದ್ವೇಷಾಗ್ನಿಗೆ ಒಂದೇ ಸಮನೆ ಇಂಧನವು ದೊರೆಯುತ್ತಿತ್ತು. ಯುದ್ಧವು ನಿಜ ಯುದ್ಧದಂತೆಯೇ ಪರಿಣಮಿಸಿತು. ಗೆದ್ದವರು ಮತ್ತು ಸೋತವರು ಸಮದುಃಖಿಗಳಾಗಿದ್ದರು. ದ್ರೌಪದಿಯ ಕರ್ತೃತ್ವವುಳ್ಳ ಮಕ್ಕಳು ಮಡಿದರು.

ತವರುಮನೆ ಹಾಳಾಯಿತು. ದುರ್ಯೋಧನ ಸಾಯುವಾಗ ನುಡಿದಂತೆ ಧರ್ಮರಾಜ, ವಿಧವೆಯರ ರಾಜ್ಯವನ್ನು ಆಳಬೇಕಾಯಿತು. ಈ ಮೊದಲು ಹಸ್ತಿನಾಪುರದ ರಾಜಮನೆತನವು ವೃದ್ಧ ರಾಜಪುರುಷರು, ಶಕ್ತಿಹುಮ್ಮಸ್ಸುಗಳು ತುಂಬಿತುಳುಕುವ ಯುವಕರು, ಚಿಕ್ಕ ಬಾಲಕರು, ಮೊಮ್ಮಕ್ಕಳು, ಮುಪ್ಪಾದ ಅಜ್ಜಿಯರು, ಮಾತೆಯರು, ಸೊಸೆಯರು, ಕನ್ಯೆಯರು, ಇವರೆಲ್ಲರಿಂದ ತುಂಬಿತ್ತು. ಧರ್ಮನು ಪಟ್ಟಕ್ಕೆ ಬಂದಾಗ ಎಲ್ಲವೂ ಹಾಳು ಕೊಂಪೆಯಾಗಿತ್ತು. ಮಕ್ಕಳ ವಿವಾಹವಾಗಿರಲಿಲ್ಲ. ಆ ಕಾರಣದಿಂದ ಸತಿಹೋಗುವ ಸೊಸೆಯಂದಿರು ಇರಲಿಲ್ಲ. ವಿಧವೆಯಾದ ಉತ್ತರೆ ಮತ್ತು ತಂದೆಯ ಮರಣದ ನಂತರ ಜನ್ಮತಾಳಿದ ಉತ್ತರೆಯ ಒಂದೇ ಒಂದು ಮಗು. ಇಷ್ಟೇ ತರುಣ ಜನರು ಉಳಿದಿದ್ದರು. ಕುಲವು ಪೂರ್ಣವಾಗಿ ಶತ್ರುರಹಿತವಾಗಿತ್ತು. ಆದರೆ ರಾಜ್ಯವನ್ನು ಜೋಡಿಸುವಾಗ ಉದ್ಭವಿಸಿದ ವೈರತ್ವವು ಅಳಿದಿರಲಿಲ್ಲವೆಂದು ಮಹಾಭಾರತದಲ್ಲಿ ಕಾಣುತ್ತದೆ. ಇಂದ್ರಪ್ರಸ್ಥವನ್ನು ಸ್ಥಾಪಿಸುವಾಗ ಖಾಂಡವ ವನವನ್ನು ಸುಡಬೇಕಾಯಿತು. ಆಗ ನೊಂದುಕೊಂಡ ತಕ್ಷಕನು ಅರ್ಜುನನ ಮೇಲೆ ಸೇಡನ್ನು ತೀರಿಸಿಕೊಳ್ಳಲು ಕಾಯುತ್ತಿದ್ದನು. ಅದು ಅರ್ಜುನನ ಮೇಲೆ ತೀರಿಸಲು ಸಾಧ್ಯವಾಗಲಿಲ್ಲವಾದರೂ, ಅರ್ಜುನನ ಮೊಮ್ಮಗನಾದ ಪರೀಕ್ಷಿತನ ಮೇಲೆ ತೀರಿಸಿಕೊಂಡನು. ವಿಜಯದ ಆನಂದವು ದೊರಕಲೇ ಇಲ್ಲ. ಆದರೆ ಕಪ್ಪುಮಸಿಯು ಮುಖಕ್ಕೆ ಅಂಟಿಕೊಂಡಂತಾಯಿತು. ಯುಗಪುರುಷನಾದ ಶ್ರೀಕೃಷ್ಣನ ಆಧಾರ, ಆಜನ್ಮವಾಗಿತ್ತು. ಆ ಕೃಷ್ಣನು ಕೂಡ ದುಸ್ಸಹ ರೀತಿಯಲ್ಲಿ ಮರಣ ಹೊಂದಿದನು. ಕೃಷ್ಣನ ಮತ್ತು ಆತನ ಸಮಗ್ರ ಹೆಸರಾಂತ ಯಾದವ ಕುಲದ ಹೃದಯದ್ರಾವಕ ಅಂತ್ಯವಾಯಿತು. ಮಹಾಭಾರತದ ಕೊನೆಯ ಅಂದರೆ ಒಬ್ಬ ದ್ರೌಪದಿಯ, ಪಾಂಡವರ ಅಥವಾ ಅವರ ಕುಲದ, ಜೀವಿತದ ಕೊನೆಯಾಗಿರದೇ ಅದು **"ಯುಗಾಂತ"**ವಾಯಿತು. ಈ ಯುಗಾಂತದ ಒಂದೊಂದು ಯಾತನೆಯನ್ನು ದ್ರೌಪದಿಯು ಅನುಭವಿಸಿದಳು. ಮಕ್ಕಳು ಕೊಲೆಗೀಡಾದಾಗ ಅವಳು ಕೊನೆಯ ಬಾರಿ ಅತ್ತಳು. ಕೊನೆಯ ಬಾರಿ ಹೃದಯದ ಕುದಿಯನ್ನು ಹೊರಗೆಡವಿದಳು. ಅನಂತರ ಅವಳ ನುಡಿಗಳು ಕೇಳಿಬರುವುದಿಲ್ಲ.

ದ್ರೌಪದಿಯ ಮೂಲಕ ಯುದ್ಧವಾಯಿತೆಂಬ ನಿರಾಧಾರ ಕಲ್ಪನೆಯು ಕೆಲವರದಿದೆ. ಮಹಾಭಾರತದ ಅನಂತರದ ಪುರಾಣದಲ್ಲಿ, ವಿಶೇಷತಃ ಜೈನ ಮಹಾಭಾರತದಲ್ಲಿ ಈ ವಿಚಾರವು ಪ್ರಾಮುಖ್ಯವಾಗಿದೆ. ಒಂದು ಅರ್ಥಹೀನ ಪುರಾಣದಲ್ಲಿ ಈ ರೀತಿಯ ಒಂದು ಶ್ಲೋಕವಿದೆ. "ಕೃತಯುಗದಲ್ಲಿ ರೇಣುಕೆಯು ಕೃತ್ಯೆ. ಸತ್ಯ ಯುಗದಲ್ಲಿ ಸೀತೆಯು ಕೃತ್ಯೆ, ದ್ವಾಪರಯುಗದಲ್ಲಿ ದ್ರೌಪದಿಯ ಕೃತ್ಯೆ ಮತ್ತು ಕಲಿಯುಗದಲ್ಲಿ ಮನೆ ಮನೆಗಳಲ್ಲಿ ಕೃತ್ಯೆಯರು ಇದ್ದಾರೆ." ಯಾವ ಸ್ತ್ರೀಯರ ದೆಸೆಯಿಂದ ಘೋರ ಸಂಗ್ರಾಮಗಳಾದವೋ, ರಕ್ತಪಾತವಾಯಿತೋ, ಅವರ ಉಲ್ಲೇಖವು ಅದರಲ್ಲಿದೆ. ಹೈಹಯನು ರೇಣುಕೆಯನ್ನು ಮತ್ತು ಹಸುವನ್ನು ಅಪಹರಿಸಿದನು. ಪರಶುರಾಮನು ಹೈಹಯರ ಜೊತೆಗೆ ಕಾದಾಡಿದ್ದು, ಅವರ ಪುಂಡಾಟಿಕೆಯ ಕಾರಣದಿಂದ; ಜಮದಗ್ನಿಯ ಸ್ವತ್ತಿನ ಹಸು ಮತ್ತು ರೇಣುಕೆಯನ್ನು ಅಪಹರಿಸಿದ್ದಕ್ಕಾಗಿ ; ಕೇವಲ ಸೀತೆಯ

ಕಾರಣದಿಂದಲ್ಲ. ರಾವಣನ ಜೊತೆ ನಡೆದ ಯುದ್ಧವು ಕೇವಲ ಸೀತೆಯ ಕಾರಣದಿಂದ ನಡೆಯಿತು. ಸೀತೆಯೇ ರಾಮ – ರಾವಣರ ಕದನಕ್ಕೆ ಕಾರಣಳಾಗಿದ್ದಳು. ದ್ರೌಪದಿಯು ಯುದ್ಧಕ್ಕೆ ಕಾರಣಳು, ಪ್ರಮುಖ ಕಾರಣಗಳಂತೂ ಇರಲೇ ಇಲ್ಲ. ಅಂಧನಾದ ಧೃತರಾಷ್ಟ್ರನು ಹಿರಿಯ ಪುತ್ರನಾಗಿದ್ದರೂ ಅವನನ್ನು ಬದಿಗಿಸಿರಿ ಪಾಂಡುವಿಗೆ ಪಟ್ಟಗಟ್ಟಿದ ದಿನವೇ ಯುದ್ಧದ ಬೀಜವನ್ನು ಬಿತ್ತಿದಂತಾಯಿತು. ಬಹು ಚಿಕ್ಕ ಪ್ರಾಯದಿಂದ ಪಾಂಡುಪುತ್ರರಲ್ಲಿ ಮತ್ತು ಧೃತರಾಷ್ಟ್ರ ಪುತ್ರರಲ್ಲಿ ಹಗೆತನವಿತ್ತು. ದೌಪ್ರದಿಯ ವಿವಾಹಪೂರ್ವದಲ್ಲಿಯೇ ಪಾಂಡವರನ್ನು ನಾಶಗೊಳಿಸುವ ಪ್ರಯತ್ನಗಳು ನಡೆದಿದ್ದವು. ಉದ್ಯೋಗ ಪರ್ವದಲ್ಲಿ ನಡೆದ ಒಳಸಂಚುಗಳಿಂದಲೂ ಈ ಸಂಗತಿಯು ಪ್ರಮುಖವಾಗಿ ಮನಸ್ಸಿನಲ್ಲಿ ಮೂಡುತ್ತದೆ. ಪಾಂಡವರು ತಮ್ಮ ಪಾಲನ್ನು ಕೌರವರ ಹತ್ತಿರ ಬೇಡುತ್ತಿದ್ದರು. ಪ್ರತೀಕಾರಕ್ಕಾಗಿ, ಪ್ರಚೋದಿಸುವ ನೆವದಿಂದಾದರೂ, ಇಲ್ಲವೆ ಗೈರುವಾಜಮಿ ಪಾಲನ್ನು ಬೇಡಿಯಾದರೂ ಒಟ್ಟಿನಲ್ಲಿ ದ್ರೌಪದಿಗಾದ ಅಪಮಾನದ ಸೇಡನ್ನು ತೀರಿಸಿಕೊಳ್ಳಬೇಕಾಗಿತ್ತು. ಹೇಗಾದರೂ ಮಾಡಿ ಪಾಂಡವರಿಗೆ ಯುದ್ಧವನ್ನು ಮಾಡಲೇಬೇಕಿತ್ತೆಂದು ಹೇಳಬಹುದು. ಆದರೆ ಧರ್ಮಾದಿಗಳ ಹೇಳಿಕೆಯನ್ನು ಗಮನಿಸಿದರೆ ಯುದ್ಧವಾಗದೇ ಪಾಲು ದೊರೆಯಬೇಕೆಂದಿತ್ತು ಎಂದು ಕಂಡು ಬರುತ್ತದೆ. ದ್ರೌಪದಿಯಂತೆಯೇ ಅವಮಾನದಿಂದ ಕುದಿಯುತ್ತಿದ್ದ ಭೀಮನಂಥವನು ಕೂಡ, "ಅವರಿಗೆ ಹೇಳಿ! ಸರ್ವನಾಶವನ್ನು ಎಳೆದುಕೊಳ್ಳಬೇಡಿರಿ ! ಧರ್ಮನು ಬೇಡುತ್ತಿದ್ದ ಎಲ್ಲವನ್ನು ಕೊಟ್ಟುಬಿಡಿ!" ಎಂದನು. ಕೃಷ್ಣನು ಈ ಮಾತಿನಿಂದ ವಿಸ್ಮಯಗೊಂಡು ನಕ್ಕು "ಎಂತಹ ಭೀಮನೋ ನೀನು ?" ಎಂದನು. ದ್ರೌಪದಿಯು ಮಾತ್ರ ಹೇಳುತ್ತಿದ್ದಳು– "ಕೃಷ್ಣನೇ, ನನ್ನ ಜಡೆಯನ್ನು ಯಾರು ಎಳೆದರೋ, ಯಾವ ಪಾಪೀ ಕೈಗಳು ನನ್ನ ಜಡೆಯನ್ನು ಮುಟ್ಟಿದವೋ ಅವರ ಬಗ್ಗೆ ಕನಿಕರ ತೋರಿಸಬೇಡಿರಿ". ಇದೇ ರೀತಿಯ ಹೇಳಿಕೆಯನ್ನು ಕುಂತಿಯು ಧರ್ಮನಿಗೆ ಹೇಳಿಕಳುಹಿಸಿದಳು. ಆದರೆ ಪಾಂಡವರು ಮತ್ತು ಅವರ ಪರವಾಗಿ ಕೃಷ್ಣನು ಯುದ್ಧವಾಗಬಾರದೆಂದು ಸಾಕಷ್ಟು ಪ್ರಯತ್ನಪಟ್ಟರು. ಕಂಗಾಲರು ಭಿಕ್ಷೆ ಬೇಡುವಂತೆ ಐದು ಗ್ರಾಮಗಳನ್ನು ಬೇಡಿದರು. "ಸೂಜಿಯ ಮೊನೆಯಡಿಯಷ್ಟು ಭೂಮಿಯನ್ನು ಕೂಡ ಕೊಡಲಾರೆ!" ಎಂದು ದುರ್ಯೋಧನ ಉತ್ತರಿಸಿದ. ಯುದ್ಧವು ಅನಿವಾರ್ಯವಾಯಿತು. ಅದು ನಡೆದಂತೆ ಮೊದಲಿನ ಸೇಡುಗಳು ತೀರಿಸಲ್ಪಟ್ಟವು. ಅದರಲ್ಲಿಯೇ ದ್ರೌಪದಿಯ ಸಂಬಂಧದ ಸೇಡನ್ನು ಭೀಮ ತೀರಿಸಿದ. ಕರ್ಣಾರ್ಜುನರ ವೈರತ್ವ, ಸ್ಪರ್ಧೆ, ಮೊದಲಿಂದಲೂ ಇತ್ತು. ಅವರ ಯುದ್ಧಕ್ಕೆ ಬೇರೆ ಯಾರೂ ಕಾರಣರಾಗಿರಲಿಲ್ಲ. ಭಾರತದಲ್ಲಿ ಅತಿ ಪ್ರಾಚೀನಕಾಲದಿಂದ ಪಿತ್ರಾರ್ಜಿತ ಆಸ್ತಿಯ ಪಾಲಿನ ಬಗ್ಗೆ ಏಕತ್ರ ಕುಟುಂಬಗಳಲ್ಲಿ ನಡೆದು ಬಂದ ವ್ಯಾಜ್ಯಗಳಂತೆ ಇದೊಂದು ದೊಡ್ಡ ಪ್ರಮಾಣದ ವ್ಯಾಜ್ಯವಾಯಿತು. ಅದು ದ್ರೌಪದಿಯ ಮೂಲಕವಲ್ಲ. ದ್ರೌಪದಿಗೆ ಯುದ್ಧವು ಬೇಕಿದ್ದರೂ ಪಿತೃಪ್ರಧಾನವಾದ ಭಾರತಿಯ ಸಂಸ್ಕೃತಿಯ ಪ್ರಾಮಾಣಿಕ ಅನುಚರರಾದ ಪಾಂಡವರು, ಹೆಂಡತಿಯು ಹೇಳಿಕೆಯಂತೆ ತಲೆದೂಗುವವರಿರಲಿಲ್ಲ. ಕೃಷ್ಣ ರಾಯಭಾರದ ಕಾಲಕ್ಕೆ ಕೃಷ್ಣ, ಕರ್ಣನಲ್ಲಿ ಒಡಕು

ಹುಟ್ಟಿಸುವುದಕ್ಕಾಗಿ ಆತನಿಗೆ ರಾಜ್ಯದ ಹಾಗೂ ದ್ರೌಪದಿಯ ಆಕರ್ಷಣೆಯನ್ನು ಸಹ ತೋರಿಸಿದನು. ಇಂತಹ ಕೀಳು ವಿಚಾರದ ಸುದ್ದಿಯು ದ್ರೌಪದಿಗೆ ಇರಲಿಕ್ಕಿಲ್ಲ. ಮಹಾಭಾರತದಲ್ಲಿ ಯಾವದೊಂದು ಭೂಮಿಕೆಯನ್ನು ಸಹ ಆದರ್ಶವಾಗಿ ಬಣ್ಣಿಸಲಾಗಿಲ್ಲ. ವಾಸ್ತವತೆಯ ಚಿತ್ರಣದಿಂದ, ಪ್ರತಿಯೊಬ್ಬನ ಸುಕೃತಿ, ದುಷ್ಕೃತಿಗಳ ಉಲ್ಲೇಖ ಬಂದಿದೆ. ದ್ರೌಪದಿಯ ಮನಸ್ಸಿನಲ್ಲಿ ಪಾಂಡವರ ಹೊರತು ಅನ್ಯರ ವಿಚಾರವು ಸುಳಿದಿದ್ದರೆ ಅದರ ಚರ್ಚೆಯು ಮಹಾಭಾರತದಲ್ಲಿ ಖಂಡಿತವಾಗಿ ಬರುತ್ತಿತ್ತು. ಕರ್ಣನತ್ತ ಅವಳು ಎಂದಿಗೂ ಕಣ್ಣೆತ್ತಿ ನೋಡಿರಲಿಲ್ಲ. ದ್ರೌಪದಿಯ ಕಾಲಕ್ಕೆ ಏನೋ ಕಾರಣದಿಂದ ಅಥವಾ ದುರ್ಯೋಧನನ ಬಗ್ಗೆ ಇದ್ದ ಪ್ರೀತಿ ವಿಶ್ವಾಸದಿಂದ ಕರ್ಣನು ಪಣವನ್ನು ಗೆಲ್ಲಲು ಪ್ರಯತ್ನವನ್ನು ಕೂಡ ಮಾಡಲಿಲ್ಲವೆಂದು ಮಹಾಭಾರತದ ಸಂಶೋಧಿತ ಆವೃತ್ತಿಯಿಂದ ಕಾಣುತ್ತದೆ. ಇಡೀ ಮಹಾಭಾರತದಲ್ಲಿ ಅವಳ ಮತ್ತು ಕರ್ಣನ ಸಂಬಂಧವೇ ಬರಲಿಲ್ಲ. ಕರ್ಣನ ಮೇಲೆ ಅವಳ ಮನಸ್ಸು ಹರಿಯಿತು ಎಂಬ ಕಥೆಯ ತೀರಾ ನಂತರ ಜೈನ ಪುರಾಣಗಳಲ್ಲಿ ಬಂದಿದೆ. ಆದರೆ ಮೂಲ ಮಹಾಭಾರತದಲ್ಲಿ ಈ ಕಥೆಯು ಇಲ್ಲ. ಮಹಾಭಾರತದಲ್ಲಿಯ ದ್ರೌಪದಿಯು ಚಡಪಡಿಸಿದಳು, ಬೆಂದಳು. ಆದರೆ ಕೊನೆಯವರೆಗೂ ಪತಿ–ಪರಾಯಣೆಯಾಗಿಯೇ ಉಳಿದಳು. ಅವಳ ಇಡೀ ಜೀವನದಲ್ಲಿ ಅವಳನ್ನು ಆಪಾದಿಸುವ ಸಂದರ್ಭವು ಉಂಟಾಗಲಿಲ್ಲ.

ಈ ತರಹದ ಸಂದರ್ಭ ಉಂಟಾಗಿ ಆಪಾದನೆಯು ಒದಗಿದ್ದು ಸೀತೆಯ ನಿಜವಾದ ದುಃಖವಿತ್ತು. ಮಹಾಭಾರತದಲ್ಲಿ ಹೇಳಿದ ರಾಮಕಥೆಯಲ್ಲಿ ರಾಮನು ಅಯೋಧ್ಯೆಗೆ ಮರಳಿದನು. ಎಲ್ಲರೂ ಪರಸ್ಪರರನ್ನು ಭೇಟಿಯಾದರು. ರಾಜ್ಯಾಭಿಷೇಕದ ನಂತರ ಎಲ್ಲರೂ ಸುಖವಾಗಿ ಬಾಳಿದರು, ರಾಮ ಅನೇಕ ಯಜ್ಞಗಳನ್ನು ಮಾಡಿದ. ಇಷ್ಟೇ ವರ್ಣನೆ ಇದೆ. ಸೀತಾತ್ಯಾಗದ ಸುದ್ದಿಯೇ ಅದರಲ್ಲಿಲ್ಲ. ಮಹಾಭಾರತದಲ್ಲಿಯ ಈ ಕಥೆ ಸಾವಿತ್ರಿಯ ಕಥೆ, ನಳರಾಜನ ಕಥೆ, ದ್ರೌಪದಿಯ ಮೇಲೆ ಕುಸಿದ ಆಪತ್ತುಗಳ ಸಂದರ್ಭಗಳಲ್ಲಿ ಹೇಳಲಾಗಿದೆ. ರಾಮನಿಂದ ತ್ಯಜಿಸಲ್ಪಟ್ಟದ್ದು, ಸೀತೆಯ ನಿಜವಾದ ಆಪತ್ತು. ಆ ಕಥೆಯ ಉಲ್ಲೇಖವು ಇರಲೇಬೇಕಾಗಿತ್ತು. ಆದರೆ ಅದು ಬಂದಿಲ್ಲ. ಆದ್ದರಿಂದ ಮೂಲ ರಾಮಾಯಣದಲ್ಲಿ ಈ ಸನ್ನಿವೇಶವು ಇರಲಿಕ್ಕಿಲ್ಲ. ಅದು ಏನೇ ಇದ್ದರೂ ಸೀತಾತ್ಯಾಗದ ಪ್ರಸಂಗವು ನಿಜವೆಂದು ಗ್ರಹಿಸಿದರೆ ಸೀತೆ ನಿಜವಾದ ಆಪತ್ತುಗಳನ್ನು ಜೀವನದ ಕೊನೆಕೊನೆಯಲ್ಲಿ ಅನುಭವಿಸಬೇಕಾಯಿತೆಂದು ಹೇಳಬಹುದು. ಈ ದುಃಖದ ವಿವರಣೆಯು ಸ್ವಲ್ಪಮಟ್ಟಿಗೆ ಸಂಸ್ಕೃತ ಕಾವ್ಯಾನುರೂಪವಾಗಿ ತೋರುತ್ತದೆ. ಶಾಕುಂತಲದಲ್ಲಿ ಕಲ್ಪಿಸಿದಂತೆ ವೃಥಾರೋಪದ ಹರಡುವಿಕೆ, ಅದರ ಪರಿಮಾರ್ಜನೆ, ಕೊನೆಯಲ್ಲಿ ಮಿಲನ ಈ ರೀತಿಯ ರಚನೆಯ ಕಥೆಗಳೇ ಇರುತ್ತಿದ್ದವು. ಆದರೆ ಸೀತಾ ತ್ಯಾಗದ ಕೊನೆ ಅವಳ ಆತ್ಮನಾಶದಲ್ಲಿ ಆಯಿತು. ಜನರಿಗೆ ಮನದಟ್ಟು ಮಾಡಿಕೊಡಲು ಇನ್ನೊಂದು ಅದ್ಭುತವನ್ನು ಮಾಡಿ ಸೀತೆಯು ಸುಖದಲ್ಲಿರಬಹುದಿತ್ತು. ಆದರೆ ಅವಳು ಹಾಗೆ ಮಾಡಲಿಲ್ಲ. ಇದರ ಕಾರಣಗಳು ಅನೇಕವಿರಬಹುದು. ಅವುಗಳ ವಿಚಾರವು ಅನಾವಶ್ಯಕ. ಸೀತೆಯು ನಾಶ ಹೊಂದಿದಳು.

ಅವಳ ಕೃತ್ಯವು ಅಖಿಲ ಭಾರತೀಯರ ಮನಸ್ಸನ್ನು ಸೂರೆಗೊಂಡಿತು. ಅವಳ ಮೇಲೆ ಈ ಆಪತ್ತನ್ನು ಕಲ್ಪಿಸುವುದರಲ್ಲಿ ಗ್ರಂಥಕಾರನ ಒಂದು ಉದ್ದೇಶವಿರಬೇಕೆಂದೆನಿಸುತ್ತದೆ. ರಾಮಾಯಣ ಕಥೆಯ ನಾಯಕ, ಸಕಲ ರೀತಿಯಲ್ಲಿ ಉತ್ತಮ ಪುರುಷ. ಅವನ ವರ್ಣನೆಯನ್ನು ಮರ್ಯಾದಾ ಪುರುಷೋತ್ತಮನೆಂದು ಮಾಡುವುದು. ನಾಯಕನು ಸಕಲ ಸಂಕಟಗಳನ್ನು ಎದುರಿಸಿದವನು ಎಂದಿದೆ. ಈ ಕಥೆಯಲ್ಲಿ ಇನ್ನೊಂದು ದಿವ್ಯಪ್ರಸಂಗವು ಜರುಗಬೇಕಾಗಿತ್ತು. ವೈಯಕ್ತಿಕ ಪ್ರೇಮ ಶ್ರೇಷ್ಠವೊ? ಪ್ರಜೆಗಳ ಇಚ್ಛೆ ಶ್ರೇಷ್ಠವೊ? ಎಂಬ ದ್ವಂದ್ವವನ್ನು ಯೋಚಿಸಿ, ರಾಜನೆಂದಮೇಲೆ ಪ್ರಜೆಗಳಿಗಾಗಿ ಬೇಕಾದ ಸ್ವಾರ್ಥತ್ಯಾಗವನ್ನು ಮಾಡಲಣಿಯಾಗಬೇಕು. "ರಾಮ ಅಂತಹ ರಾಜನಾಗಿದ್ದ" ಎಂಬುದನ್ನು ಈ ಪ್ರಸಂಗದಿಂದ ತೋರಿಸುವುದಿತ್ತು. ಆದರೆ ದುರ್ದೈವದಿಂದ ರಾಮ, ಅಂಗೀಕರಿಸಿದ ಮಾರ್ಗವು ಸರ್ವೋತ್ತಮವಾಗಿತ್ತೆಂದು ನಿರ್ವ್ಯಾಜವಾಗಿ ಗಣಿಸಲ್ಪಡಲಿಲ್ಲ. ಸ್ವಾರ್ಥತ್ಯಾಗವೆಂದರೆ ಒಂದು ನಿರಪರಾಧಿಗೆ ಬಗೆದ ಅನ್ಯಾಯವೇ? ರಾಮನಿಗೆ ರಾಜ್ಯವನ್ನು ತ್ಯಜಿಸಲು ಬರುತ್ತಿದ್ದಿಲ್ಲವೇ ? ಸೀತೆಯ ತ್ಯಾಗವು ಯೋಗ್ಯವಾಗಲಿಲ್ಲವೆಂದು ಕಾಳಿದಾಸ, ಭವಭೂತಿ ಮೊದಲಾದ ಮಹಾಕವಿಗಳಿಗೆ ಅನಿಸಿತ್ತು. ಈ ರೀತಿ, ಈ ಪ್ರಸಂಗವು ರಾಮನ ಯಶಸ್ಸಿಗೆ ಕುಂದಿನಂತಾಯಿತು ಮತ್ತು ಯಾವ ಸೀತೆಯು ರಾಮನ ನೆರಳಿನಂತೆ ಇದ್ದಳೋ ಅವಳಿಗೆ ಸ್ವತಂತ್ರ ವ್ಯಕ್ತಿಮತ್ವ, ಸ್ವತಂತ್ರ ದುಃಖ ಅಪಮಾನವು ದೊರಕಿ, ಅವೆಲ್ಲವುಗಳ ನಿರಾಕರಣೆ ಸ್ವತಂತ್ರವಾಗಿ ಮಾಡಲು ಅವಕಾಶವಾಯಿತು.

ಇಂಥ ಅನೇಕ ಪ್ರಸಂಗಗಳನ್ನು ದ್ರೌಪದಿಯು ಎದುರಿಸಿದಳು. ದ್ರೌಪದಿಯ ಸರ್ವ ದುಃಖಗಳು, ಅಪಮಾನಗಳು, ವಾಸ್ತವವಾಗಿದ್ದವು. ಅವುಗಳ ನಿರಾಕರಣೆ ಅಥವಾ ಅವುಗಳ ಹೆಚ್ಚಳವು ವ್ಯಾವಹಾರಿಕವಿತ್ತು. ಕೃತಕವಲ್ಲ. ಕಾವ್ಯ ಪ್ರತಿಭೆಗಾಗಿ ಸೇರಿಸಿದ್ದಲ್ಲ. ಸೀತೆಯು ಭೂಮಿಕನ್ಯೆ. ಪೃಥ್ವಿಯಿಂದ ಹೊರಬಂದಳು. ಆದರೆ ದ್ರೌಪದಿಯ ನಿಜವಾಗಿ ಭೂಮಿಕನ್ಯೆ. ಅವಳ ಅಸ್ತಿತ್ವವು ಭೂಮಿಯ ಮೇಲೆ ; ಅವಳ ಹೃದಯ ಮನಗಳು ಸಂಸಾರದಲ್ಲಿ, ತವರಿನಲ್ಲಿ, ಅತ್ತೆ ಮನೆಯಲ್ಲಿ, ಅರಮನೆಯಲ್ಲಿದ್ದವು. ಅವಳ ತೇಜಸ್ಸು, ಅವಳ ಸ್ವಾರ್ಥ ತ್ಯಾಗ, ಪತಿಪರಾಯಣತೆ, ಅವಳ ಸಕಲ ವರ್ತನೆ, ಆಗಿನ ದೇಶಕಾಲ–ಕುಲಗಳಿಗೆ ಅನುರೂಪವಾಗಿತ್ತು. ಅವಳು ಅಸಾಮಾನ್ಯಳಾಗಿದ್ದಳು. ಆದರೆ ಆ ಅಸಾಮಾನ್ಯತ್ವವು ಸಾಮಾನ್ಯರ ಪರಿಮಾಣದಿಂದ ಗೋಚರವಾಗುತ್ತಿತ್ತು.

ದ್ರೌಪದಿಯು ಹಾಗೂ ಸೀತೆಯು, ಇವರಿಂದ ನಡೆಯಬಾರದಂತಹ ಕೃತಿಗಳು ನಡೆದವು ಮತ್ತು ಅವುಗಳ ಬಗ್ಗೆ ಅವರಿಗೆ ತಕ್ಕ ಶಾಸ್ತಿಯು ಆಯಿತು. ತಮ್ಮನಿಗೆ ಸೀತೆಯನ್ನು ರಕ್ಷಿಸಲು ಹೇಳಿ ರಾಮನು ಜಿಂಕೆಯನ್ನು ಬೆನ್ನಟ್ಟಿದನು, ರಾಮನ ಕೂಗನ್ನು ಕೇಳಿ ಸೀತೆಯು ಲಕ್ಷ್ಮಣನಿಗೆ ಅವನ ಸಹಾಯಕ್ಕಾಗಿ ಹೋಗಲು ಹೇಳಿದಳು. ಲಕ್ಷ್ಮಣನು ಅವಳನ್ನು ಬಿಟ್ಟು ಹೋಗಲೊಲ್ಲನು. ಆಗ ತೀರಾ ವಿಪರೀತ ಸಂಶಯಪಟ್ಟು ಸೀತೆ ಲಕ್ಷ್ಮಣನನ್ನು ದೂಷಿಸಿದಳು. ಇದರ ಪರಿಣಾಮವಾಗಿ ರಾವಣನಿಗೆ ಸೀತೆಯನ್ನು ಅಪಹರಿಸಲು ಸಾಧ್ಯವಾಯಿತು.

ಕಾಂಚನಮೃಗದ ಕಪಟ ಅವಳ ಅಪಹರಣಕ್ಕಾಗಿಯೇ ಯೋಜಿಸಲ್ಪಟ್ಟಿತ್ತು. ಪೂರ್ವ ಕಥೆಯನ್ನು ಜ್ಞಾಪಿಸಿದಲ್ಲಿ ಸೀತೆಯು ಶೂರ್ಪನಖಿಯು ಗೇಲಿ ಮಾಡಿದ್ದರ ಪರಿಣಾಮವು ಇದಾಗಿರಬಹುದು. ದ್ರೌಪದಿಯು ಜನ ಸಮೂಹದಲ್ಲಿ ದುರ್ಯೋಧನನ ಬಗ್ಗೆ ಅಪಹಾಸ್ಯವನ್ನು ಮಾಡಿದ್ದಳು. ನೀರಿದ್ದಲ್ಲಿ ನೆಲ, ನೆಲವಿದ್ದಲ್ಲಿ ನೀರು ಇರುವಂತೆ ಭ್ರಮೆ ಹೊಂದಿ ದುರ್ಯೋಧನನು ಮಯನಿಂದ ರಚಿತವಾದ ಅದ್ಭುತ ಪ್ರಾಸಾದದಲ್ಲಿ ಫಜೀತಿ ಪಟ್ಟಿದ್ದನು. ಎಲ್ಲಕ್ಕೂ ಹೆಚ್ಚಿನ ಅಪಮಾನವಾಗಿದ್ದು ದ್ರೌಪದಿಯ ಅಸಭ್ಯ ಹಾಸ್ಯದಿಂದ !

ಕೀಚಕನ ವಧೆಯ ನಂತರ ಆ ವೃತ್ತಾಂತವನ್ನು ದ್ರೌಪದಿ ಬಹು ಜಂಬದಿಂದ ರಕ್ಷಕರಿಗೆ ತಿಳಿಸಿದಳು. ಏನೂ ಅರಿಯದವಳಂತೆ ಜನರ ಕಣ್ಮರೆಯಾಗಿ ಇರುವುದನ್ನು ಬಿಟ್ಟು ಕೀಚಕನ ಅಂತ್ಯಯಾತ್ರೆ ನೋಡಲು ನಿಂತಳು. ಹಾಗೆ ನಿಂತಾಗ ಕೀಚಕನ ಸಹೋದರರ ಕಣ್ಣಿಗೆ ಬಿದ್ದಳು. ಅವರು ದ್ರೌಪದಿಯನ್ನು ಹೆಡಮುರಿಗೆ ಕಟ್ಟಿ ಕೀಚಕನ ಜೊತೆ ದಹನ ಮಾಡುವುದಕ್ಕೆಂದು ಸ್ಮಶಾನದತ್ತ ಎಳೆದೊಯ್ದರು. ಈ ಅನರ್ಥವನ್ನು ದ್ರೌಪದಿಯು ತಾನೇ ಮಾಡಬಾರದಿದ್ದನ್ನು ಮಾಡಿ ತಂದುಕೊಂಡಿದ್ದಳು. ತನ್ನ ಮಡಿದ ಶತ್ರುವಿನ ಶವವನ್ನು ನೋಡಿ ಕಣ್ಣಿನ ಆಸೆಯನ್ನು ಪೂರೈಸಲು ಇಚ್ಛಿಸುವ ದ್ರೌಪದಿಯು ಭೂಮಿಕನ್ಯೆಯೆ !

ಸುಭದ್ರೆ, ಅರ್ಜುನ ಇವರಿಬ್ಬರ ಮೇಲೆ ಮತ್ಸರವನ್ನು ಬೀರುವ ದ್ರೌಪದಿಯು ಸಾಮಾನ್ಯ ಮನುಷ್ಯಳೆ ! ಇಂತಹ ದುಃಖಗಳು ಸೀತೆಯ ಪಾಲಿಗೆ ಬರಲಿಲ್ಲ. ಇದಕ್ಕೆ ಅಸಾಮಾನ್ಯತ್ವ ಎನ್ನಬಹುದು. ದ್ರೌಪದಿಯ ಈ ಪರಿಯ ದುಃಖ ಆಗಿನ ಕಾಲದಲ್ಲಿ ತೀರಾ ಸಾಮಾನ್ಯವಾಗಿತ್ತು. ಆದರೆ ಸಹಜೀವನದಲ್ಲಿ ಆವಳು ತೋರಿಸಿದ ತಾಳ್ಮೆಯು ಅಸಾಮಾನ್ಯವಿತ್ತು. ದಿನಕರ್ಮದಲ್ಲಿ ದ್ರೌಪದಿ ಸವತಿ ಮತ್ಸರವನ್ನು ತೋರಿದ್ದು ಕಂಡುಬರುವುದಿಲ್ಲ.

ದ್ರೌಪದಿಯ ಎಲ್ಲಕ್ಕೂ ದೊಡ್ಡ ತಪ್ಪು ಯಾವುದು ? ಧರ್ಮನು ದ್ಯೂತದಲ್ಲಿ ಸೋತನಂತರ ದುರ್ಯೋಧನನು ಒಬ್ಬ ಕ್ಷುದ್ರದಾಸನೊಡನೆ ಆಕೆಯನ್ನು ಸಭೆಗೆ ಕರೆ ಕಳುಹಿಸಿದನು. ಆಗ ದ್ರೌಪದಿಯು "ನೀನು ಹೋಗು! ಸಭೆಯಲ್ಲಿ ಹೋಗಿ ಕೇಳು ! ನನ್ನನ್ನು ಪಣಕ್ಕೆ ತೊಡುವ ಮುಂಚೆ ಧರ್ಮನು ಸ್ವತಃ ಪಣದಲ್ಲಿ ಸೋತು ದಾಸನಾಗಿದ್ದನೋ ಹೇಗೆ?" ಎಂದು ಹೇಳಿ ಕಳುಹಿಸಿದಳು. ದುರ್ಯೋಧನನು ಅದಕ್ಕೆ ಹೇಳಿ ಕಳುಹಿಸಿದನು– "ಸಭೆಗೆ ಬಾ ! ಅದರ ಉತ್ತರವು ನಿನಗೆ ಇಲ್ಲಿ ದೊರಕುವುದು", ದ್ರೌಪದಿಯು ಬರಲಿಲ್ಲ. ಆಗ ದುಶ್ಯಾಸನನು ಆಕೆಯನ್ನು ಎಳೆದು ತಂದನು. ಸಭೆಯಲ್ಲಿ ಬಂದ ದ್ರೌಪದಿಯು ಅಳುತ್ತಾ, ಚೀರುತ್ತಾ ಅದೇ ಪ್ರಶ್ನೆಯನ್ನು ಸಿಟ್ಟಿನಿಂದ ಕೇಳಿದಳು. ಆ ಪ್ರಶ್ನೆಯ ಬಗ್ಗೆ ಸಾಕಷ್ಟು ದೀರ್ಘ ಚರ್ಚೆ ನಡೆಯಿತು. ಭೀಷ್ಮನಿಗೂ ಉತ್ತರಿಸಲು ಆಗಲಿಲ್ಲ. ಬಹುಶಃ ಆ ಉತ್ತರವು ದ್ರೌಪದಿಗೆ ಪ್ರತಿಕೂಲವಾಗುವುದು ಎಂಬ ಭಯದಿಂದ ಭೀಷ್ಮನು ಉತ್ತರಿಸುವುದನ್ನು ತಡೆದುಕೊಂಡಂತೆ ಕಾಣುತ್ತದೆ. ಈ ಮೊದಲು ಪಾಂಡವರ ಪಕ್ಷವನ್ನು ಕಟ್ಟಿ ಆತನು ಅನೇಕ ಬಾರಿ ಧೃತರಾಷ್ಟ್ರ ದುರ್ಯೋಧನರ ಜೊತೆಯಲ್ಲಿ ಜಗಳವಾಡಿದ್ದನು. ಈ ಸಮಯದಲ್ಲಿ ಮಾತ್ರ ಆತನು ಸುಮ್ಮನಿದ್ದನು. ಯಾರ ಹಂಗಿನಿಂದಲ್ಲ. ಆದರೆ ಈ ವಾದದಲ್ಲಿ ಧುಮುಕುವುದರಲ್ಲಿ

ಹುರುಳಿಲ್ಲವೆಂದು ತಿಳಿದಿದ್ದನೋ ಎಂದು ಅನ್ನಿಸುತ್ತದೆ. "ಧರ್ಮರಾಜನು ಒಮ್ಮೆ ದಾಸನಾದ ನಂತರ, ಸ್ವಾತಂತ್ರ್ಯವನ್ನು ಕಳೆದುಕೊಂಡ ನಂತರ, ಒಡೆತನದ್ದು ಯಾವುದೂ ಉಳಿದಿರಲೇ ಇಲ್ಲ. ದಾಸನೆಂದರೆ (ಅ.ಸ್ವ) ಸ್ವಂತದ ಏನೂ ಇಲ್ಲದವನು ಆಗಿರುತ್ತಾನೆ. ಇಂತಹ ದೆಸೆಗೆ ತಲುಪಿದ ಮನುಷ್ಯನಿಗೆ ಪಣಕ್ಕೆ ಒಡ್ಡುವಂತಹ ಯಾವ ವಸ್ತುವೂ ಇರಲಾರದು. ಹಾಗಿರುವಾಗ ಧರ್ಮನು ನನ್ನನ್ನು ಪಣಕ್ಕೆ ಹೇಗೆ ಒಡ್ಡುವನು?" ಎಂಬ ದ್ರೌಪದಿಯ ಪ್ರಶ್ನೆ ಇತ್ತು. ಈ ವಾದವು ಒಂದು ದೃಷ್ಟಿಯಿಂದ ಉಚಿತವೆನಿಸಿದರೂ ದಾಸನಿಗೆ ಕೂಡ ಪತ್ನಿಯು ಇರುತ್ತಾಳೆ. ಅವನು ದಾಸನೆಂದು ಪತ್ನಿಯ ಮೇಲಿನ ಅಧಿಕಾರವನ್ನು ಕಳೆದುಕೊಂಡಿರುವುದಿಲ್ಲ. ಒಬ್ಬನು ದಾಸನಾಗಿದ್ದರೂ, ವೈಯಕ್ತಿಕವಾಗಿ ಅರ್ಥಾರ್ಜನೆಯನ್ನು ಮಾಡಬಹುದೆಂಬ ಅಧಿಕಾರವು ಬಹು ಪುರಾತನ ಕಾಲದಿಂದ ಇತ್ತು. ಒಡೆಯನ ಬಾಧ್ಯತೆ ಅವನ ದಾಸನ ಮೇಲೆ ; ದಾಸನ ಒಡೆತನವು ಆತನ ಪತ್ನಿಯ ಮೇಲೆ ; ಈ ರೀತಿ ತೊಡಕಿತ್ತು.

ದ್ರೌಪದಿಯು ಹೇಳಿಕೆ ಮೂರ್ಖತನದ್ದು ಅಲ್ಲದೆ ಭಯಂಕರವಾಗಿತ್ತು. ಈ ಪ್ರಶ್ನೆಗೆ ಏನೇ ಉತ್ತರ ಸಿಕ್ಕಿದರೂ ಆ ಉತ್ತರವು ಅವಳಿಗೆ ಅನುಕೂಲವಾಗಿರಲಿಲ್ಲ. ಭೀಷ್ಮನು ಅವಳಿಗೆ "ನಿನ್ನ ಪತಿಯ, ನಿನ್ನ ಮೇಲಿನ ಒಡೆತನವು ಅಳಿಯುವುದಿಲ್ಲ. ಅವನು ದಾಸನಾದರೂ ನೀನು ಆತನ ಪತ್ನಿಯಾದ್ದರಿಂದ ನಿನ್ನ ಮೇಲೆ ಆತನ ಸ್ವಾಮಿತ್ವವು ಉಳಿಯುತ್ತದೆ" ಎಂದು ಹೇಳಿದ್ದರೆ, ಅವಳು ದಾಸಿಯಾಗುವುದು ದೃಢವಾಗುತ್ತಿತ್ತು. "ದಾಸನಾದರೂ ಪತಿಯು ಪತ್ನಿಯ ಮೇಲಿನ ಅಧಿಕಾರವನ್ನು ಕಳೆದುಕೊಳ್ಳುವುದಿಲ್ಲ" ಈ ರೀತಿ ಭೀಷ್ಮನು ನುಡಿದಿದ್ದರೆ ಅವಳ ಅಪಮಾನಕಾರಕ ಸ್ಥಿತಿಗೆ ಮಿತಿ ಇರುತ್ತಿರಲಿಲ್ಲ! ದ್ರೌಪದಿಯು **'ನಾಥವತೀ ಅನಾಥವತ್'** ಇದ್ದಳು. (ಐದು ಜನ ಪತಿಯಂದಿರು ಇದ್ದರೂ ಈ ಸಮಯಕ್ಕೆ ಅವಳು ಅನಾಥಳಂತೆ ಇದ್ದಳು) ಈ ಉತ್ತರದಿಂದ ಅವಳು ಗಂಡನ ಸ್ವಾಮಿತ್ವವನ್ನೇ ಕಳೆದುಕೊಂಡಂತಾಗುತ್ತಿತ್ತು. ಅಂದರೆ ನಿಜವಾಗಿ ಅವಳು ಅನಾಥೆಯಾಗುತ್ತಿದ್ದಳು. ಪತಿಯು ತ್ಯಜಿಸಿದ ನಂತರ ದೈನ್ಯದಿಂದ ಪಿತನಮನೆಯಲ್ಲಿ ಕಾಲವನ್ನು ಕಳೆಯುವ ಸ್ತ್ರೀಯರ ಉಲ್ಲೇಖವು ಋಗ್ವೇದದಲ್ಲಿದೆ. **'ಭಾರ್ಯಾಪತ್ಯಾನುತ್ತೇವ ಜ್ಯೋಕ್‌ಪಿತೃಷು ಆಸ್ಯಾಮ್'** ಆದರೆ ತಾನಾಗಿಯೇ ಪತಿಯ ಸ್ವಾಮಿತ್ವವನ್ನು ಅಲ್ಲಗಳೆದ ಸ್ತ್ರೀಯು ಆಗಿನ ಕಾಲದಲ್ಲಿ ಇರಲೇ ಇಲ್ಲ. ಇಂತಹ ಸ್ತ್ರೀಗೆ ಮಾನದ ಸ್ಥಾನವಂತೂ ಇರಲಿ. ದೈನ್ಯದ ಸ್ಥಾನವೂ ತವರುಮನೆಯಲ್ಲಿ ಸಿಗುತ್ತಿರಲಿಲ್ಲ. ದ್ರೌಪದಿಯ ಈ ಬಗೆಯ ಪ್ರಶ್ನೆಯಿಂದ ಎಲ್ಲರೂ ಇಕ್ಕಟ್ಟಿನಲ್ಲಿ ಸಿಲುಕಿದ್ದರು. ಭೀಷ್ಮನು ತಲೆತಗ್ಗಿಸಬೇಕಾಯಿತು. ಧರ್ಮನು ನಾಚಿಕೆಯಿಂದ ತೆಪ್ಪಗಾದನು. ದ್ರೌಪದಿಯ ಈ ಪ್ರಶ್ನೆಯಲ್ಲಿ ಪಾಂಡಿತ್ಯವು ಇರಲೇ ಇಲ್ಲ. ಪಾಂಡಿತ್ಯಕ್ಕಿಂತ ಶ್ರೇಷ್ಠವಾದ ವಿವೇಕವೂ, ಪ್ರಜ್ಞೆಯೂ ಇರಲಿಲ್ಲ. ನಡೆದ ಸಂಗತಿ ತೀರಾ ಬೀಭತ್ಸವಾಗಿತ್ತು. ಸೊಸೆಯನ್ನು ತುಂಬಿದ ಸಭೆಯಲ್ಲಿ ಎಳೆದು ತಂದಾಗ ಪ್ರತೀಕಾರ ಮಾಡದೇ ಎಲ್ಲರೂ ಸುಮ್ಮನಿರುವುದು, ತುಂಬಿದ ಸಭೆಯಲ್ಲಿ ಆಕೆಯನ್ನು ಅವಮಾನಗೊಳಿಸುವುದು, ಸಭಿಕರ ಈ ವರ್ತನೆಯು ಮಾನವರ, ಅಲಿಖಿತ ಸಾಮಾನ್ಯ ನೀತಿನಿಯಮಗಳಿಗೆ ತೀರಾ ವಿರುದ್ಧವಾಗಿದ್ದವು. ಸೊಸೆಯಾದ ದ್ರೌಪದಿಯು ಗೋಳಿಟ್ಟಿದ್ದರೆ ಮಾನಹಾನಿಯು ಈ ಮಟ್ಟಕ್ಕೆ

ಬರುತ್ತಿರಲಿಲ್ಲ. ಅಂತಹ ಸಮಯದಲ್ಲಿ ನ್ಯಾಯಪರತೆಯು ಅರಣ್ಯಪಾಂಡಿತ್ಯವೇ ಆಗುತ್ತಿತ್ತು. ಕೊನೆಯಲ್ಲಿ ದುರ್ಯೋಧನನು "ನಿನ್ನ ಪತಿಗೆ ಈ ಪ್ರಶ್ನೆಯನ್ನು ಕೇಳು ! ಧರ್ಮರಾಜನ ಸಾರಾಸಾರ ಬುದ್ಧಿಯಲ್ಲಿ, ನ್ಯಾಯ ನಿಷ್ಠುರತೆಯಲ್ಲಿ ನಮ್ಮ ನಂಬಿಕೆ ಇದೆ. ಆತನ ನಿರ್ಣಯದ ಪ್ರಕಾರ ನಾವು ವರ್ತಿಸುವೆವು" ಎಂದನು.

ದ್ರೌಪದಿಯ ಪ್ರಶ್ನೆ, ದುರ್ಯೋಧನನ ಈ ತೋರಿಕೆಯ ಉತ್ತರ, ಇವುಗಳಿಂದ ಬೇರೆ ಯಾತರಿಂದಲೂ ಆಗದಂತಹ ಮರ್ಮಚ್ಛೇದವು ಧರ್ಮನಿಗೆ ಆಯಿತು. ಈ ಪ್ರಶ್ನೆಯ ಉತ್ತರವನ್ನು ಕೊಡುವುದು ಸಾಧ್ಯವೇ ಇರಲಿಲ್ಲ. ದ್ರೌಪದಿಯ ವಸ್ತ್ರಾಪಹರಣವಾದಂತೆ ಪ್ರತಿನೂತನ ವಸ್ತ್ರಗಳು ಅವಳಿಗೆ ದೊರೆಯುತ್ತಾ ಹೋದವು. ಮಹಾಭಾರತದ ಸಂಶೋಧಿತ ಆವೃತ್ತಿಯಲ್ಲಿ ದ್ರೌಪದಿಯು ಕೃಷ್ಣನನ್ನು ಮೊರೆ ಇಟ್ಟ ಭಾಗವಿಲ್ಲ. ನಡೆಯುತ್ತಿದ್ದ ಘಟನೆಯು ತುಂಬಾ ನಾಚಿಕೆಪಡುವಂತಹದಿತ್ತು. ವಿಶ್ವದಲ್ಲಿಯ ಶಕ್ತಿಯೇ ಜಾಗೃತವಾಗಿ ಓರ್ವ ಹೆಂಗಸಿನ ಮಾನರಕ್ಷಣೆ ಮಾಡಿತೆಂದು ಹೇಳಬಹುದು. ದುಶ್ಶಾಸನನು ದಣಿದು, ನಾಚಿಕೆಪಟ್ಟು ಹಿಂದೆ ಸರಿದನು. ಸಭಾಗೃಹವು ಅಶುಭಕಾರಿ, ಅಪಶಕುನವನ್ನು ಸೂಚಿಸುವ ಧ್ವನಿಗಳಿಂದ ತುಂಬಿತು. ವಿದುರನು ತಳಮಳಿಸಿ ಎದ್ದನು. ಧೃತರಾಷ್ಟ್ರನಿಗೆ ಹೇಳಿದನು– "ಈ ದುಷ್ಕೃತ್ಯದಿಂದ ಅನಾಹುತವಾಗಬಹುದು, ಮಧ್ಯಸ್ಥಿಕೆಯನ್ನು ಮಾಡು ! ಕುಲವನ್ನು ರಕ್ಷಿಸು!" ಧೃತರಾಷ್ಟ್ರನು ನಡೆದ ಸಂಗತಿಗಳಿಂದ ಬೆವರಿದನು. ಅವನು ದ್ರೌಪದಿಯ ಬಿಡುಗಡೆಯನ್ನು ಮಾಡಿಸಿ, ಅವಳಿಗೆ ವರಗಳನ್ನು ಬೇಡಲು ಹೇಳಿದನು. ದ್ರೌಪದಿಯು ಎರಡು ವರಗಳಿಂದ ಪತಿಯಂದಿರ ಬಿಡುಗಡೆಯನ್ನು ಮಾಡಿಸಿದಳು. ಬುದ್ಧಿವಂತಿಕೆಯ ಅಹಂಕಾರವನ್ನು ತೋರಿಸಿ ಅವಳು ಕೇಳಿದ ಪ್ರಶ್ನೆಯು ಮಾತ್ರ ಸಭೆಯಲ್ಲಿ ಯಾರಿಗೂ ಹಿಡಿಸಲಿಲ್ಲ. ಧರ್ಮರಾಜನಂತು ಈ ಮನೋವ್ಯಥೆಯನ್ನು ಆಜನ್ಮ ಮರೆಯಲಿಲ್ಲ. ವನವಾಸದಲ್ಲಿದ್ದಾಗಲು ಧರ್ಮನಿಗೆ ತನ್ನ ಪಾಂಡಿತ್ಯವನ್ನು ತೋರಿಸಲು ಅವಳು ಪ್ರಯತ್ನಿಸುತ್ತಿದ್ದಳು. ಆದರೆ ಪಾಂಡಿತ್ಯದಲ್ಲಿ ಅವಳ ಮುಂದೆ ಧರ್ಮನು ಸೋಲುವುದು ಸಾಧ್ಯವಿರಲಿಲ್ಲ. ತನ್ನ ಜೀವನದಲ್ಲಿ ದ್ರೌಪದಿಯಿಂದ ನಡೆದ ಚಿಕ್ಕ ಪುಟ್ಟ ಅಪರಾಧಗಳು ಕ್ಷಮ್ಯವಾಗಿದ್ದವು. ಆದರೆ ತುಂಬಿದ ಸಭೆಯಲ್ಲಿ ಪಾಂಡಿತ್ಯದ ಆವೇಶವನ್ನು ತೋರಿ ಅವಳು ಧರ್ಮನನ್ನು ಇಕ್ಕಟ್ಟಿನಲ್ಲಿ ತಂದಿದ್ದಳು. ತನಗೆ ತಿಳಿಯದೇ ಅವನನ್ನು ಅವಮಾನಗೊಳಿಸಿದ್ದಳು. ನಿಜವಾಗಿಯು ಅವಳಿಗೆ ತಿಳಿಯದೇ ಅವಮಾನವಾಗಿತ್ತು. ಏಕೆಂದರೆ ತಿರಸ್ಕಾರ, ತುಚ್ಛತೆಯನ್ನು ವ್ಯಕ್ತಪಡಿಸುವುದಾದರೆ ಅವಳು ಎದುರು ಎದುರು ಮಾತಾಡುತ್ತಿದ್ದಳು. ಆದರೆ ತಿಳಿಯದೇ ಮಾಡಿದ ಈ ಅಪರಾಧವು ಕ್ಷಮ್ಯವಿರಲಿಲ್ಲ. ಸಭೆಯಲ್ಲಿ ತರುಣಿಯಾದ ಸೊಸೆಯು ಮಾತನಾಡಬಾರದು, ಎಂಬುದನ್ನು ಅವಳು ತಿಳಿದಿರಬೇಕಾಗಿತ್ತು. ಆದರೆ ಸಭೆಯಲ್ಲಿ ಮಾತನಾಡಿದ್ದಲ್ಲದೇ ದೊಡ್ಡ ದೊಡ್ಡ ಪಂಡಿತರಿಗೆ ತಿಳಿಯದಿದ್ದನ್ನು ನನಗೆ ತಿಳಿದಿದೆ ಎಂಬ ಆವೇಶ ಬೇರೆ ! ಈ ಎರಡು ಸಂಗತಿಗಳು ಧರ್ಮರಾಜನಿಗೆ ಹಿಡಿಸಲಿಲ್ಲ. ಆದರೆ ಈ ಪ್ರಸಂಗದಿಂದ ಅವಳ ಪಾರ್ಥಿವತೆ, ಒರಟಾದ ನಿಷ್ಠೆ ಇವೆಲ್ಲವು ಸ್ಪಷ್ಟವಾದವು. ಅರಣ್ಯ ಪರ್ವದಲ್ಲಿ ಅವಳಿಗೆ 'ಪಂಡಿತಾ' ಎಂದು ಸಂಬೋಧಿಸಿದ್ದು ಕಂಡುಬರುತ್ತದೆ. ಸ್ತ್ರೀಯರು

ಪಂಡಿತೆಯರು ಇರುವುದು ಮಹಾಭಾರತ ಕಾಲದ ಕ್ಷತ್ರಿಯರಿಗೆ ಅಷ್ಟೊಂದು ಹಿಡಿಸುತ್ತಿರಲಿಲ್ಲವೆಂದು ಕಾಣುತ್ತದೆ. ಗಾಂಧಾರಿಯು, ಕುಂತಿಯು, ಪುತ್ರರಿಗೆ ಉಪದೇಶಿಸಿದ್ದಾರೆ. ಅವರು ವೃದ್ಧೆಯರು, ಅನುಭವುಳ್ಳವರು ಇರುವುದರಿಂದ ಮಕ್ಕಳಿಗೆ ನಾಲ್ಕುಮಾತು ಹೇಳುವುದು ಯೋಗ್ಯವಿತ್ತು. ಆದರೆ ತರುಣಿಯಾದ ದ್ರೌಪದಿಯು ಹಿರಿಯರ ಎದುರಿನಲ್ಲಿ, ಪಾಂಡಿತ್ಯವನ್ನು ತೋರಿದ್ದು ಮಹಾತಪ್ಪು. ತನ್ನಿಂದ ತಪ್ಪಾಯಿತು ಎಂಬ ಅರಿವು ಅವಳಿಗೆ ಆಗಲೇ ಇಲ್ಲವೆಂದು ಕಾಣುತ್ತದೆ. ಧರ್ಮರಾಜನು ಈ ತಪ್ಪಿನಿಂದ ಆತನಿಗೆ ಆದ ವ್ಯಥೆಯನ್ನು ಪ್ರಕಟಿಸಲಿಲ್ಲ. ಆದರೆ ಮುಂದೆ ಅವನು ದ್ರೌಪದಿಗೆ ಬೇರೆಯೇ ಇನ್ನೊಂದು ವ್ಯಥೆಯ ಅರಿವನ್ನು ಮಾಡಿಕೊಟ್ಟನು. ಆ ವ್ಯಥೆಯು ತೀರ ಸ್ಪಷ್ಟವಾಗಿರುವುದರಿಂದ ಎಲ್ಲರೂ ಒಪ್ಪುವಂತೆ ಸರಳ ಬುದ್ಧಿಯ ದ್ರೌಪದಿಯು ಅದನ್ನು ಒಪ್ಪಬೇಕಾಯಿತು.

ಯಾದವರ, ವಿಶೇಷತಃ ಶ್ರೀಕೃಷ್ಣನ ನಿರ್ಯಾಣದ ನಂತರ ಭೂಮಿಯ ಮೇಲೆ ಬಾಳುವುದು ಪಾಂಡವರಿಗೆ ಸಾಧ್ಯವಿರಲಿಲ್ಲ. ಎಲ್ಲಾ ಏರ್ಪಾಟನ್ನು ಮಾಡಿ ಪಾಂಡವರು ಮಹಾಪ್ರಸ್ಥಾನಕ್ಕೆ ತೆರಳಿದರು. ದ್ರೌಪದಿಯು ಅವರ ಸಂಗಡವೇ ಬಿದ್ದಳು. ಗಂಗಾನದಿಯ ಕಣಿವೆಯನ್ನು ದಾಟಿದ್ದಾಯಿತು. ಹಿಮಾಲಯ ಪ್ರದೇಶವನ್ನು ದಾಟಿದರು. ಕೊನೆಯಲ್ಲಿ ಮರಗಳಿಲ್ಲದ ಒಂದು ಬಯಲು ಭಾಗಕ್ಕೆ ಅವರು ತಲುಪಿದರು. ಅಲ್ಲಲ್ಲಿ ಕಲ್ಲು ರಾಶಿಗಳ ಹೊರತು ಏನೂ ಇರಲಿಲ್ಲ. ಒಬ್ಬರ ಹಿಂದೆ ಒಬ್ಬರಂತೆ ಈ ಆರು ಜನರು ತಿಂಗಳುಗಟ್ಟಲೆ ಸಾಗಿದ್ದರು. ಇದ್ದಕ್ಕಿದ್ದಂತೆ ದ್ರೌಪದಿಯು ಕುಸಿದು ಕೆಳಗೆ ಬಿದ್ದಳು. ಭೀಮನು ಅಲ್ಲಿಯೇ ನಿಂತು "ಇವಳೇಕೆ ಬಿದ್ದಳು ?" ಎಂಬ ಮೂಢಪ್ರಶ್ನೆಯನ್ನು ಕೇಳಿದನು. ಇಷ್ಟೊಂದು ದಾರಿ ನಡೆದ ನಂತರ ಅವಳು ಹೇಗೆ ಬೀಳದೇ ಇರಬಹುದು? ಆರು ಜನರು ಎಲ್ಲಿಗೆ ನಡೆದಿದ್ದರೊ, ಅಲ್ಲಿಯವರೆಗೆ ಎಲ್ಲರೂ ಮುಟ್ಟಬಹುದು ಎಂಬ ಕಲ್ಪನೆಯು ಭೀಮನದಾಗಿರಬಹುದೋ? "ನೋಡಣ್ಣಾ! ಅವಳು ಬಿದ್ದಳು. ಅವಳೇಕೆ ಬಿದ್ದಳು ?" ಭೀಮನು ಕೇಳಿದನು. ಧರ್ಮನು ಹಿಂತಿರುಗಿ ನೋಡದೆ ಉತ್ತರಿಸಿದನು. "ಭೀಮನೇ, ಮುಂದೆ ಸಾಗು ! ಅವಳು ಬಿದ್ದಳು, ಏಕೆಂದರೆ ಅವಳು ಅರ್ಜುನನನ್ನು ಎಲ್ಲರಿಗಿಂತ ಹೆಚ್ಚಾಗಿ ಪ್ರೀತಿಸಿದಳು." ಧರ್ಮನು ಇಡೀ ಜೀವನದಲ್ಲಿ ಆಳವಾಗಿ ಅಡಗಿಟ್ಟ ತನ್ನ ಮನೋ ವ್ಯಥೆಯನ್ನು ವ್ಯಕ್ತಮಾಡಿದನು. ದ್ರೌಪದಿಯು ಕುಸಿದ ಸ್ಥಳದ ಹತ್ತಾರು ಹೆಜ್ಜೆಗಳ ಅಂತರದಲ್ಲಿ ಇತರರು ಕುಸಿದರು. ಧರ್ಮನೊಬ್ಬನು ಮಾತ್ರ ತನ್ನ ನಾಯಿಯ ಜೊತೆಗೆ ಮುಂದೆ ಸಾಗಿದನು.

ಧರ್ಮನ ನುಡಿಯಲ್ಲಿಯ ಆತನ ಮನೋವ್ಯಥೆಯು, ಧಿಕ್ಕಾರವು, ಅವಳಿಗೆ ಅರ್ಥವಾಯಿತು.

(ಈವರೆಗಿನ ಭಾಗವು ಮಹಾಭಾರತದ ಸಂಶೋಧಿತ ಆವೃತ್ತಿಯನ್ನು ಆಧರಿಸಿದೆ. ಈ ನಂತರದ ರಗಳೆಯು ನನ್ನದು.)

ದ್ರೌಪದಿಯು ಕುಸಿದು ಬಿದ್ದಳಷ್ಟೆ ! ಹೊರತು ಕುಸಿದು ಒಮ್ಮೆಲೆ ಮಡಿಯಲಿಲ್ಲ. ಕೆಳಗೆ ಬಿದ್ದಿರುವಾಗ ಭೀಮ–ಧರ್ಮರ ಸಂಭಾಷಣೆ ಕೇಳಿ, ಜೀವನದಲ್ಲಿ ಮೊದಲನೆಯ ಸಲ ಅವಳಿಗೆ

ಧರ್ಮರಾಜನ ಬಗ್ಗೆ ಕನಿಕರ ಉಂಟಾಯಿತು. ಅನೇಕ ಸಲ ವಿಶೇಷವಾಗಿ ಅರಣ್ಯವಾಸದಲ್ಲಿ ಧರ್ಮರಾಜನ ದುರವಸ್ಥೆಯ ಬಗ್ಗೆ ಅವಳು ಸಂತಾಪವನ್ನು ವ್ಯಕ್ತಪಡಿಸಿದ್ದಳು. ಆ ಸಂತಾಪಸೂಚನೆಯು ಹೊಸ ವಾದಗಳಿಗೆ ಮೂಲವಾಗಿತ್ತು. ರಾಜನ ದೈನ್ಯಾವಸ್ಥೆಯನ್ನು ಎತ್ತಿ ತೋರಿಸಿ ವೀರ ಪ್ರವೃತ್ತಿಯನ್ನು ಜಾಗೃತಗೊಳಿಸುವುದೇ ಅವಳ ಉದ್ದೇಶವಾಗಿತ್ತು. ಒಂದು ರೀತಿಯಿಂದ ಆತನನ್ನು ಕೆಣಕಿದಂತೆಯೇ ಇತ್ತು. ಧರ್ಮರಾಜನು ಇವೆಲ್ಲವುಗಳನ್ನು ಲಕ್ಷಿಸಲೇ ಇಲ್ಲ : ಸಾಧ್ಯವಿದ್ದಷ್ಟು ಮೃದುವಚನಗಳಿಂದ ಅವಳ ಹೇಳಿಕೆಯನ್ನು ಆತನು ಖಂಡಿಸುತ್ತಿದ್ದನು. ಈ ಹೊತ್ತು ಮಾತ್ರ ಆತನ ಮನೋವ್ಯಥೆಯು ಒಂದೇ ವಾಕ್ಯವಾಗಿತ್ತು. ಎಂದಿಗೂ ಮಾತಿನಿಂದ ಸಹ ನೋಯಿಸದೇ ಇದ್ದ ರಾಜನು ಮರಣಕಾಲದಲ್ಲಿ ಅವಳಿಗೆ ಅವಳ ನಡತೆಯಲ್ಲಿಯ ನ್ಯೂನತೆಯನ್ನು ತೋರಿಸಿಕೊಟ್ಟನು. ರಾಜನ ವೈಫಲ್ಯವನ್ನು ಅರಿತು ದ್ರೌಪದಿಯು ಕ್ಷಣಕಾಲ ಖಿನ್ನಳಾದಳು. ಅವನಿಂದ ಹೊಂದಿದ ಧಿಕ್ಕಾರದಿಂದ ವಿಸ್ಮಿತಳಾದಳು. ಅವಳು ಮನಸ್ಸಿನಲ್ಲಿಯೇ ನಸುನಕ್ಕಳು. ಅವಳಿಗೆ ಸ್ವಯಂವರ ದಿನದ ಜ್ಞಾಪಕವಾಯಿತು. ಅರ್ಜುನನು ಪಣದಲ್ಲಿ ಗೆದ್ದನಂತರ ಒಬ್ಬರ ತರುವಾಯ ಇನ್ನೊಬ್ಬರಂತೆ ಐವರನ್ನು ವಿವಾಹವಾದಾಗ ತನಗೆ ಆದ ವ್ಯಥೆಯ ಅರಿವು ಧರ್ಮರಾಜನಿಗೆ ಉಂಟಾಗದೆ ಇರುವುದು ಸಾಧ್ಯವೇ? ನಾನು ನನ್ನ ಮನಸ್ಸನ್ನು ಹತ್ತಿಕ್ಕಿ ಕೃತಿಯಲ್ಲಿ ಅಂತೂ ಐವರಲ್ಲಿ ಯಾವ ಭೇದಭಾವವನ್ನೂ ತೋರಿಸಲಿಲ್ಲ. ಮನಸ್ಸನ್ನು ಸಂಪೂರ್ಣವಾಗಿ ಹತ್ತಿಕ್ಕುವುದು ಕೇವಲ ಅಸಾಧ್ಯ. ಕೃತಿಗಳನ್ನು ಸರಿಸಮಾನವಾಗಿ ಮಾಡಲು ಸಾಧ್ಯವಿದೆ ; ಆದರೆ ಅಂತರಂಗದಿಂದ ಆ ಐವರನ್ನು ಸಮಪ್ರಮಾಣದಲ್ಲಿ ಪ್ರೀತಿಸುವುದು ಸಾಧ್ಯವೆ ? ಅರ್ಜುನನ ಮೇಲೆ ನನಗೆ ಹೆಚ್ಚು ಪ್ರೀತಿ ಇದ್ದಲ್ಲಿ ಆಶ್ಚರ್ಯವೇನು ?

ಮನಸ್ಸು ಕ್ಷಣಕಾಲ ಸ್ತಬ್ಧವಾಯಿತು....ಪ್ರೀತಿಸಿದೆನು. ಅಂದರೆ ನಾನು ಮಾಡಿದ್ದೇನು? ಜೀವನವೆಲ್ಲಾ ಆತನಿಗಾಗಿ ಬಳಲಿದೆನು, ಅಷ್ಟೆ ಅಲ್ಲವೇ ? ಆದರೆ ನನ್ನ ಪ್ರೀತಿಯ ಪ್ರತಿಕ್ರಿಯೆಯು ಏನಾಯಿತು? ಉಲುಪಿ, ಚಿತ್ರಾಂಗದೆ, ಸುಭದ್ರೆ, ಇಂತಹ ಎಷ್ಟೊಂದು ಸ್ತ್ರೀಯರನ್ನು ಅರ್ಜುನನು ಪ್ರೀತಿಸಿದನು ? ಆ ಪ್ರೀತಿಯಾದರು ನಿಜವೆ? ಅರ್ಜುನನು ಯಾವಳೊಬ್ಬ ಸ್ತ್ರೀಯರಲ್ಲಿ ಅನುರಕ್ತನಾಗಿದ್ದನೆ? ಸ್ತ್ರೀಯರು ಅರ್ಜುನನನ್ನು ಪ್ರೀತಿಸಿದರು. ಆದರೆ ಅರ್ಜುನನು ತನ್ನ ಹೃದಯವನ್ನು ಕೃಷ್ಣನಿಗೆ ಮೀಸಲಿಟ್ಟಿದ್ದನು. ಇಂದ್ರಪ್ರಸ್ಥವನ್ನು ರಚಿಸುವ ಮೊದಲಿನಿಂದಲೇ ಅರ್ಜುನ ಮತ್ತು ಕೃಷ್ಣ ಗಂಟೆಗಟ್ಟಲೇ ಸಂಭಾಷಣೆಯಲ್ಲಿ ತೊಡಗುತ್ತಿದ್ದುದು ದ್ರೌಪದಿಗೆ ಗೊತ್ತಿತ್ತು. ಅವರ ಸಂಭಾಷಣೆಯಲ್ಲಿ ನಗರದ ರಚನೆಯ ಹೊಸ ವಿಚಾರಗಳು ಇರಬಹುದು. ಆದರೆ ಸ್ನೇಹಿತರಂತೆ ಮಾತಾಡುತ್ತಿದ್ದರು. ತಮ್ಮ ಮನೋಗತವನ್ನು ಪರಸ್ಪರರಿಗೆ ತಿಳಿಸುತ್ತಿದ್ದರು. ಒಬ್ಬರು ಇನ್ನೊಬ್ಬರನ್ನು ಕೇಳುವುದಕ್ಕಾಗಿ ಮಾತಾಡುತ್ತಿದ್ದರು. ಅರ್ಜುನನ ಮನಸ್ಸನ್ನು ಯಾವ ನಾರಿಯೂ ಸೂರೆಗೊಳ್ಳಲಿಲ್ಲ. ಇದಕ್ಕೆ ಪ್ರೇಮವೆನ್ನಬೇಕೇ? ಪ್ರೇಮವು ಬಹುಶಃ ಏಕಪಕ್ಷೀಯವಿರುವುದೇ ? ದುರ್ಲಕ್ಷಿಸಿದರೂ ನಾನು ಯಾರೊಬ್ಬರ ಸಲುವಾಗಿ ಒಂದೆಡೆ ಕೊರಗುವುದು, ಇನ್ನೊಂದೆಡೆ ಇನ್ನೊಬ್ಬರು ನನ್ನ ಸಲುವಾಗಿ ಜೀವವನ್ನೇ ಮುಡುಪು

ಇಡುವುದು....ಆಘಾತವಾದಂತೆ ದ್ರೌಪದಿಯ ಮನಸ್ಸು ಸ್ತಿಮಿತಗೊಂಡಿತು. ದ್ರೌಪದಿಯ ಸಲುವಾಗಿ ಯಾರು ತನ್ನ ಜೀವನವನ್ನೇ ಮುಡುಪಿಟ್ಟಿದ್ದನೋ ಅಂತಹವನ ಪ್ರೀತಿಯ ಅರಿವು ಹೊಳೆಯುವ ಮಿಂಚಿನಂತೆ ಹೃದಯದಲ್ಲಿ ನೆಟ್ಟಿತು. ದ್ರೌಪದಿಯು ಈ ಹೊಸ ಅರಿವಿನಿಂದ ದೀರ್ಘವಾಗಿ ಉಸಿರುಗರೆದಳು. ಆಗಾಗ್ಗಿನ ಸನ್ನಿವೇಶಗಳು ಕಣ್ಣಮುಂದೆ ಮೂಡಿದವು. ಸ್ವಯಂವರ ಮಂಟಪದ ಮುಂದೆ ಅರ್ಜುನನಂತೆಯೆ ಶತ್ರುಗಳೊಡನೆ ಕಾದಾಡುವ ಭೀಮನು! ಸಭೆಯಲ್ಲಿ ದ್ರೌಪದಿಯನ್ನು ಎಳೆದು ತಂದಾಗ ಧರ್ಮರಾಜನ ಕೈಗಳೆರಡನ್ನು ಸುಟ್ಟುಹಾಕಲು ಉದ್ಯುಕ್ತನಾದ ಭೀಮ !! ತಡೆಯಲಾರದ ಕೋಪದಿಂದ ಕೈಗಳಿಂದ ಅರ್ಜುನನಿಂದ ಹಿಡಿಯಲ್ಪಟ್ಟ ಭೀಮ, ದ್ರೌಪದಿಯು ದಣಿದಾಗ ಕಸವಿಸಿಗೊಳ್ಳುವ ಭೀಮ !!! ದುಶ್ಯಾಸನನ ರಕ್ತವನ್ನು ಹೀರುವ ಭೀಮ, ರಕ್ತಗಳಿಂದ ತುಂಬಿದ ಕೈಗಳಿಂದ ದ್ರೌಪದಿಯ ಜಡೆಯನ್ನು ಕಟ್ಟುವ ಭೀಮ ! ಕೀಚಕನನ್ನು ವಧಿಸಲು ಅರ್ಜುನನು ಶಕ್ತನಿದ್ದರೂ ಆ ಕೆಲಸವನ್ನು ಪೂರೈಸಿದ ಭೀಮ ! ಒಂದೆರಡಲ್ಲ, ಎಷ್ಟೊಂದು ಜ್ಞಾಪಿಸಿಕೊಳ್ಳುವುದು ? ಹೊಟ್ಟೆಬಾಕ ಭೀಮ, ಧಾಂಡಿಗ ಭೀಮ, ಕೋಪಿಷ್ಠ ಭೀಮ, ಧೃತರಾಷ್ಟ್ರ ಗಾಂಧಾರಿಯರಿಗೆ ಸರ್ವಕಾಲವು ಚುಚ್ಚಿ ಹಂಗಿಸಿ ಮಾತನಾಡುವ ಭೀಮ; ದ್ರೌಪದಿ ಯಾವ ರೀತಿಯಲ್ಲಿ ನರದೇಹಿಯಾಗಿದ್ದಳೋ, ಅದೇ ರೀತಿ ಭೀಮನು ನರದೇಹಿಯೇ ಆಗಿದ್ದ. ಅವಳು ಭೂಮಿ ಕನ್ಯೆ ಇದ್ದಂತೆ ಭೀಮ, ಭೂಮಿ ಪುತ್ರನಾಗಿದ್ದ......

ದ್ರೌಪದಿಗೆ ಏನೋ ಸರಿದಾಡಿದ, ದೊಡ್ಡದಾಗಿ ಉಸಿರು ಗರೆಯುವ ಶಬ್ದವು ಕೇಳಿ ಬಂದಿತು. ಅವಳು ಶಾಂತವಾಗಿ ಮರಣದ ಹಾದಿಯನ್ನು ಈಕ್ಷಿಸುತ್ತಿದ್ದಳು. ಯಾವ ಕ್ರೂರ ಮೃಗವು ಬರುತ್ತಿರಬಹುದು ? ಕತ್ತೇಕಿರುಬ ಇರಬಹುದೊ? ಭಯದಿಂದ ಅವಳ ಸರ್ವಾಂಗವು “ಜುಮ್” ಎಂದಿತು. ಇಷ್ಟು ದಿನ ಈ ಬಯಲು ಭಾಗದಲ್ಲಿ ಯಾವ ಕಾಡು ಪ್ರಾಣಿಗಳೂ ಕಂಡು ಬಂದಿಲ್ಲ. ನನ್ನ ದೇಹವನ್ನು ಅಲ್ಲಲ್ಲಿ ಕಚ್ಚಿ ತುಂಡರಿಸುವುದಕ್ಕಿಂತ ನನ್ನ ಪ್ರಾಣವನ್ನು ಬೇರ್ಪಡಿಸಿದರೆ ಒಳಿತು ! ಅವಳು ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡಳು. ಯಾವುದೋ ಅನಾಹುತ ಸಂಕಟ, ಸಮಯವನ್ನು ಕಾಯುತ್ತಿದ್ದಂತೆ ಅವಳ ಕಣ್ಣಿನೆದುರು ನೆರಳು ಕವಿಯಿತು. ಅವಳ ಮತ್ತು ಸೂರ್ಯನ ಬೆಳಕಿನ ನಡುವೆ ಒಂದು ತೆರೆಯು ಬಂದಂತಿತ್ತು. ಮಂದವಾದ ಕ್ಷೀಣ ಸ್ವರದಲ್ಲಿ “ದ್ರೌಪದೀ !” ಎಂಬ ಸ್ವರವು ಕೇಳಿಸಿತು ಅದು ಭೀಮನ ಸ್ವರವಾಗಿತ್ತು. ದ್ರೌಪದಿ ಆಶ್ಚರ್ಯದಿಂದ, ಆದರೆ ಆಯಾಸದಿಂದ ಕೈಗಳನ್ನು ಬಿಡಿಸಿ ಕಣ್ಣು ತೆರೆದಳು. ಭೀಮನು ಅವಳಿಗೆ ನೆರಳಾಗಿ ಇದ್ದ. ಆತನೇ ಸರಿಯುತ್ತಾ ದೀರ್ಘ ಶ್ವಾಸೋಚ್ಛ್ವಾಸ ಮಾಡುತ್ತಾ ಕಷ್ಟದಿಂದ ನಡುವಿನ ಹತ್ತು–ಹನ್ನೆರಡು ಅಡಿ ಅಂತರವನ್ನು ಶ್ರಮಿಸಿ ಬಂದಿದ್ದನು. ದಾರಿಯಲ್ಲಿ ಅರ್ಜುನನು ನಕುಲ ಸಹದೇವರು, ಮೃತರಾದುದ್ದನ್ನು ನೋಡಿದ್ದನು. ದ್ರೌಪದಿಯನ್ನು ಅಂತಹ ಸ್ಥಿತಿಯಲ್ಲಿಯೇ ಕಾಣಬಹುದೆಂದು ತಿಳಿದಿದ್ದನು. ಆದರೆ ಕಣ್ಣು ಮುಚ್ಚಿ ಭೂಮಿಗೆ ಒರಗಿದ ದ್ರೌಪದಿಯು, ಅವನು ಹತ್ತಿರ ಬಂದಿದ್ದನ್ನು ಕೇಳಿ ಗಾಬರಿಗೊಂಡಳು. ನಡುಗಿದಳು. ಅವಳು ಜೀವಂತವಿರುವ ಚಿಹ್ನೆಯನ್ನು ಭೀಮನು

ಕಣ್ಣಿನಿಂದ ಲಕ್ಷಿಸಿದನು. "ನಿನಗಾಗಿ ಏನು ಮಾಡಲಿ"? ಅವನು ತಡವರಿಸುತ್ತಾ ಕೇಳಿದನು. ಆಯುಷ್ಯದಲ್ಲಿ ಯಾವಾಗಲೂ ಕೇಳಿದ ಇಂಥ ಪ್ರಶ್ನೆಯೇ ಈ ಸಮಯದಲ್ಲಿ ಅರ್ಥಹೀನ, ಅಸಮಂಜಸವಾಗಿತ್ತು. ದ್ರೌಪದಿಯು ಆನಂದದಿಂದ ನಕ್ಕಳು. ಭೀಮನ ಮುಖವನ್ನು ತನ್ನ ಮುಖದ ಹತ್ತಿರ ಹಿಡಿದು ತನ್ನ ಕೊನೆಯ ಉಸಿರಿನಲ್ಲಿ "ಭೀಮನೇ! ಮುಂದಿನ ಜನ್ಮದಲ್ಲಿ, ಈ ಐದು ಜನರಲ್ಲಿ ನೀನು ಹಿರಿಯವನಾಗು ! ನಿನ್ನ ಆಶ್ರಯದಲ್ಲಿ ನಾವೆಲ್ಲರೂ ನಿರ್ಭಯವಾಗಿ, ಸುಖವಾಗಿ ಬಾಳುವೆವು" ಎಂದಳು.

6
ಮಯಸಭೆ

ಕೆಲವೊಂದು ಕಟ್ಟಡಗಳು ವಿಜೃಂಭಣೆಯಿಂದ ಉದ್ಘಾಟಿಸಲ್ಪಟ್ಟರೂ ಅಶುಭಕಾರಿಯಾಗಿ ಭವ್ಯತೆಯನ್ನು ಕಳೆದುಕೊಂಡಿರುತ್ತವೆ. ಪುಣೆ ಪಟ್ಟಣದಲ್ಲಿ 'ಶನಿವಾರವಾಡೆ' ಎಂಬ ಕೋಟೆಯು ಇದಕ್ಕೆ ಉದಾಹರಣೆ ಆಗಿದೆ. ಈ ಕೋಟೆಯ ಕೊತ್ತಳಗಳು ಅಲ್ಲಲ್ಲಿ ಕುಸಿದುಹೋಗಿ ಮಣ್ಣಿನ ರಾಶಿಯಾಗಿ ನಿಂತಿವೆ. ಎಲ್ಲ ಕಡೆಯಲ್ಲಿ ಹಾಳು ಸುರಿಯುತ್ತಿದೆ. ಈ ಶಿಲ್ಪವು ನನ್ನ ಕಣ್ಣೆದುರಿನ ತೀರ ಅರ್ವಾಚೀನವಾದ ಉದಾಹರಣೆಯಾಗಿದೆ. ಆ ವಾಸ್ತುವನ್ನು ನಿರ್ಮಿಸಿದ ಪುರುಷನಿಗೆ ನೆಮ್ಮದಿಯು ದೊರಕಲಿಲ್ಲ. ಕಟ್ಟಡವು ಶೋಚನೀಯ ಸ್ಥಿತಿಯಲ್ಲಿ ಹೇಗೋ ನಿಂತುಕೊಂಡಿದೆ. ಆದರೂ ಈ ಪುಣೆಯಲ್ಲಿನ ಕೋಟೆಯಲ್ಲಿ (ಶನಿವಾರವಾಡೆಯಲ್ಲಿ) ಕನಿಷ್ಠಪಕ್ಷ ಐದು ತಲೆಮಾರುಗಳು ಬಾಳಿದವು. ಇದಕ್ಕಿಂತಲೂ ವೈಭವಶಾಲಿಯಾದ ಅಶುಭಕಾರಿಯಾಗಿ ಪರಿಣಮಿಸಿದ ಇನ್ನೊಂದು ಕಟ್ಟಡವು ಮಹಾಭಾರತವನ್ನು ಓದುತ್ತಿದ್ದಂತೆ ನನ್ನ ಕಣ್ಣು ಮುಂದೆ ಸಾಕಾರವಾಗುತ್ತಿದೆ. ಈ ಕಟ್ಟಡವೆಂದರೆ ಇಂದ್ರಪ್ರಸ್ಥದಲ್ಲಿ ಕಟ್ಟಿಸಲ್ಪಟ್ಟ "ಮಯಸಭೆ" ಮತ್ತು ಆ ಇಂದ್ರಪ್ರಸ್ಥನಗರ. ಮಯಸಭೆಯು ಕಟ್ಟಿಸಿದ ಕ್ಷಣಕಾಲ ಮಾತ್ರ ಬಾಳಿತು. ಕ್ರೌರ್ಯ, ಹಿಂಸೆ, ಮತ್ಸರ ಇವೆಲ್ಲವುಗಳ ತಳಹದಿಯ ಮೇಲೆ ಮಯಸಭೆ ನಿರ್ಮಿಸಲಾಗಿತ್ತು. ಪಾಂಡವರು ತಮ್ಮ ಐಶ್ವರ್ಯದ ಪ್ರದರ್ಶನಕ್ಕಾಗಿ ಮಯಸಭೆಯನ್ನು ಕಟ್ಟಿಸಿದ ನಂತರ ಹದಿಮೂರು, ಹದಿನಾಲ್ಕು ವರುಷಗಳು ಸಹ ಪಾಂಡವರು ಇಂದ್ರಪ್ರಸ್ಥದಲ್ಲಿ ವಾಸಿಸಲಿಲ್ಲ. ದ್ಯೂತದ ಉನ್ಮಾದದಲ್ಲಿ ಅದರ ಅಂತ್ಯವಾಯಿತು. ಮಹಾಭಾರತದಲ್ಲಿ ಮಯಸಭೆಯ ಬಗ್ಗೆ ಇದ್ದ ಕಥೆಯು ಈ ರೀತಿ ಇದೆ. ದ್ರೌಪದಿಯ ವಿವಾಹದ ನಂತರ ಪಾಂಡವರ ಬೆಂಬಲದಲ್ಲಿ ಹೆಚ್ಚಳವಾಯಿತು. ಅವರನ್ನು ಕೊಲ್ಲುವ ಹಂಚಿಕೆಯು ವಿಫಲವಾಗಿ ಅವರು ನವಚೈತನ್ಯದಿಂದ ಪ್ರಕಟವಾದರು. ಆ ಕಾರಣ ಅವರ ಪಾಲಿನ ರಾಜ್ಯವನ್ನು ಅವರಿಗೆ ಧೃತರಾಷ್ಟ್ರನು ಕೊಡಲೇಬೇಕಾಯಿತು. ಧೃತರಾಷ್ಟ್ರನು ಧರ್ಮರಾಜನನ್ನು ಕರೆಯಿಸಿ ಆತನಿಗೆ ಅವನ ಪಾಲನ್ನು ಕೊಟ್ಟು ಖಾಂಡವ ಪ್ರಸ್ಥದಲ್ಲಿ ವಾಸಿಸಲು ಹೇಳಿದನು. ವಂಶಪರಂಪರೆಯಾಗಿದ್ದ ರಾಜಧಾನಿಯು ಧರ್ಮನಿಗೆ ಸಿಗಲಿಲ್ಲ. ರಾಜ್ಯದ ಮೇರೆಯಲ್ಲಿದ್ದ, ಕಾಡಿಗೆ ಹೊಂದಿಕೊಂಡಿದ್ದ, ಒಂದು ಗ್ರಾಮವು ಅವನ ಪಾಲಿನ ಭಾಗವೆಂದು ಅವನಿಗೆ ಸಿಕ್ಕಿತು. ಆವರೆಗೆ ಖಾಂಡವಪ್ರಸ್ಥದ ಹೆಸರೇ ಮಹಾಭಾರತದಲ್ಲಿ ಬಂದಿರಲಿಲ್ಲ. ಖಾಂಡವಪ್ರಸ್ಥಕ್ಕೆ ತಲುಪಿದ ನಂತರ ಧರ್ಮನು, ಈ ಚಿಕ್ಕ ಗ್ರಾಮವನ್ನು ರಾಜಧಾನಿಯಾಗಿ ರೂಪಿಸಲು ಪ್ರಾರಂಭಿಸಿದನು. ಹಲವು ಬಗೆಯ ಉದ್ದಿಮೆದಾರರು ಅಲ್ಲಿ ಬಂದು ನೆಲಸಿದರು. ಧನಿಕ ವ್ಯಾಪಾರಸ್ಥರು ಅಲ್ಲಿ ಬಂದು ಸೇರಿದರು.

ಧರ್ಮರಾಜನು ಬೇರೆ ಬೇರೆ ಕುಶಲ ಕರ್ಮಚಾರಿಗಳನ್ನು ಬಲವಂತವಾಗಿ ಕರೆಯಿಸಿಕೊಂಡನು. ಧರ್ಮರಾಜನು ಈ ರೀತೀ ಖಾಂಡವಪ್ರಸ್ಥವನ್ನು ರಾಜಧಾನಿಯನ್ನಾಗಿ ಅಲಂಕರಿಸಿದನು. ಇದು ಹೊಸ ರಾಜಧಾನಿಯಾದ್ದರಿಂದ ಹಸ್ತಿನಾಪುರದ ತುಲನೆಯಲ್ಲಿ ಚಿಕ್ಕದಾಗಿತ್ತು. ಈ ಖಾಂಡವಪ್ರಸ್ಥಕ್ಕೆ 'ಇಂದ್ರಪ್ರಸ್ಥ' ವೆಂಬ ಇನ್ನೊಂದು ಹೆಸರು ಆಗಾಗ್ಯೆ ಬರುತ್ತದೆ. ಇದೇ ಇಂದ್ರಪ್ರಸ್ಥದಲ್ಲಿ ಇರುವಾಗ ನಾರದನು ವಿಧಿಸಿದ ನಿಯಮಗಳ ವನವಾಸದಲ್ಲಿದ್ದಾಗ ಸುಭದ್ರಯೊಡನೆ ಅರ್ಜುನನ ವಿವಾಹವಾಯಿತು. ವನವಾಸವನ್ನು ಪೂರೈಸಿ ಅವನು ಇಂದ್ರಪ್ರಸ್ಥಕ್ಕೆ ಮರಳಿ ಬಂದನು. ಅನಂತರ ಯಾದವರು ಸುಭದ್ರೆಯ ಸಹಿತವಾಗಿ ಅಪಾರ ಸಂಪತ್ತನ್ನು ದಾಸ–ದಾಸಿಯರು, ರಥ–ತುರುಗಗಳು, ಮುಂತಾದ ಉಡುಗೊರೆಯನ್ನೊಡಗೊಂಡು ಪರಿವಾರದೊಂದಿಗೆ ಬಂದರು. ರಾಜಧಾನಿಯಲ್ಲಿ ಹಲವು ದಿನಗಳವರೆಗೆ ಉತ್ಸವ ಸಮಾರಂಭಗಳು ನಡೆದವು. ಆಗ ಬೇಸಿಗೆಯ ದಿವಸಗಳಾಗಿದ್ದವು. ಇಂತಹ ಸಮಯದಲ್ಲಿ ಅರ್ಜುನನು ವನವಿಹಾರಕ್ಕಾಗಿ ಹೊರಡಲು ಬಯಸಿದನು. ಒಂದು ದಿನ ವನಭೋಜನಕ್ಕಾಗಿ ಎಲ್ಲರೂ ಹೊರಟರು. ಧರ್ಮನ ಅನುಜ್ಞೆಯನ್ನು ಪಡೆದು, ಹಿರಿಯರನ್ನು ಜೊತೆಗೆ ಕರೆದುಕೊಳ್ಳದೇ ಕೃಷ್ಣಾರ್ಜುನರು ವನವಿಹಾರಕ್ಕಾಗಿ ಹೋದರು. ಪತ್ನಿಯರು ಮತ್ತು ಅವರ ದಾಸಿಯರು ಇವರ ಹೊರತಾಗಿ ಬೇರೆ ಯಾರೂ ಇರಲಿಲ್ಲ. ಎಲ್ಲರು ಯಥೇಚ್ಛವಾಗಿ ಊಟ ಮಾಡಿದರು. ಕೆಲವು ಸ್ತ್ರೀಯರು ಹಾಡುತ್ತಿದ್ದರು. ಕೆಲವರು ನರ್ತಿಸುತ್ತಿದ್ದರು. ಎಲ್ಲರೂ ಸಾಕಷ್ಟು ಮದ್ಯವನ್ನು ಪ್ರಾಶಿಸಿದರು. ವೃಕ್ಷದ ದಟ್ಟವಾದ ನೆರಳಿನಿಂದ ಬಿಸಿಲಿನ ತಾಪವು ಆಗುತ್ತಿರಲಿಲ್ಲ. ಕೃಷ್ಣಾರ್ಜುನರು ಒಂದೆಡೆ ಹರಟೆಯಲ್ಲಿ ಮಗ್ನರಿದ್ದರು. ತಮ್ಮ ತಮ್ಮ ಯುದ್ಧರಂಗದಲ್ಲಿಯ, ಹಾಗೆಯೆ ಪ್ರೇಮ ರಂಗದಲ್ಲಿಯ ನಿಪುಣತೆಯನ್ನು ಹೇಳಿಕೊಳ್ಳುತ್ತಿದ್ದರು. **'ವಿಕ್ರಾಂತಾನಿ ರತಾನಿಚ'** ಅವರು ಈ ರೀತಿ ಕೂತಿರುವಾಗ ಒಬ್ಬ ಬ್ರಾಹ್ಮಣನು ಅಲ್ಲಿಗೆ ಬಂದು ಇಂತೆಂದನು– "ನಾನು ಹಸಿದಿದ್ದೇನೆ. ನಾನು ಹೊಟ್ಟೆಬಾಕನು. ನಾನು ತುಂಬ ತಿನ್ನುತ್ತೇನೆ. ನನ್ನನ್ನು ತೃಪ್ತಿಗೊಳಿಸಿರಿ." ಅವನಿಗೆ ಆಹಾರವನ್ನು ಕೊಡಲು, ಹೋದಾಗ ಆತನು ತನ್ನ ಅಗ್ನಿ ರೂಪವನ್ನು ಪ್ರಕಟಿಸಿ, "ಸರ್ವಜೀವಪ್ರಾಣಿಗಳನ್ನೊಳಗೊಂಡ ಖಾಂಡವ ವನವನ್ನು ನನಗೆ ಭಕ್ಷವಾಗಿ ಕೊಡಿರಿ. ಅದನ್ನು ನನಗೆ ದಹಿಸಲು ಬಿಡಿ. ನಾನು ದಹಿಸಲು ಹವಣಿಸಿದ್ದಾಗೆಲ್ಲಾ ಇಂದ್ರನು ಮಳೆಗರಿಸಿ ನನ್ನ ಪ್ರಯತ್ನಗಳನ್ನು ಹಾಳು ಮಾಡುತ್ತಾನೆ" ಅಂದನು. ಕೃಷ್ಣಾರ್ಜುನರು ಈ ಕಾರ್ಯವನ್ನು ನೆರವೇರಿಸಿಕೊಡಲು ಒಪ್ಪಿಕೊಂಡರು. ಆದರೆ, ಅದರ ಬದಲಾಗಿ ಅಗ್ನಿಯು ಒಳ್ಳೆಯ ರಥ ಶಸ್ತ್ರಗಳನ್ನು ಪೂರೈಸಬೇಕೆಂಬ ಶರತ್ತನ್ನು ಹಾಕಿದರು. ಅಗ್ನಿಯು ಅರ್ಜುನನಿಗೆ ಶುಭ್ರವರ್ಣದ, ವಾಯುವೇಗದಿಂದ ಧಾವಿಸುವ ಕುದುರೆಗಳನ್ನು, ಒಂದು ದಿವ್ಯ ರಥವನ್ನು, ಗಾಂಡೀವ ಧನುಸ್ಸನ್ನು ಕೊಟ್ಟನು. ಕೃಷ್ಣನಿಗೆ ಚಕ್ರ ಹಾಗೂ ಇನ್ನಿತರ ಆಯುಧಗಳನ್ನು ಕೊಟ್ಟನು. ಅರಣ್ಯವು ಉರಿಯುತ್ತಿದ್ದಾಗ, ಕೃಷ್ಣಾರ್ಜುನರು ರಥದಲ್ಲಿ ಕುಳಿತಿದ್ದರು. ಅಗ್ನಿ ಭಯದಿಂದ ಯಾವ ಪ್ರಾಣಿಯು ನುಸುಳಿ ಹೊರ ಹೋಗಬಾರದ ಹಾಗೆ ಬಿಗಿಯಾಗಿ ಕಾವಲಿಟ್ಟಿದ್ದರು. ರಥದಿಂದ

ಸುತ್ತುವರೆದು ಭಯಂಕರ ಸಂಹಾರವನ್ನು ಮಾಡಿದರು. ಯಾವ ಪ್ರಾಣಿಗಳು ಹೊರಗೆ ಧಾವಿಸಿದವೋ ಅವು ಕೃಷ್ಣಾರ್ಜುನರ ಶಸ್ತ್ರಾಸ್ತ್ರಗಳಿಗೆ ಅಹುತಿಯಾದವು. ನಾಗರಾಜನಾದ ತಕ್ಷಕನು ಕುರುಕ್ಷೇತ್ರಕ್ಕೆ ಹೋಗಿದ್ದರಿಂದ ಬದುಕಿ ಉಳಿದನು. ಅವನ ಮಗನನ್ನು ತಾಯಿಯು ತನ್ನ ಪ್ರಾಣವನ್ನು ಕಳೆದುಕೊಂಡು ಉಳಿಸಿದಳು. ತಕ್ಷಕನ ಆಶ್ರಿತನಾದ 'ಮಯ'ನೆಂಬ ಅಸುರನು, "ಅರ್ಜುನನೇ ! ನನ್ನನ್ನು ರಕ್ಷಿಸು" ಎಂದು ಕೂಗುತ್ತ ಬಂದನು. ಅರ್ಜುನನು ಆತನಿಗೆ ಜೀವದಾನ ಮಾಡಿದನು. ಅರ್ಜುನನು 'ಶಾರ್ಙ್ಗ' ಎಂಬ ಪಕ್ಷಿಣಿಯಿಂದ ಜನಿಸಿದ ಬ್ರಾಹ್ಮಣನ ಮಕ್ಕಳನ್ನು ರಕ್ಷಿಸಿದನು. ತಕ್ಷಕನ ವಂಶದಲ್ಲಿಯ 'ನಾಗ' ಮತ್ತು ಇತರ ಪಶುಪಕ್ಷಿಗಳು ಹತರಾದರು. ಇಂದ್ರಾದಿ ದೇವರು ಆ ಅರಣ್ಯದ ರಕ್ಷಣೆಗಾಗಿ ಧಾವಿಸಿದಾಗ ಕೃಷ್ಣಾರ್ಜುನರು ಅವರನ್ನು ಸೋಲಿಸಿ ಹೊಡೆದೋಡಿಸಿದರು. "ನಿನ್ನ ಸ್ನೇಹಿತನಾದ ತಕ್ಷಕನು ಬದುಕಿರುವನು. ಕಾರಣ ಈಗ ತುಮುಲ ಯುದ್ಧ ಮಾಡುವುದು ಬೇಡ" ಎಂದು ದೇವಾದಿಗಳು ಇಂದ್ರನಿಗೆ ಹೇಳಿದರು. ಮುಂದೆ ಯುದ್ಧವು ನಡೆಯಲಿಲ್ಲ. ಅರಣ್ಯವು ಒಂದು ವಾರ ಉರಿಯುತ್ತಿತ್ತು. ಕೃಷ್ಣಾರ್ಜುನರು ಸುತ್ತಲೂ ಕಾವಲಿದ್ದು ಪ್ರಾಣಿಗಳ ಸಂಹಾರವನ್ನು ನಡೆಯಿಸಿದರು. ಕಾಡಿನಲ್ಲಿಯ ಸಮಸ್ತ ಪ್ರಾಣಿಗಳ ಮಾಂಸವನ್ನು, ಕೊಬ್ಬನ್ನು ತಿಂದು ಸಂತುಷ್ಟನಾದ ಅಗ್ನಿಯು ವೀರ ಕೃಷ್ಣಾರ್ಜುನರನ್ನು ಪುನಃ ಸಂದರ್ಶಿಸಿ ಹೊರಟುಹೋದನು. ತನ್ನ ಜೀವನವನ್ನುಳಿಸಿದ ಉಪಕಾರಕ್ಕಾಗಿ ಮಯಾಸುರನು ದೇಶವಿದೇಶಗಳಿಂದ ಸಾಮಗ್ರಿಗಳನ್ನು ಸಂಗ್ರಹಿಸಿ ರಾಜಧಾನಿಯಾದ ಇಂದ್ರಪ್ರಸ್ಥದಲ್ಲೆ ಮಯಸಭೆಯನ್ನು ನಿರ್ಮಿಸಿದನು. ಈ ಸಭೆಯನ್ನು ನಿರ್ಮಿಸಿದ ನಂತರ ಧರ್ಮರಾಜನ ಸಹೋದರರು ನಾಲ್ಕು ದಿಕ್ಕಿನ ಅರಸರನ್ನು ಜಯಿಸಿಕೊಂಡು ಬಂದರು. ಆನಂತರ ಧರ್ಮರಾಜನು ರಾಜಸೂಯ ಯಜ್ಞವನ್ನು ಮಾಡಿದನು. ಹಸ್ತಿನಾಪುರದ ಸ್ವಬಾಂಧವರಿಗೂ ಯಜ್ಞದ ಔತಣವನ್ನಿತ್ತರು. ಆಗಿನ ಎಲ್ಲ ರಾಜರ ಎದುರು ಪಾಂಡವರ ವೈಭವದ ಪ್ರದರ್ಶನವಾಯಿತು. ಅದರಲ್ಲಿಯೂ ಎಲ್ಲಕ್ಕೂ ಮೀರುವ ಹೊಟ್ಟೆ ಉರಿ ಎಬ್ಬಿಸುವ ಪ್ರದರ್ಶನವು ಕೌರವರ ಮುಂದೆ ನಡೆಯಿತು. ಭೂಮಿ ಇರುವೆಡೆ ಹರಿಯುವ ನೀರಿನ ಭಾಸವಾಗುವಂತೆ, ನೀರು ಹರಿಯುವ ಸ್ಥಳದಲ್ಲಿ ಭೂಮಿ ಇರುವ ಹಾಗೆ ಭಾಸವಾಗುವಂತೆ, ಈ ಮಯಸಭೆಯು ರಚಿಸಲ್ಪಟ್ಟಿತ್ತು. ಬಾಗಿಲೆಂದು ದಾಟಲು ಹವಣಿಸಿದರೆ, ತಲೆಯು ಗೋಡೆಗೆ ಅಪ್ಪಳಿಸುವುದು. ರತ್ನಗಳಿಂದ ರಚಿತವಾದ ಪಶುಪಕ್ಷಿಗಳು, ಗಿಡಗಳು, ಸುಂದರವಾದ ನಿಜವಸ್ತುಗಳಂತೆ ಕಂಗೊಳಿಸುತ್ತಿದ್ದವು. ದುರ್ಯೋಧನನು ಕಾಲುಜಾರಿ, ಬಿದ್ದು ನೆನೆದುಕೊಂಡನು. ಆತನ ತಲೆಯು ಗೋಡೆಗೆ ಅಪ್ಪಳಿಸಿತು. ಪಾಂಡವರು ಮತ್ತು ದ್ರೌಪದಿಯು ಆತನ ಈ ಫಜೀತಿಯನ್ನು ನೋಡಿ ಗಹಗಹಿಸಿ ನಕ್ಕರು. ಪಾಂಡವರು ತಮ್ಮ ವೈಭವವನ್ನು ಪ್ರದರ್ಶಿಸಿದ್ದಲ್ಲದೇ ಎಲ್ಲರೆದುರು ಉದ್ದೇಶಪೂರ್ವಕವಾಗಿ ದುರ್ಯೋಧನನನ್ನು ಅವಮಾನಗೊಳಿಸಿದರು.

ಸ್ವಲ್ಪಾವಧಿಯಲ್ಲಿಯೇ ಕಾಲ ತಿರುಗಿತು. ಪಾಂಡವರು ಸರ್ವಸ್ವವನ್ನು ಸೋತು ಹದಿಮೂರು ವರ್ಷದ ಕಾಲ ವನವಾಸಕ್ಕೆ ಹೋದರು. ಮರಳಿ ಬಂದು ಯುದ್ಧದಲ್ಲಿ ವಿಜಯ

ಪಡೆದ ನಂತರ ಅವರು ಪಿತ್ರಾರ್ಜಿತ ಹಸ್ತಿನಾಪುರದಲ್ಲಿ ನೆಲಸಿದರು. ಪುನಃ ಇಂದ್ರಪ್ರಸ್ತಕ್ಕೆ ಹೋಗಲಿಲ್ಲ. ಯಾದವ ವಂಶವು ಅಳಿದ ನಂತರ ಅರ್ಜುನನು ಕರೆದುಕೊಂಡು ಬಂದ ಉಳಿದವರಲ್ಲಿ ಕೃಷ್ಣನ ಮೊಮ್ಮಗನಾದ ವಜ್ರನು ಇದ್ದನು. ಪಾಂಡವರು ಮಹಾಪ್ರಸ್ಥಾನಕ್ಕೆ ತೆರಳುವಾಗ ಪರೀಕ್ಷಿತನನ್ನು ಹಸ್ತಿನಾಪುರದಲ್ಲಿಟ್ಟು, ವಜ್ರನಿಗೆ ಇಂದ್ರಪ್ರಸ್ಥದ ರಾಜ್ಯವನ್ನು ಕೊಟ್ಟರು. ಅನಂತರ ಇಂದ್ರಪ್ರಸ್ಥ ಸಮಾಚಾರವು ಕೇಳಿಬರುವುದಿಲ್ಲ. ಮಯಸಭೆಯ ವರ್ಣನೆಯು ಸಭಾಪರ್ವದಲ್ಲಿ ಬಂದು ಹೋದ ನಂತರ ಅದರ ಉಲ್ಲೇಖವು ನಂತರ ಬಂದಿಲ್ಲ.

ಇದು ಖಾಂಡವವನದ ಕಥಾಭಾಗ. ಇದರಲ್ಲಿ ಯೋಚಿಸಬೇಕಾದ ಅನೇಕ ಸಂಗತಿಗಳಿವೆ. ಇಷ್ಟು ದೊಡ್ಡವನವನ್ನು ಏಕೆ ಸುಟ್ಟುಹಾಕಿರಬಹುದು? ಆ ವನದಲ್ಲಿಯ ನಾಗ, ಪಶುಪಕ್ಷಿ ಆದಿಗಳನ್ನು ನಿಃಶೇಷವಾಗಿ ಏಕೆ ಸಂಹರಿಸಲಾಯಿತು ? ತಾನು ***ಭಿಭತ್ಸು** ಎಂದು ಹೇಳಿಕೊಳ್ಳುವ ಅರ್ಜುನನು ಈ ಪರಿಯ ಸಂಹಾರವನ್ನು ಏಕೆ ಮಾಡಿದನು?

ಯಮುನಾ ತೀರದಲ್ಲಿ ವನವಿಹಾರಕ್ಕೆಂದು ಹೋದಾಗ ಆ ವನವನ್ನು ಸುಟ್ಟುಹಾಕುವ ವಿಚಾರವು ಏಕೆ ತಲೆದೋರಿತು ? ಮಹಾಭಾರತದಲ್ಲಿ ಅಗ್ನಿಯೇ ಬ್ರಾಹ್ಮಣ ರೂಪವನ್ನು ತಾಳಿ ಭಕ್ಷ್ಯವನ್ನು ಬೇಡಿದನೆಂಬ ಉಲ್ಲೇಖವಿದೆ. ಬ್ರಾಹ್ಮಣನಿಗೆ ಇಲ್ಲವೆಂದು ಹೇಗೆ ಹೇಳುವುದು ? ಎಂಬ ಕಾರಣದಿಂದ ಈ ವೀರರು ಖಾಂಡವವನವನ್ನು ಸುಟ್ಟರು. ಸುಟ್ಟುಹಾಕಿದ್ದು ಯಾವ ರೀತಿಯಲ್ಲಿ? ಇಬ್ಬರು ಇಬ್ಬದಿಯಿಂದ ರಥದಿಂದ ಬಾಣಗಳ ಸುರಿಮಳೆಗರಿಸಿ, ಯಾವ ಪ್ರಾಣಿಯು ಹೊರಗೆ ಹೋಗದಂತೆ ನೋಡಿಕೊಂಡರು. ಕೇವಲ ಗಿಡಮರಗಳನ್ನೇ ಸುಡದೇ ಒಂದೊಂದು ಪ್ರಾಣಿಯನ್ನು ಸಹ ಬಿಡದೇ ಆಯ್ದು ಅವನ್ನು ಕಾಡಿನಲ್ಲಿ ಓಡಿಸಿ ವನದಲ್ಲಿ ಸುಟ್ಟರು. ಘೃತವನ್ನು ಸೇವಿಸಿ ಬೇಸತ್ತು ಅಗ್ನಿಯು ರುಚಿವೈವಿಧ್ಯಕ್ಕಾಗಿ ಕಾಡಿನಲ್ಲಿಯ ಪ್ರಾಣಿಗಳನ್ನು ಸೇವಿಸಲು ಇಚ್ಛಿಸಿದನು. ಕೃಷ್ಣಾರ್ಜುನರು ಮೇಲಿನಂತೆ ಅದನ್ನು ಪೂರೈಸಿದರು. ಈ ಕಥೆಯಲ್ಲಿ ಎರಡು ರೀತಿಯ ಪರ್ಯಾಯಗಳು ಸಂಭವಿಸುತ್ತವೆ. ಮೊದಲನೆಯ ಪರ್ಯಾಯವೆಂದರೆ ಕೃಷ್ಣಾರ್ಜುನರು ಖಾಂಡವವನವನ್ನು ಸುಟ್ಟುಹಾಕದೇ ಅದು ತಾನಾಗಿಯೇ ಸುಟ್ಟಿತು. ಅದರ ಪ್ರಶಸ್ತಿಯನ್ನು ಮಾತ್ರ ಕೃಷ್ಣಾರ್ಜುನರೇ ಪಡೆದರು. ಎರಡನೆ ಪರ್ಯಾಯವೆಂದರೆ ನಿಜವಾಗಿ ಖಾಂಡವವನವನ್ನು ಕೃಷ್ಣಾರ್ಜುನರು ಸುಟ್ಟುಹಾಕಿದರು.

*ಭಿಭತ್ಸು–[ತೀರ ಕ್ರೂರ ಕರ್ಮವನ್ನು ಮಾಡುವವನು. ಅರ್ಜುನನು, ತಾನು ಯುದ್ಧಮಾಡುತ್ತಿರುವಾಗ ಭೀಭತ್ಸಕಾರ್ಯಗಳನ್ನು ಎಂದೂ ಮಾಡುವುದಿಲ್ಲ. ಆದ್ದರಿಂದ ತನ್ನ ಹೆಸರು 'ಭಿಭತ್ಸು' ಎಂದಾಗಿದೆ. ಎಂದು ಆತನೇ ಸ್ವತಃ ಆತನ ಆರು ಹೆಸರುಗಳ ಸ್ಪಷ್ಟೀಕರಣವನ್ನು ವಿರಾಟಪರ್ವದಲ್ಲಿ ಕೊಟ್ಟ ಪ್ರಸಂಗದಲ್ಲಿ ಹೇಳಿದ್ದಾನೆ] [೪–೪೯–೧೬]. ಮೊದಲನೆಯ ಪರ್ಯಾಯವು ನಿಜವೆಂದು ಭಾವಿಸಿದರೆ ಇಷ್ಟು ದೊಡ್ಡ ಕಾಡನ್ನು ಎಲ್ಲಾ ಪ್ರಾಣಿಗಳ ಸಮೇತವಾಗಿ ಸುಟ್ಟು ಹಾಕುವುದು, ಇದು ಒಂದು ಬಗೆಯ ಶೂರತ್ವದ, ವಿಜಯದ ಕೃತ್ಯವೆಂದು ತಿಳಿಯಲ್ಪಡುತ್ತಿತ್ತು ಎಂಬುದಕ್ಕೆ ಸಂದೇಹವಿಲ್ಲ. ಮಹಾಭಾರತದಲ್ಲಿ ಹೇಳಿದಂತೆ ಮೇಲೆ ಮೇಲೆ

ಮಳೆ ಬರುತ್ತಿದ್ದರೂ, ಅವರು ಮತ್ತೆ ಮತ್ತೆ ಬೆಂಕಿ ಅಂಟಿಸಿ ಕಾಡನ್ನು ಪೂರ್ತಿ ಸುಟ್ಟುಹಾಕಿದರೆಂದು ತಿಳಿಯಲು ಯಾವ ಅಡ್ಡಿಯು ಇಲ್ಲ. ಆದರೆ ಅವರು ಅದನ್ನು, ಸುಟ್ಟಿದ್ದೇಕೆ ?

ಪಶುಪಾಲನೆಯನ್ನು ಮಾಡುವ, ನೇಗಿಲಿನಿಂದ ಭೂಮಿಯ ಉಳಿಮೆಯನ್ನು ಮಾಡುವ ಆರ್ಯ ಜನಾಂಗದ ಇತಿಹಾಸದಲ್ಲಿ ಕಾಡನ್ನು ಸುಡುವ, ಇಲ್ಲವೆ ಕಡಿದು ಹಾಕುವ ಪ್ರಸಂಗಗಳು ಕಂಡುಬರುತ್ತವೆ. ಇಡೀ ಉತ್ತರ ಭಾರತದಲ್ಲಿ ನಿಬಿಡವಾದ ಅರಣ್ಯಗಳು ಇದ್ದವು. ಅವುಗಳ ವರ್ಣನೆಯು ವೇದಗಳಲ್ಲಿ, ಮಹಾಭಾರತದಲ್ಲಿದೆ. ಐತಿಹಾಸಿಕ ಕಾಲದ ಶಿಲಾಲೇಖಗಳಲ್ಲಿಯೂ ಆ ವರ್ಣನೆಯು ಬರುತ್ತದೆ. ಮಹಾ ಭಾರತದಲ್ಲಿ ತೋರಿಸಿದ ರಾಜ್ಯಗಳು ಚಿಕ್ಕ ಚಿಕ್ಕವಿದ್ದವು. ಈಗಿನ ಪಂಜಾಬ ಮತ್ತು ದಿಲ್ಲಿಯ ಸುತ್ತಲಿನ ಭಾಗದಲ್ಲಿ ಕುರು, ದಕ್ಷಿಣ, ಉತ್ತರ ಪಾಂಚಾಲ, ತಿಗರ್ತ, ಮತ್ಸ್ಯ ಈ ರಾಜ್ಯಗಳಿದ್ದವು. ಅವು ಒಂದಕ್ಕೊಂದು ಹೊಂದಿಕೊಂಡಿರಲಿಲ್ಲ. ನಡುಮಧ್ಯದಲ್ಲಿ ಒಂದು ರಾಜಧಾನಿಯು ಇರುತ್ತಿತ್ತು, ಅದರ ಸುತ್ತಲೂ ಹೊಲಗಳನ್ನು ಒಳಗೊಂಡ ಗ್ರಾಮಗಳು ಇರುತ್ತಿದ್ದವು. ಅವುಗಳೆಲ್ಲವನ್ನು ಸುತ್ತುವರೆದು ಅರಣ್ಯಗಳು ಇರುತ್ತಿದ್ದವು. ಈ ರೀತಿ ರಾಜ್ಯದ ನಕ್ಷೆ ಇರುತ್ತಿತ್ತು. ಕಾಮ್ಯಕವನವು, ದ್ವೈತವನವು, ಖಾಂಡವವನವು ಇಂತಹ ಅನೇಕ ವನಗಳ ವರ್ಣನೆಯು ಬರುತ್ತದೆ. ಮಹಾಭಾರತದ ತರುವಾಯ ಐದಾರು ಶತಕಗಳ ನಂತರ ಬೌದ್ಧಕಾಲದಲ್ಲಿ ಪಶ್ಚಿಮದ ಕಡೆಯ ಅರಣ್ಯಗಳ ವರ್ಣನೆಯು ಕಂಡುಬರುವುದಿಲ್ಲ. ಆದರೆ ಪೂರ್ವ ದಿಕ್ಕಿನ ವೇಳುವನ, ಜೇತುವನ ಮುಂತಾದ ಚಿಕ್ಕ ಚಿಕ್ಕವನಗಳ ವರ್ಣನೆಗಳು, ಹೆಸರುಗಳು ಬರುತ್ತವೆ. ಕಳೆದ ಒಂದೆರಡು ಸಾವಿರ ವರ್ಷಗಳಲ್ಲಿ ಎಲ್ಲ ಕಾಡುಗಳು ಇಲ್ಲದಂತಾಗಿ ಸಿಂಧುನದಿಯಿಂದ ಗಂಗಾ ಸಾಗರದ ವರೆಗಿನ ಭೂಭಾಗವು ವಿಶಾಲವಾದ ಕೃಷಿಪ್ರದೇಶವಾಗಿದೆ. ಅಂಗದೇಶದಲ್ಲಿಯೂ ಈ ತರಹದ ವಿಶಾಲ ಅರಣ್ಯಗಳಿದ್ದವು. ಅವು ಇಲ್ಲದಾಗಿ ಆ ಪ್ರದೇಶವು ಕೃಷಿ ಭೂಮಿಯಾಯಿತು. ಆಂಗ್ಲಜನರು ಉತ್ತರ ಮತ್ತು ದಕ್ಷಿಣ ಅಮೆರಿಕಾಕ್ಕೆ ಹೋದರು. ಆಗ ಅವರು ಅಲ್ಲಿಯ ಅರಣ್ಯಗಳನ್ನು ಕಡಿದುಹಾಕಿದರು, ಇಲ್ಲವೆ ಸುಟ್ಟುಹಾಕಿ ಬಯಲು ಭೂಮಿಯನ್ನಾಗಿ ಮಾಡಿ ಹೊಲಗಳನ್ನಾಗಿ ಮಾಡಿದರು. ಧರ್ಮನು ಖಾಂಡವ ಪ್ರಸ್ಥಕ್ಕೆ ಬಂದನು. ಆಗ ಆತನು ವೈಶ್ಯ ಮೊದಲಾದ ಜನರನ್ನು ಹೊಸ ರಾಜಧಾನಿಯಲ್ಲಿ ಕರೆಯಿಸಿ ನೆಲೆಯಿಸಿದನು. ಪ್ರತಿಯೊಂದು ರಾಜಧಾನಿಯ ಸುತ್ತಲು ಕೃಷಿ ಪ್ರದೇಶವು ಇರುತ್ತಿತ್ತು. ಅದರ ಸುತ್ತಲು ಅರಣ್ಯಗಳು ಹಬ್ಬಿಕೊಂಡಿರುತ್ತಿದ್ದವು. ಇದೇ ಮಾದರಿಯ ರಾಜ್ಯವು ಪಾಂಡವರದಿತ್ತು. ಖಾಂಡವವನಕ್ಕೆ ಹೊಂದಿಕೊಂಡು ಒಂದು ಕಡೆ 'ಇಕ್ಷುಮತಿ' ಎಂಬ ಒಂದು ಸಣ್ಣ ನದಿಯು ಮತ್ತು ಅದರ ನೆರೆಗೆ 'ಯಮುನಾ' ಈ ನದಿಗಳು ಹರಿಯುತ್ತಿದ್ದವು. 'ಖಾಂಡವವನ' ಎಂಬ ಹೆಸರು ಗಮನಸೆಳೆಯುವಂತಿದೆ 'ಖಾಂಡವ' ಈ ಶಬ್ದ 'ಖಂಡು' ಶಬ್ದದಿಂದ ಹುಟ್ಟಿದೆ. 'ಖಂಡು' ಎಂದರೆ ಕಲ್ಲುಸಕ್ಕರೆಯಂತಹ ಸಿಹಿ ಪದಾರ್ಥ. ವನದ ನೆರೆಯಲ್ಲಿ 'ಇಕ್ಷುಮತಿ' ನದಿಯು ಹರಿಯುತ್ತಿತ್ತು. 'ಇಕ್ಷು' ಎಂದರೆ ಕಬ್ಬು. 'ಇಕ್ಷುಮತಿ' ಎಂಬ ಹೆಸರು ಕೂಡ ನದಿಯ ತೀರದಲ್ಲಿ

ಯಾವುದೇ ಬಗೆಯ ಸಿಹಿಯಾದ ಪದಾರ್ಥವು ಸಿಕ್ಕುತ್ತಿರಬೇಕೆಂದು ತೋರಿಸುತ್ತದೆ. ಕೃಷ್ಣನ ಬಾಲ ಲೀಲೆಗಳನ್ನು ವರ್ಣಿಸಿದ ವನದ ಹೆಸರು 'ಮಧುವನ' ಎಂದಿತ್ತು, ಅದು ನದಿಯ ದಡದಲ್ಲಿಯೇ ಇತ್ತು. 'ಇಕ್ಷುಮತಿ', 'ಖಾಂಡವ' ಮತ್ತು 'ಮಧುವನ' ಈ ಶಬ್ದಗಳಿಂದ ಈ ವನಗಳಲ್ಲಿ ಸಿಹಿ ಪದಾರ್ಥವು ಲಭಿಸುತ್ತಿರಬೇಕೆಂದು ಅನ್ನಿಸುತ್ತದೆ. ಆ ಪದಾರ್ಥವು ಜೇನಿರಬಹುದೇ? ಇತ್ತಿತ್ತಲಾಗಿ ಮಧ್ಯಭಾರತದ ಅರಣ್ಯಗಳಲ್ಲಿ ಒಂದು ತರಹದ ರಮ್ಯವಾದ ವಿಶಾಲವಾದ ವೃಕ್ಷವು ಕಂಡುಬರುತ್ತದೆ. ಅದಕ್ಕೆ 'ಮೋಹ' ಇಲ್ಲವೆ 'ಮೋಗುವಾ' ಅನ್ನುವರು. ಸಂಸ್ಕೃತದಲ್ಲಿ ಇದಕ್ಕೆ 'ಮಧುಕ್' ಅನ್ನುತ್ತಾರೆ, ಮೋಹದ ಮರವು ಅರಣ್ಯವಾಸಿಗಳಿಗೆ ಕಾಮಧೇನುವಂತಿರುತ್ತದೆ. ಮರದ ಎಲೆಗಳನ್ನು ಊಟದ ಎಲೆಗಳಂತೆ ಉಪಯೋಗಿಸುತ್ತಾರೆ. ಮಧುರವಾದ, ಸುವಾಸನೆಯುಳ್ಳ ಜೇನಿನಿಂದ ಕೂಡಿದ ಹೂವುಗಳಿಂದ, ಮದ್ಯವನ್ನು ತಯಾರಿಸುತ್ತಾರೆ. ಹೂವುಗಳನ್ನು ಒಣಗಿಸಿ ತಿನ್ನುತ್ತಾರೆ. ಒಳಗಿನ ಅಂಟುರಸದಲ್ಲಿ ಮಾಡಿದ ಅರಳು–ಉಂಡೆಗಳು ರುಚಿಯಾಗಿರುತ್ತವೆ. ಬಹುಶಃ ಖಾಂಡವವನವು ಈ ತರಹದ ವೃಕ್ಷಗಳಿಂದ ಸಮೃದ್ಧವಿರಬೇಕು. ಅದರಿಂದಲೂ ಅದಕ್ಕೆ ಖಾಂಡವವನವೆಂಬ ಹೆಸರಿರಬೇಕು. ಆದರೆ ಅವುಗಳ ಸವಿಯು, ಅವುಗಳ ಯೋಗ್ಯತೆಯು, ಅವುಗಳ ನಿಜವಾದ ಬೆಲೆಯು ಅಲ್ಲಿ ಒಳಗೆ ನೆಲಸಿದ ಆರ್ಯೇತರ ಜನರಿಗೆ ; ವಿನಾ ಆರ್ಯರಿಗಲ್ಲಾ, ವೈಶ್ಯರು ಹಾಗು ಕುಶಲ ಕರ್ಮಚಾರಿಗಳು ಮುಂತಾದ ನಗರ ಜೀವಿಗಳು ರಾಜಧಾನಿಯಲ್ಲಿರುತ್ತಿದ್ದರು.

ವ್ಯವಸಾಯ ಮಾಡುವ ಕೃಷಿಕರು, ರಾಜಧಾನಿಯ ಸುತ್ತಲಿನ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಕಾಡನ್ನು ಸುಡಿಸುವುದು ಇಲ್ಲವೇ ಕಡಿಸುವುದು ಮತ್ತು ವ್ಯವಸಾಯಕ್ಕೆ ಭೂಮಿಯನ್ನು ಒದಗಿಸುವುದೂ ರಾಜನ ಕರ್ತವ್ಯಗಳಲ್ಲಿ ಒಂದಾಗಿತ್ತು. ಇದನ್ನೇ ಕೃಷ್ಣಾರ್ಜುನರು ಮಾಡಿದರು. ಆದರೆ ಈ ವನವನ್ನು ಸುಟ್ಟುಹಾಕುವುದಕ್ಕೆ ಬಹಳ ವಿರೋಧವಿತ್ತೆಂದು ತೋರುತ್ತದೆ. ಈ ವಿರೋಧವು ಯಾರಿಂದ ಇರಬಹುದು? ಎಲ್ಲ ವರ್ಣನೆಯನ್ನು ಪರಾಮರ್ಶಿಸಿದಲ್ಲಿ ಖಾಂಡವವನವು ನಿರ್ಮಾನುಷ್ಯವಿರಲಿಲ್ಲವೆಂದು ತೋರುತ್ತದೆ. ಈ ಭೂಮಿಯ ಮೇಲೆ ಯಾರ ಒಡೆತನವಿರಲಿಲ್ಲವೆಂತಲ್ಲ. ಅಲ್ಲಿ ತಕ್ಷಕನೆಂಬ ಕುಶಲ ಶಿಲ್ಪಿ ಇದ್ದನು. 'ಶಾರ್ಙ್ಗೀ,' ಎಂಬ ಪಕ್ಷಿಕುಲದ ಹೆಸರಿರುವ ಒಬ್ಬ ಬ್ರಾಹ್ಮಣನನ್ನು ಮದುವೆಯಾದ ಸ್ತ್ರೀಯು ಅಲ್ಲಿ ವಾಸಿಸುತ್ತಿದ್ದಳು. ಈ ಹೆಸರುಗಳಿದ್ದ ವ್ಯಕ್ತಿಗಳಲ್ಲದೇ ಇನ್ನೂ ಅನೇಕರು ಅಲ್ಲಿ ವಾಸಿಸುತ್ತಿದ್ದರು. ಅವರ ಹೆಸರುಗಳು ಸರ್ಪಗಳ, ಪಕ್ಷಿಗಳ ಹೆಸರಾಗಿದ್ದವು. ಅದಲ್ಲದೆ ಪಶುಗಳು ಇದ್ದವು. ಅಲ್ಲಿ ನಿಜವಾದ ಪಶುಗಳಿದ್ದವೋ, ಇಲ್ಲವೆ ಪಶುಗಳ ಹೆಸರುಳ್ಳ ಮಾನವರಿದ್ದರೋ ಎಂಬುದು ತಿಳಿಯದು. ಉದಾಹರಣೆಗಾಗಿ ಹುಲಿ, ಗರುಡ, ಕರಡಿ ಇತ್ಯಾದಿ, ಹೆಸರಿನವರು ಇವರೆಲ್ಲರನ್ನು ಖಾಂಡವವನವನ್ನು ಸುಡುವಾಗ ಕೃಷ್ಣಾರ್ಜುನರು ಸಾಯಿಸಿದರು. ಈ ಮೊದಲು ಹೇಳಿದವರನ್ನು ಬಿಟ್ಟು ಬೇರೆ ಯಾರನ್ನೂ ಜೀವಿತವಾಗಿ ಬಿಡಲಿಲ್ಲ. ಈ ಸಂಹಾರವನ್ನೇತಕ್ಕೆ ಮಾಡಿದರು ? ಎಂಬ ಪ್ರಶ್ನೆಯು ಪುನಃ ತಲೆದೋರುತ್ತದೆ. ಅರಣ್ಯವನ್ನು ಸುಟ್ಟು, ಭೂಮಿಯನ್ನು ವಸತಿಗಾಗಿ ಕೊಡುವುದಿದ್ದಲ್ಲಿ ಆ ಭೂಮಿಯ

ಮೊದಲಿನ ಒಡೆಯನು ಇರಲೇಬಾರದು. ಆದ್ದರಿಂದ ಆ ಭೂಮಿಯಲ್ಲಿ ವಂಶಪರಂಪರಾಗತವಾಗಿ ನೆಲೆಸಿದವರಲ್ಲಿ ಪ್ರಮುಖವಾಗಿ 'ನಾಗ'ರೆಂಬವರು ಇದ್ದರು. ಮಹಾಭಾರತ ಕಥೆಯಲ್ಲಿ ಉಲ್ಲೇಖವಾದ 'ಶೇಷ', 'ವಾಸುಕ', 'ಧೃತರಾಷ್ಟ್ರ', 'ಐರಾವತ', 'ಏಲಾಪತ್ರ', 'ತಕ್ಷಕ', 'ಕರ್ಕೋಟಕ' ಮುಂತಾದವರು ಬೇರೆ ಬೇರೆ ನಾಗಕುಲದ ಮುಖ್ಯಸ್ಥರಿದ್ದರು. ಅವರಿಗೆ 'ನಾಗರಾಜ'ರೆಂಬ ನಾಮಾಭಿಧಾನವಿತ್ತೆಂದು ಕಂಡು ಬರುತ್ತದೆ. ಆರ್ಯರು ಯಾವ ಭೂಮಿಯಲ್ಲಿ ಪ್ರಥಮ ಬಾರಿ ಬಂದರೋ [ಪಂಚನದಿಗಳ ಪ್ರದೇಶ] ಅದೇ ನಾಗ ಕುಲದವರ ಪ್ರದೇಶವಾಗಿತ್ತು. ನಾಗಜನರು ಮಾತ್ರ ನದಿಯ ದಡದಲ್ಲಿ ಹೊಂದಿದ ಅರಣ್ಯಗಳಲ್ಲಿ ವಾಸಿಸುತ್ತಿದ್ದರೆ ಆರ್ಯರು ಬಯಲು ಭಾಗವನ್ನು ವಾಸಕ್ಕೆ ಇಚ್ಛಿಸುತ್ತಿದ್ದರು. ವಾಸುಕಿಯು ಭೋಗಾವತಿ ನದಿಯ ದಡದಲ್ಲಿದ್ದನು. ಐರಾವತನು ಇರಾವತಿ ನದಿಯ ದಡದಲ್ಲಿದ್ದನು. ತಕ್ಷಕನು ಯಮುನಾತೀರದ ಕುರುಕ್ಷೇತ್ರದಲ್ಲಿದ್ದನು. 'ಏಲಾಪತ್ರ' ಈ ಶಬ್ದವು ಐರಾವತ ಶಬ್ದದ ಅಪಭ್ರಂಶವಾಗಿದೆ. ಯಾವ ಸ್ಥಾನದಲ್ಲಿ ನಾಗಜನರು ಇರುತ್ತಿದ್ದರೋ ಅದು ಅವರಿಗೆ ಸೇರಿದ್ದು. ಆರ್ಯರಾಜನಿಗೆ ಕಾಡುಗಳನ್ನು ಸುಟ್ಟು ಆ ಭೂಮಿಯನ್ನು ಪ್ರಜೆಗಳಿಗೆ ಹಂಚುವುದಾದರೆ ಮೊದಲಿನ ಒಡೆಯನ ನಾಶವನ್ನು ಮಾಡುವುದು ಅಗತ್ಯವೆನಿಸಿತೋ ? ಕಾಡಿನಲ್ಲಿಯ ಮೃಗಗಳಂತೆಯೇ ಕಾಡುಜನರು ಸಹ ಬೇಟೆಯ ಪ್ರಾಣಿಗಳೇ! ಎಂಬ ಭಾವನೆ ಕೃಷ್ಣಾರ್ಜುನರದು ಇರಬಹುದೋ? ಕೃಷ್ಣಾರ್ಜುನರು ನಡೆಯಿಸಿದ ಪ್ರಾಣಿ ಸಂಹಾರದ ಈ ವರ್ಣನೆಯು ಈ ತರ್ಕಕ್ಕೆ ಪೋಷಕವಿದೆ.

ಶರಣಾಗತರ ರಕ್ಷಣೆ, ಸರಿಸಮಾನರೊಡನೆ ಯುದ್ಧ, ನಿರುಪಕ್ರೋಶ [ಪರರನ್ನು ನೋಯಿಸದೆ ಅವರ ಶಾಪವನ್ನು ಪಡೆಯದೇ ಇರುವುದು] ಇವೇ ಮೊದಲಾದ ಕ್ಷತ್ರಿಯರ ತತ್ತ್ವಗಳು, ಈ ಸಂಹಾರದ ವೇಳೆಯಲ್ಲಿ, ಎಲ್ಲಿ ಅಡಗಿದ್ದವು? ಶರಣಾಗತರ ರಕ್ಷಣೆ, ಸರಿಸಮಾನರೊಡನೆ ಯುದ್ಧ, ನಿರುಪಕ್ರೋಶ ಈ ಎಲ್ಲಾ ನಿಯಮಗಳು ಸ್ವಸಮಾಜಕ್ಕೆ ಮಾತ್ರ ಅನ್ವಯಿಸುತ್ತಿದ್ದವು. ತಮ್ಮ ಸಮಾಜವನ್ನು ಬಿಟ್ಟು ಹೊರಗಿನವರಿಗಾಗಿ ಈ ನಿಯಮಗಳು ಅನ್ವಯಿಸಕೂಡದೆಂಬುದೇ ಈ ಕೃತಿಯ ಹಿನ್ನೆಲೆಯ ಕಟ್ಟಳೆಯಾಗಿರಬೇಕು. ಇದರಿಂದ ಪುನಃ ಒಮ್ಮೆ ಐತಿಹಾಸಿಕ ಘಟನೆಗಳ ಸ್ಮರಣೆ ಆಗುತ್ತದೆ. ಕ್ರೂರ ಕೊಲೆಯನ್ನು ತೈಮುರ್ ಲಂಗ್ ಮತ್ತು ಚಂಗೀಜಖಾನರು ಮಾಡಲಿಲ್ಲವೇ? ಮೃಗಗಳ ಬೇಟೆಯಾಡುವಂತೆ ತಾಸ್ಮಾನಿಯಾದಲ್ಲಿಯ ಅರಣ್ಯವಾಸಿಗಳ ಬೇಟೆಯನ್ನು [ಯುರೋಪಿಯನ್ನರು] ಇತ್ತಿತ್ತಲಾಗಿ ಹತ್ತೊಂಬತ್ತನೆಯ ಶತಮಾನದಲ್ಲಿ ಮಾಡಿದ್ದು ವಿದಿತ ವಿದೆ. ನೀತಿನಿಯಮಗಳು ಆಯಾ ಸಮಾಜಗಳ ಅಂತರ್ಗತ ವ್ಯಕ್ತಿಗಳಿಗೆ ಮಾತ್ರ ಬಂಧನಕಾರಕವಿತ್ತು. ಸಮಾಜದ ಒಳ ಸಮಾಜದಲ್ಲಿ, ಪುನಃ ಆಯಾ ವರ್ಗದ, ಜಾತಿಯ, ಕುಟುಂಬದ ನಡತೆಯ ನಿಯಮಗಳು ಇರುತ್ತವೆ. ಸ್ವಕೀಯರು–ಪರಕೀಯರು, ತಾವು–ಅನ್ಯರು ಈ ರೀತಿ ವ್ಯವಹಾರದಲ್ಲಿಯ ವಿಶ್ವವಿರುತ್ತದೆ. ತಾವು ಅಥವಾ ತಮ್ಮವರು ಇವರೊಡನೆ ವ್ಯವಹರಿಸುವ ನಿಯಮಗಳು ಇತರರಿಗೆ ಅನ್ವಯಿಸುವುದಿಲ್ಲ. ವಿಶ್ವಕುಟುಂಬವೆಂದು ಗಣಿಸುವ ಮಾನವರು ತೀರ ವಿರಳ,

ಕೃಷ್ಣಾರ್ಜುನರಂತೂ ಆ ವರ್ಗದವರು ಇರಲೇ ಇಲ್ಲ. ಅವರಿಬ್ಬರು ಬೇರೆ ಬೇರೆ ರೀತಿಯಲ್ಲಿ ಆಗಿನ ಕ್ಷತ್ರಿಯ ಸಮಾಜದಲ್ಲಿ ಪ್ರಸಿದ್ಧ ಪುರುಷರಾಗಿದ್ದರು. ಒಬ್ಬನು ಮುತ್ಸದ್ದಿಯೆಂದು, ಇನ್ನೊಬ್ಬನು ವೀರನೆಂದು. ಈ ಅಗಣಿತ ಸಂಹಾರದಿಂದ ಅವರ ಮನಸ್ಸು ದ್ರವಿಸಿದಂತೆ ಕಾಣುವುದಿಲ್ಲ. ಮಹಾಭಾರತದಲ್ಲಿ 'ಮೃಗ ಸ್ವಪ್ನಭಯ' ಎಂಬ ಪ್ರಕರಣವಿದೆ. ಪಾಂಡವರ ಪರಿವಾರವು ದೊಡ್ಡದಾಗಿತ್ತು. ಎಲ್ಲರ ಆಹಾರಕ್ಕಾಗಿಯು ಮತ್ತು ಮೋಜಿಗಾಗಿಯೂ ಪಾಂಡವರು ನಿತ್ಯವು ಬೇಟೆಯಾಡುತ್ತಿದ್ದರು. ಒಮ್ಮೆ ಧರ್ಮರಾಜನ ಕನಸಿನಲ್ಲಿ ಮೃಗಗಳು [ಜಿಂಕೆಗಳು] ಬಂದು, 'ರಾಜನೇ ! ನೀವು ಇಷ್ಟೊಂದು ಮೃಗಗಳ ಸಂಹಾರವನ್ನು ನಡೆಸಿದ್ದೀರಿ. ಇದರಿಂದ ನಾವು ತುಸುಕಾಲದಲ್ಲಿ ಇಲ್ಲದಂತಾಗುವೆವು. ನೀವು ಬೇರೆ ವನಕ್ಕೆ ಹೋಗಬೇಕು. ನಮಗೆ ಸ್ವಲ್ಪ ಅವಧಿಯನ್ನು ಕೊಡಬೇಕು. ನಮ್ಮ ಪೀಳಿಗೆಯು ಬೆಳೆಯುತ್ತಲೇ ಪುನಃ ಬನ್ನಿ!" ಎಂದು ನುಡಿದವು. ಅದನ್ನು ಕೇಳಿ ಧರ್ಮನು ಸಹೋದರರೊಡನೆ ಬೇರೆ ಕಾಡಿಗೆ ಹೋದನು. ಯಾವ ಪಾಂಡವರಿಗೆ ಈ ರೀತಿ ಪ್ರಾಣಿಗಳು ನಿರ್ಮೂಲವಾಗಬಾರದೆಂಬ ಅರಿವು ಇತ್ತೊ, ಆ ಪಾಂಡವರು ಖಾಂಡವ ವನದಲ್ಲಿ ಸಂಹಾರವನ್ನು ಏಕೆ ನಡೆಯಿಸಿದರು? ಖಾಂಡವ ವನದಲ್ಲಿಯ ಸಂಹಾರವನ್ನು ಕೃಷ್ಣಾರ್ಜುನರು ಮಾಡಿದರು ; ಧರ್ಮನಲ್ಲ ಎಂಬ ಸ್ಪಷ್ಟೀಕರಣವನ್ನು ಇದಕ್ಕೆ ಕೊಡಬಹುದು. ಮೃಗಗಳನ್ನು ನಾಮಶೇಷವಾಗಿ ಮಾಡದೆ ಇರುವುದರಲ್ಲಿ ದಯೆಯ ಭಾವನೆ ಇರದೆ ವಿಶಿಷ್ಟ ಉದ್ದೇಶವಿತ್ತು.

ಜಗತ್ತಿನ ಎಲ್ಲಾ ಸಮಾಜದಲ್ಲಿ ಪಕ್ಷಿ, ಮೃಗ ಮುಂತಾದ ಕಾಡು ಪ್ರಾಣಿಗಳ ಬೇಟೆಯ ಸಂಬಂಧವಾಗಿ ವಿಶಿಷ್ಟ ಕಠಿಣ ನಿಯಮಗಳಿವೆ. ಯಾವ ಋತುವಿನಲ್ಲಿ ಪ್ರಾಣಿಗಳ ಉತ್ಪತ್ತಿಯಾಗುವುದೋ ಆಗ ಅವುಗಳನ್ನು ಸಂಹರಿಸಕೂಡದು, ಗರ್ಭಿಣಿಯಾದ ಹೆಣ್ಣು ಪ್ರಾಣಿಯನ್ನು ಕೊಲ್ಲಬಾರದು. ಎಳೆಯ ಮರಿಗಳನ್ನು ಸಾಯಿಸಬಾರದು. ಈ ರೀತಿ ಒಂದೆರಡಲ್ಲದೇ ಅನೇಕ ನಿಯಮಗಳಿವೆ. ಜಿಂಕೆಯ ಬೇಟೆಯ ಕಾಲ ಬೇರೆ. ಈ ತರಹದ ನಿಯಮಗಳು ಮಹಾಭಾರತದಲ್ಲಿ ಅಥವಾ ಅದರ ಪೂರ್ವದಿಂದಲು ರೂಢಿಯಲ್ಲಿರಬೇಕೆಂದು ನಿಯಮವಿತ್ತು. ಯಾವ ಕ್ರೂರ ಕೃತಿಯಿಂದ ವಾಲ್ಮೀಕಿಗೆ ಕಳವಳ ಉಂಟಾಗಿ ಕಾವ್ಯ ಸ್ಫುರಣವಾಯಿತೋ ಆ ಕೃತಿಯು ಕೇವಲ ಪಕ್ಷಿಯ ಬೇಟೆಯಾಗಿರಲಿಲ್ಲ. ಮರಿ ಮಾಡುವ ದಿನಗಳಲ್ಲಿ ಕಾಮಕ್ರೀಡೆಯಲ್ಲಿ ತೊಡಗಿದ ಜೊತೆ ಪಕ್ಷಿಗಳಲ್ಲಿಯ ಒಂದನ್ನು ಸಾಯಿಸಿದ್ದ ಕೃತಿ ಆಗಿತ್ತು. ಇವೆಲ್ಲವು ಬೇಟೆಯ ನಿಯಮಗಳಾಗಿದ್ದವು. ಆದರೆ ಯಾರು ತಮ್ಮವರಲ್ಲವೋ ಅವರನ್ನು ಸಾಯಿಸುವ ಬಗ್ಗೆ ಈ ನಿಯಮಗಳು ಇರಲಿಲ್ಲ.

ಯತ್ ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್

ಮೃಗಗಳನ್ನು ಒಂದು ವೇಳೆ ಜೀವಿತವಾಗಿ ಬಿಟ್ಟರೂ ಮನಸ್ಸಿಗೆ ತೋಚಿದಾಗ ಸಾಯಿಸಬಹುದು. ಆದರೆ ಮನುಷ್ಯರನ್ನು ಸಜೀವವಾಗಿ ಬಿಟ್ಟುಕೊಟ್ಟರೆ ಇಲ್ಲವೇ ದಾಸನೆಂದು ಜೀವಸಹಿತ ಬಿಟ್ಟುಕೊಟ್ಟರೆ ಮಾನವರ ವ್ಯವಹಾರದಲ್ಲಿ ಯಃಕಶ್ಚಿತ ಅಧಿಕಾರಗಳನ್ನಾದರೂ ದಾಸನು ಪಡೆಯುತ್ತಾನೆ. ಅರಣ್ಯವು ಯಾರ ಒಡೆತನದ್ದೋ ಅವರನ್ನು ಸಜೀವವಾಗಿ

ಬಿಡುವುದು ಹೆಚ್ಚು ಅಪಾಯಕಾರಿ. ಸೋತವರನ್ನು ದಾಸರೆಂದು ಇಟ್ಟುಕೊಳ್ಳುವುದು, ಸಹ ಅಪಾಯಕಾರಿ! ಒಂದು ಪಂಗಡವು ಉಳಿದ ಪಂಗಡಗಳ ಮೇಲೆ ಆಕ್ರಮಣ ಮಾಡುವಾಗ ಆ ಪಂಗಡಗಳನ್ನು ನಿರ್ನಾಮ ಮಾಡುವ ಉದ್ದೇಶವಿರುತ್ತಿತ್ತು.

ಖಾಂಡವ ವನದಲ್ಲಿ ಕೊಲೆಯಾದ ಕುಲಗಳಲ್ಲಿ ತಕ್ಷಕ ನಾಗರ ಕುಲವು ಪ್ರಮುಖವಾಗಿತ್ತು. ತಕ್ಷಕನು ಕುರುಕ್ಷೇತ್ರಕ್ಕೆ ಹೋಗಿದ್ದರಿಂದ ಬದುಕಿಕೊಂಡನು. ಆದರೆ ಅವನ ಹೆಂಡತಿಯು ಮತ್ತು ಇತರ ಪರಿವಾರವು ಭಸ್ಮವಾಯಿತು. ಈ ತಕ್ಷಕನ ನೆವದಿಂದ ಮಹಾಭಾರತದಲ್ಲಿ ಅಡಕವಾದ ಒಂದು ಉಪಕಥೆಯು ಲಬ್ಧವಿದೆ. ನಿಜವಾಗಿಯು ಇದು ಉಪಕಥೆಯಾಗಿರದೇ ಕಥೆಯಷ್ಟೇ ಮಹತ್ವದ್ದು, ಮೂರು ತಲೆ ಮಾರುಗಳ ಚರಿತ್ರೆಯನ್ನು ಸಾರುವ ಎರಡು ಮಾನವ ಪಂಗಡದಲ್ಲಿಯ ಕಲಹಗಳನ್ನು ತಿಳಿಸುವ, ಒಂದು ಸೌಲಗ್ನ ಕಥೆಯಾಗಿದೆ. ಮಹಾಭಾರತದ ಪ್ರಾರಂಭದಲ್ಲಿಯೇ ಈ ಕಥೆಯ ಭಾಗವು ಬಂದಿದೆ. ಕರ್ಣಪರ್ವದಲ್ಲಿಯೂ ಇದರಲ್ಲಿಯ ಒಂದು ಪ್ರಸಂಗವಿದೆ. ಆದರೆ ಒಮ್ಮೆ ಆದಿಪರ್ವದಲ್ಲಿ ಇದರ ಬಹುಭಾಗವು ಕಥನವಾದ ನಂತರ ಉಳಿದ ಮಹಾಭಾರತದಲ್ಲಿ ಅದರ ಭಾಗವಿಲ್ಲ. ಉತ್ತಂಕನ ಕಥೆಯಲ್ಲಿ ತಕ್ಷಕನು ಇಕ್ಷುಮತಿಯ ತೀರದ ಕುರುಕ್ಷೇತ್ರದಲ್ಲಿ, ವಾಸಿಸುತ್ತಿದ್ದನೆಂಬ ಉಲ್ಲೇಖವಿದೆ. ಖಾಂಡವದಹನ ಪ್ರಕರಣದಲ್ಲಿ ಖಾಂಡವ ವನವು ತಕ್ಷಕನ ವಾಸಸ್ಥಾನ ಆಗಿತ್ತೆಂದು ನಮಗೆ ತಿಳಿಯುತ್ತದೆ. ಇಕ್ಷುಮತಿ ನದಿಯು ಯಮುನಾ ನದಿಗೆ ಸೇರುವ ಒಂದು ಸಣ್ಣ ನದಿಯಾಗಿರಬೇಕು. ಖಾಂಡವ ವನದಲ್ಲಿ ತಕ್ಷಕನು ಸಾಯಲಿಲ್ಲ. ಆತನ ವಂಶ ನಿರ್ವಂಶವಾಗಲಿಲ್ಲ. ಆದರೆ ಈ ಪ್ರಯತ್ನದಿಂದ ನಾಗನೆಂದು ಗುರುತಿಸಲ್ಪಡುವವರಲ್ಲಿ ಮತ್ತು ಪಾಂಡವ ಕುಲದವರಲ್ಲಿ ಶತ್ರುತ್ವ ಮೂಡಿತ್ತು. ಈ ಶತ್ರುತ್ವ ಅರ್ಜುನ ಆತನ ಮೊಮ್ಮಗನಾದ ಪರೀಕ್ಷಿತ, ಪರೀಕ್ಷಿತನ ಮಗನಾದ ಜನಮೇಜಯ ಈ ರೀತಿ ಮೂರು ತಲೆಮಾರುವವರೆಗೆ ಪೂರೈಸಿತು. ಕರ್ಣಾರ್ಜುನರ ಯುದ್ಧದಲ್ಲಿ ತಕ್ಷಕನ ಪುತ್ರನು ಅರ್ಜುನನನ್ನು ಸಾಯಿಸಲು ಬಹುವಾಗಿ ಪ್ರಯತ್ನಿಸಿದನು. ಆದರೆ ಆತನಿಗೆ ಅದು ಸಾಧ್ಯವಾಗಲಿಲ್ಲ. ಅರ್ಜುನನ ಮೊಮ್ಮಗನಾದ ಪರೀಕ್ಷಿತನನ್ನು ತಕ್ಷಕನು ಕೊಂದನು. ತಿರುಗಿ ಮತ್ತೊಮ್ಮೆ ಸರ್ಪಸತ್ರದ ನೆವದಿಂದ ಜನಮೇಜಯನು ಭಯಂಕರವಾದ ಹತ್ಯಾಕಾಂಡವನ್ನು ಮಾಡಿ ಸೇಡು ತೀರಿಸಿದನು.

ಈ ನಾಗರೆಂಬ ಜನರು ಆಗಿನ ಕ್ಷತ್ರಿಯರ ದೃಷ್ಟಿಯಿಂದ ಪರಕೀಯರಾರೂ ಇರಲಿಲ್ಲ. ಅವರನ್ನು ಕಾಡು ಜನಾಂಗದವರು ಎಂದು ಭಾವಿಸುತ್ತಿರಲಿಲ್ಲ. ಕುರುಗಳ ವಂಶಾವಳಿಯಲ್ಲಿ ಎರಡು ತಕ್ಷಕನ 'ಜ್ವಾಲೆ' ಎಂಬ ಹೆಸರಿನ ಕನ್ಯೆಯರನ್ನು ವಿವಾಹವಾದ ಟಿಪ್ಪಣಿ ಇದೆ. ಈ ಜ್ವಾಲೆಯರ ಪುತ್ರರು ಪಟ್ಟವೇರಿದರೆಂದು ಉಲ್ಲೇಖವಿದೆ. ಅಂದರೆ ಕುರುವಂಶದಲ್ಲಿ ಶಂತನುವಿನವರೆಗಾದರೂ ನಾಗವಂಶದ ಬೀಜವು ಇತ್ತೆಂದು ಧಾರಾಳವಾಗಿ ಹೇಳಬಹುದು. ಯಾವ ನಾಗವಂಶದ ಕನ್ಯೆಯರೊಡನೆ ವಿವಾಹವಾಯಿತೋ ಅವರು ರಾಣಿಯರಾಗಿ, ಅವರ ಮಕ್ಕಳು ಪಟ್ಟಕ್ಕೆ ಬಂದರು. ಹೀಗೆ ಕ್ಷತ್ರಿಯರು ನಾಗರನ್ನು ಸಮಾನವಾಗಿ ಕಾಣುತ್ತಿದ್ದರೆಂದು

ತಿಳಿದುಬರುತ್ತದೆ. ನಾಗರಾಜರು ಕಂಡುಬರುವ ಪಟ್ಟಿಯಲ್ಲಿ ತಕ್ಷಕ ಕುಲದ ಹೆಸರು ಯಾವಾಗಲೂ ಇದ್ದೇ ಇರುತ್ತದೆ. ತಕ್ಷಕನ ಪುತ್ರನ 'ಅಶ್ವಸೇನ' ಎಂಬ ಹೆಸರು ಇತರ ಕ್ಷತ್ರಿಯರ ಮಾದರಿಯದೇ ಇದೆ. ಅರ್ಜುನನು ವಿವಾಹವಾದ 'ಉಲುಪಿ' ಎಂಬ ನಾಗಕನ್ಯೆಯ ಕೌರವ್ಯ ಕುಲದವಳಾಗಿದ್ದಳು. ಆ ಕುಲದಲ್ಲಿ ಐರಾವತ–ಧೃತರಾಷ್ಟ್ರನೆಂಬ ಅರಸನಿದ್ದನು. ನಾಗವಂಶದಲ್ಲಿ ಒಂದು ಕುಲದ ಪೂರ್ಣ ನಾಶವನ್ನು ಮಾಡುವ ಕ್ರೂರ ಸಾಹಸವನ್ನು ಕೃಷ್ಣಾರ್ಜುನರು ಏಕೆ ಕೈಕೊಂಡರು ? 'ಬ್ರಾಹ್ಮಣನೇ ದಾನವಾಗಿ ಬೇಡಿದ್ದರಿಂದ ನಮಗೆ ಕೊಡಬೇಕಾಯಿತು ಎಂಬ ಹೇಳಿಕೆಯು ಮನಸ್ಸಿಗೆ ಹಿಡಿಸುವುದಿಲ್ಲ. ಬ್ರಾಹ್ಮಣನಾದ ದ್ರೋಣನು ದ್ರುಪದನನ್ನು ಸೋಲಿಸುವ ದಾನವನ್ನೇ ಬೇಡಿದ್ದನು. ಆ ಪ್ರಕಾರ ಅರ್ಜುನನು ದ್ರುಪದನನ್ನು ಸೆರೆ ಹಿಡಿದು ತಂದನು. ಆದರೆ ಸಮಗ್ರ ದ್ರುಪದವಂಶವನ್ನು ನಾಶಗೊಳಿಸಲಿಲ್ಲ. ತನ್ನನ್ನು ಸೋಲಿಸಿದ ಅರ್ಜುನನಿಗೆ ತನ್ನ ಮಗಳನ್ನು ಮದುವೆಮಾಡಿ ಕೊಡುವಾಗ ದ್ರುಪದನಿಗೆ ದುಃಖವೆನಿಸಲಿಲ್ಲ. ಕ್ಷತ್ರಿಯರಲ್ಲಿ ಯುದ್ಧದ ಕೆಲವು ನೀತಿ ನಿಯಮಗಳು ಇದ್ದವು. ಖಾಂಡವವನ ದಹನದಲ್ಲಿ ಯಾವ ವಿಧಿ ನಿಯಮಗಳು ಕಾಣುವುದಿಲ್ಲ; ನಾಗಜನರ ಸಂಹಾರದ ಒಂದೇ ಉದ್ದೇಶವಿತ್ತೆಂದು ಕಾಣುತ್ತದೆ. ಕೃಷ್ಣನು ಬಾಲ್ಯದಲ್ಲಿ ಯುಮುನಾ ನದಿಯ ಕೊಳದಲ್ಲಿ ವಾಸಿಸಿದ್ದ ಕಾಲಿಯಾ ನಾಗನನ್ನು ಸೋಲಿಸಿ, ಆತನಿಗೆ ವಾಸಸ್ಥಾನವನ್ನು ಬಿಟ್ಟು ಹೋಗುವಂತೆ ಮಾಡಿದ್ದನು. ಕೃಷ್ಣನ ವಿವಿಧ ಉದ್ದೇಶಗಳಲ್ಲಿ ನಾಗಜನರನ್ನು ಯಮುನೆಯ ಪ್ರದೇಶದಿಂದ ತಳ್ಳಿಹಾಕುವ ಒಂದು ಉದ್ದೇಶವಾಗಿತ್ತೆಂಬ ಸಂದೇಹ ಉಂಟಾಗುತ್ತದೆ. ಈ ಉದ್ದೇಶವನ್ನು ಈಡೇರಿಸುವುದರಲ್ಲಿ ಅಲ್ಲಿಯ ನಾಗಜನರನ್ನು ನಾಮಶೇಷ ಮಾಡುವ ಧೋರಣೆಯು ಪೂರ್ಣವಾಗಿ ವಿಫಲವಾಯಿತೆಂಬುದು ಮುಂದಿನ ಕಥಾಭಾಗದಿಂದ ವ್ಯಕ್ತವಾಗುತ್ತದೆ. 'ಜ್ಯು' ಜನರನ್ನು ನಾಶಗೊಳಿಸುವ ಹಿಟ್ಲರನ ಧೋರಣೆಯಂತೆ ಇದು ಅನಿಸುತ್ತದೆ. ಈ ಧೋರಣೆಯ ಉದ್ದೇಶವು ಸಫಲವಾಗದೆ ಮೂರು ತಲೆಮಾರುಗಳಲ್ಲಿ ಶತ್ರುತ್ವವು ಉಂಟಾಯಿತು. ಸಾವಿರಾರು ನಾಗರು ಮತ್ತು ಇತರ ಕುಲದವರು ಚಡಪಡಿಸುತ್ತ, ಗೋಳಿಡುತ್ತಾ ಮೃತರಾದರು.

ಇದರಿಂದ ಪಾರಾಗಿ ಬದುಕಿದ "ಮಯ" ಒಬ್ಬ ಅರಸ. ಆತ ಒಬ್ಬ ಕುಶಲ ಶಿಲ್ಪಿಯಾಗಿದ್ದ. ಕೃಷ್ಣನ ಮೇರೆಗೆ ಆತ, ಪಾಂಡವರಿಗಾಗಿ ಅಪ್ರತಿಮವಾದ ಸಭೆಯನ್ನು ನಿರ್ಮಿಸಿದನು. ಗಂಗಾ ಯುಮುನಾ ತೀರದಲ್ಲಿಯ ಯಾವುದೇ ಕ್ಷತ್ರಿಯನು ಇಂತಹ ಸಭೆಯನ್ನು ಹೊಂದಿರಲಿಲ್ಲ. ಆರ್ಯರ ಎಲ್ಲಾ ಕಟ್ಟಡಗಳು ಮರದಿಂದ ನಿರ್ಮಿತವಾದವು. ಇದಕ್ಕೆ ಬದಲಾಗಿ ಆರ್ಯರ ಮೊದಲು ಇಲ್ಲಿ ಇದ್ದ ಭಾರತೀಯರು ಸುಟ್ಟ ಇಟ್ಟಿಗೆಗಳಿಂದ ದೊಡ್ಡ ದೊಡ್ಡ ನಗರಗಳನ್ನು ಕಟ್ಟಿದ್ದರು. ಅಸುರರೆಂಬ ಜನರಂತೂ ಶಿಲ್ಪಶಾಸ್ತ್ರದಲ್ಲಿ ಬಹಳ ಮುಂದುವರೆದವರು. ಬರಿಯ ಇಟ್ಟಿಗೆಗಳಿಂದಲೆ ಅಲ್ಲದೆ ಹಲವು ತರಹದ ಬಣ್ಣ ಗಾಜಿನ ಹೊರಮೈ ಇದ್ದ ಇಟ್ಟಿಗೆಗಳನ್ನು ಅವರು ತಯಾರಿಸುತ್ತಿದ್ದರು. ಇಟ್ಟಿಗೆಗಳಿಂದ ಮಯನು ಪಾಂಡವರ ಸಭೆಯನ್ನು ನಿರ್ಮಿಸಿರಬೇಕು. ಹಸಿರು, ನೀಲಿ ಬಣ್ಣದ ಇಟ್ಟಿಗೆಗಳಿಂದ ನೀರಿನ ಅಭಾಸವನ್ನು ಕಲ್ಪಿಸಿರಬೇಕು. ನೀರನ್ನು ಹರಿಸಿ ಅದರಡಿಯಲ್ಲಿ ಬೇರೆ ಬಣ್ಣದ ಇಟ್ಟಿಗೆಗಳನ್ನು

ಜೋಡಿಸಿ ಭೂಮಿಯ ಭಾಸವನ್ನು ಉಂಟುಮಾಡಿರಬೇಕು. ಅನೇಕರು ಈ ಸಭೆಯಲ್ಲಿ ಫಜೀತಿ ಹೊಂದಿರಬೇಕು. ಮಹಾಭಾರತದಲ್ಲಿ ಮಾತ್ರ ದುರ್ಯೋಧನನು ಫಜೀತಿ ಹೊಂದಿದ್ದು, ಅದನ್ನು ನೋಡಿ ದ್ರೌಪದಿಯು ಮತ್ತು ಭೀಮನು ಗಹಿಗಹಿಸಿ ನಕ್ಕ ಸಂದರ್ಭವಿದೆ. ಪಾಂಡವರ ವೈಭವದಿಂದ ಮೊದಲೆ ಉರಿಯುತ್ತಿದ್ದ ದುರ್ಯೋಧನನಿಗೆ ಈ ಹಾಸ್ಯವು ಅವನ ಹೃದಯವನ್ನು ಸೀಳಿದಂತೆ ಆಯಿತು. ದ್ರೌಪದಿ ಮತ್ತು ಭೀಮ ನಗುತ್ತಿದ್ದಾಗ ಧರ್ಮನು ದುರ್ಯೋಧನನಿಗೆ ಕೈಹಿಡಿದು ಎಬ್ಬಿಸಿ ಉಡಲು ಹೊಸ ವಸ್ತ್ರಗಳನ್ನು ಕೊಟ್ಟನು. ಈ ಸಂದರ್ಭವು ದುರ್ಯೋಧನನಿಗೆ ಸಿದ್ಧ ಸಾಧಕ ನ್ಯಾಯವಿರಬೇಕೆಂದು ಅನಿಸಿರಬೇಕು. ಒಬ್ಬನು ಅವಮಾನಗೊಳಿಸುವುದು. ಅವರಲ್ಲಿಯ ಇನ್ನೊಬ್ಬನು ಔದಾರ್ಯವನ್ನು ತೋರಿಸುವುದು ! ದುರ್ಯೋಧನನು ರೊಚ್ಚಿನಿಂದ, ಈರ್ಷೆಯಿಂದ ಉರಿದೆದ್ದು ಪಾಂಡವರ ಅಹಂಕಾರವನ್ನು ಕೊನೆಗಾಣಿಸುವ ವಿಚಾರದಲ್ಲಿ ಮಗ್ನನಾದನು. ಅದು ಸಾಧಿಸದಿದ್ದಲ್ಲಿ ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಸಿದ್ಧನಾದನು. ಕೊನೆಯಲ್ಲಿ ಆತನ ಸೋದರ ಮಾವನಾದ ಶಕುನಿಯು ಪಾಂಡವರನ್ನು ಜೂಜಿನಲ್ಲಿ ಸೋಲಿಸಿ ಅವರನ್ನು ದಿಕ್ಕುಪಾಲಾಗಿ ಮಾಡಿ ದುರ್ಯೋಧನನ ಮನಸ್ಸನ್ನು ಶಾಂತಗೊಳಿಸಿದ. ಅರಣ್ಯವನ್ನು ಸುಟ್ಟು ಅಲ್ಲಿಯ ಮೃಗಗಳ ಭೀಕರ ಸಂಹಾರವನ್ನು ಮಾಡಿ ಪಾಂಡವರು ಯಾವ ಮಯಸಭೆಯನ್ನು ದೊರಕಿಸಿದರೋ ಅದರ ಉಪಭೋಗವನ್ನು ಎಂಟು ಹತ್ತು ವರ್ಷ ಕಾಲವೂ ಕೂಡ ಪಡೆಯಲಿಲ್ಲ.

ಪಾಂಡವರು ಅರಣ್ಯವಾಸದಲ್ಲಿದ್ದಾಗ ಮಯಸಭೆಯ ಅಥವಾ ಇಂದ್ರಪ್ರಸ್ಥದ ಹಾನಿಯಾದ ಉಲ್ಲೇಖವಿಲ್ಲ. ಪಾಂಡವರು ಯುದ್ಧದ ನಂತರ ಹಸ್ತಿನಾಪುರದಲ್ಲಿ ರಾಜ್ಯವನ್ನು ಆಳಿದರು. ವಜ್ರನು ಎಷ್ಟು ವರ್ಷ ಇಂದ್ರ ಪ್ರಸ್ಥವನ್ನು ಆಳಿದನು ? ಅವನ ತರುವಾಯ ಅವನ ವಂಶಜರು ಅಲ್ಲಿಯೇ ಉಳಿದರೋ? ಎನ್ನುವ ಉಲ್ಲೇಖವಿಲ್ಲ. ಪಾಂಡವ ವಂಶದ ಜನಮೇಜಯನಿಗೂ ಕೂಡ ಬೇಗನೆ ಹಸ್ತಿನಾಪುರವನ್ನು ಬಿಟ್ಟು ಕೋಶಾಂಭಿಯನ್ನು ರಾಜಧಾನಿಯನ್ನಾಗಿ ಮಾಡಬೇಕಾಯಿತು. ಇಂದ್ರಪ್ರಸ್ಥದ ಯಾದವ ವಂಶದವರಿಗೂ ಕೂಡ ಹಾಗೆಯೆ ಮಾಡಬೇಕಾಯಿತೆಂದು ಅನಿಸುತ್ತದೆ. ಉತ್ತರ ದಿಕ್ಕಿನಿಂದ ಹೊಸ ಹೊಸ ಆಕ್ರಮಣಗಳು ನಡೆಯಹತ್ತಿದವು. ಮಹಾಭಾರತದ ಯುದ್ಧದಿಂದ ಶಿಥಿಲರಾದ ಕ್ಷತ್ರಿಯ ಕುಲದವರು. ಈ ಆಕ್ರಮಣಗಳನ್ನು ಎದುರಿಸಲು ಅಸಮರ್ಥರಾದರು. ಮಹಾಭಾರತ ಕಾಲದಲ್ಲಿಯ ಕುರು ಪಾಂಚಾಲರ ವಂಶಗಳು, ಸಮಾಜ ವ್ಯವಸ್ಥೆ, ರಾಜ್ಯವ್ಯವಸ್ಥೆ ನಷ್ಟವಾದವು. ಈ ನಂತರ ಹೇಳಿಬರುವ ಹೆಸರೆಂದರೆ ಮಗಧ ರಾಜರದೇ ಹೊರತು ಕುರುಪಾಂಚಾಲರದಲ್ಲ.

ಈ ಎಲ್ಲಾ ಉತ್ಪಾತದಲ್ಲಿ ಹಸ್ತಿನಾಪುರದ ಹಾಗೆ ಇಂದ್ರಪ್ರಸ್ಥವು ನಷ್ಟವಾಯಿತು. ಆದರೆ ಹಸ್ತಿನಾಪುರವು ದೀರ್ಘಕಾಲದ ಪರಂಪರೆಯನ್ನು ಅವಶೇಷವಾಗಿಟ್ಟುಕೊಂಡು ಅಳಿಯಿತು. ಹಸ್ತಿನಾಪುರದಲ್ಲಿ ಕುರುವಂಶದವರು ಸುಮಾರು ಶತಕಗಳ ಕಾಲ ರಾಜ್ಯವಾಳಿದರು. ಅಲ್ಲಿಯ ಅರಸು ಅರಸಿಯರ ಅದ್ಭುತವಾಗಲೀ, ರಮ್ಯವಾಗಲೀ, ಸರ್ವ ಸಾಮಾನ್ಯವಾಗಲೀ, ಅವರ ಜೀವನ ಕಥೆಯೊಂದಿಗೆ ಹಸ್ತಿನಾಪುರದ ಹೆಸರು ನಿಬಿಡಿತವಾಗಿದೆ. ಹಸ್ತಿನಾಪುರದ ಮಾರ್ಗಗಳ

ವರ್ಣನೆ ಇದೆ. ಬೇರೆ ಬೇರೆ ಪ್ರಸಂಗಗಳಲ್ಲಿ ಅಲ್ಲಿಯ ಪುರಜನರು ಆಡಿದ ಮಾತುಗಳ ಟಿಪ್ಪಣಿ ಇದೆ. ಕುಂತಿಯ ಆಶ್ರಯದಾತನಾದ ವಿದುರನ ನಿವಾಸವು ಅಲ್ಲಿಯೇ ಇತ್ತು. ಧೃತರಾಷ್ಟ್ರನ ನಿವಾಸವು ಅಲ್ಲಿತ್ತು. ದ್ರೌಪದಿಯನ್ನು ಎಲ್ಲಿಂದ ಎಳೆದು ತಂದರೋ ಆ ಅಂತಃಪುರವು ಅಲ್ಲಿತ್ತು. ಕೊನೆಯಲ್ಲಿ ಗೋಳಿಡುವ ಕೌರವರ ಸ್ತ್ರೀಯರು ಅಲ್ಲಿಯೇ ಇದ್ದರು.

ಇಂದ್ರಪ್ರಸ್ಥದೊಡನೆ ಯಾವ ರಾಜಮನೆತನದ ಸಂಬಂಧವಿಲ್ಲ. ಖಾಂಡವ ವನದಹನದ ಭಯಂಕರ ಸಂಗತಿಯನ್ನುಳಿದು ಸಂಸ್ಕೃತ ವಾಙ್ಮಯದಲ್ಲಿಯ ಯಾವ ಕಥಾಭಾಗವು ಈ ಪುರದೊಡನೆ ಸೇರಿಕೊಂಡಿಲ್ಲ. ಅದಕ್ಕೆ ಘನತೆ ಇಲ್ಲ. ಯಾವ ಸ್ವರೂಪವನ್ನು ಅದು ತಾಳಲಿಲ್ಲ. ಮಯಸಭೆಯ ಶಿಲ್ಪವು ಅಶುಭಕಾರಿ ಇದ್ದಂತೆ ಅಭಾಸ–ಮಯವಾಗಿ ಉಳಿಯಿತು. ಈ ಶಿಲ್ಪವು ಮಾನವನ ತಮಸ್ಸಿನಿಂದ ನಿರ್ಮಿತವಾಗಿ ಕ್ಷಣ ಭಂಗುರವಾದ ನೇತ್ರದೀಪಕ, ಹೃದಯದಾಹಕ, ರಾಕ್ಷಸಿ ವೈಭವದ ಸ್ವಪ್ನಮಯ ದರ್ಶನವೆನಿಸಿತು.

7

‘ಪರಧರ್ಮೋ ಭಯಾವಹಃ’

ಮಹಾಭಾರತದಲ್ಲಿ ಬ್ರಾಹ್ಮಣರ ಸ್ಥಾನವು ಸಂಪೂರ್ಣ ಕಥೆಯ ದೃಷ್ಟಿಯಿಂದ ಪ್ರಮುಖವಿರದಿದ್ದರೂ ಕಥೆಯ ಪರಿಪೋಷಣೆಯ ದೃಷ್ಟಿಯಿಂದ ಮಹತ್ವದ್ದು. ಈ ಪರಿಯ ಸ್ಥಾನವನ್ನು ದ್ರೋಣ–ಅಶ್ವತ್ಥಾಮ, ಈ ಪಿತಾಪುತ್ರರು ಹೊಂದಿದ್ದಾರೆ. ಹಲವು ಬ್ರಾಹ್ಮಣರ ಉಲ್ಲೇಖವನ್ನು ನಿಷ್ಪ್ರಯೋಜಕ ಎಂದು ಬಿಟ್ಟುಬಿಡಬಹುದು. ಪರಶುರಾಮನ ಉಲ್ಲೇಖವು ಈ ರೀತಿಯದೆ ! ಮಹಾಭಾರತದಲ್ಲಿ ಪರಶುರಾಮನು ಭೀಷ್ಮನೊಡನೆ ಹಲವು ವಾರಗಳವರೆಗೂ ಯುದ್ಧ ಮಾಡಿ ಸೋಲುತ್ತಾನೆ. ಅದೇ ರೀತಿಯಲ್ಲಿ ಕರ್ಣನನ್ನು ಕುರಿತು “ಅತ್ಯಂತಿಕ ಸಮಯದಲ್ಲಿ ನಿನ್ನ ವಿದ್ಯೆಯನ್ನು ನೀನು ಮರೆತುಹೋಗುವಿ” ಎಂದು ಶಾಪಿಸುತ್ತಾನೆ. ಪರಶುರಾಮನು ರಾಮಾವತಾರಕ್ಕಿಂತ ಮೊದಲಿನ ವ್ಯಕ್ತಿ. ಕ್ಷತ್ರಿಯ ಸಂಹಾರದ ಭಯಂಕರವಾದ ಕೃತ್ಯವನ್ನು ಪೂರ್ತಿಗೊಳಿಸಿ ಆತನು ತಪಶ್ಚರ್ಯೆಗಾಗಿ ಹೊರಟುಹೋದನೆಂದು ಕಥೆ ಇದೆ. ರಾಮಾವತಾರದಲ್ಲಿ ರಾಮನ ಘನತೆಯನ್ನು ತಿಳಿಸುವುದಕ್ಕಾಗಿ ಪರಶುರಾಮನನ್ನು ತಪಸ್ಸಿನಿಂದ ಮರಳಿ ತರಲಾಗಿದೆ. ರಾಮಾಯಣದ ಮೂಲ ಕಥೆಯ ಚೌಕಟ್ಟಿಗೆ ಪರಶುರಾಮನ ಸಂಬಂಧವಿಲ್ಲ, ಹಾಗೆಯೇ ಭೀಷ್ಮನ ಶೌರ್ಯವನ್ನು ಸತ್ಯಪ್ರತಿಜ್ಞತೆಯನ್ನು ಪ್ರಕಾಶಿಸಲು ಪರಶುರಾಮನನ್ನು ಮಹಾಭಾರತದಲ್ಲಿ ಅಳವಡಿಸಲಾಗಿದೆ. ಭೀಷ್ಮನು, ಪರಶುರಾಮನನ್ನು ಹಿಂದಕ್ಕಟ್ಟಿ ‘ಕ್ಷತ್ರಿಯರು ಬ್ರಾಹ್ಮಣರಿಗಿಂತ ಶ್ರೇಷ್ಠರು’ ಎಂಬುದನ್ನು ಪುನಃ ಸ್ಥಾಪಿಸಿದನು.

ಕರ್ಣನು ಮಹಾಶೂರನೆಂದೆನಿಸಿದವನು. ಅಂತಹವನ ಸೋಲು ಅರ್ಜುನನಿಂದಾಯಿತು. ಇದರ ನೆವಕ್ಕಾಗಿ ಪರಶುರಾಮನಿಗಿಂತಲೂ ಶ್ರೇಷ್ಠನೆನಿಸುತ್ತಾನೆ. ಗುರುವು ಅನುಗ್ರಹಿಸಿದ ವಿದ್ಯೆ, ಆ ವಿದ್ಯೆಯ ವಿಸ್ಮರಣೆಯ ಶಾಪವನ್ನು ಕರ್ಣ ಧೀರನಂತೆ ಸ್ವೀಕರಿಸಿದ. ಈ ಕಥೆಯು ಕೂಡ ಗಮನಿಸುವಂತಹದಿಲ್ಲ. ಅರ್ಜುನ ಕೊನೆ ಯುದ್ಧದಲ್ಲಿ ಮಾತ್ರ ಕರ್ಣನನ್ನು ಸೋಲಿಸಿದ್ದು. ಅಲ್ಲದೇ ಈ ವಿರಾಟರಾಜನ ಗೋಗ್ರಹಣ ಕಾಲದಲ್ಲಿ ಕರ್ಣನನ್ನು ಸೋಲಿಸಿ ಓಡಿಸಿದ್ದಾನೆ. ಕೊನೆಯ ಯುದ್ಧದಲ್ಲಿ ಕರ್ಣನನ್ನು ಪರಾಭವಗೊಳಿಸಿದ್ದರಲ್ಲಿ ಸೋಜಿಗವೇನೂ ಇರಲಿಲ್ಲ. ಕೇವಲ ಅರ್ಜುನನಿಂದಲೇ ಅಲ್ಲದೇ, ಇತರ ಅನೇಕರಿಂದಲೂ ಕರ್ಣನೂ ಪರಾಭೂತವಾಗಿದ್ದನು. ಘೋಷಯಾತ್ರೆಯ ಕಾಲದಲ್ಲಿ

ದುರ್ಯೋಧನನನ್ನು ಗಂಧರ್ವರು ಸೆರೆಹಿಡಿದು ಬಂದಾಗ ಕರ್ಣ ಸಹ ಏಟು ತಿಂದು ಭಯದಿಂದ ಹೇಗೋ ಪಾರಾಗಿ ಓಡಿದ್ದ, ಅವನು ಪೂರ್ತಿ ಭಯಗೊಂಡಿದ್ದ, ಎಂಬ ವರ್ಣನೆಯೂ ಇದೆ. ಕರ್ಣ ಮಹಾವೀರನಾಗಿದ್ದನು. ಪರಶುರಾಮನ ಶಾಪವು ಇರದಿದ್ದರೆ ಅವನು ಸೋಲುತ್ತಿರಲಿಲ್ಲವೆಂದು ತೋರಿಸುವುದಕ್ಕೆ ಈ ಕಥೆಯನ್ನು ಹೇಳಲಾಗಿದೆ.

ವ್ಯಾಸರ ಅನೇಕ ಶಿಷ್ಯಂದಿರು ಮಹಾಭಾರತವನ್ನು ತಮ್ಮ ತಮ್ಮ ರೀತಿಯಲ್ಲಿ ಕಥಿಸಿದ್ದಾರೆಂಬ ಹೇಳಿಕೆ ಇದೆ. ಪ್ರಸ್ತುತ ನಮ್ಮ ಮುಂದೆ ಇರುವ ಮಹಾಭಾರತವು ವೈಶಂಪಾಯನನು ಹೇಳಿದ ಮಹಾಭಾರತವಾಗಿದೆ. ಇದೇ ರೀತಿ ಜೈಮಿನಿಯು ಮಹಾಭಾರತವನ್ನು ಹೇಳಿದ್ದಾನೆಂದು ತಿಳಿದುಬರುತ್ತದೆ. ಕೌರವ–ಪಾಂಡವರಲ್ಲಿ ಕಲಹ ಉಂಟಾಗಿ ಯುದ್ಧವು ಸಂಭವಿಸಿತು. ಕೌರವರು ಸೋತರು. ಪಾಂಡವ ವಂಶವು ಸಿಂಹಾಸನಾ–ರೂಢವಾಯಿತು. ಇದೇ ವೃತ್ತಾಂತವನ್ನು ಜೈಮಿನಿಗೂ ಹೇಳಬೇಕಾಯಿತು; ಆದರೆ ಆತನು ಕಥೆಯಲ್ಲಿಯ ಬಹುಭಾಗದಲ್ಲಿ ಕೌರವರನ್ನು ಹೆಚ್ಚಾಗಿ ಬಣ್ಣಿಸಿ ಪಾಂಡವರನ್ನು ತೆಗಳುವ ಪ್ರಯತ್ನವನ್ನು ಮಾಡಿದ್ದಾನೆ. ಲಬ್ಧವಿದ್ದ ಜೈಮಿನಿಯ ಅಶ್ವಮೇಧ ಭಾಗದಲ್ಲಿ ಮೇಲಿಂದ ಮೇಲೆ ಅರ್ಜುನನಿಂದ ಕೊಲ್ಲಲ್ಪಟ್ಟ ಈ ಸಂಗತಿಯು ನಿಚ್ಚಳವಿತ್ತು. ಆದರೆ ಈ ಪರಾಭವದಿಂದ ಕರ್ಣ ಅರ್ಜುನನಿಗಿಂತ ಕನಿಷ್ಠನೆಂದು ಅನಿಸಿಕೊಳ್ಳಬಹುದೆಂದು ಪರಶುರಾಮನ ಶಾಪದ ಸಂದರ್ಭವನ್ನು ಒಡ್ಡಲಾಗಿದೆ. ಈ ಕಥೆಯಲ್ಲಿಯೂ ಮೂಲ ಕಥಾಭಾಗಕ್ಕೆ ಪೋಷಕವಾಗಿ ಯಾವುದು ಇಲ್ಲ.

ಈಗ ನಮ್ಮ ಮುಂದೆ ಇರುವ ಮಹಾಭಾರತದ ಪ್ರಾರಂಭವು ಬಹಳ ವಿಚಿತ್ರವಾಗಿದೆ. ಜನಮೇಜಯನ ಸರ್ಪಸತ್ರವು ಕೊನೆಗೊಂಡ ನಂತರ ವ್ಯಾಸಶಿಷ್ಯನಾದ ವೈಶಂಪಾಯನನು ಪೂರ್ವಜರ ಯುದ್ಧವೃತ್ತಾಂತವನ್ನು ಜನಮೇಜಯನಿಗೆ ಹೇಳುತ್ತಾನೆಂದು ವರ್ಣಿಸಲಾಗಿದೆ. ತಕ್ಷಕನಿಂದ ಪರೀಕ್ಷಿತನ ಕೊನೆ, ತಂದೆಯ ಮರಣದ ಸೇಡನ್ನು ತೀರಿಸುವುದಕ್ಕಾಗಿ ಜನಮೇಜಯನು ಕೈಕೊಂಡ ಸರ್ಪಸತ್ರ ಈ ಎರಡು ಪ್ರಕರಣಗಳಲ್ಲಿ ಭೃಗುಕುಲದ ಬ್ರಾಹ್ಮಣರ ಕಥೆಗಳನ್ನು ಪ್ರದೀರ್ಘವಾಗಿ ನೆಯ್ದಂತಿದೆ. ಆ ಎಲ್ಲಾ ಕಥೆಗಳು ಮುಗಿಯುವವರೆಗೆ ಮುಖ್ಯ ಕುರುವಂಶದ, ಮತ್ತು ಮಹಾಭಾರತದ ಕಥೆಯ ಪ್ರಾರಂಭವೇ ಆಗುವುದಿಲ್ಲ. ಪರೀಕ್ಷಿತನು ಬ್ರಾಹ್ಮಣನೊಬ್ಬನ ಚೇಷ್ಟೆ ಮಾಡಿದ್ದಕ್ಕಾಗಿ ಆ ಬ್ರಾಹ್ಮಣನು "ತಕ್ಷಕನು ನಿನ್ನನ್ನು ಸಾಯಿಸಲಿ" ಎಂದು ಶಾಪ ಕೊಟ್ಟನೆಂಬ ಕಥೆಗಳನ್ನು, ಬೇಸರಪಡಿಸುವಷ್ಟು ದೀರ್ಘವಾಗಿ ವರ್ಣಿಸಿದ್ದಾರೆ. ವಾಸ್ತವಿಕವಾಗಿ ಪರೀಕ್ಷಿತನ ತಾತನಾದ ಅರ್ಜುನನು ನಿಷ್ಕಾರಣವಾಗಿ ಖಾಂಡವವನ ದಹನ ಕಾಲಕ್ಕೆ ತಕ್ಷಕ ನಾಗಕುಲದ ಭಯಂಕರ ಸಂಹಾರ ಪರೀಕ್ಷಿತನನ್ನು ಕೊಂದ; ಮತ್ತು ಪರೀಕ್ಷಿತನ ಮಗನಾದ ಜನಮೇಜಯ ಸರ್ಪಸತ್ರವನ್ನು ಕೈಕೊಂಡ. ಈ ರೀತಿಯ ತೀರಾ ಸಹಜವಾದ ಮೂರು ತಲೆಮಾರುಗಳ ಹಗೆತನದ ಈ ಕಥೆ ಇದೆ. ಅದರಲ್ಲಿ ಅಡಕವಾದ ಎಲ್ಲಾ ಬ್ರಾಹ್ಮಣರ ಕಥೆಗಳು ಪ್ರಕ್ಷಿಪ್ತ ಎನಿಸುತ್ತವೆ, ಮಹಾಭಾರತ ಭೃಗುವಂಶದವರ ಕೈಸೇರಿರಬೇಕು. ಆಗ್ಗೆ ಅವರಿಂದ

ಅವರ ಕುಲದಲ್ಲಿಯ ಪುರುಷರ ಕಥೆಗಳನ್ನು ಮಹಾಭಾರತದಲ್ಲಿ ತೂರಿಸಲ್ಪಟ್ಟಿರಬೇಕೆಂಬ ವಿಧಾನವನ್ನು ಕೈ. ಶ್ರೀ ಸುಖಠಣಕರರು ತಮ್ಮ ಲೇಖನಗಳಲ್ಲಿ ಚೆನ್ನಾಗಿ ವಿಮರ್ಶಿಸಿದ್ದಾರೆ. ಈವರೆಗೆ ಉಲ್ಲೇಖಿಸಲ್ಪಟ್ಟ ಬ್ರಾಹ್ಮಣರ ಎಲ್ಲಾ ಕಥೆಗಳು ಭೃಗುಕುಲದ ಪುರುಷರ ಸಂಬಂಧವಾಗಿಯೇ ಇವೆ. ಮಹಾಭಾರತದ ಕಥೆಯೊಡನೆ ಯಾವ ರೀತಿಯಲ್ಲಿಯೂ ಅವುಗಳ ಸಂಬಂಧವಿಲ್ಲ. ಅವುಗಳನ್ನು ತೆಗೆದುಹಾಕಿದರೆ ಮೂಲ ಕಥೆಯ ಸೌಂದರ್ಯವು, ಸುಗಮತೆಯು, ಓಘವು ಹೆಚ್ಚಾಗುವಂತಿದೆ. ಆದ್ದರಿಂದ ಈ ಕಥೆಯ ವಿಚಾರವು ಅನಗತ್ಯ.

ಮಹಾಭಾರತದ ಕಥೆಯನ್ನು ರಚಿಸಿದ ವ್ಯಾಸರೇ ಆಗಲಿ, ಅದನ್ನು ಶಿಷ್ಯರಿಗೆ ಹೇಳಿದ ವ್ಯಾಸರೇ ಆಗಲಿ, ಕೌರವ–ಪಾಂಡವರ ಮೂಲ ಪುರುಷರೆಂದೆನಿಸಿದ ವ್ಯಾಸರೇ ಆಗಲಿ, ಇಂಥ ವ್ಯಾಸನ ಸಂಬಂಧವು ಮಹಾಭಾರತದಲ್ಲಿ ನೈಮಿತ್ತಿಕವಾಗಿದೆ. ಅಲ್ಲಲ್ಲಿ ಅವರು ಪ್ರತ್ಯಕ್ಷವಾಗುತ್ತಾರೆ, ದುರ್ಯೋಧನನಿಗೆ ಉಪದೇಶಿಸುತ್ತಾರೆ. ಪಾಂಡವರಿಗೆ ಪಾಂಚಾಲಕ್ಕೆ ಹೋಗಲು ಹೇಳುತ್ತಾರೆ. ಗಾಂಧಾರಿಗೆ ಸಮಾಧಾನ ಹೇಳುತ್ತಾರೆ. ಅಶ್ವತ್ಥಾಮನನ್ನು ಜರೆಯುತ್ತಾರೆ. ಯಾದವರು ಅಳಿದ ನಂತರ ಅರ್ಜುನನನ್ನು ಸಂತೈಸುತ್ತಾರೆ. ಆದರೆ ಒಮ್ಮೆ ಸತ್ಯವತಿಯ ಸೊಸೆಯಂದಿರು ವ್ಯಾಸರಿಂದ ಸಂತಾನವನ್ನು ಪಡೆದ ನಂತರ ವ್ಯಾಸರಿಗೆ ಮಹಾಭಾರತದಲ್ಲಿ ವಿಶೇಷ ಸ್ಥಾನವು ಉಳಿಯಲಿಲ್ಲ.

ಮಹಾಭಾರತದ ಕಥೆಗೆ ಯಾರ ನೇರ ಸಂಬಂಧವಿದೆಯೋ, ಯಾರಿಂದ ಕಥಾ ಭಾಗದ ಪರಿಪೋಷಣೆ ಆಗಿದೆಯೋ, ಅಂತಹ ಬ್ರಾಹ್ಮಣರು ಇಬ್ಬರು ಬಾಲ್ಯದಿಂದಲೇ ದ್ರೋಣನ ಸಮಾವೇಶವು ಮಹಾಭಾರತದಲ್ಲಿ ಆಗಿದೆ. ಅಸ್ತ್ರವಿದ್ಯಾನಿಪುಣನಾದ ಈ ಬ್ರಾಹ್ಮಣನು, ಕೌರವರ ಕುಲ ಪರಂಪರಾಗತ ಕೃಪಾಚಾರ್ಯ ಗುರುವಿನ ಮೈದುನನಾಗಿದ್ದ. ಎಲ್ಲಿಯೂ ಆಶ್ರಯ ದೊರೆಯದ ಈತ ದಾರಿದ್ರ್ಯಪೀಡಿತನಾಗಿದ್ದ. ಇಷ್ಟಲ್ಲದೇ ಅವಮಾನ ಹೊಂದಿ ಕುದಿಯುತ್ತಿದ್ದ. ಪಾಂಚಾಲರಾಜನ ಸಹಾಧ್ಯಾಯಿಯಾಗಿದ್ದ. ಗೆಳೆತನದ ಕಾರಣದಿಂದ ಅವನ ದರಬಾರಿನಲ್ಲಿ ಹೋದಾಗ ದ್ರುಪದನು ಅವನನ್ನು ಹೀಯಾಳಿಸಿದ್ದ. ದ್ರುಪದರಾಜ ಆತನನ್ನು ತನ್ನ ಆಶ್ರಯದಲ್ಲಿಟ್ಟುಕೊಳ್ಳಬಹುದಿತ್ತು. ಆದರೆ ದ್ರೋಣ ಬಾಲ್ಯದಲ್ಲಿಯ ಸಹಪಾಠಿಯಾದ ಕಾರಣದಿಂದ ಸರಿಕಮಿತ್ರನಂತೆ ಕಾಣಲು ಬಯಸಿದನು. ಅದು ರಾಜನಾದ ದ್ರುಪದನಿಗೆ ಹಿಡಿಸಲಿಲ್ಲ. ಈ ರೀತಿ ದ್ರೋಣ ಅವಮಾನ ಹೊಂದಿ ಕುದಿಯುತ್ತಾ ಕೃಪನ ಬಳಿ ಬಂದಿದ್ದ. ತನ್ನ ಮಲ ಸಹೋದರನ ಮೊಮ್ಮಕ್ಕಳಿಗೆ ಅಸ್ತ್ರವಿದ್ಯೆಯನ್ನು ಕಲಿಸುವುದಕ್ಕಾಗಿ ಭೀಷ್ಮ, ದ್ರೋಣನನ್ನು ನೇಮಿಸಿದನು. ವಿದ್ಯಾಭ್ಯಾಸವು ಪೂರ್ತಿಗೊಂಡನಂತರ ಗುರುದಕ್ಷಿಣೆಯಾಗಿ ಅರ್ಜುನನಿಂದ ದ್ರುಪದನ ಪರಾಭವವನ್ನು ಮಾಡಿಸಿದನು. ದ್ರುಪದನಿಗೆ ಸರಿಸಮಾನನಾಗುವುದಕ್ಕಾಗಿ ಆತನ ರಾಜ್ಯದರ್ಧವನ್ನು ಕಬಳಿಸಿ ದ್ರುಪದನನ್ನು ಸಜೀವನಾಗಿ ಬಿಟ್ಟುಕೊಟ್ಟನು. ಒಬ್ಬನನ್ನು ಪರಾಭೂತನಾಗಿ ಮಾಡಿ, ಆತನ ಪ್ರದೇಶವನ್ನು ವಶಪಡಿಸಿಕೊಂಡು, ಆ ಪ್ರದೇಶವನ್ನು ತಾನು ಆಳುವುದು ಆಗಿನ ಕಟ್ಟಳೆಗಳ ವಿರುದ್ಧವಾಗಿತ್ತು. ಅದರಲ್ಲಿಯೂ ಈ ಸಂಗತಿಯು ಒಬ್ಬ ಬ್ರಾಹ್ಮಣನಿಂದ ನಡೆದುದ್ದು ತೀರಾ ಅನುಚಿತ. ದ್ರುಪದನ

ಪರಾಭವವಾಯಿತು. ಅರ್ಜುನನು ಆತನನ್ನು ಸೆರೆಹಿಡಿದು ತಂದ. ಜರುಗಿದ ಘಟನೆಗಳ ಅರಿವನ್ನು ಉಂಟುಮಾಡಿ ಆತನನ್ನು ಬಿಟ್ಟುಕೊಟ್ಟಿದ್ದರೆ ಅವಮಾನದ ಸೇಡನ್ನು ತೀರಿಸಿದಂತಾಗುತ್ತಿತ್ತು. ದ್ರೋಣನ ಔದಾರ್ಯವು, ಮನಸ್ಸಿನ ಶಾಂತಿಯು ಸ್ಥಾಪಿತವಾಗುತ್ತಿದ್ದವು. ಹಾಗೆ ಮಾಡದೇ ದ್ರೋಣನು ಉತ್ತರ ಪಾಂಚಾಲ ಅಥವಾ ಅಹಿಚ್ಛತ್ರವನ್ನು ತನ್ನ ವಶಕ್ಕೆ ಇಟ್ಟುಕೊಂಡ. ದಕ್ಷಿಣ ಪಾಂಚಾಲದಲ್ಲಿ ದ್ರುಪದ ರಾಜನಾಗಿ ಉಳಿದು ಉತ್ತರ ಪಾಂಚಾಲವನ್ನು ತನ್ನ ವಶದಲ್ಲಿಟ್ಟುಕೊಂಡಿದ್ದರೂ, ದ್ರೋಣ ಕೌರವರ ಸಭೆಯಲ್ಲಿ ಉಳಿದುಕೊಂಡಿದ್ದನೆಂದು ಕಾಣುತ್ತದೆ. ರಾಜಸಭೆಯಲ್ಲಿ ಆಗಾಗ್ಗೆ ನಡೆದ ಭೀಷ್ಮನ ಭಾಷಣಗಳ ಜೊತೆಯೇ ದ್ರೋಣನು ನುಡಿದ ಉಲ್ಲೇಖವಿರುವುದರಿಂದ ಈ ಸಂಗತಿಯು ಸ್ಪಷ್ಟವಾಗುತ್ತದೆ. ಭೀಷ್ಮ ನುಡಿದುದ್ದಕ್ಕೆ ದ್ರೋಣ ಅನುಮೋದಿಸುವುದು ಕಂಡುಬರುತ್ತದೆ. ಆದರೆ ಭೀಷ್ಮ ಯಾವ ತವಕದಿಂದ ಕಲಹಗಳನ್ನು, ತಡೆದು ಕುರುಕುಲವನ್ನು ರಕ್ಷಿಸಲು ಹವಣಿಸುತ್ತಿದ್ದನೋ, ಆ ಉತ್ಕಟತೆಯು ದ್ರೋಣನಲ್ಲಿ ಇದ್ದಿಲ್ಲವೆಂದು ಕಾಣುತ್ತದೆ. ಇದಕ್ಕೆ ಪ್ರತಿಯಾಗಿ ಆತ ಯುದ್ಧ ಕಾಲದಲ್ಲಿ ಪೂರ್ಣತಃ ಕೌರವರ ಪಕ್ಷದವನೇ ಆಗಿದ್ದನೆಂದು ಗೊತ್ತಾಗುತ್ತದೆ.

ದ್ರೋಣನ ಮಗ ಅಶ್ವತ್ಥಾಮ. ಆತ ಶಾಸ್ತ್ರಪಾರಂಗತನಾಗದೇ, ಶಸ್ತ್ರ ಪಾರಂಗತನಾದ. ಗುರುಗಳು ಹಲವು ಅಸ್ತ್ರಗಳನ್ನು ತನ್ನಿಂದ ಬಚ್ಚಿಟ್ಟು, ಅಶ್ವತ್ಥಾಮನಿಗೆ ಹೇಳಿಕೊಡುತ್ತಾರೆ ಎಂಬ ಸಂದೇಹವು ಅರ್ಜುನನಿಗೆ ಬಂದಿತು. ಈ ಸಂದೇಹದಿಂದಲೇ ಪ್ರಾಯಶಃ ಅರ್ಜುನ ಅಶ್ವತ್ಥಾಮರಲ್ಲಿ ಪ್ರಕಟವಾಗಿ ಇರದಿದ್ದರೂ ಪ್ರಚ್ಛನ್ನವಾದ ಸ್ಪರ್ಧೆಯು ಇತ್ತು. ದ್ರೋಣ ಅರ್ಜುನನಿಗೆ "ನನ್ನಲ್ಲಿದ್ದ ವಿದ್ಯೆಯನ್ನು ಎಲ್ಲರಿಗಿಂತ ನಿನಗೆ ಹೆಚ್ಚಾಗಿ ಕೊಟ್ಟಿದ್ದೇನೆ" ಎಂದು ಬಹು ಪರಿಯಾಗಿ ಹೇಳಿದ. ಅದರಿಂದ ಅರ್ಜುನನಿಗೆ ಸಮಾಧಾನವಾಯಿತೋ ಇಲ್ಲವೋ ತಿಳಿಯದು. ಇಬ್ಬರು ಪಿತಾಪುತ್ರರು (ದ್ರೋಣ–ಅಶ್ವತ್ಥಾಮರು) ಕೌರವರ ಪತಿಯಿಂದ ಯುದ್ಧಮಾಡಿದರೆಂಬುದು ಮಾತ್ರ ನಿಜ !

ಭೀಷ್ಮ–ದ್ರೋಣರಿಗೆ ಎದುರಾಗಿ ಯುದ್ಧಮಾಡುವ ಪ್ರಸಂಗವೇ ಬರಬಾರದು ಎಂಬ ಕಾರಣವೇ ಅರ್ಜುನ ಯುದ್ಧವೇ ಬೇಡ ಎನ್ನುವುದಕ್ಕೆ ಕಾರಣವಾಗಿತ್ತು. ಯುದ್ಧಕಾಲದಲ್ಲಿ ಭೀಷ್ಮನ ವಯಸ್ಸು ತೊಂಬತ್ತರಿಂದ–ನೂರರವರೆಗೆ ಇರಬೇಕು. ದ್ರೋಣನ ವಯಸ್ಸು ದ್ರುಪದನಷ್ಟೇ ಇಲ್ಲವೆ ಅರ್ಜುನನ ಪಿತನಷ್ಟೇ ಇರಬಹುದು. ಅರ್ಜುನನ ವಯಸ್ಸು ಯುದ್ಧಕಾಲದಲ್ಲಿ ಮೂವತ್ತೈದು ಇರಬೇಕು. ಅವನಿಗಿಂತ ಅವನ ಗುರುಗಳು ಇಪ್ಪತ್ತು ವರ್ಷಗಳಿಗಿಂತ ಹಿರಿಯರು, ಎಂದರೆ ಸುಮಾರು ವಯಸ್ಸಿನವರೇ ಇದ್ದರು. ಅರ್ಜುನನು ವಿರಾಟನ ಗೋಗ್ರಹಣದ ಸಮಯದಲ್ಲಿ ಭೀಷ್ಮ–ದ್ರೋಣರನ್ನು ಸೋಲಿಸಿದ್ದನು. ಈ ಇಬ್ಬರು ಯೋಧರು ಅರ್ಜುನನಿಗೆ ಮಿಗಿಲಾದವರಾಗಿರಲಿಲ್ಲ. ಆದರೆ ಅವರನ್ನು ಸಾಯಿಸುವಂತಿರಲಿಲ್ಲ. ಒಬ್ಬ ತಾತ. ಇನ್ನೊಬ್ಬ ಗುರು.

ಭೀಷ್ಮಪರ್ವದಲ್ಲಿ ಹತ್ತುದಿನ ಯುದ್ಧ ನಡೆದರೂ ಯಾವ ಕಡೆಯವರೂ ಅಷ್ಟೊಂದು ಮೃತರಾಗಲಿಲ್ಲ. ಅದು ತೋರಿಕೆಯ ಯುದ್ಧವಾಗಿತ್ತು. ಕಾಲಹರಣವನ್ನು ಮಾಡಿ ಕೌರವ

ಪಾಂಡವರನ್ನು ಯುದ್ಧದಿಂದ ಪರಾವರ್ತಿಸಬೇಕೆಂಬ ಯೋಜನೆಯು ಭೀಷ್ಮನದಾಗಿತ್ತು. ಇದಕ್ಕೆ ಪ್ರತಿಯಾಗಿ ದ್ರೋಣನ ಸೇನಾಧಿಪತ್ಯದ ಮೂರು ದಿನಗಳಲ್ಲಿ ತುಮುಲಯುದ್ಧ ನಡೆಯಿತು.

ದ್ರೋಣ ಸೇನಾಪತಿಯಾದ ಸಂಗತಿಯನ್ನು ಗಮನಿಸುವಂತಿದೆ. ಭೀಷ್ಮನ ಪತನದ ನಂತರ ದುರ್ಯೋಧನನ ಸೇನೆಯಲ್ಲಿ ಹಾಹಾಕಾರವಾಯಿತು. “ನಮಗೆ ಕರ್ಣನೇ ಬೇಕು. ಕರ್ಣನೇ ಬೇಕು” ಎನ್ನುವ ಕೂಗು, ಎಲ್ಲೆಲ್ಲಿಯೂ ಕೇಳಿಸಿತು. ಇಷ್ಟು ಕಾಲ ಬದಿಗೆ ಉಳಿದ ಕರ್ಣ ಸಡಗರದಿಂದ ರಥದಲ್ಲಿ ಕುಳಿತು ವೇಗವಾಗಿ ಬಂದ. ಇದನ್ನೆಲ್ಲಾ ಓದಿ ಕರ್ಣನೇ ಈಗ ಸೇನಾಪತಿಯಾಗುವ ಬಗ್ಗೆ ಸಂದೇಹವು ಉಳಿಯುವುದಿಲ್ಲ. ಆದರೆ ಇದ್ದಕ್ಕಿದ್ದಂತೆ ಎಲ್ಲಾ ಸನ್ನಿವೇಶವೇ ಬದಲಾಯಿಸುತ್ತದೆ. “ಯಾರ ಮನಸ್ಸನ್ನು ನೋಯಿಸದೇ ಎಲ್ಲರೂ ಒಪ್ಪಿದವನನ್ನೇ ಸೇನಾಪತಿಯನ್ನಾಗಿ ಮಾಡುವುದು ಒಳ್ಳೆಯದು. ಆದ್ದರಿಂದ ನೀನು ದ್ರೋಣನನ್ನು ಸೇನಾಪತಿಯನ್ನಾಗಿ ಮಾಡು,!” ಎಂದು ಕರ್ಣನು ತಾನಾಗಿಯೇ ದುರ್ಯೋಧನನಿಗೆ ಹೇಳಿದನು. ದ್ರೋಣನನ್ನು ಸೇನಾಪತಿಯಾಗಿ ಮಾಡಬೇಕೆಂಬ ಕರ್ಣನ ಹೇಳಿಕೆಯು ವಿಚಾರಾರ್ಹವಿದೆ. ಕರ್ಣನು ಸೇನಾಪತಿಯಾಗುವುದಕ್ಕೆ ಕೆಲವರ ವಿರೋಧವಿರಬಹುದೆಂದು ತೋರುತ್ತದೆ. ಯುದ್ಧದ ಆರಂಭದಿಂದಲೇ ಇಂತಹ ಇಕ್ಕಟ್ಟಿನಿಂದ ದುರ್ಯೋಧನನ ತಲೆ ಚಿಟ್ಟುಗಟ್ಟಿತ್ತು. ಪಾಂಡವರ ಕಡೆಯಲ್ಲಿ ಶ್ರೇಷ್ಠ, ಕನಿಷ್ಠ, ಕ್ಷತ್ರಿಯ, ಅಕ್ಷತ್ರಿಯ ಮುಂತಾದ ರಗಳೆಗಳು ಉಂಟಾಗಿರಲಿಲ್ಲ. ಮೊದಲಿನಿಂದ ಕೊನೆಯವರೆಗೂ ದೃಷ್ಟದ್ಯುಮ್ನನು ಪಾಂಡವರ ಸೇನಾಪತಿಯಾಗಿದ್ದನು. ದುರ್ಯೋಧನನಿಗೆ ಭೀಷ್ಮ ಸೇನಾಧಿಪತ್ಯದ ಮೊದಲಿನ ಹತ್ತು ದಿನಗಳನ್ನು ವ್ಯರ್ಥವಾಗಿ ಕಳೆಯಬೇಕಾಯಿತು. ಆನಂತರವು ಕರ್ಣನನ್ನು ಬಿಟ್ಟು ದ್ರೋಣನನ್ನು ಸೇನಾಪತಿಯನ್ನಾಗಿ ಮಾಡಬೇಕಾಯಿತು. ದ್ರೋಣನ ಪತನವಾದ ನಂತರ ಕರ್ಣನನ್ನು ಸೇನಾಪತಿಯನ್ನಾಗಿ ಮಾಡಿದ್ದಾಯಿತು. ಆದರೆ ಆಗ ಕೂಡ ಶಲ್ಯ ನೊಂದಿರಬೇಕೆಂದು ಕಾಣುತ್ತದೆ. ಅಂದರೆ ಸೈನ್ಯವು ದೊಡ್ಡದಾಗಿದ್ದರೂ, ಸರಿಕರಾದ ಅರಸರು, ಸ್ವಕುಲದ ಹಿರಿಯರು ಇವರ ಪ್ರತಿಷ್ಠೆಗಳ ಮೂಲಕ ದುರ್ಯೋಧನನು ಬೇಸತ್ತಿದ್ದನೆಂಬುದು ನಿಜ. ಭೀಷ್ಮನ ನಂತರ ದ್ರೋಣ ಈ ರೀತಿ ಸೇನಾಪತಿಯಾದ.

ಭೀಷ್ಮನು ಜೀವಿಸಿರುವಾಗ್ಗೆ ಯಾವಾಗಲೂ ಆತನ ಹೇಳಿಕೆಯನ್ನೇ ಎತ್ತಿ ಹಿಡಿಯುವ ದ್ರೋಣನಲ್ಲಿ, ಯುದ್ಧದ ಸಮಯದಲ್ಲಿ ಬದಲಾವಣೆಯಾದಂತೆ ಕಾಣುತ್ತದೆ. ಭೀಷ್ಮ, ದ್ರೋಣನಿಗೆ ಆಶ್ರಯದಾತನಿದ್ದ. ದುರ್ಯೋಧನ ದ್ರೋಣನಿಗೆ ಶಿಷ್ಯನೂ ಆಶ್ರಯದಾತನೂ ಆಗಿದ್ದ. ಈ ನೂತನ ಆಶ್ರಯದಾತನಿಗೆ ಸ್ವಾಮಿಭಕ್ತಿಯನ್ನು ತೋರುವುದೂ ದ್ರೋಣನ ಕರ್ತವ್ಯವಾಗಿತ್ತು. ಅದಲ್ಲದೆ ಯಾವ ಯಾವ ರೀತಿಯಲ್ಲಿ ಆತ ಸೇನಾಪತಿಯಾದನೋ, ಅದರಂತೆಯೇ ತನ್ನ ಆಯ್ಕೆಯು ಯಥಾಯೋಗ್ಯವಾದುದು ಎಂಬುದನ್ನು ದುರ್ಯೋಧನನಿಗೆ ತೋರಿಸಿಕೊಡುವುದಿತ್ತು. “ನೀನು ಕೇವಲ ಅರ್ಜುನನನ್ನು ದೂರವಾಗಿರಿಸು ! ನಾನು ಪಾಂಡವರನ್ನು ಸದೆ ಬಡಿಯುತ್ತೇನೆ” ಎಂದು ದ್ರೋಣನು ಹೇಳಿದ್ದನು. ಆ ಹೇಳಿಕೆಯಂತೆ ದ್ರೋಣನು ಕಾದಾಡಿದನು. ಮೂರು ದಿನಗಳ ಅವಧಿಯಲ್ಲಿ

ಘನಘೋರ ಸಂಗ್ರಾಮವಾಯಿತು. ಅನೇಕ ಪ್ರಮುಖರು ಮೃತರಾದರು. ಮುಖ್ಯವಾಗಿ ಅರ್ಜುನನ ಸುತನಾದ ಅಭಿಮನ್ಯು ಮತ್ತು ಧೃತರಾಷ್ಟ್ರನ ಅಳಿಯನಾದ ಜಯದ್ರಥ ಮಡಿದರು. ಈ ಮೂರು ದಿನಗಳಲ್ಲಿ ಕರ್ಣ ಯುದ್ಧದಲ್ಲಿದ್ದ. ಬಹುಶಃ ಅರ್ಜುನನನ್ನು ಪ್ರಮುಖ ರಣರಂಗದಿಂದ ಬೇರೆ ಇಡಿಸಿದ ಯುಕ್ತಿಯಿಂದ. ದ್ರೋಣಾರ್ಜುನರು ಎದುರಾಗಲಿಲ್ಲ. ಅರ್ಜುನ ಇಲ್ಲವಾದ್ದರಿಂದ ಅಭಿಮನ್ಯುವನ್ನು ಕೊಲ್ಲುವುದು ಸಾಧ್ಯವಾಯಿತು. ದ್ರೋಣ ಅಭಿಮನ್ಯುವನ್ನು ಕೊಲ್ಲುವಾಗ, ಎಳ್ಳಷ್ಟೂ ಕನಿಕರವನ್ನು ತೋರಿಸಲಿಲ್ಲವೆಂದು ಕಾಣುತ್ತದೆ. ಭೀಷ್ಮನಿಗೆ ಈ ವಿಧವಾಗಿ ತನ್ನ ಮರಿಮಗನನ್ನು ಕೊಲ್ಲುವುದು ಆಗುತ್ತಿರಲಿಲ್ಲವೆಂದು ಅನ್ನಿಸುತ್ತದೆ.

ದ್ರೋಣನು ಯಾವ ರೀತಿಯಲ್ಲಿ ಕೊಲ್ಲಲ್ಪಟ್ಟನೋ ಆ ಪ್ರಸಂಗವನ್ನು ಲಕ್ಷಿಸುವಂತಿದೆ. ಭೀಮನು 'ಅಶ್ವತ್ಥಾಮ' ಎಂಬ ಒಂದು ದೊಡ್ಡ ಆನೆಯನ್ನು ಸಾಯಿಸಿದನು. ಮತ್ತು ಎಲ್ಲೆಡೆಯಲ್ಲಿಯೂ 'ಅಶ್ವತ್ಥಾಮನು ಮಡಿದನು' ಎಂಬ ಹಾರು ಸುದ್ದಿಯನ್ನು ಹರಡಿಸಿದನು. ದ್ರೋಣನಿಗೆ ಇದು ನಿಜವೆನಿಸದೇ ಆತನು ಧರ್ಮನನ್ನು ಕೇಳಿದನು. ಆಗ ಧರ್ಮನು "ನರನೋ, ಕುಂಜರನೋ ತಿಳಿಯದು" ಎಂದು ಗೊಣಗುಟ್ಟಿದನು. ಅದು ದ್ರೋಣನಿಗೆ ಸರಿಯಾಗಿ ಕೇಳಬರಲಿಲ್ಲ. ತನ್ನ ಮಗನಾದ ಅಶ್ವತ್ಥಾಮನೇ ಮಡಿದನೆಂಬ ಸಂದೇಹವು ಆತನಿಗೆ ಉಂಟಾಯಿತು. ನಂತರದ ಸಂಗತಿಗಳಿಂದ ಅಶ್ವತ್ಥಾಮನು ಖಚಿತವಾಗಿ ಮಡಿದಿರಬಹುದು; ಎಂದು ದ್ರೋಣನಿಗೆ ಅನಿಸಿರಲಿಲ್ಲವೆಂದು ತಿಳಿಯುತ್ತದೆ. ಇದನ್ನು ನಂಬದಿರುವುದಕ್ಕೆ ಕೆಲವು ಕಾರಣಗಳನ್ನು ಕೊಡಬಹುದು. ಈ ರೀತಿಯಾಗಿ ಯಾವೊಬ್ಬ ಪ್ರಿಯವ್ಯಕ್ತಿ ಅಥವಾ ಮಿತ್ರ ಮಡಿದನೆಂಬ ಹಾರಿಕೆ ಸುದ್ದಿಯನ್ನು ಹರಡಿಸಿ ಶತ್ರುಗಳ ಮನೋಬಲವನ್ನು ಕುಗ್ಗಿಸುವ ಪ್ರಘಾತವು ಆಗ ರೂಢಿಯಲ್ಲಿತ್ತು. ಜರಾಸಂಧನ ಸೇನಾಪತಿಯರಾದ ಹಂಸ ಮತ್ತು ಡಿಂಭಕರು ಅನ್ಯೋನ್ಯ ಮಿತ್ರರಾಗಿದ್ದರು. ಅದರಲ್ಲಿಯ ಒಬ್ಬನು ಹತನಾದನೆಂಬ ಹಾರಿಕೆ ಸುದ್ದಿಯಿಂದ ಇನ್ನೊಬ್ಬನು ಪ್ರಾಣತ್ಯಾಗ ಮಾಡಿದನು. ಆತನು ಮಡಿದುದ್ದನ್ನು ನೋಡಿ ಮೊದಲಿನವನು ನಿಜವಾಗಿಯೇ ಆತ್ಮಘಾತವನ್ನು ಮಾಡಿಕೊಂಡನು. ಈ ವೃತ್ತಾಂತವು ಸಭಾಪರ್ವದಲ್ಲಿ ಬಂದಿದೆ. ಅದು ಆಗಿನ ಎಲ್ಲಾ ಜನರಿಗೆ ವಿದಿತವಾಗಿತ್ತೆಂದು ಶಿಶುಪಾಲನ ನುಡಿಗಳಿಂದ ತಿಳಿದು ಬರುತ್ತದೆ:

ಅನಂತರವೂ ದ್ರೋಣ ದ್ವೇಷದಿಂದ ಯುದ್ಧವನ್ನು ಮಾಡುತ್ತಲೇ ಇದ್ದನೆಂದು ವರ್ಣನೆ ಇದೆ. ಇದರಿಂದ ಧರ್ಮನ ನುಡಿಯನ್ನು ಕೇಳಿ ದ್ರೋಣ ಶಸ್ತ್ರವನ್ನು ಕೆಳಗಿಟ್ಟು ಕುಳಿತಿದ್ದು ಕಾಣುವುದಿಲ್ಲ. ದೃಷ್ಟದ್ಯುಮ್ನ ದ್ವೇಷದಿಂದ ದ್ರೋಣನ ಮೇಲೆ ಏರಿ ಹೋದನು. ದ್ರೋಣನ ಬಾಣಗಳಿಂದ ತೀರಾ ಗಾಯಗೊಂಡ. ಆಗ ಭೀಮ ದೃಷ್ಟದ್ಯುಮ್ನನ ಬೆಂಬಲಕ್ಕಾಗಿ ಧಾವಿಸಿದನು. ಆತ ದ್ರೋಣನ ರಥವನ್ನು ಒಂದು ಬದಿಯಿಂದ ಹಿಡಿದಿಟ್ಟು ದ್ರೋಣನಿಗೆ ಹೀಗೆಂದು ನುಡಿದನು.

"ಬ್ರಾಹ್ಮಣರು ಧರ್ಮವನ್ನು ಬಿಟ್ಟು ಶಸ್ತ್ರಗಳನ್ನು ಹಿಡಿದಿದ್ದು ಆಗಿರದಿದ್ದರೆ ಕ್ಷತ್ರಿಯರು ಸುರಳೀತವಾಗಿ ಜೀವಿಸುವ ಚಿಹ್ನೆ ಇತ್ತು. ಅಹಿಂಸಾ ವೃತ್ತಿಯನ್ನು ಆಚರಿಸುವುದು ಬ್ರಾಹ್ಮಣರ

ಧರ್ಮ. ಅದರಲ್ಲಿಯೂ ತಾವು ಶ್ರೇಷ್ಠ ಬ್ರಾಹ್ಮಣರು! ಒಬ್ಬ ಮಗನ ಕಾರಣದಿಂದ ಮ್ಲೇಚ್ಛ–ಮೊದಲಾದ ಅನೇಕರನ್ನು ಕೊಂದಿರುವಿರಿ. ಅವರು ತಮ್ಮ ಧರ್ಮದಂತೆ ಆಚರಿಸುತ್ತಿದ್ದರು. ನೀವು ಮಾತ್ರ ಸ್ವಧರ್ಮವನ್ನು ತ್ಯಜಿಸಿ ಸಂಹಾರವನ್ನು ಮಾಡಿದಿರಿ. ನಾಚಿಕೆ ಆಗುವುದಿಲ್ಲವೇ? ಯಾವ ಮಗನಿಗೋಸ್ಕರ ಈ ಎಲ್ಲವನ್ನು ಮಾಡಿದಿರೋ ಆತನಂತೂ ಮೃತನಾದನು, ಧರ್ಮರಾಜನ ಹೇಳಿಕೆಯ ಮೇಲೆ ನಿಮ್ಮ ನಂಬಿಕೆ ಇಲ್ಲವೇ?"

ಈ ನುಡಿಗಳನ್ನು ಕೇಳಿ ದ್ರೋಣನು ಉದ್ವಿಗ್ನನಾದನು. ಆತನ ಧೈರ್ಯ ಕುಗ್ಗಿತು. ಈ ಅವಧಿಯಲ್ಲಿ ಗಾಯಗೊಂಡ ದೃಷ್ಟದ್ಯುಮ್ನನಿಗೆ ಚೇತರಿಸಿ ಕೊಳ್ಳಲು ಸಮಯ ದೊರಕಿತು. ತುಸು ತಡೆದು, ಹೊಸ ಆವೇಶದಿಂದ ತನ್ನ ರಥವನ್ನು ಆತ ದ್ರೋಣನ ರಥಕ್ಕೆ ಎದುರಿಸಿದ. ದ್ರೋಣನ ರಥದಲ್ಲಿ ಧುಮುಕಿ ಅವನ ಜುಟ್ಟನ್ನು ಎಳೆದ. ಈ ಘಟನೆಯು ಪಾಂಡವ ಸೈನ್ಯದಲ್ಲಿಂದ ಕಾಣುತ್ತಲೇ ಇತ್ತು. ಅರ್ಜುನನು ಅಲ್ಲಿಂದಲೇ ಗಟ್ಟಿಯಾಗಿ ಕೂಗಿದನು. "ಎಲವೊ ! ಗುರುಗಳನ್ನು ಕೊಲ್ಲಬೇಡ. ಅವರ ರಥವನ್ನು ಈ ಕಡೆಗೆ ಸಾಗಿಸು. ಅವರನ್ನು ಈ ಕಡೆಗೆ ಕರೆದುಕೊಂಡು ಬಾ!" ಅರ್ಜುನನು ಹೀಗೆ ಹೇಳುತ್ತಿರುವಾಗ ದೃಷ್ಟದ್ಯುಮ್ನನು ದ್ರೋಣನನ್ನು ಸಾಯಿಸದೇ ಇದ್ದರೂ ನಡೆಯುವಂತಿತ್ತು. ದ್ರೋಣ ಆತನಿಗೆ ಮತ್ತು ಭೀಮನಿಗೆ ಪೂರ್ತಿಯಾಗಿ ಸೆರೆಸಿಕ್ಕಿದ್ದನು. ಆತನನ್ನು ಸೆರೆಹಿಡಿದು ಪಾಂಡವರ ಬಳಿ ತರಬಹುದಾಗಿತ್ತು. ಇದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ದ್ರೋಣನು ಅಸಹಾಯನಾಗಿದ್ದಾಗ ಕೋಪಾವೇಶದಿಂದ ಕೊಲ್ಲಲ್ಪಟ್ಟ. ಸಾಯುವ ಮುನ್ನ ಆತನು, "ಕರ್ಣನೇ ! ಕೃಪನೇ ! ದುರ್ಯೋಧನನೇ ! ಸಾಹಸದಿಂದ ಕಾದಾಡಿರಿ, ನಾನು ಸತ್ತೇ !!" ಎಂದು ಗಟ್ಟಿಯಾಗಿ ಕೂಗಿಕೊಂಡನು. ಮರಣ ಸಮಯದ ಆತನ ಈ ವರ್ತನೆಯು, ಅವನು ಪುತ್ರ ಮರಣದ ವಾರ್ತೆಯಿಂದ ದುಃಖಿತವಾಗಿ ಸುಮ್ಮನೇ ಕುಳಿತಿದ್ದರಿಂದ ಕೊಲ್ಲಲ್ಪಟ್ಟನೆಂಬ ರೂಢ ನಂಬಿಕೆಗೆ ವಿಸಂಗತವಿದೆ.

ದ್ರುಪದ ಅರ್ಧರಾಜ್ಯವನ್ನು ಕಳೆದುಕೊಂಡ ನಂತರ ಆ ಪರಾಭವದ ಸೇಡನ್ನು ತೀರಿಸುವುದಕ್ಕಾಗಿ ಒಂದು ಯಜ್ಞವನ್ನು ಮಾಡಿದನು. ಪೂರ್ವಾರ್ಜಿತವಾಗಿ ಬಂದ ಈ ರಾಜ್ಯವನ್ನು ಕಬಳಿಸಿದ ಶತ್ರುವಿನ ಸೇಡನ್ನು ಆ ಯಜ್ಞದಲ್ಲಿ ಲಭಿಸಿದ ಪುತ್ರನಾದ ದೃಷ್ಟದ್ಯುಮ್ನನು ತೀರಿಸಿದನು.

ಭಗವದ್ಗೀತೆಯಲ್ಲಿ ಹೇಳಿದ ಕ್ಷಮೆ, ಶಾಂತಿ, ಮೊದಲಾದ ಬ್ರಾಹ್ಮಣರಲ್ಲಿಯ ಯಾವ ಲಕ್ಷಣವೂ ದ್ರೋಣರಲ್ಲಿ ಕಂಡುಬರುವುದಿಲ್ಲ. ಹೀಗಿದ್ದರೂ ಮಹಾಭಾರತದಲ್ಲಿ ದ್ರೋಣನ ಭೂಮಿಕೆಯನ್ನು ನಿಂದಿಸುವಂತೆಯೂ ಇಲ್ಲ, ಸ್ತುತಿಸುವಂತೆಯೂ ಇಲ್ಲ. ಆತನ ಮಗನ ಪರಿಸ್ಥಿತಿಯು ಇದಕ್ಕೆ ವಿರುದ್ಧವಾಗಿ ಇದೆ. ಅಶ್ವತ್ಥಾಮನು ಬ್ರಾಹ್ಮಣತ್ವದ ಎಲ್ಲಾ ನಿಯಮಗಳನ್ನು ಬಿಸುಟು ಹಾಕಿದ್ದನು. ಇಷ್ಟಕ್ಕೆ ನಿಲ್ಲದೆ ಸರ್ವರೀತಿಯಲ್ಲಿ ಆತನ ಅಧಃಪತನವಾಗಿತ್ತು. ವೈರತ್ವ–ಪ್ರತಿವೈರತ್ವದ, ಕೊನೆ ಇಲ್ಲದ ದುಷ್ಟಮಾಲಿಕೆಯಲ್ಲಿಯ ಆತನ ಘೋರ ನಿರ್ದಯ ಕೃತಿಗಳಿಗೆ ಎಣೆ ಇಲ್ಲ. ಅಶ್ವತ್ಥಾಮ ಮಹಾಭಾರತದಲ್ಲಿ ಮೊದಲ ಬಾರಿ ಗೋಚರವಾಗುವುದು ದಾರಿದ್ರ್ಯ ಪೀಡಿತನಾದ ಬ್ರಾಹ್ಮಣನ ಮಗನೆಂದು ! ಭೀಷ್ಮನು ದ್ರೋಣನಿಗೆ ಆಶ್ರಯವನ್ನು ಇತ್ತಮೇಲೆ

ಇತರ ಶಿಷ್ಯರೊಡನೆ ಅಶ್ವತ್ಥಾಮ ಅಸ್ತ್ರವಿದ್ಯೆಯನ್ನು ಕಲಿತ, ಅಸ್ತ್ರವಿದ್ಯೆಯಲ್ಲಿ ಆತ ಅರ್ಜುನನ ಸಮನಿದ್ದನೆಂದು ಮಹಾಭಾರತದಲ್ಲಿ ಅಲ್ಲಲ್ಲಿ ಉಲ್ಲೇಖಗಳಿವೆ. ದ್ರೋಣನು ಹೇಳಿಕೊಟ್ಟ ವಿದ್ಯೆಯಿಂದ ಸಂತುಷ್ಟನಾಗದೇ, ಧರ್ಮನು ಅರ್ಜುನನ್ನು ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದ್ದನು. ಅಶ್ವತ್ಥಾಮನಿಗೆ ಈ ರೀತಿ ಆಗಲಿಲ್ಲ. ಆಗಿನ ತರುಣರಿಗೆ, ಅರ್ಜುನ ವೀರತ್ವದ ಪ್ರತಿಮೆ ಆಗಿದ್ದ. ಇಂತಹ ಲೌಕಿಕವು ಅಶ್ವತ್ಥಾಮನಿಗೆ ಎಂದೂ ಪ್ರಾಪ್ತವಾಗಿರಲಿಲ್ಲ. ಕೌರವರ ಸಭೆಯಲ್ಲಿ ಅಶ್ವತ್ಥಾಮ ಸ್ವಲ್ಪ ಉದ್ದಾಮತನದಿಂದಲೇ ವರ್ತಿಸುತ್ತಿದ್ದನು. ಪಿತನು ಭೀಷ್ಮನ ಪಕ್ಷವನ್ನು ವಹಿಸಿ ಮಾತನಾಡುತ್ತಿದ್ದರೆ ಈತನು ದುರ್ಯೋಧನನ ಪಕ್ಷವನ್ನು ವಹಿಸುತ್ತಿದ್ದನು. ಅಶ್ವತ್ಥಾಮ ಒಬ್ಬ ಮಹಾವೀರನೆಂದು ದುರ್ಯೋಧನ ತಿಳಿದಿರಲಿಲ್ಲ. ಅವನ ಹೆಸರು ಸೇನಾಪತಿ ಪದಕ್ಕಾಗಿ ಯಾರಿಗೂ ತೋಚಿರಲಿಲ್ಲ. ತೋಚುವಂತೆಯೂ ಇರಲಿಲ್ಲ.

ಶಲ್ಯ ಶಕುನಿಯರ ಮರಣದ ನಂತರ ಪಾಂಡವರು ಕೌರವರನ್ನು ಸದೆಬಡಿಯಹತ್ತಿದರು. ಭಯದಿಂದ ದಿಕ್ಕಾಪಾಲಾಗಿ ಓಡುತ್ತಿರುವ ಸೇನೆಯನ್ನು ಹಿಂತಿರುಗಿಸುವುದು ಅಸಾಧ್ಯವಾಗಿ ದುರ್ಯೋಧನ ರಣದಿಂದ ಜಾರಿದ. ಆಗ “ನಾನು ಈ ಮಡುವಿನಲ್ಲಿ ಅವಿತುಕೊಂಡಿದ್ದೇನೆ. ಎಲ್ಲರೂ ಹತರಾದರು. ನಾನು ಮಾತ್ರ ಉಳಿದಿದ್ದೇನೆ” ಎಂದು ಧೃತರಾಷ್ಟ್ರನಿಗೆ ತಿಳಿಸಲು ಸಂಜಯನೊಡನೆ ಹೇಳಿ ಕಳುಹಿಸಿದ. ಆತನು ಅವಿತುಕೊಳ್ಳುವ ಸ್ಥಾನವನ್ನು ತಲುಪಿ ಮಡುವಿನಲ್ಲಿಯ ಪೊದರಿನಲ್ಲಿ ಸೇರಿಕೊಂಡು ಬಳಲಿದವನಾಗಿ, ಖಿನ್ನನಾಗಿ ಬಿದ್ದುಕೊಂಡನು. ಸಂಜಯನು ಹಸ್ತಿನಾಪುರಕ್ಕೆ ಹೋಗುತ್ತಿದ್ದ ದಾರಿಯಲ್ಲಿ ಕೃಪ, ಕೃತವರ್ಮ, ಅಶ್ವತ್ಥಾಮರು ಭೇಟಿಯಾದರು. ಅವರು ರಣರಂಗದಿಂದ ಓಡುತ್ತಾ ಸಾಗಿದ್ದರು. ದುರ್ಯೋಧನನ ಬಗ್ಗೆ ಅವರು ವಿಚಾರಿಸಿದರು. ಸಂಜಯ ಎಲ್ಲವನ್ನು ತಿಳಿಸಿದ. ಓಡುತ್ತಿದ್ದ ಕೌರವ ಸೇನೆಯನ್ನು ದುರ್ಲಕ್ಷಿಸಿ ಪಾಂಡವ ಪಾಂಚಾಲರು ದುರ್ಯೋಧನನನ್ನು ಕಂಡು ಆತನನ್ನು ಹಿಡಿದು ಕೊಲ್ಲುವ ನಿರ್ಧಾರದಿಂದ ಹೊರಟರು. ಎಲ್ಲೆಡೆಯಲ್ಲಿಯೂ ಶೋಧಿಸಿದರು. ದುರ್ಯೋಧನ ಕಾಣಲೇ ಇಲ್ಲ. ಅವರು ನಿರಾಶರಾಗಿ ಶಿಬಿರದತ್ತ ಮರಳಿದರು. “ಈಗ ಆತನು ಸಿಗದೇ ಇದ್ದರೂ ನಾಳೆಯಾದರೂ ಆತನನ್ನು ಕಂಡುಹಿಡಿಯಲೇಬೇಕು” ಎಂದು ಅವರು ಆಲೋಚಿಸಿದ್ದರು. ದುರ್ಯೋಧನನನ್ನು ವಧಿಸದೆ ಯುದ್ಧವು ಕೊನೆಯಾಯಿತೆಂದು ತಿಳಿಯಲು ಬರುವಂತಿರಲಿಲ್ಲ.

ಪಾಂಡವರ ರಥಗಳು ದುರ್ಯೋಧನನನ್ನು ಶೋಧಿಸುತ್ತಿದ್ದಾಗ ಅಶ್ವತ್ಥಾಮ ಮತ್ತು ಆತನ ಇಬ್ಬರು ಸಂಗಡಿಗರು ಅಡಗಿಕೊಂಡಿದ್ದರು. ಪಾಂಡವರು ಶಿಬಿರದತ್ತ ಮರಳಿದ ನಂತರ ಈ ಮೂವರು ಹೊರಗೆ ಬಂದು ದುರ್ಯೋಧನನು ಅಡಗಿಕೊಂಡ ಮಡುವಿನತ್ತ ನಡೆದರು. ಅಶ್ವತ್ಥಾಮನು ದುರ್ಯೋಧನನನ್ನು ಕೂಗಿದನು. ದುರ್ಯೋಧನನು ಮಡುವಿನ ಒಳಗಿನಿಂದಲೇ, ದಡದಲ್ಲಿದ್ದ ಈ ಮೂವರೊಡನೆ ಮಾತುಕತೆ ಮಾಡಿದನು. ಕೃಪ, ಕೃತವರ್ಮರು ಕೇವಲ ಶ್ರೋತೃಗಳಾಗಿದ್ದರು. ಅಶ್ವತ್ಥಾಮ ಮಾತ್ರ ದುರ್ಯೋಧನನಿಗೆ “ಹೊರಗೆ ಬಂದು

ಪಾಂಡವರೊಡನೆ ಯುದ್ಧಮಾಡು" ಎಂದು ಪದೇ ಪದೇ ಹೇಳುತ್ತಿದ್ದನು. ದುರ್ಯೋಧನನನಿಗೆ ಯುದ್ಧಮಾಡುವ ಆಸೆಯೇ ಉಳಿದಿರಲಿಲ್ಲ. "ಎರಡೂ ಪಕ್ಷದ ಬಹು ಸಂಖ್ಯಾತರು ನಾಶವಾಗಿದ್ದಾರೆ. ಕೆಲವರೇ ಉಳಿದಿರುವರು. ಯುದ್ಧ ಮಾಡುವುದು ಈಗ ಸುಲಭ. ಅದಲ್ಲದೇ ನಿನ್ನ ಬೆಂಬಲಿಗೆ ನಾವು ಇದ್ದೇವೆ" ಎಂದು ಅಶ್ವತ್ಥಾಮನು ಮೇಲಿಂದ ಮೇಲೆ ನುಡಿಯುತ್ತಿದ್ದನು. ಈ ಬಲವಂತಕ್ಕೆ ಬೇಸರಗೊಂಡ ದುರ್ಯೋಧನನು ಮಾತು ನಿಲ್ಲಿಸುವುದಕ್ಕಾಗಿ "ಈ ದಿನ ನಾನು ವಿಶ್ರಮಿಸುವೆನು, ಮಾಡಬೇಕಾದುದ್ದನ್ನು ನಾಳೆ ಯೋಚಿಸೋಣ !" ಎಂದು ಕೊನೆಯಾಗಿ ಹೇಳಿದನು.

ಯುದ್ಧದ ಕೊನೆಯ ದಿನದ ಈ ವೃತ್ತಾಂತವು ಬಹಳ ಮಹತ್ವ ಉಳ್ಳದ್ದು. ದುರ್ಯೋಧನನ ಈ ಕೃತಿಯಿಂದ ಆತನು ಬದುಕಿಕೊಳ್ಳುವ ಕೊನೆ ಪ್ರಯತ್ನವನ್ನು ಮಾಡುತ್ತಿದ್ದನೆಂದು ಕಂಡುಬರುತ್ತದೆ. ಆತನು, ಅತಿದೂರದಲ್ಲಿದ್ದ ಕಾಡಿನಲ್ಲಿ, ನೀರಿನೊಳಗೆ ಅಡಗಿಕೊಂಡಿದ್ದನು. ಸಂಜಯನೊಡನೆ ನಡೆದ ವೃತ್ತಾಂತವನ್ನು ತಂದೆಗೆ ಹೇಳಿ ಕಳುಹಿಸಿದ್ದನು. ಎಲ್ಲಾ ಸೈನ್ಯವು ಚೆಲ್ಲಾಪಿಲ್ಲಿಯಾಗಿತ್ತು. ಧೃತರಾಷ್ಟ್ರನು ಪಾಂಡವರಿಗೆ, ಅದರಲ್ಲಿಯೂ ಧರ್ಮನಿಗೆ ಕರೆ ಕಳುಹಿಸಿ "ಧರ್ಮನೇ ! ರಾಜ್ಯವನ್ನು ತೆಗೆದುಕೊ ! ! ಉಳಿದೊಬ್ಬ ಮಗನಾದ ದುರ್ಯೋಧನನಿಗೆ ಜೀವದಾನ ಕೊಡು" ಎಂದು ಹೇಳಿದ್ದರೆ, ಧರ್ಮನು ಅದನ್ನು ಮನ್ನಿಸಲೇಬೇಕಾಗಿತ್ತು. ಅಷ್ಟಲ್ಲದೇ ರಾಜ್ಯದ ಒಂದು ಪಾಲನ್ನು ಕೊಡಬೇಕಾಗುತ್ತಿತ್ತು. ಆದರೆ ಈ ಪಿತಾಪುತ್ರರು ಬದುಕಿರುವವರೆಗೂ ಪಾಂಡವರು ನಿರಾತಂಕವಾಗಿ ರಾಜ್ಯವನ್ನು ಆಳುವಂತಿರಲಿಲ್ಲ. ದುರ್ಯೋಧನನಿಗೆ ತುಸು ಸಮಯವನ್ನು ಕಳೆಯಬೇಕಾಗಿತ್ತು. ಧೃತರಾಷ್ಟ್ರನು ಕರೆ ಕಳುಹಿಸುವ ಮುಂಚಿತವಾಗಿ ದುರ್ಯೋಧನನ ಶೋಧ ನಡೆಸಿ ಆತನನ್ನು ಕೊಂದುಹಾಕುವ ವಿಚಾರವು ಪಾಂಡವರದಾಗಿತ್ತು.

ಅಶ್ವತ್ಥಾಮನು ದುರ್ಯೋಧನನೊಡನೆ ಗಟ್ಟಿಯಾಗಿ ಮಾತನಾಡುತ್ತಿರುವಾಗಲೇ ಕೆಲವು ಬೇಟೆಗಾರರು ಅಲ್ಲಿಗೆ ಬಂದರು. ಈ ಬೇಟೆಗಾರರು ಭೀಮನಿಗೆ ಬೇಕಾಗಿದ್ದವರು. ಭೀಮನಿಗೆ ಮಾಂಸ ಕಂಡರೆ ಇಷ್ಟ. ಆತನು ಅದಕ್ಕೆ ಬದಲಾಗಿ ಬಹಳ ಹಣವನ್ನು ಅವರಿಗೆ ಕೊಡುತ್ತಿದ್ದನು. ಅದಕ್ಕಾಗಿ ಆ ಬೇಟೆಗಾರರು ಬೇಟೆಯಾಡಿದ್ದನ್ನು ಪಾಂಡವರ ಶಿಬಿರಕ್ಕೆ ತಲುಪಿಸುತ್ತಿದ್ದರು. ತುಸುಕಾಲ ಮುಂಚೆಯೇ ದುರ್ಯೋಧನನನ್ನು ಶೋಧಿಸಿ ಆತನು ಸಿಗದೇ ಇದ್ದ ಕಾರಣ ರಥದಲ್ಲಿಂದ ಮರಳಿದ ಪಾಂಡವ ಪಾಂಚಾಲರನ್ನು ಈ ಬೇಟೆಗಾರರು ನೋಡಿದ್ದರು. "ಈ ದುರ್ಯೋಧನನು ಎಲ್ಲಿ ಅಡಗಿಕೊಂಡಿರಬೇಕು?" ಎಂಬ ಅವರ ಪರಸ್ಪರ ಸಂಭಾಷಣೆಯನ್ನು ಕೇಳಿದ್ದರು. ಮಡುವಿನ ದಡದಲ್ಲಿ ಗಟ್ಟಿಯಾಗಿ ನಡೆದ ಸಂಭಾಷಣೆಯನ್ನು ಕೇಳಿ, ದುರ್ಯೋಧನನು ಅಲ್ಲಿಯೇ ಅಡಗಿರಬೇಕೆಂದು, ಅವರಿಗೆ ನಿಶ್ಚಿತವಾಯಿತು. "ಭಲೇ ! ಬೇಟೆಯ ಮಾಂಸದ ಬೆಲೆಗಿಂತ ಎಷ್ಟೋ ಅಧಿಕವಾಗಿ ಹಣವನ್ನು ಭೀಮನು ನಮಗೆ ಕೊಡಬಹುದು ನಡೆಯಿರಿ, ಈ ಸುದ್ದಿಯನ್ನು ಆತನಿಗೆ ತಿಳಿಸೋಣ" ಎಂದು ನುಡಿದು ಆ ಬೇಟೆಗಾರರು ಧಾವಿಸಿ, ದುರ್ಯೋಧನನು ಅಡಗಿಕೊಂಡ ಸ್ಥಳವನ್ನು ಪಾಂಡವರಿಗೆ

ವಿವರಿಸಿದರು. ಪಾಂಡವರೆಲ್ಲರು ಮರಳಿ ರಥದಲ್ಲಿಂದ ಜಯಘೋಷ ಮಾಡುತ್ತಾ ಮಡುವಿನತ್ತ ಬಂದರು. ಪಾಂಡವರ ಜಯಭೇರಿ ದುಂದುಭಿಗಳನ್ನು, ಅವರ ರಥಗಳ ಶಬ್ದವನ್ನು ಕೇಳಿ ದುರ್ಯೋಧನನು ನೀರಿನೊಳಗೆ ಅಡಗಿಕೊಂಡನು. ಈ ಮೂವರು ವೀರರು ಪ್ರಾಣಭಯದಿಂದ ದೂರ ಕಾಡಿನತ್ತ ಓಡಿದರು.

ಸ್ವಲ್ಪ ಸಮಯದ ಮೊದಲು ಪಾಂಡವರನ್ನು ಕೊಂದುಹಾಕುವ ಜಂಭವನ್ನು ಹೇಳಿಕೊಳ್ಳುವ ಅಶ್ವತ್ಥಾಮ ಕೇವಲ ಅವರ ರಥದ ಶಬ್ದವನ್ನು ಕೇಳಿದೊಡನೆ ಪಲಾಯನ ಮಾಡಿದನು. ಪಿತನ ಮರಣದ ನಂತರ ಆತ ಸೇಡನ್ನು ತೀರಿಸಿಕೊಳ್ಳುವ ಮಾತುಗಳನ್ನೇ ಆಡುತ್ತಿದ್ದ. ಕ್ರೋಧದಿಂದ ಉರಿಯುತ್ತಿದ್ದ. ದ್ರೋಣ ಹತನಾದ ನಂತರ ಮೂರು ದಿನಗಳವರೆಗೆ ಕಾಳಗವು ನಡೆದೇ ಇತ್ತು. ಆದರೆ ದೃಷ್ಟದ್ಯುಮ್ನನನ್ನು ಸಾಯಿಸಲು ಆತನಿಂದ ಆಗಲಿಲ್ಲ. ದೃಷ್ಟದ್ಯುಮ್ನನ ಎದುರು ಕಾಳಗದಲ್ಲಿ ಅಶ್ವತ್ಥಾಮ ತಡೆಯುವಂತಿರಲಿಲ್ಲವೆಂಬುದು ನಿಶ್ಚಿತವಿತ್ತು. ಯಾವ ದುರ್ಯೋಧನನ ಬಗ್ಗೆ ಆತನು ಇಷ್ಟೊಂದು ಆತ್ಮೀಯತೆಯನ್ನು ತೋರಿಸುತ್ತಿದ್ದನೋ ಆತನ ನಾಶಕ್ಕೆ ಅಶ್ವತ್ಥಾಮನೆ ಕಾರಣನಾದನು, ತನ್ನ ದುಡುಕಿನ, ಅವಿವೇಕಿ ಆತುರತೆಯಿಂದ ವಾರ್ತೆಯು ಸಂಜಯನಿಂದ ತಿಳಿದ ಕೂಡಲೇ ಆತನು ದುರ್ಯೋಧನನತ್ತ ಬಂದನು. ಹೊತ್ತು ಸಮಯವನ್ನು ಆಲೋಚಿಸದೇ ನಡು ಹಗಲಿನಲ್ಲಿ ಗಟ್ಟಿಯಾಗಿ ಮಾತನಾಡಿ ದುರ್ಯೋಧನನು ಅವಿತುಕೊಂಡ ಸ್ಥಳವನ್ನು ಆತನೇ ಪಾಂಡವರಿಗೆ ಗೊತ್ತುಮಾಡಿಕೊಟ್ಟನು. ಪಾಂಡವರು ಅಲ್ಲಿ ಬಂದಾಗ ದುರ್ಯೋಧನನ ಬೆಂಬಲಕ್ಕೆ ಕೊನೆಯವರೆಗೂ ನಿಂತು, ಯುದ್ಧ ಮಾಡುವುದನ್ನು ಬಿಟ್ಟು ಅಶ್ವತ್ಥಾಮ ಹೇಡಿಯಂತೆ ಓಡಿಹೋದನು.

ಇಷ್ಟವಿಲ್ಲದಿದ್ದರೂ ದುರ್ಯೋಧನ ಮಡುವಿನ ಹೊರಗೆ ಬರಬೇಕಾಯಿತು. ತಿವಿದು ತಿವಿದು ಸರ್ಪವನ್ನು ಬಿಲದ ಹೊರಗೆ ಬರಮಾಡುವಂತೆ ಪಾಂಡವರು ಚುಚ್ಚಿ ಮಾತಾಡಿ ದುರ್ಯೋಧನನನ್ನು ಹೊರಗೆ ಎಳೆದರು. ಆನಂತರದ ಗದಾಯುದ್ಧದಲ್ಲಿ ತೊಡೆಯ ಮೇಲೆ ಹೊಡೆದು ಭೀಮನು ಆತನನ್ನು ಭೂಮಿಗೆ ಉರುಳಿಸಿದನು. ಕಾಲಿನಿಂದ ಅವನ ತಲೆಗೆ ಒದ್ದನು. ಧರ್ಮ ನಡುವೆ ಬಂದು ಹೆಚ್ಚಿನ ವಿಡಂಬನೆಯನ್ನು ತಡೆದ. ದುರ್ಯೋಧನನನ್ನು ಹೊಡೆದ ನಂತರ ಧರ್ಮರಾಜ ಕೃಷ್ಣನಿಗೆ ಧೃತರಾಷ್ಟ್ರನ ಬಳಿ ಹೋಗಿ ಹೀಗೆಂದು ತಿಳಿಸಲು ಹೇಳಿದನು: “ಧೃತರಾಷ್ಟ್ರನಿಗೆ ಮತ್ತು ಗಾಂಧಾರಿಗೆ ಸಂತೈಸು. ಕೋಪಗೊಳ್ಳಬೇಡಿರಿ ! ನಾವೂ ನಿಮ್ಮವರೇ ಆಗಿದ್ದೇವೆ.” ಕೃಷ್ಣನು ಹಸ್ತಿನಾಪುರಕ್ಕೆ ಹೋಗಿ ಇದನ್ನು ಹೇಳುತ್ತಿದ್ದಂತೆ ಕೆಲವು ದೂತರು ಅಲ್ಲಿಗೆ ಬಂದರು. ಅವರ ಮಾತಿನಿಂದ ಏನೋ ಮೋಸವಿರಬೇಕೆಂಬ ಸಂದೇಹವು ಕೃಷ್ಣನಿಗೆ ಉಂಟಾಗಿ ಹೇಳುತ್ತಿದ್ದುದನ್ನು ಅರ್ಧಕ್ಕೆ ನಿಲ್ಲಿಸಿ ಆತನು ಆತುರದಿಂದ ಮರಳಿದನು. ಪಾಂಡವರನ್ನು, ದ್ರೌಪದಿಯನ್ನು, ಮತ್ತು ಸಾತ್ಯಕಿಯನ್ನು ಕರೆದುಕೊಂಡು ಪಾಂಡವರ ಜನಸಂದಣಿಯ ಬಿಡಾರವನ್ನು ಬಿಟ್ಟು ಕೌರವರ ಹಾಳುಬಿದ್ದ ಬಿಡಾರಕ್ಕೆ ಕರೆದೊಯ್ದನು. ಇಷ್ಟು ಜರುಗುವುದರಲ್ಲಿ ಸಂಜೆಯಾಯಿತು.

"ಘಾತವಾಗುವದಿದೆ" ಎಂದು ತಿಳಿದುಬಂದಿದ್ದರೂ ಯಾವ ರೀತಿಯಿಂದ ಎಂಬುದು ಕೃಷ್ಣನಿಗೆ ತಿಳಿದಿರಲಿಲ್ಲ. ಈ ಘಾತವು ಅಶ್ವತ್ಥಾಮನಿಂದ ಆಗುವುದಿತ್ತು. ದುರ್ಯೋಧನನನ್ನು ಬಿಟ್ಟು ಓಡಿಹೋದ ಈ ವೀರರು ಸುಳಿವನ್ನು ಕಂಡುಹಿಡಿಯಲು ಹವಣಿಸುತ್ತಿದ್ದರು. ಪಾಂಡವ ಪಾಂಚಾಲರು ಹೊರಟು ಹೋಗಿದ್ದನ್ನು ಮತ್ತು ಅವರ ಶಿಬಿರದಲ್ಲಿ ನಡೆದ ಜಯಘೋಷವನ್ನು ಕೇಳಿ ಈ ಮೂವರು ದುರ್ಯೋಧನನಿದ್ದ ಸ್ಥಳಕ್ಕೆ ಮರಳಿದರು. ಮಡುವಿನ ಹತ್ತಿರ ಧೂಳಿನಲ್ಲಿ ದುರ್ಯೋಧನನು ಮರಣಪ್ರಾಯವಾಗಿ ಬಿದ್ದಿದ್ದನು. ಇಂತಹ ದೊಡ್ಡ ಐಶ್ವರ್ಯಸಂಪನ್ನ ರಾಜನು ಈ ರೀತಿ ಧೂಳಿಯಲ್ಲಿ ಬಿದ್ದು ಕೊಂಡಿದ್ದನು! ಭೀಮನು ಆತನನ್ನು ಕಪಟದಿಂದ ಹೊಡೆದನು, ಎಂದು ಕೇಳಿ ಮೂವರು ಬಹಳ ವ್ಯಸನಪಟ್ಟರು ಅಶ್ವತ್ಥಾಮನು "ನಾನು ಈತನ ಮತ್ತು ನನ್ನ ತಂದೆಯ ಮರಣದ ಸೇಡನ್ನು ತೀರಿಸುವೆನು" ಎಂಬ ಪ್ರತಿಜ್ಞೆಯನ್ನು ಮಾಡಿದನು. ಅಂತಹ ಅವಸ್ಥೆಯಲ್ಲಿಯೇ ರಾಜನಿಂದ ಸೇನಾಪತಿ ಪದಾಭಿಷೇಕವನ್ನು ಮಾಡಿಸಿಕೊಂಡನು. ಈ ಮೊದಲಿನ ಇತರ ಸೇನಾಪತಿಯರು ಯಾವ ಮಾನ ಸನ್ಮಾನದಿಂದ ಸೇನಾಪತಿ ಪದವನ್ನು ಪಡೆದರೋ ಅದನ್ನು ಗಮನಿಸಿದಲ್ಲಿ ಈ ಕೊನೆಯ ಪ್ರಸಂಗವು ತಿರಸ್ಕರಣೀಯವೆನಿಸುತ್ತದೆ. ಅಶ್ವತ್ಥಾಮನ ಒತ್ತಾಯದ ಬೇಡಿಕೆಯಿಂದ ಆ ಹಿಂಸೆಯನ್ನು ತಾಳಲಾರದೆ ರಾಜನು ಈ ಅಭಿಷೇಕವನ್ನು ಮಾಡಿಸಿದನೆಂದು ಕಂಡುಬರುತ್ತದೆ. ಕೌರವರ ಸೇನೆ ಇಲ್ಲದ ಈ ಸೇನಾನಿಯು ಅಭಿಷಿಕ್ತನಾದ ನಂತರ ರಾಜನನ್ನು ಅಲ್ಲಿಯೇ ತ್ಯಜಿಸಿ ಹೊರಟುಹೋದನು. ಪಾಂಡವರ ಸೇನೆಯ ಕೈಗೆ ಸಿಕ್ಕಬಾರದೆಂದು ದೂರ ಕಾಡಿನಲ್ಲಿ ಅಶ್ವತ್ಥಾಮ, ಕೃಪ, ಕೃತವರ್ಮ, ಇವರು ಹೋಗಿ ವಿಶ್ರಮಿಸಿದರು. ಕೃಪ ಕೃತವರ್ಮರು ನಿದ್ದೆ ಹೋದರು. ಆದರೆ ಅಶ್ವತ್ಥಾಮನಿಗೆ ನಿದ್ರೆ ಬಾರದು. ದ್ರೋಣನ ಮರಣದಿಂದ ಆತನು ಪಿತೃಹೀನನಾದುದಲ್ಲದೆ ರಾಜ್ಯಹೀನನೂ ಆಗಿದ್ದನು. ದುರ್ಯೋಧನನಿಗಾದ ದುಃಖದಿಂದ ವ್ಯಥಿತನಾಗಿದ್ದನು. ಅಲ್ಲದೇ ತನ್ನ ಸ್ವತಃ ದುಃಖಹಾನಿಗಳಿಂದ ಕುದಿಯುತ್ತಿದ್ದನು. ಇಂತಹ ವೇಳೆಯಲ್ಲಿ ಅಶ್ವತ್ಥಾಮ ಒಂದು ದೃಶ್ಯವನ್ನು ಕಂಡನು. ಈ ಕಗ್ಗಿರುಳಿನಲ್ಲಿ ಒಂದು ಗೂಬೆಯು ನಿದ್ರಿಸುತ್ತಿದ್ದ ಕಾಗೆಗಳ ಮೇಲೆ ಒಮ್ಮೆಲೇ ಸಾಗರ ಬಿದ್ದು ಅವುಗಳ ನಾಶಮಾಡಿತು. ಇದನ್ನು ಕಂಡ ಅಶ್ವತ್ಥಾಮನಿಗೆ ರಾತ್ರಿಯಲ್ಲಿ ಪಾಂಡವರು ಮೈಮರೆತಿದ್ದಾಗ ಅವರ ಮೇಲೆ ಏರಿ ಹೋಗಬೇಕೆಂದು ಹೊಳೆಯಿತು. ಆತನು, ಕೃಪ, ಕೃತವರ್ಮನನ್ನು ಎಚ್ಚರಿಸಿ ಈ ಯೋಜನೆಯನ್ನು ತಿಳಿಸಿದನು. "ಈ ಹೀನ ಕೆಲಸವನ್ನು ಮಾಡಬೇಡ"ವೆಂದು ಕೃಪನು ಪರಿಪರಿಯಾಗಿ ಹೇಳಿದನು. ಈ ಸಂದರ್ಭದಲ್ಲಿ ಅಶ್ವತ್ಥಾಮನ ಒಂದು ಮಾತು ಗಮನಿಸುವಂತಿದೆ. ಆತನು ತನ್ನ ಮಾವನಿಗೆ (ಕೃಪನಿಗೆ) ಹೇಳುತ್ತಾನೆ– "ನನಗೆ" ಬ್ರಾಹ್ಮಣರಂತೆ ವರ್ತಿಸಲು ನೀವು ಹೇಳುತ್ತಿದ್ದರೂ, ನಾನು ಅದನ್ನು ಅರಿತುಕೊಂಡೇ ಇಲ್ಲ. ಬಾಲ್ಯದಿಂದ ಅಸ್ತ್ರವಿದ್ಯೆಯಲ್ಲಿಯೇ ನನ್ನ ಇಡೀ ಜನ್ಮವು ಕಳೆಯಿತು. ಶ್ರೇಷ್ಠವಾದ ಬ್ರಾಹ್ಮಣ ಕುಲದಲ್ಲಿ ನಾನು ಹುಟ್ಟಿ ಮಂದಭಾಗ್ಯವುಳ್ಳ ನಾನು ಕ್ಷಾತ್ರಧರ್ಮದಲ್ಲಿ ಬೆಳೆದೆ. ಈಗ ನಾನು ಅದನ್ನೇ ಆಚರಿಸುವೆನು." ಕೃಪನ ಮಾತನ್ನು ಕೇಳಿಕೊಳ್ಳದೆ ಕುದುರೆಗಳನ್ನು ರಥಕ್ಕೆ ಜೋಡಿಸಿ ಒಬ್ಬನೇ

ರಥದಲ್ಲಿಂದ ಪಾಂಡವರ ಶಿಬಿರದತ್ತ ಧಾವಿಸಿದನು. ಅಶ್ವತ್ಥಾಮನು ಏನು ಮಾಡಲು ಉದ್ಯುಕ್ತನಾಗಿರುವನೋ ಎಂಬ ಭಯದಿಂದ ಕೃಪನು ಕೃತವರ್ಮನೊಡನೆ ಆತನ ಹಿಂದೆ ಧಾವಿಸಿದನು. ಅಶ್ವತ್ಥಾಮನು ಶಿಬಿರದಲ್ಲಿ ನುಗ್ಗಿದ್ದನ್ನು ಕಂಡು ಅವರು ಹೊರಗೆ ನಿಂತರು. ಅಶ್ವತ್ಥಾಮನು ಒಳಗೆ ನುಗ್ಗಿ ನಿದ್ರಿಸುತ್ತಿದ್ದ ದೃಷ್ಟದ್ಯುಮ್ನನನ್ನು ಕೊಂದನು. ನಂತರ ದ್ರೌಪದಿಯ ಐದು ಪುತ್ರರನ್ನು ಕೊಂದನು. ರಾತ್ರಿಯ ವೇಳೆಯಲ್ಲಿ ಬಂದವರು ಎಷ್ಟು ಜನರು? ಯಾರು ಹಲ್ಲೆ ಮಾಡುತ್ತಿರುವರು? ಎಂಬುದು ತಿಳಿಯಲಾಗದೇ ಜನರು ದಿಕ್ಕೆಟ್ಟು ಓಡುತ್ತಿದ್ದಾಗ ಕೃಪ, ಕೃತವರ್ಮರು ಆ ಶಿಬಿರಕ್ಕೆ ಬೆಂಕಿ ಇಟ್ಟರು. ಇದರಿಂದ ಇನ್ನಷ್ಟು ಗೊಂದಲವಾಯಿತು.

ಸಾಧ್ಯವಾದಷ್ಟು ಜನರನ್ನು ಕೊಂದುಹಾಕಿ ಅಶ್ವತ್ಥಾಮನು ಹೊರಗೆ ಬಂದನು. ನಡೆದಿದ್ದೆಲ್ಲವನ್ನು ದುರ್ಯೋಧನನಿಗೆ ತಿಳಿಸಿ ಆತನಿಂದ ‘ಭಲೇ’ ಎನ್ನಿಸಿಕೊಂಡನು. ನಡೆದ ಕೃತ್ಯದ ಸೇಡನ್ನು ತೀರಿಸಿಕೊಳ್ಳಲು ಪಾಂಡವರು ಮತ್ತು ಕೃಷ್ಣನು ಅಟ್ಟಿಸಿಕೊಂಡು ಬರಬಹುದೆಂದು ತಿಳಿದು ಆತನು ಅಲ್ಲಿಂದ ಧಾವಿಸಿ ಗಂಗಾ ತೀರದಲ್ಲಿದ್ದ ವ್ಯಾಸರ ಮುಂದೆ ಬಂದು ನಿಂತನು. ಪಾಂಡವರು ಅವನ ಬೆನ್ನು ಹಿಂದಿನಿಂದಲೇ ಬಂದರು. ಅಶ್ವತ್ಥಾಮನು ಅರ್ಜುನನನ್ನು ಕೊಲ್ಲುವುದಕ್ಕಾಗಿ ಅಮೋಘವಾದ ಒಂದು ಅಸ್ತ್ರವನ್ನು ಎಸೆದನು. ಅರ್ಜುನನು ಅದಕ್ಕೆ ಪ್ರತಿಯಾದ ಅಸ್ತ್ರವನ್ನು ಎಸೆದನು. ಎರಡು ಅಸ್ತ್ರಗಳು ಒಂದಕ್ಕೊಂದು ತಗುಲಿಕೊಂಡವು. ಜಗತ್ತೇ ನಾಶಹೊಂದಿ ಹೋಗಬಹುದೆಂದು ಅರಿತು ವ್ಯಾಸನು ಮಧ್ಯೆ ಬಂದು ಅರ್ಜುನನಿಗೆ ತನ್ನ ಅಸ್ತ್ರವನ್ನು ಹಿಂದೆ ತೆಗೆದುಕೊಳ್ಳಲು ಬಿನ್ನವಿಸಿದನು. ಅರ್ಜುನನು ತನ್ನ ಅಸ್ತ್ರವನ್ನು ಹಿಂದೆ ತೆಗೆದುಕೊಂಡನು. ಆದರೆ ಅಶ್ವತ್ಥಾಮನಿಗೆ ತನ್ನ ಅಸ್ತ್ರವನ್ನು ಹಿಂದೆ ತೆಗೆದುಕೊಳ್ಳುವುದು ಸಾಧ್ಯವಾಗಲಿಲ್ಲ. ಆ ಅಸ್ತ್ರದಿಂದ ಪಾಂಡವರು ನಾಶವಾಗಲಿಲ್ಲ. ಆದರೆ ಆ ಅಸ್ತ್ರವು ಉತ್ತರೆಯ ಗರ್ಭಕ್ಕೆ ತಗುಲಿತು ಎಂಬ ವೃತ್ತಾಂತವಿದೆ. ಪಾಂಡವರು ಅಶ್ವತ್ಥಾಮನನ್ನು ಸಜೀವವಾಗಿ ಬಿಟ್ಟುಕೊಟ್ಟರು. “ನಾನು ಉತ್ತರೆಯ ಮಗುವನ್ನು ಬದುಕಿಸುವೆನು” ಎಂದು ನುಡಿದು ಕೃಷ್ಣನು, ಅಶ್ವತ್ಥಾಮನಿಗೆ ಈ ರೀತಿಯ ಶಾಪ ಕೊಟ್ಟನು: “ಸಾವಿರಾರು ವರ್ಷದ ವರೆಗೆ ನೀನು ಜೀವಿಸುವೆ. ಪೃಥ್ವಿಯ ಮೇಲೆಯೂ, ಕಾಡಿನಲ್ಲಿಯೂ, ಮರುಭೂಮಿಯಲ್ಲಿಯೂ ಅಲೆಯುವೆ. ಯಾವ ಮಾನವನೂ ನಿನಗೆ ಆಶ್ರಯ ಕೊಡಲಾರನು.” ಈ ಶಾಪವು ಮಹಾಭಯಂಕರವಾಗಿತ್ತು. ಇತರ ಸೇನಾಧಿಪತಿಗಳು ವೀರ ಮರಣವನ್ನು ಹೊಂದಿದ್ದರು. ಅಶ್ವತ್ಥಾಮನು ಮರಣಕ್ಕಿಂತ ದುಸ್ತರವಾದ ಜೀವನವನ್ನು ಕಳೆದನು.

ನಮ್ಮಲ್ಲಿಯ ತತ್ತ್ವಜ್ಞಾನದಲ್ಲಿ ಸ್ಮೃತಿ ಮತ್ತು ಮೋಹ ಇವುಗಳಿಗೆ ಒಂದು ವಿಶೇಷವಾದ ಅರ್ಥ, ಮಹತ್ವ ಉಂಟು. ಮಾನವನ ಪತನ ಯಾವ ಕ್ರಮದಲ್ಲಿ ಆಗುವುದು ಎಂಬುದರ ಕಾರ್ಯ ಕಾರಣ ವಿಚಾರವನ್ನು ಗೀತೆಯಲ್ಲಿ ಮಾಡಿದ್ದು ಎಲ್ಲರಿಗೂ ಪರಿಚಿತವಿದೆ.

ಕ್ರೋಧಾದ್ಭವತಿ ಸಂಮೋಹಃ
ಸಂಮೋಹಾತ್ ಸ್ಮೃತಿ ವಿಭ್ರಮಃ

ಸ್ಮೃತಿ ಭ್ರಂಶಾದ್ ಬುದ್ಧಿನಾಶೋ
ಬುದ್ಧಿನಾಶಾತ್ ಪ್ರಣಶ್ಯತಿ ॥

ಉಪನಿಷತ್ತುಗಳಲ್ಲಿಯೂ ಮನುಷ್ಯನ ಸ್ಮೃತಿಯನ್ನೆ ಒತ್ತಿ ಹೇಳಲಾಗಿದೆ.

ಕ್ರತೋಸ್ಮರ ಕೃತಂ ಸ್ಮರ ! ಈಶಾವಾಸ್ಯ: ೨೭

ಬುದ್ಧ ವಾಙ್ಮಯದಲ್ಲಿಯೂ ಸ್ಮೃತಿಯನ್ನೇ ಸಾರಿ ಹೇಳಿದ್ದಾರೆ. ಬಾಲ್ಯದಿಂದ ಮರಣಪರ್ಯಂತ ನಿತ್ಯವು ಪರಿವರ್ತನೆ ಹೊಂದುತ್ತಿರುವ ಜೀವನಕ್ಕೆ ಸ್ಮೃತಿಯೇ ಏಕಮೇವ ಆಧಾರ. 'ನಾನು ಯಾರು?; ಎಂಬ ಚಿರಸ್ಮರಣೆಯು ಅಂತೆಯೇ 'ಆತನೇ ನಾನು' ; 'ಆತನೇ ನಾನು' ಎಂಬುದನ್ನು ಅರಿಯುವ ಶಕ್ತಿಯೇ ಸ್ಮೃತಿ. 'ನಾನು ಯಾರು?'; ನನ್ನ ಕರ್ತವ್ಯಗಳು ಯಾವುವು?: ನಾನು ಎತ್ತ ಸಾಗುತ್ತಿದ್ದೇನೆ? ಈ ಅರಿವು ಉಳಿಯುವುದು ಸ್ಮೃತಿಯಿಂದಲೇ. 'ನಾನು ಯಾರು ?' ಎಂಬುದರ ಉತ್ತರವು ಮಹಾಭಾರತದ ದೃಷ್ಟಿಯಿಂದ, 'ಜೀವನದಲ್ಲಿ ನನ್ನ ಸ್ಥಾನವು ಯಾವುದು?' ಎಂಬುದಕ್ಕೆ ನಿಗದಿತವಿದೆ. ಕರ್ತವ್ಯಗಳು ಆ ಸ್ಥಾನವನ್ನು ಅವಲಂಬಿಸಿವೆ. ಜನ್ಮವೆತ್ತುವ ಮನುಷ್ಯ ಪೂರ್ವ ಜನ್ಮದ ಕುರುಹುಗಳನ್ನು ಇಟ್ಟುಕೊಂಡು ಬರುತ್ತಾನೆ. ಆದರೆ ಆತನಿಗೆ ಆ ಕುರುಹುಗಳ ಸ್ಮೃತಿಯು ಇರುವುದಿಲ್ಲ. ಕೃಷ್ಣನಂತಹ ಅಸಾಮಾನ್ಯರು ಮಾತ್ರ ಆ ಸ್ಥಿತಿಯನ್ನು ಪಡೆದಿರುತ್ತಾರೆ. [**ಬಹೂನಿ ಮೇ ವ್ಯತೀತಾನಿ ಜನ್ಮಾನಿ। ಭಗವದ್ಗೀತಾ**] ಅವರು ಹುಟ್ಟು ಸ್ಮೃತಿ ಪಡೆದವರು [**ಜಾತಿಸ್ಮರ**].

ಆದರೆ ಇತರರು ಕನಿಷ್ಠಪಕ್ಷಕ್ಕೆ ಪಡೆದ ಒಂದು ಜನ್ಮದಲ್ಲಿ ಆದರೂ ಸ್ಮೃತಿಯನ್ನು ಸತತವಾಗಿ ರಕ್ಷಿಸಲು ಹವಣಿಸಬೇಕು. ಮರಣದ ಕೊನೆಯ ಕ್ಷಣದವರೆಗೆ ಪೂರ್ಣ ಪ್ರಜ್ಞೆಯಲ್ಲಿ ಇರಬೇಕೆಂಬ ಆಸೆಯು ಪೂರ್ವದಲ್ಲಿ ಕಾಣುತ್ತಿತ್ತು. ಈ ಆಸೆಯು ಸಹ ಮೇಲೆ ಹೇಳಿದ ನಿಷ್ಠೆಯ ಮೇಲೆ ಆಧರಿಸಿತ್ತು. ಉತ್ತರಾಯಣದಲ್ಲಿ. ಶುಕ್ಲಪಕ್ಷದಲ್ಲಿ, ಹಗಲಿನಲ್ಲಿ ಪೂರ್ಣಪ್ರಜ್ಞೆ ಇರುವಾಗಲೇ ಮರಣ ಹೊಂದುವುದು ಉತ್ತಮವೆಂದು ಗೀತೆಯಲ್ಲಿ ಹೇಳಿದ್ದು ಈ ಕಾರಣದಿಂದಲೇ. ಸ್ಮೃತಿಯನ್ನು ಕಳೆದುಕೊಳ್ಳಬಾರದೆಂಬ ಉತ್ಕಟ ಆಸೆ ಇತ್ತು. ಭೀಷ್ಮ ಎಂದಿಗೂ ಸ್ಮೃತಿಭ್ರಷ್ಟನಾಗಲಿಲ್ಲ. ಅರ್ಜುನನಿಗೆ ಸಂಮೋಹವಾಗಿತ್ತು. ಆದರೆ ಕೃಷ್ಣನು ಆತನನ್ನು ಮೋಹದಿಂದ ಎಚ್ಚರಿಸಿದನು. ಅರ್ಜುನನು ಸ್ವಕರ್ತವ್ಯದ ಕಠೋರ ಸ್ಮೃತಿಯಿಂದ ಎಚ್ಚೆತ್ತು :? **'ನಷ್ಟೋ ಮೋಹಃ ಸ್ಮೃತಿರ್ಲಬ್ಧಾ'** ಎನ್ನುತ್ತಾನೆ.

ಈ ಪ್ರಕಾರದ ಸ್ವಧರ್ಮದ ಪ್ರಖರ ಅರಿವು ದ್ರೋಣನಿಗೆ ಇರಲಿಲ್ಲ. ಅಶ್ವತ್ಥಾಮನಿಗಂತೂ ಸ್ವಧರ್ಮದ ಸಂಪೂರ್ಣ ಮರೆವು ಆಗಿತ್ತೆಂದು ಹೇಳಬಹುದು. ಸ್ವಧರ್ಮವನ್ನು ಬಿಟ್ಟಿದ್ದಾಯಿತು. ಪರಧರ್ಮವು ಸಾಧಿಸಲಿಲ್ಲ! ಈ ಗತಿಯು ಅಶ್ವತ್ಥಾಮನದಾಯಿತು. ಆತ ಬ್ರಾಹ್ಮಣನಾಗಿ ಜನ್ಮ ತಾಳಿದ್ದ. ತಂದೆ ಸಂಪಾದಿಸಿದ ರಾಜ್ಯದಿಂದ ಆತನು ಮಾಂಡಲೀಕ ರಾಜನಾದರೂ ಆಗಬಹುದಿತ್ತು. ಆತ ಶಸ್ತ್ರವಿದ್ಯೆಯನ್ನು ಕಲಿತ. ಭಯಂಕರವಾದ ಶಸ್ತ್ರಗಳನ್ನು ಪ್ರಯೋಗಿಸಿದ. ಆದರೆ ಅವುಗಳನ್ನು ದುರ್ಯೋಧನನ ಜಯಕ್ಕಾಗಿ ಅಲ್ಲದೇ ಸರ್ವನಾಶವಾದ ನಂತರ ಸೇಡನ್ನು ತೀರಿಸಲು ಆತ್ಮರಕ್ಷಣೆ ಮಾಡಿಕೊಳ್ಳಲು, ಬಳಸಿದ. ಬ್ರಾಹ್ಮಣ್ಯವನ್ನು ಮೊದಲೇ

ಕಳೆದುಕೊಂಡಿದ್ದ. ಕ್ಷತ್ರಿಯತ್ವವು ಆತನಿಗೆ ಎಂದಿಗೂ ಸಾಧ್ಯವಾಗಲಿಲ್ಲ. ಮರಣಕ್ಕಿಂತಲೂ ದುಸ್ಸಹವಾದ ಚಿರ ಜೀವನವನ್ನು ಆತ ಅನುಭವಿಸಬೇಕಾಯಿತು. ಆತ್ಮವಿಸ್ಮೃತಿಯ ಇಂತಹ ಅವಿಸ್ಮರಣೀಯ ಉದಾಹರಣೆ ಬೇರೆ ಇನ್ನೊಂದಿಲ್ಲ.

೮

ನಾನು ಯಾರು ?

ಮಾನವನು ಯಾವುದೇ ಒಂದು ಸಾಧ್ಯದ ಹವ್ಯಾಸವನ್ನು ಇಟ್ಟುಕೊಂಡು ಹಲವು ಪ್ರಯತ್ನಗಳಿಂದ ಆ ಸಾಧ್ಯತೆಯನ್ನು ಪಡೆದರೂ ಈ ಸಾಧ್ಯಕ್ಕೋಸ್ಕರ ಆತನಿಗೆ ಅನೇಕ ಸಂಗತಿಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಮಾನವನ ಯಶಸ್ಸು ಶೇಕಡ, ನೂರರಷ್ಟು ಎಂದಿಗೂ ಇರುವುದಿಲ್ಲ. ಕೆಲವು ಸಮಯ ಅದರ ಅರ್ಧದಷ್ಟು ಕೂಡ ಯಶವು ದೊರೆಯುವುದು ಕಷ್ಟವಾಗುತ್ತದೆ. "ಯಾವುದಕ್ಕೆ ಜಯವೆಂದೆನ್ನುತ್ತಾರೋ ಅದಂತೂ ನನಗೆ ಪರಾಜಯದಂತೆ ಕಾಣುತ್ತದೆ" ಎಂದು ನುಡಿಯುವ ಧರ್ಮನು ಇದೇ ಹೇಳುತ್ತಾನೆ.

[ಜಯೋಽಯಮಜಯಾಕಾರೋ ಭಗವನ್ ಪ್ರತಿಭಾತಿ ಮೆ ೧೨.೧.೧೫]

ಈ ಸತ್ಯದ ಪಾರ್ಶ್ವಭಾಗವನ್ನು ಮಹಾಭಾರತದಲ್ಲಿ ಬಹಳ ಕರುಣಾಸ್ಪದವಾಗಿ ಬಣ್ಣಿಸಿದ್ದಾರೆ. ಅದೆಂದರೆ ವೈಫಲ್ಯ, ಮಾನವೀಜೀವನದ ಸ್ಥಾಯಿಭಾವ. ಮಹಾಭಾರತದಲ್ಲಿಯ ಪ್ರತಿಯೊಬ್ಬ ವ್ಯಕ್ತಿಯು ಪರಾಭೂತನಾಗಿ ನಿರಾಶೆ ಹೊಂದಿದವನಾಗಿ ಕಾಣುತ್ತಾನೆ. ಪರಾಜಯದೊಂದಿಗೆ ಕೆಲವು ಸಮಯದಲ್ಲಿ ಜಯವು ಅವರ ಪಾಲಿಗೆ ಬಂದಿದೆ. ಒಬ್ಬ ವ್ಯಕ್ತಿ ಮಾತ್ರ ಎಲ್ಲಾ ರೀತಿಯಿಂದಲೂ ಪರಾಭೂತನೂ ಸಾಫಲ್ಯವನ್ನು ಪಡೆಯದವನೂ ಅಕೃತಾರ್ಥನು ಆಗಿದ್ದದ್ದೂ ಕಾಣುತ್ತದೆ. ಭವಭೂತಿಯು ಸೀತೆಯನ್ನು ಕುರಿತು "ವಿರಹದ ಮೂರ್ತಿ" ಎಂದು ಬಣ್ಣಿಸಿದ್ದಾನೆ. ಅದೇ ರೀತಿಯನ್ನು ಕರ್ಣನನ್ನು ಮಾನವಿ ರೂಪವನ್ನು ಪಡೆದ ನಿರಾಶೆಯೇ ಎಂದೆನ್ನಬಹುದು. ವಿದುರ, ಕರ್ಣನಂತೆಯೇ ಸಮದುಃಖಿ, ಸಮದೈವಿ ಆಗಿದ್ದ. ಅವರಿಬ್ಬರ ವಿಚಾರದಲ್ಲಿ ಹಲವು ಘಟನೆಗಳು ಒಂದೇ ತರಹದಿದ್ದರೂ, ಕೆಲವು ತೀರಾ ಭಿನ್ನವಾಗಿದ್ದವು. ಆ ಕಾರಣದಿಂದ ಅವರಿಬ್ಬರ ಜೀವನಮಾರ್ಗಗಳು ತೀರಾ ಭಿನ್ನವಾದವು.

ವ್ಯಾಸ, ಧೃತರಾಷ್ಟ್ರ–ಪಾಂಡುವಿನ ಪಿತ. ವಿದುರನ ತಂದೆಯು ವ್ಯಾಸನೇ, ಆದರೆ ಮೊದಲಿನ ಇಬ್ಬರ ತಾಯಂದಿರೂ ರಾಜಕನ್ಯೆ ಆಗಿದ್ದರಿಂದ ಅವರಿಗೆ ರಾಜ್ಯಪದವು ದೊರಕಿತು. ಇಬ್ಬರೂ ಅಂಗವಿಕಲರಾದರೂ, ರಾಜ್ಯೋಪ–ಭೋಗವನ್ನು ಪಡೆಯಬಹುದಾಗಿತ್ತು. ಪಾಂಡುವಿನ ತರುವಾಯ ರಾಜ್ಯಾಭಿಷೇಕವಾಗದಿದ್ದರೂ ಹದಿನೈದು, ಇಪ್ಪತ್ತು ವರ್ಷಗಳ ಕಾಲ ಧೃತರಾಷ್ಟ್ರನು ರಾಜ್ಯವನ್ನು ಉಪಭೋಗಿಸಿದನು. ದುರ್ದೈವಿಯಾದ ವಿದುರ, ತಾಯಿಯು ದಾಸಿಯಾದ ಕಾರಣದಿಂದ ಅವ್ಯಂಗನು, ಬುದ್ಧಿವಂತನು ಇದ್ದರೂ 'ಸೂತ'ನೆಂದು

ತಿಳಿಯಲ್ಪಟ್ಟ. ರಾಜ್ಯಕ್ಕೆ ಅಯೋಗ್ಯನಾದ ವಿದುರನ ಜೀವನದಲ್ಲಿಯ ನಿರಾಶೆಯು ಆಗಾಗ್ಗೆ ಕಂಡುಬರುತ್ತದೆ. ಅದರ ಜೊತೆಯೇ ಅಧ್ಯಯನ ಚಿಂತನಗಳಿಂದ ಆ ವೈಫಲ್ಯವನ್ನು ಹತ್ತಿಕ್ಕುವ ಆತನ ಪ್ರಯತ್ನಗಳು ಕಂಡುಬರುತ್ತವೆ. ಹುಟ್ಟಿನಿಂದ ಸಮಾಜದಲ್ಲಿಯ ತನ್ನ ಸ್ಥಾನವು ಸ್ಥಿರವೆನ್ನಿಸಿದ ಮೇಲೆ 'ತಾನು ಯಾರು?' ಎನ್ನುವ ಅರಿವು ಉಂಟಾದ ನಂತರ ತಮ್ಮವರ ಅಥವಾ ತನ್ನ ಸ್ವಂತದ ವಿಷಯದ ಮೇರೆಗಳನ್ನು ನಿಶ್ಚಯಿಸಲು ಆತನಿಗೆ ಸಾಧ್ಯವಾಯಿತು. ಇಷ್ಟೇ ಅಲ್ಲದೇ ಮಹತ್ ಪ್ರಯಾಸದಿಂದ ರೂಢಿಯಲ್ಲಿಯ 'ನಾನು' ಎಂಬ ಅಹಂಭಾವದ ಮೇರೆಗಳನ್ನು ಆತ ದಾಟಿದ.

ಕರ್ಣನ ಜೀವನಕ್ಕೆ ಅವನ ಅಂತರಾಳದಲ್ಲಿ ಒಂದು ವಿಧದ ವೈಫಲ್ಯ ಅಂಟಿಕೊಂಡಿತ್ತು. ಅದೆಂದರೆ 'ತಾನು ಯಾರು?' ಎಂಬುದು ಆತನಿಗೆ ಅಜ್ಞಾತವಾಗಿ ಇದ್ದದ್ದು. ಆ ಸಂಗತಿಯು ಆತನಿಗೆ ಮೊದಲು ತಿಳಿಯಲೇ ಇಲ್ಲ. ನಿಜಾಂಶವು ತಿಳಿದಾಗ ಅದು ನಿರರ್ಥಕವಿತ್ತು.

ಸಾಮಾನ್ಯವಾಗಿ 'ತಾನು ಯಾರು?' ಎಂಬುದು ಆಯುಷ್ಯದ ಪ್ರಾರಂಭದಲ್ಲಿಯೇ ಸರ್ವಸಾಮಾನ್ಯವಾಗಿ ತಿಳಿದುಬರುತ್ತದೆ. ಆದರೆ ಜೀವನದ ಯಾವ ಸಮಯಕ್ಕೂ ಅದು ಪರಿಪೂರ್ಣ ಉತ್ತರವೆನಿಸದು. 'ನಾನು' ಎಂಬುದರ ಪರಿಮಾಣವು ಕ್ಷಣ ಕ್ಷಣಕ್ಕೆ ಹೆಚ್ಚಾಗುತ್ತಿರುತ್ತದೆ. ಅದರೊಡನೆಯೇ 'ನಾನು' ಎಂಬುದರ ಮೇರೆಗಳು ನಿಚ್ಚಳವಾಗುತ್ತವೆ. ಹುಟ್ಟಿನಿಂದ ಮೊದಲಿನ ಕೆಲವು ವರ್ಷಗಳ ಕಾಲ 'ನಾನು' ಇದರ ಅರಿವು ಚಿಕ್ಕಮಕ್ಕಳಿಗೆ ಆಗಿರುವುದಿಲ್ಲ. ಬಾಲಕರು ತಮ್ಮ ಸ್ವಂತದ ಉಲ್ಲೇಖವನ್ನು ಸಹ ವ್ಯಾಕರಣದ ಪ್ರಥಮ ಪುರುಷದ ರೂಪಕಗಳಲ್ಲಿ ಮಾಡುತ್ತಾರೆ. 'ನಾನು' ಎಂಬುದರ ಅರಿವು 'ತನ್ನದು' ಎಂಬುದರಲ್ಲಿದೆ. 'ಈತನು ನನ್ನ ತಂದೆ, ಇವಳು ನನ್ನ ತಾಯಿ, ಇವು ನನ್ನ ಆಟಿಕೆಗಳು, ಇದು ನನ್ನ ಮನೆ, ಇವರು ನನ್ನ ಸಹೋದರ, ಸಹೋದರಿಯರು.' ಯಾರ ಸುತ್ತಮುತ್ತಲು ಇವೆಲ್ಲವೂ ನೆರೆದಿದೆ. ಆ ಕೇಂದ್ರವೆಂದರೇ 'ತಾನು' ಅಥವಾ 'ನಾನು' ಈ ಅರಿವು, ಕೌಟುಂಬಿಕ ಹಾಗೂ ಸಾಮಾಜಿಕ ಸಂಬಂಧಗಳಿಂದ ದೃಢವಾಗುತ್ತದೆ. 'ಇವಳು ನನ್ನ ತಾಯಿ' ಅನ್ನುತ್ತಿದ್ದಾಗಲೇ 'ನಾನು ಈಕೆಯ ಮಗನು,' ಎಂಬ ಭಾವನೆಯು ಉದ್ಭವಿಸುತ್ತದೆ. ಕೌಂಟುಂಬಿಕ ಪರೀಘುವನ್ನು ದಾಟಿ 'ನಾನು' ಎಂಬುದರ ವಿಸ್ತಾರವು ಆಗುತ್ತಾ ಹೋಗುತ್ತದೆ. ಯಾವ ಪ್ರಸಂಗಗಳಲ್ಲಿ 'ನಾನು,' ಎಂಬುದರ ಅರಿವಾಗುವುದೋ ಆಯಾ ಸಂದರ್ಭಗಳಲ್ಲಿ ಆ 'ನಾನು' ಎಂಬುದರ ಪ್ರತಿಯಾಗಿ 'ಅವನು,' 'ನೀನು,' ಮೊದಲಾದವುಗಳ ಅರಿವು ಆಗುತ್ತದೆ. ಮತ್ತು ಆ ಇತರರ 'ನಾನು' ಎಂಬುದರ ಅಪೇಕ್ಷೆಗಳ ಅರಿವು ಸಹ ಆಗುತ್ತದೆ. ಆ ಅಪೇಕ್ಷೆಗಳೆಂದರೆ ಮಾನವನ ಅಹಂಭಾವದ ವಿವಿಧ ಆವಿಷ್ಕಾರಗಳಿವೆ. 'ನಾನು' ಮಗನಿರಬಹುದು, ತಂದೆ ಇರಬಹುದು. ಗಂಡನಿರಬಹುದು. ಅದರಂತೆ ಒಬ್ಬ ನಾಗರಿಕನಿರಬಹುದು. ಒಂದು ಜಾತಿ–ಕುಲದವನಿರಬಹುದು. ಅವರವರಿಗೆ ಸ್ಥಾನವಿದ್ದಂತೆ ಕರ್ತವ್ಯಗಳು ಇರುತ್ತವೆ. ಒಂದು ಪ್ರಕಾರದ 'ನಾನು' ಎಂಬುದರ ಅಂತರವು ಹಲವು ಸಾಮಾಜಿಕ ಪ್ರಸಂಗಗಳಿಂದ, ಬಹಳಮಟ್ಟಿಗೆ ಧಾರ್ಮಿಕ ಸಂಸ್ಕಾರಗಳಿಂದ ಸ್ಪಷ್ಟವಾಗುತ್ತದೆ.

ವಿದುರ ಸೂತನಾಗಿದ್ದುದರಿಂದ ಆತನ ಮೇಲೆ ಸೂತನ ಸಂಸ್ಕಾರಗಳು ನಡೆದಿದ್ದವು. ಆತನ ಸಮಾಜದಲ್ಲಿ ಸ್ಥಾನ ದೃಢನಿಶ್ಚಿತವಾಗಿತ್ತು. ಸಹೋದರನೆಂದು ಧೃತರಾಷ್ಟ್ರ ಆತನನ್ನು ದೃಢವಾಗಿ ಆಲಂಗಿಸಿ ಪ್ರೀತಿಯಿಂದ ತೊಡೆಯ ಮೇಲೆ ಕುಳ್ಳಿರಿಸಿದ್ದನು. [**ಸೋಽಂಕಮಾದಾಯ ವಿದುರಂ ಮೂರ್ಧ್ನ್ಯುಪಾಘ್ರಾಯರ್ಚವಹ ಕ್ಷಮ್ಯತಾಮಿತಿ ಚೋವಾಚ** ೩.೭೨೦. ಈ ಪ್ರಕರಣದಲ್ಲಿ ೩.೭೪ ಮತ್ತು ೩.೮೪, ಈ ಅಧ್ಯಾಯಗಳನ್ನು ಓದಬೇಕು] ಹೀಗಿದ್ದರೂ ವಿದುರನನ್ನು ಯಾವ ರಾಜಕನ್ಯೆಯೂ ವಿವಾಹವಾಗಲಿಲ್ಲ ಅಥವಾ ಕ್ಷತ್ರಿಯನೆಂದು ಯಾರೂ ಆತನನ್ನು ತಿಳಿದು ಗೌರವಿಸಲಿಲ್ಲ. ಉಪೇಕ್ಷಿತ ಜೀವನವನ್ನೇ ಕಳೆದರೂ 'ನಾನು ಯಾರು?' ಎಂಬ ಪ್ರಶ್ನೆಯು ವಿದುರನಿಗೆ ಕಾಡಲಿಲ್ಲ. ಕರ್ಣ ಮಾತ್ರ ಈ ದುಷ್ಟ ಪ್ರಶ್ನೆಯ ತಿರುಗಣಿಯಲ್ಲಿ ಸಿಕ್ಕಿದ್ದ. ಆತನಿಗೆ ಸಮಾಜದಲ್ಲಿ ನಿಶ್ಚಿತವಾದ ಸ್ಥಾನವಿರಲಿಲ್ಲ. ಆತನ ಮನಸ್ಸಿಗೆ ಆತನ ನಿಶ್ಚಿತ ಸ್ಥಾನವು ಹೊಳೆಯುತ್ತಿರಲಿಲ್ಲ. ಯಾವ ಸ್ಥಾನ ತನ್ನದು ಎಂದು ಆತನಿಗೆ ಅನಿಸುತ್ತಿತ್ತೊ ಅದನ್ನು ಪಡೆಯುವುದಕ್ಕಾಗಿ ಆತನ ಸರ್ವ ಪ್ರಯತ್ನ ನಡೆದಿದ್ದವು ಮತ್ತು ಆ ಸ್ಥಾನವು ದೊರಕದಿದ್ದುದರಿಂದ ಆತ ಆಜನ್ಮವೂ ಕುದಿಯುತ್ತಿದ್ದ.

ಅತಿರಥನೆಂಬ ಸೂತನ ಬಳಿಯಲ್ಲಿ ಕರ್ಣ ಹುಟ್ಟಿದಾಗಿನಿಂದ ಬೆಳೆದ. ಅತಿರಥನ ಪತ್ನಿಯಾದ ರಾಧೆಯು ಆತನನ್ನು ತನ್ನ ಮಗನಂತೆಯೇ ಸಾಕಿ ಸಲಹಿದಳು. ಆದರೆ ಕರ್ಣ ಸ್ವಂತ ಮಗನಲ್ಲವೆಂಬುದನ್ನು ಅವರು ಬಚ್ಚಿಟ್ಟಿರಲಿಲ್ಲ. ಜನ್ಮದಿಂದಲೇ ಕವಚಕುಂಡಲಗಳು ಆತನ ಬಳಿ ಇದ್ದವು. ಹೇರಳ ಹಣವು ಆತನೊಡನೆ ಬಂದಿತ್ತು. 'ವಸುಷೇಣನೆಂಬ' ಕ್ಷತ್ರಿಯನ ಹೆಸರನ್ನೇ ಅತಿರಥನು ಆತನಿಗೆ ಇಟ್ಟಿದ್ದನು. ಆತನು ಯಾವ ರೀತಿಯಲ್ಲಿ ದೊರಕಿದನು ? ಜೊತೆಯಲ್ಲಿ ಏನೇನು ಇದ್ದವು ? ಅವೆಲ್ಲವು ಆತನಿಗೆ ಚಿಕ್ಕಂದಿನಿಂದಲೇ ಗೊತ್ತಿದ್ದವು. ತಾನು ಕ್ಷತ್ರಿಯನಿರುವುದಾಗಿಯೂ ಒಮ್ಮಿಲ್ಲೊಮ್ಮೆ ತನ್ನ ಕ್ಷತ್ರಿಯ ತಾಯಿ ಅಥವಾ ತಂದೆಯು ತನ್ನನ್ನು ಅಂಗೀಕರಿಸಬಹುದೆಂದೂ ಆಶಿಸಿದ್ದನು. ಅತಿರಥ, ರಾಧೆಯರಲ್ಲಿ ಆತನು ಪ್ರೀತಿ ಕೃತಜ್ಞತೆಗಳನ್ನು ಇಟ್ಟುಕೊಂಡಿದ್ದರೂ ಅವರಲ್ಲಿಯವನೇ ಅಥವಾ ಸೂತನೆ ಎಂದು ಇರಲು ಆತನು ಒಪ್ಪುತ್ತಿರಲಿಲ್ಲ. ರಾಜಪುತ್ರನಾಗಿರದಿದ್ದ ಕಾರಣ ಖ್ಯಾತವಂತರಾದ ಗುರುಗಳಲ್ಲಿ ಪ್ರಕಟವಾಗಿ ಶಸ್ತ್ರವಿದ್ಯೆಗಳನ್ನು ಕಲಿಯುವುದು ಆತನಿಗೆ ಸಾಧ್ಯವಾಗಲಿಲ್ಲ. ಆತ ಮುಚ್ಚು ಮರೆಯಾಗಿ ಹೆಸರನ್ನು ಮರೆಯಿಸಿ ಶಸ್ತ್ರ ವಿದ್ಯೆಯನ್ನು ಕಲಿತ. ಆ ವಿದ್ಯೆಯಲ್ಲಿ ಬಲು ನಿಪುಣನಾದ. ಅನಂತರ ತನ್ನ ಅಸಾಮಾನ್ಯ ಕುಶಲತೆಯನ್ನು ತೋರುವ ಅವಕಾಶವನ್ನು ಪಡೆದ. ಆದರೆ ಅದರ ಪರಿಣಾಮಗಳು ಭೀಕರವಾದವು.

ಆ ಪ್ರಸಂಗವು ಈ ರೀತಿ. ಧರ್ಮಾದಿ ಪಾಂಡವರ, ಧಾರ್ತರಾಷ್ಟ್ರಾದಿ ಕೌರವರ ಶಸ್ತ್ರಗಳ ಪಾಠಗಳು ಮುಗಿದಿದ್ದವು. ತನ್ನ ಶಿಷ್ಯಂದಿರು ಶಸ್ತ್ರವಿದ್ಯೆಯಲ್ಲಿ ಎಷ್ಟೊಂದು ನಿಪುಣರಾಗಿದ್ದಾರೆ ಎಂಬುದನ್ನು ಕೌರವ ಪ್ರಮುಖರಿಗೆ ತೋರಿಸುವುದಕ್ಕಾಗಿ ದ್ರೋಣಾಚಾರ್ಯರು ದೊಡ್ಡ ಸಮಾರಂಭವನ್ನು ಏರ್ಪಡಿಸಿದ್ದರು. ಒಂದು ದೊಡ್ಡ ಬಯಲಿನ ಸುತ್ತಲೂ ಜನರಿಗೆ ಕೂತು ಕೊಳ್ಳುವುದಕ್ಕೆ ಚಪ್ಪರಗಳನ್ನು ಹಾಕಿದ್ದರು. ಧೃತರಾಷ್ಟ್ರ–ಗಾಂಧಾರಿ, ಭೀಷ್ಮ–ವಿದುರ–ಕುಂತಿ,

ಹಾಗೇ ಕೌರವ ಸಭೆಯಲ್ಲಿಯ ಪ್ರಮುಖರೆಲ್ಲರೂ ಸೇರಿದ್ದರು. ಎಲ್ಲರೂ ಮಕ್ಕಳ ಆಟಪಾಟಗಳನ್ನು ಅಕ್ಕರೆಯಿಂದ ನೋಡುತ್ತಿದ್ದರು. ಅರ್ಜುನನು ಎಲ್ಲರನ್ನು ಮೀರಿಸಿದನು. ಧನುರ್ವಿದ್ಯೆಯಲ್ಲಿಯ ಆತನ ಅಸಾಮಾನ್ಯ ನಿಪುಣತೆಯನ್ನು ನೋಡಿ ಎಲ್ಲರೂ ಬೆರಗಾದರು. ಇಷ್ಟರಲ್ಲಿ ರಂಗದ್ವಾರದ ಬಳಿ ಗುಲ್ಲೆದ್ದಿತು. ಮಹಾಕಾಯನಾದ ತೇಜಸ್ಸುಳ್ಳವನಾದ ಒಬ್ಬ ತರುಣಯುವಕನು ಒಳಗೆ ನುಗ್ಗಿದನು. "ಈ ಅರ್ಜುನನು ಮಾಡಿ ತೋರಿಸಿದ್ದನ್ನು ನಾನು ಮಾಡಿತೋರಿಸುವೆ" ಈ ರೀತಿ ನುಡಿದು ಆ ಯುವಕನು ಅರ್ಜುನನು ಮಾಡಿ ತೋರಿಸಿದ ಎಲ್ಲಾ ಸಾಹಸಗಳನ್ನು ಮಾಡಿ ತೋರಿಸಿದನು. ಅನಂತರ ಅರ್ಜುನನನ್ನು ದ್ವಂದ್ವಯುದ್ಧಕ್ಕೆ ಆಹ್ವಾನಿಸಿದನು.

ರಂಗದಲ್ಲಿ ಪ್ರವೇಶಿಸಿದ ಯುವಕನೇ ಕರ್ಣ. ಆವರೆಗೆ ಆತನನ್ನು ಯಾರೂ ಕಂಡಿರಲಿಲ್ಲ.

ಮಹಾಭಾರತದಲ್ಲಿ ಇತರ ಪ್ರಮುಖ ಪ್ರಸಂಗಗಳಂತೆ ಈ ಪ್ರಸಂಗವು ಚಿಕ್ಕದಿದ್ದರೂ ತ್ವರೆಯಿಂದ ಸಾಗಿದ್ದು ನಾಟ್ಯಪೂರ್ಣವಾಗಿದೆ. ನಡೆಯುತ್ತಿದ್ದುದೇನು, ಎಂಬುದನ್ನೂ ತಿಳಿದುಕೊಳ್ಳುವಷ್ಟರಲ್ಲಿ ಅದು ನಡೆದು ಹೋಗುತ್ತದೆ. ಆಗ ನಡೆದ ಸಂಗತಿ ಮಾತ್ರ. ಮಹಾಭಾರತ ದೃಷ್ಟಿಯಿಂದ ತೀರಾ ಮಹತ್ವ ಉಳ್ಳದ್ದು, ಕಥೆಯ ಬಗ್ಗೆ ಮನಸ್ಸೆಳೆತವನ್ನು ಹೆಚ್ಚಿಸುವಂತಹುದು, ಅದಲ್ಲದೇ ಕಥೆಯಲ್ಲಿ ಇನ್ನಷ್ಟು ಅರ್ಥವನ್ನು ಪೂರೈಸುವಂತಹದಾಗಿತ್ತು.

ದ್ರೋಣನು ತನ್ನ ಶಿಷ್ಯರಿಂದ ಕೌಶಲ್ಯವನ್ನು ಎಲ್ಲರಿಗೂ ಪ್ರದರ್ಶಿಸುತ್ತಿದ್ದನು. ಅನ್ಯರಾಜಪುತ್ರರಿಗೆ ಔತಣವಿರಲಿಲ್ಲ. ಹೀಗಿರುವಾಗ ಕರೆ ಇಲ್ಲದ ಕರ್ಣ ಏಕೆ ಪ್ರವೇಶಿಸಿದನು? ಕೌಶಲ್ಯವನ್ನು ತೋರಿಸಲು ರಂಗದಲ್ಲಿ ಕರ್ಣ ಇಳಿಯುವನೆಂದು ಅಥಿರಥನು ಭಾವಿಸಿರಲಿಲ್ಲ. ಈ ಕ್ಷತ್ರಿಯರ ಸಭೆಯಲ್ಲಿ ಸೇರಿ ತನ್ನ ಸಾಹಸವನ್ನು ಪ್ರದರ್ಶಿಸಿದರೆ ಸಂತುಷ್ಟಪಟ್ಟ ತನ್ನ ನಿಜ ತಾಯಿ ತಂದೆಯರು ತನ್ನನ್ನು ಅಂಗೀಕರಿಸಬಹುದೆಂದು ಕರ್ಣ ಆಶಿಸಿದ್ದ. ತನ್ನ ಕೌಶಲ್ಯವನ್ನು ತೋರಿಸಿ ತಾನು ಅರ್ಜುನನಿಗೆ ಮಿಗಿಲಾದವನು ಎಂಬ ಹೊಗಳಿಕೆಯನ್ನು ಎಲ್ಲರಿಂದಲೂ ಪಡೆದು ಅಷ್ಟಕ್ಕೆ ನಿಲ್ಲಬಹುದಿತ್ತು. ಇಷ್ಟರಿಂದಲೇ ಆತನ ಉದ್ದೇಶವು ಸಫಲವಾಗುವಂತಿತ್ತು. ಆದರೆ ವಿನಾಕಾರಣವಾಗಿ ಆತ ಅರ್ಜುನನನ್ನು ದ್ವಂದ್ವಯುದ್ಧಕ್ಕೆ ಕರೆದ.

ಈ ಸಂದರ್ಭದಲ್ಲಿ ಮತ್ತೊಮ್ಮೆ ವಯಸ್ಸಿನ ಪ್ರಶ್ನೆಯು ಉದ್ಭವಿಸುತ್ತದೆ. ಈ ಪ್ರಸಂಗದ ಸಮಯದಲ್ಲಿ ಧರ್ಮರಾಜನು ಹದಿನಾರು–ಹದಿನೇಳು ವರ್ಷದವನಿದ್ದರೆ, ಅರ್ಜುನನು ಹದಿನಾಲ್ಕು ಹದಿನೈದು ವರ್ಷದವನು. ಧರ್ಮನು ಹದಿನೆಂಟು ವರ್ಷ ಪ್ರಾಯದವನೆಂದು ತಿಳಿದರೂ ಅರ್ಜುನನು ಹದಿನೈದು ಹದಿನಾರು ಪ್ರಾಯದವನು. ಕರ್ಣನು ಕುಂತಿಗೆ ಕೌಮಾರ್ಯದಲ್ಲಿ ಜನಿಸಿದ ಮಗನು, ಆದ್ದರಿಂದ ಧರ್ಮನಿಗಿಂತ ಒಂದೆರಡು ವರ್ಷದಿಂದಾದರೂ ಹಿರಿಯನು. ಅಂದರೆ ಅರ್ಜುನನಿಗಿಂತ ನಾಲ್ಕು, ಐದು ವರ್ಷಕ್ಕೆ ದೊಡ್ಡವನು. ಕರ್ಣನು ಇಪ್ಪತ್ತು, ಇಪ್ಪತ್ತೆರಡು ವರ್ಷದವನಿರಬಹುದು. ಈ ಪ್ರಾಯದಲ್ಲಿ ಹದಿನೈದರ ಮತ್ತು ಇಪ್ಪತ್ತರ ಪ್ರಾಯವು ಶಾರೀರಿಕ ದೃಷ್ಟಿಯಿಂದ ಬಹಳ ಮಹತ್ವದ್ದು. ಹದಿನೈದು

ವರ್ಷದ ಹುಡುಗ ಕುಮಾರ. ಆದರೆ ಇಪ್ಪತ್ತು ವರ್ಷದವನು ಯುವಕ. ಎತ್ತರ ದಪ್ಪ, ಬಲ, ಈ ಎಲ್ಲಾ ಶಾರೀರಿಕ ಲಕ್ಷಣಗಳಲ್ಲಿ ಯುವಕ ಹೆಚ್ಚಿನವನು. ತನ್ನ ಕೌಶಲ್ಯ ಪ್ರದರ್ಶನ ಮಾಡುವುದು ವಾಸ್ತವ. ಆದರೆ ಕುಮಾರನೊಡನೆ ದ್ವಂದ್ವವನ್ನು ಅಪೇಕ್ಷಿಸುವುದು ವೀರನಿಗೆ ಶೋಭಿಸುವುದಿಲ್ಲ. ಕರ್ಣನ ಚರಿತ್ರೆಯಲ್ಲಿ ಈ ತರಹದ ಸ್ವಭಾವ ದೋಷವು ಇನ್ನೆರಡು ಮೂರು ಕಡೆ ಗೋಚರವಾಗುತ್ತದೆ. ಅಲ್ಪ ಕೋಪಕ್ಕೆ ಬಲಿಯಾಗಿ ಆತ ಆವೇಶದ ಭರದಿಂದ ಅನಿಷ್ಟವಾದುದ್ದನ್ನು ಮಾಡಿಬಿಟ್ಟಿರುತ್ತಿದ್ದನು. ದುಡುಕಿನಲ್ಲಿ ಹೀನತೆಯು ಕಾಣಕೂಡದು ಎಂಬ ಅಲಿಖಿತ ನಿಯಮವು ಇತ್ತು. ಕರ್ಣನಿಂದ ಅದರ ಪಾಲನೆ ಆಗಲಿಲ್ಲ. ಅದಕ್ಕೆ ಕರ್ಣನ ವಿಫಲವಾದ ಜೀವನವೇ ಕಾರಣ. ಕ್ಷತ್ರಿಯರಲ್ಲಿಯ ಕೆಲವೊಂದು ಕರ್ತೃತ್ವವು ಆತನಿಗೆ ಕೆಲವು ಪ್ರಮಾಣಗಳಲ್ಲಿ ಸಾಧ್ಯವಾಯಿತು. ಆದರೆ ಕ್ಷತ್ರಿಯ ನಡೆನುಡಿಗಳಲ್ಲಿ ಅದರಲ್ಲಿಯು ಶ್ರೇಷ್ಠ ಕ್ಷತ್ರಿಯರೆಂದು ಗಣ್ಯರಾದವರ ಆಚಾರ ವಿಚಾರಗಳ ಭೂಮಿಕೆಯು ಆತನಿಗೆ ಸರಿಹೊಂದಿಕೊಳ್ಳಲಿಲ್ಲ ಕ್ಷತ್ರಿಯರ ಅನೌರಸ ಸಂತಾನವಾಗಿರುವ ಬಗ್ಗೆ ಆತನ ಮನಸ್ಸಿನಲ್ಲಿ ಒಂದು ಬಗೆಯ ದ್ವೇಷ ತುಂಬಿಕೊಂಡಿತ್ತು. ಈ ದ್ವೇಷ ಆಗಾಗ್ಗೆ ಆತನಿಂದ ಪ್ರಕಟವಾದದ್ದು ತೋರುತ್ತದೆ. ಕ್ಷತ್ರಿಯರ ಅನೌರಸ ಮಗನಾಗಿದ್ದರೂ ಕೆಲವು ಸಮಯದಲ್ಲಿ ಕ್ಷತ್ರಿಯತ್ವವನ್ನು ಪಡೆಯುವ ಸಂಭವವಿತ್ತು. ಆದರೆ ಅದು ಕರ್ಣನಿಗೆ ಲಭಿಸುತ್ತಿರಲಿಲ್ಲ. 'ಸೂತ' ವರ್ಗದವರಿಗೆ ಮಾನ್ಯತೆಯು ದೊರಕಬೇಕು. ಇಲ್ಲವೆ ಸಾಮರ್ಥ್ಯವನ್ನು ಗಮನಿಸಿ ಕ್ಷತ್ರಿಯತ್ವವನ್ನು ನಿಶ್ಚಯಿಸಬೇಕು ಎಂಬ ತಾತ್ವಿಕ ಭೂಮಿಕೆಯನ್ನು ಕರ್ಣ ಹೊಂದಿರಲಿಲ್ಲ. **"ದೈವಾಯತ್ತಂ ಕುಲೇ ಜನ್ಮಮದಾಯತ್ತಂ ತು ಪೌರುಷಮ್"** ಈ ಭೂಮಿಕೆಯಿಂದ ಕರ್ಣ ವಾದಿಸುತ್ತಿರಲಿಲ್ಲ. ಆಧುನಿಕ ವರ್ಗ ಕಲಹದ ಅಂಕುರವು ಇದರಲ್ಲಿ ಇರಲಿಲ್ಲ. ಕರ್ಣ ತನ್ನ ವೈಯಕ್ತಿಕ ಸ್ಥಾನಕ್ಕಾಗಿ ಪ್ರಯತ್ನಿಸುತ್ತಿದ್ದನು. ಶಸ್ತ್ರರಂಗದಲ್ಲಿಯ ಆತನ ಈ ಎದೆಗಾರಿಕೆಯ ಫಲವು ದೊರೆಯಲಿಲ್ಲ. ಆತನ ಜನ್ಮರಹಸ್ಯವು ರಹಸ್ಯವಾಗಿಯೇ ಉಳಿಯಿತು. ತನ್ನ ಕ್ಷತ್ರಿಯತ್ವವನ್ನು ಸಿದ್ಧಪಡಿಸಲು ವಿಶ್ವಪ್ರಯತ್ನವನ್ನು ಮಾಡಿದರೂ ಅದು ಸಾಧಿಸಲಿಲ್ಲವೆಂದು ಆತನ ಕ್ರೋಧವು ಹೆಚ್ಚಾಯಿತು.

ಕರ್ಣ ಅರ್ಜುನನನ್ನು ದ್ವಂದ್ವಕ್ಕೆ ಆಹ್ವಾನಿಸಿದಾಗ ರಂಗದಲ್ಲಿ ಇಬ್ಬಣವಾಯಿತು. ಧರ್ಮ, ಭೀಷ್ಮರು, ಅರ್ಜುನನನ್ನು ಬೆಂಬಲಿಸಿದರು. ದುರ್ಯೋಧನಾದಿ ಸಹೋದರರು ಕರ್ಣನನ್ನು ಬೆಂಬಲಿಸಿದರು. ಅಸ್ತ್ರಗಳನ್ನು, ಯುದ್ಧ ನೀತಿಯನ್ನು ಅರಿತಿದ್ದ ಕೃಪ, ಮಧ್ಯಸ್ಥನಾದ.

[**ದ್ವಂದ ಯುದ್ಧ ಸಮಾಚಾರೇ ಕುಶಲಃ ಸರ್ವಧರ್ಮವಿತ್**] ಆತನು ರೂಢಿಯನ್ನು ಅನುಸರಿಸಿ ಕೇಳಿದ: "ಈ ಪಾಂಡುಪುತ್ರನಾದ ಅರ್ಜುನ ಯುದ್ಧಕ್ಕೆ ಸಿದ್ಧನಿದ್ದಾನೆ. ವೀರನೇ ! ನೀನು ನಿನ್ನ ಅಭಿದಾನ, ಕುಲವನ್ನು ತಿಳಿಸು." ಕರ್ಣನಿಗೆ ತನ್ನ ಕುಲವನ್ನು ಹೇಳುವುದು ಆಗಲಿಲ್ಲ. ಆತನ ಕಣ್ಣಲ್ಲಿ ನೀರೂರಿತು.

ದುರ್ಯೋಧನನು ತಟ್ಟನೆ ಮುಂದಾದನು: "ಯೋಧನ ಕುಲದ ಅಪೇಕ್ಷೆ ಏತಕ್ಕಾಗಿ?" ಎಂದು ಕೇಳಿ "ಅರ್ಜುನನು ರಾಜನಲ್ಲದವನ ಜೊತೆ ಯುದ್ಧಕ್ಕೆ ಸಿದ್ಧನಿರದಿದ್ದರೆ ನಾನು ಕರ್ಣನಿಗೆ

ಅಂಗರಾಜ್ಯವನ್ನು ಕೊಡುತ್ತೇನೆ" ಎಂದು ಹೇಳಿ. ಅಲ್ಲಿಯೇ ಕರ್ಣನಿಗೆ ರಾಜ್ಯಾಭಿಷೇಕವನ್ನು ಮಾಡಿದನು. [ಈ ಎಲ್ಲಾ ಭಾಗವು ಪ್ರಕ್ಷಿಪ್ತವೆಂದೆನಿಸುತ್ತದೆ. ಈ ಸಮಯದಲ್ಲಿ ದುರ್ಯೋಧನನು ರಾಜಕುಮಾರನಿದ್ದನು. ಧೃತರಾಷ್ಟ್ರನು ರಾಜ್ಯವನ್ನು (?) ಆಳುತ್ತಿದ್ದನು. ಭೀಷ್ಮನ ಮೇಲ್‌ವಿಚಾರಣೆಯಲ್ಲಿ ರಾಜ್ಯದಾಡಳಿತವು ನಡೆದಿತ್ತು. ರಾಜಪುತ್ರರ ಶಿಕ್ಷಣವು ಪೂರ್ಣವಾಗಿತ್ತು. ಧರ್ಮನಿಗೆ ರಾಜ್ಯ ದೊರೆಯುವ ಸಂಭವ ಉಂಟಾಗಿತ್ತೆಂದು ಮುಂದಿನ ಅಧ್ಯಾಯದಿಂದ ತಿಳಿದುಬರುತ್ತದೆ. ಇಂತಹ ಸನ್ನಿವೇಶದಲ್ಲಿ ದುರ್ಯೋಧನನು ಕರ್ಣನಿಗೆ ಯಾವ ರಾಜ್ಯವನ್ನೂ ಕೊಡಲು ಅಸಮರ್ಥನಾಗಿದ್ದ. ಆತ ರಾಜ್ಯವನ್ನು ಕೊಟ್ಟಿದ್ದು, ಅಭಿಷೇಕವನ್ನು ಮಾಡಿಸಿದ್ದು, ಇವೆಲ್ಲವು ಅಶಕ್ಯವಾದ್ದರಿಂದ ಪ್ರಕ್ಷಿಪ್ತವೆನಿಸುತ್ತವೆ. ಈ ಭಾಗವನ್ನು ಬಿಟ್ಟು ಆನಂತರ ನಡೆದದು ಕ್ರಮಪ್ರಾಪ್ತ, ಅಪರಿಹಾರ್ಯ ಅನ್ನಿಸುತ್ತದೆ.] ಕೃಪ, ಕರ್ಣನಿಗೆ ಕುಲ ನಾಮಗಳನ್ನು ಕೇಳಿದಾಗ ಆತನಿಗೆ ಹೇಳಲಾಗಲಿಲ್ಲ. [ಮಧ್ಯದಲ್ಲಿ ಮೇಲೆ ಹೇಳಿದ ಪ್ರಕ್ಷಿಪ್ತ ಭಾಗ] ಕರ್ಣ ಬೆವರಿಟ್ಟ. ಅಷ್ಟರಲ್ಲಿ ಮಂಟಪದ ದ್ವಾರದಲ್ಲಿ ಗೊಂದಲ ಕೇಳಿತು. ಲಗುಬಗೆಯಿಂದ ಬೆದರಿದವನಾದ ಅಧಿರಥನು ಕಾಲಲ್ಲಿ ಉತ್ತರೀಯವು ತೊಡಕುತ್ತಿದ್ದಂತೆಯೇ ಅಲ್ಲಿಗೆ ಪ್ರವೇಶಿಸಿದನು. ಆತನನ್ನು ಕಂಡ ಕರ್ಣನು ಆದರದಿಂದ ಮುಂದಾಗಿ "ಪಿತನೇ!" ಎಂದು ಅಧಿರಥನನ್ನು ನಮಸ್ಕರಿಸಿದನು. "ಮಗನೆ" ! ಎಂದು ಅಧಿರಥನು ಆತನನ್ನು ಆಲಂಗಿಸಿದನು. "ನೀನು ಯಾರವನು"? ಎಂಬ ಕೃಪನ ಪ್ರಶ್ನೆಗೆ ತಾನಾಗಿಯೇ ಉತ್ತರ ದೊರಕಿತು. ಕರ್ಣನಿಗೆ ಬೇಕಿದ್ದ ಕ್ಷತ್ರಿಯತ್ವವು ಸಿಗದೇ ಹೋಗಿ ಆತ ಸೂತಪುತ್ರನೆಂದು ಡಾಣಾಡಂಗುರವಾಯಿತು. "ಎಲವೋ ! ನಿನ್ನ ಉದ್ದಿಮೆಯ ಪ್ರತೀಕವಾದ ಚಾಟಿಯನ್ನು ಕೈಯಲ್ಲಿ ತೆಗೆದಕೊ! ಶಸ್ತ್ರವನ್ನು ಏಕೆ ಹಿಡಿಯುವಿ?" ಎಂಬ ಭೀಮನ ಕಠೋರವಾದ ನುಡಿಗಳಿಂದ ಕರ್ಣನ ಹೃದಯವು ಗಾಯಗೊಂಡಿತು. ದುರ್ಯೋಧನ ಕರ್ಣನನ್ನು ತಬ್ಬಿಕೊಂಡು ತನ್ನ ಸ್ನೇಹ ವಿಶ್ವಾಸವನ್ನು ಪ್ರಕಟಿಸಿದ. ಕರ್ಣ ಅದನ್ನು ಬಲು ಗೌರವದಿಂದ ಉಪಕೃತನಾಗಿ ಸ್ವೀಕರಿಸಿದ.

ಸೂರ್ಯ ಮರೆಯಾದ. ಮಾತು ಕಥೆ ವ್ಯಾಜ್ಯಗಳು ಅಲ್ಲಿಗೇ ನಿಂತವು. ಶಸ್ತ್ರವಿದ್ಯಾ ಪ್ರದರ್ಶನ ಕೊನೆಗೊಂಡಿತು.

'ನಾನು ಯಾರು ?' ಎಂಬುದರ ಸುಳಿವಂತೂ ಸಿಗಲಿಲ್ಲ. ಹೊಸ ತೊಡಕುಗಳು ಮಾತ್ರ ಉದ್ಭವಿಸಿದವು. ಆ ಸಮಯಕ್ಕೆ ಇರದಿದ್ದರೂ ಅನಂತರ ಕರ್ಣ ಅಂಗರಾಜನಾದ. ರಾಜ್ಯವು ದೊರಕಿದರೂ, ಕರ್ಣ ಕೌರವರ ಆಸ್ಥಾನದಲ್ಲಿಯೇ ಉಳಿದುಕೊಂಡ. ದುರ್ಯೋಧನ ಕರ್ಣನನ್ನು ಮಿತ್ರನೆಂದು ತಿಳಿದರೂ ಆ ಮಿತ್ರತ್ವದಿಂದ ಕರ್ಣನ 'ನಾನು ಯಾರು?' ಎಂಬ ಪ್ರಶ್ನೆಯು ಹಾಗೇ ಉಳಿಯಿತು. ದುರ್ಯೋಧನನ ಮಿತ್ರತ್ವದಿಂದ ಕರ್ಣನು ಕ್ಷತ್ರಿಯನಾಗಲಿಲ್ಲ. ದುರ್ಯೋಧನ ತನ್ನ ಸಹೋದರಿಯನ್ನಾಗಲಿ, ಕ್ಷತ್ರಿಯ ಕುಲದ ಒಂದು ರಾಜಕನ್ಯೆಯನ್ನಾಗಲೀ ಕರ್ಣನಿಗೆ ಕೊಟ್ಟು ಮದುವೆ ಮಾಡಲಿಲ್ಲ. ಇದಕ್ಕೆ ಪ್ರತಿಯಾಗಿ ಕರ್ಣನೇ ಉದ್ಯೋಗ ಪರ್ವದಲ್ಲಿ ಹೇಳಿದಂತೆ ಆತನ ವಿವಾಹವು ಓರ್ವ ಸೂತ ಕನ್ಯೆಯೊಡನೆ ಆಯಿತು. ಆನಂತರ ಪುತ್ರ

ಪುತ್ರಿಯರ ವಿವಾಹವು ಸೂತ ಕುಲದವರೊಡನೆ ನಡೆದವು. ಯಾವ ಸಮಯದಲ್ಲಿ ಮತ್ತು ಪ್ರಸಂಗದಿಂದ ದುರ್ಯೋಧನನ ಮತ್ತು ಕರ್ಣನ ನಿಕಟ ಸಂಬಂಧಿಗಳು ಸರಿಕ ಮಿತ್ರರಂತೆ ಉಂಟಾಗಿರಲಿಲ್ಲವೆಂದು ಅನಿಸುತ್ತದೆ. ಆತ ನಿಕಟವರ್ತಿಯಾದ. ಆದರೆ ಸ್ವಾಮಿಭಕ್ತ ಸೇವಕನೇ ಆಗಿ ಉಳಿದ. ದುರ್ಯೋಧನನ ಸ್ನೇಹಕ್ಕಿಂತ ಆತನ ಉಪಕಾರದಿಂದ ಕರ್ಣ ಋಣಿಯಾಗಿದ್ದ. ಆದ್ದರಿಂದ ಜನ ಸಾಮಾನ್ಯರಲ್ಲಿ ಕರ್ಣ ಸೂತನಾಗಿರುವುದೇ ನಿಜವೆನಿಸಿತು. ತಾನು ಸೂತನಲ್ಲ ಎಂಬ ಭಾವನೆ ಮಾತ್ರ ದೃಢವಾಯಿತು. ಬಾಹ್ಯರೂಪದಲ್ಲಿ ಸಂಪೂರ್ಣವಾಗಿ ಸೂತತ್ವವೇ ಆತನಿಗೆ ಗಂಟುಬಿದ್ದಿತು. ಈ ಭಯಂಕರ ಪರಿಸ್ಥಿತಿಯಲ್ಲಿ ಆತನ ಮನಸ್ಸು ಕೊರಗತೊಡಗಿತು. ಆತನ ಮತ್ತು ಪಾಂಡವರ ರಕ್ತಸಂಬಂಧವು ಇದ್ದಿದ್ದನ್ನು ಅವನು ಅರಿತಿರಲಿಲ್ಲ. ಹೀಗಿದ್ದರೂ ಆತನು ಪಾಂಡವರೊಡನೆ ಶತ್ರುತ್ವವನ್ನೇಕೆ ಕಟ್ಟಿದನು? ಎಂಬುದಕ್ಕೆ ಈ ಕೆಳಗಿನ ಮೂರು ಕಾರಣಗಳನ್ನು ಕೊಡಬಹುದು. ಶಸ್ತ್ರರಂಗದಲ್ಲಿ ಭೀಮನು ಆತನನ್ನು ಅವಮಾನಗೊಳಿಸಿದ್ದನು. ಅರ್ಜುನನು ಆಗಿನ ಪ್ರಮುಖ ಯೋಧನೆಂದು ಆತನೊಡನೆ ಕರ್ಣನ ಸ್ಪರ್ಧೆ ಇತ್ತು. ಮೂರನೆಯದಾಗಿ ಪಾಂಡವರ ಕಡು ವೈರಿಯಾದ ದುರ್ಯೋಧನ ಆತನ ಮಿತ್ರನಾದ. ದುರ್ದೈವದಿಂದ ಆತ ಸ್ಪರ್ಧೆಯಲ್ಲಿ ಹಿಂದುಳಿದ. ಅವನ ಹೃದಯದ ವ್ಯಥೆಯು ಹೆಚ್ಚಿತು.

ಪಾಂಡವರನ್ನು ಅರಗಿನ ಮನೆಯಲ್ಲಿ ಸುಟ್ಟುಹಾಕುವ ಸಂಚಿನಲ್ಲಿ ಕರ್ಣ ಇರಲಿಲ್ಲವೆಂದು ಅನಿಸುತ್ತದೆ. ಆ ಸಂಚಿನ ಮೂಲ ದೂರಾಲೋಚನೆಯು ಧೃತರಾಷ್ಟ್ರ ದುರ್ಯೋಧನ ಪಿತಾ ಪುತ್ರರದೇ ಇತ್ತೆಂದು ಕಾಣುತ್ತದೆ. ಈ ಸಂಚು ವಿಫಲವಾದ ನಂತರ ಮಾತ್ರ ಆಮೇಲೆ ಎಲ್ಲಾ ಪ್ರಸಂಗಗಳಲ್ಲಿ ಕರ್ಣ, ದುರ್ಯೋಧನನ ಹಂಚಿಕೆಗಳಲ್ಲಿದ್ದನು. ಒಂದು ಆವೃತ್ತಿಯ ಅನುಸಾರವಾಗಿ ದ್ರೌಪದಿಯ ಸ್ವಯಂವರದ ಕಾಲದಲ್ಲಿ ಕರ್ಣ ಆ ಪಂದ್ಯವನ್ನು ಜಯಿಸಲು ಪ್ರಯತ್ನಿಸಿದ್ದ ಎಂದಿದೆ. ಈ ಪ್ರಸಂಗ ಪ್ರಕ್ಷಿಪ್ತ ಎಂದು ನಂತರದ ಆವೃತ್ತಿಗಳಲ್ಲಿ ವಜಾಮಾಡಲಾಗಿದೆ. ಬಹುಶಃ ಪಂದ್ಯವನ್ನು ಜಯಿಸುವಷ್ಟು ಧನುರ್ವಿದ್ಯೆಯಲ್ಲಿ ಕರ್ಣನ ನೈಪುಣ್ಯವು ಇರಲಿಕ್ಕಿಲ್ಲ. ದುರ್ಯೋಧನ ಅಲ್ಲಿ ಹಾಜರಿದ್ದದ್ದರಿಂದ ಒಂದು ವೇಳೆ ಆತನಿಗೆ ತಾನು ಪ್ರತಿಸ್ಪರ್ಧಿಯಾಗಬಾರದೆಂಬ ಭಾವನೆಯಿಂದ ಪಂದ್ಯವನ್ನು ಜಯಿಸುವ ವಿಚಾರವನ್ನೇ ಕರ್ಣ ಬಿಟ್ಟುಕೊಟ್ಟಿರಬೇಕು. ಅದು ಏನೇ ಇದ್ದರೂ ಇತರರಿಗೆ ಅಸಾಧ್ಯವಾದುದನ್ನು ಅರ್ಜುನ ಮಾಡಿ ತೋರಿಸಿದ. ಅಷ್ಟಲ್ಲದೇ ಅನಂತರ ನಡೆದ ಹೋರಾಟದಲ್ಲಿ ಕರ್ಣನಿಗೆ ಕೈಚಳಕವನ್ನು ತೋರಿಸಿದ. ಈ ಪ್ರಸಂಗದಲ್ಲಿ ಅರ್ಜುನ ಬ್ರಾಹ್ಮಣರ ವೇಷದಲ್ಲಿದ್ದ. ಅರ್ಜುನನನ್ನು ಬ್ರಾಹ್ಮಣನೆಂದು ತಿಳಿದ ಕರ್ಣ, ಆತನೊಡನೆ ಘೋರ ಯುದ್ಧ ಮಾಡಲಿಲ್ಲವೆಂದು ತಿಳಿದಿದೆ, ಅದರಲ್ಲಿ ಹುರುಳಿಲ್ಲ. ಕ್ಷತ್ರಿಯ ಕನ್ಯೆಯನ್ನು ಒಬ್ಬ ಬ್ರಾಹ್ಮಣ ಜಯಿಸಿದನೆಂದು ರಾಜರೆಲ್ಲರೂ ರೊಚ್ಚಿಗೆದ್ದು ಯುದ್ಧಕ್ಕೆ ಅಣಿಯಾಗಿದ್ದರು. ಕರ್ಣ ಸಹ ಯುದ್ಧ ಮಾಡಿದ. ಆದರೆ ಅರ್ಜುನ ಬ್ರಾಹ್ಮಣನೆಂದು ತಿಳಿದು ಯುದ್ಧವನ್ನು ಅರ್ಧಕ್ಕೆ ಬಿಟ್ಟಿದ್ದು ನಿಜವೆನಿಸುವುದಿಲ್ಲ. ಈ ಬ್ರಾಹ್ಮಣನಿಗೆ ಸರಿಯಾಗಿ ಥಳಿಸುವುದು ಕಠಿಣವಲ್ಲವೆಂದು ಎಲ್ಲರೂ ತಿಳಿದಿದ್ದರು. ಆದರೆ ಅರ್ಜುನ, ಅವನೊಡನೆ ಅವನ ಬೆಂಬಲಕ್ಕೆ ಇದ್ದ ಭೀಮ ತನ್ನ ಅದ್ವಿತೀಯ ಪರಾಕ್ರಮವನ್ನು ತೋರಿಸಿದಾಗ

ಮಧ್ಯದಲ್ಲಿಯೇ "ನೀನು ಬ್ರಾಹ್ಮಣನೋ ಇನ್ಯಾರೋ?" ಎಂದು ಕೇಳಿ ಯುದ್ಧವನ್ನು ಅರ್ಧಕ್ಕೆ ಬಿಡುವುದು ಅಪ್ರಸ್ತುತವೆನಿಸುತ್ತದೆ.

ದ್ಯೂತಪರ್ವದಲ್ಲಿ, ಒಂದು ವಿಧದಲ್ಲಿ ಎಲ್ಲರ ಪರೀಕ್ಷೆ ನಡೆಯಿತು. "ಈಗೇನಾಯಿತು? ಇಂದೇನಾಯಿತು?" ಎಂದು ಕೇಳುವ ಕುರುಡ, ಆಸೆಬುರುಕ, ಧೃತರಾಷ್ಟ್ರನ ಪರೀಕ್ಷೆಯು ನಡೆಯಿತು. ಪಾಂಡವರು ದ್ಯೂತದಲ್ಲಿ ಎಲ್ಲವನ್ನು ಕಳೆದುಕೊಂಡಾಗ ಹಸು ! ಹಸು ! ಹಸದ! ಎಂದು ಕೂಗಿಕೊಂಡ ದುಶ್ಶಾಸನನ ಪರೀಕ್ಷೆ ನಡೆಯಿತು. ದ್ರೌಪದಿಯ ವಸ್ತ್ರಾಪಹರಣದ ಸಮಯದಲ್ಲಿ ನಡೆದ ಹೀನ ಪ್ರಸಂಗವನ್ನು ತಡೆಯಲು ಯತ್ನಿಸಿದ ವಿದುರನ ಪರೀಕ್ಷೆ ನಡೆಯಿತು. ಇದರೊಡನೆಯೇ ಯಾರೊಡನೆಯೂ ಆಪ್ತತ್ವವಿರದ ಕರ್ಣನ ಪರೀಕ್ಷೆಯೂ ಸಹ ನಡೆಯಿತು. ಅದರಲ್ಲಿ ಅವನು ಹೀನನೆಂದು ಕಂಡುಬಂದ. ದ್ರೌಪದಿಯನ್ನು ಎಳೆದು ಸಭೆಗೆ ತರಲಾಗಿತ್ತು. ಅವಳು ದಾಸಿಯು ಅಹುದೋ? ಅಲ್ಲವೋ ? ಇದರ ಚರ್ಚೆಯು ನಡೆದಿತ್ತು. ದುರ್ಯೋಧನನ ತಮ್ಮನಾದ ವಿಕರ್ಣ ಎದ್ದುನಿಂತು "ಈ ರೀತಿ ಸತಿಯನ್ನು ಸಭೆಗೆ ಎಳೆದು ತರುವುದು ತರವಲ್ಲ, ಅವಳು ದಾಸಿಯಾಗಲಾರಳು" ಎಂದು ಅಂದಿದ್ದ. ಆಗ ಕರ್ಣ, ಕ್ರೋಧಾವಿಷ್ಟನಾಗಿ ಎದ್ದು ನಿಂತು ವಿಕರ್ಣನನ್ನು ಜರೆದನು. "ಐವರ ಹೆಂಡತಿಯಾದ ಇವಳು ಎಂಥ ಪತಿವ್ರತೆ? ಇವಳು ಸ್ವೈರಿಣಿಯೆ ಸರಿ ! ಇವಳನ್ನು ಸಭೆಯಲ್ಲಿ ಎಳೆದುತಂದಿದ್ದು ಅನುಚಿತವೇನಲ್ಲ. ಇವರೆಲ್ಲರೂ ತಮ್ಮ ಸರ್ವಸ್ವವನ್ನೂ ಸೋತಿದ್ದಾರೆ. ಅವರು ದಾಸರಾಗಿದ್ದಾರೆ. ಅವರ ಉಡುಪಿನ ಮೇಲೆಯು ಅವರ ಅಧಿಕಾರವಿಲ್ಲ. ಅವರ ವಸ್ತ್ರಗಳನ್ನು ಕಳಚಿರಿ" ಎಂದು ಅರಚಿದನು. ಈ ನುಡಿಯನ್ನು ಕೇಳಿ ಪಾಂಡವರು ತಾವು ತೊಟ್ಟ ಬಟ್ಟೆಗಳನ್ನು ಬಿಚ್ಚಿಹಾಕಿ ಸಭೆಯಲ್ಲಿ ಕುಳಿತರು. ದುಶ್ಶಾಸನ ಕರ್ಣನ ಹೇಳಿಕೆಯಿಂದ ದ್ರೌಪದಿಯ ವಸ್ತ್ರಗಳನ್ನು ಎಳೆಯಲು ಪ್ರಾರಂಭಿಸಿದನು. ಕರ್ಣ ಎದ್ದು ನಿಂತು ಮಾತನಾಡುವವರೆಗೆ ಬರಿಯ ಚರ್ಚೆಯೇ ನಡೆದಿತ್ತು. ಆದರೆ ಆತನೆಂದದ್ದು ದ್ರೌಪದಿಯ ಮಾನಹಾನಿಯನ್ನು ಮಾಡಲು ನೇರವಾಗಿ ಪ್ರೋತ್ಸಾಹಿಸಿದಂತಾಯಿತು. ಆಸ್ತಿಪಾಸ್ತಿಗಾಗಿ, ರಾಜ್ಯದ ಪಾಲಿಗಾಗಿ, ಪುರುಷ ಪುರುಷರಲ್ಲಿ ಜಗಳ ಬಂದರೆ ಅದನ್ನು ಯುದ್ಧದಿಂದ ನಿವಾರಿಸಬೇಕು. ಇಲ್ಲವೇ ದ್ಯೂತವಾಡಿ ನಿವಾರಿಸಬೇಕು. ಆದರೆ ಈ ನೆವದಿಂದ ಸೋತವರ ಹೆಂಡತಿಯ ಅವಮಾನವನ್ನು ತುಂಬಿದ ಸಭೆಯಲ್ಲಿ ಮಾಡುವ ಅಗತ್ಯವಿರಲಿಲ್ಲ. ಕರ್ಣನು ಸೂತನೋ ? ಕ್ಷತ್ರಿಯನೋ ? ಎಂಬ ಪ್ರಶ್ನೆಯು ಆಗ ಬಂದಿರಲಿಲ್ಲ. ಸಾಮಾನ್ಯ ಮಾನವ ಧರ್ಮದ ಪ್ರಶ್ನೆಯಿತ್ತು. ಅದು ಕಟ್ಟಳೆಯದೂ ಆಗಿರಲಿಲ್ಲ. ಓರ್ವ ಕುಲಸ್ತ್ರೀಯ ಮಾನಭಂಗವನ್ನು ಮಾಡಬೇಕೋ ? ಇಲ್ಲವೋ? ಎಂಬ ಸುಲಭ ಪ್ರಶ್ನೆಯಿತ್ತು. ಈ ಪರಸ್ಪರ ಸಹೋದರರ ನಡುವಿನ ವ್ಯಾಜ್ಯದಲ್ಲಿ ಕರ್ಣ ಈ ರೀತಿ ತಲೆಹಾಕುವುದು ಅಗತ್ಯವಿರಲಿಲ್ಲ. ಆದರೆ ಕರ್ಣ ಅದರ ಗೊಡವೆಗೆ ಹೋದ ಮುಯ್ಯಿಕ್ಕಾಗಿ ಆತನು ಸತ್ಯದ ವಿವೇಕ ಬುದ್ಧಿಯನ್ನು ಪೂರ್ತಿ ಮರೆಯುವವನೆಂದು ಸಿದ್ಧವಾಯಿತು.

ಘೋಷಯಾತ್ರೆಯ ಪ್ರಸಂಗದಲ್ಲಿಯೂ ಕೂಡ ಪುನಃ ಒಮ್ಮೆ ಕರ್ಣ ತಲೆ

ತಗ್ಗಿಸಬೇಕಾಯಿತು. ಆ ಕಾಲದಲ್ಲಿ ಪ್ರತಿಯೊಬ್ಬ ರಾಜನಲ್ಲಿ ದೊಡ್ಡ ದೊಡ್ಡ ತುರುಮಂದೆಗಳು ಇರುತ್ತಿದ್ದವು. ಈ ಮಂದೆಗಳು ರಾಜ್ಯಕ್ಕೆ ಹೊಂದಿಕೊಂಡಿದ್ದ ಕಾಡಿನಲ್ಲಿ ಇರುತ್ತಿದ್ದವು. ಇವನ್ನು ನೋಡಿಕೊಳ್ಳಲು ಪಾಲಕರು ಇರುತ್ತಿದ್ದರು. ಆಗಾಗ್ಗೆ ಸ್ವತಃ ರಾಜನು ಅವುಗಳ ನಿರೀಕ್ಷಣೆಗಾಗಿ ಹೋಗುತ್ತಿದ್ದನು. ಮೊದಲಿದ್ದ ಮಂದೆಗಳಲ್ಲಿ ಹೊಸದಾಗಿ ಜನಿಸಿದ ಕರುಗಳ ಮೇಲೆ ರಾಜಮುದ್ರೆಗಳನ್ನು ಹಾಕಲಾಗುತ್ತಿದ್ದವು. ಪ್ರಾಯಶಃ ಈ ಚಿಹ್ನೆಯು ಕಾಯಿಸಿದ ಕಂಬಿಯ ಮುದ್ರೆ ಇರಬಹುದು. ಪಾಂಡವರು ವನಕ್ಕೆಂದು ಹೋದಾಗ ಹಸ್ತಿನಾಪುರದ ಸಮೀಪದ ಕಾಡಿನಲ್ಲಿರುತ್ತಿದ್ದರು. ತುರುಮಂದೆಗಳ ನಿರೀಕ್ಷಣೆಗಾಗಿ ಮಾಡುವ ಯಾತ್ರೆಗೆ 'ಘೋಷಯಾತ್ರೆ'ಯು ಎಂದು ಹೆಸರು. ಈ ನೆವದಿಂದ ಸಂಸಾರ ಸಮೇತವಾಗಿ, ರಾಜಮೇಳದೊಂದಿಗೆ ಕಾಡಿಗೆ ಹೋಗಿ, ಅಲ್ಲಿ ನಿರ್ವಾಸಿತರಂತಿದ್ದ ಪಾಂಡವರಿಗೆ ತಮ್ಮ ಸಿರಿವಂತಿಕೆಯನ್ನು ತೋರಿ ಅವರನ್ನು ಹಿಯಾಳಿಸುವ ಉದ್ದೇಶವೇ ಕೌರವರ ಘೋಷ ಯಾತ್ರೆಯದಾಗಿತ್ತು. ಆ ಸಮಯದಲ್ಲಿ ಒಬ್ಬ ಗಂಧರ್ವನೊಡನೆ ಕಾಲು ಕೆದರಿ ಇವರ ಜಗಳವಾಯಿತು. ಈ ಜಗಳದಲ್ಲಿ ಗಂಧರ್ವರು, ಕೌರವರನ್ನು ಥಳಿಸಿ, ದುರ್ಯೋಧನನನ್ನು ಸೆರೆ ಹಿಡಿದು ಒಯ್ದರು. ಈ ಬಡಿದಾಟದಲ್ಲಿ ಕರ್ಣ ಕಾಲಿಗೆ ಬುದ್ಧಿ ಹೇಳಿ ಪಕ್ಕದಲ್ಲಿರುವ ಗ್ರಾಮದಲ್ಲಿ ಆಶ್ರಯ ಪಡೆದ. ಕೊನೆಯಲ್ಲಿ ಪಾಂಡವರೇ ಗಂಧರ್ವರಿಂದ ಕೌರವರ ಬಿಡುಗಡೆ ಮಾಡಿಸಿದರೆಂಬುದು ತಿಳಿಯುವ ಮುನ್ನವೇ ದುರ್ಯೋಧನನು ಸೆರೆಯಾದನೆಂಬ ವಾರ್ತೆಯು ಹಸ್ತಿನಾಪುರಕ್ಕೆ ತಲುಪಿತು. ಭೀಷ್ಮ ಸೈನ್ಯದೊಂದಿಗೆ ದುರ್ಯೋಧನನ ಬಿಡುಗಡೆಗಾಗಿ ಹೊರಟಿದ್ದ. ಅಷ್ಟರಲ್ಲಿ ಭೀಷ್ಮನಿಗೆ ಕರ್ಣನು ಸಿಕ್ಕಿದ. ಕರ್ಣ "ದುರ್ಯೋಧನ ಎಲ್ಲಿ ಹೋಗಿದ್ದಾನೆ? ಅವನು ಹೇಗಿದ್ದಾನೆ ?" ಮುಂತಾಗಿ ವಿಚಾರಿಸಿದನು. ಭೀಷ್ಮನು ಕೂಡಲೇ "ರಾಜನು ಬದುಕಿದ್ದಾನೆಯೇ ? ಎಂದು ಕೇಳಲು ನಿಜ ಸ್ವಾಮಿಭಕ್ತನು ಬದುಕಿರುವುದೇ ಇಲ್ಲ. ರಾಜನನ್ನು ಆಪತ್ತಿನಲ್ಲಿ ಬಿಟ್ಟು ನೀನು ಓಡಿ ಬಂದುದೇಕೆ? ನಿನ್ನ ರಾಜನಲ್ಲಿಯ ಪ್ರೀತಿಯ ಡಾಂಭಿಕತನದ್ದಿದೆ" ಎಂದು ಉತ್ತರಿಸಿದನು. ಕರ್ಣನು ದುರ್ಯೋಧನನ ಮಿತ್ರನೆಂದು ಸಂಬಂಧವನ್ನು ಪಡೆದಿದ್ದನು. 'ನಾನು ಯಾರು?' ಎಂಬುದರ ಉತ್ತರದಲ್ಲಿ ಆತನು ದುರ್ಯೋಧನನ ಮಿತ್ರನೆಂದು ಭಾವಿಸಿದ್ದನು. ಆದರೆ ಈ ಪ್ರಸಂಗದಿಂದ ಮತ್ತು ಭೀಷ್ಮನ ಧಿಕ್ಕಾರದಿಂದ ಆತನ ಕಠಿಣ ಪರೀಕ್ಷೆ ನಡೆದು ಅದರಲ್ಲಿ ಆತನು ಉತ್ತೀರ್ಣನಾಗಲಿಲ್ಲ.

ಇನ್ನೊಂದು ಪ್ರಸಂಗವೆಂದರೆ ಗೋಗ್ರಹಣದ ಸಮಯದ್ದು. ಆ ವೇಳೆಯಲ್ಲಿ ಅರ್ಜುನ ಒಬ್ಬೊಂಟಿಗನಿದ್ದು ಕೌರವರ ಪರಿಯಿಂದ ಹಿರಿಯ, ಕಿರಿಯರೆಲ್ಲ ವೀರರು ಇದ್ದರು. ಅಲ್ಲಿಯೂ ಕರ್ಣನ ಆಟವು ಅರ್ಜುನನ ಮುಂದೆ ನಡೆಯಲಿಲ್ಲ. ಅರ್ಜುನ ಎಲ್ಲರನ್ನು ಜಯಿಸಿದ್ದ. ಅದಲ್ಲದೇ ಅವರ ಒಳ್ಳೆಯ ನಯವಾದ ವಸ್ತ್ರಗಳನ್ನು ದೋಚಿಕೊಂಡು "ಉತ್ತರೆಯ ಬೊಂಬೆಗಾಗಿ" ಎಂದು ತಂದು ಕೊಟ್ಟ. ಈ ಸಂಗತಿಯನ್ನು ಒಂದು ಸಮಯ ಬದಿಗಿಟ್ಟರೂ ಅರ್ಜುನ ಕೌರವರನ್ನು ಹೊಡೆದೋಡಿಸಿ ವಿರಾಟನ ಹಸುಗಳನ್ನು ಅವರಿಂದ ಬಿಡಿಸಿದ, ಎಂಬುದರಲ್ಲಿ ಸಂದೇಹವಿಲ್ಲ.

“ಇನ್ನು ಯುದ್ಧವು ಬೇಡ ! ರಾಜನನ್ನು ಮಧ್ಯದಲ್ಲಿರಿಸಿಕೊಂಡು ಹಿಂದಿರುಗಿರಿ” ಎಂಬ ಭೀಷ್ಮನ ಸೂಚನೆಯನ್ನು ಎಲ್ಲರೂ ಪಾಲಿಸಬೇಕಾಯಿತೆಂಬ ಕುಂಟುನೆವವು ಈ ಪ್ರಸಂಗದಲ್ಲಿಯೂ ಕರ್ಣನಿಗೆ ಇದೆ. ಆದರೆ ಅದಕ್ಕೆ ಬೆಲೆ ಇಲ್ಲ. ಕೌರವರು ವಿರಾಟನ ರಾಜ್ಯದಲ್ಲಿ ನುಗ್ಗಿದ್ದರು. ಹಸುಗಳನ್ನು ವಶಮಾಡಿಕೊಳ್ಳುವುದು ಅವರ ಉದ್ದೇಶವಿತ್ತು. ಆ ಉದ್ದೇಶ ಸಾಧ್ಯವಾಗಿರದಿದ್ದರೆ. ಪರರಾಜ್ಯದಲ್ಲಿ, ಪರಪ್ರಾಂತದಲ್ಲಿ ಅವರಿಗೆ ಅನರ್ಥ ಉಂಟಾಗಬಹುದಿತ್ತು. ಈ ತರಹದ ಕೊಳ್ಳೆ ಹಾಕುವುದನ್ನು ಲಗುಬಗೆಯಿಂದ ಪೂರೈಸಬೇಕಾಗುತ್ತದೆ.

ದೀರ್ಘ ಯುದ್ಧಕ್ಕೆ ಸಮಯವಿರುವುದಿಲ್ಲ. ಹೆಚ್ಚು ಹೊತ್ತು ಕಳೆದಷ್ಟು ಶತ್ರುವಿಗೆ ಅಧಿಕ ಸೇನೆಯನ್ನು ತರುವುದು ಸುಲಭ. ಆ ಕಾರಣ ಬೇಗನೆ ಹೊರಟುಹೋದರೂ ಕ್ಷೇಮಕರವಿತ್ತು. ಇವೆಲ್ಲವುಗಳನ್ನು ಪರಿಶೀಲಿಸಿದರೂ ಅರ್ಜುನ ತನ್ನ ಚಾತುರ್ಯದಿಂದ, ಸೈನ್ಯದಿಂದ ಸುತ್ತುಗಟ್ಟಲ್ಪಟ್ಟ ವಿರಾಟನ ಹಸುಗಳನ್ನು ಬಿಡಿಸಿದ. ಹಸುಗಳ ಮಾರ್ಗವನ್ನು ನಿರಾತಂಕ ಮಾಡಿ, ಕೌರವರಿಗೂ ತನ್ನ ಕೈಚಳಕವನ್ನು ತೋರಿಸಿ, ಅವರು ಹಿಂದಕ್ಕೆ ಓಡಿಹೋಗದೇ, ಬೇರೆ ವಿಧಿ ಇಲ್ಲದಂತೆ ಮಾಡಿದನೆಂಬುದರಲ್ಲಿ ಸಂದೇಹವಿಲ್ಲ. ಅರ್ಜುನನಿಗೆ ಹೇಡಿಯಾದ ಸಾರಥಿಯು ಸಿಕ್ಕಿದರೂ, ರಥದಲ್ಲಿಂದ ಯುದ್ಧ ಮಾಡುವ ಮಹಾರಥಿಯ ಕೌಶಲ್ಯವನ್ನು ಆತನು ತೋರಿಸಿದನು. ಕರ್ಣ ಅರ್ಜುನನಿಗಿಂತ ಕನಿಷ್ಠನೆನಿಸಿದ್ದನು.

ಕರ್ಣನ ಕಥೆಯಲ್ಲಿ ಅಲ್ಲಲ್ಲಿ ಸೂರ್ಯನ ಉಲ್ಲೇಖವು ಅನಾವಶ್ಯಕವಾಗಿ ಬಂದಿದೆ. “ಕವಚ ಕುಂಡಲಗಳನ್ನು ಬೇಡಲು ಇಂದ್ರನು ಬಂದರೆ ನೀನು ಅವನ್ನು ಆತನಿಗೆ ಕೊಡಬೇಡ” ಎಂದು ಸೂರ್ಯ ಕರ್ಣನಿಗೆ ಹೇಳಿದ್ದನಂತೆ! ಅದರಂತೆಯೇ ಕುಂತಿಯು ಕರ್ಣನಿಗೆ “ನೀನು ನನ್ನ ಮಗ” ಎಂದು ಹೇಳಿದ್ದಾಗ, ಸೂರ್ಯ “ಕುಂತಿಯು ಹೇಳುವುದು ನಿಜ. ಕರ್ಣನೇ ! ತಾಯಿಯು ಮಾತನ್ನು ಕೇಳು” ಎಂದು ನುಡಿದನಂತೆ ! ! ಕರ್ಣನು ಇವೆರಡಕ್ಕೂ ಕಿವಿಗೊಡಲಿಲ್ಲ. ಕಥೆಯ ಪರಿಪೋಷಕತೆಯ ದೃಷ್ಟಿಯಿಂದ ಸೂರ್ಯನ ಈ ಭಾಷಣಗಳು ಉಪಯೋಗ ಇಲ್ಲದವೂ, ಅವಾಸ್ತವವೂ ಅನಿಸುತ್ತವೆ. ಮಗನ ಯೋಚನೆ ಸೂರ್ಯನಿಗೆ ಇಷ್ಟೊಂದು ಇದ್ದರೆ, ಶಸ್ತ್ರರಂಗದ ಸಮಯದಲ್ಲಿ “ಈತ ನನ್ನ ಮಗ” ಎಂದು ಏಕೆ ಬಾಯಿ ಬಿಡಲಿಲ್ಲ? ಈ ರೀತಿಯ ಆಕಾಶವಾಣಿಯಿಂದ ಕರ್ಣನ ಕ್ಷತ್ರಿಯತ್ವವು ಪ್ರಕಟವಾಗದಿದ್ದರೂ ಆತನು ದೇವ ಪುತ್ರನೆಂದು ಸಿದ್ಧವಾಗುತ್ತಿತ್ತು.

ಕರ್ಣ ಸೂರ್ಯೋಪಾಸಕನೇಕೆ? ಎಂಬುದು ತಿಳಿಯುವುದಿಲ್ಲ. ಕರ್ಣಕುಂಡಲಗಳನ್ನು ಕೊಡುವುದಿದ್ದಲ್ಲಿ ಕಿವಿಗಳನ್ನು ಕಿತ್ತು ಕೊಡಬೇಕಿತ್ತು. ಆದರೆ ಸಹಜ ಕವಚವನ್ನು ದೇಹದಿಂದ ಸುಲಿದು ನೆತ್ತರು ಹರಿಯುತ್ತಿದ್ದರೂ ಕೊಟ್ಟ. ಇದರ ನಿಜಾರ್ಥವೇನಿರಬಹುದು? ಸಹಜ ಕವಚ ಕಳೆದುಕೊಂಡ ನಂತರವೂ ಕರ್ಣನು ಯುದ್ಧದಲ್ಲಿ ಕವಚವಿಲ್ಲದೆಯೇ ಯುದ್ಧಮಾಡಲಿಲ್ಲ. ಅರ್ಜುನನ ಶರಗಳಿಂದ ಆತನ ಕವಚವು ಸೀಳಿದ ವರ್ಣನೆ ಇದೆ. ಅನ್ಯರಲ್ಲಿ ಇರದೇ ಇದ್ದದ್ದನ್ನು ಕರ್ಣ ಪಡೆದಿದ್ದ. ಆದ್ದರಿಂದಲೇ ತಾನು ಸೂತಪುತ್ರನಲ್ಲವೆಂದು ಅವನು ಅರಿತುಕೊಂಡಿದ್ದ. ಕವಚಕುಂಡಲಗಳನ್ನು ಹೊಂದಿ ಅವನು ಅಜೇಯನಾಗಿದ್ದನೋ? ಅದನ್ನು ದಾನಮಾಡಿ

ತನ್ನ ಮರಣವನ್ನು ಎಳೆದುಕೊಂಡನೋ? ಕವಚಕುಂಡಲಗಳನ್ನು ಧರಿಸಿದಾಗಲೂ, ದ್ರೌಪದಿ ಸ್ವಯಂವರ ಕಾಲದಲ್ಲಿ, ಘೋಷಯಾತ್ರೆ ಕಾಲದಲ್ಲಿ, ಗೋಗ್ರಹಣ ಕಾಲದಲ್ಲಿ, ಆತ ಪರಾಭವ ಹೊಂದಿರಲಿಲ್ಲವೇ? ಹೀಗಿರುವಾಗ ಈ ರೀತಿಯ ಉತ್ಕಟ ದಾನಶೂರತೆಯು ಏಕೆ? 'ನಾನು ಯಾರು?' ಎಂಬುದನ್ನು ಕಂಡುಹಿಡಿಯಲು ಇರಬಹುದೆ? ತನ್ನ ಪ್ರಭಾವವನ್ನು ಅನ್ಯರ ಮೇಲೆ ಬೀರುವ ಅಗತ್ಯವು ಆತನಿಗೆ ಅನಿಸುತ್ತಿತ್ತು. ಆತನ ಮನಸ್ಸಿನಲ್ಲಿಯ ಅಸ್ವಸ್ಥತೆಯೇ ಆಗಲೀ, ಆತನ ಸಮಾಜದಲ್ಲಿಯ ಅಸ್ಥಿರಸ್ಥಾನವೇ ಆಗಲೀ, ಅದರ ಮೂಲಕ ಉಂಟಾದ ಎದೆಗುದಿಯ ಪರಿಣಾಮ ಇರಬಹುದೇ? ಕರ್ಣನ ಪ್ರತಿಯೊಂದು ಕೃತಿಯು ಸಾಮಾನ್ಯ ಮಟ್ಟವನ್ನು ಮೀರಿಸಿದಂತೆ ಕಂಡುಬರುತ್ತದೆ. ಶಸ್ತ್ರರಂಗದಲ್ಲಿ ಆತ ತನ್ನ ನೈಪುಣ್ಯವನ್ನು ಪ್ರದರ್ಶಿಸಿದ್ದು ಉಚಿತವಿತ್ತು. ಆದರೆ ಅಲ್ಲಿ ಅರ್ಜುನನನ್ನು ದ್ವಂದ್ವಕ್ಕೆ ಆಹ್ವಾನಿಸಿದ್ದು ಅತಿ ಪ್ರಸಂಗವೇ ! ದ್ರೌಪದಿ ವಸ್ತ್ರಾಪಹರಣ ಕಾಲದಲ್ಲಿಯೂ ಹಾಗೇ ಕಂಡುಬರುತ್ತದೆ. ಪಾಂಡವರ ಮಾನಹಾನಿ ಅಂತು ನಡೆಯುತ್ತಲೇ ಇತ್ತು. ಕರ್ಣ ತಲೆಹಾಕುವ ಕಾರಣವಿರಲಿಲ್ಲ. ಆದರೆ ಅವನು ಸುಮ್ಮನಿರದೇ ಹೋದ. ದುಷ್ಕೃತಿಗಳಲ್ಲಿ ಮಾತ್ರವಲ್ಲದೆ, ಸತ್ಕೃತಿಗಳಲ್ಲಿಯೂ ಜನಸಾಮಾನ್ಯರ ಮಟ್ಟವನ್ನು ಮೀರಿಸಲು ಆತ ಕಾತರನಾಗಿದ್ದನು.

ಕರ್ಣನ ಜೀವನದಲ್ಲಿ ಕೆಲವು ಭಾಗ್ಯದ ಕ್ಷಣಗಳು ಚಿರಸ್ಮರಣೀಯವೆನಿಸಿದವು. ಯಾವ ಸಮಯದಲ್ಲಿಯಾದರೂ ಆತನಿಗೆ ಪರಮಸುಖ, ಪರಮಭಾಗ್ಯ, ಪರಮ ಸನ್ಮಾನ ಲಭಿಸಿತೆಂದಲ್ಲ. ಲೌಕಿಕದಲ್ಲಿ ಆತ ಸೂತನೆಂದೇ ಉಳಿದನು. ಆದರೆ ಆತನ ಮನೋವ್ಯಥೆಯು ಇಲ್ಲದಂತಾಗುವ ಆ ಕ್ಷಣಗಳಿದ್ದವು. 'ತಾನು ಯಾರು?' ಎಂಬುದರ ಅರಿವು ಆಯಿತು. ಆಕ್ಷಣಗಳಲ್ಲಿ ಆತ ಆ ಉತ್ತರಗಳಿಂದ ಉದ್ಭವಿಸಬಹುದಾದ ತೊಡಕುಗಳಿಂದ ಉದಾತ್ತವಾಗಿ ತನ್ನ ಬಿಡುಗಡೆಯನ್ನು ಮಾಡಿಕೊಂಡ. ಕರ್ಣನ ಗತಜೀವನದಲ್ಲಿ, ಹಾಗೆಯೇ ಅನಂತರದ ಜೀವನದಲ್ಲಿ ಮನಸ್ಸಿನ ತೊಳಲಾಟವು ಕಾಣುತ್ತದೆ. ಆದರೆ ಈ ಎರಡು ಪ್ರಸಂಗದಲ್ಲಿಯ ಆತನ ಹೇಳಿಕೆ ಮತ್ತು ಆತನ ಕೃತಿ ಇವುಗಳ ವಿಚಾರದಲ್ಲಿ ಅಸಾಮಾನ್ಯ ನಿಖರತೆಯು ಕಂಡುಬರುತ್ತದೆ. ಈ ಪ್ರಸಂಗಗಳ ಸಂದರ್ಭದಲ್ಲಿ ಸಂದೇಹ–ಗಜಿಬಿಜಿಗೆ ಅವಕಾಶವಿಲ್ಲ. ಮನಸ್ಸಿನ ಕಲಕು–ಮಲಕು ಇಲ್ಲದಂತಾಗಿ ಅದು ನಿರ್ಮಲವಾದ ಕನ್ನಡಿಯಂತೆ ಆಗಿದೆ. ಈ ಪ್ರಸಂಗದ್ವಯಗಳು ಜನಸಾಮಾನ್ಯರ ಮಟ್ಟದವಾಗಿವೆ. ಅವುಗಳಲ್ಲಿ ಕರ್ಣನ ಕಠಿಣ ಪರೀಕ್ಷೆ ನಡೆಯಿತು. ಆ ಪರೀಕ್ಷೆಯಲ್ಲಿ ಆತ ಸಾಮಾನ್ಯರಂತೆಯೇ ವರ್ತಿಸಿದ. ಅದರಲ್ಲಿ ಯಾವ ರೀತಿಯಿಂದಲು ದೈವೀ, ಅತಿಮಾನವೀ, ಅತ್ಯುದಾತ್ತ ಪ್ರಕಾರವಿರಲಿಲ್ಲ. ಆಗ್ಗೆಯೂ ಆತನಲ್ಲಿಯ ನಿರಾಶೆ, ಕ್ರೋಧಗಳು ವ್ಯಕ್ತವಾಗಿವೆ. ಆದರೆ ಅದನ್ನು ವ್ಯಕ್ತಮಾಡುವ ದೈನ್ಯ ಕಾಣುವುದಿಲ್ಲ. ಕೃಷ್ಣ , ಆತನಿಗೆ "ನೀನು ಪಾಂಡವರ ಪಕ್ಷವನ್ನು ಸೇರು" ಎಂದು ಒತ್ತಾಯ ಪಡಿಸಿದ ಪ್ರಸಂಗ. ಎರಡನೆಯದಾಗಿ ಕುಂತಿಯು ಆತನಿಗೆ ತನ್ನ ಗುರುತನ್ನು ಮಾಡಿಕೊಟ್ಟ ಪ್ರಸಂಗ. ಕೃಷ್ಣ ಎಂದೂ ಇಲ್ಲದ ಪ್ರಲೋಭನೆಗಳನ್ನು ಮುಂದಿಟ್ಟ. ಯಾವುದಕ್ಕಾಗಿ ಕರ್ಣ ಆಜನ್ಮವೂ ಶ್ರಮಿಸಿದನೋ ಅದೆಲ್ಲವನ್ನೂ, ಅಲ್ಲದೇ ಆತನ ಊಹೆಗಿಂತ ಹೆಚ್ಚಾಗಿ ಆತನಿಗೆ ಕೃಷ್ಣ ಕೊಡ

ಬಯಸಿದ. ಆತನು ಕ್ಷತ್ರಿಯನೆಂದು ಪ್ರಕಟವಾಗುತ್ತಿತ್ತು. ಆಗಿನ ಶ್ರೇಷ್ಠ ಕುಲದವನೆಂದು ಗೌರವ ಲಭಿಸುವಂತಿತ್ತು. ರಾಜ್ಯವು ದೊರಕುವಂತಿತ್ತು. ಯಾರೊಂದಿಗೆ ಜೀವನವೆಲ್ಲ ಹಗೆತನವನ್ನು ಬಯಸಿದ್ದಾಯಿತೋ, ಅವರು ಸೇವಕರಂತೆ ಕೈ ಜೋಡಿಸಿ ಕೊಂಡು ಈತನ ಮುಂದೆ ನಿಲ್ಲುವಂತಿತ್ತು. ಆದರೆ ಇವೆಲ್ಲವುಗಳಿಗೆ ಕರ್ಣ ತಿಲಾಂಜಲಿಯನ್ನು ಕೊಟ್ಟ. ಅದು ಕೂಡ ಬಹಳ ಸುಲಭವಾಗಿ ; ಬಹಳ ಹೊತ್ತು ಯೋಚಿಸದೇ ; ಯಾರನ್ನೂ ದೂಷಿಸದೇ : ಕೃಷ್ಣನಿಗೆ ಎದುರುತ್ತರಗಳು ಕೊಡದೇ "ಕೃಷ್ಣನೇ ನೀನು ಹೇಳುವುದೆಲ್ಲವೂ ಸಾಧ್ಯವಿಲ್ಲ. ನನ್ನ ಜೀವನವೆಲ್ಲವೂ ಸೂತರಲ್ಲಿಯೇ ಕಳೆಯಿತು. ನನ್ನ ಮತ್ತು ನನ್ನ ಮಕ್ಕಳ ನೆಂಟಸ್ಥರೆಲ್ಲರೂ ಸೂತರೇ ಆಗಿದ್ದಾರೆ. ಅವರನ್ನು ಬಿಟ್ಟು ಬರುವದು ಅಸಾಧ್ಯ. ನನಗೆ ರಾಜ್ಯವು ದೊರಕಿದರೂ ಅದನ್ನು ದುರ್ಯೋಧನನಿಗೆ ಅರ್ಪಿಸುವೆನು. ಕೃಷ್ಣನೇ ಹೋಗು ನನ್ನ ಮನಸ್ಸನ್ನು ಬದಲಾಯಿಸಲು ಯತ್ನಿಸಬೇಡ." [ಕರ್ಣನ ಈ ಹೇಳಿಕೆಯ ನಂತರ, ಕೃಷ್ಣನು ದೇವನೆಂದೂ ಆತನನ್ನೂ ಸ್ತುತಿಸಿದ್ದು ಪಾಂಡವರು–ಅಜೇಯರು, ಕೌರವರೆಲ್ಲರೂ ಹತರಾಗುವವರು, ಇದೆಲ್ಲವೂ ನಿಶ್ಚಿತವಾದಂತಿದೆ ಎಂಬ ಮತಿತಾರ್ಥದ ಪ್ರದೀರ್ಘವಾದ ಕರ್ಣನ ಭಾಷಣೆಯು ಪ್ರಕ್ಷಿಪ್ತವೆನಿಸುತ್ತದೆ.]

'ನಿನ್ನ ಹಣೆಬರಹದಂತಾಗಲಿ' ಎಂದು ನುಡಿದ ಕೃಷ್ಣ ಹೊರಟು ಹೋದ. ಈ ಸಂದರ್ಭದಲ್ಲಿ ಕರ್ಣ ಅಸಾಮಾನ್ಯನು, ನಿಜಮಿತ್ರನು, ದತ್ತು ಹೋದ ಮನೆತನಕ್ಕೆ ಪ್ರೀತಿ–ನಿಷ್ಠೆಗಳನ್ನು ತೋರಿಸುವವನು, ಯಾವುದೇ ತರಹದ ರುಶುವತ್ತಿಗೂ ಬಲಿ ಬೀಳದವನು ಮುಂತಾದ ವಿವಿಧ ಗುಣಗಳಿಂದ ಎದ್ದು ಕಾಣುತ್ತಾನೆ. ಇನ್ನಿತರ ಪ್ರಸಂಗಗಳಲ್ಲಿ ಕಂಡುಬರುವ ಆತನ ದುಡುಕು, ಹಿಯಾಳಿಕೆ ಇವುಗಳ ಅಸ್ತಿತ್ವವೂ ಈ ಸಂದರ್ಭಗಳಲ್ಲಿ ಕಾಣುವುದಿಲ್ಲ.

ಎರಡನೆಯ ಪ್ರಸಂಗವು ಕುಂತಿಯೊಡನೆ ನಡೆದ ಮಾತು ಕತೆಯದು. ಅದರಲ್ಲಿ ಕ್ರೋಧವಿದೆ, ವಿಫಲತೆಯ ಕೊರಗಿದೆ. ಆದರೆ ಹೀನತೆ ಇಲ್ಲ. ಮಾತನ್ನು ಬೆಳೆಸಬಹುದಿತ್ತು. ಕುಂತಿಯ ಮೂಲಕ ಕರ್ಣ ಎಷ್ಟೊಂದು ದುಃಖಗಳನ್ನು ಅನುಭವಿಸಬೇಕಾಯಿತು? ಎಂಬುದನ್ನು ದೀರ್ಘವಾಗಿ ಬಣ್ಣಿಸಬಹುದಿತ್ತು. ಆದರೆ ಈ ಪ್ರಸಂಗವನ್ನು ಸ್ವಲ್ಪದರಲ್ಲಿ ಬಣ್ಣಿಸಲಾಗಿದೆ. ಹೆಚ್ಚಾಗಿ ಕರ್ಣನೇ ಮಾತನಾಡಿದ್ದಾನೆ. ಕುಂತಿಯು ಉತ್ತರ ಕೊಡಲು ಅಸಮರ್ಥಳಿದ್ದಳು. ಅವಳು ಕರ್ಣನನ್ನು ಗಂಗಾತೀರದಲ್ಲಿ ಭೇಟಿಯಾದಳು. ಕರ್ಣ, ಸೂರ್ಯೋಪಾಸನೆಯನ್ನು ಮುಗಿಸಿದ. ಆಕೆಗೆ ನಮಸ್ಕರಿಸಿ, ಬಂದ ಉದ್ದೇಶವನ್ನು ಕೇಳಿದ. ಕುಂತಿ ಆತನ ಜನ್ಮ ವೃತ್ತಾಂತವನ್ನು ತಿಳಿಸಿ ; "ಈಗ ನೀನು ಪಾಂಡವರವನಾಗು. ಅವರು ನಿನ್ನ ಸಹೋದರರು. ಕರ್ಣಾರ್ಜುನರ ಕಲಿತನವನ್ನು ಜಗತ್ತು ಕಾಣಲಿ. ನೀನು ಸೂತನಲ್ಲ. ಶೂರ ನೆಂದೆಣಿಸು" ಎಂದು ಮುಂತಾಗಿ ಹೇಳಿದಳು. [ಈ ಪ್ರಸಂಗದಲ್ಲಿ ಮೂರು ಶ್ಲೋಕಗಳು ತೂರಿಸಿದಂತಿವೆ. ಅವೆಂದರೆ, ಸೂರ್ಯನು ಆಕಾಶದಿಂದ ಕರ್ಣನನ್ನು ಉದ್ದೇಶಿಸಿ ಹೇಳಿದ ನುಡಿಗಳು.]

ಕರ್ಣನು ಸ್ವಲ್ಪದರಲ್ಲಿಯೇ ಸ್ಪಷ್ಟವಾಗಿ ಉತ್ತರಿಸಿದ್ದಾನೆ. ಆ ಉತ್ತರದಲ್ಲಿಯ ಒಂದು ಪಂಕ್ತಿಯು ಅರ್ಥವು ಸರಿಯಾಗಿ ವ್ಯಕ್ತವಾಗುವುದಿಲ್ಲ. **''ಧರ್ಮದ್ವಾರ ಮಮೈತತ್‌ಸ್ಯಾನ್ನಿಯೋಗ ಕರಣ ತವ''** ಇದೇ ಆ ಪಂಕ್ತಿ.

ನಿಯೋಗದ ಸಂಗತಿಯ ಮೂಲಕ ನನಗೆ ಧರ್ಮದ್ವಾರವು ತೆರವಾಯಿತು ಎಂದರ್ಥವಾಗಬಹುದು. 'ನಿಯೋಗ' ಶಬ್ದಾರ್ಥವು ರೂಢಿಗಿಂತ ಇಲ್ಲಿ ಬದಲಾಗಿದೆ. ಕರ್ಣನು, "ಅಮ್ಮ, ನೀನು ತಿಳಿಸಿದ ನಿಯೋಗದ ಸಂಗತಿಯು, ಅದರಿಂದ ನನಗೆ ಧರ್ಮದ್ವಾರವು ತೆರೆಯಿತೆಂದು ತಿಳಿದಿದ್ದಲ್ಲಿ ಅದು ತಪ್ಪು! ನಿನ್ನ ಹೇಳಿಕೆಯಿಂದ ನನಗೆ ಕ್ಷತ್ರಿಯತ್ವವು ದೊರೆಯಿತು. ಆದರೆ ಯಾವ ತರಹದ ಕ್ಷತ್ರಿಯ ಸಂಸ್ಕಾರಗಳನ್ನು ಪಡೆಯದ ಈ ಕ್ಷತ್ರಿಯತ್ವವು ಜೊಳ್ಳಾಗಿದೆ. ಜನ್ಮವೆತ್ತಿದಾಗ ಸಂಸ್ಕಾರಗಳು ಆಗಬೇಕಿತ್ತು. ಆಗ ನೀನು ನನ್ನನ್ನು ನಿರ್ದಯಳಾಗಿ ಎಸೆದುಬಿಟ್ಟೆ. ಇಂದು ಸ್ವಾರ್ಥ ಸಾಧನೆಗಾಗಿ ನನ್ನ ಹತ್ತಿರ ನೀನು ಬಂದಿರುವೆ. ಯಾವನ ಬೆಂಬಲಿಗೆ ಕೃಷ್ಣನಿರುವನೋ ಆ ಅರ್ಜುನನ ಭಯವು ಯಾರಿಗಿಲ್ಲ? ನಾನು ದುರ್ಯೋಧನನನ್ನು ತ್ಯಜಿಸಿದರೆ, ನಾನು ಭಯಪಟ್ಟು ಪಾಂಡವರನ್ನು ಕೂಡಿದೆ ಎಂದು ಕ್ಷತ್ರಿಯರು ಆಡಿಕೊಳ್ಳುವರು. ನನ್ನನ್ನು ನಂಬಿ ದುರ್ಯೋಧನನು ಯುದ್ಧಕ್ಕೆ ಅಣಿಯಾಗಿದ್ದಾನೆ. ಹೋಗು! ನೀನು ಹೇಳಿದಂತೆ ನಡೆಯುವುದು ಅಸಾಧ್ಯ. ಆದರೆ ನಾನು ಅರ್ಜುನನನ್ನು ಮಾತ್ರ ವಧಿಸುವೆ. ಇತರ ಪಾಂಡವರನ್ನು ಬಿಟ್ಟು ಕೊಡುವೆ. ಅರ್ಜುನ ನನ್ನನ್ನು ಸಾಯಿಸಿದರೆ ನನ್ನನ್ನು ಸೇರಿ ನಿನ್ನ ಐವರೇ ಮಕ್ಕಳು ಉಳಿಯುವರು. ಹೋಗು !" ಇದಕ್ಕೆ ಕುಂತಿಯು ಉತ್ತರಿಸುವುದಾದರೂ ಏನು ? "ಕೊಟ್ಟ ಮಾತನ್ನು ಪಾಲಿಸು" ಎಂದು ಹೇಳಿ ಅವಳು ಹೊರಟುಹೋದಳು. ಕರ್ಣನು ಕೃಷ್ಣನಿಗೆ ಉತ್ತರಿಸಿದಂತೆಯೇ ಈ ಉತ್ತರವಿದೆ. ಅದರಲ್ಲಿ ಆತ ಕುಂತಿಯನ್ನು ಧಿಕ್ಕರಿಸಿದ್ದಾನೆ. ಅವಳ ಕೃತಿಯಿಂದ ಆತನ ಜೀವನ ಹೇಗೆ ಹಾಳಾಯಿತೆಂದು ತಿಳಿಸಿದ್ದಾನೆ. ಯಾವ ವ್ಯಾಮೋಹಕ್ಕೂ ಒಳಗಾಗದೇ ದುರ್ಯೋಧನನನ್ನು ಬಿಡದಿರುವ ನಿಶ್ಚಯ. ಕರ್ಣನ ದೊಡ್ಡಸ್ಥಿಕೆಯನ್ನು ತೋರಿಸುತ್ತದೆ. ಹೀಗಿದ್ದರೂ ಒಂದು ಮಾತು ಮನಸ್ಸಿಗೆ ಸರಿಕಾಣುವುದಿಲ್ಲ. ಅರ್ಜುನನನ್ನು ಬಿಟ್ಟು ಬೇರೆ ಪಾಂಡವರನ್ನು ವಧಿಸುವುದಿಲ್ಲವೆಂದು ಕೊಟ್ಟ ವಚನ; ಈ ವಚನವೆಂದರೆ ಪರಮ ಉದಾರತೆ ! ಇದರಲ್ಲಿ ತಪ್ಪೇನು ?

ಇದಕ್ಕೆ ಅವಾಸ್ತವ ಉದಾರತೆ ಎನ್ನಬಹುದು. ಏನೇ ಇದ್ದರೂ ಮನಸ್ಸಿನ ಘನವಂತಿಕೆಯನ್ನೂ, ಉದಾರತೆಯನ್ನೂ ಅಲ್ಲಗಳೆಯಲಾಗದು. ಈ ಮೊದಲೇ ಹೇಳಿದಂತೆ, ಕರ್ಣ ಕೃತಿಗಳು ಹಲವು ಸಲ ಅತಿರೇಕಯುಕ್ತವಿರುತ್ತಿದ್ದವು. ಅದರಂತೆಯೇ ಈ ವಚನವು. ಕುಂತಿಯ ಬಗ್ಗೆ ಆತನಿಗೆ ಪ್ರೇಮವೆನಿಸಲಿಲ್ಲ. ಕನಿಕರವೆನಿಸಲಿಲ್ಲ. ಸಹೋದರರೆಂದು ತಿಳಿಸಲ್ಪಟ್ಟ ಪಾಂಡವರ ಬಗ್ಗೆಯು ಆತನಿಗೆ ಏನೊಂದು ಅನ್ನಿಸಲಿಲ್ಲ. 'ಇತರ ಪಾಂಡವರನ್ನು ವಧಿಸುವದಿಲ್ಲೆಂಬ ಹೇಳಿಕೆಯಲ್ಲಿಯೂ ಒಂದು ತರಹದ ಅಹಂಕಾರವಿತ್ತು. ಅವರ ಬಗ್ಗೆ ತುಚ್ಛತೆಯು ಇತ್ತು. ನನ್ನ ಸರಿಸಮಾನನನ್ನು ಮಾತ್ರ ವಧಿಸುವೆನು. ಅನ್ಯರನ್ನು ನಾನು ಗಮನಿಸುವುದಿಲ್ಲ, ಎಂದು ಹೇಳಿದಂತಿದೆ. ಈ ರೀತಿಯ ಅಹಂಕಾರವನ್ನು ಹೊಂದಿರುವುದು,

ಅನ್ಯರನ್ನು ಜರೆಯುವುದು ಕ್ಷತ್ರಿಯನಿಗೆ ತಕ್ಕ ಗುಣವೆ ! ಆದರೆ ಈ ಪ್ರಸಂಗದಲ್ಲಿ ಅದು ಯೋಗ್ಯವಾಗಿರಲಿಲ್ಲ. ಇದು ನಿಜ ಯುದ್ಧವಾಗಿತ್ತೇ ಹೊರತು ಶಸ್ತ್ರ ಸ್ಪರ್ಧೆಯಾಗಿರಲಿಲ್ಲ. ತನ್ನ ಜಂಭಕೊಚ್ಚಿಕೊಳ್ಳುವುದಕ್ಕಿಂತ ದುರ್ಯೋಧನನಿಗಾಗಿ ಜಯ ದೊರಕಿಸುವುದು ಆತನ ಕರ್ತವ್ಯವಾಗಿತ್ತು. ಇತರ ಪಾಂಡವರನ್ನು, ಅದರಲ್ಲಿ ವಿಶೇಷವಾಗಿ ಧರ್ಮನನ್ನು ವಧಿಸದಿರುವುದರಲ್ಲಿ ದುರ್ಯೋಧನನ ಕ್ಷೇಮವಿರಲಿಲ್ಲ. ಧರ್ಮನು ಹತನಾಗಿದ್ದರೂ ಇಲ್ಲವೆ ಸೆರೆಯಾಗಿದ್ದರೂ ದುರ್ಯೋಧನನಿಗೆ ವಿಜಯ ದೊರಕುವ ಸಂಭವ ಹೆಚ್ಚಿತ್ತು. ತನ್ನ ಜಂಭದಲ್ಲಿಯೇ ಕರ್ಣ ದುರ್ಯೋಧನನ ಕ್ಷೇಮವನ್ನು ಮರೆತನು ಎಂದೆನ್ನಬಹುದು. ಈ ವಚನವನ್ನು ಕೊಟ್ಟಿದ್ದು ಉದಾರತೆಯಿಂದ ಇರದೇ ಉದ್ದಾಮತನದಿಂದ ಕೊಟ್ಟಂತೆ ಇದೆ.

ಈ ರೀತಿ ಕರ್ಣನಿಗೆ 'ತಾನು ಯಾರು?' ಎಂಬುದು ತಿಳಿಯಿತು. ಆದರೆ 'ಕುಂತಿಸುತ'ನೆಂದು ಕ್ಷತ್ರಿಯತ್ವವನ್ನು ಪ್ರಕಟವಾಗಿ ಅನುಕರಿಸುವಂತಿರಲಿಲ್ಲ. ಇದನ್ನು ಕುರಿತು ಕರ್ಣ, ಲೌಕಿಕದಲ್ಲಿ ಆ ಭೂಮಿಕೆಯನ್ನು ಬಳಸಲಿಲ್ಲ. ಮನಸ್ಸಿನ ದುಗುಡವು ಇಲ್ಲದಂತಾಗಿ ನೆಮ್ಮದಿಯಿಂದ ಆತನು ಇರಬಹುದಿತ್ತು. ಯಾವ ಕ್ಷತ್ರಿಯತ್ವವನ್ನು ಪಡೆಯಲು ಆತ್ಯಂತಿಕವಾಗಿ ಶ್ರಮಿಸಿದನೋ ಅದು ದೊರಕಿತು. ಆದರೆ ಅದನ್ನು ಅಷ್ಟೇ ಸಹಜವಾಗಿ ಆತ, ಮಿತ್ರನಿಗಾಗಿ ತ್ಯಜಿಸಿದ. ಕರ್ಣ ಅಸಾಮಾನ್ಯನೆಂದು ಎಣಿಸಲ್ಪಟ್ಟ. ಈ ಒಂದು ಪ್ರಸಂಗದಿಂದ ಆತನ ಜನ್ಮವು ಸಾರ್ಥಕವಾಯಿತೆಂದೆನ್ನಬಹುದಿತ್ತು. ಆದರೆ ಈ ಪ್ರಸಂಗದ ನಂತರದ ಕೆಲವು ವಾರಗಳ ಆತನ ಜೀವನ ಪೂರ್ವದಂತೆಯೇ ಕಳೆಯಿತು. ಕರ್ಣನನ್ನು ಇತರರು ಹಿಂದೆಳೆದರು. ಕರ್ಣ ತನ್ನ ಸ್ವಕೃತಿಗಳಿಂದಲೂ ತಾನಾಗಿಯೇ ಕೆಳಮಟ್ಟಕ್ಕೆ ಇಳಿದ.

ಭೀಷ್ಮ, ರಥಿಗಳ, ಅಥಿರಥಿಗಳ ಪಟ್ಟಿಯನ್ನು ಮಾಡುವಾಗ ಕರ್ಣನನ್ನು ಅರ್ಧರಥಿಯೆಂದು ಪರಿಗಣಿಸಿದನು. ಕರ್ಣನ ದುಡುಕುತನವನ್ನು ಉಲ್ಲೇಖಿಸಿ ಆತನನ್ನು ಅರ್ಧರಥಿಯೆಂದು ಎಣಿಸಿದನು. ಕ್ಷತ್ರಿಯತ್ವ, ಸೂತತ್ವ ಮುಂತಾದ ಸಾಮಾಜಿಕ ಮೌಲ್ಯಗಳನ್ನು ಅವಲಂಬಿಸಿ ಭೀಷ್ಮನ ಹೇಳಿಕೆ ಇರಲಿಲ್ಲ. ಆದರೆ ಅವನು ಕರ್ಣನ ವೈಯಕ್ತಿಕ ಗುಣದೋಷವನ್ನು ತೋರಿಸುತ್ತಿದ್ದ. ಕರ್ಣ ಕೋಪಗೊಂಡ. ಇಡೀ ಮಹಾಭಾರತವನ್ನು ಪರೀಕ್ಷಿಸಿದಲ್ಲಿ ಭೀಷ್ಮನ ಹೇಳಿಕೆಯು ನಿಜವೆನಿಸುತ್ತದೆ. ರಥಿಯೆಂದರೆ ರಥದಲ್ಲಿ ನಿಂತು ಯುದ್ಧ ಮಾಡುವವನು. ಅದರಂತೆಯೇ ರಥವನ್ನು ಓಡಿಸುವವನು. ಕೃಷ್ಣನಿಗೆ ಅದರಂತೆ, ಭೀಮಾರ್ಜುನರಿಗೂ ಕೂಡ ಎರಡೂ ಗೊತ್ತಿದ್ದವು. ಕರ್ಣನು ಸೂತರಲ್ಲಿ ಬೆಳೆದವನು. ಆದರೆ ಆತನು ರಥವನ್ನು ಓಡಿಸುವ ಉಲ್ಲೇಖವಿಲ್ಲ. ರಥದಲ್ಲಿ ಕೂತು ಆತನು ಯುದ್ಧ ಮಾಡುತ್ತಿದ್ದನು. ರಥವನ್ನು ಓಡಿಸುವ ವಿದ್ಯೆಯು ರಥದಿಂದ ಯುದ್ಧ ಮಾಡುವವನಿಗೆ ಉಪಯುಕ್ತವಿತ್ತೆಂದು ತಿಳಿಯುತ್ತದೆ. ಓಡುತ್ತಿರುವ ರಥದಿಂದ ಗುರಿ ಸಾಧಿಸಬೇಕಾಗುತ್ತಿತ್ತು. ಇದರಲ್ಲಿ ಕರ್ಣನು ನಿಪುಣನಿರಲಿಲ್ಲವೆಂದು ಮುಂದಿನ ಸಂಗತಿಯಿಂದ ಕಂಡುಬರುತ್ತದೆ. ಭೀಷ್ಮ ಕರ್ಣರ ಈ ವಾದದ ವರ್ಣನೆಯು ಸುಸಂಬದ್ಧವಿಲ್ಲ. "ನಾನು ಸೇನಾಪತಿಯಾಗಿರುವವರೆಗೆ ಕರ್ಣನು ಯುದ್ಧಮಾಡತಕ್ಕದ್ದಲ್ಲ" ಎಂಬ ಶರತ್ತನ್ನು ಭೀಷ್ಮನು

ಹಾಕಿದನೆಂದು ಒಂದು ಕಡೆ ಹೇಳಲಾಗಿದೆ. ಭೀಷ್ಮನ ಸೇನಾಪತಿತ್ವವು ಯುದ್ಧಕ್ಕಾಗಿರದೇ ಯುದ್ಧವನ್ನು ಕೊನೆಗಾಣಿಸುವ ಕೊನೆ ಯತ್ನವಾಗಿತ್ತೆಂದು ನಾನು ಬರೆದಂತೆ ಇದ್ದರೆ ಭೀಷ್ಮನ ದೃಷ್ಟಿಯಿಂದ ಅವನು ಹಾಕಿದ ಶರತ್ತು ಅಯೋಗ್ಯವೆನಿಸುತ್ತದೆ. ಆದರೆ ದುರ್ಯೋಧನನು ಯಾವ ತಕರಾರು ಇಲ್ಲದೆ ಈ ಶರತ್ತನ್ನು ಒಪ್ಪಿದುದು ಆಶ್ಚರ್ಯವೆನಿಸುತ್ತದೆ. ಇನ್ನೊಂದೆಡೆಗೆ "ಭೀಷ್ಮನು ನಿಂತಿರುವವರೆಗೆ ನಾನು ಯುದ್ಧಮಾಡುವುದಿಲ್ಲ" ಎಂದು ಕರ್ಣನು ಕೋಪದಿಂದ ಹೇಳಿದನೆಂದು ಇದೆ. ಆತನು ಈ ತರಹ ಹೇಳಿದ್ದು ಆತನ ಸ್ವಭಾವಕ್ಕೆ ಸಲ್ಲುವಂತಿದೆ.

ಭೀಷ್ಮನ ಈ ಹೇಳಿಕೆಯನ್ನು ದ್ರೋಣ, ಪುಷ್ಟೀಕರಿಸಿದ್ದಾನೆ. ಆತ ಕೂಡ "ಪ್ರತಿಯೊಂದು ಯುದ್ಧದಲ್ಲಿ ಹಟಮಾರಿಯು, ಓಡಿ ಹೋಗುವವನು, ದಯಾಶೀಲನು, ತಪ್ಪುಮಾಡುವವನು, ಈ ಕರ್ಣನು ನನ್ನ ಮತದಂತೇ ಅರ್ಧರಥಿಯೇ ಸರಿ" ಎಂದು ಹೇಳುತ್ತಾನೆ. ಈ **ರಣೇ ರಣೇऽತಿಮಾನೀ ಚ ವಿಮುಖಶ್ಚೈವ ಹಶ್ಯನೇಃ ಘೃಣೀ ಕರ್ಣ । ಪ್ರಮಾದೀಚ ತೇನಮೇऽರ್ಧರಥೋಮತಃ** ॥ ಶಸ್ತ್ರಾಸ್ತ್ರಗಳನ್ನು ಕಲಿಸುವವನು ದ್ರೋಣನು. ಭೀಷ್ಮನದಲ್ಲವಾದರೂ ದ್ರೋಣನ ವ್ರತವನ್ನು ಗಮನಿಸಿ ಕರ್ಣನು ಆತ್ಮಶೋಧನೆಯನ್ನು ಮಾಡಿಕೊಳ್ಳಬಹುದಿತ್ತು. ತನ್ನಲ್ಲಿ ದೇಹ, ಬುದ್ಧಿಗಳ ಬಲವಿದ್ದರೂ ಪರಿಸ್ಥಿತಿಯ ಮೂಲಕ ತನಗೆ ಶಸ್ತ್ರ ಮತ್ತು ರಥವಿದ್ಯೆಯನ್ನು ಪಡೆಯಲು ಅವಕಾಶ ದೊರಕಿಲ್ಲ ಎಂಬ ಅರಿವು ಕರ್ಣನಿಗೆ ಆಗಬಹುದಿತ್ತು. ತನ್ನ ಕರ್ತೃತ್ವದ ಮೇರೆ–ಮಿತಿಗಳನ್ನು ಆತ ಅರಿಯಬಹುದಿತ್ತು. ಆದರೆ ಕರ್ಣ, ಆತ್ಮಶೋಧನೆ ಮಾಡುವಂಥವನಾಗಿರಲಿಲ್ಲ. "ನಾನು ಯಾರು?" ಎಂಬುದರ ಬಗ್ಗೆ ದೀರ್ಘಾಲೋಚನೆಯನ್ನು ಮಾಡುವವನಾಗಿರಲಿಲ್ಲ.

ಭೀಷ್ಮನ ಪತನವಾದ ನಂತರ ಕರ್ಣನು ಯುದ್ಧ ರಂಗದಲ್ಲಿ ಇಳಿದ. ಆತ ಸೇನಾಪತಿಯಾಗಬಹುದೆಂದು ಅನಿಸಿತು. "ಕರ್ಣನೇ ಸೇನಾಪತಿಯಾಗಬೇಕು, ಕರ್ಣನೇ ಸೇನಾಪತಿಯಾಗಬೇಕು !" ಎಂಬ ಜಯಘೋಷವು ಸೈನ್ಯದಲ್ಲಿ ಕೇಳಿಬಂತು. ಕರ್ಣನು ಕೂಡ ಭವ್ಯ ರಥದಲ್ಲಿ ಕುಳಿತು ವೈಭವದಿಂದ ರಣರಂಗಕ್ಕೆ ಬಂದನು. ಆದರೆ "ಎಲ್ಲರೂ ಸಮ್ಮತಿಸಿದ ದ್ರೋಣನನ್ನು ಸೇನಾಪತಿಯನ್ನಾಗಿ ಮಾಡು !" ಎಂದು ಕರ್ಣನೇ ದುರ್ಯೋಧನನಿಗೆ ಹೇಳಿದನು. ದ್ರೋಣನ ಆಧಿಪತ್ಯದಲ್ಲಿ ತುಮುಲ ಯುದ್ಧ ನಡೆದು ಇಬ್ಬದಿಯ ಅನೇಕ ದುರಂಧರ ವೀರರು ಹತರಾದರು. ಈ ಮೂರು ದಿನಗಳಲ್ಲಿ ಅರ್ಜುನನನ್ನು ವಧಿಸುವ ಅವಕಾಶವು ಕರ್ಣನಿಗೆ ದೊರೆಯಲಿಲ್ಲ, ಇಷ್ಟೇ ಅಲ್ಲದೇ ಇಂದ್ರನಿಂದ ಪಡೆದ ಅಮೋಘ ಶಕ್ತಿಯನ್ನು ಘಟೋತ್ಕಚನ ಮೇಲೆ ಪ್ರಯೋಗಿಸಬೇಕಾಯಿತು. ಈ ಮೂರು ದಿನಗಳಲ್ಲಿಯೆ ಐದಾರು ಜನ ಕೌರವ ವೀರರು ಸೇರಿಕೊಂಡು ಅರ್ಜುನನ ಮಗನಾದ ಅಭಿಮನ್ಯುವನ್ನು ರಥದಿಂದ ಕೆಳಗಿಳಿಸಿ ಕೊಂದರು.

ದ್ರೋಣ ಮಡಿದ ನಂತರ ಅಂದರೆ ಯುದ್ಧದ ಹದಿನಾರನೆಯ ದಿವಸ ಕರ್ಣ ಸೇನಾಪತಿಯಾದ. ಎರಡೂ ಪಕ್ಷಕ್ಕೆ ತುಂಬಾ ಹಾನಿಯಾಗಿತ್ತು. ಆದರೆ ಜಯವು ಪಾಂಡವರ ಪಕ್ಷಕ್ಕೆ ಒಲಿದಂತಿತ್ತು. "ಯುದ್ಧವನ್ನು ನಿಲ್ಲಿಸಿ, ಒಪ್ಪಂದವನ್ನು ಮಾಡಿಕೋ!" ಎಂದು ಅಶ್ವತ್ಥಾಮ

ದುರ್ಯೋಧನನಿಗೆ ಹೇಳುತ್ತಿದ್ದನು. ದುರ್ಯೋಧನ ಕರ್ಣನನ್ನು ಅವಲಂಬಿಸಿದ್ದನು. ಮಿಕ್ಕವರಿಗೆ ಅಸಾಧ್ಯವಾದದ್ದನ್ನು ಈತ ಸಾಧಿಸಬಹುದೆಂಬ ದೃಢನಂಬಿಕೆ ಇತ್ತು. ಮನಸ್ಸಿನಲ್ಲಿದ್ದರೂ ಈಗ ಕರ್ಣನಿಗೆ ಹಿಂತೆಗೆಯುವಂತೆ ಇರಲಿಲ್ಲ. ಈ ಬುದ್ಧಿಯು ಆತನಿಗೆ ಹೊಳೆಯಲೂ ಇಲ್ಲ. ಕರ್ಣ ಸೇನಾಪತಿಯಾದ ಮೊದಲನೆಯ ದಿನ ವಿಶೇಷವೇನೂ ಜರುಗಲಿಲ್ಲ. ಎರಡನೆಯ ದಿನ ಶಲ್ಯನನ್ನು ಸಾರಥಿಯನ್ನಾಗಿ ಬೇಡಬೇಕೆಂದು ಆತನಿಗೆ ಹೊಳೆಯಿತು. ಈ ಕಾರಣದಿಂದ ಅವನು ಬಹಳ ಅವಮಾನ ಹೊಂದಬೇಕಾಯಿತು.

ಕರ್ಣಪರ್ವದಲ್ಲಿ ಗಮನ ಸೆಳೆಯುವ ಘಟನೆಗಳು ಅನೇಕ ಇವೆ. ಅವುಗಳಲ್ಲಿಯದೇ ತೇಜೋಭಂಗದ ಘಟನೆಯು ಒಂದು. ಶಲ್ಯ ಮಾದ್ರಿಯ ಸಹೋದರ. ನಕುಲಸಹದೇವರ ಹಾಗೆಯೇ ಪಾಂಡವರ ಸೋದರಮಾವ. ದುರ್ಯೋಧನ ಶಲ್ಯನನ್ನು ಪಾಂಡವರಿಗಿಂತ ಮೊದಲು ಭೇಟಿಯಾದ, ಆ ಕಾರಣದಿಂದ ಶಲ್ಯ ಆತನ ಪಕ್ಷಕ್ಕೆ ಸೇರಿಕೊಂಡು ಆತನ ಪರವಾಗಿ ಯುದ್ಧಮಾಡುವುದಾಗಿ ಒಪ್ಪಿದ. ಅನಂತರ ಧರ್ಮ ಶಲ್ಯನ ಬಳಿಗೆ ಬಂದ. ಆತನಿಗೆ ಶಲ್ಯನು "ಏನು ಮಾಡಲಿ? ದುರ್ಯೋಧನ ಮೊದಲು ಬಂದದ್ದರಿಂದ ನನಗೆ 'ಇಲ್ಲ'ವೆಂದು ಅನ್ನುವದಾಗಲಿಲ್ಲ. ಆದರೆ ನಾನು ಕರ್ಣನ ಸಾರಥಿಯಾಗಿ ಆತನ ತೇಜೋಭಂಗವನ್ನು ಮಾಡಿ ನಿಮಗೆ ಗುಪ್ತವಾಗಿ ಸಹಾಯಮಾಡುವೆ" ಎಂದು ಹೇಳಿದ. ಈ ಎಲ್ಲಾ ಸಂಭಾಷಣೆ ಮತ್ತು ಘಟನೆ ಅಶಕ್ಯವೆನಿಸುತ್ತವೆ. ಕರ್ಣ ಶಲ್ಯನನ್ನು ಸಾರಥಿಯನ್ನಾಗಿ ಬೇಡಬಹುದೆಂಬ ಕನಸನ್ನು ಶಲ್ಯ ಕಂಡಿದ್ದನೇ ? ಗುಪ್ತವಾಗಿ ಶಲ್ಯನು ಪಾಂಡವರ ಪಕ್ಷದವನು ಎಂಬುದರಲ್ಲಿಯೂ ಹುರುಳಿಲ್ಲ. ಕರ್ಣನ ತರುವಾಯ ಪಾಂಡವರು ಶಲ್ಯನನ್ನು ಕೂಡ ಕೊಂದರು. ಮಹಾಭಾರತದಲ್ಲಿ ಮದ್ರದೇಶಕ್ಕೆ ಬಾಹ್ಲೀಕವೆಂದು ಹೆಸರಿದೆ. ಹಸ್ತಿನಾಪುರದ ಮನೆತನದ ಮತ್ತು ಬಾಹ್ಲಿಕರ ಪುರಾತನ ಸಂಬಂಧವಿತ್ತು. ಶಂತನುವಿನ ತಂದೆಯಾದ ಪ್ರತೀಪನ ಓರ್ವ ರಾಣಿಯು ಮದ್ರರ ಅಥವಾ ಬಾಹ್ಲೀಕರ ಮನೆತನದವಳಿದ್ದಳು. ಶಂತನುವಿನ ಒಬ್ಬ ಸಹೋದರ, ಸೋದರಮಾವನಿಗೆ ದತ್ತುಹೋಗಿದ್ದ. ಆತನ ಮಗ ಇಲ್ಲವೇ ಮೊಮ್ಮಗನಾದ ಸೋಮದತ್ತಿಯು ದುರ್ಯೋಧನನ ಪಕ್ಷದಿಂದ ಯುದ್ಧಮಾಡಿ ಮೃತನಾದ. ಶಲ್ಯನ ತಂಗಿ ಪಾಂಡುವಿನೊಡನೆ ವಿವಾಹವಾಗಿದ್ದಳು. ಮೂಲ ಮನೆತನದ ನೆಂಟಸ್ಥನವು ನಡೆದು ಬಂದಿತ್ತು. ಯಾವ ರೀತಿಯಲ್ಲಿ ಇತರ ಬಾಹ್ಲೀಕರು ದುರ್ಯೋಧನನ ಅಂದರೆ ಮೂಲ ಮನೆತನದ ಪಕ್ಷ ಕಟ್ಟಿ ಯುದ್ಧ ಮಾಡಿದರೋ, ಅದೇ ರೀತಿಯಲ್ಲಿ ಶಲ್ಯ ಯುದ್ಧ ಮಾಡಿದ. ಬಹುಶಃ ಇಷ್ಟೊಂದು ತುಮುಲ ಹೋರಾಟವಾಗಬಹುದೆಂದು ಆತ ಭಾವಿಸಿರಲಿಕ್ಕಿಲ್ಲ. ಆದರೆ ಆತ ಪಾಂಡವರ ವಿರುದ್ಧ ಪಕ್ಷದಲ್ಲಿ ಇದ್ದುದು ನಿಜವಿದ್ದರೂ ಯಾವ ಘಟನೆಯು ಮುಂದೆ ನಡೆಯಬಹುದೆಂದು ಆತನಿಗೆ ಗೊತ್ತಿರಲಿಲ್ಲವೋ ಅದರ ಬಗ್ಗೆ ಆತ ಧರ್ಮನಿಗೆ ಮಾತು ಕೊಡುವುದಂತೂ ತೀರಾ ಅಶಕ್ಯವೆನಿಸುತ್ತದೆ.

ಅದೇ ರೀತಿಯಾಗಿ ತೇಜೋಭಂಗದ ವರ್ಣನೆಯು ಸರಿಯೆನ್ನಿಸುವುದಿಲ್ಲ. ಒಂದೆಡೆ ಅರ್ಜುನ, ಇನ್ನೊಂದೆಡೆಗೆ ಕರ್ಣ. ಈ ರೀತಿ ಎರಡು ಪ್ರಮುಖ ವ್ಯಕ್ತಿಗಳು ಈ ಪರ್ವದಲ್ಲಿದ್ದಾರೆ.

ಅರ್ಜುನನು (ಒಂದೆರಡು ದಿನಗಳನ್ನುಳಿದು) ಸಂಶಪ್ತಕರೊಡನೆ ಇನ್ನುಳಿದ ದಿನಗಳಲ್ಲೆ ಕಾದುತ್ತಿದ್ದನು. ಈ ದಿನವೂ, ಅರ್ಧ ದಿನವರೆಗೆ ಯುದ್ಧ ಮಾಡಿ ಆತ ಪ್ರಮುಖ ಸೇನೆಯ ಶಿಬಿರಕ್ಕೆ ಮರಳಿದ. ಧರ್ಮನು ಕಾಣದೇ ಇದ್ದುದರಿಂದ ಭೀಮನಿಗೆ "ಧರ್ಮರಾಜನೆಲ್ಲಿ?" ಎಂದು ಅರ್ಜುನ ಕೇಳಿದ. ಭೀಮ ಅದಕ್ಕೆ "ಏನೊಂದು ನಿಶ್ಚಿತವಾಗಿ ಗೊತ್ತಿಲ್ಲ. ಬಹಳ ಗಾಯಗೊಂಡು ಆತ ಶಿಬಿರಕ್ಕೆ ಮರಳಿದ್ದಾನೆ. ಬದುಕಿರುವನೋ ? ಮೃತನಾಗಿರುವನೋ? ತಿಳಿದಿಲ್ಲ" ಎಂದ. ಭೀಮ ಘನಘೋರ ಸಂಗ್ರಾಮದಲ್ಲಿ ತೊಡಗಿದ್ದ. ಆತನಿಗೆ ಧರ್ಮರಾಜನ ಸಮಾಚಾರವು ನಿಜವಾಗಿ ತಿಳಿದಿರಲಿಲ್ಲವೋ? ಇಲ್ಲವೇ ಅರ್ಜುನನಿಗೆ ಚುಡಾಯಿಸುವುದಕ್ಕೆ ಈ ರೀತಿ ಆತನು ನುಡಿದನೋ ತಿಳಿಯುವುದಿಲ್ಲ. ಕೂಡಲೇ ಅರ್ಜುನನು ಶಿಬಿರದತ್ತ ಹೋದ. "ಭಲೇ ! ಕರ್ಣನನ್ನು ವಧಿಸಿ ಬಂದೆಯಾ ?" ಎಂದು ಧರ್ಮನು ಅರ್ಜುನನನ್ನು ಕೇಳಿ ಸ್ವಾಗತಿಸಿದನು. "ನಿನ್ನ ಯೋಗಕ್ಷೇಮವನ್ನು ಅರಿಯಲು ಬಂದೆ" ಎಂಬ ಅರ್ಜುನನ ಮಾತನ್ನು ಕೇಳಿ ಧರ್ಮನು ಬಹುವಾಗಿ ರೇಗಿ ಅರ್ಜುನನಿಗೆ ಬೈದನು. ಕ್ರೋಧಾವಿಷ್ಟನಾದ ಅರ್ಜುನ ಆತನ ಮೇಲೆ ಏರಿಹೋದನು. ಕೊನೆಯಲ್ಲಿ ಕೃಷ್ಣ ಇದೆಲ್ಲವನ್ನು ಗೇಲಿಮಾಡಿ ಅವರಿಬ್ಬರನ್ನು ಸಂತೈಯಿಸಿ "ಈಗ ನಡೆ ! ನಾವಿಬ್ಬರೂ ಕರ್ಣನ ಮೇಲೆ ಧಾವಿಸಿ ಹೋಗೋಣ" ಎಂದು ಹೇಳಿ ರಥವನ್ನು ಓಡಿಸಿದನು. ಇದೆಲ್ಲವೂ ತೇಜೋಭಂಗಕ್ಕಾಗಿಯೇ! ಹುರಿದುಂಬಿಸುವುದಕ್ಕಾಗಿಯೇ ! ಶಲ್ಯನು ಕರ್ಣನೊಡನೆ ಮಾತನಾಡಿದ್ದು ಇದೇ ಪ್ರಕಾರದ್ದೇ. ಶಲ್ಯನು ಬಹುಪರಿಯಾಗಿ ಬಿನ್ನೈಸಿದ ನಂತರ ಸಾರಥಿಯಾಗಲು ಒಪ್ಪಿಕೊಂಡಿದ್ದ. "ಮೂರ್ಧಾಭಿಷಿಕ್ತ ರಾಜನಾಗಿದ್ದ ನಾನು ಕರ್ಣನ ಸಾರಥಿಯಾಗಲೇ?" ಎಂಬ ಶಲ್ಯನ ನುಡಿಯಿಂದ ಕರ್ಣ ನಿಜವಾಗಿ ಅಂಗರಾಜ್ಯಾಭಿಷೇಕವನ್ನು ಹೊಂದಿದ್ದನೋ ಇಲ್ಲವೋ, ಎಂಬ ಸಂದೇಹವಾಗುತ್ತದೆ. ಶಲ್ಯ ಸಾರಥಿಯಾದ ನಂತರ ರಥಕ್ಕೆ ಬಿಳಿಯ ಕುದುರೆಗಳನ್ನು ಹೂಡಿ ಜಯಘೋಷವನ್ನು ಮಾಡುತ್ತಾ ಕರ್ಣ ಸಾಗಿದ. ಜೊತೆಯಲ್ಲಿ ಶಸ್ತ್ರಗಳಿಂದ ಹಾಗೂ ಶರಗಳಿಂದ ತುಂಬಿದ ಇನ್ನೊಂದು ರಥವಿತ್ತು. "ಅರ್ಜುನ ಎಲ್ಲಿರುವನೋ ಹೇಳಿ ! ಈಗಲೇ ಆತನನ್ನು ಯಮಸದನಕ್ಕೆ ಅಟ್ಟುವೆನು. ಆತನೂ ಕಾಣುವುದಿಲ್ಲವೇಕೆ ? ಎಲ್ಲಿ ಮರೆಯಾಗಿರುವನೋ?" ಎಂದು ಆರ್ಭಟಿಸುತ್ತಾ ಕರ್ಣ ಹೊರಟ, ಕರ್ಣನ ಈ ಆರ್ಭಟವನ್ನು ಕೇಳಿ ಶಲ್ಯ ಕರ್ಣನಿಗೆ ಚುಚ್ಚುವಂತೆ "ಎಲೈ ಕರ್ಣ ! ವ್ಯರ್ಥವಾಗಿ ಬಾಯಿಮಾತು ಬೇಡ. ಇಲ್ಲಿಯವರೆಗೂ ಅರ್ಜುನನ ಕೈಚಳಕವನ್ನು ನೀನು ಬಲ್ಲೆ ! ಘೋಷಯಾತ್ರೆಯಲ್ಲಿ ಆದದ್ದೇನು ? ಗೋಗ್ರಹಣ ಕಾಲದಲ್ಲಿ ಏನಾಯಿತು? ಅರ್ಜುನನನ್ನು ಕಾಣುತ್ತಲೇ ನೀನು ಎದೆಗುಂದುವೆ" ಎಂದು ನುಡಿದನು. ಧರ್ಮನು ಅರ್ಜುನನನ್ನು ಉದ್ದೇಶಿಸಿ ಮಾತನಾಡಿದ್ದು ಇದೇ ತರಹದ್ದು. ಬೇರೆ ಏನಲ್ಲ. ಇದೇ ಪರ್ವದಲ್ಲಿ ಹೇಳಿದಂತೆ ಅರ್ಜುನ ಅಶ್ವತ್ಥಾಮನೊಡನೆ ಯುದ್ಧ ಮಾಡುವಾಗ ಹತಬಲನಾಗಿದ್ದನ್ನು ನೋಡಿ, ಕೃಷ್ಣ ಆತನನ್ನು ಹೀಯಾಳಿಸಿ ಮಾತನಾಡಿದ್ದ. ಆ ಮಾತುಗಳನ್ನು ಕೇಳಿ ಅರ್ಜುನ ರೊಚ್ಚಿನಿಂದ ಯುದ್ಧ ಮಾಡಿದ್ದ. ರಥಿ ಸಾರಥಿಯರ ಪರಸ್ಪರ ಸಂಬಂಧದ ದ್ಯೋತಕವೇ ಇದು ಇರಬಹುದೆ ? ಈ ತರಹ

ಮಾತನಾಡುವುದು ತೇಜೋಭಂಗಕ್ಕಾಗಿ ಇರದೇ ಯೋಧನನ್ನು ರೊಚ್ಚಿಗೆಬ್ಬಿಸುವುದಕ್ಕಾಗಿ ಇರಬಹುದು.

ಈ ನಂತರದ ಶಲ್ಯನ ಮತ್ತು ಕರ್ಣನ ಸಂಭಾಷಣೆಯು ಅಯುಕ್ತ, ಭಾರತದ ಕಥೆಗೆ ಸಂಪೂರ್ಣವಾಗಿ ಅಸಂಬದ್ಧವಾಗಿ ಇದ್ದಂತೆ ಅನಂತರದ ಪುರಾಣದಲ್ಲಿಯ ರೂಢ ಕಲ್ಪನೆಗಳ ಆಧಾರದ ಮೇಲೆ ರಚಿತವಾದಂತೆ ಇರುವುದರಿಂದ, ಪ್ರಕ್ಷಿಪ್ತವೆನಿಸುತ್ತದೆ. ಕರ್ಣ ಶಲ್ಯನಿಗೆ ಆತನ ಮಾತಿಗೆ ತಕ್ಕ ಉತ್ತರವನ್ನು ಕೊಡುವುದನ್ನು ಬಿಟ್ಟು, ಮದ್ರ ಮತ್ತು ಬಾಹ್ಲೀಕ ದೇಶದ ಸ್ತ್ರೀಯರು ಯಾವ ರೀತಿಯಾಗಿ ಚರಿತ್ರಹೀನರಾಗಿದ್ದಾರೆ ಎಂಬುದನ್ನೇ ವರ್ಣಿಸಿದ್ದಾನೆ. ಕರ್ಣ ಗಾಂಧಾರ ದೇಶವನ್ನು ಕುರಿತು ನಿಂದಿಸಿದ್ದಾನೆ. ಇಡೀ ದೇಶವೇ ಆಚಾರಹೀನವಿದೆ ಎಂದು ಹೇಳಿದ್ದಾನೆ. ಕೊನೆಗಂತೂ ಕರ್ಣ ಶಲ್ಯನಿಗೆ "ಶಲ್ಯನೇ, ನೀನು ಕುಲೀನನಲ್ಲ. ನಿನ್ನ ತಲೆ ಒಡೆಯುವೆ" ಎಂದು ಹೇಳಿದನಂತೆ! ಕರ್ಣ ಎಷ್ಟೇ ಮುಂಗೋಪಿಯಾಗಿದ್ದರೂ, ಈ ತರಹದ ಮಾತನಾಡಿದ್ದು ಅಶಕ್ಯವೆನಿಸುತ್ತದೆ. ಆತನ ಇಡೀ ಜೀವನವೂ ಕೌರವರ ಸಭೆಯಲ್ಲಿ ಕಳೆದಿತ್ತು. ಕೌರವರ ಮತ್ತು ಮಾದ್ರರ ಸಂಬಂಧವನ್ನು ಆತ ಚೆನ್ನಾಗಿ ಅರಿತಿದ್ದ. ಎರಡನೆಯದಾಗಿ ಮಾದ್ರ, ಬಾಹ್ಲೀಕ ಮುಂತಾದ ಪಶ್ಚಿಮದ ರಾಜ್ಯಗಳು ಹಾಗೆಯೇ ಅಂಗ–ವಂಗ–ಕಲಿಂಗ ಮುಂತಾದ ಪೂರ್ವ ರಾಜ್ಯಗಳು ಆಚಾರ ಹೀನ, ಅನಾರ್ಯವಿದ್ದವು ಎಂಬ ಕಲ್ಪನೆಯು ಪುರಾಣದಲ್ಲಿದೆ. ಪುರಾಣ ಕಾಲದಲ್ಲಿ ಕುರು ಪಾಂಚಾಲ ದೇಶಗಳಿಗೆ ಒಂದು ವಿಶೇಷವಾದ ಧಾರ್ಮಿಕ ಸ್ಥಾನ ಲಭಿಸಿದೆ. ಇದೇ ಪ್ರದೇಶ 'ಬ್ರಹ್ಮಾವರ್ತ'ವೆಂದು ಹೆಸರುಗೊಂಡಿತ್ತು. ಆದರೆ ಈ ತರಹದ ತಿಳುವಳಿಕೆ ಮಹಾಭಾರತದಲ್ಲಿ ಎಳ್ಳಷ್ಟೂ ಕಾಣುವುದಿಲ್ಲ. ಕುರುಕುಲದವರೆಲ್ಲರೂ ಪಶ್ಚಿಮ ದೇಶದ ಕನ್ಯೆಯರನ್ನು ವಿವಾಹವಾಗಿದ್ದರು. ತಮ್ಮ ಕನ್ಯೆಯರನ್ನು ಅವರಿಗೆ ಕೊಟ್ಟು ವಿವಾಹ ಮಾಡಿದ್ದರು. ಆದ್ದರಿಂದಲೇ ಈ ಸಂಭಾಷಣೆಯು ವಿಷಮವೆನಿಸುತ್ತದೆ. ಮತ್ತು ಪ್ರಕ್ಷಿಪ್ತ ಎನಿಸುತ್ತದೆ. ಈ ವಾದದಲ್ಲಿ ಕರ್ಣ ಬಹಳ ಸಿಟ್ಟಾದುದನ್ನು ನೋಡಿ ಶಲ್ಯ ಮಾತನ್ನು ನಿಲ್ಲಿಸಿ ಆತನನ್ನು ರಣರಂಗಕ್ಕೆ ಕರೆತಂದ. ಈ ಸಂದರ್ಭದಲ್ಲಿಯೂ ಕರ್ಣನಿಗೆ ರಥಿ ಸಾರಥಿಯರ ಪರಸ್ಪರ ಸಂಬಂಧವು ಜ್ಞಾತವಿರಲಿಲ್ಲವೆಂದು ಕಾಣುತ್ತದೆ. ಹೊಸ ಬಿಳಿ ಕುದುರೆಗಳನ್ನು ತಂದು ಹೂಡಿದ ಭಾಗವು ಆನಂತರ ತೂರಿಸಿದ ಭಾಗವಿರದಿದ್ದರೆ ಮೂಢತನದ್ದೇ ಇದ್ದಂತೆ ಕಾಣುತ್ತದೆ. ಯುದ್ಧ ಪ್ರಸಂಗದಲ್ಲಿ ಪಳಗಿರುವ ಕುದುರೆಗಳು, ನಿತ್ಯ ರೂಢಿಯ ರಥ ನಿತ್ಯದ ಸಾರಥಿ ಇರುವುದು ಲೇಸು. ಎಲ್ಲವೂ ಸೇರಿ ಯುದ್ಧ ನಡೆಯುತ್ತದೆ ಎನ್ನುವುದನ್ನು ಕರ್ಣನು ಮರೆತನೇ ? ಅದೇನೆ ಇರಲಿ, ಕರ್ಣನು ಸೇನಾನಿಯಾಗಿ ಯುದ್ಧವನ್ನು ಪ್ರಾರಂಭಿಸುವ ಮೊದಲಿನ ಹೆಜ್ಜೆಯೇ ತಪ್ಪಾಯಿತೆಂದೆನ್ನಬಹುದು. ಮುಂದಿನ ಸಂದರ್ಭಗಳಿಂದಲೂ ಶಲ್ಯನು ಕರ್ಣನಿಗೆ ಪ್ರತಿಯಾಗಿ ವರ್ತಿಸಿದ್ದು ಕಾಣುವುದಿಲ್ಲ.

ಇಷ್ಟೊಂದು ಅಬ್ಬರಿಸಿದರೂ, ಕರ್ಣ ಅರ್ಜುನನಿಗೆ ಕೂಡಲೇ ಎದುರಾಗಲಿಲ್ಲ. ಭೀಮ, ದೃಷ್ಟದ್ಯುಮ್ನ ಹಾಗೆಯೇ ಅರ್ಜುನ ರಣರಂಗದಲ್ಲಿ ಹಾಹಾಕಾರವನ್ನು ಉಂಟುಮಾಡಿದ್ದರು. ಈಗ ಕರ್ಣ ಯುದ್ಧಕ್ಕೆ ಸಜ್ಜಾದನು. ತುಸು ಸಮಯದ ನಂತರ ಶಲ್ಯ ದೂರವಾಗಿದ್ದ ಅರ್ಜುನನ

ರಥವನ್ನು ಕರ್ಣನಿಗೆ ತೋರಿಸಿದನು. "ದುರ್ಯೋಧನನು ಆಜನ್ಮವೂ ನಿನಗೆ ಮಾಡಿದ ಉಪಕಾರವನ್ನು ಬಗೆಯುವ ಕ್ಷಣವು ಈಗ ಒದಗಿದೆ" ಎಂದು ಹೇಳಿ ರಥವನ್ನು ಅತ್ತ ತಿರುಗಿಸಿದನು. ಆ ಸಮಯದಲ್ಲಿ ಕರ್ಣನ ಮಗನಾದ ವೃಷಸೇನ ದ್ವೇಷದಿಂದ ಅರ್ಜುನನ ಮೇಲೆ ಏರಿ ಹೋದ. ಅರ್ಜುನ ತುಸು ಹೊತ್ತಿನಲ್ಲಿಯೇ ಕರ್ಣನ ಕಣ್ಣೆದುರಿನಲ್ಲಿಯೇ ಆತನನ್ನು ವಧಿಸಿದ. ಇಷ್ಟು ಹೊತ್ತಿಗೆ ಕರ್ಣನ ಆರ್ಭಟವು ನಿಂತು, ಅರ್ಜುನನದು ಪ್ರಾರಂಭವಾಗಿತ್ತು. ಪುತ್ರನು ಹತನಾದುದನ್ನು ಕಂಡು ಕರ್ಣನ ಕಣ್ಣಲ್ಲಿ ನೀರು ತುಂಬಿತು. ಆದರೆ ಕಣ್ಣೊರಸಿ ಆತನು ಅರ್ಜುನನಿಗೆ ಎದುರು ನಿಂತ. ಇಬ್ಬರಲ್ಲಿ ಕಾಳಗವು ನಡೆಯಿತು. ಅರ್ಜುನನದೇ ಮೇಲುಗೈಯಾಗಿತ್ತು. ಕರ್ಣ ರಕ್ತಮಯನಾಗಿದ್ದ. ಆತನ ಕವಚ ಸೀಳಿತ್ತು. ಆತ ಅರ್ಜುನನ ಅಸುವನ್ನು ಹರಣಮಾಡುವ ಅಮೋಘವಾದ ಶರವೊಂದನ್ನು ಆಯ್ದುಕೊಂಡ. ಆ ಶರದ ಮೊನೆಯಲ್ಲಿ ಸರ್ಪವಿತ್ತು. [ಸರ್ಪದ ವಿಷವನ್ನು ಲೇಪಿಸುವ ಈ ಶರವು ಅದು ಇರಬಹುದೆ?] ಕರ್ಣನು ಗುರಿ ಸಾಧಿಸಿದನು. ಶಲ್ಯ "ಅಯ್ಯಾ ! ಗುರಿಯು ಸರಿಯಿಲ್ಲ. ಈ ಶರವು ಅರ್ಜುನನ ಕತ್ತನ್ನು ಛೇದಿಸಲಾರದು" ಎಂದು ಹೇಳಿದನು. ಆದರೆ ಕರ್ಣನು ಅದಕ್ಕೆ ಕಿವಿಗೊಡದೇ ಬಿಲ್ಲನ್ನು ಎಳೆದನು. ನಾಲ್ಕು ಅಂಗುಲಗಳ ವ್ಯತ್ಯಾಸವಾಗಿ, ಬಾಣವು ಅರ್ಜುನನ ಕಿರೀಟಕ್ಕೆತಾಗಿತು.

ಈ ಪ್ರಸಂಗದ ಬಗ್ಗೆ ಪರಸ್ಪರ ವಿರೋಧ ಪ್ರದರ್ಶಿಸುವ ಉಲ್ಲೇಖಗಳಿವೆ. ಒಂದೆಡೆ ಗುರಿಯು ನಾಲ್ಕು ಆಂಗುಲಗಳಿಂದ ತಪ್ಪಿತು ಎಂದಿದೆ. ಶಲ್ಯನ ಸೂಚನೆಯು ನಿಜವೆಂದು ಗ್ರಹಿಸಿದರೆ ಸ್ವಲ್ಪದರಲ್ಲಿ ಗುರಿಯು ತಪ್ಪಬಹುದೆಂದು ಆತನು ಕಂಡುಕೊಂಡಿದ್ದನು. ಮತ್ತು ಕರ್ಣನು ಗುರಿ ಇಟ್ಟದ್ದು ಸರಿ ಇರಲಿಲ್ಲವೆಂದು ಸಿದ್ಧವಾಗುತ್ತದೆ. ಇದಕ್ಕೆ ಪ್ರತಿಯಾಗಿ "ಕರ್ಣನ ಅಮೋಘವಾದ ಬಾಣ ಬರುತ್ತಿದ್ದುದನ್ನು ಕಂಡು ಕೃಷ್ಣನು ರಥವನ್ನು ಕೆಳಕ್ಕೆ ಅದುಮಿದನು. ಕುದುರೆಗಳು ಮೊಣಕಾಲೂರಿದವು. ಕರ್ಣನ ಗುರಿಯು ಇಪ್ಪತ್ತುನಾಲ್ಕು ಅಂಗುಲಗಳಿಂದ ತಪ್ಪಿಹೋಯಿತು" ಎಂಬ ವರ್ಣನೆ ಇದೆ. ಈ ವರ್ಣನೆಯನ್ನು ಕೃಷ್ಣನ ಸ್ತುತಿಗಾಗಿ ಬರೆದಂತಿದೆ; ಎಂದು ಈ ಪರ್ವದ ಸಂಪಾದಕರು ಹೇಳಿದ್ದು ನಿಜವೆನಿಸುತ್ತದೆ. ಕರ್ಣನು ಕತ್ತಿಗೆ ಗುರಿ ಇಡುತ್ತಿದ್ದನು. ಇಪ್ಪತ್ತುನಾಲ್ಕು ಅಂಗುಲಗಳಿಂದ ಗುರಿ ತಪ್ಪಿದ್ದರೆ ಕಿರೀಟವು ಬೀಳುತ್ತಿರಲಿಲ್ಲ. ಕೃಷ್ಣನ ಕುಶಲತೆಯಿಂದ ಅರ್ಜುನ ಬದುಕಿರದೇ ಕರ್ಣನ ತಪ್ಪಿದ ಗುರಿಯಿಂದ ಬದುಕಿದ್ದು ವಾಸ್ತವವೆನಿಸುತ್ತದೆ. ಪುತ್ರ ಮರಣದಿಂದ ಕರ್ಣನ ಮನಸ್ಸು ಕುಗ್ಗಿರಬೇಕು. ಅಂಥದರಲ್ಲಿ ಗುರಿ ತಪ್ಪಿತು. ಹೀಗೆ ಇನ್ನೂ ಅಧ್ವಾನವಾಯಿತು. ಅಷ್ಟರಲ್ಲಿ ಚಕ್ರ ತಿರುಗಿ ರಥ ಜಾರಿತು, ಗಾಲಿ ಭೂಮಿಯಲ್ಲಿ ಹೂತುಕೊಂಡಿತು.

ಅಂದು ಯುದ್ಧದ ಹದಿನೇಳನೆಯ ದಿನ. ಗಜ, ತುರಗ, ಪದಾತಿಗಳ ಪ್ರೇತಗಳೂ, ಮುರಿದು ಬಿದ್ದ ರಥಗಳು ರಣಭೂಮಿಯಲ್ಲಿ ಅಲ್ಲಲ್ಲಿ ಬಿದ್ದಿದ್ದವು. ಈ ಘೋರ ಸಂಗ್ರಾಮದಿಂದ ಭೂಮಿಯಲ್ಲೆಲ್ಲಾ ಉಳುಮೆ ಮಾಡಿದಂತೆ ಆಗಿ ಹಲವು ಕಡೆಗೆ ಕೊಚ್ಚೆಯಾಗಿತ್ತು. ಗಂಗಾ-ಯಮುನಾ ದಡದಲ್ಲಿ ಕಲ್ಲು ಬಂಡೆಗಳು ಇಲ್ಲವೇ ಇಲ್ಲ. ಸಹಸ್ರಾರು

ಅಡಿಗಳವರೆಗೆ ಮೆದುವು ಮಣ್ಣು ಇರುವುದು. ಆದರೆ ಅಲ್ಲಿ ನೀರು ಬಸಿದು ಹೋಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಚಕ್ರ ತಿರುಗಿ ರಥವು ಹೂತುಕೊಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಯುದ್ಧ ನಡೆದ ಎರಡು ವಾರದ ಅವಧಿಯಲ್ಲಿ ಒಂದೊಂದು ಕಾರಣದಿಂದ ರಥಗಳು ಕೆಟ್ಟುಹೋಗುತ್ತಿದ್ದವು. ಯೋಧರು ಒಂದನ್ನು ಬಿಟ್ಟು ಇನ್ನೊಂದನ್ನು ಬಳಸುತ್ತಿದ್ದರು. ಕರ್ಣನ ಹಿಂಭಾಗದಲ್ಲಿಯೂ ರಥಗಳಿದ್ದವು. ಆದರೆ ಕರ್ಣ ರಥದಿಂದಿಳಿದು ಈ ಹೂತ ಚಕ್ರವನ್ನು ಹೊರತೆಗೆಯಲು ಪ್ರಯತ್ನಿಸ ಹತ್ತಿದನು. ಭಾರವಾದ ರಥದ ಹೂತ ಚಕ್ರವನ್ನು ಒಬ್ಬನೇ ಹೊರತೆಗೆಯುವುದು ಕಷ್ಟಕರವಾದದ್ದಲ್ಲದೇ ಸಮಯ ಹಿಡಿಯುತ್ತಿತ್ತು. ಕರ್ಣ ಬೇರೆ ರಥವನ್ನು ಏಕೆ ಬಳಸಲಿಲ್ಲ ? ಸಂಜೆಯಾಗಿತ್ತು. ಈ ಉಪಾಯದಿಂದ ಸ್ವಲ್ಪ ಸಮಯವನ್ನು ಕಳೆದು ಒಂದು ರಾತ್ರಿಯಷ್ಟು ಅವಧಿಯನ್ನು ಪಡೆಯುವ ಉದ್ದೇಶವನ್ನು ಕರ್ಣ ಇಟ್ಟುಕೊಂಡಿದ್ದನೋ? ಅವನಿಗೆ ದಿಕ್ಕು ತೋರದಂತಾಗಿತ್ತು. ಇದು ಮಾತ್ರ ನಿಜ. ಆತನು ಅರ್ಜುನನಿಗೆ "ನಾನು ಚಕ್ರವನ್ನು ಹೊರಗೆ ತೆಗೆಯಲು ಭೂಮಿಯ ಮೇಲೆ ನಿಂತಿದ್ದೇನೆ. ನೀನು ರಥದಲ್ಲಿರುವೆ. ಯುದ್ಧನೀತಿಯನ್ನು ಅರಿತವನಾದ ನೀನು ರಥದಲ್ಲಿಂದ ನನ್ನೊಡನೆ ಯುದ್ಧಮಾಡಬೇಡ. ನನಗೆ ರಥದ ಗಾಲಿಯನ್ನು ತೆಗೆಯಲು ಅವಕಾಶ ಕೊಡು, ಧರ್ಮದಿಂದ ಯುದ್ಧಮಾಡು!" ಎಂದು ಬೇಡಿಕೊಂಡ.

ಆದರೆ ಕೃಷ್ಣ ಆತನಿಗೆ ಅವಕಾಶ ಕೊಡಲು ಸ್ವಲ್ಪ ಮಾತ್ರವೂ ಸಿದ್ಧನಿರಲಿಲ್ಲ. "ಧರ್ಮದಿಂದ ಯುದ್ಧ ಮಾಡು" ಎಂದು ಕೊಟ್ಟ ಕರೆಯಲ್ಲಿಯೇ ಆತನಿಗೆ ಮಣ್ಣುಪಾಲು ಮಾಡುವ ಹಂಚಿಕೆಯು ಕೃಷ್ಣನಿಗೆ ಹೊಳೆಯಿತು. "ನಾನು ಯಾರು?" ಎಂಬ ಪ್ರಶ್ನೆಯನ್ನು ಕರ್ಣ ಈಗ ಕೇಳುತ್ತಿರಲಿಲ್ಲ. ಆದರೆ ಕೃಷ್ಣ ಕೇಳಿದ ಪ್ರಶ್ನೆಯ ಮತಿತಾರ್ಥವು "ನೀನು ಯಾರು?" ಎಂಬುದೇ ಆಗಿತ್ತು. ತುಂಬಿದ ಸಭೆಯಲ್ಲಿ ದ್ರೌಪದಿಯ ವಸ್ತ್ರಾಪಹರಣ ಮಾಡಿಸುವಾಗ ಎಲ್ಲಡಗಿತ್ತು ನಿನ್ನ ಧರ್ಮ? ರಥವಿಹೀನನಾದ ಅಭಿಮನ್ಯುವನ್ನು ಎಲ್ಲರೂ ಸೇರಿ ವಧಿಸಿದಾಗ ಎಲ್ಲಡಗಿತ್ತು ನಿನ್ನ ಧರ್ಮ?

ಅರ್ಜುನನ ಮೋಹವನ್ನು ತೊಲಗಿಸಿ ಆತನಿಗೆ ಆತ್ಮಜ್ಞಾನವನ್ನು ಮಾಡಿಸಿ ಕರ್ತವ್ಯ–ಪ್ರವೃತ್ತನಾಗಿ ನಿಲ್ಲಿಸಿದಾತ ಕೃಷ್ಣ. ಅದೇ ಕೃಷ್ಣ ಮರಣ ಸಮೀಪಿಸಿದ ಕರ್ಣನ ಆತ್ಮ–ಜ್ಞಾನವನ್ನು ಹರಣ ಮಾಡಿದ. "ನೀನು ದ್ರೌಪದಿಗೆ ಮಾನವತೆಯನ್ನು ಸಹ ತೋರಲಿಲ್ಲ. ಈಗ ನಿನಗೆ ಅನುಕಂಪೆಯನ್ನು ಏಕೆ ತೋರಿಸಬೇಕು? ಅಭಿಮನ್ಯುವಿನ ಬಗ್ಗೆ ನೀನು ಕ್ಷತ್ರಿಯ ಧರ್ಮದಂತೆ ಎಲ್ಲಿ ವರ್ತಿಸಿದೆ? ಈಗ ಯಾವ ತರಹದ ಧರ್ಮವನ್ನು ನೀನು ಅಪೇಕ್ಷಿಸುವೆ? ಆ ಅಪೇಕ್ಷೆಯನ್ನು ಪಡೆಯುವಂತೆ ನೀನು ವರ್ತಿಸಿರುವೆಯಾ?" ಇದೇ ಬಗೆಯ ಈ ಕಟು ಪ್ರಶ್ನೆಗಳು ಇದ್ದವು. ಕೃಷ್ಣ ಈ ಎರಡೇ ಪ್ರಶ್ನೆಗಳನ್ನು ಕೇಳಿದ. ಮಿಕ್ಕ ಅಸಾರವಾದ ಪ್ರಶ್ನೆಗಳನ್ನು ಸಂಶೋಧಿತ ಆವೃತ್ತಿಗಳಿಂದ ತೆಗೆದುಹಾಕಲಾಗಿದೆ. ಒಂದು ಬಗೆಯಿಂದ ಕರ್ಣ ಧರ್ಮಯಾಚನೆಯನ್ನು ಮಾಡುವ ಅಧಿಕಾರವನ್ನು ಈ ಪ್ರಶ್ನೆಯಿಂದ ಕಳೆದುಕೊಂಡ. ಇನ್ನೊಂದು ಬಗೆಯಿಂದ ಯಾವ ಎರಡು ಕೃತಿಗಳ ದುಃಖ ಅರ್ಜುನನ ಹೃದಯದಲ್ಲಿ

ಬೇರೂರಿತ್ತೋ ಅವುಗಳ ಉಚ್ಚಾರಣೆ ಆಯಿತು. ಇದೇ ಮನುಷ್ಯನೇ ತುಂಬಿದ ಸಭೆಯಲ್ಲಿ ನನ್ನ ಪತ್ನಿಯನ್ನು ಅವಮಾನಗೊಳಿಸಿದನು. ಈತನೇ ನನ್ನ ಪುತ್ರನನ್ನು ನಿರ್ದಯವಾಗಿ ಕೊಲ್ಲಿಸಿದನು ಎಂಬುದರ ತೀವ್ರ ಜ್ಞಾಪಕವು ಜಾಗೃತವಾಯಿತು. ಅರ್ಜುನ ಕ್ರೋಧದಿಂದ ಉರಿದೆದ್ದ. ಆತ ಶರಸಂಧಾನಮಾಡಿ ಗರ್ಜಿಸಿ "ನಾನು ಕ್ಷತ್ರಿಯನಿದ್ದರೆ ಈ ಬಾಣವು ಕರ್ಣನ ಪ್ರಾಣಹರಣವನ್ನು ಮಾಡಲಿ" ಎಂದು ಉಚ್ಚರಿಸಿದ. ಅರ್ಜುನ ಗುರಿ ತಪ್ಪದವನೆಂದು ಪ್ರಖ್ಯಾತನಿದ್ದ. ಈಗಲೂ ಆತನ ಗುರಿ ತಪ್ಪಲಿಲ್ಲ.

ಕರ್ಣ ಮಹಾಭಾರತದಲ್ಲಿ ಶಸ್ತ್ರರಂಗದ ಕಾಲಕ್ಕೆ ಆಗಮಿಸಿದನು. ಆಗ ನಡೆದ ಘಟನೆಗಳ ಪುನರಾವೃತ್ತಿಯು ಈ ಕೊನೆಯ ಗಳಿಗೆಯಲ್ಲಿ ನಡೆದಂತಾಯಿತು. ಶಸ್ತ್ರ ರಂಗದ ಕಾಲದಲ್ಲಿ ಕರ್ಣನ ದ್ವಂದ್ವಯುದ್ಧದ ಆಹ್ವಾನದ ಕಾರಣವಾಗಿಯೇ ಕೃಪ ಕರ್ಣನಿಗೆ "ನೀನು ಯಾರು?" ಎಂದು ಕೇಳಿದ ಪ್ರಶ್ನೆಯಿಂದ ಕರ್ಣನು ಲಜ್ಜಿತನಾಗಿದ್ದನು. ಈ ಕೊನೆಯ ಪ್ರಸಂಗವು ವಿದ್ಯೆಯ ಸ್ಪರ್ಧೆಯಾಗಿರದೇ ನಿಜವಾದ ಸಂಗ್ರಾಮವಾಗಿತ್ತು. ಯಾವ ದ್ವಂದ್ವಕ್ಕಾಗಿ ಆತ ಅರ್ಜುನನನ್ನು ಆಹ್ವಾನಿಸಿದ್ದನೋ ಅದು ತಾನಾಗಿಯೇ ಒದಗಿತ್ತು. ಅದು ಕೇವಲ ಆಟವಾಗಿರಲಿಲ್ಲ. ದಯೆ–ಅಂತಃಕರಣಗಳನ್ನು ಬದಿಗಿರಿಸಿ ನಡೆಸಿದ ಯುದ್ಧವಾಗಿತ್ತು. ಸಾಧ್ಯವಿದ್ದಲ್ಲಿ ವಧಿಸುವುದು ಇಲ್ಲವಾದಲ್ಲಿ, ವೀರನಂತೆ ಮಡಿಯುವುದು, ಇದೊಂದೇ ಮಾರ್ಗವಿತ್ತು. ಆಜನ್ಮವೆಲ್ಲಾ ಕಡು ಹಗೆತನ ಬೆಳಗಿಸಿದ, ಸ್ಪರ್ಧಿಸಿದ, ಆ ಪ್ರತಿ–ಸ್ಪರ್ಧಿಯಾದ ಅರ್ಜುನ ಎದುರಿನಲ್ಲಿ ಇದ್ದ. ಆತನ ಬಳಿಯಲ್ಲಿ ಯಾವುದೇ ರೀತಿಯಲ್ಲಿ ಯಾಚನೆಯನ್ನು ಮಾಡುವುದು ಸರಿ ಇರಲಿಲ್ಲ. ಕ್ಷತ್ರಿಯರಂತೆ ಹತನಾಗುವುದೊಂದೇ ಹಾದಿ ಇತ್ತು. ಮತ್ತೊಮ್ಮೆ ಮಾಡಬಾರದ್ದನ್ನು ಕರ್ಣನು ಮಾಡಿದನು. ಆತನು ಧರ್ಮಯುದ್ಧವನ್ನು ಬಯಸಿದನು. ಆದರೆ ಈ ಸಲ "ನೀನು ಯಾರು?" ಎಂದು ಕೃಪ ಕೇಳದೇ ಕೃಷ್ಣನು ಆತನನ್ನು ಕೇಳಿದನು. ನಾನು ಯಾರು ? ಎಂಬುದನ್ನು ತಿಳಿಸಲಾಗದೇ ಕರ್ಣನು ಮಡಿದು ಹೋದನು.

9
ಕೃಷ್ಣ-ವಾಸುದೇವ

ಆದಿಪರ್ವದ ಕೊನೆ ಕೊನೆಯಲ್ಲಿ ದ್ರೌಪದೀ ಸ್ವಯಂವರದ ಕಾಲದಿಂದ ಮಹಾಭಾರತದಲ್ಲಿ ಕೃಷ್ಣನ ಉಲ್ಲೇಖವು ಆರಂಭವಾಗುತ್ತದೆ. ಆ ಮೊದಲು ಕೃಷ್ಣನ ಮತ್ತು ಪಾಂಡವರ ಇಲ್ಲವೇ ಕೌರವರ ಬಗ್ಗೆ ಇದ್ದ ಯಾವ ಸಂಬಂಧವನ್ನೂ ಹೇಳಿಲ್ಲ. ವಸುದೇವನ ಸಹೋದರಿಯಾದ ಕುಂತಿಯನ್ನು ಪಾಂಡುವು ವಿವಾಹವಾದ ಉಲ್ಲೇಖವು ಮಾತ್ರ ಬಂದಿದೆ. [ಕೃಷ್ಣನ ಸೋದರ ಅತ್ತೆ ಕುಂತಿ] ಹೆಚ್ಚಿನ ಯಾವ ತರಹದ ಸಂಬಂಧವನ್ನೂ ಯಾದವರ ಬಗ್ಗೆ ತೋರಿಸಿಲ್ಲ. ಪಾಂಡು ಜೀವಿಸಿ ಇರುವವರೆಗೆ, ಪಾಂಡವರು ಹಿಮಾಲಯದ ಅಡಿಯಲ್ಲಿಯ ಕಾಡಿನಲ್ಲಿ ವಾಸವಾಗಿದ್ದರು. ಪಾಂಡು ಮಡಿದ ನಂತರ, ಮಾದ್ರಿಯು ಸಹಗಮನ ಮಾಡಿದ ಮೇಲೆ, ವಿಧವೆಯಾದ ಕುಂತಿಯು ಅನಾಥ ಬಾಲಕರೊಡನೆ ಹಸ್ತಿನಾಪುರಕ್ಕೆ ಬಂದಳು. ಭೀಷ್ಮನ ಹಿರಿತನದಲ್ಲಿ ಅವರ ವಿದ್ಯಾಭ್ಯಾಸವು ನೆರವೇರಿತು. ಕುಂತಿಯ ಹಾಗೂ ವಿದುರನ ಜಾಗರೂಕತೆಯಿಂದ ಕೌರವರ ರಾಜ್ಯದಲ್ಲಿ ಅವರು ರಕ್ಷಣೆ ಪಡೆದರು. ಅನಂತರ ಗಂಗಾ ತೀರದ ಒಂದು ಪಟ್ಟಣಕ್ಕೆ ಕಳುಹಿಸಿ, ಅಲ್ಲಿ ಅವರನ್ನು ಸಾಯಿಸುವ ಹಂಚಿಕೆಯನ್ನು ಕೌರವರು ಹೂಡಿದರು. ಉರಿಯುತ್ತಿರುವ ಗೃಹದಿಂದ ಒಳ್ಳೆಯ ಉಪಾಯದಿಂದ ಪಾರಾಗಿ, ಕುಂತಿ ಮತ್ತು ಪಾಂಡವರು ಒಂದು ವರ್ಷದವರೆಗೆ ಅಂದರೆ ದ್ರುಪದನ ಅರಮನೆಗೆ ಬರುವವರೆಗೆ ತಲೆಮರೆಯಿಸಿ ಕಾಲ ಕಳೆದರು. ತಮ್ಮ ಗುರುತನ್ನು ಕಾಣಗೊಡದೇ ಪಾಂಡವರು, ದ್ರೌಪದಿಯನ್ನು ಪಡೆದರು. ಪಾಂಡವರಿಗೆ ಬಾಲ್ಯದಲ್ಲಿ ನಾನಾ ಸಂಕಟಗಳು ಒದಗಿದರೂ, ಬಹಳ ದಕ್ಷತೆಯನ್ನು ವಹಿಸಬೇಕಾಗಿದ್ದರೂ, ಕುಂತಿಯು ತವರಿನವರ ಸಹಾಯವನ್ನು ಪಡೆದಂತೆ ಕಾಣುವುದಿಲ್ಲ. ಈ ಧೋರಣೆಯನ್ನು ಆಕೆ ಬೇಕಾಗಿಯೇ ತಳೆದಿರಬಹುದು. ಗಾಂಧಾರಿಯ ಸಹೋದರನಾದ ಶಕುನಿ, ಆಕೆಯ ವಿವಾಹದ ಸಮಯದಿಂದಲೇ ಕೌರವರ ಸಭೆಯಲ್ಲಿ ಸ್ಥಿರವಾಗಿ ನೆಲೆಸಿದ್ದ. ಕುಂತಿ ಮತ್ತು ಮಾದ್ರಿಯರ ಸಂಗಡ ತವರಿನವರು ಯಾರೂ ಬಂದಿರಲಿಲ್ಲ. ಒಂದು ಸಮಯ ಬಂದಿದ್ದರೂ ಆಗಿನ ರೂಢಿಯಂತೆ ವಿವಾಹವಾದೊಡನೆಯೇ ಮರಳಿರಬಹುದು. ಪತಿ ನಿಧನದ ನಂತರ ತವರಿನವರಿಗೆ ಬಲವಂತ ಮಾಡಿ ಕರೆಯಿಸುವಂತಿರಲಿಲ್ಲ. ಅವಳೇ ಇಷ್ಟು ದೈನ್ಯಾವಸ್ಥೆಯಲ್ಲಿರುವಾಗ ಕೌರವರ ರಾಜ್ಯದಲ್ಲಿ, ಅವಳ ತವರಿನವರಿಗೆ ಸ್ಥಾನ ದೊರೆಯುವುದು

ಅಸಾಧ್ಯವಿತ್ತು. ಒಂದು ಪಕ್ಷ ಅವಳಿಗೆ ಮತ್ತು ಅವಳ ಮಕ್ಕಳಿಗೆ ತವರಿನಲ್ಲಿ ಆಶ್ರಯ ದೊರೆಯಬಹುದಿತ್ತು. ಆದರೆ ಈ ನೆವದಿಂದ ಅವಳ ಮಕ್ಕಳು ಹಸ್ತಿನಾಪುರದ ರಾಜ್ಯಕ್ಕೆ ಇದ್ದ ಬಾಧ್ಯತೆಯನ್ನು ಕಳೆದುಕೊಳ್ಳುವಂತಿತ್ತು. ಹಿರಿಯರ ಆಸ್ತಿಗೆ ಇದ್ದ ಮಕ್ಕಳ ಬಾಧ್ಯತೆಯು ಇಲ್ಲದಂತಾಗಬಾರದೆಂದು ಬುದ್ಧಿವಂತಿಕೆಯಿಂದ ಓರ್ವ ವಿಧವೆಯಾದ ಅತ್ತಿಗೆಯು, ತನ್ನ ಭಾವನ ಮನೆಯಲ್ಲಿ ದೀನಳಾಗಿ ವಾಸಿಸುವಂತೆ, ಕುಂತಿಯು ಕೌರವರ ಆಶ್ರಯದಲ್ಲಿ ವಾಸಿಸಿದಳು. ಈ ಕಾರಣದಿಂದಲೇ ಯಾದವರ ಉಲ್ಲೇಖವು ದ್ರೌಪದಿ ಸ್ವಯಂವರದವರೆಗೂ ಮಹಾಭಾರತದಲ್ಲಿ ಕಂಡುಬರುವುದಿಲ್ಲ. ಪಾಂಡವರ ಬಾಲ್ಯದಿಂದ ದ್ರೌಪದಿಯ ಸ್ವಯಂವರದವರೆಗಿನ ಕಾಲಾವಧಿಯು ಯಾದವರ ದೃಷ್ಟಿಯಿಂದ ಅಶಾಂತತೆಯದಿತ್ತು. ಕಂಸನ ವಧೆ, ಜರಾಸಂಧನೊಡನೆ ಯುದ್ಧ, ಆತನಿಗೆ ಅಂಜಿ ಯಮುನಾ ಪ್ರದೇಶವನ್ನು ಬಿಟ್ಟು ದಕ್ಷಿಣಕ್ಕೆ ಹೋಗಿದ್ದು, ದ್ವಾರಕೆಯ ಸ್ಥಾಪನೆ, ಅಲ್ಲಿ ನೆಲೆಸುವುದು ಇವೆಲ್ಲ ಘಟನೆಗಳು ಇದೇ ಕಾಲದಲ್ಲಿ ಜರುಗಿರಬೇಕು.

ಸ್ವಯಂವರ ಮಂಟಪಕ್ಕೆ ಯಾದವರು ಬಂದಿದ್ದರೂ, ದ್ರೌಪದಿಯನ್ನು ಬಯಸುವ ಉದ್ದೇಶದಿಂದ ಅವರು ಬಂದಿರಲಿಲ್ಲ. ಒಟ್ಟಿನಲ್ಲಿ ಸಮಾರಂಭವನ್ನು ಕಂಡು ಸ್ವಯಂವರದಲ್ಲಿ ಏನೇನು ನಡೆಯಬಹುದೋ ಎಂಬುದನ್ನು ನೋಡಲು ಅವರು ಬಂದಿರಬೇಕು. ಅರ್ಜುನನು ಪಂದ್ಯವನ್ನು ಜಯಿಸಿದೊಡನೆ, ಕೃಷ್ಣನ ದೃಷ್ಟಿಯು ಬ್ರಾಹ್ಮಣ ವೇಷದಲ್ಲಿ ಕುಳಿತ ಐವರು ಪಾಂಡವರತ್ತ ಹೋಯಿತು. ಆತನು ಪಕ್ಕದಲ್ಲಿ ಕುಳಿತ ಬಲರಾಮನಿಗೆ ಹೆಸರುಗೊಂಡು "ಅಲ್ಲಿ ಕುಳಿತವರು ಯಾರು?" ಎಂದು ಕೇಳಿದನು. "ನನ್ನ ಗುಪ್ತಚಾರರು, ಪಾಂಡವರು ವಾರಣಾವತದ ಸುಟ್ಟುಹೋದ ಮನೆಯಲ್ಲಿ ಮಡಿದುಹೋಗದೇ, ಅವರು ಪಾರಾಗಿ ಹೋಗಿರಬಹುದೆಂದು ವಾರ್ತೆಯನ್ನು ತಂದಿದ್ದಾರೆ. ಅದೇ ಪಾಂಡವರು ಇವರು ಇರಬೇಕು" ಎಂದು ಬಲರಾಮನು ಹೇಳಿದನು, ಬಲರಾಮ–ಕೃಷ್ಣರಿಬ್ಬರೂ ತಮ್ಮ ಪರಿವಾರವನ್ನು ಬಿಟ್ಟು ಇಬ್ಬರೇ ಮರೆಯಾಗಿ ಧರ್ಮನ ಬೆನ್ನು ಹಿಂದೆ ಹೋಗಿ ಪಾಂಡವರ ವಾಸಸ್ಥಳವನ್ನು ಕಂಡುಹಿಡಿದರು. ಅವರಿಬ್ಬರು ಕುಂತಿಗೆ ಮತ್ತು ಪಾಂಡವರಿಗೆ ಭೇಟಿಯಾಗಿ ಯಾರ ಕೈಗೂ ಸಿಲುಕಬಾರದೆಂಬ, ಭಯದಿಂದ ತುಸು ಹೊತ್ತು ಮಾತ್ರ ಅಲ್ಲಿ ಇದ್ದು ಗೌಪ್ಯವಾಗಿ ಹಿಂದಿರುಗಿದರು.

ಈ ಪ್ರಥಮ ಭೇಟಿಯ ಪ್ರಸಂಗದ ನಂತರ ಮಹಾಪ್ರಸ್ಥಾನದ ಪ್ರಸಂಗ ಒಂದನ್ನು ಬಿಟ್ಟು, ಶ್ರೀಕೃಷ್ಣನು ಇಲ್ಲದ ಒಂದು ಪರ್ವವೂ ಮಹಾಭಾರತದಲ್ಲಿ ಇಲ್ಲ. ಶ್ರೀಕೃಷ್ಣನು ಇಲ್ಲದ ಕಾಲದಲ್ಲಿ ಧರ್ಮರಾಜ ಪಗಡೆ ಆಡಿ ರಾಜ್ಯವನ್ನು ಸೋತ. ಹನ್ನೆರಡು ವರ್ಷದ ವನವಾಸದ ಕಾಲದಲ್ಲಿ ಕೃಷ್ಣ ಮತ್ತು ಪಾಂಡವರ ಸಹವಾಸವು ಹೆಚ್ಚಾಗಿರಲಿಲ್ಲ. ಆದರೆ ಕೃಷ್ಣ ಸತತವಾಗಿ ಅವರ ಬೆಂಬಲಿಗೆ ಇದ್ದ. ವಿರಾಟ ಪರ್ವದಲ್ಲಿಯ ಗೋಗ್ರಹಣ ಪ್ರಸಂಗದಲ್ಲಿ ಪಾಂಡವರು ಕೌರವರನ್ನು ಸೋಲಿಸಿ ಅಟ್ಟಿಸಿದರು. ಈ ಘಟನೆಯ ಅಪವಾದವನ್ನು ಬಿಟ್ಟರೆ, ಶ್ರೀಕೃಷ್ಣನ ಸಹಾಯವಿಲ್ಲದೇ ಪಾಂಡವರಿಂದ ಯಾವ ಮಹತ್ಕಾರ್ಯಗಳೂ ನೆರವೇರಿಲ್ಲ. ದ್ರೌಪದಿಯ

ಸ್ವಯಂವರ ಕಾಲಕ್ಕೆ ಯಾದವರು ಬಹುಮೂಲ್ಯವಾದ ಉಡುಗೊರೆಗಳನ್ನು ತೆಗೆದುಕೊಂಡು, ಪರಿವಾರದೊಂದಿಗೆ ದ್ರುಪದನ ರಾಜಧಾನಿಗೆ ಬಂದರು. ದ್ರುಪದರ ಹಾಗೂ ಯಾದವರ ಈ ಬಲಿಷ್ಠ ಒಗ್ಗಟ್ಟಿನಿಂದ ಧೃತರಾಷ್ಟ್ರನು ಪಾಂಡವರಿಗೆ ರಾಜ್ಯದ ಅರ್ಧವನ್ನು ಕೊಡಲೇಬೇಕಾಯಿತು. ಕೃಷ್ಣನು ಬಹಿರಂಗವಾಗಿ ಈ ಪುರಸ್ಕಾರವನ್ನು ಕೊಡದಿದ್ದರೆ ಒಬ್ಬ ದ್ರುಪದನ ಬಲದಿಂದ ಪಾಂಡವರಿಗೆ ರಾಜ್ಯವು ಸಹಜವಾಗಿ ದೊರಕುವಂತಿರಲಿಲ್ಲ. ಧೃತರಾಷ್ಟ್ರನು ಯುಧಿಷ್ಠಿರನಿಗೆ ಖಾಂಡವವನವನ್ನು ಹಾಗೆಯೇ ಖಾಂಡವಪ್ರಸ್ಥ ಪಟ್ಟಣವನ್ನು ಕೊಟ್ಟನು. ಕೃಷ್ಣನನ್ನು ಮುಂದೆಮಾಡಿ ಪಾಂಡವರು ಖಾಂಡವ ವನವನ್ನು ಪ್ರವೇಶಿಸಿದರು. ಕೃಷ್ಣನ ಸಹಾಯದಿಂದ ಚಿಕ್ಕ ಪಟ್ಟಣವಾದ ಖಾಂಡವಪ್ರಸ್ಥವನ್ನು ರಾಜಧಾನಿಯನ್ನಾಗಿ ಪರಿವರ್ತಿಸಿದರು. ಇಷ್ಟಲ್ಲದೆ ಖಾಂಡವವನವನ್ನೇ ಸುಟ್ಟುಹಾಕಿ ಕೃಷ್ಣಾರ್ಜುನರು ಪ್ರಜೆಗಳಿಗಾಗಿ ಬಹಳ ಪ್ರದೇಶವನ್ನು ದೊರಕಿಸಿಕೊಟ್ಟರು. ಇದನ್ನು ಪೂರೈಸಿ ಮಯಾಸುರನಿಂದ ಭವ್ಯ ಪ್ರಾಸಾದವೊಂದನ್ನು ಕಟ್ಟಿಸುವ ಏರ್ಪಾಟನ್ನು ಮಾಡಿಸಿ, ಕೃಷ್ಣ ದ್ವಾರಕೆಗೆ ಮರಳಿದ.

ಕೃಷ್ಣ ತೆರಳಿದ ನಂತರ ಧರ್ಮರಾಜನನ್ನು ಭೇಟಿಯಾಗಲು ಅನೇಕರು ಬಂದರು. ಅವರೆಲ್ಲರ ಹೇಳಿಕೆಯಂತೆ ರಾಜಸೂಯ ಯಜ್ಞವನ್ನು ಮಾಡಬೇಕೆಂದು ಧರ್ಮನ ಮನಸ್ಸಿಗೆ ತೋಚಿತು. ಆಗ ಕೃಷ್ಣನಿಗೆ ಕರೆಕಳುಹಿಸಿ ತನ್ನ ಯೋಜನೆಯನ್ನು ಆತನು ಅರುಹಿದ. ಕೃಷ್ಣ, ಆಳುತ್ತಿದ್ದ ಬೇರೆ ಬೇರೆ ರಾಜರುಗಳ ಮಾಹಿತಿಯನ್ನು ಕೊಟ್ಟು ಅನುಕೂಲವಾದವರು ಯಾರು? ಸುಲಭವಾಗಿ ಜಯಿಸಬಹುದಾದವರು ಯಾರು? ಮುಂತಾದ ಎಲ್ಲವನ್ನು ತಿಳಿಸಿ ಮಗಧಾಧಿಪತಿಯಾದ ಜರಾಸಂಧನನ್ನು ವಧಿಸದೇ ರಾಜಸೂಯ ಯಜ್ಞವನ್ನು ಮಾಡುವದು ಸಾಧ್ಯವಿಲ್ಲವೆಂದು ಧರ್ಮನಿಗೆ ಮನವರಿಕೆ ಮಾಡಿಕೊಟ್ಟ. ಜರಾಸಂಧನ ಬಗ್ಗೆ ಹೇಳುವಾಗ ಕೃಷ್ಣನು, ತನ್ನ ಗತಜೀವನದ ಅವಲೋಕನವನ್ನು, ಯಾದವರ ಮಥುರೆಯಿಂದ ದ್ವಾರಕೆಯ ಪ್ರಯಾಣವನ್ನು, ತಾನಾಗಿಯೇ ಧರ್ಮನಿಗೆ ಹೇಳಿದ್ದಾನೆ.

ಮಹಾಭಾರತದಲ್ಲಿ ಚಿತ್ರಿಸಲ್ಪಟ್ಟ ಕೃಷ್ಣ, ಹರಿವಂಶದಲ್ಲಿಯ ಅಥವಾ ಭಾಗವತದಲ್ಲಿಯ ಕೃಷ್ಣನಿಗಿಂತಲೂ ತೀರಾ ಬೇರೆಯಾಗಿ ಕಂಡುಬರುತ್ತಾನೆ. ಬೆಳೆದು ದೊಡ್ಡವನಾದ, ದ್ವಾರಕೆಯಲ್ಲಿ ವಾಸಿಸಿದಂತಹ ಕೃಷ್ಣ, ಮಹಾಭಾರತದಲ್ಲಿ ಕಾಣುತ್ತಾನೆ. ಆತನ ಬಗ್ಗೆ ಕೆಲವು ಸಂಗತಿಗಳು ಆತನ ನುಡಿಗಳಿಂದಲೇ ತಿಳಿದುಬರುತ್ತವೆ. ಆತ ಮತ್ತು ಬಲರಾಮ ಸೇರಿ ಕಂಸನನ್ನು ಮತ್ತು ಸುನಾಮನನ್ನು ಕೊಂದರು. ಕಂಸನ ರಾಣಿಯರು ಜರಾಸಂಧನ ಪುತ್ರಿಯರಾಗಿದ್ದರು. ಅವರು ಕಂಸವಧೆಯ ಸೇಡನ್ನು ತೀರಿಸಿಕೊಳ್ಳಲು ಪಿತನಾದ ಜರಾಸಂಧನಿಗೆ ಒತ್ತಾಯ ಮಾಡಹತ್ತಿದರು. ಜರಾಸಂಧ ಯಾದವರ ಮೇಲೆ ದಂಡೆತ್ತಿ ಹೋದ. ಆತನ ಮುಂದೆ ಯಾದವರ ಆಟ ನಡೆಯಲಿಲ್ಲ. ಯಮುನಾ ಪ್ರದೇಶವನ್ನು ಬಿಟ್ಟು ಯಾದವರು ಪಶ್ಚಿಮ ದಿಕ್ಕಿನತ್ತ ಓಡಿದರು. 'ರೈವತ' ಪರ್ವತದ ಸುತ್ತಲಿನ 'ಕುಶಸ್ಥಲ' ಎಂಬ ಪ್ರದೇಶದಲ್ಲಿ ನೆಲಸಿದರು. ಅಲ್ಲಿ ಯಾವ ಶತ್ರುವಿಗೂ ಮಣಿಯದಂತಹ ಭದ್ರವಾದ "ದ್ವಾರಕಾ" ಎಂಬ ಪಟ್ಟಣವನ್ನು ನಿರ್ಮಿಸಿದರು. ಈ ನೂತನ ನಗರ, ಅದರ ಸುತ್ತಲಿನ ಪ್ರದೇಶ, ಇವುಗಳಲ್ಲಿ ವೃಷ್ಣಿ, ಅಂಧಕ,

ಭೋಜ, ಮೊದಲಾದ ಬೇರೆ ಬೇರೆ ಯಾದವ ಮನೆತನದವರು ಬಲರಾಮನ ಆಧಿಪತ್ಯದಲ್ಲಿ, ನೆಲಸಿದರು. ಕೃಷ್ಣಪಿತನಾದ ವಸುದೇವನಿಗೆ ಅನೇಕ ಮಡದಿಯರಿದ್ದರು. ಬಲರಾಮ ರೋಹಿಣಿಯ ಮಗ. ಸುಭದ್ರೆ ಮತ್ತು ಸಾರಣ ಖಾಸ ಸಹೋದರ–ಸಹೋದರಿಯರಿದ್ದರು. ಅವರು ವಸುದೇವನ ಇನ್ನೊಬ್ಬ ರಾಣಿಯ ಮಕ್ಕಳು. ಅಂದರೆ ಬಲರಾಮ, ಕೃಷ್ಣ, ಸುಭದ್ರೆ ಪರಸ್ಪರ ಮಲತಾಯಿಯ ಮಕ್ಕಳಾಗಿದ್ದರು. ಕೃಷ್ಣ ತನ್ನ ಮಹಾಬಲದಿಂದ, ಬುದ್ಧಿವಂತಿಕೆಯಿಂದ ಯಾದವರ ಸ್ವಾತಂತ್ರ್ಯವನ್ನು ಕಾಯ್ದುಕೊಂಡಿದ್ದ. ಈ ಯಾದವರ ಅನೇಕ ಶಾಖೆಗಳ ವರ್ಣನೆ ಮಹಾಭಾರತದಲ್ಲಿ ಹಲವು ಕಡೆಗೆ ಬರುತ್ತದೆ. ಸಭಾಪರ್ವದಲ್ಲಿ ಅನೇಕ ದೊಡ್ಡ ದೊಡ್ಡ ಯಾದವ ವೀರರ ಹೆಸರುಗಳನ್ನು ಸಹ ಹೇಳಲಾಗಿದೆ. ಆದರೆ ಮಹಾಭಾರತದಲ್ಲಿ ಅಲ್ಲಲ್ಲಿ ಕಂಡುಬರುವ ಮಾಹಿತಿಯನ್ನು ಶೇಖರಿಸಿ ಯಾದವ ಕುಲದ ಸುಸಂಬದ್ಧವಾದ ಚರಿತ್ರೆಯನ್ನು ಹೇಳಲಿಕ್ಕೆ ಬರುವಂತಿಲ್ಲ.

ಮಹಾಭಾರತದಲ್ಲಿಯ ವರ್ಣನೆಯನುಸಾರ ಯಾದವರು ಬಲಶಾಲಿಗಳು, ಸಿರಿವಂತರು, ಬಲುದಾಂಡಿಗರು, ಸ್ವಭಾವತಃ ಕೋಪಿಷ್ಠರು, ಒಮ್ಮೆಲೇ ಶಸ್ತ್ರಕ್ಕೆ ದುಡುಕುವವರು, ಜಂಭಪಡುವವರು, ರಥವಿದ್ಯೆಯಲ್ಲಿ ನಿಪುಣರಾಗಿದ್ದರೆಂದು ಕಾಣುತ್ತದೆ. ಅವರ ಧನವಂತಿಕೆಯ ವರ್ಣನೆಯು ಹಲವು ಕಡೆ ಬರುತ್ತದೆ. ಯಾದವ–ಯಾದವರಲ್ಲಿ ಅನೇಕ ಪಕ್ಷ, ಉಪಪಕ್ಷಗಳಿದ್ದವು. ಕೃಷ್ಣ ರಾಜನಾಗಬೇಕೆಂದು ಒಂದು ಪಕ್ಷದವರ ಅಭಿಪ್ರಾಯವಿತ್ತೆಂದು ಕಾಣುತ್ತದೆ. ಆದರೆ ಕೃಷ್ಣನ ಪ್ರತಿ ಪಕ್ಷದಲ್ಲಿಯೂ, ಅನೇಕರಿದ್ದರು. ತಮ್ಮ ಕುಲದೊಳಗೆ ಅಂತ: ಕಲಹವು ಬೇಡ ಎಂದ ಕೃಷ್ಣನು ತನ್ನ ಮಲಸಹೋದರನಾದ ವಸುದೇವನ ಹಿರಿಯ ಮಗನಾದ ಬಲರಾಮನನ್ನು ರಾಜನಾಗಿ ಮಾಡಿದ. ಬಲರಾಮ–ಕೃಷ್ಣರಲ್ಲಿ ಪ್ರತ್ಯಕ್ಷ ಸ್ಪರ್ಧೆಯು ಇರದಿದ್ದರೂ, ಮತ ಭೇದಗಳು ಅನೇಕವಿದ್ದವು. ಕೃಷ್ಣನಿಂದಲೇ ತಾನು ರಾಜನಾಗಿರುವುದೆಂಬುದನ್ನು ಬಲರಾಮ ಅರಿತುಕೊಂಡಿರಬಹುದು. ಆದರೆ ಮನಸ್ಸು ಇರದಿದ್ದರೂ ಕೆಲವು ಸಲ ಆತನಿಗೆ ಕೃಷ್ಣನ ಮುಂದೆ ಸುಮ್ಮನಿರಬೇಕಾಗುತ್ತಿತ್ತು. ಕೃಷ್ಣನ ಸಲಹೆ ಸಹಾಯಗಳಿಂದ ಅರ್ಜುನ ಸುಭದ್ರೆಯನ್ನು ಅಪಹರಿಸಿದ. ಕ್ಷತ್ರಿಯರಲ್ಲಿ ಇದ್ದ ರೂಢಿಯಂತೆ ಸುಭದ್ರೆಯ ಸ್ವಯಂವರವು ನಡೆಯಬಹುದಿತ್ತು, ಆದರೆ ಕೃಷ್ಣ ಅರ್ಜುನನಿಗೆ "ಅಯ್ಯಾ!, ಈ ಹುಡುಗಿಯರು ಸ್ವಯಂವರದಲ್ಲಿ ಯಾರ ಕೊರಳಲ್ಲಿ ಮಾಲೆ ಹಾಕಿಯಾರು? ಎಂಬುದನ್ನು ನಂಬುವಂತಿಲ್ಲ. ನಿನಗೆ ಅವಳು ಬೇಕಿದ್ದರೆ ನಾನು ರಥವನ್ನು ಕೊಡುತ್ತೇನೆ. ನನ್ನ ಕುದುರೆಗಳನ್ನು ಕೊಡುತ್ತೇನೆ. ಅದರಲ್ಲಿ ಅವಳನ್ನು ಕುಳ್ಳಿರಿಸಿ ಓಡಿಸಿಕೊಂಡು ಹೋಗು," ಎಂದು ಹೇಳಿದ. ಆ ಪ್ರಕಾರ ಅರ್ಜುನ ಸುಭದ್ರೆಯನ್ನು ಎತ್ತಿಕೊಂಡು ಹೋದನಂತರ ಬಲರಾಮಸಹಿತ ಎಲ್ಲಾ ಯಾದವ ವೀರರು ಅರ್ಜುನನ ಬೆನ್ನಟ್ಟಿ ಆತನನ್ನು ಹಿಡಿಯಲೋಸುಗ ಹೊರಟಿದ್ದರು. ಆಗ ಕೃಷ್ಣನು ಅವರಿಗೆ ಸಮಾಧಾನ ಹೇಳಿ ಅವರನ್ನು ಹಿಂತಿರುಗಿಸಿದನು. ಪಾಂಡವರಲ್ಲಿ ಮತ್ತು ಯಾದವರಲ್ಲಿ ಈ ರೀತಿ ವೈವಾಹಿಕ ಸಂಬಂಧ ಉಂಟಾಗುವುದು ಯಾವ ರೀತಿ ಲಾಭಕರವಿರುವುದು ಎಂಬುದನ್ನು ಆತ ಅವರಿಗೆ ತಿಳಿಸಿ

ಹೇಳಿದನು. ಕೃಷ್ಣನ ಮನಸ್ಸು ಪಾಂಡವರತ್ತ ಬಹಳ ಇತ್ತು. ಬಲರಾಮನಿಗೆ ಪಾಂಡವರ ಬಗ್ಗೆ ಸದಿಚ್ಛೆ ಇದ್ದರೂ, ಅಷ್ಟೊಂದು ಆತ್ಮೀಯತೆ ಇರಲಿಲ್ಲ. ಆತನು ಕೌರವ ಪಾಂಡವರಲ್ಲಿಯ ಯಾವ ಪಕ್ಷದವನಾಗಿಯೂ ಇರಲಿಲ್ಲ. ಯುದ್ಧವು ಶುರುವಾದಾಗ ಅದರಲ್ಲಿ ಸೇರಿಕೊಳ್ಳುವುದೇ ಬೇಡವೆಂದು ಬಲರಾಮ ತಟಸ್ಥನಾಗಿದ್ದನು. ಗದಾಯುದ್ಧದಲ್ಲಿ ಭೀಮ ದುರ್ಯೋಧನನ ತೊಡೆಗೆ ಅಂದರೆ ಸೊಂಟದ ಕೆಳಗೆ ಹೊಡೆದುದ್ದನ್ನು ನೋಡಿ ಬಲರಾಮ ಭೀಮನ ಮೇಲೆ ಧಾವಿಸಿದ್ದ. ಆದರೆ ಕೃಷ್ಣ ಆತನನ್ನು ತಡೆದ. ಯಾದವರಲ್ಲಿಯ ಒಳಜಗಳಗಳು ಭಾರತೀಯ ಯುದ್ಧದಲ್ಲಿ ಪ್ರಕಟವಾಗುತ್ತವೆ. ಕೃಷ್ಣ ಸ್ವತಃ ಯುದ್ಧ ಮಾಡದಿದ್ದರೂ ಆತನ ಪಕ್ಷದ ಯಾದವರು ಪಾಂಡವರ ವತಿಯಿಂದ ಯುದ್ಧ ಮಾಡುತ್ತಿದ್ದರು. ಬೇರೆ ಅನೇಕ ಯಾದವರು ದುರ್ಯೋಧನನ ಪಕ್ಷ ಹಿಡಿದು ಕಾದುತ್ತಿದ್ದರು. ಮೇಲೆ ಹೇಳಿದಂತೆ ಬಲರಾಮ ತನ್ನ ಪಾಡಿಗೆ ತಾನು ಬೇರೆಯಾಗಿ ಉಳಿದ.

ಕೃಷ್ಣನ ಪತ್ನಿಯರಲ್ಲಿ ಸತ್ರಾಜಿತನ ಪುತ್ರಿಯಾದ ಸತ್ಯಭಾಮೆ, ಮಹಾಭಾರತದಲ್ಲಿ ಎದ್ದು ಕಾಣುತ್ತಾಳೆ. ಕೃಷ್ಣನು ಪಾಂಡವರನ್ನು ಭೇಟಿಯಾಗಲು ಪರಿವಾರ ಸಮೇತನಾಗಿ ಬಂದಾಗ ಅವನೊಡನೆ ಸತ್ಯಭಾಮೆ ಇದ್ದಳು. ವನಪರ್ವದಲ್ಲಿಯೂ ಅವಳು ಜೊತೆಗಿದ್ದಳು. ಉದ್ಯೋಗ ಪರ್ವದಲ್ಲಿ ಯುದ್ಧದ ಭಾವಣೆಗಳು ಸಿದ್ಧವಿದ್ದಾಗ ಸಹ ಅರ್ಜುನನ ಶಿಬಿರದಲ್ಲಿ ಕೃಷ್ಣನೊಡನೆ ಸತ್ಯಭಾಮೆಯು ಇದ್ದಳು.

ರುಕ್ಮಿಣಿಯ ಉಲ್ಲೇಖವು ಒಂದೆರಡು ಸಲ ಮಾತ್ರ ಬರುತ್ತದೆ. “ರುಕ್ಮಿಣಿಯು ಕೃಷ್ಣನ ಮೋಹದ ಮಡದಿಯಾಗಿದ್ದಳು” ಎಂದು ಆನಂತರದ ವಾಙ್ಮಯದಲ್ಲಿ ಕಂಡುಬರುವ ವರ್ಣನೆಯು ಮಹಾಭಾರತದಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಪ್ರಾಯಶಃ ಓರ್ವ ನಾರಿಯು ಪತಿಯೆಂದು ಒಬ್ಬ ಪುರುಷನನ್ನು ಉಲ್ಲೇಖಿಸುವ ರೂಢಿಯೇ ಮಹಾಭಾರತದಲ್ಲಿ ಕಾಣುವುದಿಲ್ಲ. ಇಂದ್ರಪ್ರಸ್ಥದ ರಾಜ್ಯ, ಕೃಷ್ಣನ ಮರಿ ಮಗನಾದ ವಜ್ರನಿಗೆ ದೊರಕಿತು. ವಜ್ರ ರುಕ್ಮಿಣಿಯ ಮೊಮ್ಮಗನ ಮಗ. ಅರ್ಜುನ ರಾಜ್ಯವನ್ನು ವಜ್ರನಿಗೆ ಕೊಟ್ಟದ್ದು ಕೃಷ್ಣನ ಮೆಚ್ಚಿನ ರಾಣಿಯ ಮರಿ ಮಗನೆಂದು ಕೊಡಲಿಲ್ಲ. ಕೃಷ್ಣನ ವಂಶದಲ್ಲಿಯ ಉಳಿದವರಲ್ಲಿ ವಜ್ರನೊಬ್ಬನೆ ಆದುದರಿಂದ ಕೊಟ್ಟ. ವಜ್ರನ ತಾತ, ಅಜ್ಜಂದಿರಾದ ಪ್ರದ್ಯುಮ್ನ ಸಾತ್ಯಕಿಯರು ಅರ್ಜುನನ ಮಿತ್ರರು. ಆತನ ಶೌರ್ಯೋಪಾಸಕರು, ಒಂದು ರೀತಿಯಲ್ಲಿ ಅವರು ಆತನ ಭಕ್ತರೇ ಆಗಿದ್ದರು ಎಂಬುದನ್ನು ಮಹಾಭಾರತದಲ್ಲಿ, ಅಲ್ಲಲ್ಲಿ ಹೇಳಿದ್ದಾರೆ. ಆದ್ದರಿಂದ ಅರ್ಜುನ ಈ ಇಬ್ಬರ ವಂಶಜರಿಗೆ ರಾಜ್ಯವನ್ನು ಕೊಟ್ಟ ಎಂದು ಹೇಳಬಹುದು. ಈ ಘಟನೆಯಲ್ಲಿ ಸಹ ರುಕ್ಮಿಣಿ, ಕೃಷ್ಣನ ಮೆಚ್ಚಿನ ರಾಣಿ ಆದ್ದರಿಂದ ಅವಳ ವಂಶಜರಿಗೆ ರಾಜ್ಯ ದೊರೆಯಿತೆಂದು ಹೇಳಲಾಗುವಂತಿಲ್ಲ.

ಮಹಾಭಾರತದಲ್ಲಿ ಚಿತ್ರಿಸಲ್ಪಟ್ಟ ಕೃಷ್ಣ ‘ಗೋಪೀರಮಣ’ನೆನಿಸುವ ತುಸುಕೂಡ ದಾಖಲೆಯು ಮಹಾಭಾರತದಲ್ಲಿಲ್ಲ. ಆಗಿನ ಎಲ್ಲಾ ಕ್ಷತ್ರಿಯ ರಾಜರುಗಳ ಸಂಪತ್ತಿನಲ್ಲಿ ಗೋಧನ ಸೇರ್ಪಡೆಯಾಗುತ್ತಿತ್ತು. ರಾಜನಲ್ಲಿ ಗೋವುಗಳ ಮಂದೆಗಳು ಇರುತ್ತಿದ್ದವು.

ರಾಜನಿಂದ ನೇಮಿಸಲ್ಪಟ್ಟ ಗೋರಕ್ಷಕರು ಇರುತ್ತಿದ್ದರು. ರಾಜ್ಯದ ಸೀಮೆಗೆ ಹೊಂದಿದ ಕೃಷಿಭಾಗವು ಮುಗಿದು ಅರಣ್ಯ ಪ್ರಾರಂಭವಾಗುವ ಭಾಗದಲ್ಲಿ ಇದ್ದ ಪ್ರದೇಶಗಳಲ್ಲಿ ಈ ಮಂದೆಗಳನ್ನು ಇಟ್ಟಿರುತ್ತಿದ್ದರು. ಈ ತರಹದ ಮಂದೆಗಳು ಹಸ್ತಿನಾಪುರದ ರಾಜ್ಯದಲ್ಲಿ ಇದ್ದವೆಂದು ಘೋಷಯಾತ್ರೆಯ ವರ್ಣನೆಯಿಂದ ತಿಳಿದುಬರುತ್ತದೆ. ವಿರಾಟ ಪರ್ವದಲ್ಲಿ ವಿರಾಟರಾಜನ ಬಳಿ ಇಂತಹ ಮಂದೆಗಳಿದ್ದ ಉಲ್ಲೇಖ ಇದೆ. ಒಂದೆರಡು ವರ್ಷಗಳ ಅವಧಿಯಲ್ಲಿ ರಾಜ, ಸ್ವತಃ ಈ ಪಶುಗಳನ್ನು ಎಣಿಕೆ ಮಾಡಿ ಹೊಸದಾಗಿ ಹುಟ್ಟಿರುವ ಪಶುಗಳಿಗೆ ತನ್ನ ರಾಜಮುದ್ರೆಯನ್ನು ಹಾಕಿಸುವ ರೂಢಿ ಇತ್ತು. ಯಾದವರು ಆಗಿನ ಕ್ಷತ್ರಿಯರಲ್ಲಿ ತುಂಬಾ ಸಿರಿವಂತರು ಎಂದು ಖ್ಯಾತಿಗೊಂಡಿದ್ದರು. ಅಂದಮೇಲೆ ಅವರಲ್ಲಿಯ ಪಶುಗಳ ಸಂಖ್ಯೆಯು ವಿಪುಲವಾಗಿ ಇರಲೇಬೇಕು. ದ್ರೌಪದಿಯ ಹಾಗೆಯೇ ಸುಭದ್ರೆಯ ವಿವಾಹಕಾಲದಲ್ಲಿ ಅವರು ಪಾಂಡವರಿಗೆ ರಥಗಳನ್ನು, ದಾಸ ದಾಸಿಯರನ್ನು, ತುರಗಗಳನ್ನು ಹಾಗೆಯೇ ಗೋಧನವನ್ನು ಕೊಟ್ಟರು. ಸುಭದ್ರೆಯನ್ನು ಇಂದ್ರಪ್ರಸ್ಥಕ್ಕೆ ಕರೆತರುವಾಗ ದ್ರೌಪದಿಯು ಕೋಪಗೊಳ್ಳಬಾರದೆಂದು ಅರ್ಜುನನು ಒಂದು ಉಪಾಯವನ್ನು ಹೂಡಿದನು. ಸುಭದ್ರೆಗೆ ಸುಂದರಳಾದ ಗೋಪಿಯ ವೇಷವನ್ನು ಹಾಕಿ "ನಾನು ನಿಮ್ಮ ದಾಸಿ" ಎಂದು ಹೇಳುವಂತೆ ಮಾಡಿ ದ್ರೌಪದಿಯ ಬಳಿ ಕಳುಹಿಸಿದನು. ಇದೊಂದೇ ಸಂದರ್ಭದಲ್ಲಿ ಗೋಪಿಯ ಉಲ್ಲೇಖವಾಗಿದೆ. ಇದರಿಂದ ಇನ್ನೊಂದು ಸಂಗತಿಯು ಕಂಡುಬರುತ್ತದೆ. ಪಾಂಡವರ ಪಟ್ಟದ ರಾಣಿಯಾದ ದ್ರೌಪದಿಯ ಭೇಟಿಗೆ ಹೋಗುವಾಗ ದರ್ಪ ವೈಯ್ಯಾರದಿಂದ ಹೋಗದೇ ನಮ್ರತೆಯನ್ನು ವ್ಯಕ್ತಪಡಿಸಲು ನಿಮ್ನ ವರ್ಗದ ಗೋರಕ್ಷಕರ ಗೋಪಿಯ ವೇಷವನ್ನು ಸುಭದ್ರೆಗೆ ಕೊಟ್ಟಿದ್ದಾಯಿತು.

ಆಗಿನ ರೂಢಿಯಂತೆ ಕೃಷ್ಣ ಅನೇಕ ಸ್ತ್ರೀಯರನ್ನು ಜಯಿಸಿದ್ದನು. ಯಮುನಾ ತೀರದಲ್ಲಿ ಕುಳಿತು ಕೃಷ್ಣಾರ್ಜುನರು ಹರಟುತ್ತಿದ್ದಾಗ, ತಮ್ಮ ತಮ್ಮ ಪರಾಕ್ರಮವನ್ನು ಹೇಳಿಕೊಂಡರೂ, ಆ ಪರಾಕ್ರಮವು ಶೌರ್ಯದ ವಿಷಯದ ಹಾಗೆಯೇ ಪ್ರೇಮ ಸಂಬಂಧಗಳ ಬಗ್ಗೆಯೂ ಇತ್ತು. ಅರ್ಜುನನು ಅನೇಕ ಸ್ತ್ರೀಯರನ್ನು ಹೊಂದಿದ್ದರೂ ಸ್ತ್ರೀಲಂಪಟನಿರಲಿಲ್ಲ. ಪ್ರಾಯಶಃ ಅನೇಕ ಸ್ತ್ರೀಯರನ್ನು ಜಯಿಸುವುದು ಪ್ರೇಮಕ್ಕಿಂತಲೂ, ರಾಜಕೀಯದ ಅಂಗವಿತ್ತು.

ಕೃಷ್ಣಾರ್ಜುನರ ಗೆಳೆತನವು ದ್ರೌಪದೀ ಸ್ವಯಂವರ ಕಾಲದಿಂದ ಪ್ರಾರಂಭಿಸಿರಬೇಕು. ಇಲ್ಲಿ ಮತ್ತೊಮ್ಮೆ ಅನೇಕ ವ್ಯಕ್ತಿಗಳ ಆಗಿನ ವಯಸ್ಸು ಎಷ್ಟಿರಬಹುದು ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ದ್ರೌಪದಿ ಸ್ವಯಂವರದ ಕಾಲಕ್ಕೆ ಅರ್ಜುನನ ವಯಸ್ಸು ಇಪ್ಪತ್ತರಷ್ಟೇ ಇರಬಹುದು ಎಂದು ಈ ಮೊದಲು ಹೇಳಿದೆ. ಅದು ಒಂದು ಸಮಯ ಇಪ್ಪತ್ತೈದರಷ್ಟು ಎಂದು ಅನ್ನಲು ಅಡ್ಡಿ ಇಲ್ಲ. ಆದರೆ ಅರ್ಜುನನ ವಯಸ್ಸನ್ನು ಹೆಚ್ಚಾಗಿ ಗ್ರಹಿಸಿದರೆ ಆ ಪ್ರಮಾಣದಲ್ಲಿ ಭೀಷ್ಮನ ವಯಸ್ಸು ಯುದ್ಧ ಸಮಯದಲ್ಲಿ ತೊಂಬತ್ತಕ್ಕಿಂತಲೂ ಹೆಚ್ಚಾಗುವುದು. ಆ ಕಾರಣ ಇದು ಸರಿ ಅನಿಸುವುದಿಲ್ಲ. ಮಹಾಭಾರತದಲ್ಲಿ ಒಬ್ಬರನ್ನೊಬ್ಬರು ಸಂದರ್ಶಿಸುವಾಗ

ಪಾಲಿಸಬೇಕಾದ ಹಲವು ಕಟ್ಟು ನಿಯಮಗಳಿವೆ. ಚಿಕ್ಕವರು ಹಿರಿಯರಿಗೆ ನಮಸ್ಕರಿಸಬೇಕು. ಸರಿಕರು ಆಲಂಗಿಸಬೇಕು. ಚಿಕ್ಕವರನ್ನು ಆಶೀರ್ವದಿಸಬೇಕು. ಈ ರೀತಿಯ ರೂಢಿ ಇತ್ತು. ಹಲವು ಕೃತ್ಯಗಳನ್ನು ಸರಿಕರು ತಮ್ಮ ತಮ್ಮಲ್ಲಿ ಆಚರಿಸಬಹುದಿತ್ತು. ಹಿರಿಯರ ಎದುರಿನಲ್ಲಿ ಅಥವಾ ಕಿರಿಯರಲ್ಲಿ ಆ ರೀತಿ ವರ್ತಿಸುವುದು ಸರಿ ಇರಲಿಲ್ಲ. ಕೃಷ್ಣ ಪಾಂಡವರನ್ನು ಭೇಟಿಯಾಗಲು ಬಂದಾಗ ಪ್ರತಿ ಸಲವು ಕುಂತಿಗೆ, ಧರ್ಮರಾಜನಿಗೆ ಮತ್ತು ಭೀಮನಿಗೆ ನಮಸ್ಕರಿಸುತ್ತಿದ್ದನು. ನಕುಲ ಸಹದೇವರು ಕೃಷ್ಣನ ಪಾದಕ್ಕೆರಗಿ ನಮಸ್ಕರಿಸುತ್ತಿದ್ದರು. ಅರ್ಜುನನನ್ನು ಮಾತ್ರ ಕೃಷ್ಣನು ಆಲಂಗಿಸುತ್ತಿದ್ದನು. ಕಾರಣ ಆತ ಅರ್ಜುನನ ಸಮ ವಯಸ್ಕನಾಗಿದ್ದ. ವನವಿಹಾರಕ್ಕಾಗಿ ಖಾಂಡವವನಕ್ಕೆ ಹೋದಾಗ ಅವರು ಯಾವ ಹಿರಿಯರನ್ನು ಜೊತೆಗೊಳ್ಳದೇ ಕೇವಲ ತಮ್ಮ ತಮ್ಮ ಪತ್ನೀಸಮೇತರಾಗಿ ಪರಿಚಾರಕರನ್ನು ಕರೆದುಕೊಂಡು ಹೋಗಿದ್ದರು. ಹೆಂಗಸರ ಮದ್ಯಪ್ರಾಶನವು ನೃತ್ಯ ಸಂಗೀತಾದಿಗಳು ಹಿರಿಯರ ಎದುರಿನಲ್ಲಿ ನಡೆಯುವಂತಿರಲಿಲ್ಲ. ಉದ್ಯೋಗಪರ್ವದಲ್ಲಿ ಯುದ್ಧಕ್ಕೆ ಮೊದಲು ಅರ್ಜುನನ ಬಿಡಾರದಲ್ಲಿ ಕೃಷ್ಣಾರ್ಜುನರು ಮದ್ಯಪ್ರಾಶನ ಮಾಡಿ, ಕೃಷ್ಣನ ಕಾಲು ದ್ರೌಪದಿಯ ತೊಡೆಯ ಮೇಲೆ, ಅರ್ಜುನನ ಕಾಲುಗಳು ಸತ್ಯಭಾಮೆಯ ತೊಡೆಯ ಮೇಲೆ ಈ ರೀತಿ ಕುಳಿತಿದ್ದರೆಂಬ ವರ್ಣನೆಯು ಹೇಳಿಕೆಯಲ್ಲಿದೆ. ಈ ಶಿಬಿರದಲ್ಲಿ ಅಭಿಮನ್ಯು ಮೊದಲಾದ ಹುಡುಗರು ಪ್ರವೇಶಿಸಬಾರದೆಂದು ಇತ್ತು. ಈ ರೀತಿ ಕೃಷ್ಣಾರ್ಜುನರು ಸಮವಯಸ್ಕರು, ಪರಮ ಮಿತ್ರರಾಗಿದ್ದರು.

ದ್ರೌಪದೀ ಸ್ವಯಂವರ ಕಾಲಕ್ಕೆ ಯಾದವರು ದ್ವಾರಕೆಗೆ ಹೋಗಿ ನೆಲಸಿ ಬಹಳ ಅವಧಿಯು ಕಳೆದಿರಲಿಕ್ಕಿಲ್ಲ. ಯಾದವರು ಒಂದು ಗಂಡಾಂತರದಿಂದ ಪಾರಾಗಿದ್ದರು. ಪಾಂಡವರು ಇದೇ ತರಹದ ಒಂದು ಸಂಕಟವನ್ನು ಎದುರಿಸುತ್ತಿದ್ದರು. ಈ ಸಮಯದಲ್ಲಿ ಸಹಕಾರ್ಯದಿಂದ ಪರಸ್ಪರ ಹಿತ–ಸಂಬಂಧಗಳನ್ನು ರಕ್ಷಿಸಲು ಬರುವಂತಿತ್ತು. ಮುಂದಾಲೋಚನೆಯುಳ್ಳ ಕೃಷ್ಣನಿಗೆ ಇದು ಹೊಳೆದಿರಲಿಲ್ಲವೆಂದು ಯಾರು ತಾನೇ ಹೇಳಬಲ್ಲರು ? ಪಾಂಡವರ ಬಗ್ಗೆ ಕೃಷ್ಣನು ದೀರ್ಘಧೋರಣೆಯನ್ನು ಇಟ್ಟುಕೊಂಡಿದ್ದನು ಎಂದು ಕಾಣುತ್ತದೆ. ಆದರೆ ಕೃಷ್ಣಾರ್ಜುನರ ಪರಸ್ಪರ ಸ್ನೇಹದಲ್ಲಿ ಧೋರಣೆಗಿಂತ ನಿಕಟ ಸ್ನೇಹವೇ ಹೆಚ್ಚಾಗಿ ಕಾಣುತ್ತದೆ.

ಪಾಂಡವರೊಡನೆ ಇದ್ದ ಕೃಷ್ಣನ ಸಂಬಂಧವನ್ನು ಗಮನಿಸಿದರೆ ಕೃಷ್ಣನ ಇಡೀ ಜೀವನವನ್ನೇ ಪರಿಶೀಲಿಸುವುದು ಅಗತ್ಯ ಎನ್ನಿಸುತ್ತದೆ. ಭಗವದ್ಗೀತೆಯಲ್ಲಿ **ನಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷುಲೋಕೇಷು ಕಿಂಚನ** ಎಂದು ಹೇಳುವ ಕೃಷ್ಣನ ಜೀವನವು ಅನೇಕ ಕಾರ್ಯಗಳಿಂದಲೂ ಧೋರಣೆಗಳಿಂದಲೂ ತುಂಬಿತ್ತು. ಹಲವು ಧೋರಣೆಗಳು ಆತನ ಕುಲದ ವಿಷಯವಾಗಿ ಇದ್ದವು. ಕೆಲವು ಆಗಿನ ಕ್ಷತ್ರಿಯ ವರ್ಗಕ್ಕೆ ಸಂಬಂಧಿತವಿದ್ದವು. ಇನ್ನೂ ಕೆಲವು ಆತನ ಸ್ವಂತ ವಿಷಯಕ್ಕೆ ಅನುಲಕ್ಷಿಸಿ ಇದ್ದವು. ಕಂಸನ ವಧೆ ತುಸುಮಟ್ಟಿಗೆ ಆತನ ವೈಯಕ್ತಿಕ ಕರ್ತವ್ಯವಾಗಿತ್ತು. ಆದರೆ ಒಂದು ರೀತಿಯಲ್ಲಿ ಇಡೀ ಕುಲದ ಬಿಡುಗಡೆ

ಮಾಡುವುದಿತ್ತು. ಕಂಸನ ವಧೆಯಿಂದ ಆತನ ಮಾವನ ಅಂದರೆ ಜರಾಸಂಧನ ಭಯ ಯಾದವರಿಗೆ ಉಂಟಾಯಿತು. ಈ ಭಯ ಇಲ್ಲದಂತೆ ಮಾಡುವುದು, ಅದೇ ರೀತಿ ಸತತವಾಗಿ ಎಚ್ಚರಿಕೆ ವಹಿಸಿ, ತುಂಟರೂ ಜಗಳಗಂಟರೂ ಆದ ಯಾದವರನ್ನು ಒಗ್ಗಟ್ಟಿನಲ್ಲಿ ಇಡುವುದು ಕೃಷ್ಣನ ಕರ್ತವ್ಯವಾಗಿತ್ತು. ಆಗಿನ ಕ್ಷತ್ರಿಯರ ರೂಢಿಗೆ ಮಸಿ ಬಳೆದು ಒಂದು ನೂರು ಕ್ಷತ್ರಿಯರನ್ನು ಕೊಲೆಮಾಡಲು ಉದ್ಯುಕ್ತನಾದ ಜರಾಸಂಧನನ್ನು ನಿರ್ಮೂಲಗೊಳಿಸುವುದು ಒಂದು ಕರ್ತವ್ಯವಿತ್ತು. ಈ ಕಾರ್ಯವು ಯಾವ ರೀತಿಯಲ್ಲಿ ಸ್ವಕುಲಕ್ಕಾಗಿ ಇತ್ತೋ ಅಷ್ಟೇ ಅದು ಎಲ್ಲ ರಾಜವಂಶದಲ್ಲಿ ಸಾಮ್ಯಾವಸ್ಥೆಯನ್ನು ತರುವ ಪ್ರಯತ್ನದ ದ್ಯೋತಕವಾಗಿತ್ತು.

ಕ್ಷತ್ರಿಯ ಮನೆತನದವರ ಪರಸ್ಪರರಲ್ಲಿಯ ಸಂಬಂಧ ಮತ್ತು ಅವರು ಆಚರಿಸಬೇಕಾದ ನಿಯಮಗಳು ಮಹಾಭಾರತದಲ್ಲಿ ಗಮನವನ್ನು ಸೆಳೆಯುತ್ತವೆ. ಬೇರೆ ಬೇರೆ ರಾಜಕುಲದವರ ರಾಜ್ಯಗಳು ರಾಜಧಾನಿಗಳು ವಂಶಪರಂಪರಾಗತವಿದ್ದವು. ಸಿಂಧು, ಸೌವೀರ, ಮದ್ರ, ಗಾಂಧಾರ, ಮತ್ಸ್ಯ, ಪಾಂಚಾಲ, ಹಸ್ತಿನಾಪುರ, ಮಗಧ, ಚೇದಿ, ವಿದರ್ಭ, ಈ ಎಲ್ಲಾ ದೇಶಗಳನ್ನು, ಆಯಾರಾಜರು ವಂಶಪರಂಪರೆಯಾಗಿ ಆಳುತ್ತಿದ್ದರು. ಯಾದವರು ಮಧುರೆಯಿಂದ ಪಲಾಯನ ಮಾಡಬೇಕಾಯಿತು. ಅವರು ಹೊಸ ರಾಜಧಾನಿಯನ್ನು ನಿರ್ಮಿಸಿದರು. ಆದರೆ ಬೇರೆಯವರ ರಾಜ್ಯವನ್ನು ಅಪಹರಿಸಿ ರಾಜಧಾನಿಯನ್ನು ನಿರ್ಮಿಸಲಿಲ್ಲ. ಯುದ್ಧದ ವರ್ಣನೆಗಳು ಇವೆ. ದಿಗ್ವಿಜಯದ ವರ್ಣನೆ ಇದೆ. ಆದರೆ ಯಾರೂ ಅನ್ಯರ ರಾಜ್ಯವನ್ನು ಕಬಳಿಸಿದ ಉಲ್ಲೇಖವಿಲ್ಲ. ಜರಾಸಂಧನನ್ನು ವಧಿಸಿದ ನಂತರ ಆತನ ಮಗನಿಗೆ ಅಭಯವನ್ನಿತ್ತು ಪಟ್ಟ ಕಟ್ಟಿದ್ದಿದೆ, ಜರಾಸಂಧನು ಸೆರೆಯಲ್ಲಿದ್ದ. ಎಲ್ಲಾ ರಾಜರನ್ನು ಮುಕ್ತಗೊಳಿಸಿ ಅವರವರ ಚಿಕ್ಕಪುಟ್ಟ ರಾಜ್ಯಗಳಲ್ಲಿ ನೆಲಸುವ ಅವಕಾಶವನ್ನು ಕಲ್ಪಿಸಲಾಯಿತು. ಶಿಶುಪಾಲನನ್ನು ಕೊಂದ ನಂತರ ಆತನ ಪುತ್ರನಿಗೆ ಪಟ್ಟ ಕಟ್ಟಿದ್ದಾಯಿತು. ಭಾರತಿಯ ಯುದ್ಧವು ಕೊನೆಗೊಂಡ ನಂತರ ಧರ್ಮರಾಜನು ಹಸ್ತಿನಾಪುರದ ಪಟ್ಟವನ್ನು ಏರಿದನು. ಆಗ ವ್ಯಾಸರು ಆತನಿಗೆ ಆದ್ಯಕರ್ತವ್ಯವೆಂದು, "ಯುದ್ಧದಲ್ಲಿ ಮಡಿದ ರಾಜರ ಆಯಾ ರಾಜಧಾನಿಗಳಿಗೆ ದೂತರನ್ನು ಕಳುಹಿಸು. ಅವರ ರಾಣಿಯರನ್ನು ಸಮಾಧಾನಗೊಳಿಸು. ಅವರಿಗೆ ಅಭಯವನ್ನು ಕೊಡು. ಮೃತನಾದ ರಾಜನಿಗೆ ಪುತ್ರನಿದ್ದರೆ ಆತನನ್ನು ಪಟ್ಟಕ್ಕೆ ಕೂಡಿಸಿ ಆತನ ರಕ್ಷಣೆಯ ಭರವಸೆಯನ್ನು ಕೊಡು. ಯಾವಳೊಬ್ಬ ರಾಣಿಯು ಗರ್ಭವತಿ ಇದ್ದರೆ, ಬೇರೆ ವಂಶಜರು ಇಲ್ಲದಿದ್ದಲ್ಲಿ ಯೋಗ್ಯ ಜನರನ್ನು ಅವಳ ರಕ್ಷಣೆಗಾಗಿ ನಿಯಮಿಸು. ಅವಳಿಗೆ ಸಂತಾನ ಪ್ರಾಪ್ತಿಯಾದ ನಂತರ ಆ ಸಂತಾನದ ಹೆಸರನ್ನು ರಾಜ್ಯಕ್ಕೆ ಘೋಷಿಸು" ಎಂದು ತಿಳಿಸಿದ್ದರು. [ಶಾಂತಿಪರ್ವ ಅಧ್ಯಾಯ ೩೪, ಶ್ಲೋ ೩೧, ೩೨] ಇವೆಲ್ಲವುಗಳಿಂದ ಆಗಿನ ಕಾಲದಲ್ಲಿ ಯುದ್ಧದ ಬಗ್ಗೆ ಕೆಲವು ವಿಶೇಷವಾದ ನಿಯಮಗಳಿದ್ದವು ಎಂದು ಕಂಡು ಬರುತ್ತದೆ. ಕ್ಷತ್ರಿಯರು, ಒಬ್ಬರು ಇನ್ನೊಬ್ಬರ ರಾಜ್ಯವನ್ನು ಆಕ್ರಮಿಸುವ ಪರಿಪಾಠವಿರಲಿಲ್ಲ. ಧರ್ಮರಾಜನ ರಾಜಸೂಯ ಯಜ್ಞದ ಸಮರಕ್ಕೆ ಕೃಷ್ಣ ಪಾಂಡವರಲ್ಲಿ ನಡೆದ ವಿಚಾರ ವಿನಿಮಯದಲ್ಲಿಯೂ ಈ ರೀತಿ ಕಂಡುಬರುತ್ತದೆ. ಯಾವ ರಾಜರನ್ನು ಗೆಲ್ಲುವುದು ಸುಲಭ ? ತಮ್ಮ ಯಾವ

ಆಪ್ತರಿಂದ ಸಹಾಯ ದೊರಕಬಹುದು? ಯಾರನ್ನು ಕೊಲ್ಲತಕ್ಕದ್ದು ? ಇದೇ ಬಗೆಯ ವಿಚಾರ ವಿನಿಮಯವಿತ್ತು. ಪಾಂಡವರ ನಾಲ್ಕು ಸಹೋದರರು ದಿಗ್ವಿಜಯಕ್ಕಾಗಿ ಹೋದಾಗ ಅವರು ರಾಜರನ್ನು ಸೋಲಿಸಿ ಅವರಿಂದ ಕಪ್ಪಕಾಣಿಕೆಗಳನ್ನು ಪಡೆದು ಅವರಿಗೆ ಯಜ್ಞಕ್ಕಾಗಿ ಔತಣವಿತ್ತು ಬಂದರು. ಶಿಶುಪಾಲನು ಅಗ್ರಪೂಜೆಯ ಸಮಯದಲ್ಲಿ ಧರ್ಮರಾಜನಿಗೆ ಸ್ಪಷ್ಟವಾಗಿ ಈ ರೀತಿ ಹೇಳಿದ್ದನು: "ನಾವೆಲ್ಲರೂ ಒಪ್ಪಿಕೊಂಡಿದ್ದರಿಂದಲೇ ನೀನು ರಾಜಸೂಯ ಯಜ್ಞವನ್ನು ಮಾಡುತ್ತಿರುವೆ." ಕೃಷ್ಣನು ಜರಾಸಂಧನ ಬಗ್ಗೆ ಆತನೊಡನೆ ಮಾತನಾಡುವಾಗ "ಎಲ್ಲಾ ರಾಜರನ್ನು ನೀನು ಸೆರೆಯಲ್ಲಿ ಹಾಕಿರುವೆ. ಅವರೆಲ್ಲರನ್ನು ಬಲಿಕೊಡುವ ಆಸೆ ಇಟ್ಟುಕೊಂಡಿರುವೆ. ಇದು ರಾಜನೀತಿಗೆ ಅನುಸರಿಸಿಲ್ಲ. ಆ ರಾಜರನ್ನು ಬಿಟ್ಟುಕೊಡು. ನಮಗೆ ಹೆಚ್ಚಿನ ಅಪೇಕ್ಷೆ ಇಲ್ಲ." ಎಂದು ಹೇಳಿದ್ದ. ಇದನ್ನು ಜರಾಸಂಧ ಒಪ್ಪಲಿಲ್ಲವಾದ್ದರಿಂದ ಆತನನ್ನು ಕೊಲ್ಲಬೇಕಾಯಿತು. ರಾಜಸೂಯ ಯಾಗವನ್ನು ಮಾಡುವವನು ಖ್ಯಾತವೀರನಾಗಿ ಇರಬೇಕಲ್ಲದೆ ಆತ ಧರ್ಮಜ್ಞನಾಗಿರಬೇಕು ಎಂದು ಆಗಿನ ಭಾವನೆ ಇತ್ತು. ಕೃಷ್ಣ ಧರ್ಮನಿಗೆ ಇದನ್ನೆ ಹೇಳಿದನು: "ಜರಾಸಂಧ ಜೀವಿಸುವವರೆಗೆ ಜನರಿಗೆ ಬೇಕಿದ್ದರೂ ನೀನು ಸಾಮ್ರಾಟನೆನಿಸಲಾರೆ." ಯಾವ ರಾಜ ರಾಜಸೂಯ ಯಜ್ಞವನ್ನು ಮಾಡುವನೋ ಆತನಿಗೆ ಹತ್ತು ರಾಜರನ್ನು ಜಯಿಸುವುದಿದ್ದಲ್ಲಿ, ಹತ್ತು ರಾಜರಾದರೂ ಆತನ ಮಿತ್ರರಿರಬೇಕಿತ್ತು. ರಾಜಸೂಯ ಯಜ್ಞವು ದಿಗ್ವಿಜಯದ ಕುರುಹಾಗಿದ್ದಂತೆ ಪ್ರತಿಷ್ಠೆಯ ನಿದರ್ಶಕವೂ ಆಗಿತ್ತು. ಸಮಬಲರಾಗಿ ರಾಜರು, ಅಕ್ಕಪಕ್ಕದಲ್ಲಿಯೇ ಆಳುತ್ತಿದ್ದರು. ರಾಜಸೂಯ ಯಜ್ಞವನ್ನು ಯಾರೊಬ್ಬರು ಮಾಡಿದರೆಂದು ಈ ಸಮತೆಯು ನಷ್ಟವಾಗುತ್ತಿರಲಿಲ್ಲ. ಎಲ್ಲರಲ್ಲಿ ಭೀತಿಯನ್ನು ಹುಟ್ಟಿಸಿ ಜರಾಸಂಧ ಈ ಸುವ್ಯವಸ್ಥೆಯನ್ನು ಮುರಿದು ಹಾಕಿದ್ದ. ಸರಿಕರಾದ ರಾಜರನ್ನು ಸೆರೆಯಲ್ಲಿ ಇಡುವುದು, ಮತ್ತು ಸೈನ್ಯದ ಬಲದಿಂದ ಅವರ ರಾಜ್ಯವನ್ನು ಆಕ್ರಮಿಸುವುದು ಆಗಿನ ಕ್ಷತ್ರಿಯ ರೂಢಿಗೆ ಅನುಸರಿಸಿರಲಿಲ್ಲವೆಂದು ಕೃಷ್ಣನದಾದರೂ ಅಭಿಪ್ರಾಯವಾಗಿತ್ತು.

ಮಹಾಭಾರತದ ಕಾಲದ ನಂತರ ಬುದ್ಧರ ವಾಙ್ಮಯವು ಉಪಲಬ್ಧವಿದೆ. ಅದರಲ್ಲಿ ಕಾಶಿ–ಕೋಸಲ ಮುಂತಾದ ಸಾಮ್ರಾಜ್ಯಗಳ ವರ್ಣನೆ ಇದೆ. ಆ ಕಾಲದಲ್ಲಿ ರಾಜ್ಯದ ಸ್ಪರ್ಧೆಯಲ್ಲಿ ಒಬ್ಬರನ್ನೊಬ್ಬರು ನಿರ್ಮೂಲಗೊಳಿಸಲು ಹವಣಿಸುತ್ತಿದ್ದರು ಮತ್ತು ಸಾಮ್ರಾಜ್ಯಗಳನ್ನು ಕಟ್ಟುತ್ತಿದ್ದರೆಂದು ಕಂಡುಬರುತ್ತದೆ. ಬುದ್ಧನ ತರುವಾಯ ಚಂದ್ರಗುಪ್ತಮೌರ್ಯನು ಈ ತರಹದ ಸಾಮ್ರಾಜ್ಯವನ್ನು ಕಟ್ಟಿದ್ದನು. ಅನಂತರ ಅಶೋಕನು ಸಹ ಈ ರೀತಿ ಮಾಡಿದ. ಆಳಿದ ಕುಮಾರಗುಪ್ತ, ಸಮುದ್ರಗುಪ್ತ, ಸಾಮ್ರಾಜ್ಯ ಸ್ಥಾಪಕರೇ ಆಗಿದ್ದರು. ನೆರೆಯವರ ರಾಜ್ಯವನ್ನು ಆಕ್ರಮಿಸಿ ಸಾಮ್ರಾಜ್ಯವನ್ನು ಸ್ಥಾಪಿಸುವುದು ಸಾಮಾನ್ಯ ತತ್ತ್ವ ಎನಿಸಿತ್ತು. ಹೀಗಿದ್ದರೂ ಗುಪ್ತರ ಕಾಲದಲ್ಲಿ ಜೀವಿಸಿದ ಕಾಳಿದಾಸ ಮಹಾಭಾರತ ಕಾಲದ ಮೂಲತತ್ತ್ವಗಳ ಉಚ್ಚಾರಣೆಯನ್ನು ರಘುವಂಶದಲ್ಲಿ ಮಾಡಿದ್ದಾನೆ. ರಘು ರಾಜನ ದಿಗ್ವಿಜಯವನ್ನು ಬಣ್ಣಿಸುವಾಗ ಆತ **ಶ್ರಿಯ ಕಲಿಂಗನಾಥಸ್ಯ ಜಹಾರನ ತು ಮೇದಿನೀಮ್** ಎಂದು ಹೇಳಿದ್ದಾನೆ. ಇದೇ ರೀತಿಯ ಕಲ್ಪನೆಯು ಮಹಾಭಾರತ ಕಾಲದಲ್ಲಿ ರೂಢಿಯಲ್ಲಿತ್ತು.

ದಿಗ್ವಿಜಯವೆಂದರೆ ಒಂದು ವಿಶಿಷ್ಟ, ನಿಯಮಿತ ಪ್ರಮಾಣದಲ್ಲಿಯ ಹೋರಾಟವಿತ್ತು. ಹೋರಾಟವು ಕೀರ್ತಿಗಾಗಿ ಇರುತ್ತಿತ್ತು. ಭೂಮಿ ಸಂಪಾದನೆಗಾಗಿ ಇರುತ್ತಿರಲಿಲ್ಲ. ಕರಭಾರವನ್ನು ಕಲೆಹಾಕಿ ಅದನ್ನು ದಾನವಾಗಿ ಹಂಚುವುದೇ ವಿನಾ ತಮ್ಮಲ್ಲಿ ಶೇಖರಿಸುವುದಲ್ಲ–ಎಂಬ ನಿಯಮವಿತ್ತು. ದೊಡ್ಡ ದಿಗ್ವಿಜಯವನ್ನು ಮಾಡುವುದು, ಪರಾಭೂತ ರಾಜರಿಂದ ಹೇರಳ ಧನಕನಕಗಳನ್ನು ದೊರಕಿಸುವುದು, ದೊಡ್ಡ ಯಜ್ಞವೊಂದನ್ನು ನೆರವೇರಿಸುವುದು; ಆಗ ಅನ್ಯರಿಂದ ದೊರಕಿಸಿದ ಸಂಪತ್ತಿನೊಡನೆ ತಮ್ಮಲ್ಲಿಯ ಸಂಪತ್ತಿಯ ಭಾಗವನ್ನು ಕೂಡಿಸಿ ಸರ್ವವನ್ನು ದಾನಮಾಡುವುದು; ಸೋಲಿಸಲ್ಪಟ್ಟ ರಾಜರನ್ನು ಆಮಂತ್ರಿಸಿ ಅವರನ್ನು ಸತ್ಕರಿಸುವುದು; ಅವರಿಗೆ ಯೋಗ್ಯ ಮರ್ಯಾದೆಯನ್ನು ಸಲ್ಲಿಸಿ ಯಜ್ಞದ ನಂತರ ಬೀಳ್ಕೊಡುವುದು. ಈ ರೀತಿಯ ಆಗಿನ ರೂಢಿಯ ವರ್ಣನೆಯನ್ನು ಧರ್ಮರಾಜನ ರಾಜಸೂಯ ಯಜ್ಞದ ಕಾಲದಲ್ಲಿ ಬಣ್ಣಿಸಿದ್ದಾರೆ. ಇದನ್ನೆ ಕಾಳಿದಾಸ ರಘುವಂಶದಲ್ಲಿ ಚಿತ್ರಿಸಿದ್ದಾನೆ. ಸಂಪತ್ತಿನ ದಾನವನ್ನು ಸತತವಾಗಿ ಮಾಡಿ ಸ್ವತಃ ನಿರ್ಧನನಾಗುವುದು; ಕೊನೆಯಲ್ಲಿ ಯಾರಿಗೂ ಯಾವ ತರಹದ ದಾನವನ್ನು ಮಾಡಲು ಶಕ್ತಿ ಇಲ್ಲದಂತಾಗುವುದು; ಇದು ಕ್ಷತ್ರಿಯರಿಗೆ ಭೂಷಣವಿತ್ತು. **ಅಕಿಂಚನತ್ವಂ ಮಖಜಂ ವ್ಯನಕ್ತಿ** ಎಂದು ರಘುವಿನ ಬಗ್ಗೆ ಕಾಳಿದಾಸನು ಬರೆದಿಟ್ಟಿದ್ದಾನೆ. ರಘುರಾಜನು ಯಜ್ಞದಲ್ಲಿ ದಾನ ಕೊಟ್ಟು ನಿರ್ಧನನಾದ ವರ್ಣನೆ ಅದರಲ್ಲಿದೆ. ಆಯಾ ಕ್ಷತ್ರಿಯ ಕುಲದವರ ರಾಜ್ಯದ ಮೇಲಣ ಬಾಧ್ಯತೆಯು ಅಬಾಧಿತವಾಗಿರುತ್ತಿತ್ತು. ಯುದ್ಧದಲ್ಲಿ ಅವರ ಸಂಪತ್ತು ಇಲ್ಲದಂತಾಗುತ್ತಿತ್ತು. ಸೋಲಿನಲ್ಲಿ ಕೀರ್ತಿಯು ಅಳಿಯುತ್ತಿತ್ತು ಮತ್ತು ಕರಭಾರವನ್ನು ಕೊಡಬೇಕಾಗುತ್ತಿತ್ತು. ಪರಾಭವದಿಂದ ಉಂಟಾದ ಲಾಂಛನ ಮತ್ತು ಸಂಪತ್ತಿನ ನಾಶವು ಎಂದರೆ, ಸೋತವರು "ಶ್ರೀ" ಯನ್ನು ಕಳೆದುಕೊಂಡ ಲಕ್ಷಣವಾಗುತ್ತಿತ್ತು. ಆದರೆ ಯಾರ ಭೂಮಿಯನ್ನೂ ಅನ್ಯರು ಆಕ್ರಮಿಸುತ್ತಿರಲಿಲ್ಲ. ಎದುರೆದುರು ಕಾಳಗದಲ್ಲಿ ಒಂದು ಪಕ್ಷದ ರಾಜನು ಮಡಿಯಬಹುದಿತ್ತು. ಆದರೆ ಸೋತ ರಾಜನನ್ನು ಸೆರೆಯಲ್ಲಿಡುವುದು, ಇಲ್ಲವೆ ಆತನ ವಧೆಯನ್ನು ಮಾಡುವುದು ಆಗಿನ ರೂಢಿ ಇರಲಿಲ್ಲ. ಈ ತರಹದ ರೂಢಿಗೆ ಜರಾಸಂಧ ಮಸಿ ಬಳೆದಿದ್ದ. ಜರಾಸಂಧನ ದಿಗಿಲಿನಿಂದ ಕೇವಲ ಯಾದವರಲ್ಲದೇ ಬೇರೆಯ ಅರಸರು ಕೂಡ ತಮ್ಮ ರಾಜ್ಯಗಳನ್ನು ಬಿಟ್ಟು ಹೋದದ್ದೂ, ಇಲ್ಲವೇ ಬೇರೆ ಕಡೆಗೆ ರಾಜ್ಯಗಳನ್ನು ನಿರ್ಮಿಸಿದ ಉಲ್ಲೇಖಗಳು ಸಭಾಪರ್ವದಲ್ಲಿ ಬಂದಿವೆ. ಜರಾಸಂಧ ಮಗಧದಿಂದ ಮಧುರೆಯವರೆಗೂ ಬಂದಿದ್ದ. ಆದರೆ ಹಸ್ತಿನಾಪುರದ ರಾಜರಿಗೆ ಆತನ ಉಪದ್ರವವಾದಂತೆ ತೋರುವುದಿಲ್ಲ. ಜರಾಸಂಧನ ಬಗ್ಗೆ ಧರ್ಮನಿಗೆ ಎಳ್ಳಷ್ಟು ಮಾಹಿತಿಯು ಇರದಿದ್ದನ್ನು ಕಂಡು ಕೃಷ್ಣ ಆತನಿಗೆ ಅದನ್ನು ಹೇಳಿದಂತಿದೆ. ಇದರಿಂದ ಇನ್ನೊಂದು ಸಂಗತಿಯು ವ್ಯಕ್ತವಾಗುತ್ತದೆ. ಅದೇನೆಂದರೆ ದ್ರೌಪದೀ ಸ್ವಯಂವರದವರೆಗೆ ಪಾಂಡವರ ಮತ್ತು ಕೃಷ್ಣನ ಸಂಬಂಧ ಉಂಟಾಗಿರಲಿಲ್ಲ. ಮೊದಲೇ ಸಂಬಂಧ ಬಂದಿದ್ದರೆ ಜರಾಸಂಧನ ಭಯದಿಂದ ತಾನು ಯಾವ ರೀತಿ ಓಡಿಹೋದನೆಂದು ಹೇಳುವ ಅವಶ್ಯಕತೆ ಇರಲಿಲ್ಲ.

ಕ್ಷತ್ರಿಯತ್ವ ಮತ್ತು ಕ್ಷತ್ರಿಯರ ಪರಸ್ಪರ ಸಂಬಂಧಗಳು ಇವುಗಳ ಬಗ್ಗೆ ಕೃಷ್ಣನ ಕೆಲವು ಅಭಿಪ್ರಾಯಗಳಿದ್ದವು. ಯಾದವರ ಕುಲಕ್ಕೆ ಕೊಟ್ಟ ಉಪದ್ರವಗಳಿಂದ ಕೃಷ್ಣ, ಜರಾಸಂಧನ ಮೇಲೆ ಕೋಪವಿಟ್ಟುಕೊಂಡಿದ್ದ. ಇದು ನಿಜವಿದ್ದರೂ ಜರಾಸಂಧ ಮೇಲೆ ಹೇಳಿದಂತೆ ಕ್ಷತ್ರಿಯತ್ವವನ್ನು ಅನುಸರಿಸಿ ವರ್ತಿಸುತ್ತಿರಲಿಲ್ಲ. ಆತ ಒಂದೂನೂರು ಅರಸರನ್ನು ಬಂಧಿಸಿ ಅವರನ್ನು ಕೊಂದು ಹಾಕುವ ಇರಾದೆ ಇಟ್ಟುಕೊಂಡಿದ್ದ, ಇದು ಕೂಡ ಕೃಷ್ಣ ಕೋಪಗೊಳ್ಳುವುದಕ್ಕೆ ಅಷ್ಟೇ ಕಾರಣವಾಗಿತ್ತು. ಮಹಾಭಾರತದಲ್ಲಿ ಪರಸ್ಪರರ ಕುಲ ಸಂಬಂಧಗಳು ಯಾವ ರೀತಿಯಲ್ಲಿ ನಿಗದಿತವಿದ್ದವೆಂಬುದು ಈ ಪ್ರಕರಣದಲ್ಲಿ ತೋರುತ್ತದೆ. ಚೇದಿರಾಜನಾದ ಶಿಶುಪಾಲ, ಯಾದವರ ಮನೆತನದ ಮಗಳ ಮಗ, ಕೃಷ್ಣನಿಗೆ ಪಾಂಡವರ ಆಪ್ತಸಂಬಂಧ ಹೇಗೋ ಅದೇ ರೀತಿಯ ಸಂಬಂಧ ಶಿಶುಪಾಲನೊಡನೆ ಇತ್ತು. ಆದರೆ ಶಿಶುಪಾಲ ಹಲವೊಂದು ಕಾರಣಗಳಿಂದ ಜರಾಸಂಧನ ಹಸ್ತಕನೂ ಕೃಷ್ಣನ ವೈರಿಯೂ ಆಗಿದ್ದ. ಕೃಷ್ಣ ಯೋಜಿಸಿದ ಕಾರ್ಯಗಳಲ್ಲಿ ಶಿಶುಪಾಲನ ವಧೆ ಇರಲಿಲ್ಲ. ಜರಾಸಂಧನನ್ನು ನಿರ್ಮೂಲ ಮಾಡುವುದು ಆತನ ಮನಸ್ಸಿನಲ್ಲಿತ್ತು. ಕೃಷ್ಣ ಆ ಸಂಧಿಗಾಗಿ ಕಾಯುತ್ತಿದ್ದ. ಜರಾಸಂಧನನ್ನು ಕೊಂದುಹಾಕಿ ಅವನ ಬಂದಿವಾಸದಲ್ಲಿದ್ದ ರಾಜರನ್ನು ಬಿಡುಗಡೆ ಮಾಡಿಸಿ ಕ್ಷತ್ರಿಯರ ಪೂರ್ವಾಪರ ಸಂಬಂಧಗಳನ್ನು ಪ್ರಸ್ಥಾಪಿಸುವುದು ಒಂದು ಮಹತ್ಕಾರ್ಯವೆಂದು ಗಣಿಸಿದ್ದ. ಕ್ಷತ್ರಿಯ ಸಮಾಜದ ಬಗ್ಗೆ ಇದೊಂದು ಕೃಷ್ಣನ ಮಹತ್ವಾಕಾಂಕ್ಷೆಯಾಗಿತ್ತು.

ಇವೆಲ್ಲ ಸಂಗತಿಗಳಲ್ಲಿ, ಕೃಷ್ಣನಿಗೆ ವೈಯಕ್ತಿಕ ಲಾಭವಿದ್ದಂತೆ ಕಾಣುವುದಿಲ್ಲ. ಈ ಎಲ್ಲಾ ರಾಜಕಾರಣವು ಕುಲಕ್ಕಾಗಿ ಮತ್ತು ಆಗಿನ ಅಂತರರಾಜ್ಯಗಳ ಸುವ್ಯವಸ್ಥೆಗಾಗಿ ಆಗಿತ್ತು. ಕೃಷ್ಣನಿಗೆ ವೈಯಕ್ತಿಕ ಆಕಾಂಕ್ಷೆಗಳು ಇರಲೇ ಇಲ್ಲವೋ? ಶೂರನೂ ಪರಾಕ್ರಮಿಯೂ ಆಗಿದ್ದರೂ ಬಲರಾಮನ ಚಿಕ್ಕ ತಮ್ಮನಾಗಿದ್ದರಿಂದ ಅರ್ಜುನನಂತೆ ಆತನು ಸಹ ರಾಜನಾಗಲಿಲ್ಲ. ಒಂದು ಸಮಯ ಆತ ಪಟ್ಟವೇರಿದ್ದರೆ ಹಿರಿಯವನು ಪಟ್ಟಕ್ಕೆ ಬರುವ ರೂಢಿಯನ್ನು ಉಲ್ಲಂಘಿಸಿದಂತಾಗುತ್ತಿತ್ತು. ಮತ್ತು ಯಾದವರಲ್ಲಿಯೇ ಕಲಹಗಳು ಉಂಟಾಗುತ್ತಿದ್ದವು. ಈ ಕಾರಣವನ್ನು ಅರಿತುಕೊಂಡ ಆತ ದುಯ್ಯಮ ಸ್ಥಾನವನ್ನು ಸ್ವೀಕರಿಸಿದ್ದ. ರಾಜನಾಗದೇ ಇದ್ದರೂ ಆತ ಇನ್ನೊಂದು ಮಹತ್ವಾಕಾಂಕ್ಷೆಯನ್ನು ಹೊಂದಿದ್ದನೆಂದು ಮಹಾಭಾರತದಿಂದ ವಿದಿತವಾಗುತ್ತದೆ. ಈ ಮಹತ್ವಾಕಾಂಕ್ಷೆಯೆಂದರೆ 'ವಾಸುದೇವ'ನೆಂದು ಎನಿಸಿಕೊಳ್ಳುವುದು.

'ವಾಸುದೇವ'ನೆಂದರೆ ಖಂಡಿತವಾಗಿ ಏನಿರಬಹುದು? ಎಂಬುದರ ಪೂರ್ಣ ಅರ್ಥವಾಗುವುದಿಲ್ಲ. ಪುರಾಣದಲ್ಲಿ ಕೃಷ್ಣ ವಾಸುದೇವ, ವಿಷ್ಣುವಿನ ಅವತಾರವೆಂದು ಮತ್ತು ತನ್ನ ಅವತಾರ ಕಾರ್ಯವನ್ನು ಪೂರೈಸಿ ಆತ ಮರಳಿದನೆಂದು ಕಥಾಭಾಗವಿದೆ. ಈ ಕಥೆ ಎಲ್ಲರಿಗೂ ಗೊತ್ತಿರುತ್ತದೆ. ಕೃಷ್ಣ ವಾಸುದೇವ ತನ್ನ ಇಡೀ ಜೀವನವನ್ನು ದೇವತ್ವವನ್ನು ಪಡೆದು ಕಳೆದನು. ಆತ ಚಮತ್ಕಾರಗಳನ್ನು ತೋರಿಸಿ ದೇವರೆಂದೆನಿಸಿಕೊಂಡ; ಎಂದು ನಾವು ಗ್ರಹಿಸಿದ್ದೇವೆ. ಅನಂತರದ ಸಂಸ್ಕೃತ ವಾಙ್ಮಯದಲ್ಲಿಯೂ ಇದೇ ರೀತಿ ಕಾಣುತ್ತದೆ. ವಿವಿಧ ಭಾಷೆಗಳಲ್ಲಿಯ ಪಾಂಡವ ಪ್ರತಾಪ, ಭಕ್ತಿವಿಜಯ, ರುಕ್ಮಿಣೀ ಸ್ವಯಂವರ, ಸುಭದ್ರಾಹರಣ

ಮೊದಲಾದ ಗ್ರಂಥ, ಆಖ್ಯಾನಗಳು, ಅವುಗಳಿಂದ ಆಧಾರಿತ ರಸವತ್ತಾದ ನಾಟಕಗಳು, ಕೃಷ್ಣನ ಬಗ್ಗೆ ಇದೇ ದೇವತ್ವದ ಭಾವನೆಯನ್ನು ದೃಢಗೊಳಿಸುತ್ತದೆ. ಮಹಾಭಾರತವನ್ನು ಓದುತ್ತಿದ್ದಂತೆ ಈ ರೀತಿಯ ದೇವತ್ವದ ಉಲ್ಲೇಖವೇ ಇದರಲ್ಲಿ ಇಲ್ಲದ ಕಾರಣ ಆಶ್ಚರ್ಯವೆನಿಸುತ್ತದೆ. ಕೃಷ್ಣ ಅಸಾಮಾನ್ಯ ಮಾನವ. ಆದರೆ ಆತ ಮಾನವನೇ ! ಎಂಬ ವರ್ಣನೆಯು ಮಹಾಭಾರತದಲ್ಲಿ ಇದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಆದರೆ 'ವಾಸುದೇವ'ನೆಂದು ಅನಿಸಿಕೊಳ್ಳುವ ಆತನ ಪ್ರಯತ್ನಗಳು ವಾಸುದೇವನೆನ್ನಿಸಿಕೊಳ್ಳಲು ಬೇರೆ ಕೆಲವರ ಆಕಾಂಕ್ಷೆಗಳು; ಮತ್ತು ಕೃಷ್ಣನು ತನ್ನ ವಾಸುದೇವತ್ವವನ್ನು ಉಳಿಸಿಕೊಳ್ಳಲು ಬೇರೆ ಸ್ಪರ್ಧಿಗಳನ್ನು ಕೊಲ್ಲಬೇಕಾದ ಆವಶ್ಯಕತೆ, ಈ ಎಲ್ಲಾ ಉಲ್ಲೇಖಗಳನ್ನು ಓದಿ ಮನಸ್ಸಿನಲ್ಲಿ ಸಂಭ್ರಮ ಉಂಟಾಗುತ್ತದೆ.

ಇವುಗಳ ಬಗ್ಗೆ ಮಹಾಭಾರತದಲ್ಲಿ ಯಾವ ಸ್ಪಷ್ಟೀಕರಣವೂ ಇಲ್ಲ. ಆದರೆ ಜೈನ ವಾಙ್ಮಯದಲ್ಲಿ ಅದು ಇರುವುದು. 'ವಾಸುದೇವ' ಇದರ ಬಗ್ಗೆ ಜೈನ ಸಂಪ್ರದಾಯದ ಕಲ್ಪನೆ ಈ ರೀತಿ ಇದೆ. ಜೈನರು ಕಾಲಚಕ್ರದಲ್ಲಿ ಇಪ್ಪತ್ತು ನಾಲ್ಕು ಭಾಗಗಳನ್ನು ಕಲ್ಪಿಸಿದ್ದಾರೆ. ಅದರಲ್ಲಿಯ ಹನ್ನೆರಡು ಭಾಗಗಳು 'ಉತ್ಸರ್ಪಿಣಿ' [ಮೇಲೆ ಹೋಗುವ ಅವಸ್ಥೆ] ಮತ್ತು ಹನ್ನೆರಡು ಭಾಗಗಳು 'ಅವಸರ್ಪಿಣಿ' [ಕೆಳಗೆ ಬರುವ] ಕೆಳಗಿನಿಂದ ಮೇಲೆ ಏರುವ ಅವಸ್ಥೆಯಲ್ಲಿ ಸಮಸ್ತ ಜೀವಗಳು ಉತ್ತಮೋತ್ತಮ ಗುಣಗಳ ಕಡೆ ಸಾಗುತ್ತಿರುತ್ತವೆ. ಆದರೆ 'ಅವಸರ್ಪಿಣಿ'ಯಲ್ಲಿ ಅವುಗಳು ಅಧೋಗತಿ ಹೊಂದುತ್ತವೆ. ಈ ಕಾಲಚಕ್ರದ ಹಲಕೆಲವೊಂದು ಭಾಗಗಳನ್ನು ಸೇರಿ ಒಂಬತ್ತು 'ವಾಸುದೇವರು' ಒಂಬತ್ತು ಬಲದೇವರು, ಒಂಬತ್ತು ಪ್ರತಿ ವಾಸುದೇವರು. ನಿರ್ಮಾಣರಾದರು. ಅವಸರ್ಪಿಣಿಯ ಕಾಲದಲ್ಲಿ ರಾಮ ಮತ್ತು ಕೃಷ್ಣ ಈ ಇಬ್ಬರು ವಾಸುದೇವರೆನಿಸಿದರು. ಎಲ್ಲಾ ಒಂಬತ್ತು ವಾಸುದೇವರ ತಂದೆ ತಾಯಿಗಳ ಹೆಸರುಗಳನ್ನು ಕೊಡಲಾಗಿವೆ. ರಾಮನ ತಾಯಿಯ ಹೆಸರು 'ಕೇಗಮಯಿ' ತಂದೆಯ ಹೆಸರು 'ದಶರಥ' ಕೃಷ್ಣನ ತಾಯಿ 'ದೇವಕಿ', ತಂದೆ 'ವಾಸುದೇವ' ಅಂದರೆ [ಕಣ್ವ] ಕೃಷ್ಣನು ಪೈತೃಕ ಅರ್ಥದಿಂದ 'ವಾಸುದೇವ'ನಿದ್ದನು. ವಾಸುದೇವ ಎನಿಸಿಕೊಂಡವರು ಅಖಿಲ ತ್ರಿಖಂಡ ಭರತ ಚಕ್ರವರ್ತಿಯಾಗಿರುತ್ತಿದ್ದರು. ರಾಮನಿಗೆ ಬಲದೇವನಾಗಿ ಲಕ್ಷ್ಮಣನಿದ್ದ. ಪ್ರತಿ ವಾಸುದೇವನಾಗಿ ರಾವಣನಿದ್ದ. ಕೃಷ್ಣನಿಗೆ ಬಲದೇವನಾಗಿ ಬಲರಾಮನಿದ್ದನು. ಪ್ರತಿವಾಸುದೇವನಾಗಿ ಕಂಸನಿದ್ದನು. ಮೊದಲಿನ ಏಳು ವಾಸುದೇವರು ಗೌತಮ ಗೋತ್ರದವರು. ಎಂಟನೆಯ ವಾಸುದೇವನಾದ ದಾಶರಥಿ ರಾಮನು, ಹಾಗೆಯೇ ಒಂಬತ್ತನೆಯ ವಾಸುದೇವನಾದ ಕೃಷ್ಣ ಕಚ್ಛಪಿ ಗೋತ್ರದವರು. ಈ ಎಲ್ಲಾ ವಾಸುದೇವರ ಬಳಿಯಲ್ಲಿ ಏಳು ರತ್ನಗಳು ಇರುತ್ತಿದ್ದವು. ಅವೆಂದರೆ ಚಕ್ರ, ಖಡ್ಗ, ಧನು, ಮಣಿ, ಮಾಲಾ, ಗದಾ ಮತ್ತು ಶಂಖ. ಕೃಷ್ಣನ ಬಳಿಯಲ್ಲಿಯೂ ಚಕ್ರ, ಖಡ್ಗ, ಕೌಮೋದಕಿ ಗದೆ, ವೈಜಯಂತಿಮಾಲೆ, ಸ್ಯಮಂತಕ (?) ಮಣಿ, ಶಾರ್ಙ್ಗಧನು ಇವೆಲ್ಲವು ಇದ್ದವು. **'ಅಭಾವೋ ನತ್ಥಿ ವಾಸುದೇವಾಣಮ್'** ವಾಸುದೇವನೆಂದೆನಿಸುವವರೆಗೆ ಎಲ್ಲವೂ ಸಮೃದ್ಧಿಯಾಗಿ ಇರುತ್ತದೆ. [ಅಭಾವವೇ ಇರುವುದಿಲ್ಲ ಎಂಬರ್ಥ] ಹಿಂದೂಧರ್ಮದವರ

ತಿಳುವಳಿಕೆಯಂತೆ ಮೇಲಿನ ವಾಕ್ಯದ ಅರ್ಥವನ್ನು ವಾಸುದೇವರೆಂದು ಪೂರ್ಣಸುಗುಣರಾದ,–ಸರ್ವಸಂಪನ್ನರಾದ ಪುರುಷೋತ್ತಮರಿದ್ದರು ಎಂಬ ಅರ್ಥವನ್ನು ಮಾಡಬಹುದು. ಇನ್ನೆರಡು ಸಂಗತಿಗಳನ್ನು ಹೇಳಿದ್ದಾರೆ. **'ಅವಗುಣಂ ನ ಗಿಣ್ಹಂತಿ'** ಎಷ್ಟೊ ತುಚ್ಛವಾದ ಭಯಂಕರವಾದ ಸಂಗತಿ ಇದ್ದರೂ, ಅದರಲ್ಲಿ ಏನಾದರೊಂದು ಒಳ್ಳೆಯದು ವಾಸುದೇವರಿಗೆ ಕಂಡುಬರುತ್ತದೆ. ಈ ಗುಣವು **'ಅಭಾವೊ ನತ್ಥಿ'** ಇದಕ್ಕೆ ಪೂರಕವೆಂದು ತಿಳಿಯಬೇಕು.

'ನೀಯೇಣ ಜುಝ್ಝೇಣ ನ ಜುಝ್ಝಂತಿ' [ಕೆಳಗೆ ನಿಂತು ಯುದ್ಧ ಮಾಡದೇ ಇರುವವರು] ಇದು ಅವರು ಮಹಾರಥಿಗಳಾಗಿದ್ದ ನಿದರ್ಶಕವಾಗಿದೆ.

ಈ ಎಲ್ಲಾ ತಿಳುವಳಿಕೆಗಳಲ್ಲಿ ಸನಾತನ ವಿಚಾರ, ಬೌದ್ಧ ಸಂಪ್ರದಾಯದ ವಿಚಾರ, ಕೇವಲ ಕ್ರಿಸ್ತಸಂಪ್ರದಾಯದ ವಿಚಾರಗಳು (?) ಕಂಡುಬರುತ್ತವೆ. ಸತ್ಯಯುಗದಿಂದ ಕಲಿಯುಗದವರೆಗೆ ಚತುಷ್ಪಾದ ಧರ್ಮದ ಒಂದೊಂದು ಪಾದವು ಕಳಚಿ ಬೀಳುತ್ತಿತ್ತು ಎಂಬ ವಿಚಾರವು 'ಅವಸರ್ಪಿಣಿ' ಕಾಲ ಚಕ್ರದಲ್ಲಿದೆ. 'ವಾಸುದೇವ' ಪ್ರತಿವಾಸುದೇವ ಎಂಬುವರು ಒಂದೊಂದು ಕಾಲ ಖಂಡದ ಪ್ರತಿನಿಧಿಗಳು ಎಂದು ಮನುವು ತಿಳಿಯುತ್ತಾನೆ. ಪೂರ್ಣಪುರುಷ, ದಶಾವತಾರೀ ಪುರುಷ. [ಒಂಬತ್ತು ವಾಸುದೇವರು?] ಎಂಬ ಕಲ್ಪನೆ ನಮ್ಮಲ್ಲಿಯೂ ಇದೆ. ವಾಸುದೇವ ಪ್ರತಿವಾಸುದೇವ ಈ ಕಲ್ಪನೆಯು ಕ್ರಿಸ್ತ ಪ್ರತಿಕ್ರಿಸ್ತ [Christ-anti-christ] ರೆಂಬ ಕಲ್ಪನೆಯು ಹೋಲುತ್ತದೆ. **'ಅವಗುಣಂ ನ ಗಿಣ್ಹಂತಿ'** ಈ ಕಲ್ಪನೆಯು ಬೌದ್ಧವಾಙ್ಮಯದಲ್ಲಿ ಪ್ರಚುರವಾಗಿದೆ. ಈ ಕಲ್ಪನೆಗಳ ಉಗಮದ ವಿಮರ್ಶೆ ಮಾಡಲು ಹೋದರೆ ಕೃಷ್ಣ ಚರಿತ್ರೆಯು ಬದಿಗೆ ಉಳಿಯಬಹುದು. ಮಹಾಭಾರತದಲ್ಲಿ ವಾಸುದೇವ, ಪುರುಷೋತ್ತಮರ ಉಲ್ಲೇಖಮಾಡಿದ ರೀತಿಯನ್ನು ಲಕ್ಷಿಸಿದರೆ 'ವಾಸುದೇವ'ನಾಗುವ ಮಹತ್ವಾಕಾಂಕ್ಷೆಯನ್ನು ಕೃಷ್ಣ ಹೊಂದಿದ್ದ ಎಂಬುದು ಕಂಡುಬರುತ್ತದೆ. ಆತನಲ್ಲಿ ವಾಸುದೇವನ ಗುಣಗಳಿದ್ದವೆಂದು ಕಂಡುಬರುತ್ತವೆ. ಆದರೆ ಈ ಕಲ್ಪನೆಯ ಸ್ಪಷ್ಟಾಸ್ಪಷ್ಟತೆ ವ್ಯಕ್ತವಾಗುವುದಿಲ್ಲ. ಭಾರತೀಯ ವೈಚಾರಿಕ ಮೊತ್ತವು, ಕಥೆ ಕಲ್ಪನೆ, ಮೌಲ್ಯಗಳು, ಜ್ಞಾನಗಳು, ಧರ್ಮ, ಇವೆಲ್ಲವುಗಳು ವಿವಿಧ ರೀತಿಯಲ್ಲಿ ಹಲವು ಬಗೆಗಳಿಂದ ಉದ್ಭವಿಸಿರುವುದರಿಂದ ಅವುಗಳ ಪರಿಶೀಲನೆಯನ್ನು ತತ್ತ್ವಶೋಧಕ ದೃಷ್ಟಿಯಿಂದ ನಡೆಸಬೇಕಾದುದು ಅಗತ್ಯವೆನಿಸುತ್ತದೆ.

ಮಹಾಭಾರತದಲ್ಲಿ ಅಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟ ಮತ್ತು ಕುತೂಹಲಕಾರಿಯಾದ ಸಂಗತಿಗಳಿವೆ. 'ವಾಸುದೇವ'ನೆಂಬುದು ಅವುಗಳಲ್ಲಿ ಒಂದು. ಈ ಕಾಲದಲ್ಲಿ ಮೂರು ಜನ ವಾಸುದೇವರೆನಿಸಿಕೊಳ್ಳಲು ಹವಣಿಸುತ್ತಿದ್ದರೆಂದು ಕಾಣುತ್ತದೆ. ಒಬ್ಬ ವಸುದೇವಸುತ ಕೃಷ್ಣ, ಇನ್ನೊಬ್ಬ ಶಿಶುಪಾಲ. ಈತನಿಗೆ ಹುಟ್ಟಿನಿಂದಲೇ ನಾಲ್ಕು ಕೈಗಳಿದ್ದವು. ಅದರಲ್ಲಿ ಎರಡು, ಕೃಷ್ಣನ ದೃಷ್ಟಿಪಾತದಿಂದಲೇ ಕಳಚಿಹೋದವು. ಆನಂತರ ಆತ ವಾಸುದೇವನಾಗಲೂ ಪ್ರಯತ್ನಪಡಲಿಲ್ಲ. ಆದರೆ ಆತ ಕೃಷ್ಣನ ಕಡುವೈರಿಯಾಗಿದ್ದ ಎಂದು ತಿಳಿದುಬರುತ್ತದೆ.

ಪೂರ್ವದ ಕಡೆಯ (?) ಪೌಂಡ್ರುರಾಜನು ತಾನು ವಾಸುದೇವನೆಂದು ಅಂದುಕೊಳ್ಳುತ್ತಿದ್ದನು. ಕೃಷ್ಣನು ತಾನಾಗಿಯೇ "ಈ ಪೌಂಡ್ರನು ನನ್ನ ಚಿಹ್ನೆಗಳನ್ನು ಧರಿಸುತ್ತಾನೆ" ಎಂದು ಹೇಳಿದ್ದಾನೆ. ಅದಕ್ಕಾಗಿಯೇ ಕೃಷ್ಣ ಆತನ ಮೇಲೆ ಏರಿಹೋಗಿ ಯುದ್ಧದಲ್ಲಿ ಆತನನ್ನು ಕೊಂದ. ನಿಶ್ಚಿತವಾಗಿ ವಾಸುದೇವ ಆಗುವುದೆಂದರೆ ಏನಾಗುವುದು ? ಎಂಬುದು ಎಲ್ಲಿಯೂ ಸ್ಪಷ್ಟವಾಗಿಲ್ಲ. ಆದರೆ ವಾಸುದೇವನೆನಿಸಲು ಕೃಷ್ಣ ಮಾಡಿದ ಸಾಹಸಗಳನ್ನು ಯೋಚಿಸಿದರೆ ಅದರಲ್ಲಿ ಏನಾದರೂ ವಿಶೇಷವಿರಬೇಕೆಂದು ಅನಿಸುತ್ತದೆ. ಯಾವುದೇ ದೇಶದ ರಾಜನಾಗಿರದಿದ್ದರೂ, ಸಮ್ರಾಟನಾಗಿರದೇ ಇದ್ದರೂ ವಾಸುದೇವನೆಂದು ಅನಿಸಿಕೊಂಡವರಲ್ಲಿ ಕೃಷ್ಣನಿದ್ದನು. ಭಗವದ್ಗೀತೆಯಲ್ಲಿ ಕೃಷ್ಣ ಸ್ವತಃ "ವೃಷ್ಣೀನಾಂ ವಾಸುದೇವೋಹಮ್" ಎಂದು ಹೇಳಿದ್ದಾನೆ. ವಸುದೇವನಿಗೆ ಅನೇಕ ಹೆಂಡತಿಯರು ಇದ್ದರು. ಅವರಿಗೆ ಬಲರಾಮನ ಸಾರಣ ಮೊದಲಾದ ಪುತ್ರರು ಇದ್ದರು. ಆದರೆ ಕೇವಲ ಕೃಷ್ಣನೇ ವಾಸುದೇವನೆಂದು ಏಕೆ ಅನಿಸಿಕೊಳ್ಳುತ್ತಿದ್ದನು? ಪ್ರತಿಯೊಂದು ಮಗುವಿಗೆ ಅದರ ತಾಯಿಯ ಹೆಸರಿನ ಉಲ್ಲೇಖದಿಂದ ಕರೆಯಬಹುದಿತ್ತು. ಉದಾಹರಣೆಗಾಗಿ ರೌಹಿಣೇಯ, ಕೌಂತೇಯ, ಮಾದ್ರೇಯ. ಬೇರೆ ಬೇರೆ ತಾಯಂದಿರ ಮಕ್ಕಳಿದ್ದರೂ ಒಂದೇ ಪಿತನಿಂದ ಜನಿಸಿದ್ದರೆ ಎಲ್ಲರ ತಂದೆಯ ಹೆಸರು ಒಂದೇ ಇರುತ್ತಿತ್ತು. ಉದಾ–ಧರ್ಮಾ, ಭೀಮ, ಅರ್ಜುನರು, ಕೌಂತೇಯರಿದ್ದರು. ನಕುಲಸಹದೇವರು ಮಾದ್ರೇಯರಿದ್ದರು. ಐವರು ಪಾಂಡುವಿನ ಮಕ್ಕಳು, ಆದ್ದರಿಂದ ಪಾಂಡವರು ! ಈ ರೀತಿಯಲ್ಲಿ ನೋಡಿದರೆ ವಸುದೇವನ ಎಲ್ಲಾ ಮಕ್ಕಳಿಗೂ ವಾಸುದೇವನೆಂಬ ಅಭಿದಾನ ಇರಬೇಕಿತ್ತು. ಈ ರೀತಿ ವಾಸುದೇವನೆಂಬುವುದು ಪಿತನಿಂದ ಬಂದ ಹೆಸರು ಇರದೇ ಕೆಲವು ವಿಶೇಷ ಅರ್ಹತೆಯನ್ನು ಪಡೆದವರೇ ಈ ಪದವನ್ನು ಬಳಸಬಹುದಿತ್ತು. ಯಾವ ರೀತಿಯಲ್ಲಿ ರಾಜಸೂಯ ಯಜ್ಞವನ್ನು ಮಾಡಿದ ಅರಸನಿಗೆ ಸಾಮ್ರಾಟನೆಂಬ ಪದವಿಯು ದೊರೆಯುತ್ತಿತ್ತೋ ಮತ್ತು ಏಕಕಾಲದಲ್ಲಿ ಇಬ್ಬರು ಸಾಮ್ರಾಟರು ಇರುತ್ತಿದ್ದಿಲ್ಲವೋ, ಅದೇ ರೀತಿಯಾಗಿ ವಾಸುದೇವ ಪದವಿಯಲ್ಲಿ ಮಹತ್ವವಿತ್ತು. ವಾಸುದೇವನೆಂದು ಅನಿಸಿಕೊಳ್ಳಲು ಹಲವು ರಾಜರು ಪ್ರಯತ್ನಪಡುತ್ತಿದ್ದರು. ಆದರೆ ನಿಜವಾಗಿ ಈ ಪದವಿಯನ್ನು ಒಬ್ಬನೇ ಧರಿಸುವುದಿತ್ತು.

ಮಹಾಭಾರತದಲ್ಲಿ ಕೃಷ್ಣನ ಬಗ್ಗೆ ಇದ್ದ ವರ್ಣನೆಯಿಂದ ಒಂದು ಸಂಗತಿಯು ಪ್ರಮುಖವಾಗಿ ಕಾಣುತ್ತದೆ. ಆತ ನೇತ್ರದೀಪಕ, ಪ್ರಖರ, ದೈವೀ ತೇಜಸ್ಸುಳ್ಳವನು, ವಿಪುಲ ವೈಭವವನ್ನು ಹೊಂದಿದವನಿದ್ದನು. ಅವನ ರಥ ಕುದುರೆಗಳು, ಸ್ವತಃ ಆತ ಎಲ್ಲಿದ್ದರೂ ಎಲ್ಲರನ್ನು ಆಕರ್ಷಿಸುತ್ತಿದ್ದವು. ಆತ ಧನಕನಕಾದಿಗಳ ಒಡೆಯನಾಗಿದ್ದ. 'ವಾಸುದೇವ' ಈ ಶಬ್ದದಲ್ಲಿಯೂ ಇದೇ ಅರ್ಥವು ಸೂಚಿತವಾಗುತ್ತದೆ. 'ವಸು' ಎಂದರೆ ಸಂಪತ್ತು ಅಥವಾ ಸಮೃದ್ಧಿ. 'ದೇವ' ಎಂಬ ಶಬ್ದ ತೇಜಸ್ಸನ್ನು, ಅತಿಮಾನವತೆಯನ್ನು ತೋರುತ್ತದೆ. ಕೃಷ್ಣನ ಕೃತಿಗಳಿಂದ ಜನರು ಬೆರಗಾದ ಅನೇಕ ಪ್ರಸಂಗಗಳು ಮಹಾಭಾರತದಲ್ಲಿ ಅಲ್ಲಲ್ಲಿ ಇವೆ. ಎಲ್ಲಾ ಬಗೆಯ ವೃದ್ಧಿಸಿದ್ಧಿಗಳನ್ನು ಹೊಂದಿದ ವ್ಯಕ್ತಿಯೆಂದರೆ "ವಾಸುದೇವನು" ಎಂದು ಅನಿಸುತ್ತದೆ.

ತಾನು ಅಂತಹ ವ್ಯಕ್ತಿ ಎಂಬ ಆತನ ನಿಜಭಾವನೆ ಇತ್ತು. ಎಲ್ಲರೂ ಅದನ್ನು ಮನ್ನಿಸಬೇಕೆಂದು ಆತ ತವಕಪಡುತ್ತಿದ್ದ.

ಬುದ್ಧ ವಾಙ್ಮಯದಲ್ಲಿ ಕೃಷ್ಣವಾಸುದೇವ ದೇವಗಬ್ಬಾ ಮತ್ತು ಅಂಧಕವಣ್ಹಿ ಅವರಿಬ್ಬರ ಮಗನಿದ್ದನೆಂದು ಹೇಳಿದೆ. ಪಿತನ ಹೆಸರು ವಾಸುದೇವನೆಂದು ಬರೆದಿಲ್ಲ. ಇದರಿಂದ ವಾಸುದೇವ ಈ ಹೆಸರು ಪಿತನಿಂದ ಬಾರದೇ ಅದು ಒಂದು ಅಧಿಕಾರನಾಮ ಇರಬಹುದು ಎಂದು ಅನಿಸುತ್ತದೆ. ಮೇಲೆ ಹೇಳಿದಂತೆ ಜೈನ ಸಂಪ್ರದಾಯದ ಅನುಸಾರ ವಾಸುದೇವನೆಂಬುದರ ಅರ್ಥವು ಏನಿರಬೇಕು? ಎಂಬುದು ತಿಳಿಯುತ್ತದೆ. ಜೈನ ಸಂಪ್ರದಾಯವು ಬೌದ್ಧ ಧರ್ಮಕ್ಕಿಂತಲೂ ಪುರಾತನವಾದುದು. ಭಾರತೀಯ ಯುದ್ಧದ ಮೊದಲು ಜೈನ ಅಥವಾ ತತ್ಸಮ ಪಂಥಗಳು ಇದ್ದಿರಬೇಕು. ದೈವೀ ಸಾಮರ್ಥ್ಯವನ್ನು ಮತ್ತು ಕರ್ತೃತ್ವವನ್ನು ಪಡೆದ ವಾಸುದೇವ ಪದವಿಯನ್ನು ಹೊಂದುವ ವ್ಯಕ್ತಿ ಪ್ರತಿಯೊಂದು ಕಾಲ, ಖಂಡದಲ್ಲಿ ಆಗಿಹೋಗುವವನು ಎಂಬ ಕಲ್ಪನೆ ಜೈನ ಸಂಪ್ರದಾಯದ ಅನುಸಾರ ಕಂಡುಬರುತ್ತದೆ. 'ವಾಸುದೇವ' ಪದವಿಗೆ ಯೋಗ್ಯ ಯಾರು? ಯಾವ ರೀತಿಯಲ್ಲಿ ಪದವಿಯನ್ನು ಹೊಂದಬಹುದು? ಇದು ಜೈನ ವಾಙ್ಮಯದಲ್ಲಿಯೇ ಆಗಲೀ ಮಹಾಭಾರತದಲ್ಲಿಯೇ ಆಗಲೀ ಸ್ಪಷ್ಟವಾಗಿಲ್ಲ. ಈ ಪದವಿಯನ್ನು ಪಡೆಯಲು ಕೃಷ್ಣ ಬಲು ಪ್ರಯತ್ನಪಟ್ಟ. ಅದು ಆತನ ಮಹತ್ವಾಕಾಂಕ್ಷೆ ಇತ್ತು ಎಂಬುದರಲ್ಲಿ ಸಂದೇಹವಿಲ್ಲ.

ಭೀಮ ಜರಾಸಂಧನನ್ನು ವಧಿಸಿದ. ಧರ್ಮನ ರಾಜಸೂಯ ಯಜ್ಞದಲ್ಲಿ ಕೃಷ್ಣ, ಅಗ್ರಪೂಜೆಯ ಮಾನವನ್ನು ಪಡೆದ. ಇದೇ ನೆವವಾಗಿ ಶಿಶುಪಾಲನ ವಧೆಯಾಯಿತು. ಇವೆಲ್ಲವುಗಳ ನಂತರ ಕೃಷ್ಣನು ಪಾಂಡವರ ಆತಿಥ್ಯವನ್ನು ಸ್ವೀಕರಿಸಿ ಎಲ್ಲರ ಅನುಮತಿಯನ್ನು ಪಡೆದು ದ್ವಾರಕೆಗೆ ಮರಳಿದ. ಪ್ರಾಣ ಭಯದಿಂದ ತಲೆ ಮರೆಸಿಕೊಂಡು ಗುಡ್ಡಗಾಡಿನಲ್ಲಿ ಅಲೆದಾಡುವ ಪಾಂಡವರು ಇಂದ್ರಪ್ರಸ್ಥದಲ್ಲಿ ದಿಗ್ವಿಜಯ ಪಡೆದು ಸಾಮ್ರಾಟರೆನಿಸಿ ಮೆರೆದರು. ಪಾಂಡವರ ಜೀವನದಲ್ಲಿಯ ಈ ವಿಜಯಕಾಲ ಕೃಷ್ಣನ ಜೀವನದ ಪರಮೋಚ್ಚ ಘಟ್ಟವಾಗಿತ್ತು. ಆತನ ಸಾಮಾಜಿಕ, ಕೌಟುಂಬಿಕ ಮತ್ತು ವೈಯಕ್ತಿಕ ಆಕಾಂಕ್ಷೆಗಳು ಈಡೇರಿದ್ದವು, ಯಾದವರು ದ್ವಾರಕೆಯಲ್ಲಿ ಭದ್ರವಾಗಿ ನೆಲಸಿದ್ದರು. ಇಂದ್ರಪ್ರಸ್ಥದಲ್ಲಿಯ ಪಾಂಡವರು ಹಸ್ತಿನಾಪುರದಲ್ಲಿಯ ಕೌರವರು ಈ ಎರಡು ಮನೆತನಗಳು ಯಾದವರ ಆಪ್ತಸ್ನೇಹವನ್ನು ಹೊಂದಿದ್ದವು. ಶಿಶುಪಾಲನ ರಾಜ್ಯಕ್ಕೆ ಶಿಶುಪಾಲನ ಮಗ ಬಂದಿದ್ದ. ಆತ ಕೃಷ್ಣನಿಗೆ ಅನುಕೂಲನಾಗಿದ್ದ. ಜರಾಸಂಧನ ಮಗನಿಗೆ ಅಭಯವಿತ್ತು, ಪಟ್ಟ ಕಟ್ಟಿದರು. ಸಮಬಲರಾಜರು ನೆರೆಹೊರೆಯಲ್ಲಿ ಆಳುತ್ತಿದ್ದರು. ಈ ರೀತಿ ಕ್ಷತ್ರಿಯ ಸಮಾಜದಲ್ಲಿ ಸುವ್ಯವಸ್ಥೆ ಉಂಟಾಗಿತ್ತು. ಇಷ್ಟೇ ಅಲ್ಲದೆ ಯಾದವರ ಪ್ರತಿಸ್ಪರ್ಧಿಗಳು ಇಲ್ಲದಂತಾಗಿ ನೆರೆಯಲ್ಲಿಯ ಮಿತ್ರರಾಜ್ಯಗಳು ನಿರ್ಮಿತವಾಗಿದ್ದವು. ಇವೆಲ್ಲವು ಜರುಗುತ್ತಿದ್ದಾಗ ಕೃಷ್ಣನ ವರ್ಚಸ್ಸು ಎಲ್ಲೆಡೆ ಹಬ್ಬಿತ್ತು. ಶೌರ್ಯದ, ಹಾಗೇ ಮುತ್ಸದ್ದಿತನದ ಪ್ರಭಾವ ಹಬ್ಬಿತ್ತು. ಅಸಂತುಷ್ಟರಾದ ತುಸು ರಾಜರನ್ನು ಬಿಟ್ಟರೆ, ಕೃಷ್ಣನ ವೈಯಕ್ತಿಕ ಘನತೆಯನ್ನು ಉಳಿದವರೆಲ್ಲರು ಮನ್ನಿಸುತ್ತಿದ್ದರು. ಈ ಮನ್ನಣೆ ಅಗ್ರಪೂಜೆಯ

ಕಾಲಕ್ಕೆ ಘಂಟಾಘೋಷವಾಯಿತು. ರಾಜನಾಗಿರದಿದ್ದರೂ ವಯಸ್ಸಿನಿಂದ ಎಲ್ಲರಿಗೂ ಹಿರಿಯನಾಗಿರದಿದ್ದರೂ, ಕ್ಷತ್ರಿಯ ಸಭೆಯಲ್ಲಿ ಆತನಿಗೆ ಈ ಮಾನ ಲಭಿಸಿತ್ತು. ಇಷ್ಟೆಲ್ಲ ನಡೆದಿದ್ದರೂ ತಾನು ವಾಸುದೇವನೆಂದು ಕರೆದುಕೊಳ್ಳುವ. ಇನ್ನೊಬ್ಬ ರಾಜನು ಉಳಿದಿದ್ದ. ಆತನನ್ನು ವಧಿಸುವುದು ಕೃಷ್ಣನಿಗೆ ಅಸಾಧ್ಯವಿದ್ದಿಲ್ಲ. ಈ ರೀತಿಯಾಗಿ ಪೂರ್ಣತಹ ವಾಸುದೇವತ್ವವನ್ನು ಕೃಷ್ಣ ಪಡೆಯದಿದ್ದರೂ ಒಂದು ರೀತಿಯಲ್ಲಿ ವಾಸುದೇವನಾದಂತೆಯೇ ಇದ್ದ. ಕೃಷ್ಣನ ಎಲ್ಲಾ ಉದ್ದೇಶಗಳು ಈಡೇರಿ ಆತ ಕೃತಕೃತ್ಯನಾಗಿದ್ದ. ಕೃಷ್ಣ ಇಂದ್ರಪ್ರಸ್ಥದಿಂದ ಹೊರಟನಂತರ ಉಳಿದ ಶತ್ರುಗಳನ್ನು ಪರಾಭೂತಗೊಳಿಸುವುದರಲ್ಲಿ ತೊಡಗಿದ್ದನೆಂದು ಅನಂತರದ ಕಥಾಭಾಗದಿಂದ ತಿಳಿದುಬರುತ್ತದೆ.

ಯಾವ ಮಹತ್ವಾಕಾಂಕ್ಷೆಗಳನ್ನು ಪೂರೈಸಲು ಕೃಷ್ಣ, ಜೀವನವನ್ನೆಲ್ಲಾ ಹೋರಾಡಿದನೋ, ಯಾವ ಕನಸುಗಳನ್ನು ಕಾಣುತ್ತಿದ್ದನೋ, ಅವೆಲ್ಲವೂ ಸಫಲವಾದವು. ಆದರೆ ಈ ಸಫಲತೆ ಕ್ಷಣಕಾಲ ಮಾತ್ರ ಉಳಿಯಿತು. ಇಷ್ಟು ಮಹಾ ಪರಿಶ್ರಮದಿಂದ ರಚಿಸಲ್ಪಟ್ಟ ಸುವ್ಯವಸ್ಥೆಯ ಈ ಕಟ್ಟಡ ಅನಪೇಕ್ಷಿತ ರೀತಿಯಲ್ಲಿ ಧರ್ಮರಾಜನ ಮೂರ್ಖತನದಿಂದ ಕ್ಷಣ ಮಾತ್ರದಲ್ಲಿ ಕುಸಿಯಿತು. ಕೃಷ್ಣನ ಉದ್ದೇಶಗಳು ಅತಿ ವಿಶಾಲವಾಗಿದ್ದರೂ ಪಾಂಡವರ ವೈಯಕ್ತಿಕ ಮಹತ್ವಾಕಾಂಕ್ಷೆಗಳೊಡನೆ ನಿಗದಿತವಾಗಿದ್ದವು. ಪಾಂಡವರು ಪ್ರತಿಷ್ಠಿತರಾಗಿ ಉಳಿಯುವುದು, ಕೃಷ್ಣನ ಸಾಧ್ಯತೆಗಳಿಗೆ ಪೂರಕವಿತ್ತು. ಪಾಂಡವರು ಇಂದ್ರಪ್ರಸ್ಥದಲ್ಲಿದ್ದಾಗ ಕೌರವರೊಡನೆ ತಿಕ್ಕಾಟ ನಡೆದಿದ್ದರೆ ಕೃಷ್ಣನ ಉದ್ದೇಶಗಳಿಗೆ ಅಡ್ಡಿ ಬರುವಂತಿರಲಿಲ್ಲ. ಆದರೆ ಧರ್ಮರಾಜನ ಕೃತ್ಯದಿಂದ ಎಲ್ಲಾ ಉದ್ದೇಶಗಳ ನಾಶವಾಯಿತು. ಕೃಷ್ಣನ ವಾಸುದೇವತ್ವವೂ ಉಳಿಯಿತು. ಆತನ ಹಿರಿಮೆಯೂ ಉಳಿಯಿತು. ಆದರೆ ಮಿಕ್ಕದೆಲ್ಲವೂ ಅಳಿದುಹೋಯಿತು.

ಧರ್ಮರಾಜನ ರಾಜಸೂಯ ಯಜ್ಞ ಸಮಯಕ್ಕೆ ಎಲ್ಲಾ ಕ್ಷತ್ರಿಯ ಕುಲದಲ್ಲಿ ಯಾವ ಸುಸಂಘಟನೆಯಾಗಿತ್ತೋ ಅದು ಇಂದ್ರಪ್ರಸ್ಥದ ರಾಜ್ಯವನ್ನು ಪಾಂಡವರು ಕಳೆದುಕೊಂಡಿದ್ದರಿಂದ ಇಲ್ಲದಂತಾಯಿತು.. ಈ ಸಮಯದಲ್ಲಿ ಕೃಷ್ಣನ ಮಿತ್ರಪ್ರೇಮದ ಪರೀಕ್ಷೆ ನಡೆಯಿತು. ಮೂರ್ಖತನದಿಂದ ತಮ್ಮ ರಾಜ್ಯವನ್ನು ಕಳೆದುಕೊಂಡರು. ಇದರಿಂದ ಮೊದಲು ಪಾಲು ಮಾಡಿಕೊಟ್ಟ ಅರ್ಧರಾಜ್ಯವು ಹಸ್ತಿನಾಪುರದವರಿಗೆ ಪುನಃ ಸೇರಿಕೊಂಡಿತು. ಪಾಂಡವರು ತಮ್ಮ ನಾಶವನ್ನು ತಮ್ಮ ಕೈಗಳಿಂದ ತಾವಾಗಿಯೇ ಮಾಡಿಕೊಂಡರು. ಮಿಂಚಿಹೋದದ್ದಕ್ಕೆ ಉಪಾಯವಿಲ್ಲ ಎಂದು ಕೃಷ್ಣನು ಸುಮ್ಮನಿರಬಹುದಿತ್ತು. ಕೌರವರು ಕೂಡ ಆತನ ಮಿತ್ರರೇ ಆಗಿದ್ದರು. ಜೂಜಾಡಲು ಕೊಟ್ಟ ಕರೆಯನ್ನು ಕ್ಷತ್ರಿಯನು ನಿರಾಕರಿಸುವಂತಿಲ್ಲ ಎಂಬುದು ಧರ್ಮರಾಜನ ಅಭಿಪ್ರಾಯವಿತ್ತು. ಅದನ್ನು ಒಂದು ವೇಳೆ ಉಚಿತವೆಂದು ತಿಳಿದರೂ ಹೆಂಡತಿಯನ್ನು ಸಹ ಪಂದ್ಯಕ್ಕೆ ಒಡ್ಡುವುದು ಅಯೋಗ್ಯವಿತ್ತು. ನಡೆದ ಜೂಜಾಟದಲ್ಲಿ ಒಂದು ಸಲ ಕೂಡ ದಾಳಗಳು ಇಚ್ಛಿತ ರೀತಿಯಲ್ಲಿ ಬೀಳದಿರುವುದನ್ನು ಅರಿತು ಕೂಡ ಈ ಜೂಜಾಟವು ಪ್ರಾಮಾಣಿಕ ರೀತಿಯಲ್ಲಿ ನಡೆಯಲಿಲ್ಲವೆಂಬುದು

ಧರ್ಮರಾಜನಿಗೆ ಗೊತ್ತಾಗದೇ ಇರುವುದು ಆಶ್ಚರ್ಯ ! ಅಮಲೇರಿದವನಂತೆ ಧರ್ಮರಾಜನು ದ್ಯೂತವಾಡಿರಬಹುದು. ಇಂತಹ ಮೂರ್ಖ ಮಿತ್ರರನ್ನು "ನಿಮ್ಮ ನಿಮ್ಮ ಹಣೆಬರಹ" ಎಂದು ಹೇಳಿ ಕೃಷ್ಣನು ಕೈಬಿಟ್ಟಿದ್ದರೂ ಆತನ ರಾಜಕೀಯ, ಸಾಮಾಜಿಕ, ಹಾಗೇ ಕೌಟುಂಬಿಕ ರಾಜಕಾರಣವು ಸ್ಥಿರವಾಗಿಯೇ ಉಳಿಯಬಹುದಿತ್ತು. "ಯಾದವರಾದ ನಾವು ನಮ್ಮ ಭೂಮಿಯನ್ನು ಬಿಟ್ಟು ಇನ್ನೊಂದು ಕಡೆ ಓಡಿಹೋಗಿ ಹೊಸ ರಾಜ್ಯವನ್ನು ಕಟ್ಟಲಿಲ್ಲವೇ ? ಅದೇ ರೀತಿ ನೀವೂ ಕೂಡ ಎಲ್ಲಿಯಾದರೂ ದೂರ ಹೋಗಿ ಅದೇ ರೀತಿ ಮಾಡಿರಿ! ಈ ಕೌರವರ ನೆರೆಯಲ್ಲಿ ಇರುವುದೇ ಬೇಡ; ನಾನು ನಿಮಗೆ ಸಹಾಯಮಾಡುವೆನು" ಎಂದು ಕೂಡ ಆತ ಹೇಳಬಹುದಿತ್ತು. ಪಾಂಡವರು ವನವಾಸಕ್ಕೆ ಹೋದನಂತರ ಕೃಷ್ಣ ಅವರ ಭೇಟಿಗೆ ಅಲ್ಲಿಗೆ ಬಂದಾಗ ನಡೆದುಹೋದ ಸಂಗತಿಗಳ ಬಗ್ಗೆ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದ್ದಾನೆ. "ನಾನು ಅಲ್ಲಿ ಆ ಹೊತ್ತಿಗೆ ಇದ್ದಿದ್ದರೆ ಈ ದ್ಯೂತವನ್ನು ಸರ್ವಥಾ ಆಡಗೊಡುತ್ತಿರಲಿಲ್ಲ" ಎಂಬ ಶಬ್ದಗಳನ್ನು ಅನೇಕ ಬಾರಿ ಆತ ಉಚ್ಚರಿಸಿದ್ದಾನೆ. ಆದರೆ ಈ ದುರ್ಧರ ಪ್ರಸಂಗದಲ್ಲಿ ಆತ ಮಿತ್ರತ್ವವನ್ನು ಮರೆಯಲಿಲ್ಲ. ಪಾಂಡವರ ಬೆಂಬಲಿಗಾಗಿ ಆತ ಸೊಂಟಕಟ್ಟಿ ನಿಂತ. ವನ–ವಾಸವನ್ನು ಮತ್ತು ಅಜ್ಞಾತವಾಸವನ್ನು ತಪ್ಪಿಸುವಂತಿರಲಿಲ್ಲ. ಆದರೆ ಪಾಂಡವರ ಮಕ್ಕಳ ರಕ್ಷಣೆಯನ್ನು ಪಾಂಚಾಲರ ನೆರವಿನಿಂದ ಮಾಡಿದ. ಪಾಂಡವರು ವನವಾಸದಿಂದ ಮರಳಿದ ನಂತರ ಯುದ್ಧವಿಲ್ಲದೆಯೇ ಸಂಧಿಗಾಗಿ ಆತ ವಿಶ್ವಪ್ರಯತ್ನಗಳನ್ನು ಮಾಡಿದ. ದುರ್ಯೋಧನನ ಸಭೆಯಲ್ಲಿ ಮಧ್ಯಸ್ಥಿಕೆಯ ಪ್ರಯತ್ನವು ವಿಫಲಗೊಂಡನಂತರ ದ್ರೌಪದಿಯ ಆಸೆಯನ್ನು ತೋರಿಸಿ, ಕರ್ಣನನ್ನು, ಕೌರವರಿಂದ ಬೇರ್ಪಡಿಸುವ ಪ್ರಯತ್ನವನ್ನು ಆತ ಮಾಡಿದ. ಮಧ್ಯಸ್ಥನಾದಾಗ ಪಾಂಡವರಿಗಾಗಿ ಅರ್ಧ ರಾಜ್ಯವನ್ನು ಬೇಡದೇ "ತುಸುವಾದರೂ ಕೊಡು!" ಎಂದು ಕೇಳುವ ದೈನ್ಯವನ್ನು ಕೂಡ ಆತ ವಹಿಸಿದ. ಆದರೆ ಇವೆಲ್ಲವು ನಿಷ್ಫಲವಾದವು. "ನಿಮ್ಮ ನಿಮ್ಮಲ್ಲಿ ನೀವು ಜಗಳವಾಡಿಕೊಳ್ಳಿರಿ, ನಾನು ನನ್ನಷ್ಟಕ್ಕೆ ಅಲಿಪ್ತನಾಗಿರುವೆನು" ಎಂದು ಬಲರಾಮ ಹೇಳಿದಂತೆ ಈತ ಸಹ ಹೇಳಬಹುದಿತ್ತು. ಆದರೆ ಈ ರೀತಿ ವರ್ತಿಸದೆ ಆತ ಮಿತ್ರರ ಪಕ್ಷವನ್ನು ವಹಿಸಿ ನಿಂತ. ಇವೆಲ್ಲವುಗಳಿಂದ ಪಾಂಡವರ ಬಗ್ಗೆ ಆತನಿಗಿದ್ದ ಸ್ನೇಹದ ಸ್ಥಿರತೆ ಕಂಡುಬರುತ್ತದೆ. ಆತನ ಮಿತ್ರರಾದ ಪಾಂಡವರು ಇತರೆ ಕೆಲವು ಅನ್ಯಾಯಗಳಿಂದ, ತಮ್ಮ ಸ್ವತಃದ ಕೆಲವು ಅವಗುಣಗಳಿಂದ ಸರ್ವಸ್ವವನ್ನು ಕಳೆದುಕೊಂಡಿದ್ದರು. ಆ ಅನ್ಯಾಯದ ಪ್ರತೀಕಾರಕ್ಕಾಗಿ ಕೃಷ್ಣ ಸಿದ್ಧನಿದ್ದ. ಮುಂದೆ ಆಗಬಹುದಾದ ಎಲ್ಲಾ ಪರಿಣಾಮಗಳ ಅರಿವು ಆತನಿಗೆ ಆಗಿರಬಹುದೆಂದು ಅನ್ನಿಸುವುದಿಲ್ಲ. ಆದರೂ ಹಲವು ಪರಿಣಾಮಗಳನ್ನು ಆತ ಊಹಿಸಿರಬೇಕು. ಮೇಲೆ ವಿವರಿಸಿದಂತೆ ಅತಿ ಪ್ರಯಾಸದಿಂದ, ದೂರಾಲೋಚನೆಯಿಂದ, ಆತ ಪ್ರಸ್ಥಾಪಿಸಿದ್ದ ಸುಸಂಘಟನೆಯನ್ನು ದುಡುಕುಬುದ್ಧಿಯ ದೂರಾಲೋಚನೆ ಇಲ್ಲದ ಆತನ ಮಿತ್ರರಾದ ಪಾಂಡವರು ಶೂರರಿದ್ದರೂ, ಹಾಳುಮಾಡಿದ್ದರು. ಅವರ ಬಗ್ಗೆ ಕೃಷ್ಣ ಕೋಪಗೊಂಡು ಮಾತನಾಡಿದರೂ ಕಳೆದುಕೊಂಡದ್ದನ್ನು ಪುನಃ ದೊರಕಿಸುವುದಕ್ಕೆ ಆತ ಸಹಾಯವನ್ನೇ ಮಾಡಿದ.

ಅರ್ಜುನನಿಗೆ ಯುದ್ಧಕ್ಕೆ ಸಿದ್ಧವಾಗಲೂ ಕೃಷ್ಣ ಮಾಡಿದ ಉಪದೇಶಗಳ ವಾಕ್ಯಗಳನ್ನು ಈ ಸಂದರ್ಭದಲ್ಲಿ ಲಕ್ಷ್ಯಕ್ಕೆ ತಂದುಕೊಂಡರೆ ಅವುಗಳ ಅರ್ಥ ಬೇರೆಯಾಗಿ ಕಾಣುತ್ತದೆ. ಕೃಷ್ಣನ ಜೀವನ–ಮೌಲ್ಯದ ಬಗ್ಗೆ, ಜೀವನದ ವಿಷಯದ ದೃಷ್ಟಿ ಕೋನದ ಬಗ್ಗೆ, ನವಪ್ರಕಾಶವು ಬೀಳುತ್ತದೆ. ಪಾಂಡವರಿಗೆ ರಾಜ್ಯವನ್ನು ದೊರಕಿಸಿಕೊಟ್ಟಾಗಲೇ, ಆತನ ಉದ್ದೇಶ ಸಫಲಗೊಂಡಿತ್ತು. ಅಂತೆಯೇ ಪಾಂಡವರು ಅದನ್ನು ಕಳೆದುಕೊಂಡಾಗ ಈ ಉದ್ದೇಶವು ಮಣ್ಣುಪಾಲಾಯಿತು. ಕೃಷ್ಣನು ಆಯೋಜಿಸಿ ಜಾಗರೂಕತೆಯಿಂದ ಕಾರ್ಯಗಳನ್ನು ಕೈಗೊಳ್ಳುತ್ತಿದ್ದನು. ವೈಯಕ್ತಿಕವಾಗಿ ಆತನ ಯಾವ ಉದ್ದೇಶವೂ ಸಾಧ್ಯವಾಗಬೇಕಾಗಿದ್ದಿಲ್ಲ. ಆತನ ಸಂಪತ್ತಿನಲ್ಲಿಯಾಗಲೀ ಆತನ ಕೀರ್ತಿಯಲ್ಲಿ ಹೆಚ್ಚಳವಾಗುವುದು ಇರಲಿಲ್ಲ. ಕೆಲವು ವಿಷಯಗಳಲ್ಲಿ ಸರ್ವನಾಶವಾಗಿದ್ದರೂ ಕರ್ತವ್ಯಪಾಲನೆಗಾಗಿ, ಆತನು ಯುದ್ಧಕ್ಕೆ ಸಜ್ಜಾದನು. ಯುದ್ಧದಿಂದ ಅರ್ಜುನನಿಗೆ ಲಭ್ಯವಿದ್ದರೂ ಕೃಷ್ಣನು ಪಡೆಯಬೇಕಾದ್ದು ಏನೂ ಇರಲಿಲ್ಲ.

'ಹತೋವಾ ಪ್ರಾಪ್ಸ್ಯಪಿ ಸ್ವರ್ಗಂ ಜಿತ್ವಾವಾ ಭೋಕ್ಷ್ಯಸೆ ಮಹೀಮ್' 'ಸತ್ತರೆ ಸ್ವರ್ಗ, ಬದುಕಿದರೆ ರಾಜ್ಯ' ಇವುಗಳಲ್ಲಿ ಯಾವುದೂ ಕೃಷ್ಣನ ಪಾಲಿನದಿರಲಿಲ್ಲ. ಸಂಪೂರ್ಣವಾಗಿ ನಿರಪೇಕ್ಷೆಯಿಂದ, ಸ್ವಾರ್ಥವಿಲ್ಲದೇ ಆತನು ಯುದ್ಧದಲ್ಲಿ ತೊಡಗಿದ್ದನು. ಆತನು ಮಿತ್ರಕಾರ್ಯವನ್ನು ವಹಿಸಿದ್ದನು. ಆತನ ದೃಷ್ಟಿಯಿಂದ ಪಾಂಡವರ ಪಕ್ಷವು ನ್ಯಾಯವಾದದ್ದು, ದುರ್ಬಲವು ಇತ್ತು. ನಿಜವಾಗಿ ಪಾಂಡವರು ಮತ್ತು ಪಾಂಚಾಲರು ಶೂರರಿದ್ದರು. ಕಳೆದುಕೊಂಡದ್ದನ್ನು ಮರಳಿ ಪಡೆಯುವುದಕ್ಕಾಗಿ, ಹಂಗುದೊರೆದು ಕಾದುತ್ತಿದ್ದರು. ಇದೆಲ್ಲವೂ ನಿಜವಿದ್ದರೂ ಕೌರವರ ಸೈನ್ಯವು ಪಾಂಡವರ ಸೈನ್ಯಕ್ಕಿಂತ ಒಂದೂವರೆ ಪಟ್ಟಿಗಿಂತ ಹೆಚ್ಚಾಗಿತ್ತು. ಕೃಷ್ಣನ ಕುಶಲತೆಯಿಂದ ಪಾಂಡವರು ಬದುಕಿ ಉಳಿದರು.

ಒಂದು ಅನರ್ಥವು ಮಾತ್ರ ಈ ಯುದ್ಧದಿಂದ ಒದಗಿತ್ತು. ಕೃಷ್ಣನ ಸಹಿಷ್ಣುತೆಯಿಂದ ಯಾದವರ ಒಳಜಗಳಗಳು ಮರೆಯಾಗಿದ್ದವು. ಅವರಲ್ಲಿ ಅನೇಕ ಬಣಗಳಿದ್ದವು. ಆದರೆ ಕೃಷ್ಣನು ಆ ಬಣಗಳ ತಿಕ್ಕಾಟವನ್ನು, ವೈಮನಸ್ಸನ್ನು, ನಿಯಂತ್ರಿಸಿದ್ದನು. ಈ ಕುರು ಪಾಂಡವರ ಯುದ್ಧದ ಕಾರಣ ಬಣಗಳು ಬಯಲಿಗೆ ಬಂದವು. ಕೃಷ್ಣನು ಮತ್ತು ಅವನೊಡನೆ ಸಾತ್ಯಕಿ ಮೊದಲಾದವರು ಪಾಂಡವರ ಬದಿಗೆ ಇದ್ದರು. ಕೃತವರ್ಮ, ಭೋಜ ಮೊದಲಾದವರು ದುರ್ಯೋಧನನ ಕಡೆಗೆ ಇದ್ದರು. ಯಾರ ವತಿಯಿಂದಲೂ ಕಾದುವದೇ ಬೇಡವೆಂದು ಬಲರಾಮನು ಹೊರಟುಹೋಗಿದ್ದನು. ಯಾದವರಲ್ಲಿ ಸ್ಪಷ್ಟವಾಗಿ ಎರಡು ಪಕ್ಷಗಳಾದವು. ಬಾಹ್ಯದಲ್ಲಿ ಏಕರೂಪವಾಗಿ ಕಾಣುತ್ತಿದ್ದ ಈ ಯಾದವರ ಸಂಘಟನೆಯು ಒಡೆದು ಚೂರಾಯಿತು. ಮೊದಲಿದ್ದ ವೈಮನಸ್ಸಿನಲ್ಲಿ ಹೊಸದಾಗಿ ಹಿರಿಮೆಕಿರಿಮೆಗಳ ಬಡಿದಾಟವು ಸೇರಿಕೊಂಡಿತು. ಯಾದವರ ಅಳಿಗಾಲಕ್ಕೆ ಮಹಾಭಾರತ ಯುದ್ಧದಲ್ಲಿ ಈ ರೀತಿ ಬೀಜಾರೋಪಣವಾಯಿತು. ಯಾದವರ ಅಳಿಗಾಲವು ಕೃಷ್ಣನಿಗೆ ತೋರಿರಬಹುದೆಂದು ಅನ್ನಲಾಗುವುದಿಲ್ಲ. ಆದರೆ ಯಾದವರಲ್ಲಿ ಇಬ್ಬಣ–ವಾದದ್ದು ನಿಶ್ಚಿತವಾಗಿ ಆತನಿಗೆ ಕಂಡುಬಂದಿತ್ತು. ಇದರ ಪರಿಣಾಮವು ಹಿತಕಾರಿ ಅಲ್ಲ ಎಂಬುದನ್ನು ಅರಿತುಕೊಳ್ಳುವಷ್ಟು

ಕುಶಾಗ್ರ ಬುದ್ಧಿಯು ಆತನಲ್ಲಿ ಇದ್ದೇ ಇತ್ತು. ಹೀಗಿದ್ದರೂ ಆತನು ಯುದ್ಧಕ್ಕೆ ಅಣಿಯಾಗಿ ನಿಂತಾಗ ಅರ್ಜುನನನ್ನು ಕುರಿತು ಗೀತೆಯಲ್ಲಿ ಹೇಳಿದ ಒಂದೊಂದು ಶ್ಲೋಕಗಳು ಕೃಷ್ಣನಿಗೆ ಹೆಚ್ಚಾಗಿ ಅನ್ವಯಿಸುತ್ತಿದ್ದವು. ಕೃಷ್ಣನು ಯುದ್ಧದಲ್ಲಿ ಸೇರಿದ್ದು ಕೆಲವು ದೃಷ್ಟಿಗಳಿಂದ ಆತನ ಜೀವನದಲ್ಲಿಯ ಪರಮ ತ್ಯಾಗದ ಕ್ಷಣವಾಗಿತ್ತು. ಆಸೆ–ಆಕಾಂಕ್ಷೆಗಳು ಮಣ್ಣುಪಾಲಾಗಿದ್ದರೂ ಆತ ಮಿತ್ರರಿಗಾಗಿ, ನ್ಯಾಯಕ್ಕಾಗಿ, ಸಿದ್ಧವಾದದ್ದು ವಿವೇಕವೆಂದೆನ್ನಬಹುದೋ?

ಮಹಾಭಾರತದಲ್ಲಿ ಕೃಷ್ಣ, ಪಾಂಡವರಿಗೆ ಹಲವು ಪ್ರಸಂಗಗಳಲ್ಲಿ ಮಾಡಿದ ಉಪದೇಶಗಳಲ್ಲಿ ಕೃಷ್ಣನ ಕಪಟನೀತಿಯು ಕಂಡುಬರುತ್ತದೆ ಎಂದು ಕೆಲವರ ಅಭಿಪ್ರಾಯವಿದೆ. ಕೃಷ್ಣ, ಅತಿ ಕುಶಾಗ್ರ ಬುದ್ಧಿ ಉಳ್ಳವರೂ, ಸದಾಕಾಲವು ಜಾಗರೂಕತೆಯನ್ನು ವಹಿಸುವವರೂ ಆದ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದ. ಆಗಿನ ರೂಢಿ ನಿಯಮಗಳಂತೆ ಆತ ವರ್ತಿಸುತ್ತಿದ್ದ. ಆತನಿಗೆ ಯಾವ ವರ್ತನೆಯು ತಿರಸ್ಕೃತವೆಂದು ಅನ್ನಿಸುತ್ತಿತ್ತೊ ಅದನ್ನು ಸಮೂಲ ನಾಶಗೊಳಿಸಲು ಆತ ಮಹಾಸಂಕಟವನ್ನು ಎದುರಿಸಲು ಸಿದ್ಧವಾದ. ಕೇವಲ ಮೂವರೇ ಹೋಗಿ ಭೀಮಸೇನನ ಬಲವನ್ನು ಅವಲಂಬಿಸಿ ಜರಾಸಂಧನನ್ನು ವಧೆ ಮಾಡುವ ಹಂಚಿಕೆಯಲ್ಲಿ ಯುಕ್ತಿ ಇದ್ದರೂ ಅದಕ್ಕಿಂತ ಹೆಚ್ಚಾದ ಎದೆಗಾರಿಕೆ ಇತ್ತು. ಜರಾಸಂಧನ ಸೈನ್ಯಕ್ಕೆ ಎದುರಾಗಿ ಕಾದುವುದು ಸಾಧ್ಯವಿರಲಿಲ್ಲ. ಆ ಸೈನ್ಯವನ್ನು ಎದುರಿಸಿದ ಯಾದವರು ಹಿಂದೆ ಕಕ್ಕಾಬಿಕ್ಕಿಯಾಗಿ ಓಡಿದ್ದರು. ಜರಾಸಂಧ ಸ್ವತಃ ನಿಷ್ಣಾತ, ಪರಮ ವೀರ; ಆದರೂ ಆತನೊಬ್ಬನೊಡನೆ ಕಾದುವುದು ಸಾಧ್ಯವಿತ್ತು. ಕೃಷ್ಣನಿಗೆ ಭೀಮನ ಶಕ್ತಿ ಸಾಹಸಗಳಲ್ಲಿ, ಮಲ್ಲಯುದ್ಧ ಕುಶಲತೆಯಲ್ಲಿ ದೃಢ ವಿಶ್ವಾಸವಿತ್ತು. ಅಷ್ಟೇ ವಿಶ್ವಾಸವು ಅರ್ಜುನನ ಮತ್ತು ತನ್ನ ಶಸ್ತ್ರನಿಪುಣತೆಯಲ್ಲಿ ಇತ್ತು. ಹೀಗಿದ್ದರೂ ಜರಾಸಂಧನ ಬಳಿ ಹೋಗಿ ದ್ವಂದ್ವ ಯುದ್ಧಕ್ಕೆ ಆತನನ್ನು ಆಹ್ವಾನಿಸುವುದರಲ್ಲಿ ಮಹಾ ಸಾಹಸವಿತ್ತು ಎಂಬುದರಲ್ಲಿ ಸಂದೇಹವಿಲ್ಲ. ದ್ವಂದ್ವ ಯುದ್ಧವು ನಡೆದಾಗ "ದಣಿದ ಜರಾಸಂಧನಿಗೆ ಸ್ವಲ್ಪವೂ ಅವಕಾಶ ಕೊಡಬೇಡ" ಎಂದು ಭೀಮನಿಗೆ ಕೊಟ್ಟ ಸೂಚನೆಯಲ್ಲಿ ಯಾವ ಮೋಸವೂ ಇರಲಿಲ್ಲ. ಭೀಮನು ಖಚಿತವಾಗಿ ಜರಾಸಂಧನಿಗಿಂತ ಬಲಶಾಲಿಯಾಗಿದ್ದನು. ಆತನು ನೇರ ಯುದ್ಧದಲ್ಲಿ ಜರಾಸಂಧನನ್ನು ಸಹಜವಾಗಿ ಕೊಂದನು. ದ್ವಂದ್ವ ಯುದ್ಧಕ್ಕೆ ಮೊದಲು ಕೃಷ್ಣ, ಜರಾಸಂಧನಿಗೆ "ಸೆರೆಯಲ್ಲಿಯ ರಾಜರನ್ನು ಬಿಟ್ಟುಕೊಡು" ಎಂದು ಕೇಳಿಕೊಂಡಿದ್ದ. "ಅದನ್ನು ನೀನು ತಿರಸ್ಕರಿಸಿದರೆ ನಮ್ಮ ಮೂವರಲ್ಲಿ ಒಬ್ಬನೊಡನೆ ದ್ವಂದ್ವಕ್ಕೆ ಸಿದ್ಧನಾಗು" ಎಂದು ಎರಡನೆಯದಾಗಿ ತಿಳಿಸಿದ್ದನು. ಈ ರೀತಿ ನಡೆದ ಮಾತುಕತೆಯು ಯೋಗ್ಯವಾಗಿತ್ತು. ಇದೇ ರೀತಿ ರುಕ್ಮಿಣಿಯ ಹರಣವನ್ನು ಮಾಡಿದ್ದು, ಆಗಿನ ರಾಜನೀತಿಯನ್ನು ಅನುಸರಿಸಿಯೇ ಇತ್ತು. ಭೀಷ್ಮನು ಕಾಶಿರಾಜನ ಪುತ್ರಿಯರನ್ನು ಸ್ವಯಂವರ ಮಂಟಪದಿಂದ ಓಡಿಸಿಕೊಂಡು ಬಂದಿದ್ದನು. ರುಕ್ಮಿಣಿಯು ಶಿಶುಪಾಲನ ನಿಶ್ಚಿತ ವಧುವಾಗಿರಲಿಲ್ಲ. ಅವರ ಸಹೋದರನ ಮನಸ್ಸಿನಲ್ಲಿ ಏನೇ ಇದ್ದರೂ ಒಮ್ಮೆ ಸ್ವಯಂವರವನ್ನು ಆರಂಭಿಸಿದ ನಂತರ ವಧುವನ್ನು ಓಡಿಸಿಕೊಂಡು ಹೋಗುವುದು, ಸಾಧ್ಯವಿದ್ದರೆ ಆ ರೀತಿ ಮಾಡುವುದು, ಕ್ಷತ್ರಿಯ ನೀತಿಗೆ ಉಚಿತವಿತ್ತು. ಕೃಷ್ಣ ರಾಜನಲ್ಲವೆಂದು, ಶಿಶುಪಾಲನ

ಮೂರನೆಯ ಆಕ್ಷೇಪಣೆ ಇತ್ತು. ಅದರಲ್ಲಿಯೂ ಹುರುಳಿಲ್ಲ. ಅರ್ಜುನನು ದ್ರೌಪದಿಯನ್ನು ಜಯಿಸಿದ್ದಾಗ ಆತನು ಸಹ ರಾಜನಾಗಿರಲಿಲ್ಲ. ಇಷ್ಟೇ ಅಲ್ಲದೇ ಆತನ ಅಣ್ಣಂದಿರು ಇರುವಾಗ ಆತ ರಾಜನಾಗುವ ಶಕ್ಯತೆಯೂ ಇರಲಿಲ್ಲ. 'ರಾಜನಲ್ಲ'ವೆಂದು ಕೃಷ್ಣನಿಗೆ ಹೀಯಾಳಿಸುವ ಶಿಶುಪಾಲ ಭೀಷ್ಮನಿಗೆ ಅಗ್ರಪೂಜೆ ಮಾಡಿರೆಂದು ಹೇಳುತ್ತಿದ್ದ. ಭೀಷ್ಮ ಸಹ ರಾಜನಾಗಿರಲಿಲ್ಲ. ಶಿಶುಪಾಲ ಕೃಷ್ಣನ ಪ್ರತಿಸ್ಪರ್ಧಿಯಾಗಿದ್ದ. ಆತ ಜರಾಸಂಧನ ಪ್ರಮುಖ ಸೇನಾನಿಗಳಲ್ಲಿ ಒಬ್ಬನಾಗಿದ್ದ, ಪ್ರತಿಯೊಂದು ಸಂಗತಿಯಲ್ಲಿ ಕೃಷ್ಣ ತನಗಿಂತ ಮುಂದುವರಿದವ; ಎಂಬ ಹೊಟ್ಟೆ ಉರಿ ಅವನಿಗಿತ್ತು. ಆತನ ಆರೋಪಗಳಲ್ಲಿ ಹಲವು ನಿಜವಿದ್ದರೂ ಹಲವು ಅಸತ್ಯವಿದ್ದವು. ಭೀಷ್ಮನ ಬಗ್ಗೆ ಮತ್ತು ಕೃಷ್ಣನ ಬಗ್ಗೆ ಕೆಲವು ಜನರು ಆಡಿಕೊಳ್ಳುತ್ತಿದ್ದುದನ್ನು ಶಿಶುಪಾಲನ ಮುಖದಿಂದ ಹೊರಗೆಡವಲಾಗಿದೆ. ಕೃಷ್ಣನ ಕೃತ್ಯಗಳನ್ನು ಪರಿಶೀಲಿಸಿದರೆ ಶಿಶುಪಾಲ ನಿಂದಿಸಿದ ಕೃತ್ಯಗಳು ಈ ರೀತಿ ಇರಲಿಲ್ಲ ಎಂದು ಗೊತ್ತಾಗುತ್ತದೆ. ಶಿಶುಪಾಲನ ವಧೆಯು ಮಾತ್ರ ತುಸುಮಟ್ಟಿಗೆ ದೋಷಾಸ್ಪದವೆನಿಸುತ್ತದೆ. ಆತ, ಕೊಲೆಗೆ ಪಾತ್ರನಿದ್ದ. ಏನೇ ಇದ್ದರೂ ಆವೇಶಭರದಲ್ಲಿ ಶಿಶುಪಾಲ ಮಾತಾಡುತ್ತಿದ್ದಾಗ ಕೃಷ್ಣನು ಚಕ್ರಾಘಾತದಿಂದ ತುಂಬಿದ ಸಭೆಯಲ್ಲಿ ಆತನನ್ನು ವಧಿಸಿದ್ದು ಮನಸ್ಸನ್ನು ನೋಯಿಸುತ್ತದೆ ಹಾಗೆ ಮಾಡದೇ ವಿಧಿ ಇರಲಿಲ್ಲ. ರಾಜಸೂಯ ಯಜ್ಞವು ಕೊನೆಗೊಂಡಿತ್ತು. ಆಗಮಿಸಿದ ರಾಜರನ್ನು ಸತ್ಕರಿಸಿ ಬೀಳ್ಕೊಡುವುದೊಂದೇ ಉಳಿದಿತ್ತು. ಪಾಂಡವರು ಭೀಷ್ಮನ ಹೇಳಿಕೆಯಂತೆ ಕೃಷ್ಣನಿಗೆ ಮೊದಲನೆಯ ಅರ್ಘ್ಯವನ್ನು ಕೊಡುವ ಏರ್ಪಾಟನ್ನು ನಡೆಸಿದ್ದರು. ಆಗ ಶಿಶುಪಾಲನು ಮಧ್ಯೆ ಬಂದು ಈ ಅರ್ಘ್ಯಕ್ಕೆ ಅಡ್ಡಿ ಮಾಡುವ ಅತಿ ಪ್ರಸಂಗವನ್ನು ಮಾಡಿದನು. ಮಾತಿಗೆ ಮಾತು ಬೆಳೆಯಿತು. ರಾಜರಾಜರಲ್ಲಿ ಗುಸುಗುಸು ಶುರುವಾಯಿತು. ಶಿಶುಪಾಲನು ಯುದ್ಧದ ಮಾತನ್ನು ಎತ್ತಿದ್ದನು. ಈ ವೇಳೆಯಲ್ಲಿ ಮಂಟಪದ ಹೊರಗೆ ಯುದ್ಧವನ್ನು ಪ್ರಾರಂಭಿಸಿದ್ದಲ್ಲಿ ಮಹಾ ಸಂಕಟವು ಒದಗುತ್ತಿತ್ತು. ಶಿಶುಪಾಲನೊಬ್ಬನೆ ಹತನಾದ್ದರಿಂದ ಯಾರಿಗೂ ಏನೂ ಮಾಡಲಾಗಲಿಲ್ಲ. ಈ ಘಟನೆಯು ನಡೆಯುತ್ತಲೆ ಆಶ್ಚರ್ಯ, ಭೀತಿಗಳಿಂದ ಇಡೀ ಸಭೆಯೇ ತಣ್ಣಗಾಯಿತು. ಕೆಲವು ರಾಜರು ಕೈ ಕೈಗಳನ್ನು ಅದುಮಿಕೊಳ್ಳುತ್ತಾ ಸ್ತಬ್ಧರಾಗಿ ಕುಳಿತುಕೊಂಡಿದ್ದರೆಂಬ ವರ್ಣನೆಯು ಮಹಾಭಾರತದಲ್ಲಿ ಇದೆ. ಕೃಷ್ಣನು ಈ ರೀತಿ ಶಿಶುಪಾಲನನ್ನು ವಧಿಸದೇ ಇದ್ದರೆ ರಾಜಸೂಯ ಯಜ್ಞದ ಕೊನೆಯಲ್ಲಿ ಅನರ್ಥ ಉಂಟಾಗುತ್ತಿತ್ತು. ಕೋಪಗೊಂಡ ಶಿಶುಪಾಲನನ್ನು ಮಂಟಪದ ಹೊರಗೆ ಬಿಡುವುದು ಉಚಿತವಿರಲಿಲ್ಲ.

ಈ ಪ್ರಸಂಗದಲ್ಲಿ ಯಾವ ಒಂದೆರಡು ಸಂಗತಿಗಳು ಎದ್ದು ಕಾಣುತ್ತವೆಯೋ ಅದೇ ರೀತಿ ಇನ್ನಿತರ ಕಡೆಯಲ್ಲಿಯು ಕಂಡುಬಂದಿದೆ.

(೧) ಮನುಷ್ಯ, ಜನ್ಮತಾಳಿದ ನಂತರ ಆತನ ವೈಯಕ್ತಿಕ ಆಚರಣೆಗಳು ಮತ್ತು ಸಾಮಾಜಿಕ ಸಂಬಂಧಗಳು ಇವೆರಡರಲ್ಲಿ ಆತ ಸಿಲುಕುತ್ತಾನೆ. ಕೆಲವು ಸಲ ಆತನ ನಿಯಂತ್ರಣದಲ್ಲಿ ಇರದ ಪ್ರಸಂಗಗಳಲ್ಲಿ ಪರಾಧೀನನಾಗಿ ಸಿಲುಕುತ್ತಾನೆ. ಮತ್ತು ಕೃತಿಗಳು

ಆತನಿಂದ ಸಾಗಿಹೋಗುತ್ತವೆ. ಭೀಷ್ಮನ ಸಂಬಂಧವಾಗಿ ಇದೇ ರೀತಿ ಕಂಡುಬಂದಿದೆ. ಧೃತರಾಷ್ಟ್ರನ ಬಗ್ಗೆಯೂ, ಹಾಗೇ ಮಹಾಭಾರತದಲ್ಲಿಯ ಪ್ರತಿಯೊಂದು ವ್ಯಕ್ತಿಯ ಸಂಬಂಧವಾಗಿಯು ಇದೇ ಪ್ರಕಾರ ನಡೆದಿದ್ದು ಕಂಡುಬರುತ್ತದೆ. **'ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ'** ಈ ರೀತಿ ಯಾರಿಗೂ ತಿಳಿಯಲಾರದ, ಯಾರಿಗೂ ತಪ್ಪದ ಈ ಚಕ್ರವಿದೆ. ಈ ಚಕ್ರದಲ್ಲಿ ಒಮ್ಮೆ ಸಿಲುಕಿದನಂತರ ಆತನ ಕೃತಿಗಳಿಗೆ ಒಂದು ವಿಶಿಷ್ಟ ದಿಕ್ಕು ಪ್ರಾಪ್ತವಾಗುತ್ತದೆ. ಪ್ರತಿಯೊಂದು ಕೃತಿಯನ್ನು ಮಾಡಬೇಕೋ ಮಾಡಬಾರದೋ ಎಂಬುದರ ಸ್ವಾತಂತ್ರ್ಯವು ಉಳಿಯುವುದೇ ಇಲ್ಲ. ಒಂದು ನಿಶ್ಚಿತವಾದ ಮಾರ್ಗದಲ್ಲಿ ಜೀವನ ಕ್ರಮವು ನಡೆದಂತೆ ಈ ಸ್ವಾತಂತ್ರ್ಯವು ಕಡಿಮೆ ಆಗುತ್ತದೆ.

(೨) ಮನುಷ್ಯನ ಜೀವನದಲ್ಲಿಯ ಯಾವುದೇ ಬಗೆಯ ಆಯ್ಕೆಯು ಪೂರ್ಣತ ಸತ್ಯ–ಅಸತ್ಯ ; ಒಳಿತು–ಕೆಟ್ಟದ್ದು ; ಈ ರೀತಿಯ ಎರಡು ವಿಷಮ ದಂಡೆಯ ಕೊನೆಯಲ್ಲಿ ಇರುವುದಿಲ್ಲ. ತುಸು ಕೆಟ್ಟದ್ದು, ತುಸು ಒಳಿತು, ಈ ಮಿಶ್ರಪರಿಣಾಮದ ಕೃತಿಗಳನ್ನೇ ಆಯ್ದುಕೊಳ್ಳಬೇಕಾಗುತ್ತದೆ. ಎಲ್ಲಾ ರೀತಿಯಲ್ಲಿಯು ಯೋಗ್ಯವಾದದ್ದು ಇಲ್ಲವೇ ಎಲ್ಲಾ ರೀತಿಯಲ್ಲಿಯು ಹಾನಿಕರವಾದದ್ದು ಎಂಬುದನ್ನು ಆರಿಸುವದಕ್ಕೆ ಅವಕಾಶವೇ ದುರ್ಲಭ; ಆದ್ದರಿಂದ ಯಾವುದನ್ನು ಎತ್ತಿಕೊಂಡರೂ ಸ್ವಲ್ಪಾದರೂ ಬೇಡಾದದ್ದು, ಅದರೊಡನೆಯೇ ಬರುತ್ತದೆ. ಕೂಲಂಕಷವಾಗಿ ಪರಿಶೀಲಿಸಿ ನೋಡಿದರೆ ಪ್ರತಿಯೊಂದು ದೈನಂದಿಕ ಕೃತಿಯಲ್ಲಿಯೂ ಸ್ವಲ್ಪವಾದರೂ ದೋಷಗಳು ಇದ್ದೇ ಇರುತ್ತವೆ. ಅದರಲ್ಲಿಯು ನಿರೀಕ್ಷಕ, ನಡೆದ ಸಂಗತಿಗಳ ಮೇಲಿಂದ ತನ್ನ ಅಭಿಪ್ರಾಯವನ್ನು ವ್ಯಕ್ತಮಾಡುತ್ತಿರುತ್ತಾನೆ. ಮುಂದಿರುವ ಎರಡು ಮೂರು ಮಾರ್ಗಗಳಲ್ಲಿ ಯಾವ ಮಾರ್ಗವನ್ನು ಕ್ರಮಿಸಿದ್ದರಿಂದ ಏನು ಪರಿಣಾಮವಾಯಿತು? ಎಂಬುದು ನೀರಿಕ್ಷಕನ ಕಣ್ಣುಮುಂದೆಯೇ ಇರುತ್ತದೆ. ಅಂಗೀಕರಿಸಿದ ಕೃತಿಗಳ ಪರಿಣಾಮವೇನಾಯಿತು ಎಂಬುದು ಹಿಂದಿನಿಂದ ಬರುವ ಟೀಕಾಕಾರನಿಗೆ ಚೆನ್ನಾಗಿ ಗೊತ್ತಿರುತ್ತದೆ. ಆದರೆ ನಿಜವಾಗಿ ಅಂತಹ ಕೃತಿಗಳನ್ನು ತನ್ನ ಮುಂದಿನ ಎರಡು ಮಾರ್ಗಗಳಿಂದ ವಿಪತ್ಕಾಲದಲ್ಲಿ, ಒಂದನ್ನು ಆಯ್ದುಕೊಂಡು ಅಂಗೀಕರಿಸುವ, ಆ ಮನುಷ್ಯನಿಗೆ ಈ ಕೃತಿಗಳಿಂದ ಆಗಬಹುದಾದ ಪರಿಣಾಮದ ಭವಿಷ್ಯಜ್ಞಾನವು ಉಂಟಾಗಿರುವುದಿಲ್ಲ. ಆತ ಎಷ್ಟೇ ಜಾಣನಾಗಿ ಇದ್ದರೂ, ದೂರದೃಷ್ಟಿ ಉಳ್ಳವನಾಗಿದ್ದರೂ ಆ ವ್ಯಕ್ತಿಯ ಕಣ್ಣು ಮುಂದೆ ಆಗಿನ ಪರಿಸ್ಥಿತಿಯ, ಆಗಿನ ಸಮಯದ, ಗಂಡಾಂತರವು ಕಾಣುತ್ತಿರುತ್ತದೆ. ಅದರಲ್ಲಿಯೂ ಆತನ ಸ್ವಂತದ ಕ್ರೋಧ, ಮೋಹ, ಕರ್ತವ್ಯನಿಷ್ಠೆ ಆದಿ ವಿಕಾರಗಳಿರುತ್ತವೆ. ಕೃಷ್ಣ ಸಹ ಈ ಎರಡು ನಿಯಮಗಳಿಗೆ ಅಪವಾದವಾಗಿರಲಿಲ್ಲ. ಆತ ಕೂಡ ತಾನು ಮಾಡಿದ ಕೃತಿಗಳ ಮತ್ತು ಯೋಚಿಸಿದ ಉದ್ದೇಶಗಳ ತಿರುಗಣೆಯಲ್ಲಿ ಸಿಕ್ಕಿದ್ದ. ಗಂಭೀರನೂ, ವಿಚಾರಶೀಲನೂ ಆಗಿದ್ದರೂ, ಆತನಲ್ಲಿಯೂ ಕ್ರೋಧ, ಸ್ನೇಹ ಮೊದಲಾದ ವಿಕಾರಗಳು ಇದ್ದವು. ಆತ ಯಾವುದೇ ಕೃತ್ಯವನ್ನು ಕೈಗೊಂಡಾಗ ಇಲ್ಲವೇ ಆ ಕೃತ್ಯಕ್ಕೆ

ಇನ್ನೊಬ್ಬರನ್ನು ಸಜ್ಜುಗೊಳಿಸುವಾಗ ಆತನ ಮುಂದಿದ್ದ ಆಯ್ಕೆಯೂ ಪೂರ್ತಿ ಉತ್ತಮವೇ ಅಥವಾ ಪೂರ್ತಿ ಹೀನವೇ ಆಗಿರದೇ ಮಿಶ್ರವಾದ ಮಧ್ಯಮ ರೀತಿಯ ಕೃತಿಯದಾಗಿತ್ತು.

ಸಮಗ್ರ ಮಹಾಭಾರತದಲ್ಲಿ ಕೃಷ್ಣ ನೆರವೇರಿಸಿದ ಮುಖ್ಯ ಕೃತ್ಯಗಳೆಂದರೆ, ಅರ್ಜುನನ ಸಹಾಯದಿಂದ ಮಾಡಿದ ಖಾಂಡವವನದ ದಹನ ; ಜರಾಸಂಧನ ವಧೆ, ಶಿಶುಪಾಲನ ವಧೆ; ಪಾಂಡವರ ಪರವಾಗಿ ಕೌರವರೊಡನೆ ನಡೆಸಿದ ಮಧ್ಯಸ್ಥಿಕೆ ; ದ್ರೌಪದಿಯ ಆಸೆಯನ್ನು ತೋರಿಸಿ ಕರ್ಣನನ್ನು ಕೌರವರಿಂದ ಬೇರ್ಪಡಿಸುವ ಪ್ರಯತ್ನ ; ಭೀಷ್ಮನನ್ನು ರಥದಿಂದ ಕೆಳಗೆ ಉರುಳಿಸಲು ಅರ್ಜುನನ ಮನಸ್ಸನ್ನು ಒಲಿಸಿದ್ದು ; ದ್ರೋಣನ ಧೈರ್ಯವನ್ನು ಕುಗ್ಗಿಸಲು ಅಶ್ವತ್ಥಾಮನನ್ನು ಸಾಯಿಸಿದ ಸುದ್ದಿಯ ಹರಡುವಿಕೆ, ಇವೇ ಮೊದಲಾದವಿದ್ದವು. ಖಾಂಡವವನ ದಹನದ ಬಗ್ಗೆ ಈ ಮೊದಲೇ ವಿವರಿಸಿಯಾಗಿದೆ. ಖಾಂಡವ–ವನ ದಹನ ಪ್ರಸಂಗದಲ್ಲಿ ನಾಗವಂಶದ ನಿರ್ಮೂಲತೆಯನ್ನು ಮಾಡಿದ್ದು ಮತ್ತು ಒಂದು ದೊಡ್ಡ ಅರಣ್ಯವನ್ನು ಸುಟ್ಟುಹಾಕಿದ್ದು, ಈ ಎರಡು ಕೃತ್ಯಗಳು ಈಗ ಯೋಚನೆ ಮಾಡಿ ನೋಡಿದರೆ ಯೋಗ್ಯವಲ್ಲವೆಂದು ಅನಿಸುತ್ತವೆ. ಆದರೆ ಆಗಿನ ಕಾಲದಲ್ಲಿ ಆ ಕೃತ್ಯವನ್ನು ಯಾರೂ ದೂಷಿಸಲಿಲ್ಲ. ಕೃಷ್ಣನ ಪ್ರತಿಯೊಂದು ಕೃತ್ಯವನ್ನು ನಿಂದಿಸುವ ಶಿಶುಪಾಲನಿಗೂ ಅದರಲ್ಲಿ ದೋಷವು ಕಾಣಲಿಲ್ಲ. ಅನ್ಯ ವಂಶದವರ ಬಗ್ಗೆ ಅಸಹಿಷ್ಣುತೆ, ಸಾಧ್ಯವಾದಲ್ಲಿ ಅವರ ನಿರ್ಮೂಲನೆ, ಇವನ್ನು ಪೂರ್ವಕಾಲದಲ್ಲಿ ಪ್ರಪಂಚದಲ್ಲಿಯ ಎಲ್ಲರೂ ಸರ್ವಸಾಮಾನ್ಯವಾಗಿ ನಡೆಸುತ್ತಿದ್ದರು. ಕೃಷ್ಣ, ಆಗಿನ ಕಾಲಕ್ಕೆ ಹಾಗೂ ಕ್ಷತ್ರಿಯ ರೂಢಿಗೆ ಅನುಸರಿಸಿಯೇ ವರ್ತಿಸಿದ. ಹಾಗೆ ಮಾಡಿರದಿದ್ದರೆ, ಆತ ಆಗಿನ ಕಾಲದ ಅಸಾಮಾನ್ಯ ವ್ಯಕ್ತಿಯಾಗಿ ಉಳಿಯದೇ, ದೇಶ, ಕಾಲ, ಅತೀತವಾದ ಅಸಾಮಾನ್ಯತ್ವವು ಆತನಿಗೆ ದೊರಕುತ್ತಿತ್ತು. ತಮ್ಮ ಜಾತಿಯವರನ್ನು ಬಿಟ್ಟು ಉಳಿದ ಸಮಸ್ತ ಅನ್ಯ ಜಾತಿಯ ಮಾನವರಿಗೆ ದಯೆ ತೋರುವ ಗುಣವು ಮಹಾಭಾರತ ಕಾಲದಲ್ಲಿ ಇರಲೇ ಇಲ್ಲ. ಆಗಿನ ಕಾಲದ ಇತರ ಸುಸಂಸ್ಕೃತವೆಂದೆಣಿಸುವ ದೇಶದವರಿಗೂ ಈ ಗುಣದ ಅರಿವು ಇರಲಿಲ್ಲ. 'ಹೋಮರ್'ನ 'ಇಲಿಯಡ್'ನ್ನು ಓದಿದರೂ ಇದೇ ತಿಳಿದುಬರುತ್ತದೆ. ಅಖಿಲ ಮಾನವ ಜಾತಿಯ ಬಗ್ಗೆ ಕನಿಕರವು ಉಂಟಾಗಿದ್ದು ಈ ನಂತರದ ಯುಗದ ಪುರುಷರಿಗೆ. "ಬುದ್ಧ–ಕ್ರಿಸ್ತರಿಗೆ." ಭಗವದ್ಗೀತೆಯಲ್ಲಿ, ಯಾವ ಉಪದೇಶವನ್ನು ಕೃಷ್ಣ ಅರ್ಜುನನಿಗೆ ಮಾಡಿದ್ದಾನೆಯೋ ಅವುಗಳಲ್ಲಿಯ ಕೇವಲ ಪ್ರಾರಂಭದ ಮೂರು ಅಧ್ಯಾಯಗಳು ಮಾತ್ರ ಮೂಲ ಭಗವದ್ಗೀತೆಯಾಗಿರಬಹುದೆಂದು ಅನಿಸುತ್ತದೆ. ಭಗವದ್ಗೀತೆಯ ಆನಂತರದ ಅಧ್ಯಾಯಗಳಲ್ಲಿ ತಿಳಿಸಿದ ಜಗನ್ ಮಿತ್ರತ್ವವು, ಜಗತ್ತಿನ ಬಗ್ಗೆ ಕರುಣೆಯು, ಈ ಎರಡು ಗುಣಗಳ ಅಸ್ತಿತ್ವದ ಸುಳಿವು ಕೂಡ ಮಹಾಭಾರತದಲ್ಲಿ ಕಾಣುವುದಿಲ್ಲ.

"ದಯಾ ಭೂತೇಷು", **"ಅಹಿಂಸಾ"** ಈ ಶಬ್ದಗಳು ಮಹಾಭಾರತದಲ್ಲಿ ಇವೆ. ಆದರೆ ಅಹಿಂಸೆಯ ಅರ್ಥವು ಪ್ರಾಣಿಗಳನ್ನು ವಧಿಸದಿರುವುದು ಎಂದು ಇರದೇ ಮಿತಪ್ರಮಾಣದಲ್ಲಿ ನಿಯಮಾನುಸಾರವಾಗಿ ವಧಿಸುವುದು ಎಂದಿತ್ತು. ಗೀತೆಯ ಮೊದಲನೆಯ ಮತ್ತು ಎರಡನೆಯ ಅಧ್ಯಾಯಗಳಲ್ಲಿ **'ಕೃಪಾ'** ಈ ಶಬ್ದವನ್ನು ತುಸುಮಟ್ಟಿಗೆ ಕುತ್ಸಿತ ಬುದ್ಧಿಯಿಂದಲೇ

ಬಳಸಲಾಗಿದೆ. **'ಕೃಪಯಾ ವಿಷ್ಟ'** ಅರ್ಜುನ, ಇಲ್ಲವೇ ಅರ್ಜುನನ, **'ಕೃಪಯಾ ವಿಷ್ಟತಾ'** ಕ್ಷತ್ರಿಯನಿಗೆ ಶೋಭಿಸದಂತಹದಾಗಿತ್ತು. **'ವಿಷಿದಂತಮ್'** ಈ ವಿಶೇಷಣವು ಕ್ಷತ್ರಿಯನಿಗೆ ಶೋಭಿಸುವುದಿಲ್ಲ. ಈ ವಿಷಾದ ಮತ್ತು ಕರುಣೆಗಳಿಂದಲೇ ಅರ್ಜುನನ ಕೈಗಳಿಂದ ಶಸ್ತ್ರಾಸ್ತ್ರಗಳು ಜಾರಿದ್ದವು. ಕಂಗಳಿಂದ ನೀರು ಹರಿಯುತ್ತಿತ್ತು. ಆತ ರಥದಲ್ಲಿ ಸ್ತಬ್ಧನಾಗಿ ಕುಳಿತಿದ್ದ. ಇದನ್ನೇ ಬಣ್ಣಿಸುವಾಗ ಉಪಯೋಗಿಸಿದ ವಿಶೇಷಣಗಳು ಗಮನಿಸುವಂತಿವೆ. ಅದಕ್ಕೆ ಆತ ಕಶ್ಮಲವೆಂದೆನ್ನುತ್ತಾನೆ. **'ಕಶ್ಮಲ'** ಈ ಶಬ್ದದ ಅರ್ಥವನ್ನು ಅನಿಷ್ಟ–ಕಾರಕ ಇಲ್ಲವೇ ಪಾಪ–ಕಾರಕ ಎಂದು ಮಾಡಬಹುದು. **'ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಾಸ್ಥಿತಮ್'** (ಎಲೈ ಅರ್ಜುನನೇ ಇಂತಹ ವಿಪತ್ತಿನ ಕಾಲದಲ್ಲಿ ಎಂತಹ ಅನಿಷ್ಟ–ಕಾರವು ನಿನ್ನ ಮನಸ್ಸಿನಲ್ಲಿ ಮೂಡಿದೆ?) ಎಂಬ ಕೃಷ್ಣನ ಈ ವಾಕ್ಯವು ಅರ್ಜುನನ ಈ ಕೃತ್ಯವು **'ಅನಾರ್ಯಜುಷ್ಟ' 'ಅಸ್ವರ್ಗ್ಯ' 'ಅಕೀರ್ತಿಕರ'**ವಾಗಿತ್ತು ಎಂದು ಕೃಷ್ಣನು ಹೇಳುತ್ತಾನೆ. ಅರ್ಜುನನ ಈ ಕೃತಿಗೆ ಕೃಷ್ಣ ಕ್ಲೈಬ್ಯವೆಂತಲು ಹೇಳುತ್ತಾನೆ. ಆತನಿಗೆ ಅನಿಸುವ ಕರುಣೆಗೆ ಕೃಷ್ಣ, ಕ್ಷುದ್ರವಾದ ಹೃದಯದೌರ್ಬಲ್ಯವೆನ್ನುತ್ತಾನೆ. ಈ ರೀತಿಯ ಕೃಷ್ಣನ ಮೀಮಾಂಸೆಯು ಮಹಾಭಾರತದ ಕಾಲದ ಎಲ್ಲ ಕ್ಷತ್ರಿಯರ ತಿಳುವಳಿಕೆಗೆ ಅನುಸರಿಸಿತ್ತು.

'ಅವಾಚ್ಯವಾದಾಂಶ್ಚ ಬಹೂನವದಿಷ್ಯಂತಿ ತವ' ಎಂದು ಕೃಷ್ಣನು ಅರ್ಜುನನಿಗೆ ಹೇಳುತ್ತಾನೆ. ಹಾಗೆಯೇ "ಇಂದಿಲ್ಲ ನಾಳೆ ಮರಣವು ಕಟ್ಟಿಟ್ಟಿದ್ದೇ! ಎದುರೆದುರು ಯುದ್ಧಮಾಡಿ ಮಡಿ ! ಕರ್ಮ, ಜನ್ಮ, ಜಾತ್ಯಾನುಸಾರ ಪ್ರಾಪ್ತವಾದ ಕರ್ತವ್ಯ ಪಾಲನೆಯೇ ನಿನ್ನ ಅಧಿಕಾರ ! ಈ ಕರ್ಮದಿಂದ ಒಳ್ಳೆಯದಾಗಲೀ ಕೆಟ್ಟದಾಗಲೀ ಲಭಿಸಬಹುದೋ ? ಎಂದು ಚಿಕಿತ್ಸೆ ಮಾಡುವ ಅಧಿಕಾರವು ನಿನಗಿಲ್ಲ. ಫಲದ ಆಸೆಯನ್ನು ಬಿಟ್ಟು ಕೇವಲ ಕರ್ತವ್ಯವೆಂದು ತಿಳಿದು ಕರ್ಮವನ್ನು ಮಾಡು" ಎಂದು ಹೇಳುತ್ತಾನೆ. ಮಹಾ ಕಠಿಣವಾದ, ಸ್ವತಹದ ಬಗ್ಗೆ ಆಗಲೀ, ಅನ್ಯರ ಬಗ್ಗೆ ಆಗಲೀ, ಎಳ್ಳಷ್ಟೂ ಕನಿಕರವಿಲ್ಲದ ನೀತಿಯಾಗಿತ್ತು ಇದು. ಮತ್ತು ಈ ರೀತಿಯಾಗಿ ಕೇವಲ ಕ್ಷತ್ರಿಯ ಪುರುಷರೇ ಅಲ್ಲದೇ ಕ್ಷತ್ರಿಯ ಸ್ತ್ರೀಯರು ಸಹ ಕುಂತಿ, ಗಾಂಧಾರಿ, ದ್ರೌಪದಿ ಮುಂತಾದವರು ವರ್ತಿಸಿದರು.

ಜರಾಸಂಧನ ವಧೆಯಾದ ಬಗ್ಗೆ ಈ ಮೊದಲು ಹೇಳಿದೆ. ಕೃಷ್ಣ, ಕರ್ತವ್ಯಪಾಲನೆಗಾಗಿ ಕಣ್ಣೆದುರಿನಲ್ಲಿಯೇ ಅದನ್ನು ನೆರವೇರಿಸಿದ. ಅದರಲ್ಲಿ ದೋಷಾರ್ಹ ಏನೂ ಇರಲಿಲ್ಲ. ಶಿಶುಪಾಲನ ವಧೆ ತಪ್ಪುವಂತಿರಲಿಲ್ಲ. ಕೃಷ್ಣ ಅದನ್ನು ಸಿಟ್ಟಿನ ಭರದಲ್ಲಿ ಮಾಡಿದ. ಮಹಾಭಾರತ ಕಥೆಯ ದೃಷ್ಟಿಯಿಂದ ಅದು ನಡೆಯಲೇಬೇಕಾಗಿತ್ತು. ಪಾಂಡವರ ರಾಜಸೂಯ ಯಜ್ಞವನ್ನು ಸುಗಮವಾಗಿ ಪೂರೈಸುವ ಹೊಣೆ ಕೃಷ್ಣನದಾಗಿತ್ತು. ಆದ್ದರಿಂದ ಆತ ಅನೇಕ ಕಾರ್ಯಗಳಲ್ಲಿ ತೊಡಗಿದ್ದ. ಮಾತಿಗೆ ಮಾತು ಬೆಳೆಸಿ ಯಜ್ಞಮಂಟಪವನ್ನು ಯುದ್ಧರಂಗವನ್ನಾಗಿ ಮಾಡುವುದು ಉಚಿತವಿರಲಿಲ್ಲ. ಆದ್ದರಿಂದ ಇತರ ರಾಜರು ಮುಂದುವರಿಯುವ ಮೊದಲೇ, ಏಕಾಕಿಯಾಗಿ, ಅದೇ ಸ್ಥಳದಲ್ಲಿ ಶಿಶುಪಾಲನ ವಧೆಯಾಗುವುದು ಅತ್ಯಾವಶ್ಯಕವಿತ್ತು. ಒಂದು ವಿಧದಲ್ಲಿ ಶಿಶುಪಾಲ ಅಜಾಗರೂಕನಾಗಿದ್ದ. ಔತಣಕೊಟ್ಟು ಕರೆತಂದ ಅತಿಥಿಯಾಗಿದ್ದ.

ಆತನನ್ನು ಈ ರೀತಿ ವಧಿಸುವುದು ಅನುಚಿತವಿತ್ತು. ಶಿಶುಪಾಲನಾದರೂ ಅತಿಥಿಯಂತೆ ವರ್ತಿಸಲಿಲ್ಲ. ಯಜಮಾನರ, ಹಾಗೂ ವೃದ್ಧ ಭೀಷ್ಮನ ಅವಮಾನವನ್ನು ಮಾಡಿ ತನ್ನ ವೈರಿಯಾದ ಕೃಷ್ಣನನ್ನು ನಿಂದಿಸಿದ. ಅದರಿಂದ ಕೃಷ್ಣ, ನಿರಪರಾಧಿಯಾದ ಇಲ್ಲವೇ ಅಸಹಾಯನಾದ ಶಿಶುಪಾಲನನ್ನು ವಧಿಸಿದನೆಂದು ಆಗುವುದಿಲ್ಲ. ಒಮ್ಮೆ ಒಬ್ಬನ ಕೊಂಕನ್ನು ಹೊರಗೆಳೆಯಲು ಆರಂಭಿಸಿದ ನಂತರ ಆ ಕೊಂಕು–ಮಾತಿಗೆ ಅಷ್ಟಕ್ಕಷ್ಟೇ ಪ್ರತ್ಯುತ್ತರವನ್ನು ಕೊಡುವುದು ಸಾಧ್ಯವಾಗುವುದಿಲ್ಲ. ಶಿಶುಪಾಲ ಬೈಗಳನ್ನು ಉಪಯೋಗಿಸಿದ. ವಿನಾಕಾರಣವಾಗಿ ಅವಮಾನಮಾಡಿದ. ಇದಕ್ಕೆ ಪ್ರತಿಯಾಗಿ ಕೃಷ್ಣ ಬೈಯ್ಗಳ ಸರಿಮಳೆ ಮಾಡಬಹುದಿತ್ತು. ಆದರೆ ಅದಕ್ಕೆ ಬದಲಾಗಿ ಕೃಷ್ಣನು ಶಿಶುಪಾಲನನ್ನು ಕೊಂದೇ ಬಿಟ್ಟ. ಈ ರೀತಿಯ ಪ್ರತೀಕಾರ ಗಂಭೀರವಾಯಿತೆಂದು ಅನ್ನಬಹುದು. ಆದರೆ ರಾಜರಾಜರಲ್ಲಿ ಜಗಳ ಹುಟ್ಟಿಸಿ ಆಗುವ ಹೆಚ್ಚಿನ ರಕ್ತಪಾತವನ್ನು ಈ ಒಬ್ಬ ಶಿಶುಪಾಲನ ವಧೆಯಿಂದ ತಡೆದನೆಂದು ಹೇಳಬಹುದು.

ಪಾಂಡವರು ವನವಾಸದಿಂದ ಮರಳಿದ ನಂತರ ನಡೆದ ಸಮಾಲೋಚನೆಗಳಲ್ಲಿ ಕೃಷ್ಣನ ಪಾತ್ರವು ಪ್ರಮುಖವಾಗಿಯೂ ಯೋಗ್ಯವಾಗಿಯೂ ಇತ್ತು. ಕೃಷ್ಣ ರಾಯಭಾರದ ಕಾಲಕ್ಕೆ ಆತನು ಕಲಹವನ್ನು ತಡೆಯಲು ವಿಶ್ವಪ್ರಯತ್ನವನ್ನು ಮಾಡಿದನು. "ಅರ್ಧ ರಾಜ್ಯವಂತೂ ಇರಲಿ, ಐದು ಗ್ರಾಮಗಳಂತೂ ಇರಲಿ, ಸೂಜಿಯ ಮೊನೆಯಷ್ಟು ಭೂಮಿಯನ್ನು ಸಹ ನಾನು ಕೊಡುವುದಿಲ್ಲ" ಎಂಬ ದುರ್ಯೋಧನನ ಉತ್ತರದಿಂದ ಯುದ್ಧ ಹೊರತು ಅನ್ಯಮಾರ್ಗವು ಉಳಿಯಲಿಲ್ಲ. ಕೌರವರ ಸಭೆಯಿಂದ ಕೃಷ್ಣ ಪಾರಾದ. ಹೋಗುವಾಗ ಮಾರ್ಗದಲ್ಲಿ ಕರ್ಣನನ್ನು ತನ್ನ ರಥದಲ್ಲಿ ಬರಮಾಡಿಕೊಂಡ. ಪಾಂಡವರ ಪಕ್ಷಕ್ಕೆ ಕರ್ಣನನ್ನು ಎಳೆಯುವ ಪ್ರಯತ್ನವನ್ನು ಮಾಡಿದನು. "ಕೃಷ್ಣನನ್ನು ಬಂಧಿಸಿದರೆ ಪಾಂಡವರಿಗೆ ಯುದ್ಧ ಮಾಡುವುದು ಕಠಿಣವಾಗುವುದು." ಎಂಬ ದುರ್ಯೋಧನನ ಊಹೆಯಂತೆ, ಕರ್ಣನನ್ನು ಬೇರ್ಪಡಿಸಿದರೆ ದುರ್ಯೋಧನನಿಗೆ ಪಾಂಡವರ ಬೇಡಿಕೆಯನ್ನು ಅಲ್ಲಗಳೆಯಲು ಬರುವಂತಿಲ್ಲವೆಂದು ಕೃಷ್ಣ ಊಹಿಸಿದ್ದನು. ಉದ್ಯೋಗ ಪರ್ವದಲ್ಲೆಲ್ಲ ಒಬ್ಬರು ಇನ್ನೊಬ್ಬರನ್ನು ಬಂಧಿಸುವ, ಪ್ರತಿಬಂಧಿಸುವ ಪ್ರಯತ್ನಗಳು ನಡೆದಿದ್ದವು. ದುರ್ಯೋಧನನ ಪ್ರಯತ್ನವು ಹುಂಬತನದ್ದಿತ್ತು. ಕೃಷ್ಣನು ಅದರಿಂದ ಪಾರಾದನು. ದುರ್ಯೋಧನನ ಪ್ರಯತ್ನವು ವಿಫಲಗೊಂಡಿತು. ಕೃಷ್ಣನ ಪ್ರಯತ್ನವು ಇದಕ್ಕೆ ತೀರಾ ಬೇರೆಯದು, ಚಾತುರ್ಯಪೂರ್ಣವಾಗಿತ್ತು. ಆದರೆ ಕರ್ಣನ ಸ್ವಾಮಿಭಕ್ತಿಯ ಮೂಲಕ, ನೊಂದುಕೊಂಡ ಸ್ವಾಭಿಮಾನದ ಮೂಲಕ ಕೃಷ್ಣನ ಪ್ರಯತ್ನವು ಕೈಗೂಡಲಿಲ್ಲ. ಕೃಷ್ಣ ಕರ್ಣನಿಗೆ "ಅಯ್ಯಾ! ನೀನು ಕುಂತಿಯ ಕೌಮಾರ್ಯದಲ್ಲಿ ಹುಟ್ಟಿದ ಮಗನು. ಶಾಸ್ತ್ರಾರ್ಥದಿಂದ ಅವಳು ಯಾರನ್ನು ವಿವಾಹವಾಗಿರುವಳೊ, ಅವನ ಮಗನೇ ನೀನು ಅನಿಸಿಕೊಳ್ಳುತ್ತೀ ! ಈ ರೀತಿ ನೀನು ಪಿತನ ಕಡೆಯಿಂದ ಪಾಂಡವನಾಗಿ, ತಾಯಿಯ ಕಡೆಯಿಂದ ವೃಷ್ಣಿ ಕುಲದವನು ಆಗಿರುವಿ. ನನ್ನೊಡನೆ ಬಾ ! ಪಾಂಡವರಿಗೆ ನೀನು ಕುಂತಿಯ ಮಗನು, ಯುಧಿಷ್ಠಿರನ ಅಣ್ಣನು ಎಂದು

ತಿಳಿಯಲಿ ! ನಾನು ನಿನ್ನನ್ನು ರಾಜನಾಗಿ ಅಭಿಷೇಕವನ್ನು ಮಾಡಿಸುವೆನು. ಪಾಂಡವರಲ್ಲಿಯ ಆರನೆಯವನೆಂದು ದ್ರೌಪದಿಯು ನಿನ್ನವಳಾಗುವಳು. **'ಷಷ್ಠೇ ಚ ತ್ವಾಂ ತಥಾ ಕಾಲೇ ದ್ರೌಪದ್ಯುಪಗಮಿಷ್ಯತಿ'** ಧರ್ಮರಾಜ ನಿನಗೆ ಯುವರಾಜನಾಗುವನು. ಭೀಮಸೇನನು ಚಾಮರ ಬೀಸುವನು. ಅರ್ಜುನನು ನಿನ್ನ ಸಾರಥ್ಯವನ್ನು ಮಾಡುವನು. ವೃಷ್ಣಿಗಳು ಮತ್ತು ಪಾಂಚಾಲರು ನಿನ್ನ ಸೇವಕರಾಗುವರು. **'ವಸುಷೇಣ'**ನೆಂದು ನಿನ್ನ ನಾಮ–ಘೋಷವಾಗುವುದು." ಇಷ್ಟೆಲ್ಲವನ್ನು ಕೃಷ್ಣನು ಹೇಳಿದನು. ಈ ಸಂದರ್ಭದಲ್ಲಿ ಕೃಷ್ಣ ಕರ್ಣನ ತೊಟ್ಟಿಲದ "ವಸುಷೇಣ" ಎಂಬ ಅಂಕಿತನಾಮದ ಉಲ್ಲೇಖವನ್ನು ಮಾಡಿದನು. 'ಸೇನ' ಎಂಬ ಪದವು ಕ್ಷತ್ರಿಯರಿಗೆ ಇರುತ್ತಿತ್ತು. ಈ ಪದದಿಂದ ಕರ್ಣ ಕ್ಷತ್ರಿಯನೆಂದು ವ್ಯಕ್ತವಾಗುತ್ತಿತ್ತು. ಕರ್ಣ, ವೈಕರ್ತನ, ಈ ರೂಢನಾಮದ ಉಲ್ಲೇಖವನ್ನು ಕೃಷ್ಣ ಜಾಣತನದಿಂದ ಮಾಡಲಿಲ್ಲ.

ಈ ರೀತಿಯ ದೊಡ್ಡ ಮೋಹವನ್ನು ಕೃಷ್ಣ ಆತನ ಮುಂದೆ ಇಟ್ಟ. ಆದರೆ ಕರ್ಣ ಜಗ್ಗಲಿಲ್ಲ. ರಾಜ್ಯ, ಗೌರವ ಪರ್ಯಾಯದಿಂದ ದ್ರೌಪದಿ, ಬಲಾಢ್ಯ ಕ್ಷತ್ರಿಯ ಕುಲದೊಡನೆ ನೆಂಟಸ್ಥನ ಮತ್ತು ಮಿತ್ರತ್ವ ಇವೆಲ್ಲವು ಸೂತವಂಶದವನೆಂದೆಣಿಸಲ್ಪಟ್ಟ ಕರ್ಣನಿಗೆ ದೊರಕುವಂತಿದ್ದವು. ಈ ರೀತಿ ಕೊಟ್ಟ ವಚನಗಳನ್ನು ಗಮನಿಸಿದರೆ ಸಹೋದರರಲ್ಲಿಯ ಯುದ್ಧವನ್ನು ತಡೆಯಲು ಕೃಷ್ಣ ಎಷ್ಟೊಂದು ಪರಿಶ್ರಮವನ್ನು ವಹಿಸಿದನೆಂಬುದು ತಿಳಿಯುತ್ತದೆ. ಕರ್ಣ ಯಾವ ಮೋಹಾಭಿಲಾಷೆಗೂ ಜಗ್ಗುವವನಲ್ಲ ಎಂದು ಕೃಷ್ಣನಿಗೆ ಗೊತ್ತಿತ್ತು. ಆದ್ದರಿಂದಲೇ ಆತನು ಈ ರೀತಿ ಅತಿಯಾಗಿ ಪ್ರಲೋಭನೆಗಳನ್ನು ಕರ್ಣನ ಮುಂದಿಟ್ಟನು ; ಎಂದು ಆಡಿಕೊಳ್ಳುವುದು ಯೋಗ್ಯವಲ್ಲ. ಪಾಂಡವರು ಕೃಷ್ಣನಿಗೆ ತುಂಬಾ ಋಣಿಗಳಾಗಿದ್ದರು. ತಾನು ಹೇಳುವುದೆಲ್ಲವನ್ನು ಪಾಂಡವರು ಪಾಲಿಸುವರೆಂದು ಕೃಷ್ಣನ ಮನವರಿಕೆ ಇತ್ತು. ಆದ್ದರಿಂದಲೇ ಇಷ್ಟೊಂದು ಪ್ರಲೋಭನೆಗಳನ್ನು ಕರ್ಣನ ಮುಂದಿಟ್ಟನು. ಈ ಪ್ರಲೋಭನೆಗಳನ್ನು ಕರ್ಣನಿಗೆ ತೋರಿಸುವಾಗ ರಾಜ್ಯದ ಅಭಿಲಾಷೆಯನ್ನು ಹೊಂದಿದ್ದ ಧರ್ಮರಾಜನಿಗೆ ದ್ರೋಹವನ್ನು ಬಗೆದನೆಂತಲೂ ಅಬಲೆಯಾದ ದ್ರೌಪದಿಯ ಬಗ್ಗೆ ಮಾತುಕೊಟ್ಟನೆಂತಲೂ ಆಕ್ಷೇಪಗಳು ಕೃಷ್ಣನ ಮೇಲೆ ಬರಬಹುದು. ಆದರೆ ಆತನು ಮಧ್ಯಸ್ಥಿಕೆಯನ್ನು ಡಾಂಭಿಕ ರೀತಿಯಲ್ಲಿ ಮಾಡಿದನೆಂಬ ಆಕ್ಷೇಪವು ಸರ್ವಥಾ ಬರಲಾರದು. ಮತ್ತೊಮ್ಮೆ ಕೃಷ್ಣನ ಜೀವನ ಮೌಲ್ಯಗಳು ಆ ಕಾಲದ ಜೀವನ–ಮೌಲ್ಯಕ್ಕೆ ಹೊಂದಿಕೊಂಡಿದ್ದವೆಂದು ಕಂಡುಬರುತ್ತವೆ. ಹಿರಿಯವನಾದ್ದರಿಂದ ಧರ್ಮ, ರಾಜ್ಯಕ್ಕೆ ಹಕ್ಕುದಾರನಿದ್ದ. ಯಾವನೊಬ್ಬ ಧರ್ಮನಿಗಿಂತ ಹಿರಿಯನಾದವನು, ಆತನ ತಾಯಿಯ ಮಗನೆಂದು ರಾಜ್ಯಕ್ಕೆ ವಾರಸುದಾರನೆಂದು ಮುಂದೆ ಬಂದಿದ್ದರೆ ಮತ್ತು ಆತನಿಗೆ ಉಳಿದ ಪಾಂಡವ ಸಹೋದರರು ಸಮ್ಮತಿಸಿದ್ದರೆ ಅಂತಹವನಿಗೆ ರಾಜ್ಯ ದೊರಕುವುದು ಸುಲಭವಿತ್ತು. ಕುಂತಿಯ ಮಕ್ಕಳಿಗೆ ರಾಜ್ಯವು ದೊರೆಯಬೇಕು; ಹಾಗೆಯೇ ಯುದ್ಧವನ್ನು ತಡೆಯಬೇಕು ಎಂಬ ಎರಡು ಸಂಗತಿಗಳನ್ನು ಕೃಷ್ಣನು ಹವಣಿಸಿದ್ದನು. ತಾನು ತನ್ನ ಮಿತ್ರರಿಗೆ ದ್ರೋಹವನ್ನು ಬಗೆಯುತ್ತಿರುವನೆಂದು ಆತನಿಗೆ ಅನ್ನಿಸಲಿಲ್ಲ. ಅರ್ಜುನನ ಮೇಲೆ ದ್ರೌಪದಿಯ ಪ್ರೀತಿಯು ಇದ್ದರೂ ಅವಳು ಐವರ ಮಡದಿ

ಆಗಬೇಕಾಯಿತು. ಅವರಲ್ಲಿ ಇನ್ನೊಬ್ಬನು ಸೇರಿಕೊಂಡರೆ ಅನುಚಿತವಾಗಲಿಕ್ಕಿಲ್ಲವೆಂದು ಅನಿಸಿರಬಹುದು. ಸ್ತ್ರೀಯರಿಗೆ 'ಮನಸು' ಎಂಬುದು ಇರುತ್ತದೆ ಎಂಬುವುದನ್ನು ಆಗಿನ ಕಾಲದ ಯಾವ ಪುರುಷರು–ಭೀಷ್ಮ, ವಾಸುದೇವ, ಪಾಂಡವ, ಕೃಷ್ಣ ತಿಳಿದುಕೊಂಡಿರಲಿಲ್ಲ. ಯಾವದನ್ನು ಇತರ ಕ್ಷತ್ರಿಯ ಮಾಡುತ್ತಿದ್ದರೋ ಅದನ್ನೇ ಕೃಷ್ಣ ಮಾಡಿದ. ದ್ರೌಪದಿ ರೊಚ್ಚಿಗೆ ಏಳಬಹುದೋ, ಇಲ್ಲವೊ, ಎಂಬ ವಿಚಾರವು ಆತನ ದೃಷ್ಟಿಯಲ್ಲಿ ಮಹತ್ವದ್ದಿರಲಿಲ್ಲ.

ಭೀಷ್ಮನ ಪರಾಭವ, ದ್ರೋಣನ ವಧೆ, ಈ ಎರಡು ಪ್ರಸಂಗಗಳಲ್ಲಿ ಆತನ ಕೃತ್ಯ ಸಮರ್ಥನೀಯವಾಗಿತ್ತು. ತಾತನನ್ನು ವಧಿಸಬಾರದು, ಗುರುಗಳನ್ನು ವಧಿಸಬಾರದು. ಇದು ಎಷ್ಟು ನಿಜವೋ, ಅಷ್ಟೇ ಅವರು ಸಹ ಮೊಮ್ಮಕ್ಕಳೊಡನೆ, ಶಿಷ್ಯರೊಡನೆ ಯುದ್ಧಕ್ಕೆ ನಿಲ್ಲಬಾರದು, ಎಂಬುವುದು ಕೂಡ ನಿಜವೇ ! ಒಂದು ಮುಯ್ಯವನ್ನು ಬಗೆದರೆ ಆ ಮುಯ್ಯಕ್ಕೆ ಮತ್ತೊಂದು ಮುಯ್ಯವು ಉಂಟಾಗುತ್ತದೆ. ಒಮ್ಮೆ ಯುದ್ಧಕ್ಕೆ ಸಜ್ಜಾದ ನಂತರ ಅದನ್ನು ಕೊನೆಗಾಣಿಸುವುದೇ ಕರ್ತವ್ಯವೆನಿಸುತ್ತದೆ. "ಭೀಷ್ಮನನ್ನು ಸಾಯಿಸು ದ್ರೋಣನನ್ನು ಸಾಯಿಸು." ಎಂದು ಕೃಷ್ಣನು ಹೇಳಿರಲಿಲ್ಲ. ಭೀಷ್ಮನನ್ನು ಗಾಯಗೊಳಿಸಿ ಯುದ್ಧದಿಂದ ಹೊರ ತೆಗೆಯುವುದೇ ಆತನ ಉದ್ದೇಶವಿತ್ತು. ಅದೇ ರೀತಿಯಲ್ಲಿ ಭೀಮ ಮತ್ತು ಧೃಷ್ಟದ್ಯುಮ್ನ ದ್ರೋಣನ ರಥವನ್ನು ಮುತ್ತಿದ ನಂತರ ಅದನ್ನೇ ಓಡಿಸಿಕೊಂಡು ಗುರುಗಳನ್ನು ಹಿಡಿದು ತಂದಿದ್ದರೂ ನಡೆಯುವಂತಿತ್ತು. ದ್ರೋಣನನ್ನು ವಧಿಸಿ. ಧೃಷ್ಟದ್ಯುಮ್ನ ಆತನ ಪಿತನಿಗಾದ ಅವಮಾನದ ಸೇಡನ್ನು ತೀರಿಸಿಕೊಂಡಿದ್ದು ಕೃಷ್ಣನ ಅಪರಾಧವಲ್ಲ. ಅಶ್ವತ್ಥಾಮ ಮಡಿದನೆಂಬ ಸುಳ್ಳು ಸುದ್ದಿಯನ್ನು ಹರಡುವಂತಹ ಘಟನೆಗಳು ಅಪರಿಚಿತವಿರಲಿಲ್ಲ. ಇದೇ ಉಪಾಯದಿಂದ ಜರಾಸಂಧನ ಸೇನಾನಿಗಳಾದ ಹಂಸ ಮತ್ತು ಡಿಂಭಕರು ಹತರಾಗಿದ್ದರು. ಕೃಷ್ಣನು ಯುದ್ಧವನ್ನೇ ತಡೆಯಲು ಯಾವ ರೀತಿ ಬಹಳ ಶ್ರಮಪಟ್ಟನೋ ಅದೇ ರೀತಿಯಲ್ಲಿ ಒಮ್ಮೆ ಯುದ್ಧಕ್ಕೆ ನಿಂತಮೇಲೆ ಅದರಲ್ಲಿ ಜಯ ಹೊಂದಲು ಸರ್ವಪ್ರಯತ್ನಗಳನ್ನು ಕೈಗೊಂಡ. ಇದೇ ಮಾತು, ಕರ್ಣನ ಸಂದರ್ಭದಲ್ಲಿಯೂ ಸರಿ ಅನಿಸುತ್ತದೆ. ಯುದ್ಧಕ್ಕೆ ನಿಂತವರೆಲ್ಲರು ಒಂದಿಲ್ಲ ಒಂದು ರೀತಿಯಲ್ಲಿ ಮುಯ್ಯವನ್ನು ಬಗೆದೇ ಇದ್ದರು. ಅದರಲ್ಲಿಯ ಯಾವನು ನಿರಪರಾಧಿಯು, ಜಗಳವಿಲ್ಲದವನೂ ಇರಲಿಲ್ಲ. ಕೃಷ್ಣ, ಅವರನ್ನು ಕೊಲ್ಲಿಸಿದಾಗ ಅವರು ಅಜಾಗರೂಕರಾಗಿದ್ದರೆಂತಲ್ಲ. ಒಮ್ಮೆ ಯುದ್ಧವನ್ನು ಕೈಗೊಂಡ ನಂತರ ಕೃಷ್ಣ ಯಾವುದೇ ಬಗೆಯ ದಯೆದಾಕ್ಷಿಣ್ಯಗಳನ್ನು ತೋರಲಿಲ್ಲ. ಆತ ಯಾರಿಂದಲೂ ದಯೆದಾಕ್ಷಿಣ್ಯಗಳನ್ನು ನಿರೀಕ್ಷಿಸಿರಲಿಲ್ಲ. ಇವರೆಲ್ಲರು ಹತರಾಗಿ ದುರ್ಯೋಧನನೊಬ್ಬ ಉಳಿದಿದ್ದ. ಪ್ರಾಣಭಯದಿಂದ ಆತ ಅವಿತುಕೊಂಡಿದ್ದ. ಆತ ದಯೆಯ ಯಾಚನೆಯನ್ನು ಮಾಡುವವನೂ ಆಗಿರಲಿಲ್ಲ. ಆದರೆ ಧೃತರಾಷ್ಟ್ರನಿಂದ ಹೇಳಿಸಿ ಪ್ರಾಣವನ್ನು ಉಳಿಸಿಕೊಳ್ಳಬೇಕು; ಎಂಬ ಆತನ ಪ್ರಯತ್ನವಿರಬೇಕೆಂದು ಅನಿಸುತ್ತದೆ. ಕೃಷ್ಣನು ಈ ಪ್ರಯತ್ನವನ್ನು ಸಹ ನಿಷ್ಠುರತೆಯಿಂದ ವಿಫಲಗೊಳಿಸಿದ. ದುರ್ಯೋಧನ ಬದುಕಿ ಉಳಿದಿದ್ದರೆ ಆತನು ಪಾಂಡವರನ್ನು ಸುಖದಿಂದ ಬಾಳಲು ಬಿಡುತ್ತಿರಲಿಲ್ಲ ಎಂಬುದನ್ನು ಕೃಷ್ಣ, ಚೆನ್ನಾಗಿ ಅರಿತಿದ್ದನು.

ದುರ್ಯೋಧನ ಮಡಿದ ನಂತರ ಗಾಂಧಾರಿ ಮತ್ತು ಧೃತರಾಷ್ಟ್ರನನ್ನು ಕಾಣಲು ಹೋಗುವುದಕ್ಕೆ ಪಾಂಡವರಿಗೆ ಧೈರ್ಯವಾಗಲಿಲ್ಲ. ಈ ವಾರ್ತೆಯನ್ನು ತಿಳಿಸಲು ಕೃಷ್ಣ ಹೋಗಬೇಕಾಯಿತು. ಗಾಂಧಾರಿ ಮತ್ತು ಧೃತರಾಷ್ಟ್ರನೊಡನೆ ಕೃಷ್ಣ ಮಾತನಾಡುತ್ತಿರುವಾಗ ದೂತನು ಆಗಮಿಸಿ ದುರ್ಯೋಧನ ಮತ್ತು ಅಶ್ವತ್ಥಾಮ ಆಡಿದ ಕೊನೆಯ ಸಂಭಾಷಣೆಯನ್ನು ಹೇಳಿದನು. ಅದನ್ನು ಕೇಳಿ ಯಾವುದೋ ಮೋಸವಿರಬಹುದು ಎಂದು ಊಹಿಸಿ ಕೃಷ್ಣನು ತನ್ನ ಭಾಷಣವನ್ನು ಅರ್ಧಕ್ಕೆ ಬಿಟ್ಟು ತ್ವರೆಯಿಂದ "ಹೋಗಿ ಬರುವೆ" ಎಂದು ಹೇಳಿ ಪಾಂಡವರ ಶಿಬಿರದತ್ತ ಧಾವಿಸಿದನು. ಪಾಂಡವರನ್ನು ಮತ್ತು ದ್ರೌಪದಿಯನ್ನು ಕರೆದುಕೊಂಡು ಆತ ಹಾಳುಬಿದ್ದ ಕೌರವರ ಶಿಬಿರವನ್ನು ತಲುಪಿದನು. ಎಲ್ಲಿ ಕೃಷ್ಣಾರ್ಜುನ, ಅಲ್ಲಿ ಸಾತ್ಯಕಿಯು ಎಂಬ ರೂಢಿಯಂತೆ ಆತನು ಅವರೊಡನೆಯೇ ಇದ್ದನು. ರಾತ್ರಿಯಲ್ಲಿ ನಡೆದ ದಾಳಿಯಲ್ಲಿ ಕನಿಕರವಿಲ್ಲದ ಕೊಲೆಯಲ್ಲಿ ದ್ರೌಪದಿಯ ಮಕ್ಕಳು ಮತ್ತು ಸಹೋದರರು ಕೊಲ್ಲಲ್ಪಟ್ಟರು. ಆದರೆ ಪಾಂಡವರು ಬದುಕಿ ಉಳಿದರು.

ಈ ಘಟನೆಯಲ್ಲಿಯೂ ಕೃಷ್ಣನನ್ನು ದೂಷಿಸುವಂತಿಲ್ಲ. ಗುಪ್ತಚಾರರ ಮಾತುಗಳಿಂದ ಏನಾದರೂ ಅನರ್ಥವು ನಡೆಯಲಿದೆ ; ಎಂದು ಕೃಷ್ಣನಿಗೆ ಅನಿಸಿತು. ಆದರೆ ನಿಶ್ಚಿತವಾಗಿ ಯಾವ ಬಗೆಯ ಅನರ್ಥವಾಗಲಿದೆ ಎನ್ನುವುದು ಆತನಿಗೆ ತಿಳಿದಿರಲಿಲ್ಲ. ಮುಖ್ಯ ಯುದ್ಧವು ಕೌರವ ಪಾಂಡವರಲ್ಲಿ ನಡೆದಿತ್ತು. ಸೇಡನ್ನು ಪಾಂಡವರ ಮೇಲೆಯೇ ತೀರಿಸಿಕೊಳ್ಳಬಹುದು. ಎಂದು ಆತ ಊಹಿಸಿರಬೇಕು ವಿಜಯೋನ್ಮಾದದಿಂದ ಪಾಂಡವರಲ್ಲಿಯ ಯುದ್ಧ ಕಾಲದ ಶಿಸ್ತು, ಜಾಗರೂಕತೆಯೂ ಇಲ್ಲದಂತಾಗಿದ್ದವು. ಪ್ರತಿಯೊಬ್ಬರು ಮದ್ಯಪ್ರಾಶನ, ನೃತ್ಯವಿಲಾಸಗಳಲ್ಲಿ ಮೈಮರೆತಿದ್ದರು. ಸೇನಾಪತಿಯಾದ ಧೃಷ್ಟದ್ಯುಮ್ನ ಮೊದಲಾದವರ ಸ್ಥಿತಿಯೇ ಈ ರೀತಿ ಆಗಿತ್ತು. ಅಂದನಂತರ ಸಾಮಾನ್ಯ ಸೈನಿಕರ ಅವಸ್ಥೆಯು ಏನಿರಬಹುದು? ಕೃಷ್ಣ ಹಸ್ತಿನಾಪುರದಿಂದ ಮರಳಿದಾಗ ರಾತ್ರಿಯಾಗಿತ್ತು. ಅಂತಹ ರಾತ್ರಿಯಲ್ಲಿ ಶಿಥಿಲವಾದ ಶಿಬಿರಗಳಲ್ಲಿ ಸುಸ್ಥಿತಿಯನ್ನು ಉಂಟುಮಾಡುವುದು ದುಸ್ತರವಾದ ಕಾರ್ಯವಿತ್ತು. ಅದರಲ್ಲಿಯೂ ಯಾವ ಪಾಂಡವರ ಮೂಲಕ ಹಗೆತನ, ಯುದ್ಧ ನಡೆದಿದ್ದವೋ, ಆ ಪಾಂಡವರನ್ನೇ ಬೇರೆಡೆಗೆ ಕಳುಹಿಸಿದರೆ ಸಾಕು! ಎಂದು ಕೃಷ್ಣನಿಗೆ ತೋಚಿರಬಹುದು. ಕೃಷ್ಣನನ್ನು ದೇವರೆಂದು ಭಾವಿಸಿ ಆತ ಸರ್ವಜ್ಞ, ತ್ರಿಕಾಲ ಜ್ಞಾನಿಯು ಎಂದು ತಿಳಿದುಕೊಂಡು ಆತನಿಂದ ನಡೆಯದೇ ಇದ್ದ ಕೃತಿಗಳ ಶ್ರೇಯಸ್ಸನ್ನು ಆತನಿಗೆ ಅಂಟಿಸುವುದು ಇಲ್ಲವೇ ಆತನಿಂದ ಹಲವು ಆಗಬೇಕಾದ ಕಾರ್ಯಗಳು ಆತನಿಂದ ನಡೆಯಲಿಲ್ಲವೆಂದು ಈ ರೀತಿಯ ಎರಡೂ ಅಭಿಪ್ರಾಯಗಳು ಸರಿ ಎನಿಸುವುದಿಲ್ಲ. ಅರ್ಜುನ, ಸುಭದ್ರೆಯೊಡನೆ ವಿವಾಹವಾಗಬೇಕೆಂದು ಆತನನ್ನು ವನವಾಸಕ್ಕೆ ಕಳುಹಿಸುವುದು, ಆತನಿಗೆ ತ್ರಿದಂಡೀ ಸನ್ಯಾಸವನ್ನು ಕೊಡಿಸುವುದು. 'ಯತಿ' ಎಂದು ಆತನನ್ನು ಅಂತಃಪುರಕ್ಕೆ ಕರೆತರುವುದು, ಅಣ್ಣನಾದ ಬಲರಾಮನಿಗೆ ವಂಚಿಸುವುದು ಇವೆಲ್ಲವನ್ನು ಯಾವ ಕೃಷ್ಣನು ಮಾಡಲೇ ಇಲ್ಲವೋ, ಅದೇ ರೀತಿ ಭವಿಷ್ಯವನ್ನು ಅರಿತು ಎಲ್ಲರನ್ನೂ ಬದುಕಿಸುವ ಸಾಧ್ಯತೆ ಇದ್ದರೂ ಭೂಮಿಗೆ

ಭಾರವಾಗಿರುವರೆಂದು ಎಲ್ಲಾ ಯೋಧರನ್ನು ಅಶ್ವತ್ಥಾಮನಿಂದ ಕೊಲ್ಲಿಸಿದನು ಎಂಬುದನ್ನು ಕೃಷ್ಣನು ಮಾಡಿಸಿದ ; ಎನ್ನುವುದು ಸರಿ ಎನ್ನಿಸುವುದಿಲ್ಲ.

ಅಭಿಮನ್ಯುವಿನ ಮಗನಾದ ಪರೀಕ್ಷಿತ, ಅಂದರೆ ಕೃಷ್ಣನ ಸಹೋದರಿಯಾದ ಸುಭದ್ರೆಯ ಮೊಮ್ಮಗ, ಆತನು ಹಸ್ತಿನಾಪುರದ ಪಟ್ಟವನ್ನೇರಿದನು. ಇದರಲ್ಲಿಯೂ ಕೃಷ್ಣನ ಕರ್ತೃತ್ವವಾಗಲೀ, ಕಾರಸ್ಥಾನವಾಗಲೀ ಇರಲಿಲ್ಲ. ಅಜ್ಞಾತವಾಸ ಮುಗಿಯುವವರೆಗೆ ಪಾಂಡವರ ಯಾವ ಮಕ್ಕಳ ಮದುವೆಯೂ ಆಗಿರಲಿಲ್ಲ. ಮಹಾಭಾರತದಲ್ಲಿಯಂತೂ ಅಂತಹ ಉಲ್ಲೇಖವಿಲ್ಲ. ವನವಾಸವು ಪೂರ್ಣವಾಗಲಿರುವ ಕಾಲಕ್ಕೆ ಕೃಷ್ಣನು ಸತ್ಯಭಾಮೆಯೊಡನೆ ಪಾಂಡವರ ಭೇಟಿಗಾಗಿ ಬಂದಿದ್ದನು. ಆಗ ಕೃಷ್ಣನು ಅವರ ಮಕ್ಕಳ ಕ್ಷೇಮ ಸಮಾಚಾರವನ್ನು ಹಾಗೇ ಶಸ್ತ್ರಾಭ್ಯಾಸದಲ್ಲಿಯ ಅವರ ಪ್ರಗತಿಯನ್ನು ದ್ರೌಪದಿಗೆ ತಿಳಿಸಿದನು. ಒಂದು ವೇಳೆ ಆ ಮಕ್ಕಳ ವಿವಾಹವು ನೆರವೇರಿದ್ದರೆ ಈ ಸಂದರ್ಭದಲ್ಲಿ ಅದರ ಉಲ್ಲೇಖವು ಬರುತ್ತಿತ್ತು. ರಾಜಕನ್ಯೆಯಾದ ಉತ್ತರೆಗೆ ನೃತ್ಯವನ್ನು ಕಲಿಸುವ ಬೃಹನ್ನಳೆಯು ಅರ್ಜುನನೆಂದು ತಿಳಿದ ನಂತರ ವಿರಾಟರಾಜನು ಆತನಿಗೆ ಉತ್ತರೆಯೊಡನೆ ವಿವಾಹವಾಗಲು ವಿಚಾರಿಸಿದನು. ಹಿಂದೆ ತುಸುದಿನಗಳವರೆಗೆ ಅಂಬೆಯು ಭೀಷ್ಮನಿಂದ ಅಪಹರಿಸಲ್ಪಟ್ಟ ನಂತರ ಹಸ್ತಿನಾಪುರದಲ್ಲಿ ಉಳಿದ ಕಾರಣ ಶಾಲ್ವರಾಜನು ಅವಳೊಡನೆ ವಿವಾಹವಾಗಲು ಒಪ್ಪಲಿಲ್ಲ. ಈ ರೀತಿ ಇರುವಾಗ ಅರ್ಜುನನ ಬಳಿಯಲ್ಲಿ ಒಂದು ವರ್ಷದವರೆಗೂ ನೃತ್ಯವನ್ನು ಕಲಿತ ಉತ್ತರೆಯೊಡನೆ ಯಾರುತಾನೇ ವಿವಾಹವಾಗಬಹುದು? "ನಾನು ಉತ್ತರೆಯನ್ನು ಪುತ್ರಿಯೆಂದು ಬಗೆದಿದ್ದೇನೆ. ಆದ್ದರಿಂದ ಅವಳ ವಿವಾಹವು ನನ್ನ ಮಗನೊಡನೆ ನಡೆಯಲಿ" ಎಂದು ಅರ್ಜುನನು ತಿಳಿಸಿದ ನಂತರ ದ್ವಾರಕೆಯಿಂದ ಅಭಿಮನ್ಯುವನ್ನು ಕರೆಯಿಸಲಾಯಿತು. ದ್ರೌಪದಿಯಿಂದ ಜನಿಸಿದ ಅರ್ಜುನನ ಮಗನನ್ನು ಏಕೆ ಕರೆಯಿಸಲಿಲ್ಲ ? ಅದಕ್ಕೆ ಕಾರಣವು ಹೀಗಿರಬಹುದು. ದ್ರೌಪದಿಗೆ ಐವರು ಪುತ್ರರಿದ್ದರು. ಅವರಲ್ಲಿ ಧರ್ಮರಾಜನ ಮಗನು ಹಿರಿಯವನು. ದ್ಯೂತದ ಸಮಯಕ್ಕೆ ದ್ರೌಪದಿಯು ಆ ಪುತ್ರನ ಬಗ್ಗೆ 'ಯುವರಾಜ'ನೆಂಬ ಉಲ್ಲೇಖ ಮಾಡಿದ್ದಳು. ದ್ರೌಪದಿಯ ಪುತ್ರರ ವಿವಾಹಗಳು ಒಬ್ಬನ ನಂತರ, ಇನ್ನೊಬ್ಬನದು ಈ ರೀತಿ ಜರುಗಿರಬಹುದು. ಇಲ್ಲವೇ ಒಂದೇ ಸಮಯಕ್ಕೆ ಅವರೆಲ್ಲರ ವಿವಾಹಗಳು ನಡೆದಿರಬಹುದು. ಆ ಪುತ್ರರಲ್ಲಿ ಹಿರಿಯವನಾದವನನ್ನು ಬಿಟ್ಟು ಅಭಿಮನ್ಯುವಿನ ವಿವಾಹವಾಗುವುದು ಸಾಧ್ಯವಿರಲಿಲ್ಲ. ಅಭಿಮನ್ಯುವು ಅರ್ಜುನನ ಮಗನಾಗಿದ್ದರೂ ಪಾಂಡವರ ಪಟ್ಟರಾಣಿಯ ಮಗನಲ್ಲವಾದ್ದರಿಂದ ರಾಜ್ಯಕ್ಕೆ ಹಕ್ಕುದಾರನಿರಲಿಲ್ಲ. ಇದ್ದ ಹಕ್ಕುದಾರರಲ್ಲಿ ಆತನ ಸ್ಥಾನವು ಅಪ್ರಧಾನವಿತ್ತು.

ಈ ವಿವಾಹದಿಂದ ಒಂದು ಮಹತ್ವದ ನೆಂಟಸ್ಥನವು ಉಂಟಾಗುತ್ತಿತ್ತು. ಅರ್ಜುನನ ಮಗನೆಂದು ಅಭಿಮನ್ಯುವಿಗೆ ಗೌರವವಿತ್ತು. ಬೇರೆ ಯಾವ ಆತಂಕಗಳು ಇರಲಿಲ್ಲ. ದ್ರೌಪದಿಯ ಮಕ್ಕಳು ಮುಂದೆ ಯುದ್ಧದಲ್ಲಿ ಕೊಲೆಯಾಗುವರು ಎಂಬುದನ್ನು ಯಾರೂ ಕನಸಿನಲ್ಲಿಯೂ ಭಾವಿಸಿರಲಿಲ್ಲ. ಅಭಿಮನ್ಯು, ಘಟೋತ್ಕಚ, ಇರಾವತ, ರಣಸಂಗ್ರಾಮದಲ್ಲಿ

ಧುಮುಕಿದ್ದರು. ಆದರೆ ದ್ರೌಪದಿಯ ಮಕ್ಕಳು ಆ ರೀತಿ ಮಾಡಿದ್ದು ಕಂಡುಬರುವುದಿಲ್ಲ. ಅವರು ರಾಜ್ಯಕ್ಕೆ ವಾರಸುದಾರರಿದ್ದರು. ಯುದ್ಧ ಮುಗಿದಾಗಲೂ ಅವರು ಇದ್ದರು. ಕಪಟತನದಿಂದಲೂ, ಕ್ರೂರತನದಿಂದಲೂ ಅಶ್ವತ್ಥಾಮ ಅವರ ಕೊಲೆಮಾಡದೇ ಇದ್ದರೆ ಯುವರಾಜರೆಂದು ಎನಿಸಿಕೊಳ್ಳುತ್ತಿದ್ದರು. ಅವರ ವಿವಾಹಗಳು ನಡೆಯಬಹುದಿತ್ತು. ಆದರೆ ಅವರು ಕೊಲೆಯಾದರು. ಕೊನೆಯಲ್ಲಿ ಉತ್ತರೆಯ ಗರ್ಭದಲ್ಲಿ ಇದ್ದ ಅಭಿಮನ್ಯುವಿನ ಮಗ ಬಹು ಪ್ರಯಾಸದಿಂದ, ಯಮಪಾಶದಿಂದ ಬದುಕಿ ಉಳಿದ. ಮತ್ತೆ ನಂತರ ರಾಜನಾದ. ಕೃಷ್ಣನ ಕಾರಸ್ಥಾನವೇನೂ ಇರಲಿಲ್ಲ. ಕೃಷ್ಣ ಚತುರನಿದ್ದ. ದೂರದರ್ಶಿಯಾಗಿದ್ದ. ಆದರೆ ತ್ರಿಕಾಲಜ್ಞಾನಿ, ಸರ್ವಶಕ್ತ ಆಗಿರಲಿಲ್ಲ. ಹಲವು ವೈಯಕ್ತಿಕ ಉದ್ದೇಶಗಳನ್ನು ಹೊಂದಿದ್ದ. ಅವುಗಳನ್ನು ಈಡೇರಿಸಲು, ತನ್ನ ಮೌಲ್ಯಗಳಿಗೆ ಮರ್ಯಾದೆಗಳನ್ನು ಇಟ್ಟುಕೊಂಡಿದ್ದ. ತನ್ನ ಮಕ್ಕಳಿಗೆ ರಾಜ್ಯವನ್ನು ದೊರಕಿಸಲು ಯಾರು ಆಸೆಪಡಲಿಲ್ಲವೊ ಅಂತಹವನು ಅಭಿಮನ್ಯುವಿನ ಸಲುವಾಗಿ ಯಾವ ಕಪಟವನ್ನೂ ಮಾಡಲಾರ.

ಕೃಷ್ಣ ಪಾಂಡವರಲ್ಲಿದ್ದ ಸ್ನೇಹದಿಂದ ಪಾಂಡವರು ತುಂಬಾ ಲಾಭವನ್ನು ಪಡೆದರು. ಸ್ವಕುಲದ ದೃಷ್ಟಿಯಿಂದಲೂ ಮತ್ತು ವೈಯಕ್ತಿಕವಾಗಿಯೂ ಕೃಷ್ಣನಿಗೂ ಲಾಭವಾಯಿತು. ಜರಾಸಂಧ ಕೊಲ್ಲಲ್ಪಟ್ಟ ಮತ್ತು 'ಸರ್ವೋತ್ತಮ ಕ್ಷತ್ರಿಯಾಗ್ರಣಿ' ಎಂದು ಎಲ್ಲಾ ಕ್ಷತ್ರಿಯ ಸಮೂಹದಲ್ಲಿ ಗೌರವದ ಪ್ರಥಮ ಅರ್ಘ್ಯವನ್ನು ಕೃಷ್ಣ ಪಡೆದ. ಅರ್ಜುನನೊಡನೆ ಇದ್ದ ಕೃಷ್ಣನ ಸ್ನೇಹವು ನಿರಪೇಕ್ಷವಾಗಿತ್ತು. ಅರ್ಜುನನ ಪರಮ ಸ್ನೇಹವು ಕೃಷ್ಣನಿಗೆ ದೊರೆತಿದ್ದರೂ ಅದರಿಂದ ವ್ಯಾವಹಾರಿಕ ಲಾಭವೇನೂ ಇರಲಿಲ್ಲ. ಕೃಷ್ಣ ಅಷ್ಟೇ ಉತ್ಕಟ ಸ್ನೇಹವನ್ನು ಅರ್ಜುನನೊಡನೆ ಇಟ್ಟುಕೊಂಡಿದ್ದ. ತನ್ನ ಬುದ್ಧಿ ಸಾಹಸಗಳನ್ನು ಅರ್ಜುನನ ದೇಹ, ಯಶ, ಆತ್ಮ, ಇವುಗಳ ವಿಕಾಸ ಮತ್ತು ರಕ್ಷಣೆಗಳಿಗಾಗಿ ಉಪಯೋಗಿಸಿದ.

ಭೀಷ್ಮಪರ್ವದಲ್ಲಿ, ದ್ರೋಣ ಪರ್ವದಲ್ಲಿ ಹಾಗೆಯೇ ಕರ್ಣಪರ್ವದಲ್ಲಿ ಅರ್ಜುನ ಕೃಷ್ಣನ ಮುಂದೆ ಹಲವಾರು ಕಠಿಣ ಸಮಸ್ಯೆಗಳನ್ನು ತಂದಿಟ್ಟ. ಯಾವುದನ್ನು ಮಾಡಲೇಬೇಕಿತ್ತೋ, ಅಲ್ಲಿ ಹಿಂಜರಿದ. ಯಾವುದನ್ನು ಮಾಡಲು ದುಸ್ತರವೋ ಅದನ್ನು ಮಾಡಲು ದುಡುಕಿದ. ಯಾವುದು ಕ್ರಮಪ್ರಾಪ್ತವಾಗಿ ಅಪರಿಹಾರ್ಯ ಆಗಿತ್ತೋ ಅದನ್ನು ತಡೆಯಲು ಇಚ್ಛಿಸಿದ. ಅರ್ಜುನನ ಕೀರ್ತಿ ಚಿರಕಾಲ ಕಲಂಕಿತವಾಗುವ ಸಂಭವವಿತ್ತು. ಅರ್ಜುನನ ದೇಹಕ್ಕೆ ಅಪಾಯವಾಗುವ ಸಂಭವವಿತ್ತು. ಅರ್ಜುನನ ಮನಸ್ಸು ಕುಗ್ಗಿತ್ತು. ಈ ಎಲ್ಲವುಗಳಿಂದ ಕೃಷ್ಣ ಆತನನ್ನು ಪಾರುಮಾಡಿದ. ತನಗಿಂತ ಹೆಚ್ಚು ಜಾಗರೂಕತೆಯನ್ನು ಅರ್ಜುನನಿಗಾಗಿ ವಹಿಸಿದ. ಗೀತೆಯಲ್ಲಿ ಹೇಳಿದಂತೆ ನಿಜವಾಗಿಯೂ ಅರ್ಜುನನ 'ಯೋಗಕ್ಷೇಮ'ವನ್ನು ಕೃಷ್ಣನು ನೋಡಿಕೊಂಡನು.

ಈ ವೃತ್ತಾಂತಗಳಿಂದ ಕೃಷ್ಣ ಅರ್ಜುನನ ಸರಿಸಮಾನ ಆಪ್ತ ಗೆಳೆಯನಂತೆ ವರ್ತಿಸುತ್ತಿದ್ದನು ಎಂದು ತಿಳಿಯುತ್ತದೆ. ಗೀತೆಯಲ್ಲಿಯೂ ಆನಂತರದ ಅಧ್ಯಾಯಗಳಲ್ಲಿ ಹೇಳಿದಂತೆ ಕೃಷ್ಣ ಅರ್ಜುನನಿಗೆ **"ತ್ವಮಾದಿದೇವಃ ಪುರುಷಃ" "ಪ್ರಮಾಣಮ್"** ಎಂದು

ಅನಿಸಿದ್ದರೆ ಆನಂತರ ಕೃಷ್ಣನು, "ಭೀಷ್ಮನ ಮೇಲೆ ಏರಿ ಹೋಗುವುದು," "ಆತನಿಗೆ ರಥದಿಂದ ಕೆಳಗೆ ಉರುಳಿಸು!, ಕೊಲ್ಲಬೇಡ!" ಎಂದು ಬಿನ್ನವಿಸುವ ಪ್ರಸಂಗವು ಬರುತ್ತಿರಲಿಲ್ಲ.

ದ್ರೋಣಪರ್ವದಲ್ಲಿ ಕೃಷ್ಣಾರ್ಜುನರ ಸಂಬಂಧವು ಸರಿಸಮಾನರಾದ, ತುಂಬಾ ವಿಶ್ವಾಸದ, ಮಿತ್ರರು ಇದ್ದಂತೆ ಹೇಳಲಾಗಿದೆ. "ಅರ್ಜುನನು ನನ್ನೆದುರಿನಲ್ಲಿ ಇರುವವರೆಗೆ ಪಾಂಡವರನ್ನು ಮೀರಿಸಲೂ ನನ್ನಿಂದ ಆಗದು. ನೀನು ಆತನನ್ನು ಬೇರೆಡೆಗೆ ತೊಡಗಿಸು. ಅಂದರೆ ನಾನು ಧರ್ಮನನ್ನು ಜೀವಿತನಾಗಿ ಹಿಡಿದು ನಿನ್ನ ಮುಂದೆ ನಿಲ್ಲಿಸುತ್ತೇನೆ" ಎಂದು ದ್ರೋಣ ನುಡಿದ ನಂತರ ದುರ್ಯೋಧನನು ಅರ್ಜುನನನ್ನು ಸಂಶಪ್ತಕರೊಡನೆ ಯುದ್ಧದಲ್ಲಿ ತೊಡಗಿಸುವ ಉಪಾಯವನ್ನು ಹೂಡಿದ. ಮೊದಲನೆಯ ದಿನ ಧರ್ಮನನ್ನು ಹಿಡಿಯಲು ಆಗಲಿಲ್ಲ. ಮರುದಿನ ದ್ರೋಣನು ಅಭೇದ್ಯವಾದ ಚಕ್ರವ್ಯೂಹವನ್ನು ರಚಿಸಿದ. ಅರ್ಜುನ ಸಂಶಪ್ತಕರಲ್ಲಿ ಯುದ್ಧಕ್ಕೆ ತೊಡಗಿದ್ದ. ಕೇವಲ ಅಭಿಮನ್ಯು ಮಾತ್ರ ಚಕ್ರವ್ಯೂಹದ ಭೇದವನ್ನು ಅರಿತಿದ್ದನು. ಆತ ಚಕ್ರವ್ಯೂಹದಲ್ಲಿ ನುಗ್ಗಿ ಶತ್ರುಗಳ ಕೈಗೆ ಸಿಕ್ಕಿ ಹತನಾದ. ಅರ್ಜುನ ಸಂಜೆಗೆ ಮರಳಿದಾಗ, ಅಭಿಮನ್ಯುವು ಸತ್ತ ವಾರ್ತೆಯು ಆತನಿಗೆ ಗೊತ್ತಾಯಿತು. "ಅಭಿಮನ್ಯುವು ಮುನ್ನುಗ್ಗಿದಾಗ ಬಲಾಢ್ಯ ವೀರರಾದ ನೀವು ಏನು ಮಾಡುತ್ತಿದ್ದಿರಿ?" ಎಂದು ಕ್ರೋಧದಿಂದ ಆತನು ಕೇಳಿದನು. ಆಗ ಧರ್ಮನು "ನಾವೆಲ್ಲರು ಆತನ ಹಿಂದೆ ಇದ್ದೆವು. ಸಿಂಧುರಾಜನಾದ ಜಯದ್ರಥನು ನಮ್ಮನ್ನು ಅಡ್ಡಗಟ್ಟಿದನು. ನಾವು ತುಂಬಾ ಪ್ರಯತ್ನಿಸಿದರೂ ಮುನ್ನುಗ್ಗಲು ಆಗಲಿಲ್ಲ." ಎಂದು ಉತ್ತರಿಸಿದ. ಇದನ್ನು ಕೇಳಿದ ಅರ್ಜುನ ಕ್ರೋಧದಿಂದಲೂ ಸಂತಾಪದಿಂದಲೂ, "ನಾಳೆ ಸೂರ್ಯಾಸ್ತವಾಗುವ ಮೊದಲೇ ಜಯದ್ರಥನನ್ನು ಕೊಂದುಹಾಕುವೆ" ಎಂಬ ಪ್ರತಿಜ್ಞೆಯನ್ನು ಮಾಡಿದ. ಈ ಪ್ರತಿಜ್ಞೆ ಎಲ್ಲಾ ದೃಷ್ಟಿಯಿಂದಲೂ ವಿಲಕ್ಷಣವಾಗಿತ್ತು. ಜಯದ್ರಥ ವ್ಯೂಹದ ಮುಂಭಾಗದಲ್ಲಿ ಇದ್ದ. ಪಾಂಡವರ ಸೈನ್ಯವನ್ನು ತಡೆಯುವುದೇ ಆತನ ಹೊಣೆಗಾರಿಕೆ ಇತ್ತು. ಅಭಿಮನ್ಯುವಿನೊಡನೆ ಕಾದಾಡಿ, ಆತನನ್ನು ವಧಿಸುವವರು ಬೇರೆಯವರಾಗಿದ್ದರು. ಅವರನ್ನು ಬಿಟ್ಟು ಜಯದ್ರಥನನ್ನು ವಧಿಸುವ ಪ್ರತಿಜ್ಞೆಯನ್ನು ಅರ್ಜುನ ಮಾಡಿದ. ಯುದ್ಧದಲ್ಲಿಯ ವ್ಯಕ್ತಿಗಳಲ್ಲಿ ಜಯದ್ರಥ ಒಬ್ಬ ಸಾಧಾರಣ ವ್ಯಕ್ತಿಯಾಗಿದ್ದ. ಧರ್ಮರಾಜ ಆತನಿಗೆ ಕ್ಷುದ್ರ ವ್ಯಕ್ತಿಯೆಂದೇ ಅನ್ನುತ್ತಾನೆ. ಅರ್ಜುನನ ಈ ಪ್ರತಿಜ್ಞೆಯಿಂದ ಎಲ್ಲರೂ ಚಿಂತೆಗೆ ಒಳಗಾದರು. ಕೃಷ್ಣ ಅಚ್ಚರಿಗೊಂಡ "ಏನು ಈ ತರಹ ಪ್ರತಿಜ್ಞೆಯನ್ನು ಮಾಡಿದೆ? ನನ್ನನ್ನೂ ಕೇಳಲಿಲ್ಲ. ನಿನ್ನ ಸಹೋದರನನ್ನೂ ವಿಚಾರಿಸಲಿಲ್ಲ. ಕೋಪದ ಭರದಲ್ಲಿ ಪ್ರತಿಜ್ಞೆಯನ್ನು ಮಾಡಿಬಿಟ್ಟೆ! ಈ ಸಾಹಸವನ್ನು ಪೂರೈಸುವುದ ಹೇಗೆ?" ಅದಕ್ಕೆ ಅರ್ಜುನನು ಕೊಟ್ಟ ಉತ್ತರ ಅನಪೇಕ್ಷಿತವಿದೆ. ಅರ್ಜುನ ತನ್ನ ಆವೇಶದಲ್ಲಿಯೇ ಇದ್ದ. ಆತ, "ಕೃಷ್ಣನೇ ! ಇದು ನನಗೆ ಅಸಾಧ್ಯವೇ? ನಾನು ಎಂಥೆಂಥವರನ್ನು ಸೋಲಿಸಿದ್ದೇನೆ. ದೇವರನ್ನು ಸಹ ಜಯಿಸಬಲ್ಲೆನು. ನನ್ನ ಬಿಲ್ಲನ್ನು, ನನ್ನ ಬಾಹುಬಲವನ್ನು ನಾನು ಅರಿತಿದ್ದ ಅಸ್ತ್ರಗಳನ್ನು ಕಡಿಮೆಯೆಂದು ತಿಳಿಯಬೇಡ. ನಾಳೆಯೇ ನೋಡುವಿಯಂತೆ ! ನಸುಕಿನಲ್ಲಿಯೇ ರಥವನ್ನು ಸಿದ್ಧಗೊಳಿಸಿಡು" ಕೃಷ್ಣನು ಉತ್ತರಿಸಲಿಲ್ಲ. ಆತನು ತನ್ನ ಶಿಬಿರಕ್ಕೆ

ಹೋದನು. ಅಲ್ಲಿ ಸುಭದ್ರೆಯು ರೋದಿಸುತ್ತಿದ್ದಳು. ತುಸು ಹೊತ್ತಿನಲ್ಲಿಯೇ ದ್ರೌಪದಿ ಮತ್ತು ಉತ್ತರೆ ಅಲ್ಲಿಗೆ ಬಂದರು. ಕೃಷ್ಣ ಅವರನ್ನು ಸಂತೈಯಿಸಿದನು. "ಸಂತೈಯಿಸಿದನು" ಅನ್ನುವುದಕ್ಕಿಂತ ತುಸುಸಮಯದಲ್ಲಿಯೇ ಅವರನ್ನು ಕಠೋರನಾಗಿಯೇ ಆಚೆ ಕಳುಹಿಸಿದನು. "ಸುಭದ್ರೆಯೇ! ಅಳಬೇಡ. ನಿನ್ನ ಮಗ ವೀರಮರಣವನ್ನೈದಿದ, ನಾವೆಲ್ಲರೂ ಅದೇ ಮಾರ್ಗದಲ್ಲಿದ್ದೇವೆ. ಕ್ಷತ್ರಿಯನಾದವನು ಯುದ್ಧದಲ್ಲಿ ಮಡಿಯದೇ ಇನ್ನೆಲ್ಲಿ ಮಡಿಯುವುದು? ಆತನಿಗೆ ಸ್ವರ್ಗವು ದೊರೆತಿದೆ." ಇದೆಂತಹ ಸಂತೈಸುವ ರೀತಿ ! ಕೃಷ್ಣನು ಮುಂದೆ, ಸುಭದ್ರೆಗೆ ಈ ರೀತಿ ಹೇಳುತ್ತಾನೆ: "ಸುಭದ್ರೆ ! ಈಗ ನೀನು ಹೊರಡು. ನಾಳೆ ಸಂತೋಷದ ಸುದ್ದಿಯನ್ನು ಕೇಳುವಿ !" ಸಂತೋಷದ ಸುದ್ದಿ ಎಂದರೆ ಜಯದ್ರಥನ ಮರಣ, ಇದೆಂತಹ ಸಂತೋಷದ ಸುದ್ದಿ? ಇಂತಹ ಪ್ರಸಂಗಗಳಿಂದ ಮಹಾಭಾರತದಲ್ಲಿಯ ಕರ್ತವ್ಯನಿಷ್ಠುರ–ದಕ್ಷತೆಯು ಎದ್ದು ಕಾಣುತ್ತದೆ. ಮಾನವೀ ಭಾವನೆಗಳಿಗೆ ಯಾವ ತರಹದ ಸ್ಥಾನವೇ ಇರಲಿಲ್ಲವೋ ? ಕಾರುಣ್ಯ, ವ್ಯಾಕುಲತೆ, ಇವುಗಳಿಗೆ ಆಸ್ಪದವೇ ಇರಲಿಲ್ಲವೋ? ಎಂಬ ವಿಚಾರದಿಂದ ಮನಸ್ಸು ಝಿಲ್ಲೆನುತ್ತದೆ. "ಸುಭದ್ರೆಗೆ ಮತ್ತು ಉತ್ತರೆಗೆ ಸಮಾಧಾನದ ನಾಲ್ಕು ಮಾತುಗಳನ್ನು ಹೇಳ!" ಎಂದು ದ್ರೌಪದಿಗೆ ಹೇಳಿ ದುಃಖದಿಂದ ತಳಮಳಿಸುತ್ತಿದ್ದ ಅವರನ್ನು ಬೀಳ್ಕೊಟ್ಟು, ಕೃಷ್ಣ ಅರ್ಜುನನ ಶಿಬಿರದತ್ತ ಸಾಗಿದ. ಆತನ ಹಸ್ತಪಾದಗಳನ್ನು ತೊಳೆದು, ಅದೇ ತಂದ ದರ್ಭೆಯ ಹಾಸಿಗೆಯನ್ನು ಸಿದ್ಧಗೊಳಿಸಿ, ಸುತ್ತಲೂ ಆಯುಧಗಳನ್ನು ಇಟ್ಟು, ಅರ್ಜುನನನ್ನು ಉಪಚರಿಸಿದ. ಈ ಕೃತ್ಯದಿಂದ ಅರ್ಜುನ ಚೇತರಿಸಿದ. ಆತ ಸಹ ಕೈಕಾಲುಗಳನ್ನು ತೊಳೆದು ಕೃಷ್ಣನನ್ನು ಸತ್ಕರಿಸಿದ. ಕೃಷ್ಣ ಅರ್ಜುನನಿಗೆ "ಶಾಂತನಾಗಿ ನಿದ್ರಿಸು !" ಎಂದು ಹೇಳಿ ಅಲ್ಲಿಂದ ಹೊರಟ. ಅರ್ಜುನನ ಶಿಬಿರದ ಸುತ್ತಲೂ ರಕ್ಷಣೆಗಾಗಿ ವೀರರನ್ನಿಟ್ಟು, ತನ್ನ ಶಿಬಿರಕ್ಕೆ ಹೋಗಿ ಮರುದಿನದ ಹೊಣೆಗಾರಿಕೆಯನ್ನು ಯಾವ ರೀತಿ ಪೂರೈಸುವುದು ? ಎಂಬ ಯೋಚನೆಯಲ್ಲಿ ಕುಳಿತ. ಕೃಷ್ಣ, ದಾರುಕನನ್ನು ಕರೆದು ಆತನ ರಥವನ್ನು ಉತ್ತಮೋತ್ತಮ ಶಸ್ತ್ರಾಸ್ತ್ರಗಳಿಂದ ತುಂಬಿ ಸಜ್ಜುಗೊಳಿಸಲು ಹೇಳಿದ. "ಅರ್ಜುನನಿಂದ ಆಗದೇ ಇದ್ದಲ್ಲಿ ನಾನೇ ಜಯದ್ರಥನನ್ನು ವಧಿಸುವೆ. ಕೌರವರೆಲ್ಲರನ್ನು ನಿಃಶೇಷಗೊಳಿಸುವೆ. ಅರ್ಜುನನಿಗಿಂತ ಮಿಗಿಲಾದ ಆಪ್ತರು ಎನಗಿಲ್ಲ. ಅರ್ಜುನ ಅಳಿದರೆ ನಾನು ಕ್ಷಣಮಾತ್ರವು ಬದುಕಿರಲಾರೆ. ಆತನ ಶತ್ರು ನನಗೂ ಶತ್ರುವೇ !. ಆತನ ಮಿತ್ರರು ನನ್ನ ಮಿತ್ರರು. ಆತ ನನ್ನ ಅರ್ಧ ಪ್ರಾಣವೇ ಸರಿ, ಎಂಬುದು ನಾಳೆ ಜಗತ್ತಿಗೆ ಗೊತ್ತಾಗಲಿ. ರಥವನ್ನು ಸಿದ್ಧಗೊಳಿಸಿ ಕವಚವನ್ನು ಧರಿಸಿ ಸಿದ್ಧನಿರು. ನಾನು ಪಾಂಚಜನ್ಯವನ್ನು ಊದುತ್ತಲೇ ತತ್‌ಕ್ಷಣವೇ ರಥವನ್ನು ತೆಗೆದುಕೊಂಡು ಬಾ !" ಎಂದು ಕೃಷ್ಣ, ದಾರುಕನಿಗೆ ಅಪ್ಪಣೆಯನ್ನು ಮಾಡಿದ. ಮಹಾಭಾರತದಲ್ಲಿ ಬಣ್ಣಿಸಲ್ಪಟ್ಟ ಕೃಷ್ಣ, ಬೇರೆ ಯಾರ ಬಗೆಗೂ ಇಷ್ಟೊಂದು ಆತ್ಮೀಯತೆಯನ್ನು, ವಿಶ್ವಾಸವನ್ನು ಹೊಂದಿರಲಿಲ್ಲ. ಅಂದು ರಾತ್ರಿ ಅರ್ಜುನನಿಗೆ ಶಿವ ಪ್ರತ್ಯಕ್ಷನಾದ ಎಂಬ ಕಥಾಭಾಗವನ್ನು ಅಲ್ಲಗಳೆದರೂ, ಅನಂತರದ ಭಾಗದಲ್ಲಿ ಬಣ್ಣಿಸಿದ ರಣರಂಗದ ಗುಟ್ಟುಗಳನ್ನು, ಕೃಷ್ಣಾರ್ಜುನರ ವಿಲಕ್ಷಣ ಯುದ್ಧ ನಿಪುಣತೆಯನ್ನು ಓದುವುದರಲ್ಲಿ ಮನಸ್ಸು ಸೂರೆಗೊಳ್ಳುವಂತಿದೆ. ಸಂಗ್ರಾಮದಲ್ಲಿ

ಶ್ರೇಷ್ಠನಾರು? ಸಾರಥಿಯೋ ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸಾರಥಿಯ ಕೌಶಲ್ಯವು ಆಶ್ಚರ್ಯಕರವಿತ್ತು. ಸಾರಥ್ಯವನ್ನು ಅರಿತವನಿಗೆ ನಳೋಪಾಖ್ಯಾನದಲ್ಲಿ 'ಅಶ್ವಹೃದಯ'ನೆಂದು ಕರೆದಿದ್ದಾರೆ. ಆತನು ಕುದುರೆಗಳ ಅಂತರಂಗವನ್ನು ಅರಿತವನಿರಬೇಕು. ತನ್ನ ಕುದುರೆಗಳ ಬಲದ ಅರಿವು ಅವನಿಗೆ ಇರಬೇಕು. ಯಾವಾಗ ತಡೆಯಬೇಕು; ಯಾವಾಗ ಅವುಗಳನ್ನು ಓಡಿಸಬೇಕು, ಎಂಬುದು ಆತನಿಗೆ ಜ್ಞಾತವಿರಬೇಕು; ಭಯಗೊಂಡಿವೆಯೋ? ಎಂಬುದು ಆತನಿಗೆ ಹೊಳೆಯಬೇಕು. ಇನ್ನೊಂದು ವಿಧದಲ್ಲಿ ಆತ ಕೇವಲ ಅಶ್ವ ಹೃದಯವನ್ನು ಅರಿತವನು ಇರದೇ ರಥದಲ್ಲಿಯ ವೀರನ ಹೃದಯವನ್ನೂ ಅರಿತಿರಬೇಕು. ರಥದಲ್ಲಿಯ ಯೋಧನು ಆಯಾ ಕ್ಷಣಕ್ಕೆ ಯಾವ ಬಾಣಗಳನ್ನು ಹೊಡೆಯಲಿರುವನೋ, ಯಾವ ಯುದ್ಧ ಪದ್ಧತಿಯನ್ನು ಅನುಸರಿಸಲಿರುವನೋ, ಎಂಬುದನ್ನು ಕೂಡ ಆತನು ತಿಳಿದುಕೊಳ್ಳಬೇಕಿತ್ತು. ಕೃಷ್ಣಾರ್ಜುನರು ಎರಡು ದೇಹಧಾರಿಗಳಾಗಿದ್ದರೂ ಅವರ ಆತ್ಮ ಒಂದೇ ಇತ್ತು. ಶಬ್ದಗಳಿಂದ ಹೊರಗೆಡುವದಿದ್ದರೂ ಒಬ್ಬನ ಅಂತರಂಗವನ್ನು ಇನ್ನೊಬ್ಬನು ಅರಿತುಕೊಳ್ಳುತ್ತಿದ್ದನು. ರಥಿ ಮತ್ತು ಸಾರಥಿಯ ಏಕಾತ್ಮತೆಯು ಈ ಪರ್ವದಲ್ಲಿ ಬಹಳ ಉತ್ಕಟವಾಗಿ ತೋರಿಬರುತ್ತದೆ. ಇವುಗಳ ಹೊರತಾಗಿ ಎದುರಿಸಬೇಕಾದ ಪ್ರತಿಯೋಧರು ಏನು ಮಾಡಲಿದ್ದಾರೆ? ಏನನ್ನು ಹವಣಿಸುತ್ತಿದ್ದಾರೆ? ಎಂಬುದನ್ನು ಕೂಡ ಸಾರಥಿಯು ನಿಮಿಷ ಅರೆನಿಮಿಷದಲ್ಲಿ ಕಂಡುಕೊಳ್ಳಬೇಕಾಗುತ್ತಿತ್ತು. ಸಾರಥಿಯಾದವನೇ ರಥದಲ್ಲಿಯ ವೀರನಿದ್ದರೆ, ಉತ್ತಮ ಯೋಧನಾಗಿದ್ದರೆ, ಅಸ್ತ್ರಗಳನ್ನು ಬಲ್ಲವನಾಗಿದ್ದರೆ ಮಾತ್ರ ಮೇಲೆ ಹೇಳಿದ ಏಕಾತ್ಮತೆಯು ಸಾಧ್ಯ. ಕೃಷ್ಣ ಈ ರೀತಿಯಾಗಿಯೇ ಇದ್ದ. ಅದಲ್ಲದೇ ಅರ್ಜುನನಲ್ಲಿ ಪ್ರೀತಿ, ವಿಶ್ವಾಸಗಳನ್ನು ಇಟ್ಟುಕೊಂಡಿದ್ದ.

ಅರ್ಜುನನನ್ನು ಬೇರೆಡೆಯಲ್ಲಿ ತೊಡಗಿಸಿ ಧರ್ಮರಾಜನನ್ನು ಸೆರೆ ಹಿಡಿಯುವ ಸಾಧ್ಯತೆಯನ್ನು ಈ ದಿನವಂತೂ ಬದಿಗಿಡುವುದು ಕೌರವರಿಗೆ ಅವಶ್ಯಕವಾಯಿತು. ಜಯದ್ರಥವನ್ನು ಎಲ್ಲರಿಗಿಂತ ಹಿಂಭಾಗದಲ್ಲಿಟ್ಟು ಅರ್ಜುನ ಅಲ್ಲಿಗೆ ತಲುಪದಂತೆ ನೋಡಿಕೊಳ್ಳುವುದೆಂಬ ಒಂದೇ ಕಾರ್ಯವು ದುರ್ಯೋಧನಾದಿಗಳ ಮುಂದೆ ಇತ್ತು. ಪ್ರತಿಯೊಬ್ಬ ಯೋಧನ ಅಂಕಿತದಲ್ಲಿ ಒಂದೊಂದು ಸೇನಾ ವಿಭಾಗವಿರುತ್ತಿತ್ತು. ಪ್ರತಿಯೊಬ್ಬ, ತನ್ನ ಸೈನ್ಯದೊಡನೆ ಏರಿಹೋಗುತ್ತಿದ್ದನು. ಪ್ರಾರಂಭದ ತಿಕ್ಕಾಟವೇ ದ್ರೋಣನೊಡನೆ ಆಯಿತು. ದ್ರೋಣನ ಸೈನ್ಯವನ್ನು ಚದುರಿಸಿ ಮಾರ್ಗವಾದೊಡನೆಯೇ ಕೃಷ್ಣನು ರಥವನ್ನು ಮುಂದುವರಿಸಿದ. ದ್ರೋಣ, ಅರ್ಜುನನಿಗೆ ಆಹ್ವಾನಿಸಿ "ಹೀಗೆ ನುಸುಳಿ ಏಕೆ ಹೋಗುತ್ತಿರುವೆ? ನನ್ನೊಡನೆ ಕಾದಲು ಇತ್ತ ಬಾ" ಎಂದನು.

"ಗುರುಗಳೇ ನಮಸ್ಕಾರ. ಇಂದು ಬೇಡ" ಎಂದು ಹೇಳುತ್ತಾ ಅರ್ಜುನ ಮುಂದೆ ಸಾಗಿದ. ಅಡ್ಡ ಬಂದ ದುಃಶ್ಯಾಸನನನ್ನು ಗಾಯಗೊಳಿಸಿ ಅರ್ಜುನನ ರಥವು ಮುಂದೆ ಸಾಗಿತು. ಭೋಜರಾಜನ ಸೈನ್ಯವು ಇದೇ ರೀತಿಯಲ್ಲಿ ಕಂಗೆಟ್ಟಿತು. ಪಕ್ಷಿ ವೇಗದಿಂದ ಹೋಗುತ್ತಿದ್ದ ಕುದುರೆಗಳು ದಾರಿ ಸಿಕ್ಕಲ್ಲಿ ನುಗ್ಗಿ ಸಾಗುತ್ತಿದ್ದವು. ಮಧ್ಯಾಹ್ನದವರೆಗೆ ರಣಕದನವು ನಡೆಯಿತು.

ಕುದುರೆಗಳು ದಣಿದಿದ್ದವು. ಅರ್ಜುನ, "ನಾನು ಶತ್ರುಗಳನ್ನು ನೋಡಿಕೊಳ್ಳುತ್ತೇನೆ. ನೀನು ಕುದುರೆಗಳ ಶುಶ್ರೂಷೆ ಮಾಡು!" ಎಂದ. ಅರ್ಜುನ ರಥದಿಂದ ನೆಗೆದು ಭೂಮಿಯ ಮೇಲೆ ನಿಂತು ಯುದ್ಧಮಾಡತೊಡಗಿದ. ಕೃಷ್ಣನು ಕುದುರೆಗಳನ್ನು ಬಿಡಿಸಿದನು. ಅವುಗಳಿಗೆ ನೆಟ್ಟ ಬಾಣಗಳನ್ನು ಹೊರತೆಗೆದನು. ಅವುಗಳಿಗೆ ನೀರನ್ನು ಕುಡಿಸಿದನು. ಭೂಮಿಯ ಮೇಲೆ ಹೊರಳಾಡಲು ಬಿಟ್ಟನು. ಅವುಗಳ ಬೆನ್ನು ತಟ್ಟಿದನು. ಇದೆಲ್ಲವು ರಣರಂಗದಲ್ಲಿಯೇ, ಭಯ ಬೀಳದೆಯೇ, ಶಾಂತತೆಯಲ್ಲಿ ನಡೆದಿತ್ತು. ಕುದುರೆಗಳು ಚೇತರಿಸಿಕೊಂಡವು. ಅರ್ಜುನ ಆವರೆಗೆ ಶರಗಳ ಸುರಿಮಳೆಯಿಂದ ಶತ್ರುಗಳನ್ನು ತಡೆದಿದ್ದನು. ಆತ ಪುನಃ ರಥವನ್ನು ಏರಿದೊಡನೆ ರಥವು ಭರದಿಂದ ಸಾಗಿತು. ಕುದುರೆಗಳು, ರಥಿ ಮತ್ತು ಸಾರಥಿ ಪರಸ್ಪರರ ಹೃದಯವನ್ನು ಬಲ್ಲವರಾಗಿದ್ದರು.

ಇತ್ತ ಧರ್ಮರಾಜ ಚಡಪಡಿಸುತ್ತಿದ್ದ. ಆತ ಶೈನೇಯ ಸಾತ್ಯಕೀಯರನ್ನು ದಾರುಕನ ರಥದೊಡನೆ ಅರ್ಜುನನ ಬಳಿ ಕಳುಹಿಸಿದ. ಭೀಮ ತುಸು ಹೊತ್ತಿನಲ್ಲಿ ಅಲ್ಲಿಗೆ ಬಂದ. ಅರ್ಜುನ ರಭಸದಿಂದ ಮುನ್ನುಗ್ಗತೊಡಗಿದ ; ಕೊನೆಗೆ ಆತ ಜಯದ್ರಥನನ್ನು ಸಮೀಪಿಸಿದ. ಆತನ ರಥವನ್ನು, ರಥಪತಾಕೆಗಳನ್ನು ಅರ್ಜುನ ಮುರಿದುಹಾಕಿದ. ಕೊನೆಗೆ ಜಯದ್ರಥನ ಶಿರವನ್ನು ಹಾರಿಸಿದನು. ಕೃಷ್ಣಾರ್ಜುನರು ಒಬ್ಬರನ್ನೊಬ್ಬರು ಅಭಿನಂದಿಸಿದರು.

ಒಂದು ಕಠಿಣಪ್ರಸಂಗದಿಂದ ಅರ್ಜುನ ಪಾರಾಗಿದ್ದ. ಆದರೆ ಇನ್ನೂ ಆತನನ್ನು ರಕ್ಷಿಸಬೇಕಾಗಿತ್ತು. ಅಂದು ಎರಡೂ ಪಕ್ಷದವರು ಬಹಳ ರೊಚ್ಚಿಗೆದ್ದುದರಿಂದ ಕೈ ದೀವಟಿಗೆಗಳ ಬೆಳಕಿನಲ್ಲಿ ಯುದ್ಧವನ್ನು ಮುಂದುವರಿಸಿದರು. ಯೋಧರು ಮಧ್ಯದಲ್ಲಿ ತುಸು ವಿಶ್ರಮಿಸಿದ ನಂತರ ಸೂರ್ಯೋದಯವಾಗುತ್ತಲೇ ಪುನಃ ಯುದ್ಧವು ಪ್ರಾರಂಭವಾಯಿತು. ಈ ರಾತ್ರಿಯಲ್ಲಿಯ ಯುದ್ಧದಲ್ಲಿ ಕೃಷ್ಣನು ಘಟೋತ್ಕಚನನ್ನು ಹುರಿದುಂಬಿಸಿ, ಮುಂದೆ ಮಾಡಿದನು. ಘಟೋತ್ಕಚನ ಮುಂದೆ ಕೌರವರ ಆಟವು ಸಾಗದೇ, ದುರ್ಯೋಧನನ ವಿನಂತಿಯ ಮೇರೆಗೆ ಕರ್ಣನು ಅಮೋಘವಾದ ವಾಸವೀಶಕ್ತಿಯನ್ನು ಘಟೋತ್ಕಚನ ಮೇಲೆ ಪ್ರಯೋಗಿಸಿದನು. ಘಟೋತ್ಕಚನು ಹತನಾದನು. ಆತನ ಮರಣದಿಂದ ಪಾಂಡವರೆಲ್ಲರೂ ಶೋಕದಲ್ಲಿ ಮುಳುಗಿದರು, ಕೃಷ್ಣನು ಆನಂದದಿಂದ ನಲಿಯಹತ್ತಿದನು. ಕೊನೆಗೆ ಅರ್ಜುನ ಕೃಷ್ಣನನ್ನು ತಡೆಯಬೇಕಾಯಿತು. "ಎಲವೋ ! ಇಂತಹ ಮಹಾವೀರನು ಹತನಾದಾಗ ನೀನು ಆನಂದದಿಂದ ನಲಿಯುತ್ತಿರುವುದೇನು?" ಇದಕ್ಕೆ ಕೃಷ್ಣನು "ಅರ್ಜುನನೇ ! ನಿನ್ನನ್ನು ಸಾಯಿಸಲು ಕರ್ಣನು ಕಾದಿಟ್ಟ ವಾಸವೀ ಶಕ್ತಿಯು ಇನ್ನು ಅವನ ಬಳಿ ಇಲ್ಲದಂತಾಯಿತು" ಎಂದು ಉತ್ತರಿಸಿದನು. ಇತ್ತ ಧರ್ಮರಾಜನಿಗೆ ಕೋಪವು ತಡೆಯದಂತಾಗಿತ್ತು. "ಅಭಿಮನ್ಯುವು ಹತನಾದಾಗ ಅರ್ಜುನನು ಅಲ್ಲಿ ಇರಲಿಲ್ಲ. ಇಂದು ಅವನು ಅಲ್ಲಿ ಇದ್ದರೂ ಘಟೋತ್ಕಚನಂತಹ ಸದ್ಗುಣಿಯಾದ ವೀರಪುತ್ರನು ಕೊಲ್ಲಲ್ಪಟ್ಟನು. ಆತನು ನಮಗೆ ಎಷ್ಟೊಂದು ಸೇವೆಗೈದಿದ್ದನು. ಆತನ ಬಗ್ಗೆ ಯಾರೂ ಶೋಕಿಸುತ್ತಿಲ್ಲ. ಪ್ರಮುಖ ಶತ್ರುಗಳನ್ನು

ವಧಿಸುವುದನ್ನು ಬಿಟ್ಟು ಕ್ಷುದ್ರನಾದ ಜಯದ್ರಥನಿಗಾಗಿ ಒಂದು ದಿನವನ್ನು ವ್ಯರ್ಥವಾಗಿ ಕಳೆದಿದ್ದಾಯಿತು. ಕರ್ಣ, ದ್ರೋಣರನ್ನು ವಧಿಸಲು ನಾನೇ ಹೋಗುವೆ" ಎಂದು ಧರ್ಮ ಗದ್ದರಿಸಿದನು. ಕೃಷ್ಣ ಮೃದುವಚನಗಳಿಂದ ಆತನನ್ನು ತಡೆದನು. ಹಗಲು ರಾತ್ರಿ ಯುದ್ಧಮಾಡಿ ಇಬ್ಬದಿಯವರೂ ದಣಿದಿದ್ದರು. ಅಂದು ಯುದ್ಧವಾಯಿತು. ರಾತ್ರಿಯಲ್ಲಿ ವಿಶ್ರಮಿಸಿದ ನಂತರ ಮರುದಿನ ದ್ರೋಣ ಹತನಾದ. ಅರ್ಜುನನಿಂದ ಕರ್ಣನ ವಧೆ ಆಗಬೇಕಿತ್ತು. ದ್ರೋಣನ ವಧೆಯಿಂದ ಅರ್ಜುನ ಖಿನ್ನನಾಗಿದ್ದ. ಪಾಂಡವರಲ್ಲಿ ತಮ್ಮ ತಮ್ಮೊಳಗೆ ಬಹಳ ದೊಡ್ಡ ಜಗಳಗಳು ಹುಟ್ಟಿದ್ದವು. ಸಾತ್ಯಕಿ ಮತ್ತು ಧೃಷ್ಟದ್ಯುಮ್ನರಲ್ಲಿ ಮಾತು ಬೆಳೆದು ಯುದ್ಧವೇ ನಡೆಯಬಹುದಾಗಿತ್ತು. ಆದರೆ ಕೃಷ್ಣನು ಅದನ್ನು ತಡೆದನು.

ಕರ್ಣನ ರಥದ ಚಕ್ರವು ಭೂಮಿಯಲ್ಲಿ ಹೂತಿರುವಾಗ ಅರ್ಜುನ ಆತನನ್ನು ವಧಿಸಿದ. ಕರ್ಣ ಆಗ ಅರ್ಜುನನಿಗೆ ಸ್ವಲ್ಪ ತಾಳಲು ಬಿನ್ನವಿಸುತ್ತಿದ್ದ. ಧರ್ಮ ತತ್ವಗಳನ್ನು ಹೇಳುತ್ತಿದ್ದ. ಆದರೆ ಕೃಷ್ಣ ಆತನಿಗೆ ಅವಕಾಶ ಕೊಡಗೊಡಲಿಲ್ಲ. ಹಿಂದಿನ ನ್ಯೂನತೆಗಳ ಸ್ಮೃತಿಗಳನ್ನು ಹೊರಗೆಡವಿ "ಆಗ ನಿನ್ನ ಧರ್ಮವು ಎಲ್ಲಿ ಅಡಗಿತ್ತು?" [**ಕರ್ಣ ಕ್ವ ಧರ್ಮಸ್ಥದಾ ಗತಃ**] ಎಂದು ಹಲವು ಬಾರಿ ಉಚ್ಚರಿಸಿ ಕೃಷ್ಣನು ಅರ್ಜುನನಿಗಾದ ಅಪಮಾನದ ನೆನಪನ್ನು ಜಾಗೃತಗೊಳಿಸಿದನು. ಆಗ ಕರ್ಣ ಅರ್ಜುನನಿಂದ ಕೊಲ್ಲಲ್ಪಟ್ಟ.

ಯುದ್ಧವು ಕೊನೆಗೊಂಡಿತ್ತು. ಆದರೆ ಕೃಷ್ಣನ ಕಾರ್ಯಗಳು ಕೊನೆಗೊಂಡಿರಲಿಲ್ಲ. ಕೇವಲ ಅರ್ಜುನನನ್ನು ಅಲ್ಲದೇ ಇತರರನ್ನು ಸಹ ಕೃಷ್ಣ ಮತ್ತೊಮ್ಮೆ ರಕ್ಷಿಸಿದನು. ಗಾಂಧಾರಿಯ ಕ್ರೋಧವನ್ನು, ಅವಳು ಕೊಟ್ಟ ಶಾಪವನ್ನು ಸ್ವತಃ ವಹಿಸಿಕೊಂಡನು. ಕೃಷ್ಣ, ಪಾಂಡವರ ಹಿಂಗಾವಲಿಗೆ ಇರದಿದ್ದರೆ ಕೌರವರನ್ನು ನಿರ್ಮೂಲಗೊಳಿಸುವುದು ಆಗುತ್ತಿರಲಿಲ್ಲವೆಂದು ಗಾಂಧಾರಿಗೆ ಮನವರಿಕೆ ಇತ್ತು. "ನನ್ನ ಒಬ್ಬ ಪುತ್ರನನ್ನು ಸಹ ನೀನು ಸಜೀವವಾಗಿ ಬಿಟ್ಟಿಲ್ಲ" ಎಂದು ಕೃಷ್ಣನನ್ನು ಗಾಂಧಾರಿಯು ದೂಷಿಸಿದಳು. ಯಾವ ಭೀಮನು ಅವಳ ಮಕ್ಕಳನ್ನು ಕೊಂದನೋ ಆತನನ್ನು ಅವಳು ದೂಷಿಸಲಿಲ್ಲ "ಯಾವ ರೀತಿಯಲ್ಲಿ ನಮ್ಮ ಕುಲ ನಾಶಗೊಂಡಿತೋ, ಅದೇ ಸ್ಥಿತಿ ನಿನ್ನ ಕುಲದ್ದೂ ಆಗುವುದು. ನಾವು ಹೇಗೆ ನಮ್ಮ ನಮ್ಮಲ್ಲಿ ಕಾದು ಮಡಿದೆವೋ ಅದೇ ಗೋಳು ನಿಮ್ಮದಾಗಲಿ !" ಎಂದು ಕೃಷ್ಣನನ್ನು ಶಪಿಸಿದಳು. ಕೃಷ್ಣನು ನಗುನಗುತ್ತಾ ಈ ಶಾಪವನ್ನು ಸಹಿಸಿದನು. "ಅಮ್ಮ ಗಾಂಧಾರಿ ! ತಪ್ಪು ನಿನ್ನದೇ ! ಸಕಾಲದಲ್ಲಿ ಮಗನಿಗೆ ಬುದ್ಧಿ ಹೇಳಲಿಲ್ಲ. ಈಗೇಕೆ ವೃಥಾ ಚಡಪಡಿಸುವೆ?" ಎಂದು ಗಾಂಧಾರಿಗೆ ಕಟುವಾಗಿ ಹೇಳಿದನು. "ಯಾದವರಾದ ನಾವು ಸಾಕಷ್ಟು ಬಲಾಢ್ಯರಿದ್ದೇವೆ. ನಮ್ಮನ್ನು ನಾಶಗೊಳಿಸುವ ಯಾವ ಶತ್ರುವೂ ಇಲ್ಲ. ನಮ್ಮ ಅಳಿಗಾಲವು ಆಗುವುದಾದರೆ ನಮ್ಮ ಮೂಢತನದಿಂದಲೇ ಆಗಬಹುದು."

ಯಾದವರ ವಿನಾಶವನ್ನು ಒಂದು ಸಂಪೂರ್ಣವಾದ ಪರ್ವದಲ್ಲಿ ಬಣ್ಣಿಸಲಾಗಿದೆ. ಆದರೆ ಅದು ಚಿಕ್ಕದಿರುವುದಲ್ಲದೇ ಹದಿನೈದು–ಇಪ್ಪತ್ತು ಶ್ಲೋಕಗಳಲ್ಲಿ ಹೇಳಿದ ಸಂಗತಿಗಳಲ್ಲಿ ಪರಸ್ಪರ ಸಂಬಂಧವಿಲ್ಲ. ಒಂದು ಅಧ್ಯಾಯದಲ್ಲಿ ಸಾಂಬನೆಂಬುವನಿಗೆ ಋಷಿಗಳ ಶಾಪದಿಂದ

ವನಿಕೆಯು ಹುಟ್ಟಿತ್ತು. ಅದನ್ನು ಪುಡಿಪುಡಿಯಾಗಿ ಮಾಡಿ ಸಮುದ್ರದಲ್ಲಿ ಎಸೆದರು. ಯಾರು ಮದ್ಯವನ್ನು ಪ್ರಾಶಿಸುವರೊ ಅವರು ರಾಜನ ಶಿಕ್ಷೆಗೆ ಒಳಗಾಗುವರು ಎಂದು ರಾಜ್ಯದಲ್ಲೆಲ್ಲಾ ಡಂಗುರವನ್ನು ಸಾರಿದರು, ಎಂದಿದೆ. ಅದರ ನಂತರದ ಅಧ್ಯಾಯದಲ್ಲಿಯೇ ಈ ರೀತಿ ಇದೆ. ಯಾದವರೆಲ್ಲರೂ ಸಮುದ್ರ ತೀರದಲ್ಲಿ ಜಾತ್ರೆಗಾಗಿ ನೆರೆದರು. ಬಲರಾಮ, ಕೃಷ್ಣ ಮೊದಲಾದವರೆಲ್ಲರೂ ಸಾಕಷ್ಟು ಮದ್ಯವನ್ನು ಕುಡಿದರು. ಆ ಅಮಲಿನಲ್ಲಿ ಒಬ್ಬರನ್ನೊಬ್ಬರು ತೆಗಳಹತ್ತಿದರು. 'ಸಮುದ್ರ ತೀರದಲ್ಲಿ' ಎಂದರೇ ನಿಜವಾಗಿ ಎಲ್ಲಿ? ದ್ವಾರಕೆಯು ಸಮುದ್ರ ತೀರದಲ್ಲಿಯೇ ಇರಲಿಲ್ಲವೇ ? ದ್ವಾರಕೆಯ ಸುತ್ತಲೂ ಭದ್ರವಾದ ಕೋಟೆ ಇತ್ತು. ಆದ್ದರಿಂದ ಸಮುದ್ರ ತೀರವನ್ನು ತಲುಪಬೇಕಾದರೆ ಕೋಟೆಯನ್ನು ದಾಟಬೇಕಾಯಿತು. ಮದ್ಯವನ್ನು ಸೇವಿಸಬಾರದೆಂದು ರಾಜಾಜ್ಞೆ ಇದ್ದರೂ, ಮದ್ಯವನ್ನು ಏಕೆ ಸೇವಿಸಿದರು? ಅಥವಾ ಮದ್ಯಪಾನ ನಿಷೇಧ ಪ್ರಕರಣವು ಜೈನ ಕಥೆಗಳಿಂದ ಮಹಾಭಾರತದಲ್ಲಿ ಪ್ರಕ್ಷಿಪ್ತವಾಯಿತೋ ? ಶೈನೇಯ ಸಾತ್ಯಕಿಯು ಹಾರ್ದಿಕ್ಯ ಕೃತವರ್ಮನನ್ನು ಛೇಡಿಸಲು ಮೊದಲು ಮಾಡಿದನು. "ದುರ್ದೈವಿಯಾದ ದ್ರೌಪದಿಯ, ನಿದ್ರಿಸುತ್ತಿದ್ದ ಮಕ್ಕಳನ್ನು ನೀನು ಕೊಂದು ಹಾಕಿದ್ದು ಮಹಾ ದೋಷಾಸ್ಪದವು" ಎಂದ. ಅದಕ್ಕೆ ಕೃತವರ್ಮ "ಹೀಗೆಯೋ! ಹಾಗಿದ್ದರೆ ಭೂರಿಶ್ರವನ ಕೈಗಳು ತುಂಡರಿಸಲ್ಪಟ್ಟಾಗ ನೀನು ಆತನ ಶಿರವನ್ನು ಏಕೆ ಕತ್ತರಿಸಿದೆ?" ಎಂದು ಕೇಳಿದನು. ಆಗ ಸಾತ್ಯಕಿಯು ಸ್ಯಮಂತಕ ಮಣಿಯ ಅಪಹರಣದ ಹಳೆಯ ರಗಳೆಯನ್ನು ಕೆದಕಿದ್ದರಿಂದ ಸತ್ಯಭಾಮೆಯು ಅಳತೊಡಗಿದಳು. ಸಾತ್ಯಕೀ ಮತ್ತು ಕೃತವರ್ಮ ಇವರಲ್ಲಿ ಯುದ್ಧಕ್ಕೆ ಪ್ರಾರಂಭವಾಯಿತು. ಅದರಲ್ಲಿ ಕೃತವರ್ಮ ಹತನಾದ. ಸಾತ್ಯಕಿ ಇತರರನ್ನು ಸಾಯಿಸಹತ್ತಿದ. ಆಗ ಭೋಜ ಮತ್ತು ಅಂಧಕನು ಒಗ್ಗಟ್ಟಾಗಿ ಸಾತ್ಯಕಿಯ ಮೇಲೆ ಏರಿ ಹೋದರು ; ಮತ್ತು ಎಂಜಲು ಪಾತ್ರೆಗಳನ್ನು ಆತನ ಮೇಲೆ ಎಸೆಯ ಹತ್ತಿದರು. ಇದನ್ನು ಕಂಡು ಪ್ರದ್ಯುಮ್ನ, ಸಾತ್ಯಕಿಯ ಸಹಾಯಕ್ಕೆ ಧಾವಿಸಿದನು. ಆಗ ಅವರಿಬ್ಬರೂ ಹತರಾದರು. ಒಂದು ಬದಿಗೆ ವೃಷ್ಣಿ ಶೈನೇಯರು, ಇನ್ನೊಂದು ಬದಿಗೆ ಅಂಧಕ ಭೋಜರು. ಈ ರೀತಿ ಯುದ್ಧಕ್ಕೆ ಮೊದಲಾಯಿತು. ನೋಡ ನೋಡುವಷ್ಟರಲ್ಲಿ ಸಾಂಬ, ಪ್ರದ್ಯುಮ್ನ, ಚಾರುದೇಷ್ಣ, ಅನಿರುದ್ಧ ಇವರು ಕೊಲ್ಲಲ್ಪಟ್ಟರು. ಈ ಸಂಹಾರವನ್ನು ಕಂಡು ಕ್ರೋಧಗೊಂಡ ಕೃಷ್ಣ, ಒಂದು ಹಿಡಿ ಹುಲ್ಲನ್ನು ಎತ್ತಿ ಅದರಿಂದ ಜಗಳ ಆಡುವವರನ್ನು ಹೊಡೆದನು. ಅಷ್ಟರಲ್ಲಿ ಆ ಕಡ್ಡಿಗಳು ಕಬ್ಬಿಣವಾಗಿ ಮಾರ್ಪಟ್ಟವು. ಅದರಿಂದ ಯಾರನ್ನು ಹೊಡೆಯಲಾಯಿತೋ ಅವರು ಮೃತರಾದರು. ಇದನ್ನು ಕಂಡು ಪ್ರತಿಯೊಬ್ಬರು ಆ ಹುಲ್ಲು ಕಡ್ಡಿಗಳನ್ನು ಕಿತ್ತು ಒಬ್ಬರನ್ನೊಬ್ಬರು ಹೊಡೆಯಲಾರಂಭಿಸಿದರು. ಅತಿ ಭಯಂಕರವಾದ ಸಂಹಾರ ನಡೆಯಿತು. ಇದನ್ನು ಕಂಡು ಬಲರಾಮ ಮತ್ತು ಕೃಷ್ಣರು ಈ ಹೊಡೆದಾಟದಿಂದ ಹೊರಬಿದ್ದರು. ಕೃಷ್ಣನು ಬಭ್ರುವಿನಿಗೆ, "ನಾನು ಇಲ್ಲಿಯೇ ಉಳಿಯುವೆನು. ನೀನು ಹೆಂಗಸರನ್ನು ಮತ್ತು ಹುಡುಗರನ್ನು ಜೋಪಾನವಾಗಿ ದ್ವಾರಕೆಗೆ ಕರೆದುಕೊಂಡು ಹೋಗು !" ಎಂದು ಹೇಳಿದನು. ಬಭ್ರು, ಆ ಕಾರ್ಯದಲ್ಲಿ ತೊಡಗಿದಾಗ ಹತನಾದ. ಆಗ ಕೃಷ್ಣ ಬಲರಾಮನಿಗೆ ಅಲ್ಲಿ ಇರಲು ಹೇಳಿ

ಎಲ್ಲರನ್ನು ಕರೆದುಕೊಂಡು ದ್ವಾರಕೆಗೆ ಹೋಗಿ ವಸುದೇವನನ್ನು ಕುರಿತು ಈ ರೀತಿ ಹೇಳಿದನು: "ನೀವು ಎಲ್ಲರನ್ನೂ ನೋಡಿಕೊಳ್ಳಿರಿ. ಅರ್ಜುನನು ಇಲ್ಲಿ ಬಂದು ಮುಂದಿನ ಏರ್ಪಾಟನ್ನು ಮಾಡುವನು. ಬಲರಾಮನು ನನಗಾಗಿ ಕಾದಿದ್ದಾನೆ. ನಾನು ಅಲ್ಲಿಗೆ ಹೋಗುವೆನು" ಎಂದು ನುಡಿದ ಕೃಷ್ಣ ಸರಸರನೇ ಅಲ್ಲಿಂದ ಹೊರಬಿದ್ದನು. ದಾರುಕನನ್ನು ಅರ್ಜುನನತ್ತ ಕಳುಹಿಸಿದನು. ಕೃಷ್ಣ ಬಲರಾಮನ ಹತ್ತಿರ ತಲುಪಿದಾಗ ಆತನ ಪ್ರಾಣೋತ್ಕ್ರಮಣ ನಡೆದಿತ್ತು. ಇದನ್ನು ನೋಡಿ ಕೃಷ್ಣನು ಮರದ ಕೆಳಗೆ ಯೋಗಸ್ಥನಾಗಿ ಕುಳಿತನು. ಅಷ್ಟರಲ್ಲಿ ಒಬ್ಬ ವ್ಯಾಧನ ಶರದಿಂದ ಗಾಯಗೊಂಡು ಮೃತನಾದನು.

ಮದ್ಯದ ಅಮಲೇರಿ ಒಬ್ಬರನ್ನೊಬ್ಬರು ಹೊಡೆದು ಸಮಗ್ರ ಕುಲವೇ ನಾಶ ಹೊಂದುವುದು ಅಸಾದ್ಯ ಎಂದು ಅನ್ನಿಸುತ್ತದೆ. ಬಭ್ರು, ಬಲರಾಮ ಮತ್ತು ಕೃಷ್ಣ ಈ ಮೂವರಂತು ಸ್ವಕೀಯರಿಂದ ಹತರಾಗಲಿಲ್ಲ. ಇದನ್ನು ಗಮನಿಸಿದಲ್ಲಿ ಯಾದವರ ಅಂತಃಕಲಹದ ಮತ್ತು ಅಮಲಿನಲ್ಲಿದ್ದ ಸಂಧಿಲಾಭವನ್ನು ಪಡೆಯುವ ಶತ್ರುಗಳಿದ್ದರೆಂದು ವಿದಿತವಾಗುತ್ತದೆ. ಈ ರೀತಿ ದ್ವಾರಕೆಯ ಸುತ್ತಲಿನ ಪ್ರದೇಶವು ನಿಷ್ಕಂಟಕವಿರಲಿಲ್ಲ. ಆ ಹೊಸ ಶತ್ರುವು ಮೊದಲಿನಿಂದಿದ್ದ ಕ್ಷತ್ರಿಯ ಕುಲದವರಾಗಿರದೇ ಭಾರತದಲ್ಲಿ ಹೊಸತಾಗಿ ಆಗಮಿಸಿದ "ಆಭೀರ" ತಂಡದವರು. ಮುಂದೆ ಅವರೇ ಅರ್ಜುನನಿಗೆ ಸಹ ಉಪದ್ರವ ಮಾಡಿದರು.*

ಕೃಷ್ಣ ಸ್ವರ್ಗಸ್ಥನಾದನೆಂದು ಕೇಳಿ ಮುಪ್ಪಾದ ವಸುದೇವ, ಶೋಕವಿಹ್ವಲನಾಗಿ ಹಾಸಿಗೆ ಹಿಡಿದನು. ಅರ್ಜುನ ಆಗಮಿಸಿದ ನಂತರ ಮರಣೋನ್ಮುಖನಾದ ವಸುದೇವ ಆತನಿಗೆ "ಅಯ್ಯಾ! ಯಾವ ಪ್ರದ್ಯುಮ್ನ ಸಾತ್ಯಕೀಯರನ್ನು ನೀನು ಕೊಂಡಾಡುತ್ತಿದ್ದೆಯೋ ಅದೇ ಆ ನಿನ್ನ ಶಿಷ್ಯರೂ, ಭಕ್ತರು, ಈ ಅನಾಹುತಕ್ಕೆ ಕಾರಣರು" ಎಂದು ತಿಳಿಸಿದ. ಅನಂತರ ವಸುದೇವನಿಗೆ, ರಾಜನಿಗೆ ತಕ್ಕ ಅಂತ್ಯ ಸಂಸ್ಕಾರಗಳು ನಡೆದವು. ಆ ಬಳಿಕ ಬಲರಾಮ–ಕೃಷ್ಣ ಮೊದಲಾದ ಮೃತರಾದವರಿಗೆ ಅಗ್ನಿ ಸಂಸ್ಕಾರ ಮಾಡಲಾಯಿತು. ವಸುದೇವ ಎಲ್ಲರಲ್ಲಿ ಹಿರಿಯ. ಆದ್ದರಿಂದ ಆತನೇ ಈವರೆಗೂ ರಾಜನಿದ್ದನೋ? ಅಥವಾ ಬಲರಾಮನೇ ರಾಜನಿದ್ದು ವಸುದೇವನಿಗೆ ರಾಜಮರ್ಯಾದೆಗಳನ್ನು ಕೊಟ್ಟಿರಬಹುದೋ?

---

* [ಇದೇ ಆಭೀರ ತಂಡದವರು ಐತಿಹಾಸಿಕ ಕಾಲದಲ್ಲಿ ಕಾಠೆವಾಡ, ಗುಜರಾಥ ಮತ್ತು ಉತ್ತರ ಮಹಾರಾಷ್ಟ್ರದಲ್ಲಿ ತಮ್ಮ ಆಡಳಿತವನ್ನು ನಡೆಯಿಸಿದರೆಂಬ ದಾಖಲೆಗಳು ಇವೆ. ಈ ಜನರಿಗೆ ಅಹೀರರೆಂದು ಅನ್ನುತ್ತಾರೆ. ಖಾನದೇಶದಲ್ಲಿ ಬಳಕೆಯಲ್ಲಿದ್ದ 'ಆಹಿರಾಣಿ' ಎಂಬ ಭಾಷೆಯು ಈ ಆಭೀರ ವಂಶಜರದೇ ಇರಬೇಕು. ಇದೇ ಆಭೀರ ತಂಡದವರು ಮುಂದೆ ಯಾದವರ ಜೊತೆಗೆ ಸಂಬಂಧವನ್ನು ಬೆಳಸಿರಬೇಕು. ಬಹುಶಃ ತಾವು "ಕ್ಷತ್ರಿಯರು" ಎಂದೆಣಿಸಿಕೊಳ್ಳುವದಕ್ಕೆ ಈ ರೀತಿ ಹೇಳುತ್ತಿರಬೇಕು. ಯಾದವರ ಜೊತೆಗೆ ಕೃಷ್ಣನಿಗೂ ಅವರು ತಮ್ಮ ದೇವರಲ್ಲಿಯ ಒಬ್ಬನು ಎಂದು ಮನ್ನಿಸಿರಬೇಕು. ಆದ್ದರಿಂದಲೇ ಮಹಾಭಾರತದಲ್ಲಿ ರಾಜಕಾರಣ ನಿಪುಣ ಯೋಧನಾಗಿ ಕಾಣಿಸುವ ಕೃಷ್ಣನು ಗೋಪಾಲಕೃಷ್ಣನೆಂದೆಣಿಸಿಕೊಂಡಿರಬಹುದು.

ಗೋಪಾಲಕೃಷ್ಣ–ನಿದ್ದವನು "ಗೋಪೀಕೃಷ್ಣ" ನೆಂದು ಮಾರ್ಪಟ್ಟದ್ದು ಯಾರಿಂದ ? ಮತ್ತು ಯಾವಾಗ ? ಎಂಬುದು ಮಾತ್ರ ಮಹಾಭಾರತ ಕಥೆಯ ಮೂಲಕ ತಿಳಿಯುವಂತಿಲ್ಲ.]

ದುರ್ಯೋಧನ ರಾಜನಿದ್ದಾಗ ಧೃತರಾಷ್ಟ್ರನಿಗೆ 'ಮಹಾರಾಜ'ನೆಂದು ಕರೆಯಲಾಗುತ್ತಿತ್ತು. ಅದೇ ರೀತಿ ಇಲ್ಲಿಯೂ ಇರಬಹುದು.

ಬಲರಾಮಕೃಷ್ಣರು ವೃದ್ಧರಾಗಿ ಮಡಿದರು. ಕುಂತಿಯ ಸಹೋದರನಾದ, ಕೃಷ್ಣ ಬಲರಾಮನ ಪಿತನಾದ ವಸುದೇವನಂತೂ ತೀರಾ ವೃದ್ಧನಾಗಿದ್ದ. ಕೃಷ್ಣ ಪುತ್ರರು ಅಭಿಮನ್ಯುವಿನಗಿಂತ ಹಿರಿಯರು, ಸುಮಾರು ಐವತ್ತು ವರ್ಷ ಪ್ರಾಯದವರು. ಈ ಸಂಹಾರದಲ್ಲಿ ಮೂರನೆಯ ತಲೆಮಾರಿನ ವಂಶಜರು ಬದುಕಿ ಉಳಿದರು. ಅವರು ಪರೀಕ್ಷಿತರಾಜನ ಪ್ರಾಯದವರು. ಬಹುಶಃ ಮೂವತ್ತು ಮೂವತ್ತೈದು ವಯಸ್ಸಿನವರು. ಅವರು ಹೇಗೆ ಬದುಕಿದರು? ಬಹುಶಃ ಅತಿ ವೃದ್ಧನಾದ ವಸುದೇವನನ್ನು ಮತ್ತು ಈ ಮೊಮ್ಮಕ್ಕಳನ್ನು ದ್ವಾರಕೆಯಲ್ಲಿಯೇ ಬಿಟ್ಟು ಇತರರು ಜಾತ್ರೆಗೆಂದು ಸಮುದ್ರ ತೀರಕ್ಕೆ ಹೋಗಿರಬಹುದೊ? ಈ ರೀತಿ ಅರವತ್ತರಿಂದ ಎಪ್ಪತ್ತೈದರ ಪ್ರಾಯದ ಯಾದವರು ಮತ್ತು ಅವರ ಮಕ್ಕಳು ಸುರಾಪಾನಮಾಡಿ, ಅಮಲೇರಿ, ಬಡಿದಾಡಿ, ಸತ್ತಿರಬಹುದೋ ? ಮಹಾಭಾರತದಲ್ಲಿ ಹಾಗೆಯೇ ಬೇರೆ ಪುರಾಣಗಳಲ್ಲಿ ಇದೇ ರೀತಿ ಹೇಳಲಾಗಿದೆ. ಕೆಲವು ದಿನಗಳಲ್ಲಿ ದ್ವಾರಕಾ ನಗರವು ನೀರಲ್ಲಿ ಮುಳುಗಿತು. ಭೂಕಂಪವಾಗಿರಬಹುದೊ ? ಈ ತೀರ ಪ್ರದೇಶದಲ್ಲಿ ಆಗಾಗ್ಗೆ ಭೂಕಂಪಗಳು ಆಗುತ್ತಿದ್ದವು. ಈಗಲೂ ಆಗುತ್ತಿರುತ್ತವೆ. ಅದೇ ರೀತಿಯಾಗಿರಬಹುದೇ ? 'ಏರಕಾ' ಎಂಬ ಜಾತಿಯ ಹುಲ್ಲು–ಕಡ್ಡಿಗಳು ಲೋಹವಾಗಿ ಪರಿಣಮಿಸಿದವು. ಇದರ ನಿಜಾರ್ಥವೇನಿರಬಹುದು ? 'ಏರಕಾ' ಹೆಸರಿನ ಉದ್ದವಾದ ಬಿರುಸಾಗಿದ್ದ ಹುಲ್ಲುಕಡ್ಡಿಗಳಿಗೆ ಕಬ್ಬಿಣದ ಅಲಗುಗಳನ್ನು ಜೋಡಿಸುವವರು, ಹಲವರಿದ್ದರು. ಆ ಜನರು ಯಾದವರು ಅಮಲಿನಲ್ಲಿ ಇದ್ದದ್ದನ್ನು ಕಂಡು ಯಾದವರ ನಾಶ ಮಾಡಿರಬಹುದೇ? ಈ ರೀತಿ ಅನೇಕ ಪ್ರಶ್ನೆಗಳು ಕಣ್ಣು ಮುಂದೆ ತೂಗುತ್ತವೆ. ದ್ವಾರಕಾನಗರದ, ಉತ್ಖನನದಲ್ಲಿ ದ್ವಾರಕಾಪಟ್ಟಣವು ನೀರಿನಲ್ಲಿ ಮುಳುಗಿತು. ಮತ್ತೆ ನಂತರ ಪುನಃ ನಿರ್ಮಿಸಲಾಯಿತು. ಎಂದು ಕಂಡು ಬರುತ್ತದೆ. ಒಮ್ಮೆ ಮುಳುಗಿರಬಹುದೋ? ಅನೇಕಬಾರಿ ಈ ರೀತಿ ನಡೆದಿರಬಹುದೋ? ಈ ಬಗ್ಗೆ ಸಾಕಷ್ಟು ಆಧಾರಗಳು ದೊರೆಯುತ್ತಿಲ್ಲ.

ಅಂತ್ಯದವರೆಗೂ ಕೃಷ್ಣನು ಶಾಂತಚಿತ್ತದವನಾಗಿದ್ದ. ಈ ಪ್ರಸಂಗದಲ್ಲಿ ಸಾಧ್ಯವಾದಷ್ಟು ಮುಂದಿನ ಏರ್ಪಾಟನ್ನು ಆತ ಮಾಡಲು ಪ್ರಯತ್ನಿಸಿದ. ಆತ ಶೋಕಿಸಲಿಲ್ಲ. ಆತನ ಕಣ್ಣೆದುರಿನಲ್ಲಿಯೇ ಪುತ್ರರೆಲ್ಲರೂ ಮಡಿದಿದ್ದರೂ ಆತರೋದಿಸಲಿಲ್ಲ. ಈ ಪ್ರಸಂಗದಲ್ಲಿ ದ್ವಾರಕೆಗೆ ಆತ ಹೋಗಿದ್ದು ಕೇವಲ ವಸುದೇವನಿಗೆ ತಿಳಿಸಲೋಸುಗ. ಸ್ತ್ರೀಯರೆಲ್ಲರೂ ಬೋರಾಡಿ ಅಳುತ್ತಿದ್ದರು. ಆದರೆ ಈತ ಅಲ್ಲಿ ನಿಲ್ಲಲಿಲ್ಲ. ಬಲರಾಮನಂತೂ ಯಾವುದರಲ್ಲೂ ಭಾಗವಹಿಸಲಿಲ್ಲ. ಆತ ಮುಂಚಿತವಾಗಿಯೇ ಹೊರಟುಹೋಗಿದ್ದ. ಮಿಕ್ಕ ಯಾದವರ ಹೊಣೆಯನ್ನು ಕೃಷ್ಣ ಏಕೆ ವಹಿಸಲಿಲ್ಲ? ವ್ಯಾಧನಿಂದ ಹತನಾಗಿದ್ದರೂ ಆತ ಪ್ರಾಯೋಪವೇಶನದಿಂದ ಸತ್ತುಹೋಗಲು ಸಿದ್ಧನಾಗಿರಬಹುದೇ ? ಅತಿವೃದ್ಧನಾದ ವಸುದೇವನಿಗೆ ಎಲ್ಲವನ್ನು ನೋಡಿಕೊಳ್ಳಲು ಏಕೆ ಹೇಳಿರಬಹುದು? ಇಂತಹ ದುರ್ಧರ

ಪ್ರಸಂಗದಲ್ಲಿಯೂ ಕೃಷ್ಣ ಯೋಚಿಸಿರಬಹುದೆ ? ತರುಣರಾದವರು ಅನ್ಯರ ಆಶ್ರಯ ಪಡೆದರೂ ನಡೆಯಬಹುದಿತ್ತು. ಯಾವ ಯದುವಂಶಜರು ಬದುಕಿ ಉಳಿದಿದ್ದರೋ ಅವರನ್ನು ರಕ್ಷಿಸುವುದು, ಸಂವರ್ಧಿಸುವುದು ಪಾಂಡವರಿಗೆ ಸಾಧ್ಯವಿತ್ತು. ಅಗತ್ಯವೂ ಇತ್ತು. ಆದರೆ ತನ್ನ ಪ್ರಾಯದ ಯಾದವರು ಪರಾಶ್ರಯದಲ್ಲಿ ಹೇಗೆ ತಾನೇ ಇರಬಹುದು? ಯಾರನ್ನು ಬಲುಸಾಹಸ ಶೌರ್ಯಗಳಿಂದ ಮತ್ತು ಪ್ರತಿಷ್ಠೆಯಿಂದ ರಕ್ಷಿಸಿದ್ದನೋ ಅವರ ಆಶ್ರಯದಲ್ಲಿಯಂತೂ ಇರುವುದು ಅಸಾಧ್ಯವೇ ಆಗಿತ್ತು. ವೈಭವಸಂಪನ್ನನಾದ ಕೃಷ್ಣನಿಗಂತೂ ಅದು ಅಶಕ್ಯವೇ ಇತ್ತು. ಮೃತ್ಯುವನ್ನುಳಿದು ಅನ್ಯಮಾರ್ಗವೇ ಇರಲಿಲ್ಲ. ಬಂದ ಪ್ರಸಂಗಗಳನ್ನು ಯಾವ ರೀತಿಯಲ್ಲಿ ಎದುರಿಸಿದನೋ ಅದೇ ಕರ್ತವ್ಯ ನಿಷ್ಠುರತೆಯಿಂದ ಹೆಂಡಂದಿರಲ್ಲಿ ಮತ್ತು ಮೊಮ್ಮಕ್ಕಳಲ್ಲಿ ಮೋಹವಿಡದೇ ಈ ಪ್ರಸಂಗವನ್ನು ಸಹ ಎದುರಿಸಿದನು. ಅರ್ಜುನನ ಮೇಲೆ ಹೊಣೆಯನ್ನಿಟ್ಟು ತಾನು ತೊಲಗಿದನು.

ಜೀವಿಸಿರುವಾಗ ವ್ಯಾವಹಾರಿಕ ದೃಷ್ಟಿಯಲ್ಲಿ ಕೃಷ್ಣ ಮಾಡಿದ ಉಪಕಾರಗಳನ್ನು ತೀರಿಸಲು ಪಾಂಡವರಿಗೆ ಸಾಧ್ಯವಾಗಿರಲಿಲ್ಲ. ಕೃಷ್ಣನ ಮರಣದ ನಂತರ ಈ ರೀತಿ ಪ್ರತ್ಯುಪಕಾರವು ನಡೆಯಲಿತ್ತು. ಕೃಷ್ಣ, ಅರ್ಜುನನಿಲ್ಲದೇ ಕ್ಷಣಕಾಲವೂ ಇರುವಂತಿರಲಿಲ್ಲ. ಅದೇ ಸ್ಥಿತಿಯು ಅರ್ಜುನನದಾಯಿತು ಎಂದು ಎನ್ನಬಹುದು. ಕೃಷ್ಣ ಹೇಳಿ ಕಳುಹಿಸಿದ್ದ. ಅದನ್ನು ಕೇಳಿ ಅರ್ಜುನ ದ್ವಾರಕೆಯನ್ನು ತಲುಪಿದಾಗ ಕೃಷ್ಣ ಜೀವಿತನಿರಲಿಲ್ಲ. ಇತರ ಪ್ರಸಂಗಗಳಲ್ಲಿ ಚಿಕ್ಕಪುಟ್ಟ ಕಾರಣಗಳಿಗಾಗಿ ಘೋರ ಪ್ರತಿಜ್ಞೆಯನ್ನು ಮಾಡುವ, ಅಗ್ನಿಕುಂಡದಲ್ಲಿ ಆತ್ಮಾರ್ಪಣೆಯನ್ನು ಮಾಡಲೂ ಸಿದ್ಧನಿರುತ್ತಿದ್ದ ಅರ್ಜುನ, ಈ ಪ್ರಸಂಗದಲ್ಲಿ ಹೀಗೆ ಮಾಡುವಂತಿರಲಿಲ್ಲ. ವಸುದೇವನ ಶೋಕವನ್ನು ಕೇಳಿಕೊಂಡು ಆತನ ಮರಣೋತ್ತರ, ಮಾನ ಮರ್ಯಾದೆಗಳಿಂದ ಅಂತ್ಯ ಸಂಸ್ಕಾರಗಳನ್ನು ನಡೆಯಿಸುವುದಿತ್ತು. ಕೃಷ್ಣನ ದೇಹವನ್ನು ಕಂಡುಹಿಡಿದು ಅದಕ್ಕೆ ಅಂತ್ಯ ಸಂಸ್ಕಾರವನ್ನು ಮಾಡುವುದಿತ್ತು. ಉಳಿದ ಪರಿವಾರ ಸಮೇತನಾಗಿ ಹಸ್ತಿನಾಪುರಕ್ಕೆ ಹೋಗುವುದಿತ್ತು. ತಾನು ಸ್ವತಃ ಮತ್ತು ಯಾದವ ಸ್ತ್ರೀಯರು ಅವಮಾನಗೊಳ್ಳುವ ಪ್ರಸಂಗವು ಮುಂದೆ ನಡೆಯಲಿತ್ತು. ರಾಜ್ಯವನ್ನು ಕಳೆದುಕೊಂಡು ಯಾದವ ವಂಶಜರಲ್ಲಿಯ ಒಬ್ಬನಾದ ಕೃಷ್ಣನ ಮೊಮ್ಮಗನಿಗೆ, ಪಾಂಡವರು ಒಂದು ರಾಜ್ಯವನ್ನು ಕೊಟ್ಟರು. ಸಾತ್ಯಕಿಯ ಮಗನಿಗೆ ಒಂದು ರಾಜ್ಯವನ್ನು ಕೊಟ್ಟರು. ಇದಲ್ಲದೇ ಮಾರ್ತಿಕಾವತದ ರಾಜ್ಯವನ್ನು ಅಶ್ವತ್ಥಾಮನಿಗೆ ಸಹಾಯಕನಾದ ಕೃತವರ್ಮನ ವಂಶಜರಾದ ಹಾರ್ದಿಕರಿಗೆ ಕೊಟ್ಟರು. ಎಲ್ಲಾ ಯಾದವರು ಜೀವಿಸಿದ್ದರೆ ಯಾವ ರಾಜ್ಯವೂ ಯಾರಿಗೂ ದೊರಕುತ್ತಿರಲಿಲ್ಲ. ಹೊಸ ರಾಜ್ಯಗಳು ದೊರೆತಿದ್ದು ಪಾಂಡವರಿಂದ ಯಾದವರಿಗೆ! ಈ ರೀತಿ ಏರ್ಪಾಟನ್ನು ಮಾಡಿಕೊಟ್ಟು, ಕೃಷ್ಣನ ಉಪಕಾರವನ್ನು ಈ ರೀತಿ ಅತುಲವಾಗಿ ನಿರಾನಂದವಾಗಿ ಪೂರೈಸಿದ ನಂತರ ಪಾಂಡವರು ಮರಣಕ್ಕೆ ಸಿದ್ಧರಾದರು.

ಕೃಷ್ಣ, ಅರ್ಜುನನ ಯಾವ ಗುಣಗಳ ಮೂಲಕ ಆತನನ್ನು ಇಷ್ಟೊಂದು ಪ್ರೀತಿಸುತ್ತಿದ್ದನು ? ಅರ್ಜುನನು ಆ ಕಾಲದ ವೀರರಲ್ಲಿ ಅಪ್ರತಿಮ ಯೋಧನೆಂದು

ಖ್ಯಾತಿಗೊಂಡಿದ್ದ. ಯುವಕರೆಲ್ಲರ–ಉತ್ತರ, ಧೃಷ್ಟದ್ಯುಮ್ನ, ಸಾತ್ಯಕಿ, ಪ್ರದ್ಯುಮ್ನ ಮೊದಲಾದವರಿಗೆ ಆದರ್ಶನಾಗಿದ್ದನು. ಹೆಸರಿನಂತೆ 'ಋಜೂ'ವಾಗಿದ್ದನು. ಅರ್ಜುನನ ಬಾಹುಬಲದಿಂದ ಧರ್ಮ ರಾಜನಾದ. ಕೃಷ್ಣ, ಇತರರಿಗೂ ರಾಜ್ಯವನ್ನು ದೊರಕಿಸಿ ಕೊಟ್ಟ. ಕೃಷ್ಣಾರ್ಜುನರಿಬ್ಬರೂ ಶತ್ರುಗಳನ್ನು, ಸ್ತ್ರೀಯರನ್ನು ಜಯಿಸುವವರಾಗಿದ್ದರು. ಕೃಷ್ಣ, ಎಷ್ಟೊಂದು ಉಪಕಾರವನ್ನು ಬಗೆದನೋ. ಅಷ್ಟೊಂದು ಪ್ರತ್ಯುಪಕಾರ ಅರ್ಜುನನಿಗೆ ಸಾಧ್ಯವಿರಲಿಲ್ಲ. ಆದರೆ ಅರ್ಜುನನ ವಿಶ್ವಾಸದಿಂದ ಕೃಷ್ಣನಿಗೆ ಎಲ್ಲವು ದೊರಕಿದಂತಿತ್ತು. ಕೃಷ್ಣ ಜೀವಿಸಿರುವಾಗ ಏನೇ ಮಾಡದೇ ಹೋದರೂ ಆನಂತರ ಅರ್ಜುನ, ಈ ಉಪಕಾರವನ್ನು ತೀರಿಸಿದ.

ಕೃಷ್ಣ ತನ್ನ ಅಸಾಮಾನ್ಯ ಕರ್ತೃತ್ವದಿಂದ ಎಲ್ಲರಿಗೂ ರಾಜ್ಯವನ್ನು ಗಳಿಸಿ ಕೊಟ್ಟ. ಭೀಷ್ಮ ಸಹ ಅದೇ ರೀತಿ ಮಾಡಿದ್ದ. ಭೀಷ್ಮ, ಯಾವದೊಂದರ ಉಪಭೋಗವನ್ನೂ ಪಡೆಯಲಿಲ್ಲ. ಕೃಷ್ಣ, ವೈಭವ ಸಂಪತ್ತುಗಳ ಉಪಭೋಗವನ್ನು ಪಡೆದ. ಭೀಷ್ಮ, ಅಧಿಕಾರವನ್ನು ಹೊಂದಿದ್ದ. ಆದರೆ ಕೃಷ್ಣ ಉಪಭೋಗವನ್ನು ಪಡೆದರೂ ಅಧಿಕಾರಿಯಾಗಿರಲಿಲ್ಲ. ಭೀಷ್ಮ ಲೌಕಿಕ ದೃಷ್ಟಿಯಲ್ಲಿ ಎಲ್ಲವನ್ನು ತ್ಯಜಿಸಿ ಸ್ವಲ್ಪಾದರೂ ಉಪಭೋಗವನ್ನು ಪಡೆದ. ಆದರೆ ಕೃಷ್ಣ ಎಲ್ಲಾ ತರಹದ ಉಪಭೋಗವನ್ನು ಪಡೆದರೂ ನಿಜವಾಗಿ ಮೋಹವಿಡದೇ ಉಳಿದ. ಎಲ್ಲರೂ ಕಾರಣಾಂತರದಿಂದ ಒಮ್ಮೆಲ್ಲೊಮ್ಮೆ ಶೋಕಿಸಿದರು. ಭೀಷ್ಮ ತನಗಾಗಿ ಎಂದಿಗೂ ಶೋಕಿಸಲಿಲ್ಲ. ಕೃಷ್ಣ ಕೂಡ ಎಂದಿಗೂ ಶೋಕಿಸಲಿಲ್ಲ. ಆತ ನಿಷ್ಕಾಮನಾಗಿಯೇ ಉಳಿದ. ಹಲವು ಸಲವಂತೂ ಆತ ಕಠೋರನಾಗಿಯೇ ಕಂಡುಬರುತ್ತಾನೆ.

ಈ ಕಾರಣದಿಂದಲೇ ಮಹಾಭಾರತದಲ್ಲಿಯ ಕೃಷ್ಣನ ಅಂತರಂಗವು ಯಾರಿಗೂ ತಿಳಿಯದಂತಿದೆ. ಯಾವುದೂ ನಿಜಾರ್ಥವಾಗಿ ಹೊಳೆಯುವುದಿಲ್ಲ. ಆತ ಪ್ರೀತಿಸಿದ. ಸೇಡನ್ನು ತೀರಿಸಿದ. ಆನಂದದಲ್ಲಿ ತೇಲಾಡಿದ. ಪಾಂಡವರು ರಾಜ್ಯವನ್ನು ಕಳೆದುಕೊಂಡಾಗ ದುಃಖದಿಂದ ಚಡಪಡಿಸಿದ. ಇಷ್ಟೆಲ್ಲಾ ಆದರೂ ಆತ ಯಾವುದರಲ್ಲಿಯೂ ಮೋಹವಶನಾಗಿರಲಿಲ್ಲ. ಮಹಾಭಾರತದಲ್ಲಿ ರಾಧೆಯ ಕೃಷ್ಣನ ವರ್ಣನೆ ಇಲ್ಲ. ಕುಂಜವನದಲ್ಲಿ, ಗೋಪಾಲಕರಲ್ಲಿ, ಕೊಳಲನ್ನು ನುಡಿಸುವ ಕೃಷ್ಣನ ಪ್ರಸ್ತಾಪವಿಲ್ಲ. ದ್ರೌಪದಿಯ ಕರೆಗೆ ಧಾವಿಸುವ ಕೃಷ್ಣನಿಲ್ಲ. ರುಕ್ಮಿಣಿ–ವಲ್ಲಭ–ಕೃಷ್ಣನ ಮಾತೇ ಇಲ್ಲ. ಆತನೇ ಸ್ವತಃ ಅರ್ಜುನನನ್ನು ಪ್ರೀತಿಸುತ್ತಿರುವುದಾಗಿ ಹೇಳಿದ್ದಾನೆ. ಕಾಲಕಾಲಕ್ಕೆ ಜರುಗಿದ ಘಟನೆಗಳಿಂದ ಈ ಪ್ರೀತಿ ವಿಶ್ವಾಸಗಳು ಕಂಡುಬಂದರೂ ಹೃದಯದಾಳವನ್ನು ಮಿಡುಕುವ ಸನ್ನಿವೇಶಗಳು ಯಾವುವೂ ಎದ್ದುಕಾಣುವುದಿಲ್ಲ. **'ಸಹ ನೌ ಭುನಕ್ತು, ಸಹ ವೀರ್ಯಂ ಕರವಾವಹೈ'** ಈ ರೀತಿಯ ಆ ಸಂಬಂಧವಾಗಿತ್ತು. ಅದರಲ್ಲಿಯೂ ಆತ ಮೋಹಗೊಂಡಿಲ್ಲ. ಎಲ್ಲವೂ, ಮಾನವೀಕಷ್ಟಗಳು, ಮಾನವೀ ವಿಕಾರಗಳು, ಮಾನವನ ಸುಖಗಳು, ಇವೆಲ್ಲವು ಮಾನವತೆಯ ಮಟ್ಟದ ಮೇಲೆಯೇ ಆತನ ಚರಿತ್ರೆಯಲ್ಲಿ ಇವೆ. ಆದರೂ ಆತನ ಈ ನಿರ್ವಿಕಾರ ವರ್ತನೆಯಿಂದ ಆತನ ನಿಜಸ್ವರೂಪವನ್ನು ಅರಿತುಕೊಳ್ಳುವುದು ಅಸಾಧ್ಯ. ಆತ, ಕೇವಲ ಗೀತೆಯ ಉಪದೇಶವನ್ನು ಮಾಡದೇ ಅದರಂತೆಯೇ ಜೀವಿಸಿದ.

11
ಯುಗಾಂತ

ಒಂದು ನಿರ್ದಿಷ್ಟ ಕಾಲಕ್ಕೆ ಅಥವಾ ಗಳಿಗೆ ಇಲ್ಲವೇ ದಿವಸಕ್ಕೆ ಅಥವಾ ನಿರ್ದಿಷ್ಟ ವರ್ಷಕ್ಕೆ ಒಂದು ಯುಗವು ಮುಗಿದು ಇನ್ನೊಂದು ಯುಗವು ಪ್ರಾರಂಭವಾಯಿತು ಎಂದು ಹೇಳಲು ಬರುವಂತಿಲ್ಲ. ಒಂದು ಯುಗವು ಕೊನೆಗೊಂಡರೆ ಆ ಯುಗದಲ್ಲಿದ್ದ ಎಲ್ಲ ಸಂಗತಿಗಳು ಇಲ್ಲದಂತಾಗಿ ಹೊಸ ಯುಗದೊಡನೆ ನವಮಾನವರು, ನವಸಂಸ್ಕೃತಿಯೂ ಬಂದಿರುತ್ತದೆ ಎಂದು ಹೇಳಲಾಗುವುದಿಲ್ಲ. ಕಾಲಪ್ರವಾಹವು ಅಖಂಡವಾಗಿ ಸಾಗುತ್ತಿದೆ. ತಮ್ಮ ಅನುಕೂಲತೆಗಾಗಿ, ಅಭ್ಯಸಿಸುವ ದೃಷ್ಟಿಕೋನಕ್ಕೆ ಅನುಸರಿಸಿ, ಭಾಗಗಳನ್ನು ಕಲ್ಪಿಸುವುದು ಮತ್ತು ಅವುಗಳಿಗೆ ದಶಕ, ಶತಕ, ಯುಗ ಎಂದು, ಸಂಬೋಧಿಸುವುದು. ಮಹಾಭಾರತವು ಮುಗಿದೊಡನೆ ಒಂದು ಯುಗವು ಪೂರ್ಣವಾಯಿತು ಎಂಬ ವಿಚಾರವು ಬಹಳ ಪುರಾತನ ಕಾಲದಿಂದ ಇದೆ. ಅದನ್ನೇ ನಾನು ಆಯ್ದುಕೊಂಡಿದ್ದೇನೆ. ಈ ನನ್ನ ಕಲ್ಪನೆಯನ್ನು ಯಾರು ಬೇಕಾದರೂ ಒಪ್ಪದೇ ನಿರಾಕರಿಸಿ, ಅವರಿಗೆ ಬೇಕಾದಂತೆ, ಕಾಲದ ವಿಭಾಗಗಳನ್ನು ಅವರು ಕಲ್ಪಿಸಬಹುದು. ಯುಗವೆಂದರೆ ಏನು ? 'ಅದರ ಅಂತವು ಆಯಿತು !' ಎಂದು ನಾವು ಯಾವಾಗ ಹೇಳುತ್ತೇವೆ? ಈ ದೃಷ್ಟಿಕೋನವು ಸ್ಪಷ್ಟವಾದರೆ ಆಯಿತು. ಹಲವು ಸಂಗತಿಗಳು ಮಹಾಭಾರತವು ಮುಗಿದು ಎಷ್ಟೋ ಶತಕಗಳು ಕಳೆದರೂ ಈವರೆಗೂ ಕೂಡ ನಡೆಯುತ್ತಿರುವುದನ್ನು ನಾವು ತೋರಿಸಬಹುದು. ಕೆಲವು ವಿಶಿಷ್ಟ ಸಂಗತಿಗಳು ಒಂದು ವಿಶಿಷ್ಟ ಕಾಲ ವಿಭಾಗದಲ್ಲಿ ತೋರುವುದನ್ನು ಕಂಡು ಅಥವಾ ಆ ಸಂಗತಿಗಳು ಮುಂದಿನ ಕಾಲ ವಿಭಾಗದಲ್ಲಿ ಕಂಡುಬರಲಿಲ್ಲವೆಂದು, ಆ ಕಾಲ ವಿಭಾಗಕ್ಕೆ 'ಯುಗ'ವೆಂದು ಅನ್ನುವಂತಿಲ್ಲ. ಮೊದಲು ಅಸ್ತಿತ್ವದಲ್ಲಿರದ, ಅನಂತರ ವಿಪುಲವಾಗಿ ಕಂಡುಬರುವ ತಿಳುವಳಿಕೆಗಳ, ಆಚಾರಗಳ, ನಿಯಮಗಳ, ಪ್ರಾರಂಭವು ಇಲ್ಲಿ ಕಂಡುಬರುತ್ತದೆ. ಆ ಕಾರಣ ನಾನು ಈ ಕಾಲವಿಭಾಗಕ್ಕೆ 'ಯುಗ'ವೆಂದು ಸಂಬೋಧಿಸುತ್ತೇನೆ. ಒಂದು ಯುಗದ ಕೊನೆಯ ಹಂತವು, ಆ ಯುಗದ ಪ್ರಮುಖ ಭಾಗವಿರದೆ ಆ ಹಂತವು ಸಂಧ್ಯಾ ಕಾಲವಾಗಿರುತ್ತದೆ. ಆ ಹಂತವು ಗತಿಸುವ ಯುಗದ ರಾತ್ರಿಯಂತೆಯೂ ಮುಂಬರುವ ಯುಗದ ಉಷಃಕಾಲದಂತೆಯೂ ಇರುತ್ತದೆ. ಮಹಾಭಾರತವು ಈ ರೀತಿಯದೇ ಇದೆ. ಆದರೆ ಅದರ ಒಂದು ವಿಶೇಷ ಸ್ವರೂಪದಿಂದ ಅದು ಅಸಾಮಾನ್ಯ ವೈಶಿಷ್ಟ್ಯವನ್ನು ಹೊಂದಿದೆ.

ಮಹಾಭಾರತವೆಂದರೆ, ಆ ಕಾಲದ ಒಂದು ವಿಶಿಷ್ಟ ಕೋಮಿನವರು ಯಾವ ರೀತಿಯಲ್ಲಿ ಬಾಳುತ್ತಿದ್ದರು ಎಂಬುದರ ಕ್ರಮಪಟ್ಟಿ ಮಾಹಿತಿಯಾಗಿರದೇ ಒಂದು ನಿರ್ದಿಷ್ಟವಾದ ಮನೆತನವನ್ನು ಅನುಲಕ್ಷಿಸಿ ಹಾಗೆಯೇ ಅದಕ್ಕೆ ಸಂಬಂಧಿತವಾದ ಆ ಕಾಲದ ಜೀವನ, ವಿಚಾರಗಳು, ಇವುಗಳ ಆಳವಾದ, ವ್ಯಾಪಕವಾದ, ಪರಿಶೀಲನೆಯ ಚಿತ್ರಣ ಇರುವ ಒಂದು ಪ್ರದೀರ್ಘವಾದ ಕಥೆಯಾಗಿದೆ. ಈ ಕಥೆಯನ್ನು ಪೂರ್ಣವಾಗಿ. ಛಂದೋರೂಪದಲ್ಲಿ ಬರೆದಿದ್ದಾರೆ. ಅನೇಕ ಕಡೆಗೆ ಈ ಛಂದಸ್ಸಿನ ರೂಪದ ಕಾರಣ ಸಮಗ್ರ ಕಥೆಗೆ ಜೀವಂತ ಕಾವ್ಯದ ಅವಿಸ್ಮರಣೀಯವಾದ ಮನೋಹಾರಿ ಸ್ವರೂಪವು ಬಂದಿದೆ.

ಪಾಂಡವರು ಆಳಿದ ಕೊನೆಯ ವರ್ಷಗಳು ಎಂದರೆ ಕಲಿಯುಗದ ಪ್ರಾರಂಭವೆಂದು, ದ್ವಾಪರಯುಗದ ಅಂತವೆಂದು. ಪುರಾತನ ಕಾಲದ ತಿಳುವಳಿಕೆ ಇದೆ. ಆದರೆ ಭಾರತೀಯ ಯೋಧರು ಹಾಗೆ ಗ್ರಹಿಸಿರಲಿಲ್ಲ ಎಂದು ಕಂಡುಬರುತ್ತದೆ.*

ಯುಗವು ಮುಗಿದುಹೋದ ಅರಿವು, ಅದು ಮುಗಿದುಹೋಗಿ ಸಾಕಷ್ಟು ಕಾಲಾವಧಿ ಆದನಂತರ ಜನ್ಮ ತಾಳಿದವರಿಗೆ ಆಗುತ್ತದೆ. ಅದರಂತೆಯೇ ಆಗಿನ ನಿಜ (?) ಕ್ಷತ್ರಿಯರು ಮಹಾಭಾರತ ಯುದ್ಧದಲ್ಲಿ ನಾಶಹೊಂದಿದರು ಎಂದು ಪುರಾಣಗಳು ಪ್ರತಿಪಾದಿಸುತ್ತವೆ. ಈ ತಿಳುವಳಿಕೆಯು ಹಿಂದಿನಿಂದ ತಲೆದೋರಿದಂತಿದೆ. ಯುದ್ಧವು ಕೊನೆಗೊಂಡ ನಂತರ ಆಗಿನ ಅನೇಕ ರಾಜವಂಶಜರು, ಅವರವರ ಸಿಂಹಾಸನಾರೂಢರಾದರು. ಅದರಲ್ಲಿಯೂ ಪಾಂಡವರ ಮೊಮ್ಮಗನಾದ ಪರೀಕ್ಷಿತ, ಹಸ್ತಿನಾಪುರದ ರಾಜ್ಯವನ್ನು ಪಡೆದ. ಇಂದ್ರಪ್ರಸ್ಥದಲ್ಲಿ ಕೃಷ್ಣನ ಮರಿಮಗನಾದ ವಜ್ರ, ಪಟ್ಟಕ್ಕೆ ಬಂದ. ಉಳಿದ ಪ್ರಮುಖ ಯಾದವ ವಂಶಜರು ಬೇರೆ ಬೇರೆ ರಾಜ್ಯಗಳನ್ನು ಪಡೆದರು. ರುಕ್ಮಿ ವಿದರ್ಭರಾಜನಾಗಿದ್ದ. ಇವೆಲ್ಲವನ್ನು ಗಮನಿಸಿದರೆ ಕ್ಷತ್ರಿಯರೆಲ್ಲರೂ ನಾಶವಾದರೆಂದು ನಂತರದ ಕಾಲದವರ ಪ್ರತಿಪಾದನೆಯು ನಿರರ್ಥಕ ವೆನಿಸುತ್ತದೆ; ಆದರೆ ಮೊದಲಿನ ಕ್ಷತ್ರಿಯ ವರ್ಗದವರ ಮಾದರೀ ಜೀವನ, ಅದರ ಸುಸಂಬದ್ಧತೆ, ಅಳಿದವೆಂಬ ಸಂಗತಿಯು ಐತಿಹಾಸಿಕ ದೃಷ್ಟಿಯಿಂದ ಒಪ್ಪುವಂತೆ ಇದೆ.

ಮಹಾಭಾರತ ಕಾಲದಲ್ಲಿ ಏನಿತ್ತು ? ನಂತರ ಏನಾಯಿತು ? ಮಹಾಭಾರತ ಕಾಲದಲ್ಲಿ ಯಾವ ಸಾಮಾಜಿಕ ಘಟನೆಗಳ ಮೂಲಗಳು ದೃಢವಾದವೋ ಇವೆಲ್ಲವುಗಳ ಊಹಾಪೋಹ ಮಾಡುವ ಮೊದಲು ಮಹಾಭಾರತ ಕಾಲವೆಂದರೇನು ಎಂಬುದನ್ನು ಸ್ಪಷ್ಟವಾಗಿ ವಿವರಿಸಬೇಕಾಗಿದೆ. ಭಾರತೀಯ ಯುದ್ಧದ ಮೊದಲಿನ ಮತ್ತು ನಂತರದ ಹಲವು ಶತಕಗಳನ್ನು ಅಳವಡಿಸಿ ಗತಿಸಿದ ಕಾಲಕ್ಕೆ 'ಮಹಾಭಾರತ ಕಾಲ'ವೆಂದು ಅನ್ನಬಹುದು. ಈ ಸಂದರ್ಭದಲ್ಲಿಯಂತೂ ಈ ರೀತಿ ಗ್ರಹಿಸಲಾಗಿದೆ. ಮಹಾಭಾರತ ಕಾಲಕ್ಕೆ 'ಯುಗಾಂತ'ವೆಂದು ಅನ್ನಲಾಗಿದೆ. ಅಂದರೆ ಭಾರತೀಯ ಯುದ್ಧದ ನಂತರದ ಒಂದೆರಡು ಶತಕಗಳ ಕಾಲವು ಮಾತ್ರ ಎಂದು ಅರ್ಥವಾಗುತ್ತದೆ. ಪಾಂಡವರ ಮರಣದ ಪೂರ್ವದಿಂದಲೇ

ಕಲಿಯುಗಕ್ಕೆ ಪ್ರಾರಂಭವಾಗಿತ್ತೆಂದು ಪುರಾಣಕಾರರ ಮತ ಇದೆ. ವೇದದಲ್ಲಿಯ "ದಾಶರಾಜ್ಞ" ಯುದ್ಧದ ಕೊನೆ. ಅಲ್ಲಿಂದ ಭಾರತೀಯ ಯುದ್ಧದ ಕೊನೆವರೆಗಿನ ಕಾಲವನ್ನು ಕಲ್ಪಿಸಿದರೆ ಈ ಕಾಲದ ಕೊನೆಯೇ 'ಯುಗಾಂತ'ವೆಂದು ಒಪ್ಪಬಹುದು. ವೇದಗಳನ್ನು ಬಿಟ್ಟರೂ ಕೆಲವು ಬ್ರಾಹ್ಮಣ್ಯಗಳು, ಕೆಲವು ಉಪನಿಷತ್ತುಗಳು ಈ ಕಾಲಭಾಗದಲ್ಲಿಯವು ; ಎಂದು ತಿಳಿದುಕೊಳ್ಳಬಹುದು. ಯಾಜ್ಞವಲ್ಕ್ಯ, ತನ್ನ ಗುರುವೂ ಸೋದರ ಮಾವನೂ ಆದ ವೈಶಂಪಾಯನನೊಡನೆ ಜಗಳವಾಡಿದ ಉಲ್ಲೇಖವು ಭಾರತ ಕಥಾಕಾಲದಲ್ಲಿ ಇದೆ. ಆದರೆ ಈ ಭಾಗವು ಮೂಲ ಕಥೆಗೆ ಸಂಬಂಧಿಸಿಲ್ಲ. ಹೀಗಿದ್ದರೂ ಕಾಲದೃಷ್ಟಿಯಿಂದ ಈ ಹೇಳಿಕೆಯನ್ನು ನಿಜವೆಂದು ಗ್ರಹಿಸಿದರೆ ಸಮಗ್ರ, ಶುಕ್ಲ, ಯಜುರ್ವೇದ ಮತ್ತು ಅದರ ಮಹತ್ವದ ಬ್ರಾಹ್ಮಣ್ಯ (ಶತಪಥ) ಮತ್ತು ಈಶಾವ್ಯಾಸಾದಿ ಉಪನಿಷತ್ತುಗಳು ಇವು ಭಾರತೀಯ ಯುದ್ಧದ ನಂತರವು, ಬುದ್ಧ ಕಾಲಕ್ಕೆ ಹತ್ತಿರ ಕಾಲದವು ಎಂದು ತಿಳಿಯಬಹುದು. ಕ್ರಿ.ಶ. ಪೂರ್ವ ೧೦೦೦–೧೨೦೦ರ ವರೆಗಿನ ಈ ಕಾಲವನ್ನು ಭಾರತೀಯ ಯುದ್ಧ ಕಾಲವೆಂದು ನಾನು ಗ್ರಹಿಸುತ್ತೇನೆ.

ಕ್ಷತ್ರಿಯ ಕುಲದ ಸಹೋದರರಿಬ್ಬರ ಮಕ್ಕಳಲ್ಲಿ ನಡೆದ ಕಲಹದ ಕಥೆಯೇ ಭಾರತೀಯ ಯುದ್ಧದ ಕಥೆಯಾಗಿದೆ. ಇದರಲ್ಲಿ ಕ್ಷತ್ರಿಯರ ಹೊರತು ಇತರರ ಕಥೆಗಳು ಅವರ ಉಲ್ಲೇಖಗಳು ಪ್ರಧಾನವಾಗಿಲ್ಲ. ಆದರೆ ಇದ್ದ ಉಲ್ಲೇಖಗಳಿಂದ ಆಗಿನ ಸಮಾಜ ರಚನೆಯ ಅಂಗಗಳು ಸ್ಪಷ್ಟವಾಗಿ ಕಾಣುತ್ತವೆ. ವರ್ಣಗಳು ಇದ್ದವು. ಕ್ಷತ್ರಿಯ ಮತ್ತು ಬ್ರಾಹ್ಮಣ ವರ್ಣಗಳು ಪ್ರಮುಖವಾಗಿದ್ದವು. ಪರಸ್ಪರರು ಪ್ರತಿಸ್ಪರ್ಧಿಗಳಾಗಿದ್ದರೂ ಒಬ್ಬರೊಬ್ಬರಿಗೆ ಪೂರಕರಾಗಿಯೂ, ಆಧಾರಸ್ತಂಭರಾಗಿಯೂ ಇರುತ್ತಿದ್ದರು. ಯಜ್ಞಯಾಗಗಳಲ್ಲಿ ಕ್ಷತ್ರಿಯರು, ಮಂತ್ರವಿದ್ಯೆಯಲ್ಲಿ ಬ್ರಾಹ್ಮಣರು ನಂಬಿಕೆ ಹೊಂದಿದ್ದರು. ಯಜ್ಞಯಾಗದ ಸಂಸ್ಕಾರಗಳು ಬ್ರಾಹ್ಮಣರಿಂದ ನೆರವೇರುತ್ತಿದ್ದವು. ಆದ್ದರಿಂದ ಬ್ರಾಹ್ಮಣರ ಅವಶ್ಯಕತೆ ಇತ್ತು. ಹಾಗೆಯೇ ಬ್ರಾಹ್ಮಣರು ಕ್ಷತ್ರಿಯರಿಂದ ಸಂರಕ್ಷಣದ, ಪುರಸ್ಕಾರದ ಮತ್ತು ಪೋಷಣೆಯ ಅಪೇಕ್ಷೆಯನ್ನು ಹೊಂದಿದ್ದರು. ಈ ಎರಡು ವರ್ಗಗಳು ಒಂದೇ ಸಮಾಜದ ಘಟಕಗಳಾಗಿದ್ದವು. ಈ ಸಮಾಜದ ದೇವರ ಬಗ್ಗೆ ಕಲ್ಪನೆಯು ಒಂದೇ ಇತ್ತು. 'ವಿಶ್' ವರ್ಗದ ಹೆಸರು ಕೆಲವು ಕಡೆ ಬಂದಿದೆ. ಆದರೆ ಈ ವರ್ಗದಲ್ಲಿಯ ವ್ಯಕ್ತಿಯ ಚಿತ್ರಣವಿಲ್ಲ. ಶೂದ್ರವರ್ಗದವರ ಬಗ್ಗೆಯು ಇದೇ ರೀತಿ ಹೇಳಬಹುದು. ಶೂದ್ರರೆಂದರೆ ಯಾರು? ಅರಮನೆಗಳಲ್ಲಿ ದಾಸದಾಸಿಯರು ಇದ್ದೇ ಇರುತ್ತಿದ್ದರು. ಎಲ್ಲಾ ದಾಸದಾಸಿಯರು ಶೂದ್ರರಿದ್ದರೆಂದು ಹೇಳಬಹುದೋ ? ಸುಭದ್ರೆಯು ಗೋಪಾಲಿಕೆಯ ವೇಷವನ್ನು ತೊಟ್ಟು "ನಾನು ನಿಮ್ಮ ದಾಸಿ" ಎಂದು ದ್ರೌಪದಿಯನ್ನು ಭೇಟಿಯಾದಳು ಅಂದ ಬಳಿಕ ಅವಳು ವಿನಯದಿಂದ ಶೂದ್ರತ್ವವನ್ನು ಸ್ವೀಕರಿಸಿದಳು ಎಂಬ ಭಾವವಿರಬಹುದೋ?

ಈಗ ಇದ್ದ ಭಗವದ್ಗೀತೆಯ ಸ್ವರೂಪವು ಮಹಾಭಾರತ (ಯುದ್ಧ ಕಾಲ?) ಪೂರ್ವದಲ್ಲಿ ಇರಲಿಲ್ಲ. ಅನಂತರದ ಅಧ್ಯಾಯಗಳಲ್ಲಿ ಕೃಷ್ಣನೇ ದೇವರೆಂದು ಭಾವಿಸಿ ಅಲ್ಲಿ ಕೊಟ್ಟ

ಉದಾಹರಣೆಗಳನ್ನು ಇಲ್ಲಿ ಮುಂದಿಡುವುದು ಉಚಿತವಲ್ಲ. ಈ ಕೆಳಗಿನ ಶ್ಲೋಕ ಅನಂತರದ ಕಾಲದಲ್ಲಿಯ ಶ್ಲೋಕವೆಂದು ಭಾವಿಸಿದರೂ, ವಿಚಾರಾರ್ಹವಿದೆ. ಏಕೆಂದರೆ ಅದು ಪಾಂಡವರ ಕಾಲದ ಸಮಾಜ ಸ್ಥಿತಿಯ ಕನ್ನಡಿಯಾಗಿದೆ. ಆದರೆ ಸ್ಮೃತಿಯ ಕಾಲದ ಸಮಾಜದ ನಿದರ್ಶಕವಲ್ಲ. ಕೃಷಿ, ಗೋರಕ್ಷೆ, ವಾಣಿಜ್ಯ, ಇವು ವೈಶ್ಯರಿಂದ ನಡೆಯುತ್ತಿದ್ದವು. ಸೇವಾ ಕರ್ಮಗಳು ಶೂದ್ರರಿಂದ (ಗೀತಾ ೧೮.೪೪) ಎಂದು ಹೇಳಿದೆ. ಇದೇ ಅರ್ಥವನ್ನು ವ್ಯಕ್ತಪಡಿಸುವ ಎರಡು ಶ್ಲೋಕಗಳು ಕರ್ಣ ಪರ್ವದಲ್ಲಿ ಶಲ್ಯನ ಮುಖದಿಂದ ಹೇಳಿಸಲಾಗಿವೆ (೮.೨೩.೩೫.೩೬) ಕೃಷೀವಲನೆಂದರೆ ರೈತನು. ಗೋರಕ್ಷಕನೆಂದರೆ ಗೋಪಾಲ. ವಾಣಿಜ್ಯವೆಂದರೆ ವ್ಯಾಪಾರ– ವಸ್ತುಗಳನ್ನು ತಯಾರಿಸಿ ಮಾರುವವರು. ರೈತನು ರಾಜನಿಗೆ ಕಂದಾಯವನ್ನು ಕೊಡುತ್ತಿದ್ದನು. ಗೋಪಾಲಕರು ಇಲ್ಲವೇ (ಗೋವಾರಿ) ಗೋಧನವನ್ನು ರಕ್ಷಿಸುತ್ತಿದ್ದರು. ಹೊಸ ರಾಜಧಾನಿಯನ್ನು ಸ್ಥಾಪಿಸಬೇಕಾದರೆ ಬೇರೆ ಬೇರೆ ಅಂಗಡಿಕಾರರನ್ನು ಕರೆಯಿಸಿ ಅವರಿಗೆ ಸೌಕರ್ಯ ಒದಗಿಸಿ, ಕರಭಾರದಲ್ಲಿ ರಿಯಾಯತಿಯನ್ನು ತೋರಿಸಿ, ಹೊಸ ರಾಜಧಾನಿಯಲ್ಲಿ ಅವರು ನೆಲಸುವಂತೆ ಮಾಡುವ ಪದ್ಧತಿ ಇತ್ತೆಂದು ಕಾಣುತ್ತದೆ. ನೆಲಸಿದ ನಂತರ ಅವರು ಕರವನ್ನು ಕೊಡುತ್ತಿದ್ದರು. ಈ ಜನರು ಪರಿಚರ್ಯೆ, ಅಂದರೆ ಒಬ್ಬರ ಸೇವೆ ಮಾಡುತ್ತಿದ್ದರೆಂದು ಕಾಣುವುದಿಲ್ಲ. ಕ್ಷತ್ರಿಯರ ಗೋಧನವನ್ನು ರಕ್ಷಿಸುವವರಲ್ಲಿ ಅನೇಕ ದಾಸರು ಮತ್ತು ಒಬ್ಬ ಗೋಪಾಧ್ಯಕ್ಷ, ಅಂದರೆ ರಾಜಮನೆತನದವನು ಇರುತ್ತಿದ್ದನೆಂದು ಕಾಣುತ್ತದೆ. ಅರಸು ಮನೆತನದವರು, ಬ್ರಾಹ್ಮಣರು ಮತ್ತು ಸರ್ವಸಾಮಾನ್ಯ ಪ್ರಜೆಗಳಾಗಿ 'ವಿಶ್' ಮತ್ತು ದಾಸರು ಈ ರೀತಿಯ ಸಾಮಾಜಿಕ ಸ್ಥಿತಿಯು ಆ ಕಾಲದಲ್ಲಿತ್ತು. ಈ ಕಾಲದ ನಂತರ ವಣಿಜರು, ಧನಸಂಪನ್ನರು, ಸಾಮರ್ಥ್ಯವುಳ್ಳವರಾದರು. ಮತ್ತು ಅವರೇ ವೈಶ್ಯರೆಂಬ ಮೂರನೆಯ ವರ್ಣವನ್ನು ವ್ಯಾಪಿಸಿದರು. ರೈತರು ಮತ್ತು ಗೋರಕ್ಷೆಯನ್ನು ಮಾಡುವವರು ಶೂದ್ರ ವರ್ಣದಲ್ಲಿ ಸೇರಿದರು. ವೈಶ್ಯ ವರ್ಗದಲ್ಲಿ ಧನಾಢ್ಯರಾದವರೂ ತಮ್ಮ ಒಡೆತನದಲ್ಲಿದ್ದ ಭೂಮಿಯನ್ನು ತಾವು ಸ್ವತಃ ವ್ಯವಸಾಯ ಮಾಡದೇ, ಬಡವರಾದ ಕೃಷಿಕಾರ್ಮಿಕರಿಗೆ ಮತ್ತು ಭೂಮಿ ಇಲ್ಲದ ದಾಸರಿಗೆ ವ್ಯವಸಾಯಕ್ಕಾಗಿ ಕೊಡುತ್ತಿದ್ದರೆಂದು ಇದರಿಂದ ಅರ್ಥವಾಗುತ್ತದೆ. ಭೂಮಿಹೀನರಾದ ಕಾರ್ಮಿಕರು ಒಂದೆಡೆ ನೆಲಸಿರದೆ ಅವರು ಊರಿಂದ ಊರಿಗೆ ಅಲೆದಾಡುವವರಾಗಿದ್ದರು. ಅದರಲ್ಲಿಯೂ ಸಹ ಈ ಕಾರ್ಮಿಕರ ವರ್ಗದಲ್ಲಿ ಅವರ ಸೇವೆಯನ್ನು ಮಾಡುವ ದಾಸರು ಇದ್ದೇ ಇದ್ದರು. ಈ ರೀತಿ ಬರಬರುತ್ತಾ ವೈಶ್ಯ ಮತ್ತು ಶೂದ್ರ ಈ ಎರಡು ವರ್ಣಗಳಲ್ಲಿ ಸ್ಥಿತ್ಯಂತರವಾಯಿತು. 'ವೈಶ್ಯ' ಇಲ್ಲವೇ 'ವಿಶ್' ಅಂದರೆ ಸರ್ವ ಸಾಧಾರಣ ಪ್ರಜೆಗಳು ಆಗಿ ಉಳಿಯದೇ ವೈಶ್ಯ ಎಂಬ ವಿಶಿಷ್ಟ ಕಾರ್ಯವನ್ನು ಅಂಗೀಕರಿಸಿದ ವರ್ಣವು ಉಂಟಾಯಿತು. ಆನಂತರ ಎಲ್ಲಾ ತರಹದ ಉದ್ಯಮಿಗಳು, ರೈತರು, ಗೋರಕ್ಷಕರು ಸೇವೆಯನ್ನು ಮಾಡುವವರು ಮತ್ತು ದಾಸರು, ಇವರೆಲ್ಲರನ್ನು ಸೇರಿಕೊಂಡು ಶೂದ್ರ ವರ್ಣವು ಉಂಟಾಗಿರಬಹುದೋ? ಇದೇ ರೀತಿ ಸೈನ್ಯದಲ್ಲಿಯೂ ಎರಡು ಪ್ರಕಾರಗಳು ಕಾಣುತ್ತವೆ. ಕ್ಷತ್ರಿಯರು ಮತ್ತು ಅವರ ಹತ್ತಿರದ ಆಪ್ತ ಸಂಬಂಧಿಕರು ಒಂದು ಪ್ರಕಾರದವರಾಗಿ,

ಸಂಬಳವನ್ನು ಪಡೆಯುವ ಸೈನಿಕರು ಎರಡನೆ ವರ್ಗದವರಾಗಿಯೂ ಇದ್ದರು. 'ನಾರಾಯಣೀಯ' ಎಂಬ ಅಭಿದಾನದ ಸೈನಿಕರು ಕೃಷ್ಣನ ಬಳಿ ಇದ್ದರು. ಇದೇ ರೀತಿಯಾಗಿ 'ಸಂಶಪ್ತಕ'ರೆಂಬ ಯುದ್ಧಜೀವಿ ಜನರು ಇದ್ದರೆಂದು ಕಾಣುತ್ತದೆ. ವರ್ಣಪ್ರಕಾರದಲ್ಲಿ ಈ ಜನರ ಸ್ಥಾನವು ಯಾವದಿರಬಹುದು? ಅವರು ಶೂದ್ರರಿರಬಹುದೋ? ಮಿಕ್ಕ (ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಕೃಷಿಕರು) ಜನರಿಗೆ ಇಷ್ಟವಿದ್ದಲ್ಲಿ ಅವರು ಯುದ್ಧದಲ್ಲಿ ಸೇರಿಕೊಳ್ಳಬಹುದು. ಇಲ್ಲವೇ ಅಲಿಪ್ತರಾಗಿ ಉಳಿಯಬಹುದಿತ್ತು. ಆದರೆ ಈ ಜನರು ಸೈನ್ಯದಲ್ಲಿ ಸೇರ್ಪಡೆಯಾದವರು ಮತ್ತು ಸೈನಿಕರೆಂದು ಘೋಷಿಸಲ್ಪಟ್ಟವರಾಗಿದ್ದರು. ಒಡೆಯನ ಆಜ್ಞೆಯ ಅನುಸಾರವಾಗಿ ಅವರು ಯುದ್ಧಮಾಡಲೇ ಬೇಕಾಗುತ್ತಿತ್ತು. ಈ ರೀತಿ ಅವರು 'ಕ್ರೀತದಾಸ'ರಿದ್ದರು. ಕೃಷ್ಣನು ಪಾಂಡವರ ಪಕ್ಷದವನಿದ್ದನು. ಆದರೆ ನಾರಾಯಣೀಯ ಎಂಬ ಆತನ ಯೋಧರು, ದುರ್ಯೋಧನನ ಪಕ್ಷವನ್ನು ವಹಿಸಿ ಕಾದುತ್ತಿದ್ದರು. ವರ್ಣ ಸಂಸ್ಥೆಯಲ್ಲಿ ಈ ಜನರ ಸ್ಥಾನವು ಯಾವುದಿತ್ತೆಂಬುದು ತಿಳಿಯದು. ಭಾರತೀಯ ಯುದ್ಧದಲ್ಲಿ ಭಾಗವಹಿಸಿದ ಜನರು ಮುಖ್ಯವಾಗಿ ಮೂರು ವರ್ಣದವರಿದ್ದರು. ರಾಜಮನೆತನದವರು, ಧಾರ್ಮಿಕ ವಿಧಿಗಳನ್ನು ಆಚರಿಸುವ ಬ್ರಾಹ್ಮಣರು ಮತ್ತು ಮುಖ್ಯ ಪ್ರಜೆಗಳಾದ ವೈಶ್ಯರು. ಈ ರೀತಿಯ ಸಮಾಜರಚನೆ ಇದ್ದುದಲ್ಲದೇ ಯಾರಿಗೆ ಯಾವ ತರಹದ ಬಾಧ್ಯತೆಗಳು ಇರಲಿಲ್ಲವೋ ಮತ್ತು ಮೇಲಿನ ಮೂರು ವರ್ಣದವರ ಸಂಸ್ಕಾರಗಳನ್ನು ಪಡೆಯದೇ ಇದ್ದರೋ, ಯಾರು ಕೇವಲ ವೇತನವನ್ನು ಪಡೆದು ಸೇವೆ ಸಲ್ಲಿಸುತ್ತಿದ್ದರೋ ಅವರು ಶೂದ್ರರಾಗಿದ್ದರು. ವ್ಯವಸಾಯ ಮತ್ತು ಗೋರಕ್ಷಣೆಯು ವೈಶ್ಯರ ಉದ್ದಿಮೆಗಳಾದ್ದರಿಂದ ಆ ಕಾಲದ ಶೂದ್ರರ ಸಂಖ್ಯೆಯು ನಂತರದ ಕಾಲಕ್ಕಿಂತ ಕಡಿಮೆಯೇ ಇರಬೇಕು. ಆಗಿನ ಸಮಾಜವು ಮುಖ್ಯವಾಗಿ ತ್ರೈವರ್ಣಿಕವಾಗಿದ್ದರೂ ನಾಲ್ಕನೆಯ ವರ್ಣವು ಉದಯಹೊಂದಿತ್ತು ಮತ್ತು ಅದಕ್ಕೆ 'ಶೂದ್ರ' ಎಂಬ ಹೆಸರು ಪ್ರಸ್ಥಾಪಿತವಾಗಿತ್ತು. ಹೀಗೆ ಚಾತುರ್ವರ್ಣಾತ್ಮಕ ಸಮಾಜ ವ್ಯವಸ್ಥೆ ಪ್ರಾರಂಭವಾಗತೊಡಗಿತು. ಕೃಷಿ, ಗೋರಕ್ಷ, ವಾಣಿಜ್ಯ ಇವುಗಳನ್ನು ಮಾಡುತ್ತಿದ್ದ ವೈಶ್ಯವರ್ಗವು ಇಲ್ಲದಂತಾಗಿ ಅದಕ್ಕೆ ಪ್ರತಿಯಾಗಿ ವ್ಯಾಪಾರವನ್ನು ಮಾಡುವ ಧನಾಢ್ಯ ಮತ್ತು ಪ್ರಭಾವಿ ವರ್ಗವು ಉದಯಿಸಿ ಕೃಷಿ, ಗೋರಕ್ಷ ಮಾಡುವವರು, ಸೇವೆಯನ್ನು ಮಾಡುವ ಶೂದ್ರರ ಮಟ್ಟವನ್ನು ತಲುಪಿದರು. ಈ ಸ್ಥಿತಿಯು ಮಹಾಭಾರತದ ನಂತರ ಉದಯಿಸಿದ ಬೌದ್ಧ ಯುಗದಲ್ಲಿ ನಿಚ್ಚಳವಾಗಿ ಕಾಣುತ್ತದೆ. ಬುದ್ಧ ಮತ್ತು ನಂತರದ ಜೈನ ವಾಙ್ಮಯದಲ್ಲಿ ವೈಶ್ಯವರ್ಗಕ್ಕೆ ಬಹಳ ಪ್ರಾಧಾನ್ಯವಿದೆ. ಕಥೆಯ ನಾಯಕನು ವೀರಪುರುಷನು ಹಾಗೇ ಕ್ಷತ್ರಿಯನು ಇರುವ ಮಹಾಭಾರತ ಕಾಲಿನ ಪ್ರಘಾತವು ಇಲ್ಲದಂತಾಗಿ ಕಥಾನಾಯಕನು ಶ್ರೇಷ್ಠಿಯು ಇಲ್ಲವೇ ಶ್ರೇಷ್ಠಿಯ ಪುತ್ರನು ಕಂಡುಬರಹತ್ತಿದನು. ಆದ್ದರಿಂದಲೇ ಬೌದ್ಧ ಕಥೆಗಳಲ್ಲಿ 'ಕಿಸಾಗೋತಮಿ' ಮತ್ತು 'ವಿಶಾಖಾ' ಎಂಬ ವೈಶ್ಯ ಸ್ತ್ರೀಯರ ವರ್ಣನೆಗಳು ಬಂದಿವೆ. ಧನಿಕನಾದ ವೈಶ್ಯನು ಗೃಹಸ್ಥಾಶ್ರಮದಲ್ಲಿಯೇ ಇರಬೇಕೆಂಬ ಅವಶ್ಯಕತೆಯು ಸಾಂಘಿಕವಾದ 'ಪ್ರವ್ರಜ್ಯಾ ಪ್ರಧಾನ' ಧರ್ಮಕ್ಕೆ ಅವಶ್ಯಕವು ಎಂದೆನ್ನಬಹುದೋ ? ಪ್ರವ್ರಜ್ಯಾಪ್ರಧಾನ ಧರ್ಮಗಳು ಪೂರ್ವದಿಂದಲೇ ವ್ಯಕ್ತಿ ಪೂಜೆಯನ್ನು ಆಧರಿಸಿವೆ. ಇವು

ಸಾಂಘಿಕವಾಗಿರುತ್ತವೆ. ಈ ಕಾರಣದಿಂದಲೇ ಧರ್ಮಸಂಸ್ಥೆಗಳ ರಚನೆಯು, ದೃಢವಾಗಿಯೂ, ರೂಪರೇಖಿತವಾಗಿಯೂ ಇರುತ್ತದೆ. ಧರ್ಮದ ಪ್ರಮುಖನು, ಉಪಮುಖ್ಯನು, ಸಂಘಮುಖ್ಯನು, ಸಂಘದ ಮತ್ತು ವ್ಯಕ್ತಿಯ ಜೀವನವೆಲ್ಲವೂ ಈ ಸಾಂಘಿಕ ರಚನೆಗೆ ಬದ್ಧವಿರುತ್ತವೆ. ಬೌದ್ಧ, ಕ್ರಿಸ್ತ ಮತ್ತು ಮಹಮದೀಯ ಧರ್ಮಗಳು ಇದೇ ರೀತಿಯವಿವೆ. ಅಂತರ್ಗತ ವ್ಯಾಪಾರದಿಂದ ಸಾಕಾಗದೇ ಈ ಜನರು ಸಾಮ್ರಾಜ್ಯ ಸಂಸ್ಥಾಪಕರಾದರು. ಮತ್ತು ಧರ್ಮದ ತತ್ತ್ವಗಳನ್ನು ಜಗತ್ತಿಗೆಲ್ಲಾ ಸಾರಿದರು. ಬೌದ್ಧ ಧರ್ಮೀಯರು ಈ ದೇಶದಲ್ಲಿಯೇ ಸಾಮ್ರಾಜ್ಯವನ್ನು ವಿಸ್ತರಿಸಿದರು. ಮತ್ತು ಆ ಧರ್ಮದ ಸಹಸ್ರಾರು ಬುದ್ಧ ಭಿಕ್ಷುಕರ ಪೋಷಣೆಗಾಗಿ ಆಗಿನ ಧನಾಢ್ಯರಾದ ವಣಿಕರು ಇದ್ದರು. ಭಾರತೀಯ ಯುದ್ಧದ ಯುಗವು ಈ ದೃಷ್ಟಿಯಲ್ಲಿ ಸಂಕುಚಿತವಾಗಿಯೂ, ಮರ್ಯಾದಿತ ಗುಂಪುಗಳಿಂದ ತುಂಬಿ ಇದ್ದಂತೆಯೂ ಕಾಣುತ್ತದೆ. ಧರ್ಮಕ್ಕೆ ಸಾರ್ವಜನಿಕ ಸ್ವರೂಪವೂ ಇರಲಿಲ್ಲ. ಇದ್ದ ಒಗ್ಗಟ್ಟು, ಸಮಾಜದಲ್ಲಿಯ ಏಕ ರೂಪತೆಯಿಂದ ಹೊರತು, ಧರ್ಮದ ಸ್ವರೂಪದಿಂದಲ್ಲ. ಧರ್ಮವೆಂಬ ಶಬ್ದವು ಬಹಳ ವ್ಯಾಪಕವಾಗಿಯೇ ಇದ್ದು ನಿಜವಾಗಿ ಧರ್ಮವು ವ್ಯಕ್ತಿಗತವಾಗಿಯೇ ಉಳಿಯಿತು.

ಜಾತಿಗಳು ಇದ್ದವೊ ? ಎಂಬ ಇನ್ನೊಂದು ಪ್ರಶ್ನೆಯು ತಲೆದೋರುತ್ತದೆ. ವರ್ಣಗಳು ಇದ್ದವು. ಆದರೆ ಜಾತಿಗಳಿರಲಿಲ್ಲ, ಎಂದು ಅನೇಕರ ಮತವಿದೆ. ಜಾತಿಗಳ ಹೆಸರಿನ ಉಲ್ಲೇಖವು ಕಂಡುಬರುವುದಿಲ್ಲ. ಆದರೆ ಜಾತಿಗಳು ಎಂದು ತಿಳಿಯಬಹುದಾದ ಸಮೂಹಗಳು ಇದ್ದವು ಎಂಬುದರಲ್ಲಿ ಸಂಶಯವಿಲ್ಲ. ಇದೇ ಪ್ರಕಾರದ ಒಂದು ಸಮೂಹವು ಸೂತರದು. ಸೂತರ ದರ್ಜೆಯು 'ವಿಶ್' ಮತ್ತು 'ಶೂದ್ರ' ಇವರಿಗಿಂತ ಮೇಲಿನದಾಗಿತ್ತೋ? ಎಂಬ ಸಂದೇಹವು ಶಲ್ಯನು ಆಡಿದ ಮುಂದಿನ ವಾಕ್ಯದಿಂದ ಉಂಟಾಗುತ್ತದೆ. ಶಲ್ಯನಿಗೆ 'ಕರ್ಣನ ಸಾರಥಿಯಾಗು' ಎಂದು ದುರ್ಯೋಧನನು ಬಿನ್ನವಿಸಿದಾಗ ಆತನು ಕೋಪಗೊಂಡು "ಶೂದ್ರರು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಇವರ ಪರಿಚಾರಕರೆಂದು ಗಣಿಸಲ್ಪಟ್ಟಿದ್ದಾರೆ. ಸೂತರು, ಬ್ರಾಹ್ಮಣರ ಮತ್ತು ಕ್ಷತ್ರಿಯರ ಪರಿಚಾರಕರಿರುವರು. ಆದರೆ 'ವಿಶ್' ಮತ್ತು ಶೂದ್ರರ ಪರಿಚಾರಕರಲ್ಲ. ರಾಜನಾದ ನಾನು, ಕರ್ಣನಿಗೆ ಸೇವೆಯನ್ನು ಸಲ್ಲಿಸುವುದು ಹೇಗೆ ತಾನೇ ಸಾಧ್ಯ ?

ಬ್ರಹ್ಮ ಕ್ಷತ್ರ ವಿಶಾಂ ಶೂದ್ರಾ ವಿಹಿತಾಃ ಪರಿಚಾರಕಾಃ । ೮.೨೩.೫೩
ಬ್ರಹ್ಮ ಕ್ಷತ್ರಸ್ಯ ವಿಹಿತಾಃ ಸೂತಾ ವೈ ಪರಿಚಾರಕಾಃ ।
ನವಿಟ್ ಶೂದ್ರಸ್ಯ.................................... ॥ ೮.೨೩.೩೮

ಬಹುಶಃ ಯಾರ ವಿವಾಹಗಳು ಅವರವರಲ್ಲಿಯೆ ನಡೆಯುತ್ತವೆಯೋ ಅಂತಹ ಜನರ ಸಮಾಜವೆಂದರೆ ಜಾತಿ. ಜಾತಿಯ ಪ್ರಮುಖ ಲಕ್ಷಣವೆಂದರೆ ಅದರಲ್ಲಿಯ ಒಬ್ಬ ಮನುಷ್ಯ ಒಂದು ನಿರ್ದಿಷ್ಟ ವರ್ಣದವನೂ ಎಂಬ ಬಹುಮತ ಹೊಂದಿದ್ದರೆ ಆತನ ಇತರ ಜಾತಿ ಬಾಂಧವರು ಈ ವರ್ಣದವರೆನಿಸುತ್ತಾರೆ. ಕ್ಷತ್ರಿಯನೆಂದು ಎನಿಸಿಕೊಳ್ಳಲು ಕರ್ಣ ಮಾಡಿದ ಪ್ರಯತ್ನವು ವೈಯಕ್ತಿಕವಿತ್ತು. ಎಲ್ಲಾ ಸೂತರು ಕ್ಷತ್ರಿಯರಾಗಬೇಕೆಂಬ ಆಸೆಯನ್ನು ಆತ

ಹೊಂದಿರಲಿಲ್ಲ. ತಾನು ಜನ್ಮದಿಂದ ಕ್ಷತ್ರಿಯನಾಗಿ ಇದ್ದುದ್ದನ್ನು ಸಿದ್ಧಮಾಡಿ ತೋರಿಸಲು ಆತ ಪ್ರಯತ್ನಪಡುತ್ತಿದ್ದ. ಮರಣ ಹೊಂದಿದ ನಂತರ ಕ್ಷತ್ರಿಯರ ವಿಧಿಯಿಂದ ಅಗ್ನಿ ಸಂಸ್ಕಾರ ನಡೆದುದರಿಂದ ಆತನೊಬ್ಬನಿಗೆ ಕ್ಷತ್ರಿಯತ್ವವು ದೊರೆಯಿತು. ಆದರೆ ಆತನ ಮಗ, ಸೂತ ಸ್ತ್ರೀಯಿಂದ ಹುಟ್ಟಿದ್ದರಿಂದ ಆತನಿಗೆ ಕ್ಷತ್ರಿಯತ್ವವು ದೊರೆಯಲಿಲ್ಲ. ಇದೊಂದೇ ಉದಾಹರಣೆಯು 'ಜಾತಿ' ಎಂಬ ಸಾಮಾಜಿಕ ಸಮೂಹದ ಅಸ್ತಿತ್ವವನ್ನು ಸಿದ್ಧಪಡಿಸಲು ಸಾಕಾಗುತ್ತದೆ. ಭಾರತದಲ್ಲಿದ್ದ ಜಾತಿ ಸಂಸ್ಥೆಗಳ ಇನ್ನೊಂದು ವಿಶೇಷವೆಂದರೆ ಉಚ್ಚ ಜಾತಿಯ ಜನರು ಕೆಳಗಿನ ಜಾತಿಯು ಸ್ತ್ರೀಯರೊಡನೆ ವಿವಾಹವಾಗಬಹುದಿತ್ತು. ಆದರೆ ಈ ರೀತಿ ವಿವಾಹವಾದ ಸ್ತ್ರೀಯರ ತವರಿನವರ ಜಾತಿಯಲ್ಲಿ ಬದಲಾವಣೆ ಆಗುತ್ತಿರಲಿಲ್ಲ. ಉದಾಹರಣೆಗಾಗಿ ಸುದೇಷ್ಣ ಮತ್ತು ಕಾಲಿಸತ್ಯವತಿ. ಜಾತಿ ಮತ್ತು ವರ್ಣ ಸಂಸ್ಥೆಗಳ ಮಹತ್ವವು ಮಹಾಭಾರತ ಕಥೆಯಲ್ಲಿಯೂ ಕಾಣುತ್ತದೆ. ಕೆಳಗಿನ ಜಾತಿಯವರು, ಮೇಲಿನ ವರ್ಣದಲ್ಲಿ ಸೇರಲು ಬಯಸುತ್ತಿದ್ದರು. ಆದರೆ ಕೇವಲ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಸೇರಲು ಬಯಸುತ್ತಿರಲಿಲ್ಲ. ಎಲ್ಲಾ ಜಾತಿ ವಂಶಗಳ ದರ್ಜೆಯು ನಿಶ್ಚಿತವಾಗಿರಲಿಲ್ಲವೆಂದು ಕಂಡುಬರುತ್ತದೆ. ನಾಗ ಕುಲದವರಿಗೆ, ಅದರಲ್ಲಿಯೂ ರಾಜಮನೆತನದವರಿಗೆ ಬಹಳ ಗೌರವವಿತ್ತು. ಆದರೆ ಅವರು ಯಾವ ವರ್ಣಕ್ಕೆ ಹೊಂದಿಕೊಂಡಿದ್ದರು ಎನ್ನುವುದು ತಿಳಿಯುವುದಿಲ್ಲ. ಅನೇಕ ರಾಜ ಮನೆತನಗಳು ಕ್ಷತ್ರಿಯವಿಲ್ಲದೇ ಇದ್ದರೂ ಬರಬರುತ್ತಾ ಕ್ಷತ್ರಿಯವೆಂದು ಹೇಳಿಕೊಳ್ಳಹತ್ತಿದವು. ಆದರೆ ಇಂತಹ ಪ್ರಯತ್ನಗಳಿಗೆ ಬೌದ್ಧ ಕಾಲದಲ್ಲಿಯೂ ಮಾನ್ಯತೆ ದೊರೆಯುತ್ತಿರಲಿಲ್ಲ. ರಾಜನಾಗಿದ್ದರೂ ಕ್ಷತ್ರಿಯನಿರಲಿಲ್ಲವಾದ್ದರಿಂದ ಬಲಶಾಲಿಯಾದ ರಾಜನಿಗೂ ಕ್ಷತ್ರಿಯ ಕನ್ಯೆಯೊಡನೆ ವಿವಾಹವಾಗಲೂ ಅವಕಾಶವಿರಲಿಲ್ಲ. ಈ ಸಂಗತಿಯೂ 'ಪಸೆ ನದಿ ಕೋಸಲ್' ಮತ್ತು "ವಾಸಭಕತ್ತಿಯಾ" ಇವರ ಕಥೆಗಳಿಂದ ತಿಳಿದುಬರುತ್ತದೆ. ನಂತರದ ಕಾಲದಲ್ಲಿ ಕಂಡುಬರುವ ವರ್ಣ ಜಾತಿಗಳ ವ್ಯವಸ್ಥೆಯು, ಕೆಳಗಿನ ಜಾತಿಯವರ ಮೇಲಿನ ವರ್ಗಕ್ಕೆ ಸೇರಬೇಕೆಂಬ ಬಯಕೆಯೂ, ಅನೇಕ ಬಾರಿ ಸಫಲಗೊಂಡ ಈ ಪ್ರಯತ್ನಗಳೂ, ಇಂಥ ಭಾರತೀಯ ಸಮಾಜದಲ್ಲಿ ಈವರೆಗೂ ಕಂಡುಬರುವ ಅಂಗವು, ಭಾರತೀಯ ಯುದ್ಧದ ಕಾಲದಲ್ಲಿ ಬೇರೂರತೊಡಗಿತ್ತು. ಭಾರತೀಯ ಯುದ್ಧದ ಕಾಲಕ್ಕೆ ಕ್ಷತ್ರಿಯವೆನಿಸಿಕೊಳ್ಳುವ ಅನೇಕ ಮನೆತನಗಳು ಬುನಾದಿಯಿಂದ ಇದ್ದವು. ಭಾರತೀಯ ಕಥೆಯನ್ನು ಅವಲೋಕಿಸಿದಲ್ಲಿ ಕ್ಷತ್ರಿಯ ಮನೆತನಗಳು ತಮ್ಮ ಕ್ಷತ್ರಿಯತ್ವವನ್ನು ಬಹುವಾಗಿ ಲಕ್ಷಿಸುತ್ತಿದ್ದವು. ಅದೇ ಪ್ರಕಾರವಾಗಿ ಪರಂಪರಾಗತವಾಗಿ ಬಂದ ಒಬ್ಬರೊಬ್ಬರ ರಾಜ್ಯಗಳನ್ನು, ಅದೇ ರೀತಿಯಾಗಿ ಕ್ಷತ್ರಿಯ ಸಮಾಜದ ಒಂದು ವಿಶಿಷ್ಟ ಚೌಕಟ್ಟನ್ನು ಕಾಪಾಡುತ್ತಿದ್ದವು. ಚಿಕ್ಕ ಪ್ರದೇಶಗಳಿದ್ದರೂ, ಆಯಾ ಪ್ರದೇಶಗಳಿಗೆ ಕ್ಷತ್ರಿಯರು ಹೊಂದಿಕೊಂಡಿದ್ದರು. ಇದಕ್ಕೆ ಪ್ರತಿಯಾಗಿ ಬ್ರಾಹ್ಮಣರು ಪರಾಶ್ರಿತರಾದ್ದರಿಂದ ಅವರು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗುತ್ತಿದ್ದರು. ಈ ಕಾರಣ ಅವರ ಸಂಬಂಧವು ಅನೇಕ ಪ್ರದೇಶಗಳೊಡನೆ, ಅನೇಕ ರಾಜಸಭೆಗಳೊಡನೆ ಉಂಟಾಗುತ್ತಿತ್ತು. ಇಷ್ಟೇ ಅಲ್ಲದೆ ನಾಗ ಜನರೊಡನೆ ಮತ್ತು

ಅರಣ್ಯವಾಸಿಗಳೊಡನೆ ಸಹ ಅವರ ಸಂಬಂಧವು ಬರುತ್ತಿತ್ತು. ಹಲವು ಪ್ರಸಂಗಗಳಲ್ಲಿ ಶರೀರ ಸಂಬಂಧವು ಉಂಟಾಗುತ್ತಿತ್ತು. ಈ ರೀತಿ ಜನಿಸಿದ ಸಂತತಿಯೂ ಬಹುತಾಂಶವಾಗಿ ಬ್ರಾಹ್ಮಣವೆಂದು ಗಣಿಸಲ್ಪಡುತ್ತಿತ್ತು. ಕ್ಷತ್ರಿಯರಲ್ಲಿಯೂ ವರ್ಣಸಂಕರವಾಗುತ್ತಿದ್ದರೂ ಅದು ಬ್ರಾಹ್ಮಣರಷ್ಟು ಆಗುತ್ತಿರಲಿಲ್ಲವೆಂದು ಕಥೆಯ ಮೇಲಿಂದ ಕಂಡು ಬರುತ್ತದೆ.

ರಾಜನಿದ್ದರೂ ಕ್ಷತ್ರಿಯನಿರದಿರುವ ಉದಾಹರಣೆ ಎಂದರೆ ಕರ್ಣ. ಆನಂತರದ ಕಾಲದ ಉದಾಹರಣೆಯೆಂದರೆ 'ಪಸೆ ನದಿ'. ಬೇರೆ ಬೇರೆ ವ್ಯಕ್ತಿಗಳಿಗಾಗಲೀ, ಗುಂಪುಗಳಿಗಾಗಲೀ, ತಮ್ಮ ಜಾತಿಯನ್ನು ತ್ಯಜಿಸಿ ಕ್ಷತ್ರಿಯ ವರ್ಣಕ್ಕೆ ಸೇರಿಕೊಳ್ಳಲು ಸಾಧ್ಯವಾಗಿದ್ದರೂ ಪ್ರತಿಯೊಂದು ವರ್ಣದಲ್ಲಿ (೧) ಪ್ರತಿಷ್ಠಿತ ಮನೆತನಗಳು, (೨) ಪುರಾತನ ಪ್ರತಿಷ್ಠಿತ ಆದರೆ ನಂತರ ಮಾಂಡಲೀಕವಾದ ಮತ್ತು ಉಚ್ಚಮಟ್ಟವನ್ನು ಕಳೆದುಕೊಂಡ ಮನೆತನಗಳು, (೩) ಹೊಸತಾಗಿ ಸೇರಿಕೊಳ್ಳಲು ಹವಣಿಸುವ ಇಲ್ಲವೇ ಸೇರಿಕೊಂಡ ಪ್ರತಿಷ್ಠಿತ ಬಲಾಢ್ಯ ಮನೆತನಗಳು ಈ ರೀತಿಯಾಗಿ ಇರುತ್ತಿದ್ದವು. ಮನೆತನದ ಗುಂಪು ಅದರ ವೈಶಿಷ್ಟ್ಯವನ್ನು ಕಾಯ್ದುಕೊಳ್ಳುತ್ತಿತ್ತು. ಹೊಸತಾಗಿ ಸೇರಿಕೊಂಡ ಮನೆತನದವರು ಆದಿಯ ಮನೆತನದವರೊಡನೆ ಶರೀರ ಸಂಬಂಧವನ್ನು ಸ್ಥಾಪಿಸಿ, ತಾವು ಕೂಡ ಬುನಾದಿಯಿಂದ ಬಂದ ಕ್ಷತ್ರಿಯ ವರ್ಣದವರು ಇಲ್ಲವೇ ಬ್ರಾಹ್ಮಣ ವರ್ಗದವರು ಎಂದು ಹೇಳಿಕೊಳ್ಳುವ ಹವ್ಯಾಸವಿತ್ತು ; ಉಚ್ಚ–ನೀಚ, ಪುರಾತನ–ನೂತನ, ಗುಂಪುಗಳು ಈ ವರ್ಣಾಂತರ್ಗತವಿದ್ದವು. ಒಂದು ವ್ಯಕ್ತಿಯೇ ಆಗಲಿ ಜಾತಿಯೇ ಆಗಲಿ ಉಚ್ಚವರ್ಣದಲ್ಲಿ ಸೇರಲು ಪ್ರಯತ್ನಿಸುತ್ತಿದ್ದಾಗ ಆ ಉಚ್ಚವರ್ಣದಲ್ಲಿಯ ಪ್ರತಿಷ್ಠಿತರೆಂದು ಎಲ್ಲರಿಂದ ಮನ್ನಣೆ ಪಡೆದ ಕುಲದವರೊಡನೆ ಲಗ್ನ ಸಂಬಂಧವನ್ನು ಸ್ಥಾಪಿಸಲು ಬಯಸುತ್ತಿದ್ದರು ಎಂದು ತೋರುತ್ತದೆ. ಈ ರೀತಿ ಜಾತಿ ಮತ್ತು ವರ್ಣಗಳಲ್ಲಿಯ ಸಂಬಂಧವು ಭಾರತದಲ್ಲಿಯ ಎಲ್ಲಾ ಚರಿತ್ರೆಗಳಲ್ಲಿ ಕಂಡುಬರುತ್ತದೆ ; ಪ್ರಪಂಚದಲ್ಲೆಲ್ಲಾ ಸರ್ವಸಮಾಜಗಳಲ್ಲಿ ಸದಾಕಾಲ ನಡೆದು ಬಂದಿರುವ ಸಾಮಾಜಿಕ ಸ್ಥಿತ್ಯಂತರದ ಇದು ಒಂದು ಭಾರತೀಯ ಉದಾಹರಣೆ! ಎಂದು ಮನ್ನಿಸಬಹುದು. ಅನೇಕ ಜಾತಿಗಳು ಒಂದು ವರ್ಣದಲ್ಲಿ ಇರುವುದಕ್ಕೆ ಇದೊಂದು ಕಾರಣವೆಂದೆನ್ನಬಹುದು. ವರ್ಣ ಸಂಕರದ ಬಗ್ಗೆ ಇರುವ ಬೊಬ್ಬೆ, ಸನಾತನವಿದ್ದಂತೆ ವರ್ಣಸಂಕರದ ಕ್ರಿಯೆಯು ಸಹ ಸನಾತನವೇ ಆಗಿದೆ.

ವರ್ಣ ಮತ್ತು ಜಾತಿಗಳನ್ನು ನಿರ್ದೇಶಿಸುವ ಸಮಾಜದ ಚಿತ್ರಣವು ಮಹಾಭಾರತದಲ್ಲಿ ನಿಚ್ಚಳವಾಗಿಲ್ಲ. ವರ್ಣಗಳು ದೃಢವಿದ್ದವು. ಜಾತಿಗಳು ಇದ್ದವು. ಅನಂತರದ ಶೂದ್ರರವೆಂದೆನಿಸಿದ ಉದ್ದಿಮೆಗಳು ಆಗ ವೈಶ್ಯರವಾಗಿದ್ದವು. ಇಷ್ಟೇ ಹೇಳಬಹುದು. ಇದಕ್ಕೆ ಪ್ರತಿಯಾಗಿ ಮಹಾಭಾರತದಲ್ಲಿಯ ಕೌಟುಂಬಿಕ ಚಿತ್ರಣವು ಬಲು ನಿಚ್ಚಳವಾಗಿಯೂ ವಿಪುಲ ಸೂಕ್ಷ್ಮಮರ್ಮಗಳ ದರ್ಶಕವು, ಈವರೆಗೂ ನಡೆದು ಬಂದ ಪಿತೃಪ್ರಧಾನ ಕುಟುಂಬದ ಆದ್ಯ ದರ್ಶಕವೂ ಆಗಿದೆ. ಈ ಚಿತ್ರಣವು ಬಹಳ ಸಾದ್ಯಂತವಿರುವುದರಿಂದ ಅದರಲ್ಲಿ ಅನಂತರ ಹೊಂದಿದ ಚಿಕ್ಕ ಪುಟ್ಟ ಬದಲಾವಣೆಗಳನ್ನು ಕೂಡ ಕೂಡಲೇ ಕಂಡುಹಿಡಿಯಬಹುದು.

ಬಹುಶಃ ಇಡೀ ಭಾರತದಲ್ಲಿ ಈವರೆಗೆ ರೂಢಿಯಲ್ಲಿದ್ದ ಪಿತೃಪ್ರಧಾನ ಕುಟುಂಬವನ್ನು ಮಹಾಭಾರತದಲ್ಲಿ ಬಣ್ಣಿಸಲಾಗಿದೆ. ಹಸ್ತಿನಾಪುರದಲ್ಲಿಯ ಕುರುಗಳ, ಪಾಂಚಾಲದಲ್ಲಿಯ ದೃಪದರ, ದ್ವಾರಕೆಯಲ್ಲಿಯ ಯಾದವರ, ಕುಟುಂಬಗಳು ಇದೇ ಮಾದರಿಯವಾಗಿದ್ದವು. ಏಕಕಾಲಕ್ಕೆ ಅದೇ ಮನೆತನದ ನಾಲ್ಕು ತಲೆಮಾರುಗಳ ವಂಶಜರು ಬಾಳುತ್ತಿದ್ದರು. ದತ್ತು ಹೋದ ಅಥವಾ ದತ್ತು ಬಂದ ಪುರುಷರನ್ನು ಬಿಟ್ಟು ಮಿಕ್ಕವರು ಅದೇ ವಂಶದಲ್ಲಿ ಜನ್ಮತಾಳಿದವರಿರುತ್ತಿದ್ದರು. ಇಂತಹ ಕುಟುಂಬದಲ್ಲಿ ಜನಿಸಿದ ಕನ್ಯೆಯರು ಅನ್ಯರ ಮನೆಗೆ ಹೋಗುತ್ತಿದ್ದರು. ಮತ್ತು ಹೆರವರ ಕನ್ಯೆಯರು ಅತ್ತೆ, ಸೊಸೆ, ಪತ್ನಿಯರಾಗಿ ಈ ಕುಟುಂಬವನ್ನು ಸೇರುತ್ತಿದ್ದರು. ಕುಟುಂಬದಲ್ಲಿ ಜನಿಸದ ಹುಡುಗಿಯರು 'ಕನ್ಯೆ', 'ಪುತ್ರಿ', ಎಂದು ಎಣಿಸಲ್ಪಡುತ್ತಿದ್ದರು. ಅವರಿಗಾಗಿ ಪ್ರತ್ಯೇಕ ಅಂತಃಪುರಗಳು ಇದ್ದವೆಂದು ಅನಿಸುತ್ತದೆ. ಪರರ ಮನೆಯಿಂದ ತಂದ ಕನ್ಯೆಯರಿಗೆ 'ವಧು' ಎಂಬ ಅಭಿದಾನವಿತ್ತು. ಅವರ ಅಂತಃಪುರವು ಬೇರೆ ಇರುತ್ತಿತ್ತು. ಈ ಕಾಲದ ವೈಶಿಷ್ಟ್ಯವೆಂದರೆ ಅದರಲ್ಲಿ ಆಪ್ತತ್ವ ಸೂಚಕ ಶಬ್ದಗಳು ತೀರಾ ಕಡಿಮೆ ಇದ್ದವು. 'ಪಿತಾ', 'ತಾತ' ಈ ಶಬ್ದಗಳಿಂದ ತಂದೆ ಮತ್ತು ತಂದೆಯ ಸಹೋದರರು ಎಂಬ ಅರ್ಥವಿತ್ತು. ತಂದೆಯ ಪತ್ನಿಯಾಗಲಿ ಚಿಕ್ಕಪ್ಪ–ದೊಡ್ಡಪ್ಪನ ಪತ್ನಿಯಾಗಲಿ, 'ಮಾತೆ' ಇಲ್ಲವೇ 'ಅಂಬೆ' ಎಂದು ಕರೆಯಲ್ಪಡುತ್ತಿದ್ದಳು. ಸ್ವಂತ ತಂದೆಯಿಂದ ಹುಟ್ಟಿದ ಮಕ್ಕಳು, ತಂದೆಯ ಸಹೋದರನ ಮಕ್ಕಳು 'ಸಹೋದರ–ಸಹೋದರಿಯರು' ಎಂದು ಎನಿಸುತ್ತಿದ್ದರು. ಸ್ವಂತ ಮಕ್ಕಳು ಮತ್ತು ಸೋದರನ ಮಕ್ಕಳು 'ಪುತ್ರ–ಕನ್ಯೆ' ಎಂದು ಎನಿಸುತ್ತಿದ್ದರು. ಮಹಾಭಾರತವೆಂದರೆ ಸಹೋದರ–ಸಹೋದರರ ಮಕ್ಕಳ ಅಂತಃಕಲಹದ ಕಥೆಯಾಗಿದೆ. ತಂದೆಯು ಇಲ್ಲವೆ ಚಿಕ್ಕಪ್ಪ–ದೊಡ್ಡಪ್ಪರು ; ಖಾಸ ಅಣ್ಣ–ತಮ್ಮಂದಿರು. ಇಲ್ಲವೇ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು. ಮಕ್ಕಳು ಮತ್ತು ಅಣ್ಣತಮ್ಮನ ಮಕ್ಕಳು ಇವುಗಳಿಗೆ ಸ್ವತಂತ್ರ ಶಬ್ದಗಳಿಲ್ಲ. ಈ ಸಂಗತಿಯು ಮೇಲಿಂದ ಮೇಲೆ ಗಮನಕ್ಕೆ ಬರುತ್ತದೆ. ಧರ್ಮರಾಜನು ವಾರಣಾವತಕ್ಕೆ ಹೋಗುವಾಗ ಧೃತರಾಷ್ಟ್ರ–ಗಾಂಧಾರಿಯರಿಗೆ ತಾತ ಮತ್ತು ಅಂಬೆ ಎಂದು ಸಂಬೋಧಿಸಿ ಅನುಜ್ಞೆಯನ್ನು ಪಡೆಯುತ್ತಾನೆ. ಈ ವ್ಯಕ್ತಿಗಳು ತನಗೆ ಅನ್ಯಾಯವನ್ನು ಬಗೆಯುವವರಿದ್ದಾರೆ ಎಂಬುದನ್ನು ಅರಿತು ಕೂಡ ಅವರಿಗೆ ವಂದಿಸಿ ನಮ್ರನಾಗಿ ಆತನು ನಿಲ್ಲುತ್ತಾನೆ. ಆಗಿನ 'ತಾತ' ಮತ್ತು 'ಅಂಬೆ' ಈ ಸಂಬೋಧನೆಗಳು ಸದ್ಯದ ವಾಚಕನಿಗೆ ತೀರಾ ಕರುಣಾಜನಕವೆನಿಸುತ್ತವೆ. 'ಪುತ್ರ'ನೆಂದು ಕರೆದು, ಪಾಂಡವರಿಗೆ ಅವರು ಆಶೀರ್ವದಿಸಿದ್ದಂತೂ ತೀರಾ ಡಂಭಾಚಾರವೆನಿಸುತ್ತದೆ. ಪಾಂಡವರನ್ನು ವನಕ್ಕೆ ಅಟ್ಟಿದಾಗ ಅವರ ವತಿಯಿಂದ ವಿದುರ, ಧೃತರಾಷ್ಟ್ರನೊಡನೆ ವಾದಿಸಿದ. ಆಗ ಧೃತರಾಷ್ಟ್ರ ವಿದುರನಿಗೆ "ಇಷ್ಟು ಕನಿಕರವೆನಿಸುತ್ತಿದ್ದರೆ ನೀನೂ ಅವರೊಡನೆ ಹೊರಡು ! ನನಗೆ ಹಿಂಸೆಮಾಡಬೇಡ" ಎಂದು ಹೇಳಿದ.

ಕಥಂ ಹಿ ಪುತ್ರಂ ಪಾಂಡವಾರ್ಥೆ ತ್ಯಜೇಯಮ್ ।
'ಪಾಂಡವರಿಗಾಗಿ ನಾನು ನನ್ನ ಮಕ್ಕಳನ್ನು ಹೇಗೆ ತ್ಯಜಿಸಲಿ?'
ಅಸಂಶಯಂ ತೇಽಪಿ ಮಮೈವ ಪುತ್ರಾ ಧುರ್ಯೋಧನಸ್ತು

ಮಮ ದೇಹಾತ್ ಪ್ರಸೂತಃ ।
ಸ್ವಂ ವೈ ದೇಹಂ ಪರಹೇತೋಸ್ತ್ಯ ಜೇತಿ ಕೋ ನು ಬ್ರೂಯಾತ್ ಸಮತಾಮನ್ವವೇಕ್ಷನ್ ॥

ಧೃತರಾಷ್ಟ್ರ ಮುಂದೆ ಈ ರೀತಿ ಹೇಳುತ್ತಾನೆ: "ಪಾಂಡವರು ಕೂಡ ನನ್ನ ಮಕ್ಕಳು ಎಂಬುದರಲ್ಲಿ ಸಂದೇಹವಿಲ್ಲ. ಹೀಗಿದ್ದರೂ ದುರ್ಯೋಧನನು ನನ್ನ ದೇಹದಿಂದ ಹುಟ್ಟಿದವನು. ಪರರಿಗಾಗಿ ತನ್ನ ದೇಹವನ್ನು ತ್ಯಜಿಸಬೇಕು ಎಂಬ ಬುದ್ಧಿವಾದವನ್ನು ಹೇಳುವ ಯಾವ ಪಂಡಿತನಿರಬಹುದು ?" ಈ ವೃದ್ಧನ ಎಲ್ಲ ಮಕ್ಕಳನ್ನು ಕೊಂದು ಧರ್ಮರಾಜ ಅವರಿಗೆ 'ತಾತ', 'ಅಂಬೆ' ಎಂದು ಅನ್ನುತ್ತಲೇ ಇದ್ದ. ಈ ರೀತಿಯಾಗಿ ಉಚ್ಚರಿಸುವಾಗ ಆತನ ನಾಲಗೆಯು ತುಸುವಾದರೂ ತಡವರಿಸುತ್ತಿರಲೇಬೇಕು ; ಎಂದು ಕೆಲವು ಸಲ ಅನಿಸುತ್ತದೆ. ಈಗಿನ ಕುಟುಂಬ ಸಹ ಪಿತೃಪ್ರಧಾನವಾಗಿ ಅವಿಭಕ್ತವೂ ಆಗಿರುತ್ತದೆ. ಆದರೆ ಸ್ವಂತ ಮಕ್ಕಳ, ಅದರಂತೆಯೇ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳಲ್ಲಿಯ ಭೇದವು ಎಲ್ಲಾ ಉತ್ತರ ಭಾರತೀಯ ಭಾಷೆಗಳಲ್ಲಿ ಸ್ಪಷ್ಟವಾಗಿದೆ.

ಮಹಾಭಾರತ ಕಾಲದಲ್ಲಿ 'ಪತಿವ್ರತ'ವೆಂಬ ಶಬ್ದದ ಅರ್ಥವು ಹಲವು ದೃಷ್ಟಿಯಿಂದ ಆನಂತರದ ಕಾಲದಲ್ಲಿಯ ಅರ್ಥಕ್ಕಿಂತ ಬೇರೆ ಇತ್ತು. ಆಗಿನ ಕಾಲದಲ್ಲಿ ಸ್ವತಃಕ್ಕೆ ಸಂತಾನ ಆಗದೇ ಇದ್ದರೆ "ನಿಯೋಗ" ಮಾರ್ಗದಿಂದ ಸಂತಾನವನ್ನು ಹೊಂದುವುದು, ದತ್ತು ತೆಗೆದುಕೊಳ್ಳುವುದಕ್ಕಿಂತ ಲೇಸೆಂದು ಭಾವಿಸಿದ್ದರು. ಕ್ರಮೇಣ ನಿಯೋಗ ಪದ್ಧತಿಯು ಹಿಂದುಳಿದು ದತ್ತು ತೆಗೆದುಕೊಳ್ಳುವ ವಿಧಾನವೇ ಬಳಕೆಯಲ್ಲಿ ಬಂದಿತು. ಇದರಿಂದ ಹೆಂಗಸರಿಗೆ ಹೆಚ್ಚಿನ ಗೌರವವು ಲಭಿಸಿತೆಂದು ತಿಳಿಯಲಾಗುವುದಿಲ್ಲ. ಈ ಮೊದಲು ಸ್ತ್ರೀಯು 'ಕ್ಷೇತ್ರ' ಎಂದು ಗಣಿಸಲ್ಪಡುತ್ತಿದ್ದಳು. ಅವಳು ಪತಿಯ ಸಮ್ಮತಿಯ ಮೇರೆಗೆ ಅನ್ಯರಿಂದ ಸಂತಾನವನ್ನು ಪಡೆಯಬೇಕಾಗಿತ್ತು. ಕಾಲ ಕ್ರಮೇಣ ಈ ಕಡ್ಡಾಯವು ಇಲ್ಲದಂತಾಯಿತು. ಅದರಂತೆಯೇ ಓರ್ವ ಸ್ತ್ರೀಯಿಂದ ಅವಳ ಕೌಮಾರ್ಯದಲ್ಲಿಯೇ ಆಗಲೀ ವಿವಾಹವಾದ ಮೇಲೆಯೇ ಆಗಲೀ ಪ್ರಮಾದ ಸಂಭವಿಸಿದರೆ ಆಕೆಯನ್ನು ಕ್ಷಮಿಸತಕ್ಕದ್ದು ಎಂಬ ಪ್ರವೃತ್ತಿಯು ಅಡಗಿತು. ಆಕೆಯ ಮೇಲೆ ಬಲಾತ್ಕಾರವಾದಲ್ಲಿ ಆಗಿನ ಕ್ಷತ್ರಿಯರು ಆಕೆಯನ್ನು ತ್ಯಜಿಸುತ್ತಿರಲಿಲ್ಲ. ಆದರೆ ಅನಂತರ ಹಿಂದೂ ಸಮಾಜವು ಮಾತ್ರ ಪಾವಿತ್ರ್ಯದ ಬಗ್ಗೆ ಅದರಲ್ಲಿಯೂ ಕೇವಲ ಸ್ತ್ರೀಯರ ಪಾವಿತ್ರ್ಯದ ಬಗ್ಗೆ ತೀರಾ ಸಂಕುಚಿತ ಭಾವನೆಯನ್ನು, ಮಿತಿಮೀರಿದ ಹಟವಾದವನ್ನು ತಳೆಯಿತು. ಹೀಗಾಗಿ ಹಿಂದೂ ಸಮಾಜವು ಇಂತಹ ಸ್ತ್ರೀಯರ ರಕ್ಷಣೆಗೂ ಅಸಮರ್ಥವಾಯಿತು ಮತ್ತು ಅವರನ್ನು ತನ್ನ ಸಮಾಜದಲ್ಲಿಯೇ ಉಳಿಸಿಕೊಳ್ಳಲು ಹತಬಲವಾಯಿತು. ಸದ್ಯ ಕಾಲದವರೆಗೂ ಇದೇ ದಾರುಣ ಸ್ಥಿತಿಯು ಉಳಿದುಕೊಂಡಿರುವುದು ಭಾರತದ ವಿಭಜನೆಯ ಕಾಲದಲ್ಲಿ [೧೯೪೭] ಅನುಭವಕ್ಕೆ ಬಂದಿತು.

ತಾನು ಜನ್ಮ ತಾಳಿದ ಕುಟುಂಬವು ಮತ್ತು ವಿವಾಹದ ಮೂಲಕ ನೆಂಟಸ್ಥನವನ್ನು ಪಡೆದ ಕುಟುಂಬಗಳು ಈ ರೀತಿಯ ಎರಡು ವಿಶ್ವಗಳಲ್ಲಿ ಜೀವನ ಕಳೆಯುತ್ತಿತ್ತು. ಪೈತೃಕ

ಕುಟುಂಬವೇ ಪ್ರಮುಖ. ಅದರಲ್ಲಿ ಒಳ ಜಗಳಗಳು ಹುಟ್ಟಿದರೇ ನೆಂಟಸ್ಥರು ಸಹಾಯಕ್ಕೆ ಬರುತ್ತಿದ್ದರು. ಕುಟುಂಬ ಪ್ರಮುಖರು ಇಂತಹ ವ್ಯಾಜ್ಯಗಳು ಉಂಟಾಗಬಾರದೆಂದು ಪ್ರಯತ್ನಿಸುತ್ತಿದ್ದರು. ಅನ್ಯಾಯವನ್ನು ಬದಿಗಿಟ್ಟಾದರೂ ಮನೆ ಜಗಳಗಳು ಬಯಲಿಗೆ ಬರಬಾರದು. ತನ್ನ ಹಕ್ಕಿನ ಸೊತ್ತು ಸಹಜರೀತಿಯಲ್ಲಿ ದೊರಕದೇ ಇದ್ದರೂ ಸುಮ್ಮನೇ ಇರಬೇಕು ವಿನಾ ಅದಕ್ಕಾಗಿ ಹಟ ಹಿಡಿಯಬಾರದು ಎಂಬ ಅವರ ಭಾವನೆ. ಆದರೆ ನೆಂಟಸ್ಥರು ಮಾತ್ರ ತಮ್ಮ ಅಳಿಯಂದಿರಿಗಾಗಿ. ಭಾವಂದಿರಿಗಾಗಿ. ಪ್ರಯಾಸ ಪಡುತ್ತಿದ್ದರು. ಪಾಂಡವರ ಬೆಂಬಲಿಗರೆಲ್ಲರೂ ಅವರ ನೆಂಟಸ್ಥರೇ ಇದ್ದರು. ತಾಯಿಯ ತವರಿನವರಾದ ಯಾದವರು, ಪತ್ನಿಯ ತವರಿನಿಂದ ದ್ರುಪದರು, ಸೊಸೆಯ ತವರಿನಿಂದ ವಿರಾಟರು. ಅದೇ ರೀತಿ ತನ್ನ ಸಹೋದರಿಯ ಅಂಧ ಪತಿಗಾಗಿ ಹಾಗೇ ಅವರ ಮಕ್ಕಳಿಗಾಗಿ ಜೀವನವನ್ನೇ ಮೀಸಲಿಟ್ಟ, ಗಾಂಧಾರ ರಾಜನಾದ ಶಕುನಿ ಕೌರವರ ಬೆಂಬಲಿಗೆ ಇದ್ದನು. ಆತನು ಕೌರವರ ನೆಂಟಸ್ಥನೇ!

ಪಿತೃಪ್ರಧಾನ ಕುಟುಂಬವು ಆಗಿನ ಸಮಾಜದ ಆಧಾರ ಸ್ತಂಭವಾಗಿತ್ತು. ಸಾಮಾಜಿಕ ಮೌಲ್ಯಗಳು ಸಮಾಜದ ಅಸ್ತಿತ್ವಕ್ಕಾಗಿ ಇರುತ್ತವೆ. ಇಂತಹ ಕುಟುಂಬಗಳ ಸಂವರ್ಧನೆಗೆ ಅನುಕೂಲವಾಗಿರುವ ಮೌಲ್ಯಗಳು ಆಗಿನ ಸಮಾಜದಲ್ಲಿದ್ದವು. ಪಿತೃಭಕ್ತಿಯು, ಸೌಭ್ರಾತೃವು ಇವೇ ಪುರುಷನ ಮುಖ್ಯ ಗುಣಗಳು. ಪಿತೃಪ್ರಧಾನ ಕುಟುಂಬದಲ್ಲಿ ಜಗಳಗಳು ಇಲ್ಲದಂತೆ ಮಾಡಲು, ಅದು ಸುಸ್ಥಿರವಾಗಿ ಉಳಿಯಲು ಈ ಎರಡು ಗುಣಗಳ ಅವಶ್ಯಕತೆ ಇತ್ತು. ಈ ಕುಟುಂಬದಲ್ಲಿ ಆಜೀವ ವಾಸಕ್ಕೆ ಬಂದ ಸ್ತ್ರೀಯರು ಅನ್ಯಮನೆತನದವರಾಗಿರುತ್ತಿದ್ದರು. ಅದರಲ್ಲಿ ಪಿತೃಭಕ್ತಿಯನ್ನು ಸೌಭ್ರಾತೃವನ್ನು ನಿರೀಕ್ಷಿಸಿರಲಿಲ್ಲ ; ಪತಿಭಕ್ತಿಯನ್ನು ಪತಿಯ ಮನೆತನದ ಅಭಿಮಾನವನ್ನು ಅವರು ವಹಿಸಬೇಕಾಗಿತ್ತು. ಮದುವೆಯಾಗುವವರೆಗೆ ಪಿತೃಕುಲದ ದೊಡ್ಡಸ್ಥಿಕೆಯನ್ನು ಸಾಧಿಸುವುದಕ್ಕೆ ಅವರ ಪಿತೃಭಕ್ತಿಯು ಇರುತ್ತಿತ್ತು. ಆದರೆ ಒಮ್ಮೆ ವಿವಾಹ ಆದನಂತರ ತವರುಮನೆ ಮರೆತು ಸರ್ವಸ್ವವನ್ನು ಪತಿಗಾಗಿ ಅರ್ಪಿಸುವುದು ಮತ್ತು ಆತನ ಕುಲದ ಪ್ರತಿಷ್ಠೆಗಾಗಿ ಹವಣಿಸುವುದು ಇವೇ ಅವಳ ಕರ್ತವ್ಯಗಳು ಆಗಿದ್ದವು. ಮಾತೆಯಾಗಿ ಮಕ್ಕಳ ಆರೈಕೆಯನ್ನು ಮಾಡುವುದು, ಮಡದಿಯಾಗಿ ಪತಿಯನ್ನು ಅನುಸರಿಸುವುದು, ಸೊಸೆಯಾಗಿ ಅತ್ತೆಮಾವಂದಿರ ಸೇವೆಯನ್ನು ಮಾಡುವುದು ಇವೇ ಅವಳ ಆದ್ಯಕರ್ತವ್ಯಗಳಾಗಿದ್ದವು. ಸಾಮಾಜಿಕ ಮೌಲ್ಯಗಳು ಆಯಾ ಕಾಲಕ್ಕೆ ಅನುಗುಣವಾಗಿ ಬಹುಶಃ ಆಧಾರಿತ ಇರುತ್ತವೆ. ದೇಶಕಾಲ ನಿರಪೇಕ್ಷ ಮೌಲ್ಯಗಳು ಇರಲು ಸಾಧ್ಯವೋ? ಎಂಬ ಒಂದು ಪ್ರಶ್ನೆಯು 'ಕೃಷ್ಣ–ವಾಸುದೇವ' ಎಂಬ ಲೇಖನ ಕಾರಣದಿಂದ ಈ ಮೊದಲು ಬಂದಿತ್ತು. ಪೂರ್ಣತಃ ದೇಶಕಾಲ ನಿರಪೇಕ್ಷ್ಯ ಮೌಲ್ಯಗಳು ಇರಲಾರವು ಎಂಬುದಾಗಿ ನಮ್ಮ ತತ್ವಜ್ಞಾನದ ತಳಹದಿ ಇದೆ. ಇದು ತರ್ಕಕರ್ಕಶವೆನಿಸಿದರೂ ಉಚಿತವೆನಿಸುತ್ತದೆ. ಈ ಬಗ್ಗೆ ಮುಂದೆ ಹೇಳಲಾಗಿದೆ. ತುರ್ತುಮಟ್ಟಿಗೆ ಒಂದು ವಿಶಿಷ್ಟ ವರ್ಗದ ಒಂದು ವಿಶೇಷವಾದ ಕುಟುಂಬ ಪದ್ಧತಿಗೆ ಪೋಷಕವಾದ ಮೌಲ್ಯಗಳು ಯಾವ ರೀತಿಯಲ್ಲಿ ಇರುತ್ತವೆಯೋ ಅದೇ

ರೀತಿಯಾಗಿ ಸರ್ವಸಾಮಾನ್ಯವಾಗಿ ಮಾನವ ಜಾತಿಗೆ ಹೊಂದುವ ಮೌಲ್ಯಗಳು ಕೂಡ ಇರುತ್ತವೆ. ಅಂತಹವು ಸಹ ಕಾಲವು ಬದಲಾದಂತೆ ಅಪ್ರಸ್ತುತವೆನಿಸುತ್ತವೆ. ದ್ರೌಪದಿಯ ವಸ್ತ್ರಾಪಹರಣ ಕಾಲದಲ್ಲಿ ಇದೇ ರೀತಿಯ ಮೌಲ್ಯದ ಪ್ರಶ್ನೆಯು ತಲೆದೋರಿತ್ತು. ಯಕ್ಷಪ್ರಶ್ನೆಯ ಪ್ರಕರಣದಲ್ಲಿ ಈ ವ್ಯಾಪಕತೆಯ ಅನುಭವವಾಗುತ್ತವೆ. ಎಲ್ಲರಿಗೂ ಹೊಂದಿಕೊಳ್ಳುವಂತಹ ಒಂದು ಧರ್ಮವೂ ಇದ್ದೇ ಇತ್ತು. ಆದರೆ ಕೃಷ್ಣಾರ್ಜುನರು ಖಾಂಡವವನ ದಹನ ಪ್ರಸಂಗದಲ್ಲಿ ಅದನ್ನು ಮರೆತರೆಂದು ನಾವು ಈಗ ಅಂದುಕೊಳ್ಳುತ್ತೇವೆ. ಆದರೆ ಆ ಹೊತ್ತಿಗೆ ಅವರಿಗೆ ಹಾಗೆ ಅನಿಸಲಿಲ್ಲ. ಪರಮ ವೈಷ್ಣವರಾದ, ಪರಮ ಕರುಣಾಮೂರ್ತಿಯಾದ 'ಸಂತ ತುಕಾರಾಮ್' ಮಹಾರಾಜರು ಒಂದೆಡೆ "ಪುತ್ರನಿಗೆ ತೋರುವ ಮಮತೆಯನ್ನು ದಾಸದಾಸಿಯರಲ್ಲಿಯೂ ಇಡಬೇಕು" ಎಂದು ಹೇಳಿದ್ದಾರೆ. ಆದರೆ ಈಗಿನ ಮಾನವನು 'ದಾಸ' ಮತ್ತು 'ದಾಸಿ' ಎಂಬ ಶಬ್ದಗಳೊಡನೆ ಧ್ವನಿತವಾಗುವ ದಾಸ್ಯವು ಸಮಾಜದಲ್ಲಿರುವುದೇ ಅನ್ಯಾಯವಲ್ಲವೇ? ಎಂದು ಅನ್ನಬಹುದು. ಇದು ಕೊನೆ ಇಲ್ಲದ ವಾದದ ವಿಷಯವಾಗಿದೆ. ಎಲ್ಲಾ ವ್ಯಕ್ತಿಗಳಿಗೆ ಸರಿಸಮಾನವಾದ ನ್ಯಾಯ, ಸಮತೆಯು, ದೊರಕಿದ್ದ ಸಮಾಜವು ಈ ಕಾಲದವರೆಗೂ ಉದ್ಭವಿಸಲೇ ಇಲ್ಲವೆಂದು ಎಲ್ಲಾ ಸೂಕ್ಷ್ಮ ಪರಿಶೀಲಕರಿಗೆ ಮನವರಿಕೆ ಆಗುವುದು. ಇಂತಹ ಸಮಾಜವನ್ನು ನಿರ್ಮಿಸಬಹುದೇ ? ಎಂಬುದಕ್ಕೆ ಉತ್ತರ ಇಲ್ಲಿ ಅಪ್ರಸ್ತುತ.

ಈ ಸಂದರ್ಭದಲ್ಲಿ ಮಹಾಭಾರತದಲ್ಲಿಯ ಕೆಲವು ಘಟನೆಗಳು ಗಮನಿಸುವಂತಿವೆ. ಧೃತರಾಷ್ಟ್ರನು ಮತ್ತು ಪಾಂಡುವು ವಿಚಿತ್ರವೀರ್ಯನ ವಿಧವೆಯರಾದ ರಾಣಿಯರಿಗೆ ನಿಯೋಗದಿಂದ ಹುಟ್ಟಿದ ಮಕ್ಕಳೆಂದು ಹೇಳಲಾಗಿದೆ. ಸ್ಮೃತಿಗಳಲ್ಲಿ ನಿಯೋಗವೆಂದರೆ ವಿಧವೆಯಾದ ಅಣ್ಣನ ಪತ್ನಿಯಲ್ಲಿ ತಮ್ಮನು ಪುತ್ರೋತ್ಪತ್ತಿ ಮಾಡುವುದು. ವ್ಯಾಸನು ಸತ್ಯವತಿಯ ಹಿರಿಯ ಮಗನು. ಆದರೆ ವಿಚಿತ್ರವೀರ್ಯನ ಹಿರಿಯ ಮಲತಾಯಿಯ ಮಗನು. ಹೀಗಿದ್ದರೂ ಸ್ಮೃತಿಯಲ್ಲಿ ಹೇಳಿದ ಪ್ರಕಾರ ಸಂತಾನವನ್ನು ನಿರ್ಮಿಸುವ ಈ ಪ್ರಯೋಗ, ನಿಯೋಗ ಎಂಬ ಕ್ರಿಯೆಯನ್ನು ಅನ್ವಯಿಸುವುದಿಲ್ಲ. ಅವನು ಭಾವ ಮೈದುನನಿದ್ದ ಕಾರಣ ನಿಯೋಗಕ್ಕೆ ಆರಿಸದೇ ಆತನು ಬ್ರಾಹ್ಮಣನಿದ್ದನೆಂದು ಅದಕ್ಕೆ ನಿಯೋಗವೆಂದೆನ್ನಬಹುದು. ಆದರೆ ಈ ರೀತಿಯ ಸತ್ಯವತಿಯ ಮಾತುಗಳು

'ಕೌಸಲ್ಯೆ ದೇವರಸ್ತೇಽಸ್ತಿ ಸೋದ್ಯ ತ್ವಾನು ಪ್ರವೇಕ್ಷ್ಯತಿ'
ಅಪ್ರಮತ್ತಾ ಪ್ರತೀಕ್ಷೈನಂ ನಿಶೀಥೇ ಆಗಮಿಷ್ಯತಿ ॥

ಸೊಸೆಯನ್ನು ವಂಚಿಸಲು ಇರಬಹುದೋ ? ಉದ್ಯೋಗಪರ್ವದಲ್ಲಿ ಕರ್ಣ ಕುಂತಿಯರ ಸಂವಾದದ ಸಮಯದಲ್ಲಿ ಕುಂತಿಯು ಕೌಮಾರ್ಯದಲ್ಲಿ ಹೆತ್ತ ಪ್ರಕರಣಕ್ಕೆ 'ನಿಯೋಗ'ವೆಂಬ ಶಬ್ದವನ್ನು ಬಳಸಿದ್ದಾರೆ. ಈ ಅರ್ಥದ ನಿಯೋಗ ಶಬ್ದವು ಬೇರೆಡೆಯಲ್ಲಿ ಕಂಡುಬರುವುದಿಲ್ಲ. ಅದಕ್ಕೆ ಎರಡು ಉತ್ತರಗಳಿವೆ. (೧) ಕೆಲವು ಸಲ ಪ್ರಮಾದವಾಗಿದ್ದರೂ ಅದಕ್ಕೆ ರೂಢಿಯಲ್ಲಿಯ ಶಬ್ದವನ್ನು ಬಳಸಿ ನಡೆದುಹೋಗಿದ್ದು ಯೋಗ್ಯವೇ ಇತ್ತು ಮತ್ತು

ಅದು ಆಪದ್ಧರ್ಮವೇ ಇತ್ತು ಎಂದು ತೋರಿಸುವುದಿತ್ತು. (೨) ನಿಯೋಗವೆಂಬುದರ ನಿಶ್ಚಿತ ಅರ್ಥವು ಪ್ರಾಪ್ತವಾಗಿರಲಿಲ್ಲ. ಸ್ತ್ರಿಯಲ್ಲಿ ಇಂತಹವನೇ ಸಂತಾನವನ್ನು ನಿರ್ಮಿಸಬೇಕು ಎಂಬ ಕಟ್ಟಳೆ ಇರಲಿಲ್ಲ. ಇವೆರಡರಲ್ಲಿ ಯಾವ ಪರ್ಯಾಯವನ್ನು ಸ್ವೀಕರಿಸಬೇಕು ಎಂಬುದು ಸದ್ಯದ ಮಹಾಭಾರತದ ಆವೃತ್ತಿಯಿಂದ ತಿಳಿಯುವುದಿಲ್ಲ. ಈ ಆವೃತ್ತಿಯು ಯಾವ ಹಸ್ತಲಿಖಿತಗಳ ಆಧಾರದಿಂದ ಸಿದ್ಧಪಡಿಸಲಾಗಿದೆಯೋ ಅದರಲ್ಲಿಯು ತೀರಾ ಪುರಾತನವೆಂದರೆ ಕ್ರಿ.ಪೂ. ೯೦೦–೧೦೦೦ ವರ್ಷದ ಹಿಂದಿನವು. ಈಗ ಸಿದ್ಧಪಡಿಸಲಾದ ಆವೃತ್ತಿಯ ಸಂಪೂರ್ಣ ಪರಿಶೀಲನೆಯಾದ ನಂತರ ಹೊಸ ಆವೃತ್ತಿಯು ಸಿದ್ಧವಾಗಬಹುದಾದರೆ ಆಗ ಅದರಲ್ಲಿ ಇಂತಹ ಪ್ರಶ್ನೆಗಳು ಉತ್ತರಗಳು ದೊರೆಯಬಹುದು.

ಶಲ್ಯನು ತನ್ನ ಸಹೋದರಿಯ ಮಕ್ಕಳ ಪಕ್ಷವನ್ನು ಹಿಡಿದು ಯುದ್ಧಮಾಡದೇ ಆತನು ಕೌರವರ ಪಕ್ಷವನ್ನು ಸೇರಿದ್ದು ಇನ್ನೊಂದು ಘಟನೆ. ಇದರಲ್ಲಿಯ ಒಂದು ದೊಡ್ಡ ಸಮಸ್ಯೆಯೆಂದರೆ ಆಯಾ ಶಬ್ದಗಳಿಗೆ ಸರಿಯಾದ ಅರ್ಥವಾಗದೇ ಇರುವುದು. ಈ ಮೊದಲು ಹೇಳಿದಂತೆ ಮಹಾಭಾರತದಲ್ಲಿ ಸಹೋದರ–ಸಹೋದರಿ ; ತಾಯಿ–ತಂದೆ ಇವರನ್ನು ಸಂಬೋಧಿಸುವ ಶಬ್ದಗಳನ್ನೇ ಇತರ ಎಲ್ಲಾ ಆಪ್ತ ಸಂಬಂಧಿಕರಿಗೆ ಬಳಸಲಾಗಿದೆ. ಹೀಗಾಗಿ ಸಹೋದರನೆಂದು ಸಂಬೋಧಿಸಿದಾಗ ಆತ ನಿಜವಾದ ಸಹೋದರನೋ ಇಲ್ಲವೆ ಮಲತಾಯಿಯ ಮಗನೋ, ಅಥವಾ ಚಿಕ್ಕಪ್ಪ–ದೊಡ್ಡಪ್ಪನ ಮಗನೋ ಎಂಬ ನಿಜಾಂಶವು ಸಂದರ್ಭದ ಹೊರತು ಅರ್ಥವಾಗುವುದಿಲ್ಲ. ಶಲ್ಯ ಮಾದ್ರಿಯ ಖಾಸ ಸಹೋದರ, ಇಲ್ಲವೇ ದೂರದ ಸಂಬಂಧಿಕ. ಚಿಕ್ಕಪ್ಪ–ದೊಡ್ಡಪ್ಪನ ಮಗನೋ ತಿಳಿಯುವುದಿಲ್ಲ. ಸಹೋದರಿಯಾದ ಮಾದ್ರಿಯ ದುರ್ದೈವಿ ಮರಣದಿಂದ ಶಲ್ಯನು ಪಾಂಡವರ ಬಗ್ಗೆ ಕೋಪತಾಳಿದ್ದನೆಂದು ಕೂಡ ಹೇಳಲಾಗುವುದು. ಆ ರೀತಿಯ ಉಲ್ಲೇಖವು ಕೂಡ ಮಹಾಭಾರತದಲ್ಲಿ ಕಾಣುವುದಿಲ್ಲ. ಎರಡನೆಯದಾಗಿ ಯಾವ ಘಟನೆಯು ನಮಗೆ ದುರ್ದೈವಿಯಾಗಿಯೂ ವಿಶೇಷವಾಗಿ ಕ್ರೋಧವನ್ನುಂಟು ಮಾಡುವಂತಹುದು, ಅನಿಸುತ್ತದೆಯೋ ಅದು ಆ ರೀತಿ ಶಲ್ಯನಿಗೆ ಅನಿಸಿರಲಿಕ್ಕಿಲ್ಲ. ಮದ್ರರು ಹೇರಳ ಧನವನ್ನು ತೆಗೆದುಕೊಂಡು ಕನ್ಯೆಯಾದ ಮಾದ್ರಿಯನ್ನು ಅಭಿಷಿಕ್ತ ರಾಜನಾದ ಪಾಂಡುವಿನ ಚಿಕ್ಕ ರಾಣಿಯಾಗಿಯೂ, ಕುಂತಿಯ ಸವತಿಯಾಗಿಯೂ ಕಂಡೂಕಂಡೂ ಕೊಟ್ಟಿದ್ದರು. ಅವಳು ಮಕ್ಕಳನ್ನು ಪಡೆದಿದ್ದಳು. ಪತಿಯೊಡನೆ ಸಹಗಮನ ಮಾಡಿದ್ದು, ಅವಳಾಗಿ ಅಂಗೀಕರಿಸಿದ ಆಗಿನ ಎಲ್ಲಾ ಕ್ಷತ್ರಿಯ ಸ್ತ್ರೀಯರು ಅನುಸರಿಸುತ್ತಿದ್ದ ಮಾರ್ಗವಾಗಿತ್ತು. ಮಾದ್ರಿಯ ಮರಣದ ನಂತರ ಅವಳ ಮಕ್ಕಳನ್ನು ಮಲತಾಯಿಯಾದ ಕುಂತಿ ಹಾಗೂ ಸಹೋದರರು ಬಹಳ ಆತ್ಮೀಯತೆಯಿಂದ ನೋಡಿಕೊಂಡಿದ್ದರು. ಆದ್ದರಿಂದ ಮಿಂಚಿಹೋದ ಘಟನೆಗಳ ಬಗ್ಗೆ ಕ್ರೋಧ ತಾಳುವುದರಲ್ಲಿ ಹುರುಳಿದ್ದಿಲ್ಲ. ಈ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ಮದ್ರಬಾಹ್ಲಿಕರು ; ಮತ್ತು ಹಸ್ತಿನಾಪುರದ ಮನೆತನದವರಲ್ಲಿ ಪರಂಪರಾಗತವಾಗಿದ್ದ ಸಂಬಂಧಗಳು ಪ್ರತೀಪರಾಜನ ಓರ್ವ ರಾಣಿ ಮದ್ರಕನ್ಯೆಯೇ

ಆಗಿದ್ದಳು. ಅವಳ ಒಬ್ಬ ಪುತ್ರ ಮದ್ರರ ಮನೆತನಕ್ಕೆ ದತ್ತು ಹೋಗಿದ್ದ. ಆತ ಶಂತನುವಿನ ಮಲ ತಾಯಿಯ ಮಗ. ಆತನ ಮೊಮ್ಮಗ ಇಲ್ಲವೇ ಮರಿಮಗನಾದ ಸೋಮದತ್ತಿ ಕೌರವರ ಸಭೆಯಲ್ಲಿದ್ದ. ಅವರ ಪತಿಯಿಂದ ಯುದ್ಧ ಮಾಡಿದ. ಈ ಸೋಮದತ್ತಿಯು ಶಲ್ಯನ ದೊಡ್ಡಪ್ಪ. ಇಲ್ಲವೆ ಚಿಕ್ಕಪ್ಪ ಆಗಿರಬೇಕು. ಹಿರಿಯರು ಸೇರಿದ ಪಕ್ಷದಲ್ಲಿಯೇ ತಾನು ಇರಬೇಕೆಂದು ಶಲ್ಯ ಭಾವಿಸಿರಬೇಕು. ಹೀಗಾಗಿ ಪಾಂಡವರ ಮೇಲೆ ಕೋಪ ಹೊಂದಿದ್ದ ಅಥವಾ ಸಹೋದರಿಯ ಮಕ್ಕಳಿಗೆ ದ್ರೋಹ ಬಗೆದ; ಎಂದು ಹೇಳಲಾಗುವುದಿಲ್ಲ. ಈ ಯುದ್ಧ ವಿಪರೀತಯುದ್ಧವೇ ಆಗಿತ್ತು. ಅದರಲ್ಲಿ ನ್ಯಾಯ–ಅನ್ಯಾಯದ ವಿಚಾರಣೆಗಿಂತ ತನ್ನವರು ಯಾರು? ಇದೊಂದೇ ಸಂಗತಿಯ ಮೇಲಿಂದ, ಯಾರು ಯಾವ ಪಕ್ಷವನ್ನು ವಹಿಸಿ ಕಾದಿದರು? ಎಂಬುದನ್ನು ಹೇಳಬೇಕಾಗುತ್ತದೆ. ಇದೊಂದೇ ಯುದ್ಧದಲ್ಲಿ ಎಂದಲ್ಲ, ಜಗತ್ತಿನ ಎಲ್ಲಾ ಚಿಕ್ಕಪುಟ್ಟ ಯುದ್ಧಗಳಲ್ಲಿಯೂ ಇದೇ ರೀತಿ ನಡೆದಿರುತ್ತದೆ. ನ್ಯಾಯವೆಲ್ಲವು ಒಂದೆಡೆ ! ಅನ್ಯಾಯವೆಲ್ಲವು ಇನ್ನೊಂದೆಡೆ!! ಈ ರೀತಿ ಇರುವುದೇ ಇಲ್ಲ.

ಮಹಾಭಾರತದಲ್ಲಿ ಇನ್ನೊಂದು ಪ್ರಸಂಗವು ಆಗಿನ ಜೀವನ ಮೌಲ್ಯಗಳ ಪ್ರಶ್ನೆಯನ್ನು ಮತ್ತೊಮ್ಮೆ ತೀವ್ರವಾಗಿ ಕಣ್ಣ ಮುಂದೆ ಇಡುತ್ತದೆ. ಪಿತೃಭಕ್ತಿ, ಸದ್ಗುಣಗಳಲ್ಲಿ ಪ್ರಮುಖ ಗುಣ. ಪಿತೃಕುಲವನ್ನು ನೋಡಿಕೊಳ್ಳುವುದು, ಅದನ್ನು ರಕ್ಷಿಸುವುದು ಇವೇ ಆದ್ಯ ಕರ್ತವ್ಯಗಳು ಎಂದು ಆಗಿನ ಸಮಾಜದ ಮೌಲ್ಯಗಳಾಗಿದ್ದವು. ಆದರೆ ಈ ತತ್ವಗಳ ಮೇರೆ ಹಲವು ದೃಷ್ಟಿಗಳಿಂದ ಬಹಳ ವಿಸ್ತೃತವಾಗಿಯೂ ಅಂದರೆ ಕುಟುಂಬದ ಮೇರೆಯನ್ನು ದಾಟಿ ಅಥವಾ ಒಂದು ಸಮಾಜದ ಮೇರೆಯನ್ನು ದಾಟಿ ಇರಬಹುದು. ಇನ್ನೊಂದು ದೃಷ್ಟಿಯಿಂದ ಪೂರ್ಣತಃ ವ್ಯಕ್ತಿಗತವಾಗಿಯೂ ಇರಬಹುದು. ಭೀಷ್ಮನ ಚರಿತ್ರೆಯಲ್ಲಿ ನ್ಯಾಯ–ಅನ್ಯಾಯಗಳಿಗೆ ಪ್ರಾಧಾನ್ಯವಿಲ್ಲ. ಕುಲರಕ್ಷಣೆಯೇ ಆತನಿಗೆ ದೊಡ್ಡ ಹೊಣೆ ಎನಿಸುತ್ತಿತ್ತು. ಪಾಂಡವರ ಪಕ್ಷ ನ್ಯಾಯವಾದದ್ದೋ, ಕೌರವರ ಪಕ್ಷ ನ್ಯಾಯವಾದದ್ದೊ ಎಂಬ ವಾದದಲ್ಲಿ ಆತ, ವಿದುರನಷ್ಟು ಆಳವಾಗಿ ಯೋಚಿಸಲಿಲ್ಲ. ಆತ, ಪ್ರಮುಖ ಕುಟುಂಬದ ರಕ್ಷಣೆಯನ್ನು ಮಾಡಿದ. ಅಲ್ಲಿಯೇ ಆತ ಬೆಳೆದ. ಯುದ್ಧಮಾಡುವವನಂತೆ ನಟಿಸಿದ. ತೋರಿಕೆಗಾದರೂ ಆ ಪಕ್ಷವನ್ನು ವಹಿಸಿದ್ದ. ಪಿತನಾದ ಶಂತನುವಿಗಾಗಿ ಸರ್ವಸ್ವವನ್ನು ತ್ಯಜಿಸಿ ಪಿತೃಭಕ್ತಿಯನ್ನು ತೋರಿದ. ವಿಚಿತ್ರವೀರ್ಯನ ಮರಣದ ನಂತರ ಭೀಷ್ಮನಿಗೆ ರಾಜನಾಗಲು ಒತ್ತಾಯ ಮಾಡಿದ್ದಾಯಿತು. ಸಹೋದರನ ವಿಧವೆಯರಾದ ರಾಣಿಯಲ್ಲಿ ಸಂತಾನವನ್ನು ನಿರ್ಮಿಸಲು ಬಿನ್ನವಿಸಲ್ಪಟ್ಟಾಗ ಆತ ಕಿವಿಗೊಡಲಿಲ್ಲ. ಕುಲವೃದ್ಧಿಗಾಗಿ ಆತ ಕೀಳುದರ್ಜೆಯ ಮಾರ್ಗವನ್ನು ಅನುಸರಿಸಿದನೇ ವಿನಾ ತನ್ನ ಪ್ರತಿಜ್ಞೆಯನ್ನು ಬಿಡಲಿಲ್ಲ. ಲೋಕದೃಷ್ಟಿಯಿಂದ ಕುಟುಂಬದ ಮತ್ತು ಕುಲದ ರಕ್ಷಣೆಯು ಕರ್ತವ್ಯವೇ ಇದ್ದರೂ ಆ ಕರ್ತವ್ಯಗಳಿಗಿಂತ ಆತನಿಗೆ ಪ್ರತಿಜ್ಞೆಯ ಬಂಧನವೇ ಅಧಿಕವೆನಿಸಿತು. ಈ ಅಂತಿಮ ಮೌಲ್ಯವು ತಾತ್ಕಾಲಿಕವೋ? ಚಿರಕಾಲಿಕವೋ? ಉಪಯೋಗ ಉಳ್ಳದ್ದೋ? ಉಪಯೋಗ ಇರದಿರುವುದೋ? ಎಂಬುದರ ಬಗ್ಗೆ ಆತ ಯೋಚಿಸಲಿಲ್ಲ. ಈ ಮೌಲ್ಯವು

ಆತನ ವೈಯಕ್ತಿಕ ಭಾಗವಾಗಿತ್ತು. ಅದನ್ನು ಆತ ನೆರವೇರಿಸಿದ. ಮೌಲ್ಯದ ಪರಮ ಮೇರೆಯನ್ನು ಭೀಷ್ಮ ತೋರಿಸಿಕೊಟ್ಟ.

ಸಮಾಜ ವ್ಯವಸ್ಥೆಯ ಒಂದು ಅಂಗವಾಗಿ ಆಗಿನ ರಾಜಕೀಯ ಪರಿಸ್ಥಿತಿಯನ್ನು ಬಣ್ಣಿಸಬಹುದು. ಕೃಷ್ಣ ವಾಸುದೇವ ಎಂಬ ಪ್ರಕರಣದಲ್ಲಿ ಈ ಬಗ್ಗೆ ಉಲ್ಲೇಖವು ಬಂದಿದೆ. ರಾಜ್ಯಗಳು ಚಿಕ್ಕ ಚಿಕ್ಕವಾಗಿದ್ದವು. ಸುತ್ತಲೂ ಕಾಡುಗಳು ಇರುತ್ತಿದ್ದವು. ಪ್ರತಿಯೊಂದು ರಾಜ್ಯದಲ್ಲಿ ವಂಶಪರಂಪರಾಗತವಾಗಿ ಬಂದ ಪುರುಷ, ಅಧಿಪತಿಯಾಗಿರುತ್ತಿದ್ದ. ಅನೇಕ ರಾಜ್ಯಗಳನ್ನು ಗೆದ್ದುಕೊಂಡು, ಪ್ರದೇಶಗಳನ್ನು ವಶಮಾಡಿಕೊಂಡು ಸಾಮ್ರಾಜ್ಯವನ್ನು ಸ್ಥಾಪಿಸುವ ರೂಢಿಯು ಇರಲಿಲ್ಲ. ಜರಾಸಂಧ ಸಮ್ರಾಟನಾಗಿದ್ದ. ಆತ, ಉತ್ತರ ಮತ್ತು ಪಶ್ಚಿಮದಿಕ್ಕಿನಲ್ಲಿದ್ದ ರಾಜ್ಯಗಳನ್ನು ವಶಮಾಡಿಕೊಂಡಿದ್ದ ಬಗ್ಗೆ ಆಧಾರಗಳಿಲ್ಲ. ಕರ್ಣ, ಅಂಗ ದೇಶದ ರಾಜನಾಗಿದ್ದ. ಹೀಗಿದ್ದುದರಿಂದ ಜರಾಸಂಧ ಮಗಧದ ನೆರೆಯ ರಾಜ್ಯಗಳನ್ನು ಕೂಡ ಜಯಿಸಿರಲಿಲ್ಲವೆಂದು ಸ್ಪಷ್ಟವಾಗುತ್ತದೆ. ಆದರೆ ಆತ ಸದಾ ಕಾಲವು ಯುದ್ಧದಲ್ಲಿ ತೊಡಗಿದ್ದ. ಅನೇಕ ರಾಜರುಗಳನ್ನು ಸೆರೆಯಲಿಟ್ಟಿದ್ದ ಎಂದು ತೋರುತ್ತದೆ. ಆತ ಅತಿ ಬಲಾಢ್ಯ, ಎಲ್ಲರಿಗೂ ಮೀರಿದವನಾಗಿದ್ದ. ಯಾದವ–ಮತ್ಸ್ಯ ಮುಂತಾದವರು ಅವನ ಭೀತಿಯಿಂದ ತಮ್ಮ ಪ್ರದೇಶವನ್ನು ಬಿಟ್ಟು ಹೋಗಬೇಕಾಯಿತು. ಇದರಿಂದ ಜರಾಸಂಧ ಅವರ ಪ್ರದೇಶವನ್ನು ಗೆದ್ದುಕೊಂಡಿರಬಹುದೆಂದು ಅನಿಸುತ್ತದೆ. ಅವನನ್ನು ಕೊಂದ ಹೊರತು ಧರ್ಮರಾಜ ರಾಜಸೂಯ ಯಜ್ಞವನ್ನು ಮಾಡುವುದು ಸಾಧ್ಯವಿರಲಿಲ್ಲ. "ರಾಜಸೂಯ" ಯಜ್ಞವೆಂದರೆ ಸಮ್ರಾಟಪದದ* ದ್ಯೋತಕವಾಗಿಯೇ ಇತ್ತು. ಆದರೆ ಅದನ್ನು ದೊರಕಿಸಲು ಧರ್ಮರಾಜ ಯಾರ ರಾಜ್ಯವನ್ನೂ ಕಬಳಿಸಲಿಲ್ಲ. ಸರಿಸಮಾನ ರಾಜರಲ್ಲಿ 'ಶೌರ್ಯ', 'ಔದಾರ್ಯ', ಸದ್ಗುಣಗಳಲ್ಲಿ ಅಗ್ರೇಸರನಾದವನು ರಾಜಸೂಯ ಯಜ್ಞವನ್ನು ಆಚರಿಸುತ್ತಿದ್ದ. ಕೆಲವು ರಾಜರನ್ನು ಜಯಿಸಿ, ಕೆಲವು ರಾಜರನ್ನು ವಶಮಾಡಿಕೊಂಡು ಮತ್ತೆ ಹಲವರನ್ನು ಆಪ್ತೇಷ್ಟರೆಂದೂ ಈ ರೀತಿ ಎಲ್ಲರಿಂದ ಮಾನ್ಯತೆಯನ್ನು ಪಡೆಯಲು ಶೌರ್ಯದಂತೆ ದಾತೃತ್ವವು ಅವಶ್ಯಕವಾಗಿತ್ತು. ರಾಜ ಮಹಾರಾಜರಿಗೆ ಅತಿಥಿಗಳೆಂದು ಔತಣವಿತ್ತು ಯೋಗ್ಯ ರೀತಿಯಲ್ಲಿ ಅವರನ್ನು ಸತ್ಕರಿಸಬೇಕಾಗಿತ್ತು. ಸಹಸ್ರಾರು ಬ್ರಾಹ್ಮಣರಿಗೆ ಮತ್ತು ಇತರರಿಗೆ ದಕ್ಷಿಣೆಯನ್ನು ಕೊಡಬೇಕಾಗುತ್ತಿತ್ತು. ಈ ರೀತಿ ಅಗ್ರೇಸರನೆಂದು ಅನಿಸಿಕೊಳ್ಳುವ ಪ್ರಯಾಸಪಡುವ ರೂಢಿ ಇತರ ಮಾನವ ಸಮಾಜಗಳಲ್ಲಿಯೂ ಕಂಡುಬರುತ್ತದೆ, ಅದಕ್ಕಾಗಿ ರಾಜಸೂಯ ಯಜ್ಞದಂತಹ ಸಾಮಾಜಿಕ ಸಂಕೇತಗಳು ಬಳಕೆಯಲ್ಲಿದ್ದವೆಂದು ತೋರುತ್ತವೆ.

'ಅಕಿಂಚನತ್ವಂ ಮುಖಜಂ ವ್ಯನಕ್ತಿ' ಇದು ಕೇವಲ ಕವಿಕಲ್ಪನೆ ಅಲ್ಲ. ಈ ತರಹದ ಅಕಿಂಚನತ್ವವು ಸಮಾಜದಲ್ಲಿಯ ಒಂದು ಪ್ರತಿಷ್ಠಿತ ಲಕ್ಷಣವೆನಿಸುತ್ತಿತ್ತು. ಇಂತಹ ಕಲ್ಪನೆಯು ಮಾನವರ ಎಲ್ಲ ಸಮಾಜಗಳಲ್ಲಿ ರೂಢಿಯಲ್ಲಿದೆ. ಶ್ರೀಹರ್ಷ ಪ್ರತಿ ಆರು

---

* 'ಸಮ್ರಾಟ' ಎಂಬ ಶಬ್ದದ ಮೂಲ ಅರ್ಥವು ಒಳ್ಳೆಯ ಅರಸ.

ವರ್ಷಕ್ಕೊಮ್ಮೆ ತನ್ನ ಸರ್ವಸ್ವವನ್ನು ದಾನಮಾಡುತ್ತಿದ್ದನೆಂಬ ವರ್ಣನೆ ಇದೆ* ಒಂದು ಕಾಲದಲ್ಲಿ ರಾಜಸೂಯ ಯಜ್ಞವು ಒಂದು ತಲೆಮಾರಿನಲ್ಲಿ ಒಂದೇ ಸಲ ನಡೆಯಬೇಕಿತ್ತು. ಹೀಗಾಗಿ ದುರ್ಯೋಧನನಿಗೆ ಅದನ್ನು ಮಾಡಲು ಬರುವಂತಿರಲಿಲ್ಲ. ಇದೇ ನಿಯಮವೇ ಅಶ್ವಮೇಧ ಯಜ್ಞದ ಬಗ್ಗೆಯೂ ಇತ್ತು. ಯಾದವರಲ್ಲಿ ವಸುದೇವ ಅಶ್ವಮೇಧಯಾಗವನ್ನು ಮಾಡಿದ. ಕುರುಕುಲದಲ್ಲಿ ಧರ್ಮರಾಜ ಮಾಡಿದ. 'ಸರೀಕರಲ್ಲಿ ಶ್ರೇಷ್ಠನು' ಎಂಬುದು ಈ ಸಂದರ್ಭದ ದ್ಯೋತಕವಾಗಿದೆ. ಮಹಾಭಾರತೀಯ ಯುಗದ ನಂತರ ಉತ್ತರ ಭಾರತದಲ್ಲಿ ಅನೇಕ ದೊಡ್ಡ–ದೊಡ್ಡ ಸಾಮ್ರಾಜ್ಯಗಳು ಉದಯಿಸಿದವು. ಬುದ್ಧನ ಕಾಲದಲ್ಲಿ 'ಪಸೆನದಿ ಕೋಸಲ್' ಎಂಬ ಸಮ್ರಾಟನಿದ್ದನು. ಆನಂತರ ಮಗಧ ದೇಶದಲ್ಲಿಯೇ ಒಬ್ಬರ ತರುವಾಯ ಇನ್ನೊಬ್ಬರಂತೆ ಮೌರ್ಯರು, ಗುಪ್ತರು ಸಾಮ್ರಾಜ್ಯಗಳನ್ನು ನೆಲೆಸಿದರು. ಈ ಸಮ್ರಾಟಪದದಲ್ಲಿ ಸಮ್ರಾಟರ ಅನಿರ್ಬಂಧ ವರ್ಚಸ್ವವಿರುತ್ತಿತ್ತು. ಸರಿಕರಲ್ಲಿ ಶ್ರೇಷ್ಠ ಎಂಬ ನಿಯಮವು, ಗಂಗೆಯ ಕೊಳದಲ್ಲಿ ಇಲ್ಲದಂತಾಯಿತು. ಆದರೆ ಅದು ಇನ್ನಿತರ ಅನೇಕ ಮಾನವ ಸಮಾಜಗಳಲ್ಲಿ ಕಂಡುಬರುತ್ತದೆ. ಉತ್ತರದಲ್ಲಿಯ ಪಶುಪಾಲಕರ ತಂಡಗಳಲ್ಲಿ ಈ ನಿಯಮವು ತೀರಾ ಮಧ್ಯಯುಗದವರೆಗೆ ಕಂಡುಬರುತ್ತಿತ್ತು. ಜರ್ಮನಿ ದೇಶದಲ್ಲಿ ಬಿಸ್ಮಾರ್ಕನ ಕಾಲದವರೆಗೆ ಅಸ್ತಿತ್ವದಲ್ಲಿದ್ದ ಚಿಕ್ಕಪುಟ್ಟ ರಾಜ್ಯಗಳು ಇದೇ ಮಾದರಿಯವಾಗಿದ್ದವು. ಭಾರತದಲ್ಲಿ ಒಂದು ಸಾಮ್ರಾಜ್ಯದ ಅನಂತರ ಇನ್ನೊಂದು ಸಾಮ್ರಾಜ್ಯವು ಏಳಿಗೆಗೆ ಬರುತ್ತಿದ್ದರೂ ಎಷ್ಟೋ ಚಿಕ್ಕಚಿಕ್ಕ ಜಾತಿ ಸಮೂಹಗಳಲ್ಲಿ, ಮೇಲೆ ಹೇಳಿದ ನಿಯಮ. ಅದರೊಡನೆಯೇ ಕಂಡುಬರುವ ಮೌಲ್ಯಗಳು ಹಾಗೆಯೇ ವಿಚಾರಸರಣಿ ಗೋಚರವಾಗುತ್ತದೆ. ರಜಪೂತ ರಾಜಮನೆತನಗಳಲ್ಲಿಯೂ ಪರಸ್ಪರ ಸಂಬಂಧಗಳು ಇದೇ ರೀತಿಯಾಗಿದ್ದವು. ಮರಾಠಾ ಮನೆತನಗಳ ಸಂಬಂಧಗಳು ಇದೇ ರೀತಿಯವಾಗಿದ್ದವು. ಶಿವಾಜಿಗೆ ಔರಂಗಜೇಬನಂತಹ ಪರಕೀಯ ರಾಜನೊಡನೆ ಕಾದುವುದು ದುಸ್ತರವಾದಂತೆ ಸ್ವಕೀಯರಾದ ಮರಾಠಾಕುಲದವರಿಂದ "ಎಲ್ಲರ ಪ್ರಮುಖನಾದ ರಾಜ" ಎಂದು ಅನಿಸಿಕೊಳ್ಳುವುದು ಹೆಚ್ಚಾಗಿ ಕಠಿಣವಾಯಿತು. ಮೊದಲಿನಿಂದ ಬಂದ ಪದ್ಧತಿ ಇಲ್ಲವೇ ವ್ಯವಸ್ಥೆ ಮತ್ತು ಮೊದಲಿನ ಮೌಲ್ಯಗಳು ಹಳೆಯವೆಂದು ಸಂಪೂರ್ಣವಾಗಿ ಎಂದಿಗೂ ತ್ಯಾಜ್ಯವಾಗುವುದಿಲ್ಲ. ಜನನಿಗೆ ಮೊದಲು ಬಂದ ಅನುಭವಗಳ ರೀತಿಯಲ್ಲಿಯೇ ಅದೇ ರೀತಿಯ ಅನುಭವಗಳು ಮರಳಿಮರಳಿ ಬಂದಾಗ ಈ ಹಳೆಯ ಮೌಲ್ಯಗಳನ್ನು, ಹಳೆಯ ಪದ್ಧತಿಗಳನ್ನು ಜ್ಞಾಪಿಸಿಕೊಳ್ಳುವುದು ಉಪಯುಕ್ತವಾಗುತ್ತದೆ. ಜಗತ್ತಿನಲ್ಲಿಯ ಸದ್ಯದ ಪರಿಸ್ಥಿತಿಯಲ್ಲಿ ಪ್ರಬಲ ಸಾಮ್ರಾಜ್ಯಗಳು ಅಳಿದುಹೋಗಿರುವುದರಿಂದ ಸಮಕಾಲೀನವಾದ ಅನೇಕ ಘಟಕಗಳು ಯಾವ ರೀತಿಯಲ್ಲಿ ಒಂದೆಡೆ ಬಾಳಬೇಕು ಎಂಬುದನ್ನು ಅರಿತುಕೊಳ್ಳುವ ಪ್ರಾಚೀನ ಭಾರತೀಯರ ಮುಂದೆ ಇದ್ದ ಸಮಸ್ಯೆಯೇ ನಮ್ಮ ಮುಂದೆ ಇದ್ದಂತೆ ಕಾಣುತ್ತದೆ.

---

* ಅಮೆರಿಕನ್ ಇಂಡಿಯನ್ ಜನರಲ್ಲಿ ಪೋಟಲ್ಯಾಚ್ ಎಂದು ಒಂದು ಕಾರ್ಯವು ಇರುತ್ತದೆ.

ಮಹಾಭಾರತದಲ್ಲಿಯ ದೈವತ ಕಲ್ಪನೆಯು ಹೆಚ್ಚಾಗಿ ವೇದ ಬ್ರಾಹ್ಮಣ ಕಾಲದಲ್ಲಿಯದು ವಿನಾ ಪುರಾಣಕಾಲೀನವಲ್ಲ. ಮಹಾಭಾರತದಲ್ಲಿ ಮೂರ್ತಿಗಳ, ಗುಡಿಗೋಪುರಗಳ ಉಲ್ಲೇಖವಿಲ್ಲ.* ಶಿವಸ್ತೋತ್ರ ಮತ್ತು ವಿಷ್ಣು–ಸಹಸ್ರನಾಮ ಅಥವಾ ಸೂರ್ಯನ ನಾಮಾವಲಿಯು ಅನಂತರ ಅಡಕವಾದಂತಿದೆ ಮತ್ತು ಪ್ರಕ್ಷಿಪ್ತವೆನಿಸುತ್ತದೆ. ಇವು ಭಂಡಾರ್‌ಕರ್ ಇವರ ಆವೃತ್ತಿಯಲ್ಲಿ ಬಂದಿದ್ದರೂ ಅವು ಪ್ರಕ್ಷಿಪ್ತವೇ ಎನ್ನುವುದರಲ್ಲಿ ಸಂದೇಹವಿಲ್ಲ! ಪ್ರಾತಃಕಾಲದ ಮತ್ತು ಸಾಯಂಕಾಲದ ಸೂರ್ಯ ಪೂಜೆಯು ಮೇಲ್ಕಾಣಿಸಿದ ಮೂರು ದೇವತೆಗಳಲ್ಲಿ ಪುರಾತನ ಪೂಜೆ ಇರಬಹುದು. ತ್ರ್ಯಂಬಕ ಅಥವಾ ಶಿವ ಅನಂತರದವ. ಶಾಂತಿ ಪರ್ವದಲ್ಲಿ ಕಂಡುಬರುವ ವಿಷ್ಣು ಸಹಸ್ರನಾಮ ಎಲ್ಲದರಲ್ಲಿ ಕೊನೆಯದಿರಬೇಕು. ಮಹಾಭಾರತ ಕಾಲದಲ್ಲಿಯ ಧರ್ಮ, ಯಜ್ಞಪ್ರಧಾನವಿರಬೇಕು. ರಾಜಪುರೋಹಿತ ಅಗ್ನಿಯನ್ನು ಪ್ರಜ್ವಲಿತವಾಗಿರಿಸಿ ಪ್ರತಿ ದಿನವೂ ಆಹುತಿಗಳನ್ನು ಅರ್ಪಿಸುತ್ತಿದ್ದ. ಯಜ್ಞದಲ್ಲಿ ಪಶುಗಳ ಆಹುತಿ ನಡೆಯುತ್ತಿತ್ತು. ಅಶ್ವಮೇಧ ಯಾಗದಲ್ಲಿಯಂತೂ ಅದು ಅವಶ್ಯಕವಿತ್ತು. ಇತರ ಯಜ್ಞಗಳಲ್ಲಿಯೂ ಪಶುಗಳ ಆಹುತಿಯು ಇರಲೇಬೇಕು. ಹೀಗಿದ್ದರೂ ಮಹಾಭಾರತ ನಂತರದ ಕಾಲದಲ್ಲಿ ಯಜ್ಞಕ್ರಿಯೆಗಳಿಗೆ ಲಭಿಸಿದ ಮಹತ್ವವು ಮಹಾಭಾರತ ಕಾಲದಲ್ಲಿ ಇಷ್ಟೊಂದು ಇರಲಿಲ್ಲ. ಇಂದ್ರ, ಸೂರ್ಯ, ರುದ್ರ ಇವರನ್ನು ದೇವತೆಗಳೆಂದು ಭಾವಿಸಿದ್ದರು. ಅವರಿಗೆ ಅಗ್ನಿಯ ಮುಖಾಂತರ ಹವಿರ್ಭಾಗವನ್ನು ತಲುಪಿಸುತ್ತಿದ್ದರು. ಸ್ವರ್ಗ ಮತ್ತು ಇಂದ್ರ ಲೋಕಗಳಿದ್ದವೆಂದು ತಿಳಿದುಕೊಂಡಿದ್ದರು. ನರಕದ ಬಗ್ಗೆ ಇದ್ದ ಕಲ್ಪನೆಯು ಅಸ್ಪಷ್ಟವಾಗಿದೆ. ಆದರೂ ನರಕವಿದೆ ಎಂದು ಅವರು ತಿಳಿದುಕೊಂಡಿರಬಹುದು. ಪಿತೃಶ್ರಾದ್ಧವಿತ್ತು. ಪುನರ್ಜನ್ಮದ ಮೇಲೆ ಹಾಗು ಕರ್ಮದ ಮೇಲೆ ವಿಶ್ವಾಸವಿತ್ತು. ಅದರಂತೆಯೇ ಆತ್ಮಾನಾತ್ಮವಿಚಾರ, ಧರ್ಮ ಯಾವುದು? ಅಧರ್ಮ ಯಾವುದು ? ಈ ವಿಚಾರವು ಪದೇಪದೇ ಬರುತ್ತದೆ.

ಧರ್ಮದ ಬಗ್ಗೆ ಪದೇಪದೇ ಇಷ್ಟೊಂದು ಊಹಾಪೋಹ ನಡೆದರೂ ಧರ್ಮದ ವ್ಯಾಖ್ಯೆ, ಕೃತಿ, ರೂಪ ಮತ್ತು ಅಂಗರಂಗವು ಸ್ಪಷ್ಟವಾಗಲೇ ಇಲ್ಲ. ಮಹಾಭಾರತದಲ್ಲಿ

---

* [ದೇವಾಯತನೆಂಬ ಶಬ್ದವು ನಾಲ್ಕು ಸಲ ಬಂದಿದೆ. ಆದಿಪರ್ವ ೬೪.೪೦, ಅನುಶಾಸನ ೧೦.೧೮. ಆಶ್ವಮೇಧಿಕ ೬೯.೧೫, ಭೀಷ್ಮಪರ್ವ ೧೦೮.೧೧. ಅದರಂತೆ ಭೀಷ್ಮ ಪರ್ವದ ೧೦೮ನೆಯ ಅಧ್ಯಾಯದಲ್ಲಿ ವಿವಿಧ ಅಶುಭಕಾರಿ ಸೂಚನೆಗಳು ಯಾವ ರೀತಿಯಲ್ಲಿ ಕಂಡುಬಂದವು ಎನ್ನುವ ವರ್ಣನೆ ಇದೆ. ಅದರಲ್ಲಿ ದೇವಾಯತನದಲ್ಲಿಯ ದೇವತೆಗಳು ಕಂಪಿಸಿದವು. ನಕ್ಕವು, ಅತ್ತವು, ಕುಣಿದವು ಎಂಬ ವರ್ಣನೆ ಇದೆ. ಈ ರೀತಿಯ ವರ್ಣನೆಗಳು ಈ ನಂತರದ ಕಾಲದಲ್ಲಿ ಕಂಡುಬರುವ ಪಡಿ ಅಚ್ಚಿನ ವರ್ಣನೆಯನ್ನು ಹೋಲುತ್ತವೆ. ಆದ್ದರಿಂದ ಅವನ್ನು ನಂತರ ಸೇರಿಸಿದಂತೆ ಕಾಣುತ್ತದೆ. ಭೀಷ್ಮಪರ್ವದಲ್ಲಿಯ ಒಂದು ಶ್ಲೋಕವು ತೀರಾ ಆನಂತರದ ಕಾಲದ್ದು ಅನಿಸುತ್ತದೆ. ಅದರಲ್ಲಿಯ ಕುಲದೈವತ ಇಲ್ಲವೇ ಒಬ್ಬನ ವೈಯಕ್ತಿಕ ದೈವತವು ಎಂಬ ಕಲ್ಪನೆಗಳು ಉತ್ತರ ಕಾಲಿನ ಸಂಸ್ಕೃತ ವಾಙ್ಮಯದಲ್ಲಿ ಹಲವು ಬಾರಿ ಬರುತ್ತವೆ. ಮಹಾಭಾರತದಲ್ಲಿ ಈರೀತಿ ಒಂದೇ ಸಲ ಬಂದ ಈ ಕಲ್ಪನೆಯ ಇತರ ಸಂಗತಿಗಳನ್ನು ಅನುಲಕ್ಷಿಸಿಲ್ಲ.

ದೇವತಾಯತನಸ್ಥ ಶ್ಚ ಕೌರವೇಂದ್ರಸ್ಥಾ ದೇವತಾಃ !
ಕಂಪಂತೇ ಚ ಹಸಂತೇ ಚ ನೃತ್ಯಂತಿ ಚ ರುದಂತಿ ಚ ॥

ಕಂಡುಬರುವ ತಾತ್ವಿಕ ಊಹಾಪೋಹದಲ್ಲಿಯ ಈ ದೃಢತೆಯು ಮುಂದಿನ ಕಾಲದಲ್ಲಿ ಉಳಿಯಲಿಲ್ಲ. ಭಕ್ತಿಮಾರ್ಗದ ಕಾರಣದಿಂದ ಇಂತಹ ಎಲ್ಲ ವಿಚಾರಗಳ ತೀಕ್ಷ್ಣತೆಯೂ ಮಂದವಾಯಿತು. ಹಲವು ದೃಷ್ಟಿಗಳಿಂದ ಧರ್ಮದ ಸಾಧಾರಣ ಸ್ವರೂಪವು ಮೊದಲಿನಂತೆಯೇ ಉಳಿಯಿತು. ಈ ಧರ್ಮದಿಂದ ನಡೆದು ಬಂದ ಸಂಪ್ರದಾಯಗಳು– ಬೌದ್ಧ, ಜೈನ, ಶೈವ, ವೈಷ್ಣವ ಇವರನ್ನು ಬಿಟ್ಟು ಉಳಿದ ಹಿಂದೂ ಧರ್ಮ ಅನಾಮಿಕವೂ ಅನಿಶ್ಚಿತ ರೂಪವುಳ್ಳದ್ದೂ ವ್ಯಕ್ತಿಗತ ಧರ್ಮವಾಗಿಯೂ ಉಳಿಯಿತು. 'ಹಿಂದೂ' ಎಂಬ ನಾಮಾಭಿದಾನವನ್ನು ಕೂಡ, ಪರಕೀಯರೇ ಮಾಡಿದರು. ಆವರೆಗೆ ಈ ಧರ್ಮಕ್ಕೆ ನಿಶ್ಚಿತ ಹೆಸರು ಕೂಡ ಇರಲಿಲ್ಲ. ಇಂದಿಗೂ ಪ್ರತಿಯೊಬ್ಬ ವಿಚಾರಶೀಲ ಹಿಂದೂ ವ್ಯಕ್ತಿಗೆ ಧರ್ಮದ ಪೂರ್ಣ ಸ್ವರೂಪವನ್ನು ಹೇಳಲು ಬರುವಂತಿಲ್ಲ. "ನನಗೆ ತಿಳಿದಮಟ್ಟಿಗೆ ನಾನು ಹೀಗೆ ಹೇಳಬಹುದು." ಎಂದೇ ಆತನು ಹೇಳಬಹುದು ಈ ರೀತಿಯ ನಮ್ಮ ಗತಿ–ಹೀನತೆಯನ್ನು ಕಾಣುತ್ತಿದ್ದಾಗ ಹಿಂದೂ ಧರ್ಮದ ರೂಪವನ್ನು ನಿಶ್ಚಿತಗೊಳಿಸುವ ಪಾಶ್ಚಾತ್ಯರ ಬುದ್ಧಿಯ ಮತ್ತು ಧೈರ್ಯದ ಬಗ್ಗೆ ಅಚ್ಚರಿ ಎನಿಸುತ್ತದೆ.

ಪ್ರತಿಯೊಂದು ಪ್ರಸಂಗದಲ್ಲಿ ಧರ್ಮ ಯಾವುದು ? ಅಧರ್ಮ ಯಾವುದು? ಎಂಬುದರ ಬಗ್ಗೆ ನಡೆದ ಸಂವಾದರೂಪಕ ಚರ್ಚೆಯು ಮಹಾಭಾರತದಲ್ಲಿ ನಡೆದಷ್ಟು ಬೇರೆ ಯಾವ ಗ್ರಂಥಗಳಲ್ಲಿಯೂ ನಡೆದಿಲ್ಲ. ಇತರ ಪುಸ್ತಕಗಳಲ್ಲಿ ಉದಾ :– ಬೈಬಲ, ಕುರಾನ. ಧರ್ಮ ಯಾವುದು ಎಂಬುದನ್ನು ನಿಶ್ಚಿತವಾಗಿ ಹೇಳಲಾಗಿದೆ. ಅದರ ಬಗ್ಗೆ ಸಂದೇಹಕ್ಕೆ ಸ್ಥಾನವಿಟ್ಟಿಲ್ಲ. ಆದರೆ ಈ ತರಹದ ವಿವರಣೆಯು ಮಹಾಭಾರತದಲ್ಲಿ ಕಂಡುಬರುವುದಿಲ್ಲ. ಆದ್ದರಿಂದಲೇ ಮಹಾಭಾರತದ ಕಥೆಯು ಚಿತ್ತಾಕರ್ಷಕವೆನಿಸುತ್ತದೆ. ಮಾನವ ಜೀವನವು ಕ್ಷಣಭಂಗುರ, ಅಸಾರ. ಅದರಲ್ಲಿ ಹುರುಳಿಲ್ಲ. ವ್ಯಕ್ತಿಯು ಒಬ್ಬಂಟಿಗನಾಗಿ ಜನ್ಮ ತಾಳುವನು. ಒಬ್ಬಂಟಿಗನಾಗಿಯೇ ಮಡಿಯುವವನು. ಈ ರೀತಿಯ ವಿಚಾರ ಪ್ರವಾಹವು ಅದಕ್ಕೆ ಆಧಾರಿತವಾದ ವೈಫಲ್ಯಮಯ ನಿರಾಶಾಜನಕ, ವಾಙ್ಮಯವು ಇತ್ತೀಚಿನ ಇಪ್ಪತ್ತು ಮೂವತ್ತು ವರ್ಷಗಳಲ್ಲಿ ಫ್ರಾನ್ಸ್, ಇಂಗ್ಲೆಂಡ್, ಅಮೇರಿಕಾ ಆದಿ ದೇಶಗಳಲ್ಲಿ ಹೆಚ್ಚಾಗಿ ನಿರ್ಮಿತವಾಗಿದೆ. ಪಾಶ್ಚಿಮಾತ್ಯ ಸಾಮ್ರಾಜ್ಯದ ಅಳಿಗಾಲದ ನಂತರದ ಈ ವೈರಾಗ್ಯ ಇರಬಹುದೇ ಎಂಬ ವಿಚಾರ ಮನಸ್ಸಿಗೆ ಸೋಂಕುತ್ತದೆ. ಜಯ ನಿಶ್ಚಿತವೆನಿಸಿದ ಕಾಲಕ್ಕೂ **'ಜಯೋಽಮಜಯಾಕಾರೋ ಭಗವನ್ ಪ್ರತಿಭಾತಿ ಮೆ'** ಎಂದು ದುಃಖದಿಂದ ವ್ಯಥೆಪಡುವ ಧರ್ಮರಾಜ ಅದರಂತೆಯೇ ಎಲ್ಲರನ್ನು ವಧಿಸಬಹುದೆಂಬ ಆತ್ಮವಿಶ್ವಾಸವಿದ್ದರೂ **'ಏತಾನ್ ನ ಹಂತುಮಿಚ್ಛಾಮಿ ಘಂತೋಽಪಿ ಮಧುಸೂದನ। ಅಪಿ ತ್ರೈಲೋಕ್ಯ ರಾಜ್ಯಸ್ಯಹೇತೋಃ ಕಿನು ಮಹೀಕೃತೆ॥'** ಎಂದು ನುಡಿಯುವ ಅರ್ಜುನ, ಅವರುಗಳ ಧರ್ಮದ ಮತ್ತು ಮಾನವೀಜೀವನದ ವೈಫಲ್ಯದ ಅರಿವು ಅಧಿಕ ತೀವ್ರವಾಗಿಯೂ, ಅಧಿಕ ಆಂತರಿಕವಾಗಿಯೂ ಇದ್ದಂತೆ ತೋರುತ್ತದೆ.

ನ ಹಿ ಪ್ರಪಶ್ಯಾಮಿ ಮಮಾಪನುದ್ಯಾದ್ಯಚ್ಛೋಕಮುಚ್ಛೋಷಣಮ್ ಇಂದ್ರಿಯಾಣಾಮ್ ।
ಅವಾಪ್ಯ ಭೂಮಾನಸಪತ್ನಮೃದ್ಧಂ ರಾಜ್ಯಂ ಸುರಾಣಾಮಪಿ ಚಾಧಿ ಪತ್ಯಮ್ ॥

ಈ ಜನರು ಮರಣ ಹೊಂದಲಿರುವರು ಮತ್ತು ನಾನು ದುಃಖದಿಂದ ಕೊರಗುವವನು ಎಂಬುದು ಅರ್ಜುನನಿಗೆ ಸ್ಪಷ್ಟವಾಗಿ, ನಿಶ್ಚಿತವಾಗಿ ಕಾಣುತ್ತಿತ್ತು. ಇಂತಹ ಸಮಯದಲ್ಲಿ ಈ ಜನರನ್ನು ಕೊಲ್ಲಬಾರದು. ಪ್ರಾಪ್ತವಾಗಲಿರುವ ಸಂಗತಿಯ ಬೆಲೆ ಅಪರಿಮಿತವಾಗುವುದು ಎಂದು ಅರ್ಜುನನಿಗೆ ಅನಿಸಿದ್ದು ಸ್ವಜನರಲ್ಲಿ ಇದ್ದ ಪ್ರೀತಿಯನ್ನು, ಕನಿಕರವನ್ನು ತೋರಿಸುತ್ತದೆ. ಶ್ರೀಕೃಷ್ಣ ಕೊಟ್ಟ ಉತ್ತರ ಒಂದು ವಿಧದಲ್ಲಿ ಸರಿಯಾದ ಉತ್ತರವೇ ಅನಿಸುವುದಿಲ್ಲ. ಅನ್ಯಾಯಿಗಳು ಇವರು ! ಇವರನ್ನು ವಧಿಸತಕ್ಕದ್ದು ! ! ಎಂಬ ನ್ಯಾಯವನ್ನು ಆಧಾರವಾಗಿ ಇಟ್ಟುಕೊಂಡ ಭಾಗವಿದೆ. ಆದರೆ ಅರ್ಜುನನ ಹೇಳಿಕೆಯು ನ್ಯಾಯವೋ, ಅನ್ಯಾಯವೋ ಎಂದು ಅಲವಂಬಿಸದೇ ಪ್ರಾಪ್ತ ಪರಿಸ್ಥಿತಿಯನ್ನು ಮತ್ತು ಸಮಾಜದಲ್ಲಿಯ ಸ್ಥಾನವನ್ನು ಕಣ್ಣು ಮುಂದೆ ಇಟ್ಟುಕೊಂಡು ಕೊಟ್ಟು ಹೇಳಿಕೆ ಆಗಿತ್ತು. ಅದಲ್ಲದೆ ಮಾನವೀ ಜೀವನವು ಕ್ಷಣಭಂಗುರವಾದುದು, ಪುನಃ ಪುನಃ ಮರಳುವ "ಜೀವನ" ಎಂಬ ದೃಷ್ಟಿಕೋನ ಅದರಲ್ಲಿತ್ತು. ವಿಶ್ವದಲ್ಲಿಯ ಮಾನವನ ಸ್ಥಾನವನ್ನು ಒಂದು ಸಮಯ ಯೋಚಿಸಿದರೆ ಎಲ್ಲವೂ ಅರ್ಥಹೀನವೆನಿಸುತ್ತದೆ. ಆದರೆ ಕೃಷ್ಣನ ಹೇಳಿಕೆಯು ಈ ರೀತಿಯದಿರಲಿಲ್ಲ. ಬ್ರಹ್ಮಸತ್ಯದವರೆಗೆ ತಲುಪಿದನಂತರ ಉಳಿದವೆಲ್ಲ ಮಿಥ್ಯಾ-ಸುಳ್ಳು. ಆದರೆ ಅಲ್ಲಿಯವರೆಗೆ ತಲುಪುವ ಮೊದಲೇ ಈ ಮಿಥ್ಯತ್ವವನ್ನು ದೃಢವೆಂದೆಣಿಸಿಕೊಂಡು ಪ್ರಾಪ್ತ ಕರ್ತವ್ಯಗಳಿಂದ ದೂರವಾಗಿ ಉಳಿದುಕೊಳ್ಳುವುದು ಸಾಧ್ಯವಿಲ್ಲ ಎಂಬ ಭೂಮಿಕೆಯನ್ನು ಆತ ತಾಳಿದ್ದ. ಒಂದು ವಿಧದಲ್ಲಿ ಎಲ್ಲಾ ಮಾನವೀ ಮೌಲ್ಯಗಳು ಸಾಪೇಕ್ಷ. ದಿಕ್ಕಾಲ ಸಾಪೇಕ್ಷವಾದವು. ಆದ್ದರಿಂದ ಪೂರ್ಣತಃ ಸತ್ಯವಾದಂತಹವು ಇರುವುದಿಲ್ಲ. ಇನ್ನೊಂದು ವಿಧದಲ್ಲಿ ಅಪರಿಪೂರ್ಣವಾದ ಮಾನವ ವಂಶಕ್ಕೆ ಮಾರ್ಗದರ್ಶಕವಾಗುತ್ತವೆ, ಮತ್ತೆ ಜೀವನದಲ್ಲಿ ಕಳೆ ತುಂಬುತ್ತವೆ. ಈ ರೀತಿ ಕೃಷ್ಣನ ಹೇಳಿಕೆ ಇತ್ತು. ತಟಸ್ಥನಾಗಿ ಉಳಿಯಬೇಕು. ಆದರೆ ನೂತನ ವಾಙ್ಮಯದಲ್ಲಿ ಕಂಡುಬರುವ Stranger (ಆಗಂತುಕ) ಇಲ್ಲವೇ ಕೇವಲ [ಸಾಕ್ಷಿದಾರ] Witness ಎಂತೆಲ್ಲ. ಹಾಗೆ ಉಳಿಯುವುದು ಕೂಡ ಸಾಧ್ಯವಿಲ್ಲ. "ಅರ್ಜುನನೇ, ನೀನು ಎಷ್ಟೇ ಬೇಡವೆಂದರೂ ನೀನು ಯುದ್ಧ ಮಾಡದೇ ಇರಲಾರೆ. [**ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ**]. ಆದ್ದರಿಂದ ಇಂತಹ ಬಲತ್ಕಾರದಿಂದ, ಇಚ್ಛೆ ಇಲ್ಲದೇ ಯುದ್ಧ ಮಾಡುವುದಕ್ಕಿಂತ ಕಣ್ಣುಗಳನ್ನು ತೆರೆದಿಟ್ಟು ಪರಿಣಾಮಗಳನ್ನು ಗಮನಿಸಿ ಯುದ್ಧಮಾಡು! ಆತ್ಮ ವಿಸ್ಮೃತಿಯಾಗದಂತೆ ನೋಡಿಕೊ !! ಈ ರೀತಿಯಲ್ಲಿ ಆ ಹೇಳಿಕೆ ಇತ್ತು.

ಭಾರತೀಯ ಯುದ್ಧದ ಕಾಲಕ್ಕೆ ಭಕ್ತಿಮಾರ್ಗವು ಪ್ರಸ್ತುತವಾಗಿರಲಿಲ್ಲ. ಅರ್ಜುನ, ಕೃಷ್ಣ

ಭಕ್ತ ಅಂದರೆ ಪ್ರೀತಿಯ ಗೆಳೆಯನಾಗಿದ್ದ. ಕೃಷ್ಣ ಎಷ್ಟೇ ಕಳಕಳಿಯಿಂದ ಹೇಳಿದ್ದರೂ ತಾನು ಸಾಯಿಸಬಾರದೆಂದು ಯೋಚಿಸಿದ ಇಬ್ಬರನ್ನು ಅರ್ಜುನನು ಸಾಯಿಸಲೇ ಇಲ್ಲ.

ಕಥಂ ಭೀಷ್ಮಮಹಂ ಸಂಖ್ಯೆ ದ್ರೋಣಂ ಚ ಮಧುಸೂದನ
ಈಷುಭಿಃ ಪ್ರತಿಯೋತ್ಸ್ಯಾಮಿ

ಎಂದು ಅರ್ಜುನ ಹೇಳಿದ. ಶಿಖಂಡಿಯ ಶರಗಳಿಂದ ಗಾಯಗೊಂಡ ಭೀಷ್ಮನನ್ನು ಆತ ವಿಧಿ ಇಲ್ಲದೆ ಕೆಳಗುರುಳಿಸಿದ. ಭೀಷ್ಮ ಭೂಮಿಗೆ ಉರುಳಿ ಹಾಗೇ ಅಲ್ಲಿಯೇ ಉಳಿದ. ಯುದ್ಧಕ್ಕೆ ಅಡ್ಡಿ ಇಲ್ಲದಂತಾಯಿತು. ದ್ರೋಣನನ್ನು ಅರ್ಜುನ ವಧಿಸಲೇ ಇಲ್ಲ. ಆದರೆ ಅವರಿಬ್ಬರ ಹಾಗು ಇತರರ ಮರಣವನ್ನು ಆತ ಕಂಡ. ಆತನ ಜೀವಾಳವೇ ಆಗಿದ್ದ ಕೃಷ್ಣನ ಮರಣವನ್ನು ಸಹ ಆತ ನೋಡಿದ. ಜಗತ್ತಿನಲ್ಲಿಯ ಸುಖದ, ಅಂತೆಯೇ ದುಃಖದ, ಮಾನದ, ಮಾನಭಂಗದ ಪರಿಣಾಮಗಳನ್ನು ಪರಿಪೂರ್ಣವಾಗಿ ಅನುಭವಿಸಿದ, ಕೊನೆಯಲ್ಲಿ ಕಾಲು ನಡಿಗೆಯಲ್ಲಿ ಸಾಧ್ಯವಾದಷ್ಟು ದೂರ ನಡೆದು ಹೋಗಿ ಕುಸಿದ ಸ್ಥಳದಲ್ಲಿಯೇ ಮರಣ ಹೊಂದುವುದನ್ನು ಆತ ಸ್ವಾಗತಿಸಿದ. ಅರ್ಜುನನೊಬ್ಬನೇ ಅಲ್ಲದೆ ಇತರರೆಲ್ಲರೂ ಸಹ ಕುಂತಿ, ದ್ರೌಪದಿ, ಧೃತರಾಷ್ಟ್ರ ಗಾಂಧಾರಿ ಇದೇ ರೀತಿಯಲ್ಲಿ ಬಾಳಿದರು ಮತ್ತು ಅಳಿದರು. ಪಡಬೇಕಾದ ಪ್ರಯಾಸಗಳನ್ನು ಪಟ್ಟರು. ಪ್ರಸಂಗಕ್ಕೆ ಅನುಸರಿಸಿ ತ್ಯಾಗವನ್ನು ಮಾಡಿದರು. ಆದರೆ ಯಾವುದೇ ತರಹದ ಲೋಕೋತ್ತರ ಅಭಿಲಾಷೆಯಿಂದಲ್ಲ. ಈ ರೀತಿಯ ಜೀವನದಲ್ಲಿಯ ವರ್ತನೆಗೆ ಶೋಭಿಸುವಂತಹದೇ, ಪ್ರಖರವಾದ ಕರ್ತವ್ಯ–ಕಠೋರವಾದ ವೃತ್ತಾಂತ, ಮಹಾಭಾರತದ ಕಥೆಯಾಗಿದೆ.

ಅನಂತರದ ಕಾಲದ ಜೀವನ ಮೌಲ್ಯಗಳ ಬಗ್ಗೆ ಇದ್ದ ಕಲ್ಪನೆಗಳು, ದೇವ ದೇವತೆಗಳ ಕಲ್ಪನೆಗಳು, ವಾಙ್ಮಯ, ಎಲ್ಲವು ಸರ್ವಸ್ವೀ ವಿಪರೀತವಾಗಿದೆ. ಒಂದು ವಿಧದಲ್ಲಿ ಭಾವ–ವಿಶ್ವವು ವಿಸ್ತೃತವಾಯಿತು. ಸಮಗ್ರ ಮಾನವ ಜಾತಿಯ ಬಗ್ಗೆ ಕನಿಕರ–ವೆನಿಸತೊಡಗಿತು. ಇನ್ನೊಂದು ವಿಧದಲ್ಲಿ ವಿಚಾರಗಳಲ್ಲಿ ಶೈಥಿಲ್ಯ ಉಂಟಾಯಿತು. ಇತರರ ಬಗ್ಗೆ ಅನಿಸುವ ಸಹಾನುಭೂತಿಯ ಉಗಮ ಸ್ವಂತದ ಸಹಾನುಭೂತಿಯಲ್ಲಿಯೇ ಇದೆ. 'ಹಾಯ್‌ಡೆಗರ್' ಈತ ಈ ಭಾವನೆಯ ಸ್ಪಷ್ಟೀಕರಣವನ್ನು ಬಹಳ ಉತ್ತಮ ರೀತಿಯಲ್ಲಿ ಮಾಡಿದ್ದಾನೆ. ಅಸ್ತಿತ್ವವು ಇರುವಿಕೆಯು [ಜೀವ] ಇದು ನಾಶವಂತವಾದದ್ದು. ಜನ್ಮದೊಡನೆ ಮರಣವನ್ನು ಕಟ್ಟಿಕೊಂಡೇ ಅದು ಬರುವುದು.

ಜೇಥ ಉದೋ ಹೋಯೇ ಅಸ್ಥವಾವೇಯಾ ಚಿ ಲಾಗಿ
ಮೃತ್ಯು ಉದಯಾಚಾಂ ಪರಿವರೀಂ । ಗರ್ಭ ಗಿಂವಸೀ

[ಜ್ಞಾನದೇವಿ : ೯, ೪೯೭, ೪೯೮]

ಇರುವ ವಸ್ತುವಿಗೆ ಇಲ್ಲದಂತಾಗುವ ಭಯ ಸತತವಾಗಿ ಇರುತ್ತದೆ. ತನ್ನ ಮನದಲ್ಲಿದ್ದ ಈ ಭೀತಿ, ಎರಡನೆಯವರಿಗೆ ಇದ್ದ ಭೀತಿಯಿಂದ ಭಾವಿಸಿ ಜೀವವು [Being] ಇಡೀ ಜಗತ್ತಿನ ವಿವಂಚನೆಯಲ್ಲಿ ಮುಳುಗುತ್ತದೆ. ಈ ರೀತಿ ಜಗತ್ತಿನ ಚಿಂತೆ, ಕೊರಗು, ಭಯ ಇವೆಲ್ಲವು ಸ್ವತಃದ ಬಗ್ಗೆ ಇದ್ದ ಕೊರಗಿನ ಅನ್ಯರ ಮೇಲೆ ಎಸಗಿದ ಆರೋಪಣೆ ಇದೆ. ರೋಗ,

ವಾರ್ಧಕ್ಯ, ಮೃತ್ಯು ಇವುಗಳನ್ನು ಕಂಡು ಬುದ್ಧನಿಗೆ ಜ್ಞಾನೋದಯ ಆಯಿತು. “ಪ್ರಪಂಚದಲ್ಲಿ ಆಸಕ್ತಿವಹಿಸಿದಷ್ಟು ಭಯಗಳು ಹೆಚ್ಚು. ಆದ್ದರಿಂದ ಜಗತ್ತಿನಲ್ಲಿ ಆಸಕ್ತಿಯನ್ನೇ ಇಟ್ಟುಕೊಳ್ಳಬೇಡಿರಿ” ಎಂದು ಬುದ್ಧನ ಉಪದೇಶವಾಗಿದೆ. ಆದರೆ ಇದಕ್ಕೆ ವಿರುದ್ಧವಾಗಿ ಮಹಾಭಾರತದ ಹಾಗೂ ಬ್ರಾಹ್ಮಣರ ಬೋಧನೆಯು ಇದೆ. **ಜಾತಸ್ಯ ಹಿ ಧ್ರುವೋ ಮೃತ್ಯುಃ** ಇದು ಎಲ್ಲಾ ತತ್ವಜ್ಞಾನಗಳ ಮೂಲಾಧಾರ. **ಧ್ರುವಂ ಜನ್ಮ ಮೃತಸ್ಯ ಚ** ಈ ಸಿದ್ಧಾಂತವು ಬುದ್ಧನಿಂದ ಮತ್ತು ಕೃಷ್ಣನಿಂದ ಹೇಳಲಾಗಿದೆ. ಆದರೆ ಇದನ್ನು “ಹೈಡೆಗರ್” ನು ಹೇಳಲಿಲ್ಲ. ಜನ್ಮ ಒಂದೇ ಇರಲಿ, ಅನೇಕವಿರಲಿ; ಎಲ್ಲವೂ ಮೃತ್ಯುವಿನಿಂದಲೇ ಕೊನೆಗೊಳ್ಳುತ್ತದೆ. ಆದ್ದರಿಂದ ಫಲದ ಅಭಿಲಾಷೆಯನ್ನು ಇಟ್ಟುಕೊಳ್ಳದೇ ಕಣ್ಣುಗಳನ್ನು ತೆರೆದಿಟ್ಟು ಕರ್ತವ್ಯವನ್ನು ಮಾಡು ! ಕರ್ಮಸನ್ಯಾಸ ಕಷ್ಟಕರ. ಶಕ್ಯವೆಂದೇ ಹೇಳಬಹುದು. ಈ ಹೇಳಿಕೆ ಕೃಷ್ಣನದು. “ಸಾಧ್ಯವಿದ್ದಲ್ಲಿ ಸನ್ಯಾಸವನ್ನು ಸ್ವೀಕರಿಸಿರಿ ಮತ್ತು ಗೃಹಸ್ಥಾಶ್ರಮಿಯರ ಭಿಕ್ಷೆಯ ಮೇಲೆ ಉಪಜೀವಿಸಿರಿ.” ಎಂಬ ಹೇಳಿಕೆ ಬುದ್ಧನದು. “ಇರುವುದು ಮಾತ್ರ ನಿಜ. ಮುಂದೇ ಯಾವುದೂ ಇಲ್ಲ. ಹಿಂದೆ ಯಾವುದೂ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೇವಲ ಇಲ್ಲಿರುವುದನ್ನೇ ಗಮನಿಸಿರಿ. ವೃಥಾ ಮೌಲ್ಯಗಳನ್ನು ನಂಬಬೇಡಿರಿ.” ಈ ಪ್ರಕಾರದ ಮೂರನೆಯ ಭೂಮಿಕೆಯು ಹೈಡೇಗರನ ಸಿದ್ಧಾಂತಗಳನ್ನು ಅವಲಂಬಿಸಿ ಬರೆದ ಇತ್ತೀಚಿನ ಲೇಖಕರದು. ಈ ರೀತಿ ಮೊದಲನೆಯ ಭೂಮಿಕೆಯು ಬಹಳ ಗಡಸಾದದ್ದು. ಎರಡನೆಯ ಭೂಮಿಕೆಯಲ್ಲಿ ಪಲಾಯನ ವಾದವಿದ್ದು, ಅದು ಪರಸ್ಪರ ವಿರುದ್ಧ ಹೇಳಿಕೆಯಿಂದ ತುಂಬಿದೆ. ವಿಪುಲ ಸಂಖ್ಯೆಯಲ್ಲಿ ಸನ್ಯಾಸಾಶ್ರಮ ಸ್ವೀಕರಿಸುವ ಭಿಕ್ಷುಗಳಿಗೆ, ದಾನಶೂರರಾದ ಸಂಪನ್ನರಾದ ಗೃಹಸ್ಥಾಶ್ರಮಿಯರ ಭಿಕ್ಷೆಯ ಮೇಲೆಯೇ ಉದರನಿರ್ವಾಹವನ್ನು ಮಾಡಬೇಕಾಗುತ್ತದೆ. ಸನ್ಯಾಸಧರ್ಮ ಬಾಳಬೇಕಾದರೆ ಗೃಹಸ್ಥಾಶ್ರಮಿಗಳು ಕೂಡ ಆವಶ್ಯಕವಿದ್ದಾರೆ. ಈ ರೀತಿಯ ಅಂತರ್ಗತ ವಿರೋಧವು ಇಂತಹ ಧರ್ಮಗಳಲ್ಲಿ ಕಂಡುಬರುತ್ತದೆ. ಮೂರನೆಯ ಭೂಮಿಕೆಯು ದಿಶಾಹೀನವು ನಿರಾಶಾವಾದ ಉಳ್ಳದ್ದೂ ಆಗಿದೆ. ಎರಡನೆಯ ಹಾಗೂ ಮೂರನೆಯ ಭೂಮಿಕೆಗಳಲ್ಲಿ ಅಸಾಮಾನ್ಯ ದೈನ್ಯ ಪ್ರಕಟವಾಗುತ್ತದೆ. ಅನೇಕ ಸಲ existentialist ವಾಸ್ತವವಾದಿ ಲೇಖನ ಅತಿ ಕಠೋರ, ಹೃದಯ ಭೇದಕವಾಗಿರುತ್ತದೆ. ಏಕೆಂದರೆ ಈ ಲೇಖನದ ಉಗಮವು ‘ಮಾನವೀ ಜೀವನವು ನಿಷ್ಫಲವಾದುದು’ ಎಂಬ ದೃಢ ಕಲ್ಪನೆಯ ಮೇಲೆ ಆಧಾರಿತವಿದೆ.

ವಿಭೂತಿ ಪೂಜೆ ಹಾಗೂ ಸಂಘ ಪೂಜೆ ಮಹಾಭಾರತ ಕಾಲದಲ್ಲಿ ಇರಲಿಲ್ಲ. ಆದರೆ ಅದು ಬುದ್ಧನ ಕಾಲದಲ್ಲಿತ್ತು. ಮತ್ತು ಈಗಲೂ ಇದೆ. **‘ಬುದ್ಧಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ.’** ಇದೇ ಸೂತ್ರವು ಇತ್ತೀಚೆಗೆ ಎಲ್ಲೆಲ್ಲಿಯ ಕಂಡುಬರುತ್ತದೆ. ಐತಿಹಾಸಿಕ ಇಲ್ಲವೇ ಧಾರ್ಮಿಕ ಮಹತ್ವದ ವಿಭೂತಿಗಳು ಇರುತ್ತಾರೆ. ಇಂತಹ ವಿಭೂತಿಗಳಿಂದ ಕ್ರಿಸ್ತಿ, ಕಮ್ಯುನಿಸ್ಟ್ ಆದಿ ಸಂಘಗಳು ಸ್ಥಾಪಿತವಾಗಿರುತ್ತವೆ. ವಿಭೂತಿ ಪೂಜೆಯ ಮೂಲಕವೇ ಭಕ್ತಿಮಾರ್ಗದ ಉದಯವಾಯಿತು. ಇಂತಹ ವಿಭೂತಿಗಳು, ಅಥವಾ ದೇವತೆಗಳು

ವಿಫಲತೆಗಳಿಂದ ತಮ್ಮ ಬಿಡುಗಡೆಯನ್ನು ಮಾಡುವರು ಎಂಬ ಭಾವನೆ ಮೂಡಿ ಈ ಭಾವನೆಯ ಮೂಲಕ ಕೇವಲ ಒಂದೇ ಬದಿಯವರ ಸಂಹಾರಕ್ಕೆ ಪ್ರೋತ್ಸಾಹಿಸುವ, ಅದೇ ರೀತಿಯಾಗಿ ಅತಿ ರಮ್ಯವಾದ, ಹೃದ್ಯವಾದ, ಸ್ವಪ್ನಮಯವಾದ ಕಾಲ್ಪನಿಕವಾದ ಲೇಖನಗಳು ನಿರ್ಮಿತವಾದವು. ದೈವತ ಕಲ್ಪನೆಗಳು, ಭಕ್ತಿಮಾರ್ಗ, ಏಕೇಶ್ವರಿ ಸಂಪ್ರದಾಯ ಇವೆಲ್ಲವು ದೃಢವಾದ ವಾಸ್ತವತೆಯನ್ನು ಮರೆಯಿಸುವ ಪ್ರಯತ್ನಗಳು, ಅನಂತರ ಬಂದಂತಿವೆ. ಮಹಾಭಾರತ ಕಾಲದಲ್ಲಿ ಇವು ಇರಲಿಲ್ಲ. ಈ ದೃಷ್ಟಿಯಿಂದ ಮಹಾಭಾರತ ಯುಗಾಂತವೇ ಸರಿ. ಒಂದೇ ಬದಿಯ ಸಂಹಾರಕ್ಕೆ ಪ್ರೋತ್ಸಾಹಿಸುವ, ಲೇಖನ ಭಾರತದಲ್ಲಿ ಇಲ್ಲ. ಏಕೆಂದರೆ ಅನೇಕ ದೇವತೆಗಳ ಕಲ್ಪನೆಗಳನ್ನು ಭಾರತ ಅಂಗೀಕರಿಸಿತ್ತು. ಮಹಾಭಾರತದಲ್ಲಿ ಕಂಡುಬರುವ ಸರ್ವವ್ಯಾಪಿಯಾದ, ನಿರಾಶೆಯನ್ನು ತೋರಿಸುವ, ವಿಫಲತೆಯನ್ನು ಎತ್ತಿತೋರಿಸುವ ಕಠೋರತೆಯನ್ನು ವ್ಯಕ್ತಮಾಡುವ ಮತ್ತು ವಾಸ್ತವತೆಯನ್ನು ಎತ್ತಿ ಹೇಳುವ ಲೇಖನದಂತಹ ಲೇಖನ ಅನಂತರ ಭಾರತದೇಶದಲ್ಲಿ ಆಗಿಯೇ ಇಲ್ಲ. ಮನೋಭೂಮಿಕೆಯಲ್ಲಿಯ ಮತ್ತು ವಾಙ್ಮಯದಲ್ಲಿಯ ಈ ವ್ಯತ್ಯಾಸವು ಕೆಲವೊಂದು ಉದಾಹರಣೆಗಳಿಂದ ಸ್ಪಷ್ಟವಾಗುವುದು.

'ಭರತನಾಟ್ಯ ಶಾಸ್ತ್ರದಲ್ಲಿ ನಾಟಕವು ಶೋಕಾಂತವಾಗಕೂಡದು' ಎಂದು ನಿಖರವಾಗಿ ಹೇಳಿದ್ದಾನೆ. ಈ ನಿಯಮವನ್ನು ಅನಂತರದ ನಾಟಕಕಾರರು ಅಕ್ಷರಶಃ ಪಾಲಿಸಿದ್ದಾರೆ. ಆದ್ದರಿಂದ ಮೂಲತಃ ಶೋಕಾಂತವಾಗಿದ್ದ ಕಥಾ ಭಾಗವು 'ಉತ್ತರ ರಾಮಚರಿತ್ರೆ' ಯಂತಹ ನಾಟಕದಲ್ಲಿ ಸುಖಾಂತವಾಗಿ ಪರಿಣಮಿಸಿತು. ಕಥೆಯಲ್ಲಿಯ ನಾಯಕ-ನಾಯಕಿ, ಇವರ ಮಕ್ಕಳು ಇವರೆಲ್ಲರ ಮನೋಹರವಾದ ಕೌಟುಂಬಿಕ ಮಿಲನ ನಾಟಕದಲ್ಲಿ ಆಗತೊಡಗಿತು. 'ವಿಕ್ರಮೋರ್ವಶೀಯ', 'ಅಭಿಜ್ಞಾನ ಶಾಕುಂತಲ' ಈ ನಾಟಕಗಳ ಕೊನೆ ಇದೇ ರೀತಿ ಇದೆ. ಈ ತರಹದ ರೂಪವು ಪಾಶ್ಚಾತ್ಯರ ವಾಙ್ಮಯದಲ್ಲಿ ಇತ್ತೀಚೆಗೆ ತೋರಹತ್ತಿದೆ. ಪ್ರತಿ ದಿನ ಕೌಟುಂಬಿಕ ಜೀವನಕ್ಕೆ ಏರಿಳಿತದ ಆಘಾತಗಳು ನಡೆದಿರುತ್ತವೆ. ದಿನಂಪ್ರತಿಯ ವೃತ್ತಪತ್ರಗಳಲ್ಲಿಯೂ ಸ್ತಂಭಸ್ತಂಭಗಳಲ್ಲಿ ಇಂತಹ ವರ್ಣನೆಗಳು ಬರುತ್ತವೆ. ಆದರೆ ಅಲ್ಲಿ ಕಂಡುಬರುವ ರಾಜಕಾರಣಿ ಪುರುಷರ ಚಿತ್ರಗಳು ಮಾತ್ರ ಕುಟುಂಬ ಸಮೇತವಾಗಿ ಮಕ್ಕಳೊಡನೆಯೇ ಇರುತ್ತವೆ. ಈ ರೀತಿ ಪಾಶ್ಚಾತ್ಯ ದೇಶಗಳಲ್ಲಿ ಕಂಡುಬರುವ ಭಿನ್ನ ಚಿತ್ರ ಈ ನಾಟಕಗಳಲ್ಲಿ ಕಂಡುಬರುತ್ತದೆ. ಅನೇಕ ಸ್ತ್ರೀಯರನ್ನು ಹೊಂದಿದ್ದ ಇಳಿವಯಸ್ಸಿನ ರಾಜ, ರಾಣಿಯ ಪರಿವಾರದಲ್ಲಿಯ ಇಲ್ಲವೇ ಬೇರೆ ಎಲ್ಲಿಯೊ ಕಣ್ಣಿಗೆ ಬಿದ್ದ ತರುಣಿಯರ ಬೆನ್ನು ಹತ್ತುತ್ತಾನೆ. ಅವನಿಗೆ ವಿರಹ ಉಂಟಾಗುತ್ತದೆ. ಕೊನೆಯಲ್ಲಿ ಪ್ರೌಢಳಾದ ಪ್ರಿಯೆಯೊಡನೆ ಮತ್ತು ಅವಳಿಂದ ಜನಿಸಿ ಬೆಳೆದು ದೊಡ್ಡವನಾದ ಪುತ್ರನೊಡನೆ ಆತನ ಭೇಟಿಯಾಗುತ್ತದೆ. ಇದೆಲ್ಲವು ಅಸತ್ಯ. ಪ್ರೇಮ ಅಸತ್ಯ, ವಿರಹ ಅಸತ್ಯ, ಕೌಟುಂಬಿಕ ಮಮತೆ ಅಸತ್ಯ, ಆದರೆ ಇಂತಹ ಸುಳ್ಳಿನ ಕಂತೆಯನ್ನು ರೂಪಿಸುವ ಕವಿಗಳು ಮಾತ್ರ ಶ್ರೇಷ್ಠ ಕವಿಗಳಾಗಿದ್ದರು. ಅವರು ಬರೆದ ಕಾವ್ಯ ಹೃದಯವನ್ನು ಸೂರೆಗೊಳ್ಳುತ್ತದೆ. ಆದರೆ ಕಥಾಭಾಗದಲ್ಲಿಯ ವ್ಯಕ್ತಿಗಳನ್ನು ಮತ್ತು ವಿಷಯಗಳನ್ನು ಮರೆಯಬೇಕು.

ಮಹಾಭಾರತದಲ್ಲಿಯ ಶಕುಂತಲೋಪಾಖ್ಯಾನ ಮತ್ತು ಕಾಳಿದಾಸವಿರಚಿತ ಅಭಿಜ್ಞಾನ ಶಾಕುಂತಲ ಇವುಗಳನ್ನು ಅಭ್ಯಸಿಸಿದರೆ ಮೇಲಿನ ಪಂಕ್ತಿಗಳ ಬಗ್ಗೆ ಮನವರಿಕೆಯಾಗುವುದು. ಮಹಾಭಾರತದಲ್ಲಿ ಬಣ್ಣಿಸಿದ ರಾಜ ಮತ್ತು ಶಕುಂತಲೆ ಇವರಿಬ್ಬರು ಧೂರ್ತರು, ಸ್ವಾರ್ಥಿಗಳು ಇದ್ದರು. ಇಬ್ಬರೂ ಪರಸ್ಪರರನ್ನು ಬಲೆಯಲ್ಲಿ ಬೀಳಿಸಲು ಹವಣಿಸಿದ್ದರು. ಶಕುಂತಲೆ ಆಶ್ರಮದಲ್ಲಿರುವಾಗ ಪುತ್ರನನ್ನು ಹೆತ್ತಳು. ಅವನ ಹುಡುಗಾಟ ಹೆಚ್ಚಾಯಿತು. ಆಗ ಕಣ್ವ ಆಕೆಯನ್ನು ರಾಜನ ಬಳಿ ಕಳುಹಿಸಿಕೊಟ್ಟ. ರಾಜನಾದ ದುಷ್ಯಂತ ಆಕೆಯನ್ನು ಗುರುತಿಸಿಯೂ ಏನೂ ಅರಿಯದವನಂತೆ ನಟಿಸಿದ. ಅನಂತರ ಆಕಾಶವಾಣಿಯಾಗಿ ಶಕುಂತಲೆಯನ್ನು ಮತ್ತು ಪುತ್ರನನ್ನು ಸ್ವೀಕರಿಸಿದ್ದಾಯಿತು. ಜನಿಸಿದ ಪುತ್ರ ದುಷ್ಯಂತನಿಗೆ ಬೇಕಾಗಿದ್ದ. ಆ ಕಾರಣದಿಂದ ಶಕುಂತಲೆಯ ಜೀವನಕ್ಕೆ ಧಕ್ಕೆ ಬರಲಿಲ್ಲ. ಈ ಸಂಗತಿಯಿಂದ ಸ್ವಭಾವದರ್ಶನವಾಗುತ್ತದೆ. ರಾಜನ, ಹಾಗೇ ರಾಜಸಭೆಯಲ್ಲಿಯ ಶಕುಂತಲೆಯ ಭಾಷಣಗಳು ಬಹಳ ಸುಂದರವಾಗಿ ವ್ಯಕ್ತವಾಗಿವೆ. ಅವುಗಳಲ್ಲಿ ಕ್ರೋಧವಿದೆ, ಉಪರೋಧವಿದೆ ; ನಿರ್ಬಲತೆ ಇದೆ: ಕಥಾಭಾಗ ಸರ್ವಸಾಮಾನ್ಯವಿದೆ. ಆ ಕಾಲದ ರೂಢಿ ನಿಯಮಗಳನ್ನು ಹೊಂದಿಕೊಂಡಿದೆ. ಇಂತಹ ಸಾಮಾನ್ಯ ವ್ಯಾವಹಾರಿಕ ಕಥೆಯ ರೂಪಾಂತರವನ್ನು ಕಾಳಿದಾಸ, ರಮಣೀಯವಾದ, ಸ್ವಪ್ನಸೃಷ್ಟಿಯಲ್ಲಿ ಮಾಡಿದ್ದಾನೆ. ಶಾಕುಂತಲ ನಾಟಕದ ನಾಲ್ಕನೆಯ ಭಾಗವನ್ನು ಒಮ್ಮೆ ಓದಿದರೆ ಅದನ್ನು ಮರೆಯುವುದೇ ಸಾಧ್ಯವಿಲ್ಲ. ಹೀಗಿದ್ದರೂ ಮೂಲ ಕಥೆಯಲ್ಲಿಯ ಪ್ರಖರತೆಯು ಸಂಪೂರ್ಣವಾಗಿ ಅಡಗಿಹೋಗಿದೆ. ಕೇವಲ ಶಕುಂತಲೆಯನ್ನು ನಿಷ್ಕಲಂಕಳೆಂದು ಚಿತ್ರಿಸಿ ನಡೆಯುವಂತಿಲ್ಲವೆಂದು ಚಿನ್ನದುಂಗುರದ ಭಾಗವನ್ನು, ದುರ್ವಾಸ ಋಷಿಯ ಶಾಪದ ಭಾಗವನ್ನು, ಅದರಲ್ಲಿ ಅಡಕಮಾಡಿ ದುಷ್ಯಂತ–ರಾಜ ಸಹ ನಿಷ್ಕಲಂಕನಿದ್ದ ಎಂದು ತೋರಿಸಲು ಚಿತ್ರಿಸಿದ ಭಾಗವು ಅಷ್ಟೊಂದು ಪರಿಣಾಮಕಾರಿ ಎನಿಸದು. ಅಂತಿಮ ಕೌಟುಂಬಿಕ ಮಿಲನವು ತೀರಾ ಒಂದೇ ಬಗೆಯ ಅಚ್ಚಿನಂತಹ ಚಿತ್ರಣವಾಗಿದೆ. ಕಾಳಿದಾಸನ ಸುಂದರವಾದ ಕವಿತೆಗಳು ಮತ್ತು ಉಪಮೆ ಇದರಲ್ಲಿ ಇರುವುದರಿಂದ ಮಾತ್ರ ಈ ಭಾಗವನ್ನು ಓದಲು ಬೇಸರವಾಗುವುದಿಲ್ಲ. ಎಲ್ಲದರಲ್ಲಿಯೂ ಅತಿಶಯೋಕ್ತಿ ಇದೆ. ಪರಾಕ್ರಮ; ನಿರಾಗಸತೆ; ವಿರಹ; ಶೃಂಗಾರ; ಶೋಕ ಅವುಗಳನ್ನು ಒಂದೇ ಬಗೆಯ ಶೈಲಿಯಲ್ಲಿ ಅತ್ಯುಕ್ತಿಯನ್ನು ಉಂಟುಮಾಡಿ ತೋರಿಸಲಾಗಿದೆ. ಅರ್ಜುನನಿಗಾದ ದ್ರೌಪದಿಯ ಕೊರಗನ್ನು ಮಹಾಭಾರತದಲ್ಲಿ ಕೇವಲ ನಾಲ್ಕಾರು ಶ್ಲೋಕಗಳಲ್ಲಿ ಬಣ್ಣಿಸಿದೆ. ಕುಂತಿಯ ಸವತಿಮತ್ಸರವನ್ನು ಸ್ವಂತದ ಜುಗುಪ್ಸೆಯನ್ನು ಜಾಜ್ವಲ್ಯವಾದ ಒಂದೇ ಶ್ಲೋಕದಲ್ಲಿ ಹೇಳಿದೆ. ಕರ್ಣನ ವಿಫಲತೆ, ನಿರಾಶೆಗಳನ್ನು ಹೇಳಿದ್ದು ಒಂದೇ ಶ್ಲೋಕದಲ್ಲಿ. ಈ ರೀತಿ ಒಂದು ಬಗೆಯ ವಾಙ್ಮಯವು ರಮ್ಯವೂ, ಹೃದ್ಯವೂ, ಆಭಾಸಮಯವೂ ಎನಿಸುತ್ತಿದ್ದರೆ ಇನ್ನೊಂದು ಬಗೆಯ ವಾಙ್ಮಯವು ಬಿರುಸಾದದ್ದು, ಒರಟಾದದ್ದು, ಸಂಕ್ಷಿಪ್ತ ಹೇಳಿಕೆಯದು ಇದ್ದರೂ ಕಾಲಾಂತರವರೆಗೆ ಅನ್ವೇಷಣೆ ಮಾಡುವಂತಹದಿದೆ.

ಇದೇ ವಿಧದ ಅತಿಶಯೋಕ್ತಿ ಉಳ್ಳ ವಾಙ್ಮಯವು ಪುರಾಣಕಾಲದ ಕಥೆಗಳಲ್ಲಿ ಕಂಡುಬರುತ್ತದೆ. ಐತರೇಯ ಬ್ರಾಹ್ಮಣದಲ್ಲಿ ಹರಿಶ್ಚಂದ್ರನ ಕಥೆ ಬಂದಿದೆ. ಅದು ಮಹಾಭಾರತದಲ್ಲಿಲ್ಲ. ಅದನ್ನು ಆನಂತರದ ಕಾಲದ ಪೌರಾಣಿಕ ಕಥೆಗೆ ಹೋಲಿಸಿ ನೋಡುವಂತಹದಿದೆ.

ಹರಿಶ್ಚಂದ್ರರಾಜ ಪುತ್ರಪ್ರಾಪ್ತಿಗಾಗಿ ವರುಣನನ್ನು ಪ್ರಾರ್ಥಿಸಿದನು. ಪುತ್ರ ಜನಿಸಿದರೆ ಆ ಪುತ್ರನನ್ನು ವರುಣನಿಗೆ ಅರ್ಪಿಸುವೆ ಎಂಬ ವಚನವನ್ನು ರಾಜ ಕೊಟ್ಟ. ವರುಣನ ಕೃಪೆಯಿಂದ ರಾಜಪುತ್ರನನ್ನು ಪಡೆದ. ಆತನ ಹೆಸರು "ರೋಹಿತ." ವರುಣ, ಪುತ್ರ ಪ್ರಾಪ್ತಿಯಾದ ನಂತರ ಹರಿಶ್ಚಂದ್ರನ ಬಳಿಬಂದು ಪುತ್ರನಾದ ರೋಹಿತನನ್ನು ಬೇಡಹತ್ತಿದನು. ಆದರೆ ಹರಿಶ್ಚಂದ್ರನು "ಮಗನು ಇನ್ನೂ ಚಿಕ್ಕವನು. ಅವನಿಗೆ ಇನ್ನು ಹಲ್ಲುಗಳು ಮೂಡಿಲ್ಲ" ಎಂಬ ಹಲವು ಬಗೆಯ ನೆವಗಳನ್ನು ಹೇಳಿ ವರುಣನನ್ನು ಹಾಗೆಯೇ ಕಳುಹಿಸುತ್ತಿದ್ದ. ಮಗ ತುಸು ಪ್ರಾಯದವನಾದನಂತರ ಆತನಿಗೆ "ನಿನ್ನನ್ನು ಅರ್ಪಿಸುವದಿದೆ" ಎಂದು ತಿಳಿಸಲಾಯಿತು. ಆಗ ರೋಹಿತ ಅದನ್ನು ಕೇಳಿ ಧನುಷ್ಯ ಬಾಣಗಳನ್ನು ಎತ್ತಿಕೊಂಡು ಮನೆ ಬಿಟ್ಟು ಹೊರಟು ಕಾಡಿನಲ್ಲಿ ಸುತ್ತಾಡಹತ್ತಿದ. ಇಂದ್ರ ಆತನನ್ನು ಕಾಡಿನಲ್ಲಿಯೇ ಇರಿಸಿದ. ಕೊನೆಗೆ ವಚನ ಭಂಗ ಮಾಡಿದ್ದಕ್ಕಾಗಿ ಕೋಪಗೊಂಡ ವರುಣ, ರಾಜನಿಗೆ ಶಿಕ್ಷೆಯನ್ನು ವಿಧಿಸಿದ. ಈ ಶಿಕ್ಷೆ ಎಂದರೆ ಜಲೋದರ ವ್ಯಾಧಿ. ಇಂತಹ ರೋಗವಾಗುವುದೆಂದರೆ ವರುಣನ ಅವಕೃಪೆಯೆಂದು ತಿಳಿಯುತ್ತಿದ್ದರು.

ರೋಹಿತನು ಅರಣ್ಯದಲ್ಲಿಯ ಅಜಾಗರ್ತನೆಂಬ ಬಡ ಬ್ರಾಹ್ಮಣನಿಗೆ ನೂರು ಗೋವುಗಳನ್ನು ಕೊಟ್ಟು ಆತನ ಮಗನಾದ ಶುನಃಶೇಪನನ್ನು ಕೊಂಡುಕೊಂಡ. ಕಾಡಿನಿಂದ ಮರಳಿ ರೋಹಿತನು ಶುನಃಶೇಪನನ್ನು ಒಪ್ಪಿಸಿ "ನನ್ನ ಬದಲಾಗಿ ಈತನನ್ನು ವರುಣನಿಗೆ ಅರ್ಪಿಸಿರಿ" ಎಂದು ಹೇಳಿದನು. ಹರಿಶ್ಚಂದ್ರನು ವರುಣನಿಗೆ "ನನ್ನ ಮಗನನ್ನು ಬಲಿಯಾಗಿ ಕೊಡಲಾರೆ, ಅದಕ್ಕೆ ಪ್ರತಿಯಾಗಿ ಒಬ್ಬ ಬ್ರಾಹ್ಮಣನ ಮಗನನ್ನು ಕೊಡುವೆನು. ಅದನ್ನು ನೀನು ಮನ್ನಿಸು. ವಚನದಿಂದ ಹಾಗು ರೋಗದಿಂದ ನನ್ನನ್ನು ಮುಕ್ತಗೊಳಿಸು" ಎಂದು ಪ್ರಾರ್ಥಿಸಿದನು. ಅದಕ್ಕೆ ವರುಣನು "ಕ್ಷತ್ರಿಯನಿಗಿಂತ ಬ್ರಾಹ್ಮಣ ಬಲಿಯು ಲೇಸು. ನಿನ್ನ ಹೇಳಿಕೆಯಂತೇ ಆಗಲಿ" ಎಂದು ಅಂದನು. ಶುನಃಶೇಪನನ್ನು ಯಜ್ಞಸ್ತಂಭಕ್ಕೆ ಕಟ್ಟಿದರು. ವರುಣನನ್ನು ಉದ್ದೇಶಿಸಿ ಯಜ್ಞವು ಪ್ರಾರಂಭವಾಯಿತು. ಶುನಃಶೇಪನನ್ನು ವಧಿಸಲು ಯಾರೂ ಒಪ್ಪಲಿಲ್ಲ. ಮುನ್ನೂರು ಗೋವುಗಳ ಕ್ರಯಕ್ಕೆ ಮಗನಾದ ಶುನಃಶೇಪನನ್ನು ನಿಶ್ಚಿತ ವೇಳೆಗೆ ವಧಿಸಲು ತಂದೆಯಾದ ಅಜಾಗರ್ತ ಬ್ರಾಹ್ಮಣ ಒಪ್ಪಿಕೊಂಡ. ಈ ಯಜ್ಞಕ್ಕೆ ವಿಶ್ವಾಮಿತ್ರ ಮುಂತಾದ ಮಹರ್ಷಿಗಳು ಆಗಮಿಸಿದ್ದರು. ತಾನು ಈಗ ಬಲಿಯಾಗುವೆನೆಂದು ತಿಳಿದು ಶುನಃಶೇಪನು ವರುಣನನ್ನು ಒಳಗೊಂಡು ಎಲ್ಲಾ ದೇವತೆಗಳಿಗೆ ಮೊರೆ ಇಟ್ಟನು. ವರುಣ ಸ್ತುತಿಯ ಕಾವ್ಯವನ್ನು ಆತ ಹೇಳತೊಡಗಿದ. ಒಂದೊಂದು ನುಡಿಯನ್ನು ಹೇಳಿದಂತೆ ಆತನ ಕಟ್ಟುಗಳು ಹರಿದು ಬೀಳ ಹತ್ತಿದವು. ಉಷೆಯು ಪ್ರಸನ್ನಳಾಗಿ ಶುನಃಶೇಪನ ಬಿಡುಗಡೆ

ಮಾಡಿದಳು. ವರುಣ ರಾಜನನ್ನು ವ್ಯಾಧಿಯಿಂದ ಮುಕ್ತಗೊಳಿಸಿ ದೊರೆತ ಹವಿರ್ಭಾಗವನ್ನು ಎತ್ತಿಕೊಂಡು ಹೊರಟುಹೋದ. ಯಜ್ಞ ಕೊನೆಯಾದ ನಂತರ ಶುನಃಶೇಪನು ತಂದೆ ತಾಯಿಯರ ಬಳಿ ಹೋಗಲು ನಿರಾಕರಿಸಿದ. ಉದರಭರಣಕ್ಕಾಗಿ, ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ವಿಕ್ರಯಿಸಲು, ವಧಿಸಲು ಸಿದ್ಧರಾದ ಇವರು ನನ್ನ ಮಾತಾಪಿತೃಗಳೇ ಅಲ್ಲ ಎಂದು ಹೇಳತೊಡಗಿದ. ಬಳಿಕ ವಿಶ್ವಾಮಿತ್ರ ಆತನನ್ನು ದತ್ತು ತೆಗೆದುಕೊಂಡ. ಈ ರೀತಿಯಾಗಿ ಪ್ರಾಚೀನ ಕಥೆ ಇದೆ. ಆದರೆ ಪುರಾಣದಲ್ಲಿ ಈ ಕಥೆಯನ್ನೇ ತೀರಾ ಭಿನ್ನವಾಗಿ ಹೇಳಲಾಗಿದೆ. ಕನಸಿನಲ್ಲಿ ಕೊಟ್ಟ ವಚನವನ್ನು ಪೂರೈಸಲು, ಹರಿಶ್ಚಂದ್ರರಾಜನು ರಾಜ್ಯವನ್ನು ತ್ಯಜಿಸುತ್ತಾನೆ. ತನ್ನನ್ನು ಮತ್ತು ಪುತ್ರ, ಪತ್ನಿಯರನ್ನು ಮಾರಿಕೊಳ್ಳುತ್ತಾನೆ. ಕೊನೆಯಲ್ಲಿ ತನ್ನ ಪತ್ನಿಯನ್ನು ಸಹ ವಧಿಸಲು ಸಿದ್ಧನಾಗುತ್ತಾನೆ. ಅನಂತರ ಆತನ ವಚನ ಪಾಲನೆಯಿಂದ ಸಂತುಷ್ಟನಾಗಿ ವಿಶ್ವಾಮಿತ್ರ ಆತನ ಮಗನನ್ನು ಜೀವಂತಗೊಳಿಸಿ ರಾಜ್ಯವನ್ನು ಮರಳಿ ಕೊಡುತ್ತಾನೆ. ಈ ರೀತಿಯ ಕಥೆ ಇದೆ.

ಐತರೇಯ ಬ್ರಾಹ್ಮಣದಲ್ಲಿಯ ರಾಜ ಮಾನವನಿದ್ದನು. ತನ್ನ ಮಗನನ್ನು ದೇವರಿಗೆ ಅರ್ಪಿಸಲು ಸಿದ್ಧನಿರಲಿಲ್ಲ. ವಚನಭಂಗದ ಪಾತಕದಿಂದ ಜಲರೋಗ ಉದ್ಭವಿಸಿದ್ದರಿಂದ ಆತ ಬೇರೆಯೇ ಇನ್ನೊಬ್ಬ ಕ್ರಯಕ್ಕೆ ತೆಗೆದುಕೊಂಡ, ಹುಡುಗನನ್ನು ಕೊಡಲು ಸಿದ್ಧನಾದ. ಆದರೆ ತನ್ನ ಮಗನನ್ನು ಕೊಡಲಿಲ್ಲ. ಹರಕೆ ಮಾಡುವುದೆಂದರೆ ದೇವರಿಗೆ ಪ್ರತ್ಯಕ್ಷವಾಗಿ ವಚನ ಕೊಟ್ಟಂತೆಯೆ ! ಆದರೆ ರಾಜನಿಗೆ ಮಗನಿಗಿಂತ ವಚನ ಹೆಚ್ಚೆನಿಸಲಿಲ್ಲ. ಇದಕ್ಕೆ ವಿರುದ್ಧವಾಗಿ ಪುರಾಣ ಕಥೆಯಲ್ಲಿಯ ರಾಜನು ಕನಸಿನಲ್ಲಿ ಕೊಟ್ಟ ವಚನವನ್ನು ಪೂರೈಸಲು ವಿಧವಿಧ ಪೀಡೆಗಳಿಗೆ ಒಳಗಾಗುತ್ತಾನೆ. ಮಾನವೀಸ್ವಭಾವಕ್ಕೆ ಅನುರೂಪವಾಗಿರದ ಕೃತ್ಯಗಳನ್ನು ಕೈಗೊಳ್ಳುತ್ತಾನೆ. ಇಷ್ಟೆಲ್ಲ ನಡೆದರೂ ವಚನ ಪೂರ್ಣತೆಯು [ರಾಜ್ಯದಾನ] ಆಗುವುದೇ ಇಲ್ಲ. ಸತ್ಯ ವಚನತ್ವವು ಮಾಯಾಜಾಲವಾಗಿಯೇ ಉಳಿಯುತ್ತದೆ.

ಹರಿಶ್ಚಂದ್ರ ಕಥೆಯೊಂದೇ ಅಲ್ಲದೇ ಅನಂತರದ ಎಲ್ಲಾ ಕಥೆಗಳು ಇದೇ ಮಾದರಿಯವಾಗಿವೆ. ಯಾವದೊಂದು ಗುಣದ ಪರಾಕಾಷ್ಠತೆಯನ್ನು ಕಲ್ಪಿಸಿ ಕೊನೆಯಲ್ಲಿ ಆಗಬೇಕಾದ ಸರ್ವನಾಶವನ್ನು ಬದಿಗಿಟ್ಟು ಎಲ್ಲವೂ ಸುಖಕರವಾಗಿಯೇ ಕೊನೆಗೊಳ್ಳುವಂತೆ ಚಿತ್ರಿಸುವುದು. ಈ ಮಾದರಿಯ, ಈ ನವಯುಗದಲ್ಲಿಯ ಕಥೆಗಳಾಗಿವೆ. ಮಹಾಭಾರತ ಕಾಲದವರೆಗಿನ ವಾಙ್ಮಯವು ಇದಕ್ಕೆ ತೀರಾ ವಿರುದ್ಧವಾಗಿದೆ.

ಮಹಾಭಾರತದ ಕಥೆಯನ್ನೇ ಅವಲೋಕಿಸಿದಲ್ಲಿ ಅದರಲ್ಲಿ ಚಿತ್ರಿತವಾದ ವ್ಯಕ್ತಿಗಳು ಸಾಮಾನ್ಯ ಮಾನವರೇ ಆಗಿ ಅವರು ಒಂದು ವಿಶಿಷ್ಟ ಸಮಾಜದಲ್ಲಿ ಜೀವಿಸುವವರಾಗಿದ್ದರು. ಆ ವ್ಯಕ್ತಿಗಳು ಹಲವು ಕೃತ್ಯಗಳನ್ನು ಕೈಗೊಳ್ಳುತ್ತಾರೆ. ಆ ಕೃತಿಗಳ ಫಲಗಳನ್ನು ಗೊಣಗಾಟವಿಲ್ಲದೇ ಅನುಭವಿಸುತ್ತಾರೆ. ಜೀವನ ಚಕ್ರಕ್ಕೆ ಒಂದು ವಿಶಿಷ್ಟಗತಿ, ದಿಶೆ ದೊರೆತಿರುತ್ತದೆ. ಆ ದಿಶೆಯಲ್ಲಿ ಬದಲಾವಣೆ ಆಗುವಂತಿಲ್ಲ, ಆ ಗತಿಯುನ್ನು ತಡೆಯುವಂತಿಲ್ಲ. ಆ ವ್ಯಕ್ತಿ ಸ್ತ್ರೀಯೇ ಅಗಿರಲಿ; ಪುರುಷನೇ ಆಗಿರಲಿ; ರಾಜನೇ ಆಗಿರಲಿ;

ಧನವಂತನೇ ಆಗಿರಲಿ ; ನಿರ್ಧನನೇ ಆಗಿರಲಿ ; ಮನುಷ್ಯನೇ ಆಗಿರಲಿ, ದೇವತೆಯೇ ಆಗಿರಲಿ ; ಜೀವನದಲ್ಲಿಯ ನಿರ್ದಿಷ್ಟವಾದ ತಿರುಗಣೆಯಿಂದ ಆತನ ಬಿಡುಗಡೆ ಇಲ್ಲ, ಸುಖ-ಸಂಪತ್ತು, ಏಳಿಗೆ ಇವು ಜೀವನದಲ್ಲಿ ಕೆಲವು ಕಾಲದವರೆಗೂ ಇರುತ್ತವೆ. ಅದೇ ರೀತಿ ದುಃಖ-ಕಷ್ಟ-ಸರ್ವನಾಶದ ಕಾಲವು ಜೀವನದಲ್ಲಿ ಬರಬಹುದು. ಜೀವನದ ಈ ಗತಿಯು ಭೀಷ್ಮನಿಗೂ ತಪ್ಪಲಿಲ್ಲ. ಅಂಬೆಗೂ ತಪ್ಪಲಿಲ್ಲ. ಪ್ರತ್ಯಕ್ಷ ಶ್ರೀಕೃಷ್ಣನಿಗೂ ಅದು ತಪ್ಪಲಿಲ್ಲ. ಭಾರತ, ಇತಿಹಾಸವೆಂದು ಖ್ಯಾತವಾಯಿತು. ಇತಿಹಾಸಕ್ಕೆ "ಅದು ಈ ರೀತಿ ಆಯಿತು" ಎಂಬರ್ಥ. ಈ ಖ್ಯಾತಿಯಲ್ಲಿ ವ್ಯಕ್ತಿಯ ಆಸೆ, ಆಕಾಂಕ್ಷೆಗಳ ತೊಳಲಾಟ, ನಿರಾಶೆ, ಚಿತ್ರಣವಾಗಿದೆ. ಈ ಚಿತ್ರಣವೆಲ್ಲವೂ ಮಾನವರ ಮಟ್ಟದಿಂದಲೇ ಆಗಿದೆ. ಅತಿ ಮಾನವ ಚಮತ್ಕಾರಗಳು ಅದರಲ್ಲಿ ಇಲ್ಲವೆಂದೇ ಹೇಳಬಹುದು. ದೇವರಿಂದ ಇಲ್ಲವೇ ಇತರ ಅದ್ಭುತ ಶಕ್ತಿಯಿಂದ ಮಾನವ, ಸಂಕಟಗಳಿಂದ ನಿರಾಶೆಗಳಿಂದ ವಿಮೋಚನೆ ಪಡೆದದ್ದು ತೋರುವುದಿಲ್ಲ.

ಆಚಾರ ವಿಚಾರಗಳ ಸುಭದ್ರವಾದ ಚೌಕಟ್ಟು ಇದರ ಹಿನ್ನೆಲೆಗಿತ್ತು. ಅಂಗೀಕರಿಸುವ ಕಾರ್ಯಗಳನ್ನು ಧರ್ಮ ಭಾವನೆಯಿಂದ ಇಲ್ಲವೇ ಹಲವನ್ನು, ಅನಿವಾರ್ಯವೆಂದು ಪೂರ್ತಿಗೊಳಿಸುವುದು. ಅವುಗಳಿಂದ ಸರ್ವ ಲಾಭವೇ ಆಗುವುದೆಂಬ ಅಪೇಕ್ಷೆಯೇ ಇರಲಿಲ್ಲ. ತುಸು ಲಾಭವಾದರೂ ಅದರೊಡನೆ ಇನ್ನೊಂದು ವಿಧದಲ್ಲಿ ಪುಷ್ಕಳ ಹಾನಿಯೂ ಆಗಿರುತ್ತಿತ್ತು. ಯುದ್ಧದಲ್ಲಿ ಒಬ್ಬ ಮಡಿಯಬಹುದು, ಇನ್ನೊಬ್ಬ ಸರ್ವಸುಖಗಳನ್ನು ಕಳೆದುಕೊಂಡು ಲೋಕಾರೂಢಿಯ ದೃಷ್ಟಿಯಿಂದ ಜಯವನ್ನು ಪಡೆಯಬಹುದು. ಈ ಕಥೆಯಲ್ಲಿ ಮನುಷ್ಯನ ಆಕಾಂಕ್ಷೆಗಳ ಪೂರ್ತಿಗೆ ಆಸ್ಪದವಿಲ್ಲ. ಮಾನವನ ಎಲ್ಲಾ ಆಕಾಂಕ್ಷೆಗಳನ್ನು ಈಡೇರಿಸುವ ಯಾವ ದೇವತೆಯೂ ಇಲ್ಲ. ಇಚ್ಛಾಪೂರ್ತಿಯ ತಪ್ಪು ತಿಳುವಳಿಕೆಗಳು ಇಲ್ಲ. ಮಾನವನಂತೆ ಆತನ ದೇವರು ಪ್ರಪಂಚದ ಪ್ರಚಂಡ ಚಕ್ರದಲ್ಲಿ ಒಳಪಟ್ಟಿದ್ದ. ಆ ಚಕ್ರವನ್ನು ಎದುರಿಸುವ ಸಾಮರ್ಥ್ಯವೂ ಯಾರಲ್ಲಿಯೂ ಇರಲಿಲ್ಲ. ಮಾನವೀ ಜೀವನದ ಮೇರೆಗಳನ್ನು ಮಹಾಭಾರತದಲ್ಲಿ ಬಹಳ ನಿಚ್ಚಳವಾಗಿ, ಸ್ಪಷ್ಟವಾಗಿ ಹೇಳಲಾಗಿದೆ. ಈ ಮೇರೆಗಳನ್ನು ಉಲ್ಲಂಘಿಸುವ ಯಾವುದೇ ಬಗೆಯ ಸ್ವಪ್ನಸೃಷ್ಟಿಯೂ ಮಹಾಭಾರತದಲ್ಲಿ ಕಂಡು ಬರುವುದಿಲ್ಲ. ಯಾವದಾದರೊಂದು ಅದ್ಭುತ ನಡೆಯುವುದು ಯಾರದೋ ಕೃಪೆಯಿಂದ ಇದ್ದಕ್ಕಿದ್ದಂತೆ ಅನರ್ಥವು ತಪ್ಪಿ ಶುಭ ಉಂಟಾಗುವುದು, ಇಂತಹ ಸಂದರ್ಭಗಳು ಮಹಾಭಾರತದಲ್ಲಿಲ್ಲ. ಕರ್ತವ್ಯಪಾಲನೆಯನ್ನು ಉಪದೇಶಿಸುವಾಗ ಸುಖ-ಐಶ್ವರ್ಯಗಳ ಆಸೆಯನ್ನು ಒಡ್ಡಿರಲಿಲ್ಲ. ಮರ್ಯಾದೆಯಿಂದ ಬಾಳುವುದು, ಮರ್ಯಾದೆಯಿಂದಲೇ ಮಡಿಯುವುದು ಇದೇ ಪ್ರಮುಖ ಧ್ಯೇಯವಿತ್ತು. ಹುಟ್ಟಿನಿಂದ ಲಭಿಸಿದ ಜನ್ಮಜಾತ ಮೌಲ್ಯಗಳನ್ನು ಅನುಸರಿಸುವುದರಲ್ಲಿ ಇಂತಹ ಮರ್ಯಾದೆ ಇತ್ತು. 'ಜನ್ಮಜಾತ' ಈ ಶಬ್ದವನ್ನು ಉದ್ದೇಶಪೂರ್ವಕವಾಗಿ ಬಳಸಲಾಗಿದೆ. ಕೆಲವು ಮೌಲ್ಯಗಳು ಸಮಗ್ರ ಮಾನವತೆಗಾಗಿ ಗಣಿಸಲ್ಪಟ್ಟಿದ್ದರೂ ಇನ್ನು ಕೆಲವು ಮೌಲ್ಯಗಳು ಮನುಷ್ಯ ಯಾವ ರೀತಿಯಲ್ಲಿ ಜನ್ಮ ತಾಳಿದನೊ ಅದನ್ನು ಅವಲಂಬಿಸಿದ್ದವು. ಒಬ್ಬನು ಕ್ಷತ್ರಿಯನಿದ್ದರೆ ಇನ್ನೊಬ್ಬ ಬ್ರಾಹ್ಮಣನಿದ್ದ. ಒಬ್ಬಳು ಕನ್ಯೆಯಾಗಿದ್ದರೆ ಇನ್ನೊಬ್ಬಳು ತಾಯಿಯಾಗಿರಬಹುದು. ಇನ್ನೊಬ್ಬನು

ಪುತ್ರನಿರಬಹುದು. ಈ ರೀತಿ ಹುಟ್ಟಿನಿಂದ ಬಂದ ಕರ್ತವ್ಯಗಳನ್ನು ನಿಷ್ಠೆಯಿಂದ ಪಾಲಿಸಿ ಆಯಾ ಸ್ಥಾನಗಳ ಮೌಲ್ಯವನ್ನು ರಕ್ಷಿಸುತ್ತಿದ್ದರು. ಈ ಮೌಲ್ಯಗಳ ಪಾಲನೆಯಿಂದ ಲಭಿಸಬಹುದಾದ ಫಲ ಈ ಪ್ರಪಂಚದಲ್ಲಿ ಕಾಣುವಂತಿರಲಿಲ್ಲ. ಮಾನವನ ಕೈಗೆ ಎಟಗುವಂತಿರಲಿಲ್ಲ.

ಇದಕ್ಕೆ ತೀರಾ ವಿರುದ್ಧ ಪರಿಸ್ಥಿತಿ ಅನಂತರದ ಕಾಲದಲ್ಲಿ ಕಂಡು ಬರುತ್ತದೆ. ಸತ್ಯ, ಶೌರ್ಯ, ಸತಿತ್ವ, ಭಕ್ತಿ ಇವುಗಳ ಕಲ್ಪನೆಗಳು ಚರಮ ಮಟ್ಟಕ್ಕೆ ತಲುಪಿದ್ದವು. ಆ ಕಲ್ಪನೆಗಳ ವರ್ಣನೆಯು ವಾಸ್ತವವಾಗಿರದೇ ಆ ಗುಣಗಳು ನಿಜವಿರಲಿಲ್ಲ [ಅತಿರಂಜಿತವಾಗಿದ್ದವು]. ಈ ಕಲ್ಪನೆಯಂತೆ ಆಚರಿಸುವ ವ್ಯಕ್ತಿಯು ಸರ್ವಸುಖಗಳನ್ನು ಹೊಂದುತ್ತಾನೆ. ಆಪತ್ತುಗಳು ಕ್ಷಣಿಕವಾಗಿರುತ್ತವೆ. ಒಂದು ವಿಶಿಷ್ಟ ರೀತಿಯಲ್ಲಿ ಆಚರಿಸುವ ಮನುಷ್ಯ ಮೌಲ್ಯಗಳ ಪರಿಪಾಲನೆಗಾಗಿಯೇ ಇಲ್ಲವೇ ಮುಂದೆ ದೊರೆಯಬಹುದಾದ ಫಲದ ಆಸೆಯಿಂದ ಆ ರೀತಿ ಆಚರಿಸುವನೋ ಎಂಬುದು ತಿಳಿಯುವುದಿಲ್ಲ. ಈ ಪ್ರಭಾವ ಕಾವ್ಯ, ನಾಟಕ, ಕತೆ ಇವೆಲ್ಲವುಗಳ ಮೇಲೆ ಆಗಿದೆ. ಆದ್ದರಿಂದ ಪುರಸ್ಕರಿಸಿದ ಮೌಲ್ಯಗಳೇ ಮೂಲತಃ ಆಭಾಸಾತ್ಮಕವಾಗಿಯೂ ಅಸತ್ಯವಾಗಿಯೂ ಟೊಳ್ಳಾಗಿಯೂ ಅನಿಸುತ್ತವೆ. ಈ ರೀತಿಯ ಆಚರಣೆಯು ತೋರಿಕೆಗೆ ಮಾತ್ರ ಇರುತ್ತದೆ. ಹರಿಶ್ಚಂದ್ರ ಸರ್ವಸ್ವವನ್ನು ಅರ್ಪಿಸುತ್ತಾನೆ. ಅನಂತರ ಅದರ ಎಷ್ಟೋ ಪಟ್ಟು ಹೆಚ್ಚಾಗಿ ಪಡೆಯುತ್ತಾನೆ. ಉತ್ತರ–ರಾಮ ಚರಿತ್ರೆಯಲ್ಲಿ ರಾಮನಿಂದ ಹತನಾದ ಶಂಬುಕ ದಿವ್ಯರೂಪದಿಂದ ಮರಳುತ್ತಾನೆ. ಸೀತೆ ಭೂಮಿಯ ಉದರದಲ್ಲಿ ಸೇರಿದ್ದು ಇದೆಲ್ಲವೂ ಅಸತ್ಯವೇ ಎಂದು ವಿದಿತವಾಗುತ್ತದೆ. ನುಜ್ಜುಗುಜ್ಜಾಗಿ ಮಾಡಿದ ಶಿಶುವನ್ನು ಚಾಂಗುಣೆಯು ಮರಳಿ ಪಡೆಯುತ್ತಾಳೆ. ಇವೆಲ್ಲವು ಸತ್ವಪರೀಕ್ಷೆ ಎಂದು ಗಣಿಸಲ್ಪಡುತ್ತವೆ. ಈ ಪರೀಕ್ಷೆಯಲ್ಲಿ ಉತ್ತಮ ಯಶ ಲಭಿಸಿದರೆ ಕೀರ್ತಿ ಪ್ರತಿಷ್ಠೆಗಳು ಪ್ರಾಪ್ತವಾಗುತ್ತವೆ. ಆದ ನಷ್ಟಕ್ಕಿಂತ ಎಷ್ಟೋ ಪಾಲು ಲಾಭವಾಗುತ್ತದೆ. ಈ ಯುಕ್ತಿವಾದದಲ್ಲಿ ಮಾನವೀ ಜೀವನದ ಕ್ಲೇಶಗಳ ಮೇರೆಗಳು ಇಲ್ಲದಂತಾಗಿ ಸ್ವಪ್ನ ಸೃಷ್ಟಿಯ ಅನುಭವವಾಗುತ್ತದೆ. ನಾಯಕ ಮತ್ತು ನಾಯಕಿ ಇವರನ್ನು ಅಪರಿಮಿತ ಆಪತ್ತುಗಳಿಗೆ ಗುರಿಪಡಿಸುವುದು, ಆಪತ್ತುಗಳನ್ನು ಅವರು ದಾಟುವುದು. ಈ ಸಂಕೇತವು ಕಾವ್ಯನಾಟಕಗಳಲ್ಲಿ ರೂಢವಾಯಿತು. ಈ ರೀತಿ ಮಹಾಭಾರತದ ಅನಂತರ ಪ್ರಾರಂಭವಾದ ಯುಗವು ಈಗಿನವರೆಗೂ ಇದೇ ರೀತಿ ನಡೆದಿದೆ. ಈ ಯುಗದವರು ರಮ್ಯಕಲ್ಪನೆಗಳಲ್ಲಿ ತೊಡಗಿರುವವರು. ಜೀವನದ ಬಗ್ಗೆ ಭಯಪಡುವವರಿದ್ದರು. ಯಾವುದು ಅದೃಶ್ಯವೊ, ಅಪ್ರಾಪ್ಯವೋ ಅದನ್ನು ವಾಙ್ಮಯ ರೂಪದಿಂದ ಪಡೆಯಲು ಹವಣಿಸುವವರು. ಬೌದ್ಧ ವಾಙ್ಮಯದ ಕೆಲವು ಭಾಗ, ಶಂಕರಾಚಾರ್ಯರ ಬ್ರಹ್ಮಸೂತ್ರ ಭಾಷ್ಯ ಮತ್ತು ಕೆಲವು ಕಥೆಗಳು ಇವನ್ನು ಬಿಟ್ಟು ಮಿಕ್ಕೆಲ್ಲ ಸಾಹಿತ್ಯವು ಇದೇ ಮಾದರಿಯದು.

ಇದು ಕೆಲಸಕ್ಕೆ ಬಾರದ ಸಾಹಿತ್ಯವೆಂದು ನಾನು ಅನ್ನಲಾರೆ ! ಅದರಲ್ಲಿಯ ಹಲವು

ಅತಿಹೃದ್ಯವಾಗಿದ್ದರೂ ಅದರಲ್ಲಿ ಮಹಾಭಾರತದಲ್ಲಿಯ ಗುಣಮೊತ್ತವಿಲ್ಲ. ಚಿರಕಾಲದವರೆಗೂ ಬುದ್ಧಿಯನ್ನು ಆಹ್ವಾನಿಸುವಂತಹ ವಿಚಾರಗಳಿಲ್ಲ.

ಅನಂತರದ ಕಾಲದ ಭಕ್ತಿ ಕಥೆಗಳು ಈ ಸಾಹಿತ್ಯವನ್ನು ಮೀರಿಸುವಂತಹವಿವೆ. ಅಜಾಮಿಳನ ಕಥೆ, ಚಾಂಗುಣಿಯ ಕಥೆ ಇದೇ ರೀತಿಯವು. ಅಜಾಮಿಳನ ಕಥೆಯಲ್ಲಿ ಸಾಮಾಜಿಕ ಮೌಲ್ಯಗಳ ತಲೆಬುಡವನ್ನೇ ಕಿತ್ತು ಹಾಕಿದಂತಿದೆ. ಚಾಂಗುಣಿಯ ಕಥೆಯಲ್ಲಿ ಭಕ್ತಿಗಾಗಿ ಮಾಡಿದ ತ್ಯಾಗ ನಿಜವಲ್ಲ. ಆ ತ್ಯಾಗದ ಬದಲಾಗಿ ದೊರೆತ ಫಲವೂ ನಿಜವಲ್ಲ.

ಭಕ್ತಿಯ ಅತಿರೇಕ ಈಶ್ವರಭಕ್ತಿಯಲ್ಲಿ ಮಾತ್ರವಲ್ಲದೇ ಗುರು ಭಕ್ತಿಯಲ್ಲಿ ಕಂಡುಬರುತ್ತದೆ [ವ್ಯಕ್ತಿಪೂಜೆಯಲ್ಲಿ].

'ಯಾನಿ ಅಸ್ಮಾಕಂ ಸುಚರಿತಾನಿ ತಾನಿ ಗ್ರಹೀತವ್ಯಾನಿ ನೋ ಇತರಾಣಿ,'

ಇಂತಹ ಮಹಾಪೂರ್ವ ಕಾಲದ ಇಲ್ಲವೇ ಮಹಾಭಾರತ ಕಾಲದ ಬೋಧನೆಯು ಮತ್ತು ಜ್ಞಾನೇಶ್ವರರಿಂದ ಹಿಡಿದು ಸಂತ ತುಕಾರಾಮ ಮತ್ತು ರಾಮದಾಸನ ಕಾಲದವರೆಗೆ ಅವರು ಬಣ್ಣಿಸಿದ ಗುರುಪೂಜೆ ಇವುಗಳ ಮನೋಭೂಮಿಕೆಯಲ್ಲಿ ಭೂಮ್ಯಾಕಾಶದಷ್ಟು ಮಹದಂತರವಿದೆ. ಮಹಾಭಾರತದಂತಹ ಗ್ರಂಥದಿಂದ ಮೊದಲ್ಗೊಂಡ ಸಾಹಿತ್ಯ ಈ ರೀತಿ ಬರಬರುತ್ತಾ ಏಕೆ ಸಪ್ಪೆಯಾಯಿತು?

'ಧಿಯೋ ಯೊ ನಃ ಪ್ರಚೋದಯಾತ್' ಎಂದು ಪ್ರಾರ್ಥಿಸುವಂತಹವರು ತಮ್ಮ ಬುದ್ಧಿಯನ್ನು ಪರಾಧೀನವಾಗಿ ಮಾಡಿಕೊಂಡಿದ್ದು ಏಕೆ? ಇದೊಂದು ನಮ್ಮ ಸಮಾಜ ಚರಿತ್ರೆಯಲ್ಲಿಯ ಬಗೆಹರಿಯದ ಸಮಸ್ಯೆಯಾಗಿಯೇ ಉಳಿದಿದೆ.

ಮಿತ್ರತ್ವವೆಂದರೆ ಏನು? ಎಂಬುದರ ಚಿತ್ರಣವು ಮಹಾಭಾರತದಲ್ಲಿ ಕಾಲಮಾನ ಪರಿಸ್ಥಿತಿಗೆ ಅನುಸರಿಸಿ ಬಹಳ ಸೊಗಸಾಗಿ ಚಿತ್ರಿಸಲಾಗಿದೆ. ದಾರಿದ್ರ್ಯಪೀಡಿತನಾದ ದ್ರೋಣ, ದ್ರುಪದನ ರಾಜಸಭೆಗೆ ಬಂದು "ನಾನು ದ್ರುಪದನ ಬಾಲ ಮಿತ್ರ. ಆದ್ದರಿಂದ ಈಗಲೂ ಮಿತ್ರನೇ ಆಗಿದ್ದೇನೆ" ಎಂದು ಹೇಳತೊಡಗಿದ. ದ್ರುಪದನು ಈ ಮಿತ್ರತ್ವವನ್ನು ಧಿಕ್ಕರಿಸಿ "ರಾಜ ಬಡಬ್ರಾಹ್ಮಣನ ಮಿತ್ರನಾಗಿರುವುದು ಉಂಟೇ? ಮಿತ್ರತ್ವವನ್ನು ಸರಿಕರಲ್ಲಿ ಮಾತ್ರ ! ಇನ್ನಿತರರೊಂದಿಗೆ ಅಲ್ಲ" ಎಂದು ಗದರಿಸಿದನು. ಮುಂದೆ ದ್ರೋಣ ತಮ್ಮ ಶಿಷ್ಯನ ಮೂಲಕ ದ್ರುಪದನ ಅರ್ಧ ರಾಜ್ಯವನ್ನು ಗೆದ್ದುಕೊಂಡು "ಈಗ ನಾವು ಸರಿಕರಾದೆವಲ್ಲವೇ?" ಎಂದು ದ್ರುಪದನನ್ನು ಕೇಳಿ ಆತನನ್ನು ಜೀವಸಹಿತ ಬಿಟ್ಟ. ನಡೆದ ಈ ಘಟನೆಯು ಮಿತ್ರತ್ವದ ಆರಂಭವೆನಿಸದೇ ಭೀಕರ ಹಗೆತನದ ಪ್ರಾರಂಭವೆನಿಸಿತು. ಶಸ್ತ್ರರಂಗದಲ್ಲಿ ಅವಮಾನಿತನಾದ ಕರ್ಣನಿಗೆ ದುರ್ಯೋಧನ ಮಿತ್ರನೆಂದು ಸಂಬೋಧಿಸಿ ಆತನಿಗೆ ಅಂಗರಾಜ್ಯವನ್ನು ಕೊಟ್ಟ. ಅವರಿಬ್ಬರು ರಾಜರೆಂದು ಅನಿಸಿಕೊಂಡರು. ಸರಿಕ ಮಿತ್ರರಾಗಲಿಲ್ಲ. ಒಬ್ಬ ಕ್ಷತ್ರಿಯನಾಗಿದ್ದ. ಇನ್ನೊಬ್ಬ ಲೋಕಮತದಂತೆ ಸೂತನಾಗಿದ್ದ. ಕೊನೆಯವರೆಗೆ ಕರ್ಣದುರ್ಯೋಧನರ ಸಂಬಂಧಗಳು ಸರಿಕ ಮಿತ್ರರಂತೆ ಇರದೇ "ಒಡೆಯ–ಅಂಕಿತ"ನೆಂಬಂತೆಯೇ ಉಳಿದವು. ಅರ್ಜುನನ ರಥವನ್ನು ಕರ್ಣನಿಗೆ ತೋರಿಸಿ ಶಲ್ಯ "ಎಲೈ ಕರ್ಣ ! ದುರ್ಯೋಧನ ನಿನ್ನನ್ನೇ

ನಂಬಿಕೊಂಡಿದ್ದಾನೆ. ಹೊಣೆಯನ್ನು ನೀಗಿಸುವ ಸಮಯವು ಈಗ ಒದಗಿದೆ" ಎಂದು ಹೇಳಿದ ನುಡಿಗಳು ಕರ್ಣಪರ್ವದಲ್ಲಿ ಇದನ್ನೇ ಎತ್ತಿ ತೋರಿಸುತ್ತವೆ.

ಇದೇ ಬಗೆಯ ನುಡಿಗಳನ್ನು ಭೀಷ್ಮ, ಕರ್ಣನ ಬಗ್ಗೆ ನುಡಿದಿದ್ದಾನೆ. ಅಂದ ಬಳಿಕ ಕರ್ಣ ದುರ್ಯೋಧನರ ಸಂಬಂಧಗಳು ಸರಿಕರಂತೆ ಇರಲಿಲ್ಲ. ಮೂರನೆಯ ಉದಾಹರಣೆ ಕೃಷ್ಣಾರ್ಜುನರದು. ಅವರಿಬ್ಬರು ಮಾತ್ರ ಸರಿಕ ಮಿತ್ರರಾಗಿದ್ದರು. ಇಬ್ಬರೂ ಕ್ಷತ್ರಿಯರು. ಅವರು ಚೊಚ್ಚಲು ಮಕ್ಕಳು ಆಗಿರದಿದ್ದರಿಂದ ಅವರಿಬ್ಬರಿಗೂ ರಾಜ್ಯಾಭಿಷೇಕವಿರಲಿಲ್ಲ. ಇಬ್ಬರೂ ಪರಾಕ್ರಮದಿಂದ ಪರಸ್ಪರರಿಗೆ ಸಹಾಯ ಮಾಡಿದರು. ಅವರೀರ್ವರ ಮನೆತನಗಳಲ್ಲಿ ವಿವಾಹ ಸಂಬಂಧಗಳು ನೆರವೇರಿದ್ದವು. ಒಂದೆಡೆ ಕಲೆತು **'ವಿಕ್ರಾಂತಾನಿ ರತಾನಿ ಚ'** ಎಂಬ ಯುದ್ಧದಲ್ಲಿಯ ಮತ್ತು ಪ್ರೇಮರಂಗದಲ್ಲಿಯ ಕಥೆಗಳನ್ನು ಮನದಣಿ ಹರಟಿದ್ದರು. ಇಬ್ಬರು ಒಂದೆಡೆ ಸಾಕಷ್ಟು ಮದ್ಯಪ್ರಾಶನವನ್ನು ಮಾಡಿದ್ದರು. ಅಂತಹ ಸ್ಥಿತಿಯಲ್ಲಿಯೇ ಒಬ್ಬನ ಪತ್ನಿಯ ಕಾಲುಗಳು ಇನ್ನೊಬ್ಬನ ತೊಡೆಯ ಮೇಲೆ ; ಈ ರೀತಿ ಕೂಡ ವರ್ತಿಸಿದ್ದರು. ಒಬ್ಬನನ್ನುಳಿದು ಇನ್ನೊಬ್ಬನು ಜೀವಿಸಲಾರದವನಾಗಿದ್ದನು. ಮಹಾಭಾರತ ಕಾಲದಲ್ಲಿಯ ನಿಕಟ ಮೈತ್ರಿಯ ದ್ಯೋತಕರಾಗಿದ್ದರು. ಮಹಾಭಾರತದಲ್ಲಿ ಸರಿಕ ಮಿತ್ರತ್ವ, ಸರಿಕರಲ್ಲಿಯೇ ಆಗುತ್ತಿತ್ತೆಂದು ತಿಳಿದುಬರುತ್ತದೆ.

ಈ ನಂತರದ ಕಾಲದಲ್ಲಿ ಶ್ರೀಕೃಷ್ಣ "ದೇವರು" ಎಂದು ಎಣಿಸಲ್ಪಟ್ಟ ನಂತರ ಕೃಷ್ಣ ಸುಧಾಮರ ಗೆಳೆತನದ ವರ್ಣನೆ ಮಹಾಭಾರತದಲ್ಲಿಯ ಮಿತ್ರತ್ವದ ವರ್ಣನೆಗೆ ತೀರಾ ವಿಸಂಗತವಿದೆ. ಬಡ ಬ್ರಾಹ್ಮಣನ ಮಗನಾದ ಸುಧಾಮ ಗುರುಗೃಹದಲ್ಲಿ ಕೃಷ್ಣನ ಸಹಪಾಠಿ ಆಗಿದ್ದ. ಅಧ್ಯಯನದ ನಂತರ ಇಬ್ಬರೂ ತಮ್ಮ ತಮ್ಮ ಮನೆಗಳಿಗೆ ಮರಳಿದರು. ಸುಧಾಮ ಯಾವ ವಿದ್ಯೆಯಲ್ಲಿಯೂ. ಪಾರಂಗತನಾದಂತೆ ಕಾಣುವುದಿಲ್ಲ. ಆತ ಒಬ್ಬ ಬಡ ಬ್ರಾಹ್ಮಣನಾಗಿಯೇ ಉಳಿದನಲ್ಲದೇ, ಬಾಯಿಬಡಕ ಹೆಂಡತಿಯ ಕಾಟದಿಂದ ತ್ರಸ್ತನಾಗಿದ್ದನು. ಅವಳು ಆತನನ್ನು "ನಿಮ್ಮ ಸ್ನೇಹಿತನಾದ ಕೃಷ್ಣ ದ್ವಾರಕೆಯಲ್ಲಿ ರಾಜನಾಗಿದ್ದಾನೆ. ಅವನ ಬಳಿ ಹೋಗಿ ಹಣವನ್ನು ಕೇಳಿ" ಎಂದು ಪೀಡಿಸುತ್ತಿದ್ದಳು. ಈ ಕಥೆಯಲ್ಲಿ ಕೃಷ್ಣ ದ್ವಾರಕೆಯ ರಾಜನೆಂದು ಹೇಳಲಾಗಿದೆ. ಕೊನೆಗೆ ಸುಧಾಮ ವಿಧಿ ಇಲ್ಲದೇ ದ್ವಾರಕೆಗೆ ಹೋಗಿ ದಿಗಿಲುಪಡುತ್ತಾ ರಾಜದ್ವಾರದ ಬಳಿ ನಿಂತನು. 'ಬಂದವರು ಯಾರು?' ಎಂಬುದನ್ನು ಅರಿತೊಡನೆ ಕೃಷ್ಣ ಸಿಂಹಾಸನದಿಂದೆದ್ದು ಮಹಾದ್ವಾರದ ಬಳಿ ಹೋಗಿ ಸುಧಾಮನನ್ನು ಆಲಿಂಗಿಸಿ ಆತನನ್ನು ಕರೆತಂದು ತನ್ನ ಬಳಿಯಲ್ಲಿ ಕುಳ್ಳಿರಿಸಿದ ತನ್ನ ರಾಣಿಯರಿಂದ ಅತನಿಗೆ ಸ್ನಾನ ಮಾಡಿಸಿದ. ಸುಧಾಮ ತಂದ ಒಂದು ಮುಷ್ಟಿ ಅವಲಕ್ಕಿಯನ್ನು ಬಲುರುಚಿಯಿಂದ ತಿಂದ. ಆತನಿಗೆ ಯೋಗ್ಯ ಸತ್ಕಾರವನ್ನು ಸಲ್ಲಿಸಿದ. ಕೊನೆಯಲ್ಲಿ ಆತನ ಗ್ರಾಮದಲ್ಲಿ ಆತನಿಗೆ ವಿಶೇಷ ಧನವನ್ನು ಕರುಣಿಸಿದ. ಈ ಕಥೆ ಭಾರತದಲ್ಲೆಲ್ಲಾ ಎಲ್ಲರಿಗೂ ಜ್ಞಾತವಿದೆ. ಎಲ್ಲೆಡೆಯಲ್ಲಿಯ ಹರಿಕಥೆಕಾರರು ಇದನ್ನೇ ಹೇಳುತ್ತಾ ಬಂದಿದ್ದಾರೆ. ಈ ಕಥೆಯಲ್ಲಿಯ

ಪ್ರತಿಯೊಂದು ಘಟನೆಯು ದ್ರೋಣ–ದ್ರುಪದರ ಕಥೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಹೇತುಪೂರ್ವಕವಾಗಿ ಅದಕ್ಕೆ ವಿರುದ್ಧವಾಗಿ ರಚಿಸಿದಂತಿದೆ. ಧನಿಕರು ಅಹಂಕಾರದಿಂದ ವರ್ತಿಸಬಾರದೆಂದು ತಿಳಿಸಲು ಈ ನೀತಿ ಇರಬಹುದೊ? ದೇವರು [ಶ್ರೀಕೃಷ್ಣ] ಧನಿಕ, ಬಡವನೆಂದು ಭೇದಭಾವವನ್ನು ತೋರಿಸುವುದಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಲು ಈ ಕಥೆಯು ಇರಬಹುದೊ? ಎನ್ನುವುದು ತಿಳಿಯುವುದಿಲ್ಲ. ಯಾವ ಸುಧಾಮನಿಗೆ ಕೃಷ್ಣನ ಮಿತ್ರನೆಂದು ತಿಳಿಸಲಾಗಿದೆಯೋ, ಆ ಸುಧಾಮ ಕೃಷ್ಣನ ಉನ್ನತಕಾಲದಲ್ಲಿ ಒಂದೇ ಒಂದು ಸಲ ಆತನ ಬಳಿ ಬಂದು, ತನ್ನ ಅವಶ್ಯಕತೆಯನ್ನು ಪೂರೈಸಿಕೊಂಡು ಹೋಗುತ್ತಾನೆ. ತಮ್ಮ ರಾಜ್ಯದಲ್ಲಿಯ ಬ್ರಾಹ್ಮಣ ಮುಂತಾದವರನ್ನು ಸಂತುಷ್ಟಗೊಳಿಸುವುದು ರಾಜನ ಕರ್ತವ್ಯವೇ! ಆ ರೀತಿ ನೋಡಿದಲ್ಲಿ ಕೃಷ್ಣನ ವರ್ತನೆಯು ಉಚಿತವೇ! ಆದರೆ ಇದು ಸ್ನೇಹ ಸಂಬಂಧವಲ್ಲವೆಂಬುದು ಮಹಾಭಾರತದಲ್ಲಿಯ ಆಚಾರ ವಿಚಾರಗಳನ್ನು ಪರಿಶೀಲಿಸಿದರೆ ತಿಳಿಯುವಂತಿದೆ. 'ಮಿತ್ರ'ನೆಂಬ ಶಬ್ದದ ಅರ್ಥವೇ ಬದಲಾಯಿಸಿಹೋಗಿದೆ.

ಮಹಾಭಾರತದವರೆಗಿನ ನಮ್ಮ ಸಾಹಿತ್ಯವು ಒಂದು ಸ್ವತಂತ್ರವಾದ ನವನಿರ್ಮಿತ ಆಗಿತ್ತು. ನವವಾಙ್ಮಯವು ಆನಂತರ ನಿರ್ಮಿತವಾಗುತ್ತಿದ್ದರೂ ಅದರಲ್ಲಿ ಟೀಕಾ ವಾಙ್ಮಯ ಹೆಚ್ಚಾಗಿತ್ತು. ಒಂದು ವಿಧದಲ್ಲಿ ಇದೇ ಕ್ರಮವು ಪ್ರಪಂಚದಲ್ಲಿಯ ಎಲ್ಲ ಸಾಹಿತ್ಯದಲ್ಲಿ ಕಂಡುಬರುತ್ತದೆ. ವಾಙ್ಮಯದ ಪ್ರಾರಂಭದಲ್ಲಿ ಸರ್ವವೂ ನವನಿರ್ಮಿತವಿರುತ್ತದೆ. ಇದೇ ನಿರ್ಮಿತಿಯು ನಂತರದ ಟೀಕಾವಾಙ್ಮಯಕ್ಕೆ ಆಧಾರವಾಗಿರುತ್ತವೆ. ಮಹಾಭಾರತ ನಮ್ಮ ಮೂಲ ಸಾಹಿತ್ಯ. ಈ ಸಾಹಿತ್ಯ ಅನಂತರದ ಎಷ್ಟೋ ಶತಕಗಳ ಕಾಲದಲ್ಲಿಯ ಕಾವ್ಯ–ನಾಟಕ–ಕಥೆ–ಪುರಾಣ, ಟೀಕಾವಾಙ್ಮಯಗಳಿಗೆ ವಿಷಯ ಭಾಂಡಾರವಾಗಿದೆ.

ಮಹಾಭಾರತ ಕಾಲದಲ್ಲಿಯ ಸಮಾಜ ಅನೇಕ ರೀತಿಯಲ್ಲಿ ಸಂಕುಚಿತವಾಗಿಯೇ ಇತ್ತು. ಆದಿಭೌತಿಕ ದೃಷ್ಟಿಯಿಂದಲೂ, ಆರ್ಥಿಕ ದೃಷ್ಟಿಯಿಂದಲೂ ಆಗಿನ ಸಮಾಜ ಗೋರಕ್ಷಕರದು ಕೃಷಿ ಮಾಡುವವರದೇ ಆಗಿತ್ತು, ಎಂಬ ಚಿತ್ರಣವು ಆಗಿನ ಸಮಾಜದ ಬಗ್ಗೆ ಇದೆ. ವೈದಿಕ ಆರ್ಯರು ಇಲ್ಲಿಯ ಜನರಲ್ಲಿ ಬೆರೆಯಹತ್ತಿದ್ದರು. ಆದರೆ ಅಂತಹವರ ಸಾಂಸ್ಕೃತಿಕ ಜೀವನ ಬಹುಶಃ ಗೋರಕ್ಷಕ ಆರ್ಯರ ಜೀವನ ಮರ್ಯಾದೆಯಲ್ಲಿಯೇ ಇತ್ತು. ಕ್ಷತ್ರಿಯರ ಘನವಂತಿಕೆ ಅವರಲ್ಲಿದ್ದ ಕುದುರೆಗಳ ಸಂಖ್ಯೆ, ರೂಪ, ಗುಣಗಳನ್ನು ಅವಲಂಬಿಸಿತ್ತು. ಅನೇಕ ರಾಜರ ಹೆಸರುಗಳು ಕೂಡ ಕುದುರೆಗಳ ಒಡೆತನವನ್ನು ಇಲ್ಲವೇ ಅವುಗಳ ಗುಣಗಳನ್ನು ಸೂಚಿಸುತ್ತಿದ್ದವು. ಉದಾಹರಣೆಗೆ : **'ಹರ್ಯಶ್ವ'** ಕೆಂಪು ಕುದುರೆ ಉಳ್ಳವನು. **'ಅಶ್ವಪತಿ'** ಕುದುರೆಗಳ ಒಡೆಯನು **'ಶ್ವೇತವಾಹನ'** ಅರ್ಜುನನ ಒಂದು ಹೆಸರು. **'ಯುವನಾಶ್ವ'** ಒಬ್ಬ ಪ್ರಖ್ಯಾತ ಪೂರ್ವಕಾಲದ ರಾಜ. ಸಾರಥಿಯಾಗುವುದು, ರಥದಲ್ಲಿಂದ ಯುದ್ಧ ಮಾಡುವುದು [ಮಹಾರಥಿ; ಅತಿರಥಿ ; ರಥಿ] ಇದು ಘನವಂತಿಕೆಯ ಲಕ್ಷಣವೆನಿಸುತ್ತಿತ್ತು. ರಥಗಳಿಗೆ ಕುದುರೆಗಳನ್ನು ಹೂಡುತಿದ್ದರು. ರಥದ ಚಕ್ರಗಳಿಗೆ ಅಚ್ಚುಗಳು ಇರುತ್ತಿದ್ದವು. ಆದರೆ ಮಹಾಭಾರತ ಕಾಲದವರು ಅಶ್ವಾರೋಹಣವನ್ನು ಅರಿತಿರಲಿಲ್ಲ.

ಕ್ರಿಸ್ತೋತ್ತರ ಕಾಲದಲ್ಲಿ ಅಂದರೆ ಭಾರತೀಯ ಯುದ್ಧವಾದ ನಂತರ ಸುಮಾರು ಸಾವಿರ ವರ್ಷಗಳ ತರುವಾಯ ಈ ಕಲೆಯು ಭಾರತಕ್ಕೆ ತಲುಪಿತು. ಗೋರಕ್ಷಣೆ ಮತ್ತು ವ್ಯವಸಾಯ ಜೀವನಕ್ಕೆ ಮೂಲಾಧಾರವಾಗಿದ್ದವು. ಗೋಮಾಂಸವನ್ನು ಭಕ್ಷಿಸುತ್ತಿದ್ದರೋ? ಅದನ್ನು ಭಕ್ಷಿಸುತ್ತಿದ್ದರು ಎಂಬ ಬಗ್ಗೆಯು ಭಕ್ಷಿಸುತ್ತಿರಲಿಲ್ಲ ಎಂಬ ಬಗ್ಗೆಯು ಆಧಾರಗಳಿಲ್ಲ. ವೇದ ಬ್ರಾಹ್ಮಣ ಕಾಲದಲ್ಲಿ ಅದನ್ನು ಭಕ್ಷಿಸುತ್ತಿದ್ದರು. ಹಬ್ಬ ಹುಣ್ಣಿಮೆಗಳಿಗೆ ಇಲ್ಲವೇ ಪಂಡಿತನಾದ ಬ್ರಾಹ್ಮಣ ಅತಿಥಿಯಾಗಿ ಬಂದಿದ್ದರೆ ಅದು ಭಕ್ಷವಾಗಿರುತ್ತಿತ್ತು. ಆದರೆ ಇದರ ಬಗ್ಗೆ ಮಹಾಭಾರತದಲ್ಲಿ ಉಲ್ಲೇಖವಿಲ್ಲ. ಗೋಮಾಂಸವನ್ನು ಮಹಾಭಾರತ ಕಾಲದಲ್ಲಿ ತಿನ್ನುತ್ತಲೇ ಇರಲಿಲ್ಲವೆಂದು ಹೇಳಲಾಗುವುದಿಲ್ಲ. ಬೇಟೆಗಾರರ ಉಲ್ಲೇಖ ಅನೇಕ ಸಲ ಬಂದಿದೆ. ಭೀಮಸೇನನಿಗೆ ಮಾಂಸವು ಇಷ್ಟವಾಗಿತ್ತು. ಅದನ್ನು ಅವರು ಬೇಟೆಯಾಡಿ ತರುತ್ತಿದ್ದರು. ಕಾಡಿನಲ್ಲಿದ್ದಾಗ ಪಾಂಡವರು ಬೇಟೆಯಿಂದಲೇ ಜೀವಿಸುತ್ತಿದ್ದರು. ಅವರು ದೊರಕಿಸಿ ತಂದ ಬೇಟೆಯನ್ನು ಅವರ ಆಶ್ರಯದಲ್ಲಿದ್ದ ಬ್ರಾಹ್ಮಣರು ತಿನ್ನುತ್ತಿರಬಹುದು. ಬೇಟೆಯ ಮತ್ತು ಬೇಟೆಗಾರರ ಉಲ್ಲೇಖಗಳಿಂದ ಗೋಮಾಂಸ ಭಕ್ಷಣ ಇಲ್ಲದಂತಾಗಿರಬೇಕು ಇಲ್ಲವೇ ಬಹು ಪ್ರಮಾಣದಲ್ಲಿ ಅಡಗಿಹೋಗಿರಬೇಕು. ಕ್ಷತ್ರಿಯರೆಲ್ಲರೂ ಹಸುಗಳ ಮಂದೆಗಳನ್ನು ಏತಕ್ಕಾಗಿ ಇಟ್ಟುಕೊಳ್ಳುತ್ತಿದ್ದರು ? ಕ್ಷತ್ರಿಯರು ಹಾಲನ್ನು ಮಾರುತ್ತಿದ್ದರೆಂದು ಕಾಣುವುದಿಲ್ಲ. ಅಂದಬಳಿಕ ಕುಟುಂಬಕ್ಕೆ ಅವಶ್ಯಕವಾದ ಹಾಲು ಹೈನಕ್ಕಾಗಿ ಇಲ್ಲವೇ ನಿತ್ಯವು ನಡೆಯುತ್ತಿದ್ದ ಯಾಗಗಳಿಗೆ ಅವಶ್ಯಕವಾಗಿದ್ದ ತುಪ್ಪಕ್ಕಾಗಿ ಮಾತ್ರ ಈ ಮಂದೆಗಳು ಇರುತ್ತಿದ್ದವೋ? ಇಲ್ಲವೇ ಕೆಲವು ಸಲ ಮಾಂಸಾಶನಕ್ಕಾಗಿಯೋ? ಎಂಬ ಪ್ರಶ್ನೆಯು ತಲೆದೋರುತ್ತದೆ. ಕರ್ಣಪರ್ವದಲ್ಲಿ ಕರ್ಣನು ಮದ್ರಬಾಹ್ಲೀಕ ಗಾಂಧಾರ ದೇಶದ ಜನರ ಬಗ್ಗೆ ಮಾಡಿದ ನಿರ್ದೇಶನದ ಭಾಗವು ಕಂಡ-ಕಂಡಂತೆ ಪ್ರಕ್ಷಿಪ್ತವೆನಿಸುತ್ತದೆ. ಕುರುಪಾಂಚಾಲರು ಧಾರ್ಮಿಕರು, ಇನ್ನಿತರ ರಾಜ್ಯದವರು ಅಧಾರ್ಮಿಕರು ಎಂಬ ತಿಳಿವಳಿಕೆಯಾದ ನಂತರ ಅದು ಪ್ರಕ್ಷಿಪ್ತವಾಗಿರಬೇಕು. ಈ ಪ್ರಕ್ಷಿಪ್ತ ಭಾಗದಲ್ಲಿ ಮದ್ರಬಾಹ್ಲೀಕ ಗಾಂಧಾರ ದೇಶದ ಜನರು ಗೋಮಾಂಸವನ್ನು ಭಕ್ಷಿಸುತ್ತಿದ್ದರು; ಮದ್ಯಪ್ರಾಶನವನ್ನು ಮಾಡುತ್ತಿದ್ದರೆಂದು ಹೇಳಿದೆ [೮.೧೨.೭೭.]. ಮದ್ಯಪ್ರಾಶನವು ಮಹಾಭಾರತ ಕಾಲದಲ್ಲಿಯ ಕ್ಷತ್ರಿಯರಿಗೆ ಸಮ್ಮತವಿತ್ತೆಂದು ಸ್ಪಷ್ಟವಿದೆ. ಅದೇ ರೀತಿಯಲ್ಲಿ ಗೋಮಾಂಸ-ಭಕ್ಷಣವು ಸಮ್ಮತವಿರಬಹುದು. ಆದರೆ ಅನಂತರ ಅವುಗಳ ಮೇಲೆ ಧಾರ್ಮಿಕ ಬಂಧನ ಉಂಟಾಗಿರಬೇಕು. ಆದರೆ ಪಶ್ಚಿಮದ ಜನರು ಮೊದಲಿನಂತೆಯೇ ವರ್ತಿಸುತ್ತಿದ್ದರಿಂದ ಹೊಸ ನಿಯಮದಂತೆ ಅವರು 'ಧರ್ಮಬಾಹ್ಯರು' ಎಂದು ಗಣಿಸಲ್ಪಟ್ಟರು.

ಹಾಲು, ಸಾನ್ನಾಯ, ಮತ್ತು ಘೃತವು ಹವಿರ್ದ್ರವ್ಯಗಳಿದ್ದವು. ಸಾನ್ನಾಯವೆಂದರೆ ಹಾಲಿನಲ್ಲಿ ಹುಳಿ ಬೆರಸಿ ಬಟ್ಟೆಯಲ್ಲಿ ಶೋಧಿಸಿ ಮಾಡಿದ 'ಛಾನ', ಇವೆಲ್ಲವು ಖಾದ್ಯ ವಸ್ತುಗಳಿದ್ದವು. ಯಾವದನ್ನು ಮನುಷ್ಯನು ತನಗಾಗಿ ನಿರ್ಮಿಸುತ್ತಾನೆಯೋ ಮತ್ತು ಭಕ್ಷಿಸುತ್ತಾನೆಯೋ, ಅದನ್ನೇ ದೇವರಿಗೆ ಅರ್ಪಿಸುತ್ತಾನೆ. ಘೃತ ಎಂದರೆ ಏನು ? ತಕ್ರ ಮತ್ತು ನವನೀತ ಈ ಎರಡೂ ಶಬ್ದಗಳು ಮಹಾಭಾರತದಲ್ಲಿಲ್ಲ. ಬೆಣ್ಣೆ ಕಾಯಿಸಿ ಮಾಡಿದ ಘೃತವೋ?

ಇಲ್ಲವೇ 'ಯುರೋಪ' ಆದಿ ದೇಶಗಳಲ್ಲಿ ಗೋಚರ್ಮಮಾಂಸವನ್ನು ಕಾಯಿಸಿ ತೆಗೆದ ನೆಣವೋ ? 'ಆಜ್ಯ' ಈ ಶಬ್ದದ ಬಗ್ಗೆಯು ಇದೇ ರೀತಿಯ ಸಂದೇಹವಾಗುತ್ತದೆ. 'ಆಜ್ಯ'ವೆಂದರೆ ಮೇಕೆಯಿಂದ ತಯಾರಿಸಲ್ಪಟ್ಟದ್ದು ಎಂಬರ್ಥ. 'ಆಜ್ಯ'ವು ಮೇಕೆಯ ಮಾಂಸವಿರಬಹುದು. 'ಆಜ್ಯ' ಎಂಬ ಶಬ್ದವು [**'ಅಜ್ಞ'** = ತೊಡೆಯಲ್ಪಟ್ಟ] ಈ ಮೂಲ ರೂಪದಿಂದ ಬಂದಿದೆ. ಈ ರೀತಿ ನೋಡಿದರೆ ಮೈಗೆ ಬಳೆಯಲ್ಪಡುವ, ತೊಡೆಯಲ್ಪಡುವ, ಎಂಬರ್ಥ. ಟಿಬೇಟದಲ್ಲಿಯ ಮತ್ತು ಮಧ್ಯ ಆಶಿಯಾದಲ್ಲಿಯ ಪಶುಗಳನ್ನು ಸಾಕಿಕೊಂಡು ಊರಿಂದೂರಿಗೆ ಅಲೆದಾಡುವ ತಂಡದ ಜನರು ಈಗಲೂ ಎಲ್ಲ ಪ್ರಕಾರದ ನೆಣವನ್ನು ಮತ್ತು ಬೆಣ್ಣೆಯನ್ನು ಮೈಗೆ ಬಳಿದುಕೊಳ್ಳಲು ಉಪಯೋಗಿಸುತ್ತಾರೆ. ಅಶ್ವಮೇಧ ಯಜ್ಞದಲ್ಲಿ ಕುದುರೆಯನ್ನು 'ಬಲಿ' ಮಾಡುತ್ತಿದ್ದರು. ಈ ರೀತಿಯ 'ಅಜಾ' ಚಿಕ್ಕಪುಟ್ಟ ಯಾಗಗಳಲ್ಲಿ ಉಪಯೋಗಿಸುತ್ತಿರಬಹುದು. ಇನ್ನಿತರ ಪಶುಗಳು ಕೂಡ ಮೇಧ್ಯವಿದ್ದವು. 'ಮೇಧ್ಯ' ಪಶುಗಳು, ಭಕ್ಷ್ಯಗಳು ಕೂಡ ಆಗಿದ್ದವು. 'ಗೋ' [ಹಸು] ಇದು ಮೇಧ್ಯ, ಹಾಗೆಯೇ ಭಕ್ಷ್ಯವಾಗಿತ್ತೋ?

ಮಹಾಭಾರತ ಕಾಲದ ಜನರ ಪ್ರಮುಖ ಧಾನ್ಯವು ಯಾವದಿತ್ತೆಂಬುದು ಗ್ರಂಥಗಳಿಂದ ತಿಳಿಯುವುದಿಲ್ಲ. ಪ್ರಾಯಶಃ ಜವೆಗೋಧಿಯು ಪ್ರಮುಖವಿರಬೇಕು. ಕ್ಷತ್ರಿಯರು ಸಾಕಷ್ಟು ಮದ್ಯಪಾನವನ್ನು ಮಾಡುತ್ತಿದ್ದರು. ಧಾನ್ಯವನ್ನು ಜನರು ತಿನ್ನುತ್ತಿದ್ದಂತೆ ಅದನ್ನೇ ಪುರೋಡಾಶವನ್ನಾಗಿ ಮಾಡಿ ದೇವರಿಗೆ ಅರ್ಪಿಸುತ್ತಿದ್ದರು. ಈ ಯಾಗಪ್ರಧಾನ ಧರ್ಮದಲ್ಲಿ, ಪತ್ರ, ಪುಷ್ಪ, ಫಲ, ಮುಂತಾದವುಗಳಿಗೆ ಸ್ಥಾನವೇ ಇರಲಿಲ್ಲ. ಈ ತರಹದ ಪೂಜೆಯು ಮಹಾಭಾರತದಲ್ಲಿ ಕಾಣುವುದಿಲ್ಲ. ಗೀತೆಯಲ್ಲಿ ಈ ಮೂರು ಸಂಗತಿಗಳ ಉಲ್ಲೇಖವಿದ್ದರೂ [ಪತ್ರಂ, ಪುಷ್ಪಂ, ಫಲಂ, ತೋಯಂ] ಅದು ನಂತರ ಪ್ರಕ್ಷಿಪ್ತವಾದದ್ದು ಎಂದು ತಿಳಿಯಬಹುದು. ಮಹಾಭಾರತ ಕಾಲದಲ್ಲಿ ಯಾವುದು ಜನರಿಗೆ ಮತ್ತು ದೇವರಿಗೆ ಖಾದ್ಯವಿತ್ತೋ ಅದು ಅನಂತರ ಖಾದ್ಯವಾಗಿ ಉಳಿಯಲಿಲ್ಲ. ಮನುಷ್ಯರಂತೆಯೇ ದೇವರಲ್ಲಿಯು ಸ್ಥಿತ್ಯಂತರವಾಯಿತು.

ಇನ್ನೊಂದು ಮಹತ್ವದ ಸಂಗತಿಯ ಬಗ್ಗೆ ನಿರ್ಣಯವನ್ನು ಕೊಡಲು ಬರುವಂತಿಲ್ಲ. ಅದೆಂದರೆ 'ಲಿಪಿ' ಮತ್ತು 'ಲೇಖನ'. ಮಹಾಭಾರತ ಕಾಲದಲ್ಲಿ ಜನರು ಬರಹವನ್ನು ಅರಿತಿದ್ದರೋ? ಅದರ ಉಲ್ಲೇಖವು ಮಹಾಭಾರತದಲ್ಲಿಲ್ಲ. ಲಿಪಿಯನ್ನು ಅವರು ಅರಿತುಕೊಂಡಿದ್ದರೆ ಅದರ ಬಗ್ಗೆ ಉಲ್ಲೇಖವಾಗುವಂತಹ ಅನೇಕ ಸಂದರ್ಭಗಳಿವೆ. ಆದರೆ ಈ ಉಲ್ಲೇಖಗಳು ಕಂಡುಬರುವುದಿಲ್ಲ. ಆದ್ದರಿಂದ ಬರಹವು ಅವರಿಗೆ ಗೊತ್ತಿರಲಿಲ್ಲವೆಂದು ತೋರುತ್ತದೆ. ಎಲ್ಲ ಸಂಗತಿಗಳನ್ನು ಬಾಯಿಂದ ಹೇಳಿ ಕಳುಹಿಸುತ್ತಿದ್ದರು. ದೂತರನ್ನು ಕಳುಹಿಸುತ್ತಿದ್ದರೂ ಅವರೊಡನೆ ಬರೆದ ಪತ್ರಗಳನ್ನು ಕಳುಹಿಸದೇ ಬಾಯಿಂದಲೇ 'ಹೇಳಿಕೆ' ಕಳುಹಿಸುತ್ತಿದ್ದರು. ವಾರಣಾವತಕ್ಕೆ ವಿದುರನ ವಿಶ್ವಾಸಿಕನಾದ ಒಬ್ಬ ಖನಕನನ್ನು [ತೋಡುವವನು] ಧರ್ಮನ ಬಳಿ ಕಳುಹಿಸಿದಾಗಲೂ ಬಾಯಿಂದಲೇ ಹೇಳಿಕಳುಹಿಸಿದ್ದ.

ಹೇಳಿಕೆಯು ಬಹಳ ಗೌಪ್ಯದ್ದಾದುದರಿಂದ ಬರೆದಿರಲಿಕ್ಕಿಲ್ಲವೆಂದು ಅನ್ನುವುದಾದರೆ ಇತರ ಸಂದರ್ಭಗಳಲ್ಲಿ ಗುಪ್ತತೆಯು ಏನೂ ಇರಲಿಲ್ಲ. ನಾಲ್ಕು ಜನರು ಸೇರಿಕೊಂಡು ಪ್ರತಿಯೊಂದು ಹೇಳಿಕೆಯನ್ನು ವ್ಯಕ್ತ ಮಾಡುವ ರೂಢಿ ಇತ್ತು. ವಿರಾಟಪರ್ವದಲ್ಲಿ ಅರ್ಜುನ ಶಮೀವೃಕ್ಷದ ಅಡಿಯಲ್ಲಿ ನಿಂತುಕೊಂಡು ಉತ್ತರನಿಗೆ ಯಾವ ಶಸ್ತ್ರಗಳು ಯಾರವು? ಎಂಬುದನ್ನು ಹೇಳುತ್ತಾನೆಯೋ ಆಗ ಒಂದು ಶಸ್ತ್ರದ ಮೇಲಾದರೂ ಹೆಸರು ಇರಬಹುದೆಂದು ಅನಿಸುತ್ತದೆ. ಆದರೆ ಹೆಸರುಗಳು ಇರದೇ ಗುರುತಿಸುವ ಚಿಹ್ನೆಗಳು ಇರುತ್ತವೆ. ಚಿನ್ನದ ಚುಕ್ಕಿಗಳು [**ಜಾತರುಪಸ್ಯ ಬಿಂದವಃ**] ಇದ್ದ ಧನುಷ್ಯವು ಗಾಂಡೀವ ಧನುಷ್ಯವಿತ್ತು. ಚಿನ್ನದ ಆನೆಗಳಿದ್ದ ಬಿಲ್ಲು ಭೀಮನದು. ಇಂದ್ರಗೋಪವಿದ್ದ ಬಿಲ್ಲು ಧರ್ಮನದು. ಸುವರ್ಣ ಸೂರ್ಯಾಂಕಿತವಾದ ಬಿಲ್ಲು ನಕುಲನದು. ಮಿಡಿತ ಮುದ್ರೆ ಇದ್ದ ಬಿಲ್ಲು ಸಹದೇವನದು, ಇದೇ ರೀತಿಯಲ್ಲಿ ಬಾಣಗಳು ಖಡ್ಗಗಳು ಅವುಗಳ ಒರೆಗಳು ಯಾರ ಯಾರವು ಎಂಬ ವರ್ಣನೆಯೂ ಇದೆ. ಆದರೆ ಒಂದು ಆಯುಧದ ಮೇಲೆಯು ಹೆಸರಿಲ್ಲ. ರಾಜರ ಗೋಧನವು ಮುದ್ರೆಯನ್ನು ಹೊಂದಿರುತ್ತಿತ್ತು. ಆದರೆ ಆ ಮುದ್ರೆಗಳಲ್ಲಿ ಹೆಸರು ಇದ್ದದ್ದು ಕಾಣುವುದಿಲ್ಲ. ಕ್ಷತ್ರಿಯರು ಈ ರೀತಿ ಇದ್ದರು. ಓದುಬರಹವು ಕ್ಷತ್ರಿಯರಿಗೆ ಬಾರದಿದ್ದರೂ ತೀರಾ ಈಗೀಗಿನ ಕಾಲದವರೆಗೂ ನಡೆಯುವಂತಿತ್ತು. ಆದರೆ ಇತರರ ಸಂದರ್ಭದಲ್ಲಿಯೂ ಬರಹದ ಬಗ್ಗೆ ಸುಳಿವೇ ಇಲ್ಲ. ಕೃಷಿ ಮತ್ತು ಗೋರಕ್ಷಣೆಯು ಓದು ಬರಹವಿಲ್ಲದೇ ನಡೆಯಬಹುದಿತ್ತು. ಆರ್ಯರ ಮೊದಲು ಸಿಂಧೂ ತೀರದಲ್ಲಿ ನೆಲೆಸಿದ್ದ ಜನರಿಗೆ ಲಿಪಿ ಮತ್ತು ಬರವಣಿಗೆಯು ಗೊತ್ತಿತ್ತು. ಕ್ರಿ.ಶ. ಪೂರ್ವ ೫ ನೆಯ ಶತಕದಲ್ಲಿ ಆರ್ಯರ ಲಿಪಿಯು ಇದ್ದದ್ದು ಕಂಡುಬಂದಿದೆ. ಇದಕ್ಕಿಂತ ಮೊದಲಿನ ಎರಡು ಶತಕ ಕಾಲದಲ್ಲಿ ಬರಹವು ಇತ್ತೆಂದು ಗ್ರಹಿಸಿದರೆ ಬುದ್ಧನ ಕಾಲದಲ್ಲಿ ಲೇಖನ ಇತ್ತೆಂದು ಹೇಳಬಹುದು. ಬುದ್ಧ ಯುಗಕ್ಕೆ ಪಣಿಗ್ಯ್ ಯುಗವೆಂದರೂ ಸಲ್ಲಬಹುದು. ಏಕೆಂದರೆ ದ್ರವ್ಯದ ಚಲನವಲನವು ಬರಹವಿಲ್ಲದೇ ಸಾಗುವಂತಿಲ್ಲ. ಮಹಾಭಾರತದಲ್ಲಿ ಲೇಖನದ ಸಾಹಿತ್ಯಗಳಾದ ಕಾಗದ, ಮಸಿ, ಲೆಕ್ಕಣಿಗೆ ಮುಂತಾದವುಗಳ ಉಲ್ಲೇಖವಿಲ್ಲ. ಒಂದು ಪಕ್ಷ ಬರಹ ನಡೆಯುತ್ತಿದ್ದರೂ ಅದು ಅಪವಾದವಾಗಿರಬಹುದು. ಒಂದು ಪಕ್ಷ ಮಯಸಭೆಯನ್ನು ಕಟ್ಟಿದಂತಹ ಮಯನೆ ಅದನ್ನು ಅರಿತಿದ್ದರೆ ಅರಿತಿರಬಹುದು.

ರುಕ್ಮಿಣಿಯ ಕಥೆಯು ಮಹಾಭಾರತದ ಭಾಗವಿರದಿದ್ದರೂ ಸಮಕಾಲೀನ ಕಥೆಯಾಗಿತ್ತು. ಕೃಷ್ಣನು ಎಷ್ಟೇ ಶ್ರೇಷ್ಠನೆಂದು ಎನಿಸಿಕೊಂಡರೂ ಆತ, ಆ ಕಾಲದ ಕ್ಷತ್ರಿಯನೇ ಆಗಿದ್ದ. ಅಂದಮೇಲೆ ರುಕ್ಮಿಣೀ ಸ್ವಯಂವರದ ಮೊದಲು ಪ್ರೇಮ ಪತ್ರವನ್ನು ಬರೆದಿದ್ದು, ಕೃಷ್ಣನು ಅದನ್ನು ಓದಿಕೊಂಡಿದ್ದು ಅಸಂಭವವೆನಿಸುತ್ತದೆ.

ಲೇಖನ ಕಲೆಯು ಇರದಿದ್ದಂತೆ ಇಟ್ಟಿಗೆಯ ಮತ್ತು ಕಲ್ಲುಗಳ ಮನೆಗಳು ಇರಲಿಲ್ಲ. ಆರ್ಯರು ಪ್ರಾಯಶಃ ಮರದ ಮನೆಗಳನ್ನು ರಚಿಸುತ್ತಿದ್ದರು. ಪ್ರಾರಂಭದ ಬುದ್ಧಕಾಲದಲ್ಲಿ ಕೊರೆದ ಗವಿಗಳು ಮರದ ಕಟ್ಟಡಗಳ ರಚನೆಯನ್ನು ಹೋಲುತ್ತವೆಯೆಂದು ತಜ್ಞರ

ಅಭಿಪ್ರಾಯವಿದೆ. ಯಜ್ಞದಲ್ಲಿ ವಿವಿಧ ಪ್ರಕಾರದ ಚಿತೆಗಳ ಉಲ್ಲೇಖವಿದೆ. ಅವುಗಳ ರಚನೆಗಾಗಿ ಇಟ್ಟಿಗೆಗಳು ಅವಶ್ಯಕವಿದ್ದವು. ಇಟ್ಟಿಗೆಗಳನ್ನು ತಯಾರಿಸುವುದು ಗೊತ್ತಾದ ಬಳಿಕ ಮನೆಗಾಗಿ ಅವನ್ನು ಉಪಯೋಗಿಸಬಹುದಿತ್ತು. ಆದರೆ ಅಂತಹ ಉಲ್ಲೇಖವಿಲ್ಲ. ಬಡಜನರು ಈಗ ಕಟ್ಟಿಕೊಳ್ಳುವಂತೆ ಮಣ್ಣಿನ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು.

ಧರ್ಮ, ತತ್ವಜ್ಞಾನ, ಸಾಮಾಜಿಕ ಮೌಲ್ಯಗಳು ಈ ಸಂಗತಿಗಳಲ್ಲಿ ಮುಂದುವರಿದ ಈ ಜನರು ಐಹಿಕ ಸಂಗತಿಗಳಲ್ಲಿ ಅಷ್ಟೊಂದು ಮುಂದುವರಿದಿರಲಿಲ್ಲ. ಇನ್ನಿತರ ಆರ್ಯ ಭಾಷಿಕರಾದ 'ಮಿಸರಾ' ಮತ್ತು 'ಬಾವೇರು' ದೇಶದ 'ಸೆಮಿಟಿಕ್', 'ಹೆಮಿಟಿಕ್' ಜನರಿಗಿಂತ ಹಿಂದುಳಿದಿದ್ದರು. ಹೀಗಿದ್ದರು ಅವರ ಶಸ್ತ್ರಗಳು ಉತ್ತಮವಾಗಿದ್ದವು. ವಾಹನಗಳು ಇದ್ದುದರಿಂದ ಅವರು ಶೀಘ್ರವಾಗಿ ಓಡಾಡಬಹುದಿತ್ತು. ಪ್ರಾಣಿಯಾದ ಕುದುರೆಯನ್ನು ಪ್ರಥಮ ಬಾರಿ ಅವರು 'ಮಿಸರ್' ಮತ್ತು 'ಬಾವೇರು' [ಈಜಿಪ್ತ್ ಮತ್ತು ಬಾಬಿಲಾನ್] ದೇಶಗಳಿಗೆ ಕೊಂಡೊಯ್ದರು. ಅವುಗಳ ನೆರವಿನಿಂದಲೇ ಆ ದೇಶಗಳನ್ನು ಜಯಿಸಿ ತುಸು ಅವಧಿಯವರೆಗೆ ಆದೇಶಗಳ ಮೇಲೆ ಪ್ರಭುತ್ವವನ್ನು ಸ್ಥಾಪಿಸಿದ್ದರು. ಈ ಆರ್ಯ ಭಾಷಿಕ ಸಮೂಹದಲ್ಲಿಯ ಕೆಲವರು ಗ್ರೀಕ್ ದೇಶಕ್ಕೆ ಹೋದರು. ಗ್ರೀಸ್ ದೇಶದಲ್ಲಿಯ ಸಮಾಜ ರಚನೆಯು ದೇವತೆಗಳು ಮತ್ತು ಮಹಾಭಾರತ ಚಿತ್ರಗಳು ಪರಸ್ಪರ ಹೋಲುತ್ತಿದ್ದರೂ ಗಮನಿಸುವಂತಹ ವ್ಯತ್ಯಾಸಗಳು ಅವುಗಳಲ್ಲಿವೆ. ಗ್ರೀಕ್ ದೇಶದವರು ಕೂಡ ಒಂದು ಹಳೆಯ ಯುದ್ಧದ ವೃತ್ತಾಂತವನ್ನು ಇಲಿಯಡ್ ಎಂಬ ಅವರ ಕಾವ್ಯದಲ್ಲಿ ಬರೆದಿಟ್ಟಿದ್ದಾರೆ. ಅದರಲ್ಲಿ ಕಂಡುಬರುವ ಸಮಾಜ ರಚನೆಯು ಮಹಾಭಾರತ ಕಾಲದ ಸಮಾಜರಚನೆಗೆ ಹೋಲುವಂತಿದೆ. ಅಲ್ಲಿಯು ಚಿಕ್ಕ ಪುಟ್ಟ ರಾಜ್ಯಗಳಿದ್ದವು. ರಾಜ್ಯಕರ್ತರೆಲ್ಲರೂ ಸರಿಸಮಾನರಿದ್ದರು. 'ಟ್ರಾಯ್' ಯುದ್ಧದ ಸಮಯದಲ್ಲಿ ಈ ರಾಜರೆಲ್ಲರ ಮಾನಾಪಮಾನಗಳನ್ನು ಕಾಯುವುದರಲ್ಲಿಯೇ 'ಆಗಾಮೇಮ್ನಾನ' ಇವನ ಸ್ಥಿತಿಯು ದುರ್ಯೋಧನನಂತೆಯೇ ಬರುತ್ತದೆ. ಅವರ ದೇವತೆಗಳು ಪರಸ್ಪರರಲ್ಲಿ ಜಗಳವಾಡುತ್ತಾರೆ. ಗ್ರೀಕ್ ಕಥೆಗಳಲ್ಲಿ ದೇವಿಯರಿಗೆ ಸ್ವತಂತ್ರವಾದ, ದೇವರಷ್ಟು ಮಹತ್ವದ ಸ್ಥಾನವಿದೆ. ಮಹಾಭಾರತದ ಕಾಲದವರೆಗೂ ನಮ್ಮಲ್ಲಿಯ ದೇವಿಯರಿಗೆ ದೇವರ ಪತ್ನಿಯರಿಗೆ ವಿಶೇಷ ಸ್ಥಾನವಿರಲಿಲ್ಲ. ಭಾರತೀಯ ಸಮಾಜ ಹಾಗು ಗ್ರೀಕ್ ಸಮಾಜ ಪಿತೃ ಪ್ರಧಾನವಾಗಿದ್ದರೂ ಗ್ರೀಕರ ಕಥೆಗಳಲ್ಲಿ ಸ್ತ್ರೀಯರ ಚರಿತ್ರೆಗಳು ಎದ್ದು ಕಾಣುವಂತೆ ವೈಶಿಷ್ಟ್ಯ ಪೂರ್ಣವಾಗಿ ಹಲವು ಬಗೆಯು ಇವೆ. ಮಾನವೀ ಸಮಾಜದಲ್ಲಿ ಇಲ್ಲದ ಸ್ವರ್ಗದಲ್ಲಿ ಕೂಡ ಗ್ರೀಕರ ಕಥೆಗಳಲ್ಲಿಯ ಸ್ತ್ರೀಗೆ ಮಹಾಭಾರತದ ಸ್ತ್ರೀಗಿಂತ ಹೆಚ್ಚು ಪ್ರಾಧಾನ್ಯವಿತ್ತು ಎಂಬುದರ ಬಗ್ಗೆ ಸಂದೇಹವಿಲ್ಲ. ತುಲನಾತ್ಮಕ ದೃಷ್ಟಿಯಿಂದ ಗ್ರೀಕ್ ಸ್ತ್ರೀಯರಿಗಿಂತ ನಮ್ಮ ಸ್ತ್ರೀಯರು ಉದಾತ್ತರಾಗಿದ್ದರು. ಅವರ ಬಗ್ಗೆ ಇದ್ದ ಚಿತ್ರಣವು ವೈವಿಧ್ಯವಿಲ್ಲದ್ದು, ಬೇಸರವನ್ನುಂಟುಮಾಡುವಂತಹದಾಗಿದೆ. 'ಮಾತೆ' ಇಲ್ಲವೇ 'ಪತ್ನಿ' ಈ ಎರಡೇ ಭೂಮಿಕೆಗಳಲ್ಲಿ ಅವಳು ಕಾಣಿಸಿಕೊಳ್ಳುತ್ತಾಳೆ. ಪತಿಯು ತನ್ನ ಮಗಳನ್ನು ದೇವರಿಗೆ ಬಲಿಯಾಗಿ ಕೊಟ್ಟ ಕಾರಣಕ್ಕಾಗಿ ಗಂಡನನ್ನೇ ಕೊಂದುಹಾಕಿದ 'ಕ್ಲಿಟೆಮನೆಸ್ಟ್ರೆ'; ತನ್ನ ಮಗನಾದ

ಮೇಲಿಯಾಗರ್ ಎಂಬವನು ಆತನ ಸಹೋದರನಾದ 'ಥೇಸ್ಟಿಆಡಿಸ್' ನನ್ನು ಜಗಳದಲ್ಲಿ ಕೊಂದ ಕಾರಣಕ್ಕಾಗಿ ಮೇಲಿಯಾಗರ್‌ನನ್ನೇ ಕ್ರೋಧದಿಂದ ಕೊಂದುಹಾಕಿದ. ಆತನ ತಾಯಿಯಾದ ಆಲ್‌ಥಿಯಾ ತನ್ನ ಶಾಪಿತ ಸಹೋದರನಾದ 'ಓರೆಸ್ಟ್‌ಸ್' ನೊಡನೆ ಅಲೆದಾಡುವ ಇಲೆಕ್ಟ್ರ* ಮಾಡಿದ ಪಾಪದ ಪ್ರಾಯಶ್ಚಿತ್ತಕ್ಕಾಗಿ ವೃದ್ಧನಾದ 'ಇಡಿಪಸನ್'ನು ತನ್ನ ಕಣ್ಣುಗಳನ್ನು ಒಡೆದುಕೊಂಡನು. ಆಗ ಅವನ ಮಗಳಾದ 'ಇಫಿಜೆನಿಯಾ' ಇವಳು ತನ್ನ ನಿಶ್ಚಿತ–ವಿವಾಹವನ್ನು ಮುರಿದುಹಾಕಿ ತನ್ನ ತಂದೆಯ ಕೈಕೋಲಾದಳು. ಈ ಬಗೆಯ ಅನೇಕ ಅವಿಸ್ಮರಣೀಯವಾದ ಚರಿತೆಗಳು ಗ್ರೀಕರ ಕಥೆಗಳಲ್ಲಿ ಇವೆ. ಗ್ರೀಕರ ದೇವತೆಗಳು ನಮ್ಮ ದೇವತೆಗಳಿಗಿಂತ ಹೆಚ್ಚು ಸಿಟ್ಟಿನವು, ದುಡುಕುಬುದ್ಧಿಯವು ಮತ್ತು ದುಷ್ಟಸ್ವಭಾವದವು ಎಂದು ಕಂಡು ಬರುತ್ತದೆ. ಗ್ರೀಕರ ಕಥೆಗಳಲ್ಲಿ ಬಂಧು ಭಗಿನಿಯರಲ್ಲಿ ಪ್ರೀತಿ ವಿಶ್ವಾಸದ ನಿಕಟಸಂಬಂಧವನ್ನು ತೋರಿಸಲಾಗಿದೆ. ವಿವಾಹೋತ್ತರ ಸ್ತ್ರೀಯು ತನ್ನ ತವರಿನವರನ್ನು ಮರೆಯುತ್ತಿರಲಿಲ್ಲ. ಮೂಲತಃ ಒಂದೇ ರೀತಿ ಇದ್ದರೂ, ಅನಂತರದ ಕಾಲದಲ್ಲಿ ಬೇರೆ ಬೇರೆ ದೇಶಗಳಲ್ಲಿ ನೆಲಸಿದ ಎರಡು ಪಿತೃಪ್ರಧಾನ ಸಂಸ್ಕೃತಿಗಳಲ್ಲಿ ಈ ರೀತಿಯ ವ್ಯತ್ಯಾಸವು ಏತಕ್ಕಿರಬೇಕು? ಎಂಬ ಪ್ರಶ್ನೆಯು ತಲೆದೋರುತ್ತದೆ. ಮಿಸರ್ ದೇಶದವರ ಸಂಸ್ಕೃತಿಯ ಪ್ರಭಾವ ಗ್ರೀಕರ ಮೇಲೆ ಆಗಿರಬಹುದು, ಮಿಸರ ದೇಶದಲ್ಲಿ ರಾಜನೇ ಅಧಿಕಾರದಲ್ಲಿದ್ದರೂ ಅಲ್ಲಿಯ ಸಂಸ್ಕೃತಿ ಮಾತೃಪ್ರಧಾನವಿದ್ದು ಸ್ತ್ರೀಯರ ಸ್ಥಾನವು ಮೇಲ್ಮಟ್ಟದಲ್ಲಿತ್ತು. ಪ್ರಾಯಶಃ ಈ ಕಾರಣದಿಂದಲೇ ಮೇಲೆ ಹೇಳಿದ ವ್ಯತ್ಯಾಸ ಉಂಟಾಗಿರಬೇಕು.

ಗ್ರೀಕರಲ್ಲಿಯೂ, ರಾಜಮನೆತನದವರು, ಅರ್ಚಕರು, ಹಾಗೆಯೇ ಇತರ

---

* [ಮಹಾಭಾರತದಲ್ಲಿ ಸಹೋದರ ಸಹೋದರಿಯರಲ್ಲಿ ಇರತಕ್ಕ ಪ್ರೀತಿಯ ಉಲ್ಲೇಖವಿಲ್ಲ. ಸಹೋದರಿಯ ಕಾರಣದಿಂದ ಪರಾಕ್ರಮಿಯಾದ ಸಿರಿವಂತನಾದ ಭಾವಮೈದುನನನ್ನು ಪಡೆಯುವುದು ಇದೇ ಸಹೋದರನ ಮುಖ್ಯ ಉದ್ದಿಷ್ಟತೆ ಎಂದು ಕಾಣುತ್ತದೆ. ವಿವಾಹೋತ್ತರವಾಗಿ ತವರಿನವರೊಡನೆ ಸ್ತ್ರೀಯರ ಸಂಬಂಧವು ಉಳಿಯುತ್ತಿರಲಿಲ್ಲವೆಂದು ಕಂಡುಬರುತ್ತದೆ. ವೈದಿಕ ವಾಙ್ಮಯದಲ್ಲಿ ಮಾತ್ರ ಸಹೋದರ ಸಹೋದರಿಯರ ಸಂಬಂಧಗಳು ನಿಕಟವಾಗಿದ್ದವು ಎಂದು ತೋರಿಸಲಾಗಿದೆ. ಬಂಧುಗಳಿಲ್ಲದ ಭಗಿನಿಯರ ಸ್ಥಿತಿಯು ಶೋಚನೀಯವಾಗಿತ್ತೆಂದು ಉಲ್ಲೇಖವಿದೆ. ಮಹಾಭಾರತದಲ್ಲಿ ಬಂಧು ಭಗಿನಿಯ ಪ್ರೀತಿಯ ಉಲ್ಲೇಖವಿರದಿದ್ದರೂ ಗಾಂಧಾರಿಯ ಹಾಗೂ ದ್ರೌಪದಿಯ ಬೆಂಬಲಕ್ಕೆ ಅವರ ಸಹೋದರರಿದ್ದರು. ಕುಂತಿಯ ಬೆಂಬಲಕ್ಕೆ ಬಂಧುವಿಲ್ಲದಿದ್ದರು ಸೋದರಳಿಯನಿದ್ದದ್ದು ಕಾಣುತ್ತದೆ. ಹೀಗಿದ್ದರೂ ಗಾಂಧಾರಿ ಮತ್ತು ಶಕುನಿ ಇವರಲ್ಲಿಯೇ ಇಲ್ಲವೇ ಧೃಷ್ಟದ್ಯುಮ್ನ ಮತ್ತು ದ್ರೌಪದಿ ಇವರಲ್ಲಿ ನಡೆದ ವಿಶ್ವಾಸದ ಮಾತುಕತೆಗಳ ವರ್ಣನೆಯು ಬಂದಿಲ್ಲ. ಆನಂತರದ ಸಂಸ್ಕೃತದ ವಾಙ್ಮಯದಲ್ಲಿಯೂ ಇದೇ ರೀತಿ ತೋರುತ್ತಿದೆ, ಆದರೆ ಮಧ್ಯಯುಗದ ನಂತರ ಸಂಸ್ಕೃತ ಗ್ರಂಥಗಳಲ್ಲಿ ಯಮದ್ವಿತೀಯಾ ಮತ್ತು ರಕ್ಷಾಬಂಧನೆ, ಈ ಹಬ್ಬಗಳಲ್ಲಿ ಬಂಧು ಭಗಿನಿಯರ ಸಂಬಂಧವನ್ನು ಬಹಳ ನಿಕಟವಾಗಿದ್ದದ್ದನ್ನು ತೋರಿಸಲಾಗಿದೆ. ಹಾಗೆಯೇ ಇಡೀ ಭಾರತದಲ್ಲೆಲ್ಲಾ ಈಗಿರುವ ಎಲ್ಲಾ ಭಾಷೆಗಳಲ್ಲಿ ಬಂಧು ಭಗಿನಿಯರಲ್ಲಿಯ ಪ್ರೀತಿಯ ಲೋಕಾರೂಢಿಗಳ ಕಥೆಗಳು ಹೇರಳವಾಗಿವೆ. ಲೋಕರೂಢಿಯ ಕಥೆಗಳಲ್ಲಿಯ ಭಾವನಾ ವಿಶೇಷವು ಸಂಸ್ಕೃತ ವಾಙ್ಮಯದಲ್ಲಿಲ್ಲ, ಆದರೆ ಈಗಿನ ಬರೆದಿಟ್ಟ ಕಥೆಗಳಲ್ಲಿ ಅದು ವಿಪುಲವಾಗಿದೆ. ಪುರಾತನ ಸಂಸ್ಕೃತ ಪರಂಪರೆಯಲ್ಲಿ ಈ ತರಹದ ಸಂಬಂಧಗಳು ಇರಲಿಲ್ಲ. ಹೀಗಿದ್ದರೂ ಬಹುಜನ ಸಮಾಜದಲ್ಲಿ ಈ ಭಾವನೆಗಳಿದ್ದವು. ಅವರಿಂದಲೇ ಸಮಾಜದ ಎಲ್ಲಾ ಸ್ಥಳಗಳಲ್ಲಿ ಈ ಭಾವನೆಯು ಹಬ್ಬಿತು. ಇಷ್ಟೇ ಅಲ್ಲದೇ ವಾಙ್ಮಯದಲ್ಲಿ ಅದಕ್ಕೆ ಸ್ಥಾನವು ದೊರಕಿತು.]

ಸಮಾಜದವರು ಇದ್ದರು. ಅಂತೆಯೇ ಪರಿಚಾರಕರಾದ ದಾಸವರ್ಗದವರು ಇದ್ದರು. ರಾಜಕುಲವು ಅಳಿದು ಲೋಕಸತ್ತಾತ್ಮಕ ರಾಜ್ಯವು ಸ್ಥಾಪಿತವಾದ ನಂತರ ಮತಾಧಿಕಾರವು ಕೇವಲ ಮೇಲಿನ ಮೂರು ವರ್ಗದವರಿಗೆ ಇತ್ತು. ದಾಸವರ್ಗದವರಿಗೆ ಮತಾಧಿಕಾರವಿರಲಿಲ್ಲ. ಅದೇ ಸ್ಥಿತಿಯು ತೀರಾ ಇತ್ತೀಚಿನ ಕಾಲದವರೆಗೂ ಅಮೇರಿಕೆಯಲ್ಲಿತ್ತು. ಇನ್ನುಳಿದ ಪಾಶ್ಚಾತ್ಯ ದೇಶದವರು ಅಂತರ್ಗತವಾಗಿ ಲೋಕ ಸತ್ತಾತ್ಮಕ ರಾಜ್ಯವನ್ನು ಇಟ್ಟುಕೊಂಡು ಬಾಹ್ಯದೇಶಗಳಲ್ಲಿ ಸಾಮ್ರಾಜ್ಯವಾದವನ್ನು ಇಟ್ಟುಕೊಂಡಿದ್ದರು. ಈಗಲೂ ಇದೇ ಸ್ಥಿತಿ ಇದೆ. ಆಪಪರಭಾವವು, ತನ್ನ ಮತ್ತು ಹೆರವರ, ತಮ್ಮ ದೇವರು, ಹೆರವರ ದೇವರು, ತಮ್ಮ ಬಾಧ್ಯತೆಗಳನ್ನು ತಾವು ಪಡೆಯುವುದು, ಪರರಿಗೆ ಅವರ ಬಾಧ್ಯತೆಗಳನ್ನು ನಿರಾಕರಿಸುವುದು, ಇಂತಹ ಪ್ರವೃತ್ತಿಗಳು ಆಗ ಇದ್ದವು. ಈಗಲೂ ಇವೆ. ಆದರೆ ಆಗಿನ ಸಾಹಿತ್ಯದಲ್ಲಿ ಆ ರೀತಿಯ ಉಲ್ಲೇಖವು ಸ್ಪಷ್ಟವಾಗಿದೆ. ಆಗಿನ ಮಾನವ ಸಮಾಜಗಳು ಮರ್ಯಾದಿತವಾಗಿದ್ದವು. ಈ ರೀತಿಯ ಸಮಾಜ ರಚನೆಯೇ ಸ್ವಾಭಾವಿಕವೆಂದು ಪರಿಗಣಿಸಲ್ಪಡುತ್ತಿತ್ತು. ಅದರಲ್ಲಿ ಮುಚ್ಚುಮರೆ ಏನೂ ಇರಲಿಲ್ಲ. ಪ್ರಾಚೀನ ಸಂಗತಿಗಳಲ್ಲಿಯ ವಿಪುಲ ಸಂಗತಿಗಳು ಈ ಕಾಲದಲ್ಲಿ ನಡೆದುಬಂದಿವೆ. ಆದರೆ ಅವುಗಳ ಅಸ್ತಿತ್ವವನ್ನೇ ಕಡೆಗಣಿಸುವ ಭಾವನೆಯಿಂದ ಜನರು ಬರೆಯುತ್ತಿರುತ್ತಾರೆ. ಹಿಂದಿನದೆಲ್ಲವು ತ್ಯಾಜ್ಯಮಾತ್ರವಲ್ಲದೆ ಈಗಿನ ಕಾಲಕ್ಕೆ ಸರಿಹೋಗುವುದಿಲ್ಲವೆಂಬ ಭಾವನೆಯು ಅನೇಕರಲ್ಲಿದೆ. ಆದರೆ ಅದು ಆ ರೀತಿ ಅಲ್ಲ. ಹಿಂದಿನ ಸಂಗತಿಗಳು ಎಂದಿಗೂ ಸಂಪೂರ್ಣವಾಗಿ ತ್ಯಾಜ್ಯವಾಗಿಯೂ, ಸಂಪೂರ್ಣವಾಗಿ ಹೊಂದಿಕೊಳ್ಳಲಾರದವು ಆಗುವುದಿಲ್ಲ. ನೂತನತೆಯಲ್ಲಿ ಹಿಂದಿನ ಸಂಗತಿಗಳ ಅಂಶಮಾತ್ರವಿರದೇ, ನೂತನತೆಯೇ ಇರಲಾರದು ಎಂಬ ವಿಚಾರಸರಣಿಯು ಮಾನಸಶಾಸ್ತ್ರದಲ್ಲಿದೆ. ಪ್ರಾಚೀನ, ಅರ್ವಾಚೀನ, ನಿಕಟವಾದ ಮತ್ತು ದೂರದೂರದ, ಅಭ್ಯುದಯ ಹೊಂದಿದ ಮತ್ತು ಅಭ್ಯುದಯ ಹೊಂದದೇ ಇದ್ದ, ಇಂತಹ ಎಲ್ಲಾ ಮಾನವ ಸಮಾಜಗಳು ಪರಿಶೀಲನಾರ್ಹವಿವೆ. ಮೊದಲು ಯಾವ ರೀತಿ ಇತ್ತು ? ಈಗ ಯಾವ ರೀತಿ ಇದೆ ? ಎಂಬ ತುಲನಾತ್ಮಕ ದೃಷ್ಟಿಯಿಂದ ಇವುಗಳ ಪರಿಶೀಲನೆಯಾಗಬೇಕು. ಮೂರ್ತಿಪೂಜಕರಲ್ಲಿಯ ಭಕ್ತಿ ಭಾವದಿಂದಾಗಲೀ, ಮೂರ್ತಿ ಭಂಜಕರ ಆವೇಶದ ದ್ವೇಷ ಭಾವನೆಯಿಂದಾಗಲೀ ಪೂರ್ವಾಗ್ರಹ ಮತಗಳನ್ನು ಇಟ್ಟುಕೊಂಡು ಇಂತಹ ಪರಿಶೀಲನೆ ಆಗಕೂಡದು. ಇಷ್ಟೇ ಪ್ರಾರ್ಥನೆ!

ಇದೆಲ್ಲವನ್ನು ಬರೆಯುತ್ತಿದ್ದಾಗ ಒಬ್ಬ ಸ್ನೇಹಿತ ಒಂದು ವಿಚಾರವನ್ನು ಮುಂದಿಟ್ಟ. ವೇದಗಳು, ಉಪನಿಷತ್ತುಗಳು ಮಹಾಭಾರತ ಇವುಗಳಿಂದ ಪ್ರಾರಂಭವಾದ ನಮ್ಮ ಸಮಾಜವು ಬುಡಮೇಲೇಕೆ ಆಯಿತು ? ಇಷ್ಟು ಗಡುಸಾಗಿ ಜೀವನದ ಬಗ್ಗೆ ವಿಚಾರವನ್ನು ಮಾಡಿದ ನಂತರ ಭಕ್ತಿಮಾರ್ಗದಲ್ಲಿಯ ಆಭಾಸವನ್ನು ಮತ್ತು ವಿಭೂತಿ ಪೂಜೆಯನ್ನು ಈ ಸಮಾಜವು ಹೇಗೆ ಒಪ್ಪಿಕೊಂಡಿತು ? ಗೋಮಾಂಸ ಸಹಿತಾಗಿ ಎಲ್ಲ ತರಹದ ಮಾಂಸವನ್ನು ಭಕ್ಷಿಸುವ ಜನರು ಕೊನೆಯಲ್ಲಿ ಗೋಸಗಣಿ, ಗೋಮೂತ್ರ ಭಕ್ಷಿಸಿ, ಪ್ರಾಶಿಸಿ ಒಂದು ಚತುಷ್ಪಾದ ಪ್ರಾಣಿಗೆ ಗೋಮಾತೆ ಎಂದು ಏಕೆ ಅನ್ನಲಾರಂಭಿಸಿದರು?

ಇಂಥ ಪ್ರಶ್ನೆಗಳಿಗೆ ಉತ್ತರ ಕೊಡುವುದು ಒಂದೇ ವ್ಯಕ್ತಿಗಂತೂ ಸಾಧ್ಯವಿಲ್ಲ. ಈ ಬಗ್ಗೆ ಅನ್ವೇಷಣೆ ಆಗಬೇಕು ; ಎಂದು ನನ್ನ ಮತ್ತು ಇತರರ ಪ್ರಶ್ನೆಗಳನ್ನು ಮುಂದಿಡಲಾಗಿವೆ. ಇನ್ನೊಬ್ಬ ಸ್ನೇಹಿತ ಮಂಡಿಸಿದ ವಿಚಾರವು ತುಸುಮಟ್ಟಿಗೆ ಸುಖಕರವಿದೆ. ಆತ ನುಡಿದದ್ದು "ಬೇರೆ ಏನೂ ಉಳಿಯದಿದ್ದರೂ, ಭಾಷೆಯಾದರು ಅಸ್ತಿತ್ವದಲ್ಲಿ ಉಳಿದಿದೆ. ಅದೇ ನಮ್ಮ ಭಾಗ್ಯ ಎಂದು ತಿಳಿಯಿರಿ. ಇಂದು ಕೂಡ ನೀವು ಮಹಾಭಾರತವನ್ನು ಓದಬಹುದು, ಅದರ ಅರ್ಥವನ್ನು ಮಾಡಿಕೊಳ್ಳಬಹುದು. ಇದು ಸಹ ನಮ್ಮ ಭಾಗ್ಯವೇ ! ಇಲ್ಲವಾದರೆ 'ಮೊಹೆಂಜೋದಾರೋದ' ರೀತಿಯಲ್ಲಿ ಇದರ ಗತಿಯಾಗುತ್ತಿತ್ತು. ಚಿತ್ರಗಳಿವೆ. ವಸ್ತುಗಳಿವೆ. ಏನೇನೋ ಬರೆದ ಲಿಪಿ ಇದೆ, ಆದರೆ ಭಾಷೆಯೇ ತಿಳಿಯದ ಮೂಲಕ ಯಾವುದೊಂದರ ಅರ್ಥವಾಗುವುದಿಲ್ಲ. ನಿಜವೇ ! ನಾನು ಎಷ್ಟು ಭಾಗ್ಯವಂತೆ ! ಮೂರು ಸಾವಿರ ವರ್ಷಗಳ ಪೂರ್ವದ 'ಜಯ' ಎಂಬ ಕಥಾವಸ್ತುವನ್ನು ನಾನು ಓದಬಲ್ಲೆ. ಅದರಲ್ಲಿ ನನ್ನ ಪ್ರತಿಬಿಂಬವನ್ನು ನೋಡಬಲ್ಲೆ!

ಪರಿಶಿಷ್ಟ

ಮಹಾಭಾರತದಲ್ಲಿ ಉಲ್ಲೇಖಿತವಾದ ಕೆಲವು ಸಮಾಜಗಳು

(೧) **ವೈದಿಕ ಸಮಾಜ** – ಮಾನವ ವಂಶದ ಬಗ್ಗೆ ಕೆಲವೊಂದು ವಿಶಿಷ್ಟ ಕಲ್ಪನೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೇ ಇದ್ದರೆ ಈ ಸಮಾಜಕ್ಕೆ ಆರ್ಯ ಎಂದು ಅನ್ನಲು ಅಡ್ಡಿ ಇಲ್ಲ. ಇದರಲ್ಲಿ ಪ್ರಮುಖವಾಗಿ ಮೂರು ವರ್ಗಗಳು–ಬ್ರಾಹ್ಮಣ, ಕ್ಷತ್ರಿಯ, ಮತ್ತು 'ವಿಶ್'. ಈ ಬ್ರಾಹ್ಮಣ, ಕ್ಷತ್ರಿಯ ಮತ್ತು ವಿಶ್ ವರ್ಗದವರಿಗೆ ದಾಸ ದಾಸಿಯರಾಗಿ ಇದ್ದವರು ಶೂದ್ರರು. ಬ್ರಾಹ್ಮಣ ಮತ್ತು ಕ್ಷತ್ರಿಯರಿಗೆ ಮಾತ್ರ ಪರಿಚಾರಕರಾದವರು, ಅದರಲ್ಲಿಯೂ ಕ್ಷತ್ರಿಯರ ನಿಕಟವರ್ತಿಯರು, ಸೂತರು. ಉದಾ– [ವಿದುರ, ಸಂಜಯ, ಸುದೇಷ್ಣಾ ಮುಂತಾದವರು].

(೨) ಮೇಲೆ ಹೇಳಿದ ವರ್ಗದವರೊಡನೆ ಮಿತ್ರತ್ವವನ್ನು ಇಲ್ಲವೇ ಶತ್ರುತ್ವವನ್ನು ಹೊಂದಿದ ಮುಖ್ಯ ಸಮೂಹ ಎಂದರೆ ನಾಗಜನರು. ಈ ನಾಗಜನರ ಪ್ರಮುಖ ಮನೆತನಗಳು ಎಂದರೆ–

ತಕ್ಷಕ – ಖಾಂಡವವನದ ರಾಜನು. ಪಾಂಡವರೊಡನೆ ಮೂರು ತಲೆಮಾರುಗಳ ಹಗೆತನ.

ಐರಾವತ ಕೌರವ್ಯ – ಈ ಶಬ್ದದ ಪ್ರಾಕೃತ ರೂಪವು "ಎಲಾಪತ್ತ" ಅರ್ಜುನನ ಓರ್ವ ಹೆಂಡತಿಯಾದ ಉಲುಪಿಯು ಈ ಮನೆತನದವಳು.

ವಾಸುಕಿ – ಭೋಗಾವತಿಯ ದೊರೆ. ಈತನ ಕನ್ಯೆಯಾದ 'ಜರತ್ಕಾರು' ಇವಳ ವಿವಾಹವು ಅದೇ ಹೆಸರಿನ ಒಬ್ಬ ಬ್ರಾಹ್ಮಣನೊಡನೆ ನಡೆಯಿತು. ಅವರ ಮಗನಾದ ಆಸ್ತಿಕನು, ಜನಮೇಜಯನು ನಡೆಸಿದ ಸರ್ಪ ಸತ್ರದಿಂದ ತನ್ನ ಮಾತೃ ಕುಲವನ್ನು ರಕ್ಷಿಸಿದನು.


(೩) **ದಾಶರಾಜ** – ಗಂಗೆಯಲ್ಲಿಯ ಅಂಬಿಗರ ಮತ್ತು ಮೀನುಗಾರರ ಅರಸನು. ಈ ಅರಸನ ಮಗಳಾದ [ಕಾಲಿ–ಸತ್ಯವತಿ–ಮತ್ಸ್ಯಗಂಧೆ] ಈಕೆಯ ವಿವಾಹವು ಶಂತನುವಿನೊಡನೆ ಆಯಿತು. ಇವಳು ಧೃತರಾಷ್ಟ್ರ ಪಾಂಡುವಿನ ಅಜ್ಜಿಯು.

(೪) ಪಕ್ಷಿ ಕುಲದ ಹೆಸರುಗಳನ್ನಿಟ್ಟುಕೊಂಡಿರುವ ನಾಗೇತರ ಅರಣ್ಯ ವಾಸಿಯರು. ಖಾಂಡವವನ ದಹನ ಪ್ರಸಂಗದಲ್ಲಿ 'ಶಾಙ್ಗೆ' ಎಂಬ ಹೆಸರಿನ ಸ್ತ್ರೀಯಲ್ಲಿ ಬ್ರಾಹ್ಮಣನಿಂದ ಜನಿಸಿದ ಸಂತತಿಗೆ ಅರ್ಜುನನು ಜೀವದಾನ ಕೊಟ್ಟನು.

(೫) **ಅರಣ್ಯವಾಸಿ ರಾಕ್ಷಸರು** – (?) ಹಿಡಿಂಬ, ಬಕ ಮುಂತಾದವರು. ಇದರಲ್ಲಿಯ ಹಿಡಿಂಬೆ ಎಂಬ ರಾಕ್ಷಸಿಯೊಡನೆ ಭೀಮನ ವಿವಾಹವಾಯಿತು. ಅವರ ಮಗನಾದ ಘಟೋತ್ಕಚನು ಯುದ್ಧದಲ್ಲಿ ಮಡಿದನು.

(೬) ಮಣಲೂರಪುರದ ರಾಜನು ಮತ್ತು ಅಲ್ಲಿಯ ಪ್ರಜೆಗಳು. ಈತನ ಮಗಳಾದ ಚಿತ್ರಾಂಗದೆಯ ವಿವಾಹವು ಅರ್ಜುನನೊಡನೆ ಆಯಿತು. ತನ್ನ ಪುತ್ರರೊಡನೆ ಚಿತ್ರಾಂಗದೆಯು ತವರಿನಲ್ಲಿಯೇ ವಾಸವಿದ್ದಳು. ಮಾತೃ ಪ್ರಧಾನ ಮನೆತನವಿರಬಹುದೋ? ಎನ್ನುವುದು ತಿಳಿಯುವುದಿಲ್ಲ.

ಕುರುವಂಶಾವಲಿ


ಯಯಾತಿ
ಪುರು
ಕುರು
ಪ್ರತೀಪ
ದೇವಾಪಿ
ಬಾಲ್ಹಿಕ [ಸೋದರಮಾವನಿಗೆ ದತ್ತು ಹೋದ
ಗಂಗಾxಶಂತನುxಸತ್ಯವತಿxಪರಾಶರ ಬ್ರಾಹ್ಮಣ
ಭೀಷ್ಮ
ವ್ಯಾಸ
ಚಿತ್ರಾಂಗದ
ವಿಚಿತ್ರವೀರ್ಯ x
ಅಂಬಿಕಾ
ಅಂಬಾಲಿಕಾ
ದಾಸಿ
ಅಂಬಿಕಾxವ್ಯಾಸ–x ಅಂಬಾಲಿಕಾ
ವ್ಯಾಸ x ದಾಸಿ
ವಿದುರxಪಾರಶವೀ
ಮಕ್ಕಳು
ಗಾಂಧಾರಿxಧೃತರಾಷ್ಟ್ರxದಾಸಿ
ಯುಯುತ್ಸು
ದುರ್ಯೋಧನ ಆದಿ ನೂರು ಜನರು
ಜಯದ್ರಥxದುಃಶೀಲ
ಸಿಂಧೂರಾಜ ಮಗಳು
ಪಾಂಡು

ಸೂರ್ಯ x ಕುಂತಿ x ಪಾಂಡು x ಮಾದ್ರಿ

ಕರ್ಣ ಧರ್ಮ ಭೀಮ ಅರ್ಜುನ ನಕುಲ, ಸಹದೇವ

ಧರ್ಮ ಮತ್ತು ನಾಲ್ವರು x ದ್ರೌಪದಿ x ಅರ್ಜುನ x ಸುಭದ್ರಾ (ಯಾದವಿ)

ಐದು ಪುತ್ರರರನ್ನು ಅಶ್ವತ್ಥಾಮನು ಕೊಂದ

ಅಭಿಮನ್ಯುxವೈರಾಟಿ ಉತ್ತರೆ

ಪರೀಕ್ಷಿತ

ಜನಮೇಜಯ

ಭೀಮxಹಿಡಿಂಬ

ಘಟೋತ್ಕಚ
ಯುದ್ಧದಲ್ಲಿ ಮಡಿದ.

ಅರ್ಜುನxಉಲುಪಿ ಆದಿಯರು

ಬಭ್ರು ಇರಾವತ
ಇಬ್ಬರು ಯುದ್ಧದಲ್ಲಿ ಹತರಾದರು.


ಅರ್ಜುನxಚಿತ್ರಾಂಗದಾ

ಬಭ್ರುವಾಹನ
ಮಣಿಪುರದ ರಾಜನಾದ
ಅಶ್ವಮೇಧದಲ್ಲಿ ಅರ್ಜುನನನ್ನು
ಸೋಲಿಸಿದ.

ಯದುವಂಶ

ಸಮಗ್ರ ವಂಶವನ್ನು ವಿಸ್ತರಿಸಿಲ್ಲ. ಪ್ರಮುಖ ಹೆಸರುಗಳನ್ನು ಮಾತ್ರ ಕೊಟ್ಟಿದೆ. ಈ ವಂಶವು ಬಹಳ ವಿಸ್ತೃತವಾದದ್ದು. ಪುರಾಣಗಳಲ್ಲಿ ಇದರ ಬಗ್ಗೆ ಏಕಮತ ಇಲ್ಲ. ಮಹಾಭಾರತದಲ್ಲಿ ಎಲ್ಲಿಯೂ ಈ ವಂಶದ ಸುಸಂಗತ ಮಾಹಿತಿ ಇಲ್ಲ. ಹರಿವಂಶದಲ್ಲಿ, ತೊಡಕಿನ ತಪ್ಪು ಮಾಹಿತಿಯು ಇದೆ. ಮೇಲಿನ ವಂಶ ಪಟ್ಟಿಯನ್ನು ಹಲವು ಬೇರೆ ಬೇರೆ ಪುರಾಣಗಳನ್ನು ಅಭ್ಯಸಿಸಿ ಪಾರ್ಗಿಟರ್ ಇವರು ತನ್ನ General Survey of Ancient Indian Historical Tradition–೧೯೨೨. ಈ ಪುಸ್ತಕದಲ್ಲಿ ಕೊಟ್ಟ ವಂಶಾವಳಿಗಳನ್ನು ಅನುಸರಿಸಿ ತಯಾರು ಮಾಡಲಾಗಿದೆ. ಪಿತಾಪುತ್ರನ ನೇರ ಸಂಬಂಧವಿದ್ದಲ್ಲಿ ಒಂದು ಉದ್ದ ಗೆರೆಯನ್ನು ತೋರಿಸಲಾಗಿದೆ. ಎಲ್ಲಿ ವಂಶದ ಆಪ್ತತ್ವವು ದೂರಿನದಾಗಿದೆಯೋ ಅಲ್ಲಿ ಚುಕ್ಕೆಗಳಿಂದ ಅದನ್ನು ತೋರಿಸಲಾಗಿದೆ. ಚೇದಿ, ವಿದರ್ಭ, ಭೋಜ, ವೃಷ್ಣಿ, ಅಂಧಕ, ಶೈನೇಯ ಇವರೆಲ್ಲರು ಪಿತೃಕುಲ ಸಂಬಂಧಿತವಾಗಿದ್ದರು. ಅವರ ಪರಸ್ಪರರಲ್ಲಿ ವಿವಾಹಗಳು ನೆರವೇರುತ್ತಿದ್ದವು. ಚೇದಿ, ವಿದರ್ಭದವರ ಸ್ವತಂತ್ರ ರಾಜ್ಯಗಳು ಇದ್ದವು. ಜರಾಸಂಧನ ದಾಳಿಗಳಿಂದ ಅವರು ದ್ವಾರಕೆಗೆ ಹೋಗಿ ರಾಜ್ಯವನ್ನು ಸ್ಥಾಪಿಸಿದರು. ಮಥುರೆಯು ಬಹುಶಃ ಕಂಸನ ಪುತ್ರರ ಅಂಕಿತದಲ್ಲಿರಬೇಕು. ಈ ವಂಶಾವಳಿಯ ಮೇಲಿಂದ ಕೃಷ್ಣನ ಪೈತೃಕ ಹೆಸರುಗಳು [ಮಾಧವ, ಯಾದವ, ಸಾತ್ವತ, ವಾರ್ಷ್ಣೇಯ, ಶೌರಿ ಮತ್ತು ವಾಸುದೇವ] ಎಂದು ಕಾಣುತ್ತದೆ.

ಕುರುವಂಶದ ಸಂಬಂಧಿತ ಮನೆತನಗಳು : ಯದುವಂಶ



ಸತ್ಯಭಾಮಾ–(ಸತ್ರಾಜಿತಿ) x ಕೃಷ್ಣ x ರುಕ್ಮಿಣೀ x ಇತರ ಪತ್ನಿಯರು

ಸಾಂಬ

ಪ್ರದ್ಯುಮ್ನ

ಅನಿರುದ್ಧ

ವಜ್ರ (ಇಂದ್ರಪ್ರಸ್ಥ ರಾಜ್ಯವನ್ನು ಪಾಂಡವರು ಕೊಟ್ಟರು)

ಚಾರುದೇಷ್ಣ ಮತ್ತು ಇತರರು

ಕುರುವಂಶದ ಸಂಬಂಧಿತ ಮನೆತನಗಳು

ಗಾಂಧಾರ

ಸುಬಲ

ಗಾಂಧಾರಿ
ಧೃತರಾಷ್ಟ್ರನೊಡನೆ
ವಿವಾಹವಾಯಿತು

ಶಕುನಿ
ಸಹೋದರಿಯ ವಿವಾಹದ ನಂತರ
ಕೌರವರ ಬಳಿ ವಾಸವಿದ್ದ

ಮದ್ರ–ಬಾಹ್ಲೀಕ

ಬಾಹ್ಲೀಕ
ಸೋಮದತ್ತಿ
ದುರ್ಯೋಧನನ ಪಕ್ಷದಿಂದ
ಯುದ್ಧ ಮಾಡಿದ

ಶಲ್ಯ
ದುರ್ಯೋಧನನ
ವತಿಯಿಂದ
ಕಾದಾಡಿದ

ಮಾದ್ರಿ
ಪಾಂಡುವಿನೊಡನೆ
ವಿವಾಹ ಆಯಿತು

ವಿರಾಟ

ಸೂತ


ಮತ್ಸ್ಯರಾಜ ವಿರಾಟ x ಸುದೇಷ್ಣಾ


ಕೀಚಕ

ಉತ್ತರ

ಉತ್ತರಾ x ಅಭಿಮನ್ಯು

ಕುರುವಂಶದ ಸಂಬಂಧಿತ ಮನೆತನಗಳು




ಮಹಾಭಾರತದ ಕಾಲದ
ಉತ್ತರ ಭಾರತ
ಗಾಂಧಾರ
ತಕ್ಷಶಿಲಾ
ಕೈಕೇಯ
ಮದ್ರ
ಬಾಹ್ಲೀಕ
ಸಿಂಧು
ಇಂದ್ರಪ್ರಸ್ಥ
ಮಥುರಾ
ಹಸ್ತಿನಾಪುರ
ಅಹಿಛತ್ರ
ಕಾಮರೂಪ
ಬ್ರಹ್ಮಪುತ್ರಾ
ಗಂಡಕಿ
ಅಂಗ
ಮಗಧ
ಚೇದಿ
ಮಾರ್ತಿಕಾವತ
ದ್ವಾರಕಾ
ನರ್ಮದಾ
ತಾಪೀ
ವಿದರ್ಭ
ಮಹಾನದೀ
ಗೋದಾವರೀ
ಕಲಿಂಗ